ರಂ.ಶ್ರೀ.ಮುಗಳಿ ಅವರ ಸಮಗ್ರ ಸಾಹಿತ್ಯ

(ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್.ಡಿ. ಪದವಿಗಾಗಿ ಸಲ್ಲಿಸಿರುವ ಮಹಾಪ್ರಬಂಧ)

ಸಂಶೋಧಕರು
ಶಿವನಗೌಡ ಪಾಟೀಲ

ಮಾರ್ಗದರ್ಶಕರು
ಡಾ. ಎಸ್.ಎಸ್. ಅಂಗಡಿ
ಪ್ರಾಧ್ಯಾಪಕರು

728

ಭಾಷಾನಿಕಾಯ
ಹಸ್ತಪ್ರತಿಶಾಸ್ತ್ರ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ- ೫೮೩ ೨೭೬
೨೦೧೬

ಪರಾಮರ್ಶೆಗೆ ಮಾತ್ರ

"ಸಿರಿಗನ್ನಡ" ಗ್ರಂಥಾಲಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩ ೨೭೬.

Shri Mahantesh
BOOK BINDING
Digital Colour Print
Laser Prints & xerox
1st Flor Stadiam Complex KCD Road,DWD

Sl no-728
728

ಸಿರಿಗನ್ನಡ ಗ್ರಂಥಾಲಯ
ಕನ್ನಡ ವಿಶ್ವವಿದ್ಯಾಲಯ.ಹಂಪಿ.

728

AKSHARA GRANTHALAYA

ACC.NO.132017

728

ರಂ.ಶ್ರೀ.ಮುಗಳಿ ಅವರ ಸಮಗ್ರ ಸಾಹಿತ್ಯ

(ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್.ಡಿ. ಪದವಿಗಾಗಿ ಸಲ್ಲಿಸಿರುವ ಮಹಾಪ್ರಬಂಧ)

ಸಂಶೋಧಕರು

ಶಿವನಗೌಡ ಪಾಟೀಲ

ಸಿರಿಗನ್ನಡ ಗ್ರಂಥಾಲಯ
ಕನ್ನಡ ವಿಶ್ವವಿದ್ಯಾಲಯ,ಹಂಪಿ

ಮಾರ್ಗದರ್ಶಕರು

ಡಾ. ಎಸ್.ಎಸ್. ಅಂಗಡಿ

ಪ್ರಾಧ್ಯಾಪಕರು

ಭಾಷಾನಿಕಾಯ

ಹಸ್ತಪ್ರತಿಶಾಸ್ತ್ರ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩೨೭೬

೨೦೧೬

132017

8KO
SHI a

ಮಾರ್ಗದರ್ಶಕರ ದೃಢೀಕರಣ ಪತ್ರ

ರಂ.ಶ್ರೀ.ಮುಗಳಿ ಅವರ ಸಮಗ್ರ ಸಾಹಿತ್ಯ ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು **ಶಿವನಗೌಡ ಪಾಟೀಲ** ಅವರು ನನ್ನ ಮಾರ್ಗದರ್ಶನದಲ್ಲಿ ಪಿಎಚ್.ಡಿ. ಪದವಿಗಾಗಿ ಸಿದ್ಧಪಡಿಸಿದ್ದಾರೆ. ಪ್ರಸ್ತುತ ಮಹಾಪ್ರಬಂಧವು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ಮಾರ್ಗದರ್ಶಕರು

ದಿನಾಂಕ: 26-9-2016

ಸ್ಥಳ: ವಿದ್ಯಾರಣ್ಯ

ಡಾ. ಎಸ್.ಎಸ್. ಅಂಗಡಿ

ಪ್ರಾಧ್ಯಾಪಕರು

ಹಸ್ತಪ್ರತಿಶಾಸ್ತ್ರ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩ ೨೭೬

ಡಾ. ಎಸ್.ಎಸ್ ಅಂಗಡಿ
ಪ್ರಾಧ್ಯಾಪಕರು
ಹಸ್ತ ಪ್ರತಿಶಾಸ್ತ್ರ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ-583276

ಪ್ರಮಾಣ ಪತ್ರ

ರಂ.ಶ್ರೀ.ಮುಗಳಿ ಅವರ ಸಮಗ್ರ ಸಾಹಿತ್ಯ ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು **ಡಾ.ಎಸ್.ಎಸ್. ಅಂಗಡಿ** ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದೇನೆ. ಕನ್ನಡ ವಿಶ್ವವಿದ್ಯಾಲಯ, ಹಂಪಿಯ ಭಾಷಾನಿಕಾಯದ **ಹಸ್ತಪ್ರತಿಶಾಸ್ತ್ರ ವಿಭಾಗಕ್ಕೆ** ಪಿಎಚ್.ಡಿ. ಪದವಿಗಾಗಿ ಸಲ್ಲಿಸುತ್ತಿರುವ ಪ್ರಸ್ತುತ ಮಹಾಪ್ರಬಂಧವನ್ನು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ದಿನಾಂಕ: 26-9-2016
ಸ್ಥಳ: ವಿದ್ಯಾರಣ್ಯ

(ಶಿವನಗೌಡ ಪಾಟೀಲ)
ಸಂಶೋಧನ ವಿದ್ಯಾರ್ಥಿ
ಹಸ್ತಪ್ರತಿಶಾಸ್ತ್ರ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

ಪರಿವಿಡಿ

ಅಧ್ಯಾಯ ಒಂದು

ಅಧ್ಯಯನದ ಉದ್ದೇಶ, ವಿಧಾನ ಮತ್ತು ವ್ಯಾಪ್ತಿ / ೨

ಪೀಠಿಕೆ

೧.೧. ಅಧ್ಯಯನದ ಉದ್ದೇಶ

೧.೨. ಅಧ್ಯಯನದ ವಿಧಾನ

೧.೩. ಅಧ್ಯಯನದ ವ್ಯಾಪ್ತಿ

ಅಧ್ಯಾಯ ಎರಡು

ರಂ.ಶ್ರೀ.ಮುಗಳಿ ಅವರ ಬದುಕು / ೭

೨.೧. ಬಾಲ್ಯ–ಶಿಕ್ಷಣ

೨.೨. ವ್ಯಕ್ತಿತ್ವ

೨.೩. ರಂ.ಶ್ರೀ.ಮುಗಳಿ ಗೆಳೆಯರ ಗುಂಪಿನೊಂದಿಗೆ

೨.೪. ರಂ.ಶ್ರೀ.ಮುಗಳಿ ಅವರ ಮೇಲೆ ಅರವಿಂದರ ಪ್ರಭಾವ

೨.೫. ರಂ.ಶ್ರೀ.ಮುಗಳಿ ಮನೋಹರ ಗ್ರಂಥಮಾಲೆಯೊಂದಿಗೆ

೨.೬. ರಂ.ಶ್ರೀ.ಮುಗಳಿ ಮತ್ತು ಮರಾಠಿ ಸಾಹಿತ್ಯ ಸಂಸ್ಕೃತಿ

೨.೭. ರಂ.ಶ್ರೀ.ಮುಗಳಿ ಅವರ ದೃಷ್ಟಿಯಲ್ಲಿ ಶಿಕ್ಷಣ

೨.೮. ರಂ.ಶ್ರೀ.ಮುಗಳಿ ಅವರ ಸಾಹಿತ್ಯದ ಇತಿಮಿತಿಗಳು

೨.೯. ರಂ.ಶ್ರೀ.ಮುಗಳಿ ಅವರ ಸಾಹಿತ್ಯ ಕುರಿತು ಇಲ್ಲಿಯವರೆಗೆ ನಡೆದ ಅಧ್ಯಯನಗಳ ಸಮೀಕ್ಷೆ

ಅಧ್ಯಾಯ ಮೂರು

ರಂ.ಶ್ರೀ.ಮುಗಳಿ ಅವರ ಸೃಜನಶೀಲ ಸಾಹಿತ್ಯ / ೩೬

೩.೧. ಕಾವ್ಯ

೩.೨. ಕತೆ

೩.೩. ಕಾದಂಬರಿ

೩.೪. ನಾಟಕ

೩.೫. ಲಲಿತ ಹಾಗೂ ವೈಚಾರಿಕ ಪ್ರಬಂಧಗಳು

೩.೬. ಆತ್ಮಚರಿತ್ರೆ

ಅಧ್ಯಾಯ ನಾಲ್ಕು

ರಂ.ಶ್ರೀ.ಮುಗಳಿ ಅವರ ಸೃಜನೇತರ ಸಾಹಿತ್ಯ(ಭಾಗ-೧) / ೧೨೫

೪.೧. ಕನ್ನಡ ಸಾಹಿತ್ಯ ಚರಿತ್ರೆ

೪.೨. ಪ್ರಾಚೀನ ಕನ್ನಡ ಸಾಹಿತ್ಯ ರೂಪಗಳು

೪.೩. ಕನ್ನಡ ಸಾಹಿತ್ಯ ಇತಿಹಾಸ

೪.೪. ಕರ್ನಾಟಕದ ಸಾಂಸ್ಕೃತಿಕ ಪರಂಪರೆ

ಅಧ್ಯಾಯ ಐದು

ರಂ.ಶ್ರೀ.ಮುಗಳಿ ಅವರ ಸೃಜನೇತರ ಸಾಹಿತ್ಯ(ಭಾಗ-೨) / ೧೭೧

೫.೧. ಸಾಹಿತ್ಯ ವಿಮರ್ಶೆ

೫.೨. ಜೀವನ ಚರಿತ್ರೆ

೫.೩. ಅನುವಾದ

೫.೪. ಸಂಪಾದನೆ

ಅಧ್ಯಾಯ ಆರು

ರಂ.ಶ್ರೀ.ಮುಗಳಿ ಅವರ ಪದ್ಯಶೈಲಿ ಮತ್ತು ಗದ್ಯಶೈಲಿ / ೨೧೭

ಅಧ್ಯಾಯ ಏಳು

ಸಮಾರೋಪ / ೨೩೬

ಅನುಬಂಧಗಳು

೧. ರಂ.ಶ್ರೀ.ಮುಗಳಿ ಅವರ ಕೃತಿಸೂಚಿ

೨. ರಂ.ಶ್ರೀ.ಮುಗಳಿ ಅವರನ್ನು ಕುರಿತು ಸಾಹಿತ್ಯ

೩. ರಂ.ಶ್ರೀ.ಮುಗಳಿ ಅವರ ಬದುಕಿನ ಮುಖ್ಯ ಘಟನೆಗಳು

೪. ಗ್ರಂಥಋಣ

೫. ಛಾಯಾಚಿತ್ರಗಳು

ಅಧ್ಯಾಯ ಒಂದು

ಅಧ್ಯಯನದ ಉದ್ದೇಶ, ವಿಧಾನ ಮತ್ತು ವ್ಯಾಪ್ತಿ

ಅಧ್ಯಯನದ ಉದ್ದೇಶ, ವಿಧಾನ ಮತ್ತು ವ್ಯಾಪ್ತಿ
ಪೀಠಿಕೆ
೧.೧. ಅಧ್ಯಯನದ ಉದ್ದೇಶ
೧.೨. ಅಧ್ಯಯನದ ವಿಧಾನ
೧.೩. ಅಧ್ಯಯನದ ವ್ಯಾಪ್ತಿ

ಅಧ್ಯಾಯ ಒಂದು

ಅಧ್ಯಯನದ ಉದ್ದೇಶ, ವಿಧಾನ ಮತ್ತು ವ್ಯಾಪ್ತಿ

ಪೀಠಿಕೆ

ವಸಾಹತುಶಾಹಿ ಆಗಮನ ಭಾರತೀಯ ಸಮಾಜದಲ್ಲಿ ಹಲವಾರು ಸಂಚಲನಗಳನ್ನು ಸೃಷ್ಟಿಸಿತು. ಇದರ ಪರಿಣಾಮ ಕೇವಲ ಸಮಾಜದ ಮೇಲಷ್ಟೆ ಅಲ್ಲ, ಸಮಾಜದಲ್ಲಿ ಜೀವಿಸುತ್ತಿದ್ದ ಅಸಂಖ್ಯಾತ ವರ್ಗಗಳ ಮೇಲೂ ಆಗಿದೆ. ವಸಾಹತುಶಾಹಿ ನೀಡಿದ ಇಂಗ್ಲಿಷ್ ಶಿಕ್ಷಣದಿಂದ ಆಧುನಿಕ ವಿದ್ಯಾವಂತ ವರ್ಗವೊಂದು ಸೃಷ್ಟಿಯಾಯಿತು. ಈ ಶಿಕ್ಷಿತ ವರ್ಗದ ಆಲೋಚನೆ ಅಭಿರುಚಿಗಳಲ್ಲಾದ ಬದಲಾವಣೆಗಳ ಪರಿಣಾಮ ನಮ್ಮ ಭಾಷೆ, ಸಾಹಿತ್ಯದ ಮೇಲೂ ಆಗಿದೆ. ಇದರ ಫಲವಾಗಿ ಕಾವ್ಯಕೇಂದ್ರಿತವಾಗಿದ್ದ ಸಾಹಿತ್ಯ ರಚನೆಯು ಗದ್ಯದತ್ತ ಹೊರಳಿತು. ಗದ್ಯದ ಹಲವು ಪ್ರಕಾರಗಳು ಹುಟ್ಟಿಕೊಂಡವು. ಈ ಪ್ರಕಾರಗಳ ಹುಟ್ಟಿನ ಹಿಂದೆ ಇಂಗ್ಲಿಷ್ ಭಾಷೆ ಮತ್ತು ಸಾಹಿತ್ಯದ ಓದಿನ ಪ್ರೇರಣೆಯಿದೆ. ಪಾಶ್ಚಾತ್ಯ ಸಾಹಿತ್ಯ ಪ್ರೇರಣೆಯಿಂದ ನಮ್ಮಲ್ಲಿ ಕಾವ್ಯ, ಕತೆ, ಕಾದಂಬರಿ, ನಾಟಕ, ಪ್ರಬಂಧ, ವಿಮರ್ಶೆ, ಆತ್ಮಕಥನದಂತಹ ಹಲವು ಪ್ರಕಾರಗಳು ರಚನೆಗೊಂಡವು. ಈ ಗ್ರಂಥ ಸಾಹಿತ್ಯ ರಚನೆಯಲ್ಲಿ ಹಲವು ಮಹನೀಯರು ತೊಡಗಿಕೊಂಡರು ಅವರಲ್ಲಿ ಕುವೆಂಪು, ದ.ರಾ.ಬೇಂದ್ರೆ, ವಿ.ಕೃ.ಗೋಕಾಕ್, ಡಿ.ವಿ.ಜಿ., ಮಾಸ್ತಿ ವೆಂಕಟೇಶ ಐಯ್ಯಂಗಾರ್, ಪು.ತಿ.ನರಸಿಂಹಾಚಾರ್, ವಿ.ಸೀತಾರಾಮಯ್ಯ, ಜಿ.ಎಸ್.ಶಿವರುದ್ರಪ್ಪ ಇನ್ನೂ ಮೊದಲಾದ ಮಹನೀಯರು ತಮ್ಮದೇ ಆದ ಸಾಹಿತ್ಯ ಕೃಷಿಗೈದಿದ್ದಾರೆ. ಅಂತಹವರಲ್ಲಿ ರಂ.ಶ್ರೀ.ಮುಗಳಿ ಅವರು ಒಬ್ಬರು.

ಮುಗಳಿ ಅವರು ಧಾರವಾಡದ ಗೆಳೆಯರ ಗುಂಪಿನ ಸಕ್ರಿಯ ಸದಸ್ಯರಲ್ಲಿ ಒಬ್ಬರು. ಬೇಂದ್ರೆ ಅವರನ್ನು ತಮ್ಮ ಅಪ್ಪಟ ಕಾವ್ಯಗುರುವೆಂದು ಒಪ್ಪಿಕೊಂಡು ಧಾರವಾಡದಲ್ಲಿ ನೆಲೆಸಿದ ವೇಳೆಯಲ್ಲಿಯೇ, ಮಹಾರಾಷ್ಟ್ರದ ವಿಲ್ಲಿಂಗ್ಡನ್ ಕಾಲೇಜಿನಲ್ಲಿ ಅಧ್ಯಾಪಕರಾಗಿ ಸೇರಿಕೊಳ್ಳುತ್ತಾರೆ. 'ವರುಣಕುಂಜ' ಸಾಹಿತ್ಯ ವೇದಿಕೆಯನ್ನು ವಿ.ಕೃ.ಗೋಕಾಕ್ ಜೊತೆಗೂಡಿ ನಿರ್ಮಿಸಿಕೊಂಡು ಯುವಪೀಳಿಗೆಯ ಸಾಹಿತ್ಯ ಸಾಧಕರಿಗೆ ಪ್ರೇರಣೆ ಪ್ರೋತ್ಸಾಹ ನೀಡುತ್ತಾರೆ. ಮೂರು ದಶಕಗಳ ಕಾಲ ವಿಲ್ಲಿಂಗ್ಡನ್ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿ, ಪ್ರಾಂಶುಪಾಲರಾಗಿ, ಮರಾಠಿ–ಕನ್ನಡ ಸಾಮರಸ್ಯದ ರಾಯಭಾರಿಯಾಗಿ, 'ಗಡಿನಾಡಿನ ಕನ್ನಡ ದೀಪ'ವಾಗಿ ಮುಗಳಿ ಅವರು ಮಾಡಿದ ಕೆಲಸ ಮಹತ್ವದ್ದಾಗಿದೆ. ಅವರು ಕನ್ನಡ ಮತ್ತು ಮರಾಠಿ ನೆಲದ ಬಗ್ಗೆ ಹೇಳಿಕೊಂಡಂತೆ, 'ಕನ್ನಡ ಹೆತ್ತತಾಯಿ–ಮರಾಠಿ ಹೊತ್ತತಾಯಿ'

ಎಂದು ಹೇಳಿಕೊಂಡಿದ್ದಾರೆ. ಶಿಕ್ಷಣಕ್ಕೆ ಸಂಬಂಧಿಸಿದಂತೆ ಗಡಿನಾಡಿನ ಕನ್ನಡ ಶಾಲೆಗಳು, ಶಿಕ್ಷಣದಲ್ಲಿ ಉತ್ತಮ ಗುಣಮಟ್ಟ ಹೆಚ್ಚಬೇಕಾದ ಅನಿವಾರ್ಯತೆಯನ್ನು ಅಂದಿನ ದಿನಮಾನಗಳಲ್ಲಿಯೇ ಪ್ರಸ್ತಾಪಿಸಿ ಚರ್ಚಿಸಿರುವುದು ತಿಳಿದುಬರುತ್ತದೆ.

ಮುಗಳಿ ಅವರು ದೈಹಿಕವಾಗಿ ಮಹಾರಾಷ್ಟ್ರದ ಸಾಂಗಲಿಯಲ್ಲಿದ್ದರೂ ಅವರ ಮನಸ್ಸು ಧಾರವಾಡದ ಸಾಹಿತ್ಯಕ ವಲಯದೊಂದಿಗೆ ಸದಾ ಮಿಳಿತವಾಗಿರುತ್ತದೆ. ೧೯೪೦ರಿಂದ ೧೯೪೩ರವರೆಗೆ 'ಜೀವನ' ಪತ್ರಿಕೆಯನ್ನು ಅವರು ಸಾಂಗಲಿಯಲ್ಲಿದ್ದುಕೊಂಡೇ ಸಂಪಾದಿಸುತ್ತಿದ್ದರು. ಮುಂದೆ ಜಿ.ಬಿ.ಜೋಶಿಯವರು ಮನೋಹರ ಗ್ರಂಥಮಾಲೆಯನ್ನು ಆರಂಭಿಸಿದಾಗ ಅದರ ಸಾಹಿತ್ಯ ಸಲಹೆಗಾರರಾಗಿದ್ದರು. ವಿಲ್ಲಿಂಗ್ಡನ್ ಕಾಲೇಜಿನಿಂದ ನಿವೃತ್ತಿಯ ನಂತರ ಮುಗಳಿ ಅವರು ಬೆಂಗಳೂರಿನಲ್ಲಿ ನೆಲೆಸಿದರು. ಕೆಲಕಾಲ ಅವರು ಮೈಸೂರು ಸರಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಪ್ರಧಾನಾಧಿಕಾರಿಯಾಗಿದ್ದರು. ೧೯೬೭ರಿಂದ ಮೂರು ವರ್ಷಗಳ ಕಾಲ ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ಪ್ರಾಧ್ಯಾಪಕ ಮತ್ತು ವಿಭಾಗದ ಮುಖ್ಯಸ್ಥರಾಗಿ ವಿಭಾಗವನ್ನು ಕಟ್ಟಿ ಬೆಳೆಸಿದರು. ೧೯೭೦ರಿಂದ ೭೩ರವರೆಗೆ ಯು.ಜಿ.ಸಿ. ಪ್ರಾಧ್ಯಾಪಕರಾಗಿದ್ದ ಮುಗಳಿ ಅವರನ್ನು ಮುಂದೆ ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಕೇಂದ್ರವು ಯೋಜಿಸಿದ ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆಯ ಸಂಪುಟಗಳಿಗೆ ಕಾರ್ಯನಿರ್ವಾಹಕ ಸಂಪಾದಕರನ್ನಾಗಿ ನೇಮಿಸಲಾಯಿತು. ಸಾಹಿತ್ಯ ಚರಿತ್ರೆಯ ವಿಷಯದಲ್ಲಿ ಅವರಿಗಿದ್ದ ವಿಶೇಷ ಪರಿಣತಿ, ಸುದೀರ್ಘ ಅನುಭವಗಳು ಈ ಯೋಜನೆಯ ಯಶಸ್ವಿಗೆ ಕಾರಣವಾದವು.

'ಕನ್ನಡ ಸಾಹಿತ್ಯ ಚರಿತ್ರೆ' ಕೃತಿಯಿಂದ ಮುನ್ನೆಲೆಗೆ ಬಂದ ರಂ.ಶ್ರೀ.ಮುಗಳಿ ಅವರು, ಅವರ ಇತರ ಸಾಹಿತ್ಯ ಬರಹಗಳಾದ ಕಾವ್ಯ, ಕತೆ, ಕಾದಂಬರಿ, ನಾಟಕ, ಲಲಿತಪ್ರಬಂಧ, ವಿಮರ್ಶೆ, ಆತ್ಮಚರಿತ್ರೆ, ಜೀವನಚರಿತ್ರೆ, ಅನುವಾದ, ಸಂಪಾದನೆಯಂತ ಸಾಹಿತ್ಯವು ಎಲೆಮರೆ ಕಾಯಿಯಂತೆ ಉಳಿದುಕೊಂಡಿತ್ತು. ಅಂಥ ಅವರ ಎಲ್ಲಾ ಸಾಹಿತ್ಯ ಕೃತಿಗಳನ್ನು ಸಮಗ್ರವಾಗಿ ಅಧ್ಯಯನ ಮಾಡಲು ಮುಂದಾದಾಗ ರಂ.ಶ್ರೀ.ಮುಗಳಿ ಸಮಗ್ರ ಸಾಹಿತ್ಯಕ್ಕೆ ಸಂಬಂಧಿಸಿದಂತೆ ತಾಳ್ತಜೆ ವಸಂತಕುಮಾರ ಅವರು ಬರೆದ 'ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪುರಸ್ಕೃತ ಕನ್ನಡ ಲೇಖಕರು, ರಂ.ಶ್ರೀ.ಮುಗಳಿ' ಕಿರುಪುಸ್ತಕ ಮತ್ತು 'ರಸಿಕರಂಗ ದರ್ಶನ' ಅವರ ಅಭಿನಂದನಾ ಗ್ರಂಥದಲ್ಲಿರುವ ಬಿಡಿ ಲೇಖನಗಳನ್ನು ಹೊರತುಪಡಿಸಿದರೆ ವಿಸ್ತೃತವಾದ ಯಾವುದೇ ಗಂಭೀರ ಅಧ್ಯಯನಗಳು ಈವರೆಗೆ ನಡೆದಿಲ್ಲ. ಆದ್ದರಿಂದ ಸಂಶೋಧನೆ ಕೈಗೊಳ್ಳಲು ಈ ಅಧ್ಯಯನ ಅಗತ್ಯವಾಗಿದೆ.

ರಂ.ಶ್ರೀ.ಮುಗಳಿ ಅವರ ಸಾಹಿತ್ಯವನ್ನು ಕುರಿತು ಇಂಥ ಒಂದು ಸಮಗ್ರ ಅಧ್ಯಯನ ನಡೆಯಬೇಕಾದದ್ದು ಈಗ ತುಂಬ ಅಗತ್ಯವಾಗಿದೆ. ಏಕೆಂದರೆ ರಾಷ್ಟ್ರೀಯ ಭಾವೈಕ್ಯತೆ, ಜಾತ್ಯತೀತ ಮನೋಭಾವ, ಮತೀಯ ಸಾಮರಸ್ಯ ಇಂದಿನ ತುರ್ತು ಅಗತ್ಯಗಳಾಗಿದ್ದು ಸಾಹಿತ್ಯವು ಈ ಭಾವನೆಗಳನ್ನು ರೂಢಿಸಲು ಹಾಗೂ ಪ್ರಚಾರಪಡಿಸಲು ಶ್ರಮಿಸಬೇಕಾದದ್ದು ಇಂದಿನ ಅಗತ್ಯವಾಗಿದೆ. ವಿಚ್ಛಿದ್ರಕಾರಕ ಶಕ್ತಿಗಳ ಸ್ವಾರ್ಥವನ್ನು ಸಾಮಾನ್ಯ ಜನರಿಗೆ ಅರ್ಥವಾಗುವಂತೆ ಬಿಡಿಸಿ ಹೇಳುವ

ಸಾಹಿತ್ಯ ಒಂದು ದೇಶಕ್ಕೆ ತುಂಬಾ ಪ್ರಯೋಜನಕಾರಿ ಆಗಬಲ್ಲದು. ಆದ್ದರಿಂದ ಮುಗಳಿ ಅವರ ಸಾಹಿತ್ಯ ಕೃತಿಗಳ ಮೂಲಕ ಭಾವೈಕ್ಯ ಸ್ವರೂಪ ಕುರಿತು ತಿಳಿಸುವುದು. ಅದಕ್ಕಾಗಿ ಈ ಅಧ್ಯಯನ ಅಗತ್ಯವಾಗಿದೆ.

೧.೧. ಅಧ್ಯಯನದ ಉದ್ದೇಶ

ರಂ.ಶ್ರೀ.ಮುಗಳಿ ಅವರ ಬರಹಗಳನ್ನು ವರ್ಗೀಕರಿಸಿ ಅವರ ಎಲ್ಲಾ ಕೃತಿಗಳನ್ನು ಅಭ್ಯಸಿಸುವುದು. ಅವರ ಬರವಣಿಗೆಯ ಹಿಂದಿರುವ ಮುಖ್ಯ ಧೋರಣೆಗಳು, ತತ್ವಗಳು ಯಾವ ರೀತಿ ಕೆಲಸ ಮಾಡಿವೆ ಎಂಬುದನ್ನು ಕಂಡುಕೊಳ್ಳುವುದು. ಅವರ ಸೃಜನಶೀಲ ಕೃತಿಗಳಲ್ಲಿನ ಪಾತ್ರವೈವಿಧ್ಯತೆ ಹಾಗೂ ಸಾಮಾಜಿಕ ಸಂಬಂಧಗಳ ಸ್ವರೂಪವನ್ನು ವಿವರಿಸಿ ವಿಶ್ಲೇಷಿಸುವುದು. ಅವರ ಬರಹಗಳಲ್ಲಿ ಅಳವಡಿಸಿಕೊಂಡ ತಂತ್ರಗಳನ್ನು, ಶೈಲಿಗಳನ್ನು ಗುರುತಿಸಿ ವಿಶ್ಲೇಷಿಸುವುದು. ಅವರು ರಚಿಸಿರುವ ಕವಿತೆ ಮತ್ತು ಕನ್ನಡ ಸಾಹಿತ್ಯ ಚರಿತ್ರೆಯನ್ನು ಇತರ ಕವಿಗಳೊಂದಿಗೆ, 'ಕನ್ನಡ ಸಾಹಿತ್ಯ ಚರಿತ್ರೆ' ರಚನಾಕಾರರೊಂದಿಗೆ ತೌಲನಿಕವಾಗಿ ನೋಡುವುದು. ಈ ಉದ್ದೇಶಗಳ ಪ್ರತಿಯೊಂದು ಅಂಶವೂ ಒಂದೊಂದು ಮಹಾಪ್ರಬಂಧದ ವ್ಯಾಪ್ತಿಯನ್ನು ಪಡೆಯಬಲ್ಲಂಥವು. ಹೀಗಿರುವಾಗ ಒಂದೇ ಮಹಾಪ್ರಬಂಧದಲ್ಲಿ ಇಷ್ಟೆಲ್ಲವನ್ನು ಒಳಗೊಂಡಂತೆ ವಿವೇಚಿಸುವುದು ಅಸಾಧ್ಯವೆಂದೆನಿಸುತ್ತದೆ. ಆದ್ದರಿಂದ ಮೇಲ್ಕಾಣಿಸಿದ ಉದ್ದೇಶಗಳನ್ನು ಒಂದು ಮಹಾಪ್ರಬಂಧದ ಮಿತಿಯಲ್ಲಿ ಮುಗಳಿ ಅವರ ಸಾಹಿತ್ಯದ ಸ್ಥೂಲ ಅಧ್ಯಯನ ಇದಾಗಿದೆ.

೧.೨. ಅಧ್ಯಯನದ ವಿಧಾನ

ರಂ.ಶ್ರೀ.ಮುಗಳಿ ಅವರ ಸಮಗ್ರ ಸಾಹಿತ್ಯ ಕೃತಿಗಳನ್ನು ವಿವರಿಸಿ ವಿಶ್ಲೇಷಿಸಲಾಗಿದೆ. ರಂ.ಶ್ರೀ.ಮುಗಳಿ ಅವರ ಸಾಹಿತ್ಯದಲ್ಲಿ ಪ್ರಕಾರದಿಂದ ಪ್ರಕಾರಕ್ಕೆ ಬದಲಾದ ಕಥನಕ್ರಮವನ್ನು ಕಂಡುಕೊಳ್ಳಲಾಗಿದೆ. ಆ ಮೂಲಕ ಅವರ ಧೋರಣೆಗಳನ್ನು ಸ್ಪಷ್ಟಪಡಿಸಲಾಗಿದೆ. ಮುಗಳಿ ಅವರ ಸಾಹಿತ್ಯದಲ್ಲಿ ಯಾವ ಸಿದ್ಧಾಂತಗಳು ಕೆಲಸ ಮಾಡಿವೆ ಎಂಬುದನ್ನು ಕಂಡುಕೊಳ್ಳಲಾಗಿದೆ. ಮುಗಳಿ ಅವರ ಸಾಹಿತ್ಯ ಕೃತಿಗಳೊಂದಿಗೆ ಹಾಗೂ ಇತರ ಸಾಹಿತ್ಯ ರಚನಾಕಾರರ ಕೃತಿಗಳೊಂದಿಗೆ ತೌಲನಿಕವಾಗಿ ನೋಡುವುದು ಮತ್ತು ಅವರ ಭಾಷಾಶೈಲಿಯನ್ನು ಗಮನಿಸುವುದು.

೧.೩. ಅಧ್ಯಯನದ ವ್ಯಾಪ್ತಿ

ಈ ಮಹಾಪ್ರಬಂಧದಲ್ಲಿ ರಂ.ಶ್ರೀ.ಮುಗಳಿ ಅವರ ಸಾಹಿತ್ಯ ಕುರಿತು ಏಳು ಅಧ್ಯಾಯಗಳ ಮೂಲಕ ಚರ್ಚಿಸಲಾಗಿದೆ.

ಅಧ್ಯಾಯ ಒಂದು: 'ಪೀಠಿಕೆ.' ಇದು ಮಹಾಪ್ರಬಂಧದ ಆರಂಭದ ಅಧ್ಯಾಯವಾಗಿದ್ದು ಇದರಲ್ಲಿ ಪ್ರಸ್ತುತ ಅಧ್ಯಯನದ ಉದ್ದೇಶ, ವಿಧಾನ ಮತ್ತು ವ್ಯಾಪ್ತಿಯನ್ನು ವಿವರಿಸಲಾಗಿದೆ.

ಅಧ್ಯಾಯ ಎರಡು: 'ರಂ.ಶ್ರೀ.ಮುಗಳಿ ಅವರ ಬದುಕು.' ಈ ಅಧ್ಯಾಯದಲ್ಲಿ ಮುಗಳಿ ಅವರ ಬದುಕು, ಬಾಲ್ಯ, ಶಿಕ್ಷಣ, ವ್ಯಕ್ತಿತ್ವ ಕುರಿತಂತೆ ಈ ಅಧ್ಯಾಯದ ಪೂರ್ವಾರ್ಧದಲ್ಲಿ ತಿಳಿಸಲಾಗಿದೆ. ಉತ್ತರಾರ್ಧದಲ್ಲಿ ರಂ.ಶ್ರೀ.ಮುಗಳಿ ಗೆಳೆಯರ ಗುಂಪಿನೊಂದಿಗೆ, ರಂ.ಶ್ರೀ.ಮುಗಳಿ ಅವರ ಮೇಲೆ ಅರವಿಂದರ ಪ್ರಭಾವ, ರಂ.ಶ್ರೀ.ಮುಗಳಿ ಮನೋಹರ ಗ್ರಂಥಮಾಲೆಯೊಂದಿಗೆ, ರಂ.ಶ್ರೀ.ಮುಗಳಿ ಮತ್ತು ಮರಾಠಿ ಸಾಹಿತ್ಯ ಸಂಸ್ಕೃತಿ, ರಂ.ಶ್ರೀ.ಮುಗಳಿ ಅವರ ದೃಷ್ಟಿಯಲ್ಲಿ ಶಿಕ್ಷಣ ರಂ.ಶ್ರೀ.ಮುಗಳಿ ಅವರ ಸಾಹಿತ್ಯದ ಇತಿಮಿತಿಗಳು ಹಾಗೂ ರಂ.ಶ್ರೀ.ಮುಗಳಿ ಅವರ ಸಾಹಿತ್ಯ ಕುರಿತು ಇಲ್ಲಿಯವರೆಗೆ ನಡೆದ ಅಧ್ಯಯನಗಳ ಸಮೀಕ್ಷೆಯನ್ನು ಒಳಗೊಂಡಿದೆ.

ಅಧ್ಯಾಯ ಮೂರು: 'ರಂ.ಶ್ರೀ.ಮುಗಳಿ ಅವರ ಸೃಜನಶೀಲ ಸಾಹಿತ್ಯ.' ಈ ಅಧ್ಯಯನಕ್ಕೆ ಸಂಬಂಧಿಸಿದಂತೆ ಅವರ ಕಾವ್ಯ, ಕತೆ, ಕಾದಂಬರಿ, ನಾಟಕ ಪ್ರಕಾರಗಳಾಗಿ ವರ್ಗೀಕರಿಸಿಕೊಂಡು ಆಯಾ ಪ್ರಕಾರಗಳಿಗೆ ಸಂಬಂಧಿಸಿದಂತೆ ಭಾಷೆ, ವಸ್ತು, ತಂತ್ರ ಹಾಗೂ ತತ್ವಸಿದ್ಧಾಂತಗಳು ಯಾವ ರೀತಿ ಕೆಲಸ ಮಾಡಿವೆ ಎಂಬುದನ್ನು ತಿಳಿಸಲಾಗಿದೆ.

ಅಧ್ಯಾಯ ನಾಲ್ಕು: 'ರಂ.ಶ್ರೀ.ಮುಗಳಿ ಅವರ ಸೃಜನೇತರ ಸಾಹಿತ್ಯ(ಭಾಗ–೧).' ಈ ಅಧ್ಯಾಯದಲ್ಲಿ ರಂ.ಶ್ರೀ.ಮುಗಳಿ ಅವರ ಸೃಜನೇತರ ಸಾಹಿತ್ಯದ ಕುರಿತಂತೆ 'ಕನ್ನಡ ಸಾಹಿತ್ಯ ಚರಿತ್ರೆ,' 'ಪ್ರಾಚೀನ ಕನ್ನಡ ಸಾಹಿತ್ಯ ರೂಪಗಳು,' 'ಕನ್ನಡ ಸಾಹಿತ್ಯ ಇತಿಹಾಸ,' 'ಕರ್ನಾಟಕ ಸಂಸ್ಕೃತಿಯ ಪರಂಪರೆ' ಕೃತಿಗಳ ಕುರಿತಂತೆ ಚಾರಿತ್ರಿಕ ಓದಿನ ಹಿನ್ನೆಲೆಯಲ್ಲಿ ಕಟ್ಟಿಕೊಟ್ಟ ಈ ಕೃತಿಗಳನ್ನು ತೌಲನಿಕವಾಗಿ ವಿವರಿಸಿ ವಿಶ್ಲೇಷಿಸಲಾಗಿದೆ.

ಅಧ್ಯಾಯ ಐದು: 'ರಂ.ಶ್ರೀ.ಮುಗಳಿ ಅವರ ಸೃಜನೇತರ ಸಾಹಿತ್ಯ(ಭಾಗ–೨).' ರಂ.ಶ್ರೀ.ಮುಗಳಿ ಸೃಜನೇತರ ಸಾಹಿತ್ಯ ಕುರಿತಂತೆ ಸಾಹಿತ್ಯ ವಿಮರ್ಶೆ, ಲಲಿತಪ್ರಬಂಧಗಳು, ಆತ್ಮಚರಿತ್ರೆ, ಜೀವನಚರಿತ್ರೆಗಳು, ಅನುವಾದ, ಸಂಪಾದನೆ ಕೃತಿಗಳಿಗೆ ಸಂಬಂಧಿಸಿದಂತೆ ವಿವರಿಸಿ ವಿಶ್ಲೇಷಿಸಲಾಗಿದೆ.

ಅಧ್ಯಾಯ ಆರು: 'ರಂ.ಶ್ರೀ.ಮುಗಳಿ ಅವರ ಪದ್ಯಶೈಲಿ ಮತ್ತು ಗದ್ಯಶೈಲಿ.' ಈ ಅಧ್ಯಾಯದಲ್ಲಿ ಮುಗಳಿಯವರ ಕಾವ್ಯ, ಕತೆ, ಕಾದಂಬರಿ, ನಾಟಕ, ಅನುವಾದ, ವಿಮರ್ಶೆ ಕೃತಿಗಳಲ್ಲಿ ಅವರ ಭಾಷೆ ತಂತ್ರಗಳೊಂದಿಗೆ ಅವರ ದೇಸಿ ಬರಹವನ್ನು ಕೇಂದ್ರೀಕರಿಸಿ ವಿವರಿಸಿ ವಿಶ್ಲೇಷಿಸಲಾಗಿದೆ.

ಅಧ್ಯಾಯ ಎರಡು

ರಂ.ಶ್ರೀ.ಮುಗಳಿ ಅವರ ಬದುಕು

ರಂ.ಶ್ರೀ.ಮುಗಳಿ ಅವರ ಬದುಕು

೨.೧. ಬಾಲ್ಯ-ಶಿಕ್ಷಣ

೨.೨. ವ್ಯಕ್ತಿತ್ವ

೨.೩. ರಂ.ಶ್ರೀ.ಮುಗಳಿ ಗೆಳೆಯರ ಗುಂಪಿನೊಂದಿಗೆ

೨.೪. ರಂ.ಶ್ರೀ.ಮುಗಳಿ ಅವರ ಮೇಲೆ ಅರವಿಂದರ ಪ್ರಭಾವ

೨.೫. ರಂ.ಶ್ರೀ.ಮುಗಳಿ ಮನೋಹರ ಗ್ರಂಥಮಾಲೆಯೊಂದಿಗೆ

೨.೬. ರಂ.ಶ್ರೀ.ಮುಗಳಿ ಮತ್ತು ಮರಾಠಿ ಸಾಹಿತ್ಯ ಸಂಸ್ಕೃತಿ

೨.೭. ರಂ.ಶ್ರೀ.ಮುಗಳಿ ಅವರ ದೃಷ್ಟಿಯಲ್ಲಿ ಶಿಕ್ಷಣ

೨.೮. ರಂ.ಶ್ರೀ.ಮುಗಳಿ ಅವರ ಸಾಹಿತ್ಯದ ಇತಿಮಿತಿಗಳು

೨.೯. ರಂ.ಶ್ರೀ.ಮುಗಳಿ ಅವರ ಸಾಹಿತ್ಯ ಕುರಿತು ಇಲ್ಲಿಯವರೆಗೆ ನಡೆದ ಅಧ್ಯಯನಗಳ ಸಮೀಕ್ಷೆ

ಅಧ್ಯಾಯ ಎರಡು

ರಂ.ಶ್ರೀ. ಮುಗಳಿ ಅವರ ಬದುಕು

೨.೧. ಬಾಲ್ಯ ಮತ್ತು ಶಿಕ್ಷಣ

ಆಧುನಿಕ ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ಪ್ರಮುಖ ಕೊಡುಗೆ ನೀಡಿದ ಮಹನೀಯರುಗಳಲ್ಲಿ ರಂಗನಾಥ ಶ್ರೀನಿವಾಸ ಮುಗಳಿ ಅವರು ಒಬ್ಬರು. ಅವರು ೧೯೦೬ ಜುಲೈ ೧೫ರಂದು ಇಂದಿನ ಗದಗ ಜಿಲ್ಲೆಯ ರೋಣ ತಾಲೂಕಿನ ಹೊಳೆ ಆಲೂರಿನಲ್ಲಿ ಜನಿಸಿದರು. ಇವರ ತಂದೆ ಶ್ರೀನಿವಾಸರಾಯರು. ಇವರು ವೃತ್ತಿಯಿಂದ ವಕೀಲರು. ತಾಯಿ ಕಮಲಕ್ಕ. ಈ ದಂಪತಿಗಳ ಮುದ್ದಿನ ಮಗನಾಗಿ ಬೆಳೆದ ರಂಗನಾಥರು ಪಾಲಕರ, ಪೋಷಕರ, ನೆರೆಹೊರೆಯವರ ಆಕರ್ಷಣೆಯ ಹುಡುಗನಾಗಿ ಬೆಳವಣಿಗೆ ಹೊಂದಿದ ವಿವರ ತಿಳಿದುಬರುತ್ತದೆ.

ಮುಗಳಿ ಅವರಿಗೆ ಚಿಕ್ಕಂದಿನ ದಿನಗಳಲ್ಲಿ ಸಿಹಿಪದಾರ್ಥಗಳಲ್ಲಿ ಅಭಿರುಚಿ ಹೆಚ್ಚೆಂದು ಅವರ ಸೋದರ ಅತ್ತೆಯವರು(ರಸಿಕರಂಗ ದರ್ಶನ ಅಭಿನಂದನ ಗ್ರಂಥದಲ್ಲಿ) ಹೇಳಿಕೊಂಡಿದ್ದಾರೆ. ನಿತ್ಯವೂ ಪಾಯಸ ಬೇಕೆಂದು ಅವರು ಹಠಮಾಡುತ್ತಿದ್ದರಂತೆ. ಈ ಹಠವನ್ನು ಪೂರೈಸುವುದಕ್ಕಾಗಿ ಅನ್ನಕ್ಕೆ ಹಾಲು ಸಕ್ಕರೆ ಹಾಕಿ ಕಲಸಿ ಕೊಟ್ಟರಾಯಿತು. ಅದೇ ಅವರಿಗೆ ಪಾಯಸ. 'ಬೆಲ್ಲಾಹಿಟ್ಟು' ರಂಗನಾಥರಿಗೆ ಇನ್ನೊಂದು ಅತೀವ ಪ್ರೀತಿಯ ತಿನಿಸಾಗಿತ್ತಂತೆ. ಎಲ್ಲಾ ಮಕ್ಕಳಂತೆ ಶಾಲೆಗೆ ಒಲ್ಲೆನೆಂಬ ಹಠತಪ್ಪಿಸಲು ತಾಯಿ, ಸೋದರತ್ತೆಯರು ಶಾಲೆಗೆ ಹೋಗಲು ಅವರ ಮನವೊಲಿಸಿ ಬೆಲ್ಲಾಹಿಟ್ಟಿನ ದೊಡ್ಡ ಉಂಡೆಯ ಆಮಿಷವನ್ನು ಅವರ ಮುಂದೆ ಇಟ್ಟು ಶಾಲೆಗೆ ಹೋಗಲು ಒಪ್ಪಿಸುತ್ತಿದ್ದರಂತೆ. ಹಿಟ್ಟಿನ ಉಂಡೆಯನ್ನು ತೆಗೆದುಕೊಂಡು ಮೆಲ್ಲಗೆ ಮೆಲುಕಾಡಿಸುತ್ತಾ ಶಾಲೆಯ ಹಾದಿಯನ್ನು ಹಿಡಿದು ಹೋಗುವಾಗ ಕೈಯೊಳಗಿನ ಹಿಟ್ಟಿನ ಉಂಡೆ ಖಾಲಿಯಾದ ತಕ್ಷಣ, ರಂಗನಾಥರು ಅಲ್ಲಿಂದ ನೇರವಾಗಿ ಮನೆಗೆ ಬಂದುಬಿಡುತ್ತಿದ್ದರಂತೆ.

ಶಾಲೆಗೆ ಹೋಗಲು ನಿತ್ಯವೂ ಇಷ್ಟೊಂದು 'ತಂಟೆ' ಮಾಡುವ ಮಗನು ಹೇಗೆ ಕಲಿಯಬಹುದು ಎಂಬ ಚಿಂತೆ ತಾಯಿಗೆ. ಮುಗಳಿ ಅವರು ಬಾಲ್ಯದ ಶಾಲಾ ಕಲಿಕೆಯಲ್ಲಿ ಹಿಂದೆ ಇದ್ದರು. ಸೋದರತ್ತೆ ಹೀಗೆ ಭವಿಷ್ಯ ನುಡಿದಿದ್ದರಂತೆ ಇವನು ಮುಂದೊಂದು ದಿನ ತನ್ನ ತಾಯಿಯ ಆಶೋತ್ತರಗಳನ್ನು ಅತ್ಯಂತ ತೃಪ್ತಿಕರವಾಗಿ ಪೂರೈಸುವನು ಎಂದು ನಂಬಿದ್ದರಂತೆ. ಅದೇ ರೀತಿ ಮುಗಳಿ ಅವರು ಪ್ರಾಥಮಿಕ, ಮಾಧ್ಯಮಿಕ ವಿದ್ಯಾಭ್ಯಾಸವನ್ನು ಬಿಜಾಪುರ, ಬಾಗಲಕೋಟೆಗಳಲ್ಲಿ

ಮುಗಿಸುತ್ತಾರೆ. ೧೯೨೦ರ ಸುಮಾರಿಗೆ ಗಾಂಧೀಜಿ ಅವರ ಆಕರ್ಷಣೆಗೆ ಮನಸೋತು ಓದು ನಿಲ್ಲಿಸಿ ಸ್ವಾತಂತ್ರ್ಯ ಹೋರಾಟದಲ್ಲಿ ಪಾಲ್ಗೊಂಡು ಸ್ವದೇಶಿ ವಸ್ತುಗಳ ಬಳಕೆಮಾಡುವಲ್ಲಿ, ನೂಲುವುದರಲ್ಲಿ, ಖಾದಿ ಬಟ್ಟೆ ಹೊತ್ತು ಊರೂರು ಸುತ್ತಿ ಮಾರುವುದರಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡ ವಿವರ ತಿಳಿದುಬರುತ್ತದೆ. ಭಗವದ್ಗೀತೆ, ಉಪನಿಷತ್ತು, ಆಶ್ರಮ ಭಜನಾವಳಿಗಳ ಸಹಾಯದಿಂದ ಒಂದು ಪ್ರಾರ್ಥನಾಮಾಲಿಕೆಯನ್ನು ಸಿದ್ಧಪಡಿಸಿಕೊಂಡು ನಿತ್ಯಪ್ರಾರ್ಥನೆಯನ್ನು ಆರಂಭಿಸಿ ಅವರು ಸುಮಧುರ ಕಂಠದಿಂದ ಹಾಡುತ್ತಿದ್ದರಂತೆ.

ಹದಿನಾರು ವರ್ಷದವರಾಗಿದ್ದಾಗ ಮುಗಳಿ ಅವರು ಶಾಲೆ ಬಿಟ್ಟು ಸ್ವಾತಂತ್ರ್ಯ ಚಳುವಳಿಯಲ್ಲಿ ಸೇರಿಕೊಳ್ಳುವುದು ತಂದೆ ಶ್ರೀನಿವಾಸರಾಯರಿಗೆ ಇರಿಸುಮುರುಸು ಉಂಟುಮಾಡುತ್ತದೆ. ಅಷ್ಟರಲ್ಲಿಯೇ ಆಂದೋಲನದ ಕಾವು ಶಾಂತವಾದದ್ದರಿಂದಲೋ! ಏನೋ ಆಗ ತನ್ನಂತೆ ಶಾಲೆಬಿಟ್ಟು ಕುಳಿತವರ ಸಂಖ್ಯೆ ಕಡಿಮೆಯಾದದ್ದರಿಂದಲೋ! ರಂಗನಾಥರಿಗೆ ಮನಸ್ಸು ಪರಿವರ್ತನೆಗೊಂಡು ಶಾಲೆಗೆ ಹೋಗುವುದು ಯೋಗ್ಯವೆನಿಸಿತಂತೆ, ತದನಂತರ ಬಿಜಾಪುರದಲ್ಲಿರುವ ಹೈಸ್ಕೂಲಿನಲ್ಲಿ ಆರನೇ ತರಗತಿಗೆ ಸೇರಿಕೊಳ್ಳುತ್ತಾರೆ. ಶಾಲೆಯ ಹೊಸ ವಾತಾವರಣ ರಂಗನಾಥರಿಗೆ ಉತ್ಸಾಹವನ್ನು ಹುಟ್ಟಿಸುತ್ತದೆ. ತರಗತಿಗಳಲ್ಲಿ ದಿನನಿತ್ಯದ ಪಾಠದ ಜೊತೆಗೆ ರಾಷ್ಟ್ರಾಭಿಮಾನ, ದೇಶಭಕ್ತಿ, ಸ್ವಾಭಿಮಾನದ ಸಂಕೇತದ ಗುಣಗಳು ಮನಸ್ಸಿನಲ್ಲಿ ತುಂಬಿಕೊಂಡಿದ್ದರು. ಸ್ವಾತಂತ್ರ್ಯ ಹೋರಾಟಗಾರರ ಪ್ರೇರಣೆಯಿಂದಾಗಿ ವಿದ್ಯಾರ್ಥಿಗಳ ಸಂಗಡ ತಾನೂ ಚಳುವಳಿಗಳಲ್ಲಿ ಭಾಗವಹಿಸಲು ಮುಂದಾಗುತ್ತಿದ್ದರೆಂಬುದು ತಿಳಿದುಬರುತ್ತದೆ.

ಮುಗಳಿ ಅವರು ಹೈಸ್ಕೂಲಿನ ಮಟ್ಟದ ಓದಿನಲ್ಲಿಯೇ ಇಂಗ್ಲಿಷ್ ಹಾಗೂ ಸಂಸ್ಕೃತ ಭಾಷಾಭ್ಯಾಸದಲ್ಲಿ ಭದ್ರ ಹಿಡಿತವನ್ನು ಸಾಧಿಸಿಕೊಂಡಿದ್ದರೆಂಬುದು ತಿಳಿದುಬರುತ್ತದೆ. ಇದರ ಪ್ರಯೋಜನದಿಂದಾಗಿ ಇಂಗ್ಲಿಷ್ ಮತ್ತು ಸಂಸ್ಕೃತ ಕಾವ್ಯ ನಾಟಕಗಳನ್ನು ಓದಿಕೊಳ್ಳುವ ಅವಕಾಶ ನನಗೆ ದೊರಕಿತೆಂದು ಅಷ್ಟೇ ಅಲ್ಲ ಕೆರೂರು ವಾಸುದೇವಾಚಾರ್ಯರ ಹಾಗೂ ಗಳಗನಾಥರ ಕನ್ನಡ ಸಾಹಿತ್ಯ ಕೃತಿಗಳನ್ನು ತಾನು ಹೈಸ್ಕೂಲಿನಲ್ಲಿದ್ದಾಗಲೇ ಓದಿಕೊಂಡಿದ್ದಾಗಿ ಅವರ ಆತ್ಮಕತೆ ಜೀವನರಸಿಕದಲ್ಲಿ ಹೇಳಿಕೊಂಡಿದ್ದಾರೆ.

ಹೀಗಾಗಿ ಸಹಜವಾಗಿಯೇ ಮೆಟ್ರಿಕ್ ಪರೀಕ್ಷೆ ಪಾಸು ಮಾಡಿಕೊಂಡು ೧೯೨೪ರಲ್ಲಿ ಮುಂದಿನ ವಿದ್ಯಾಭ್ಯಾಸಕ್ಕಾಗಿ ಧಾರವಾಡದ ಕರ್ನಾಟಕ ಕಲಾ ಕಾಲೇಜಿಗೆ ಸೇರಿಕೊಳ್ಳುತ್ತಾರೆ. ಅದಕ್ಕೂ ಮೊದಲು ಬಿಜಾಪುರದಲ್ಲಿರುವಾಗಲೇ ಬಸಪ್ಪ ಅಕ್ಕಿ, ಚನ್ನಬಸಪ್ಪ ಹಲಸಂಗಿ ಅವರುಗಳಿಂದ ದ.ರಾ.ಬೇಂದ್ರೆ ಅವರ ವಿಷಯವನ್ನು ಕುತೂಹಲವಾಗಿ ಕೇಳಿ ತಿಳಿದುಕೊಂಡಿದ್ದರು. ನಂತರ ಮುಗಳಿ ಅವರು ಧಾರವಾಡಕ್ಕೆ ಹೋದ ಬಳಿಕ ೧೯೨೪ರ ಮಾರ್ಚ್ ತಿಂಗಳ ಒಂದು ದಿನ ವಿಕ್ಟೋರಿಯಾ ಹೈಸ್ಕೂಲಿನಲ್ಲಿ ಬೇಂದ್ರೆ ಅವರನ್ನು ಭೇಟಿ ಮಾಡುತ್ತಾರೆ. ಹೀಗೆ ಭೇಟಿಯಾದಗಿನಿಂದ ಸಾಹಿತ್ಯ ಚಟುವಟಿಕೆಯಲ್ಲಿ ತೊಡಗಿಕೊಂಡು ಬೇಂದ್ರೆ ಅವರನ್ನು ಕಾವ್ಯಗುರುವೆಂದು ಒಪ್ಪಿಕೊಳ್ಳುತ್ತಾರೆ.

ಮುಗಳಿ ಅವರು ಕಾಲೇಜಿಗೆ ಸೇರಿದ ಮೊದಲ ವರ್ಷದಲ್ಲಿಯೇ ಕಾಲೇಜಿನಲ್ಲಿ ಏರ್ಪಡಿಸಲಾಗಿದ್ದ ಭಾಷಣ ಸ್ಪರ್ಧೆಯಲ್ಲಿ ಭಾಗವಹಿಸಿ ಪ್ರಥಮ ಬಹುಮಾನ ಪಡೆಯುತ್ತಾರೆ. ಓದಿನಲ್ಲಿ ಹೆಚ್ಚು ಆಸಕ್ತಿಯಿಂದ ತಮ್ಮನ್ನು ತಾವು ತೊಡಗಿಸಿಕೊಂಡು ಗುರುಗಳ ಸ್ನೇಹಿತರ ಪ್ರೀತಿಗೆ ಪಾತ್ರರಾಗಿ ಎಲ್ಲರ ಮೆಚ್ಚುಗೆ ಪಡೆಯುತ್ತಾರೆ. ಮುಗಳಿ ಅವರು ಕಾಲೇಜಿನ ವಿದ್ಯಾರ್ಥಿಗಳು ಸೇರಿಕೊಂಡು ರಚಿಸಿಕೊಂಡ 'ಕರ್ನಾಟಕ ಸಂಘ'ದ ವ್ಯವಸ್ಥಾಪಕರಾಗಿರುವುದು ತಿಳಿದುಬರುತ್ತದೆ. ಅವರ ಚಿಂತನಶೀಲ ಪ್ರವೃತ್ತಿ, ಧ್ಯೇಯನಿಷ್ಠೆ, ನಿಯಮಬದ್ಧ ಜೀವನ ಸ್ವಭಾವಕ್ಕನುಗುಣವಾಗಿ ಕೆಲಸ ಮಾಡಲು ಮುಂದಾಗುತ್ತಿದ್ದರು. ಹೊಸ ಸ್ಥಾನವನ್ನು ಆಕ್ರಮಿಸಿಕೊಳ್ಳುವುದಕ್ಕಿಂತ ಹಿಡಿದ ಕೆಲಸವನ್ನು ಬಿಡದೆ ಶ್ರದ್ಧೆಯಿಂದ ನಿರ್ವಹಿಸುವುದರಲ್ಲಿಯೇ ಸಮಾಧಾನ ಕಂಡುಕೊಳ್ಳುತ್ತಿದ್ದರೆಂಬುದು ತಿಳಿದುಬರುತ್ತದೆ. ವೈಯಕ್ತಿಕ ನೀತಿನಡಾವಳಿಗಳಂತೆ ಸಾರ್ವಜನಿಕ ಕಾರ್ಯಗಳಲ್ಲಿಯೂ ಸಂಯಮ, ಶಿಸ್ತು, ಶ್ರದ್ಧೆ, ಭಕ್ತಿ, ಸೌಜನ್ಯ ಅವರಲ್ಲಿರುವ ಗುರಿಗಳಾಗಿದ್ದವೆಂದು ಅವರ ಆಪ್ತವಲಯ ಅವರ ಅಭಿನಂದನ ಗ್ರಂಥದಲ್ಲಿ ಹೇಳಿಕೊಂಡಿದ್ದಾರೆ.

ಮುಗಳಿ ಅವರು ಕಾಲೇಜಿನಲ್ಲಿ ಓದುತ್ತಿರುವಾಗಲೇ ಕೈಲಾಸಂ, ಮಾಸ್ತಿ ಅವರ ಪರಿಚಯವಾಗಿದ್ದರಿಂದಲೇ ಅವರ ಸಾಹಿತ್ಯ ಕೃತಿಗಳು ಹಾಗೂ ವ್ಯಕ್ತಿತ್ವದಿಂದಾಗಿ ಪ್ರಭಾವಿತರಾಗುತ್ತಾರೆ. ಅದರಲ್ಲೂ ಬೇಂದ್ರೆಯವರಂತಹ ಮೇಧಾವಿಗಳ ಒಡನಾಟದಿಂದಾಗಿ 'ಕರ್ನಾಟಕ ಪುನರುಜ್ಜೀವನ'ದ ಕಲ್ಪನೆ ಅವರಿಗೆ ಮೂಡುತ್ತದೆ. ವ್ಯಾಸಂಗದಲ್ಲಿ ಹೆಚ್ಚು ಆಸಕ್ತಿಯುಳ್ಳ ಮುಗಳಿ ಅವರಿಗೆ ೧೯೨೮ರಲ್ಲಿ 'ದೀಪದ ಮೆಡಲ್' ಮತ್ತು 'ದಕ್ಷಿಣ ಫೆಲೋಷಿಪ್ ವೇತನ' ಪಡೆದು ಕನ್ನಡ, ಸಂಸ್ಕೃತ ಮತ್ತು ಇಂಗ್ಲಿಷ್‌ಗಳಲ್ಲಿ ಬಿ.ಎ. ಪದವೀಧರರಾಗುತ್ತಾರೆ. ೧೯೩೦ರಲ್ಲಿ 'ವಿದ್ಯಾರಣ್ಯ' ಪಾರಿತೋಷಕದೊಂದಿಗೆ ಕನ್ನಡ ಎಂ.ಎ. ಪದವಿಯನ್ನು ಪಡೆಯುತ್ತಾರೆ. ತಂದೆಯವರಾದ ಶ್ರೀನಿವಾಸರಾಯರು ರಂಗನಾಥರಿಗೆ ಎಲ್.ಎಲ್.ಬಿ.ಯನ್ನು ಓದಿಸಿ ತಮ್ಮಂತೆ ಮಗನನ್ನು ವಕೀಲಿ ವೃತ್ತಿಯಲ್ಲಿ ಮುಂದುವರಿಸಬೇಕೆಂದು ಅಪೇಕ್ಷೆಯಾಗಿರುತ್ತದೆ. ಆದರೆ ರಂಗನಾಥರು ತಂದೆ ಅವರ ವಿಚಾರವನ್ನು ಒಪ್ಪದೆ, ಶಿಕ್ಷಣ ಕ್ಷೇತ್ರದಲ್ಲಿ ತಮ್ಮನ್ನು ತೊಡಗಿಸಿಕೊಂಡು ಬಾಲಗಂಗಾಧರ ತಿಲಕ್, ಗೋಪಾಲಕೃಷ್ಣ ಗೋಖಲೆ ಅವರಂತೆ ಶಿಕ್ಷಣ ಕ್ಷೇತ್ರದ ಮುಖಾಂತರ ದೇಶಸೇವೆ ಕೈಗೊಳ್ಳಬೇಕೆಂದು ಅವರು ನಿರ್ಧರಿಸುತ್ತಾರೆ.

ಹುಬ್ಬಳ್ಳಿಯ 'ನ್ಯೂ ಇಂಗ್ಲಿಷ್ ಸ್ಕೂಲ್'ನಲ್ಲಿ ಶಿಕ್ಷಕರಾಗಿ ಎರಡು ವರ್ಷಗಳ ಸೇವೆ ಸಲ್ಲಿಸಿ, ನಂತರ ೧೯೩೩ರಲ್ಲಿ ಮಹಾರಾಷ್ಟ್ರದ ಸಾಂಗ್ಲಿಯಲ್ಲಿರುವ ವಿಲ್ಲಿಂಗ್ಡನ್ ಕಾಲೇಜಿಗೆ ಅಧ್ಯಾಪಕರಾಗಿ ಕಾರ್ಯನಿರ್ವಹಿಸಲು ತೆರಳುತ್ತಾರೆ. ಉತ್ತರ ಕರ್ನಾಟಕದ ವಿದ್ಯಾರ್ಥಿಗಳಿಗೆ ಮುಂಬಯಿ ವಿದ್ಯಾಸಂಸ್ಥೆಯು ಮುಖ್ಯಕೇಂದ್ರವಾಗಿತ್ತು. ಹೀಗಾಗಿ ಬಹುತೇಕ ಕನ್ನಡ ವಿದ್ಯಾರ್ಥಿಗಳು ಮಹಾರಾಷ್ಟ್ರದ ವಿಲ್ಲಿಂಗ್ಡನ್ ಕಾಲೇಜಿಗೆ ಬಂದು ಸೇರುತ್ತಿದ್ದರು. ಅಂದಿನ ಕಾಲದ ಸಂಸ್ಥಾನದ ಪ್ರಜೆಗಳೆಲ್ಲರ ಕಲಿತ ಭಾಷೆ ಮರಾಠಿಯಾಗಿರುವುದನ್ನು ಮುಗಳಿ ಅವರು ಸರಿಯಾಗಿಯೇ ಅರಿತಿದ್ದರು. ಕಾಲೇಜಿನಲ್ಲಿ ಕನ್ನಡದ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಿದ್ದರೂ ಅಭ್ಯಾಸದ ವಿಷಯವೆಂದು ಕನ್ನಡ ಭಾಷೆಯನ್ನು ತೆಗೆದುಕೊಳ್ಳುವವರ

ಸಂಖ್ಯೆ ಕಡಿಮೆಯಾಗಿರುವುದನ್ನು ಮುಗಳಿ ಅವರು ಮನಗಂಡರು. ಈ ವಿಚಿತ್ರ ಪರಿಸ್ಥಿತಿಯನ್ನು ಹಾಗೂ ಭಾಷಾಭಿಮಾನ ಇಲ್ಲದಿರುವುದನ್ನು ಒಳನಾಡು-ಗಡಿನಾಡುಗಳ ಮಾತಿನಲ್ಲಿ ವ್ಯತ್ಯಾಸ, ಗುಂಪು ಮನೋಭಾವ, ವಿದ್ಯಾರ್ಥಿಗಳಲ್ಲಿ ಐಕ್ಯತಾ ಮನೋಭಾವ ಇಲ್ಲದಿರುವುದನ್ನು ತಿಳಿದುಕೊಳ್ಳುತ್ತಾರೆ.

ಮುಗಳಿ ಅವರು ತಮ್ಮ ಮೃದು ಮಧುರ ಮಾತು, ನಯ ವಿನಯದ ನಡವಳಿಕೆ ಮತ್ತು ಪರಿಣಿತ ಬೋಧನಾ ಕೌಶಲ್ಯದೊಂದಿಗೆ ಅಲ್ಲಿನ ವಿದ್ಯಾರ್ಥಿಗಳ ಮನಸ್ಸಿಗೆ ಹತ್ತಿರವಾಗುತ್ತಾರೆ. ಮುಗಳಿ ಅವರ ಸ್ನೇಹ ಸಂಪರ್ಕ ಪಡೆಯಲು ಕನ್ನಡ-ಕನ್ನಡೇತರ ವಿದ್ಯಾರ್ಥಿಗಳು ಬಯಸುತ್ತಿದ್ದುದು ಸ್ವಾಭಾವಿಕವಾಗಿತ್ತು. ಅದೇ ರೀತಿ ತಮ್ಮ ಪರಿಣಿತಿ, ವಾಕ್‌ಚಾತುರ್ಯದಿಂದ ಕನ್ನಡ ವಿದ್ಯಾರ್ಥಿಗಳಲ್ಲಿ ಭಾಷಾ ಸಂಸ್ಕೃತಿಯ ಅಭಿಮಾನವನ್ನು ಇತರರಲ್ಲಿ ಸ್ನೇಹ-ಸೌಹಾರ್ದತೆಯ ಅನುಸಂಧಾನವನ್ನು ನಿರ್ಮಿಸುವಲ್ಲಿ ಶಕ್ತರಾಗುತ್ತಾರೆ. ಇವರ ಆಸ್ಥೆಯಿಂದ ಕನ್ನಡ ಸಾಹಿತ್ಯವನ್ನು ಓದಲೇಬೇಕೆಂಬ ಲವಲವಿಕೆ ವಿದ್ಯಾರ್ಥಿಗಳಲ್ಲಿ ಮೂಡಿ ಕನ್ನಡ ಓದುವ ವಿದ್ಯಾರ್ಥಿಗಳ ಸಂಖ್ಯೆ ಗಣನೀಯವಾಗಿ ಹೆಚ್ಚಾಗುತ್ತಾ ಹೋಗುವಂತೆ ಮಾಡುತ್ತಾರೆ. ವಿದ್ಯಾರ್ಥಿಗಳೊಂದಿಗೆ ಮುಗಳಿ ಅವರ ಸ್ನೇಹಪರವಾದ ಸಂಬಂಧ ಇದ್ದುದರಿಂದ ವಿದ್ಯಾರ್ಥಿಗಳು ಯಾವ ನೆಪದಿಂದಲಾದರೂ ಅವರೊಡಗೂಡಿ ಒಂದೆರಡು ಮಾತನಾಡಿ ಹೋದರೇನೆ ಅವರಿಗೆ ಸಮಾಧಾನವೆನ್ನುವಷ್ಟರ ಮಟ್ಟಿಗೆ ಮುಗಳಿ ಅವರನ್ನು ಅಷ್ಟೊಂದು ಹಚ್ಚಿಕೊಂಡಿದ್ದರೆಂಬುದು ತಿಳಿಯುತ್ತದೆ. ಅನೇಕ ಬಾರಿ ಮುಗುಳಿ ಅವರು ವಿದ್ಯಾರ್ಥಿಗಳ ಕೊಠಡಿಗೆ ತೆರಳಿ ವಿಚಾರಿಸಿಕೊಂಡು ಹೋಗುವಂತದ್ದನ್ನು ರೂಢಿಸಿಕೊಂಡವರಾಗಿದ್ದರು. ತರಗತಿಯಲ್ಲಿ ಅವರ ಪಾಠವು ವಿದ್ವತ್‌ಪೂರ್ಣವಾಗಿ ಕೂಡಿರುತ್ತಿತ್ತು. ಅವರಲ್ಲಿರುವ ಆದರ್ಶವಾದಿತ್ವದ ಗುಣಗಳಿಂದ ಸರಳವಾದ ಕಾವ್ಯಾಭ್ಯಾಸ, ವಿಮರ್ಶೆ, ವ್ಯಾಕರಣ, ಛಂದಸ್ಸು ವಿಷಯಗಳನ್ನು ಅಷ್ಟೆ ಶ್ರದ್ಧೆಯಿಂದ ಬೋಧನೆ ಮಾಡುತ್ತಿದ್ದರೆಂಬುದು ತಿಳಿಯುತ್ತದೆ.

ಮುಗಳಿ ಅವರು ಪ್ರಾಧ್ಯಾಪಕ ವೃತ್ತಿಯಲ್ಲಿ ತೊಡಗಿ ಸಾಹಿತ್ಯ ಚರಿತ್ರೆಯನ್ನು ಬೋಧಿಸುವಾಗ ವಿದ್ಯಾರ್ಥಿಗಳಿಗೆ ಟಿಪ್ಪಣಿ ಮಾಡಿಕೊಂಡು ಬೋಧಿಸುವುದರ ಜೊತೆಗೆ ಅವರಿಗೆ ಅನುಕೂಲವಾಗಲೆಂದು ಕನ್ನಡ ಸಾಹಿತ್ಯ ಚರಿತ್ರೆ ಎನ್ನುವ ಕೃತಿಯನ್ನೇ ರಚಿಸಿದರು. ಈ ಕೃತಿಗಾಗಿ ಒಂದುವರೆ ಸಾವಿರ ವರ್ಷದ ಕನ್ನಡ ಸಾಹಿತ್ಯ ಚರಿತ್ರೆ, ಹಲವು ಪುಸ್ತಕಗಳು, ಸಂಶೋಧನಾ ಲೇಖನಗಳು ಶಿಲಾಶಾಸನಗಳನ್ನು ಆಧರಿಸಿ ರಚಿಸಿದ್ದಾರೆ. ವಾಸ್ತವವಾಗಿ ಈ ಕೃತಿ ಎಲ್ಲರ ಮನೆಮಾತಾಗಿದೆ. ಅವರಲ್ಲಿರುವ ಶ್ರದ್ಧೆ, ಅಚ್ಚುಕಟ್ಟುತನ ಹಾಗೂ ನಿಯಮಬದ್ಧತೆಯು ಮುಗಳಿ ಅವರ ಮನೋಭೂಮಿಕೆ ಎಂದು ಅವರ ಆಪ್ತಸ್ನೇಹಿತರಾದ ದೇವದತ್ತ ಅವರು ತಿಳಿಸುತ್ತಾರೆ. ಹೀಗಾಗಿ ಮುಗಳಿ ಅವರು ಕಾಲೇಜಿನ ಗ್ರಂಥಾಲಯವನ್ನು ಮತ್ತು ಕನ್ನಡ ವಿಭಾಗವನ್ನು ಅವರು ವಿಶೇಷ ಆಸಕ್ತಿ ವಹಿಸಿ ಬೆಳೆಸಿದ್ದಾರೆನ್ನುವುದು ತಿಳಿದುಬರುತ್ತದೆ.

ಕನ್ನಡ ಭಾಷೆಯ ಸಾಹಿತ್ಯ ವಿಷಯಗಳಲ್ಲಿ ಪ್ರಕಟಗೊಂಡ ಪುಸ್ತಕ ಪ್ರತಿಗಳನ್ನು ಬಹಳ ಆಸಕ್ತಿಪೂರ್ವಕವಾಗಿ ಸಂಗ್ರಹಿಸಿ, ವ್ಯವಸ್ಥೀಕರಿಸಿ ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತೆ

ಕ್ರಮಕೈಗೊಳ್ಳುತ್ತಿದ್ದರು. ಆತ್ಮೀಯ ಸಹೋದ್ಯೋಗಿಯಾಗಿ ಒಡನಾಡಿಯಾಗಿ ಕವಿಗಳಾದ ವಿ.ಕೃ. ಗೋಕಾಕರೊಂದಿಗೆ ಸ್ನೇಹಮಯಿಯಾಗಿ 'ವರುಣ ಕುಂಜ' ಸಾಹಿತ್ಯ ವೇದಿಕೆಯನ್ನು ಸ್ಥಾಪಿಸಿಕೊಂಡು ಆ ವೇದಿಕೆಯ ಮೂಲಕ ವಿದ್ಯಾರ್ಥಿಗಳೊಂದಿಗೆ ಒಡಗೂಡಿ ಕಾವ್ಯ, ಕತೆ, ಕಾದಂಬರಿ, ನಾಟಕ, ನಿಬಂಧ ಹಾಗೂ ಶಾಸ್ತ್ರ ಸಾಹಿತ್ಯದ ಬಗ್ಗೆ ಚರ್ಚಾಗೋಷ್ಠಿಗಳನ್ನು ನಡೆಸುವುದರ ಮೂಲಕ ವಿದ್ಯಾರ್ಥಿಗಳಿಗೆ ಸಾಹಿತ್ಯ ಅಭಿರುಚಿಯನ್ನು ಮೂಡಿಸುತ್ತಾ ನೂತನ ಪ್ರಯೋಗಗಳನ್ನು ಹಮ್ಮಿಕೊಳ್ಳುತ್ತಿರುವುದು ತಿಳಿದುಬರುತ್ತದೆ.

ಮುಗಳಿ ಅವರ ಈ ರೀತಿಯ ಪ್ರಯೋಗದಿಂದ ಸಾಹಿತ್ಯ ರಚನೆಯಲ್ಲಿ ಪ್ರೇರಣೆ, ಪ್ರಭಾವ ಪಡೆದ ಅನೇಕ ಸಾಹಿತ್ಯಾಸಕ್ತರು ಕರ್ನಾಟಕದಾದ್ಯಂತ ಇರುವುದು ಗಮನಾರ್ಹವಾಗಿದೆ. ಅಷ್ಟೆ ಅಲ್ಲದೆ ಮರಾಠಿ-ಕನ್ನಡ ಸಾಮರಸ್ಯದ ರಾಯಭಾರಿಯಾಗಿ ಮುಗಳಿ ಅವರು ಮಾಡಿದ ಕೆಲಸ ಮಹತ್ವದ್ದಾಗಿದೆ. ಸಾಂಗಲಿಯ ಮರಾಠಿ ಭಾಷಿಕ ವಾತಾವರಣ ಅವರನ್ನು ಅಧೀರರನ್ನಾಗಿಸಲಿಲ್ಲ. ಬದಲಾಗಿ ಅಲ್ಲಿನ ಅನೇಕ ಕನ್ನಡಿಗರಂತೆ ಅವರು ಮರಾಠಿಗಷ್ಟೆ ಸೀಮಿತವಾಗದೆ ಕನ್ನಡ ಸಾಹಿತ್ಯ ಕೃಷಿಯೊಂದಿಗೆ ಹಾಗೂ ಮರಾಠಿಗರೊಂದಿಗೆ ಶುದ್ಧ ಮರಾಠಿಯಲ್ಲಿಯೇ ಮಾತನಾಡುವಷ್ಟು ಪರಿಣಿತಿಯನ್ನು ಗಳಿಸಿಕೊಂಡಿದ್ದರು. ಪುಣೆಯ 'ಅಂತರ ಭಾರತಿ' ಸಂಸ್ಥೆಯಲ್ಲಿ ಕನ್ನಡ ಸಾಹಿತ್ಯದ ಮರಾಠಿಯಲ್ಲಿ ನಿರಾಯಾಸವಾಗಿ ಉಪನ್ಯಾಸ ನೀಡುವ ಮಟ್ಟಿಗೆ ಬೆಳೆದರು. ಅವರ ಮರಾಠಿ ಭಾಷೆಯ ಲೀಲಾಜಾಲತೆಯನ್ನು ಕಂಡು ಹಲವರು ಅವರನ್ನು ಮೂಲತಃ ಮರಾಠಿಗರೆಂದೇ ತಿಳಿದು ಅವರ ಬಳಿ ಕನ್ನಡಿಗರನ್ನು ದೂಷಿಸಿದ್ದೂ ಇದೆ. ಇಲ್ಲಿ ಪ್ರಮುಖವಾಗಿ ಗಮನಿಸಬೇಕಾದ ಮಾತೆಂದರೆ ಮೂರು ದಶಕಕ್ಕೂ ಹೆಚ್ಚು ಕಾಲ ಮಹಾರಾಷ್ಟ್ರದಲ್ಲಿ ಬಾಳಿದರೂ ಮುಗಳಿ ಅವರು ಮತ್ತವರ ಕುಟುಂಬದವರು ಕನ್ನಡವನ್ನು ಶುದ್ಧರೀತಿಯಲ್ಲಿ ಬಳಸಿಕೊಂಡೇ ಮರಾಠಿ ಭಾಷೆಗೆ, ಆ ಜನಕ್ಕೆ ಒಗ್ಗಿಕೊಂಡಿದ್ದರೆನ್ನುವುದು ತಿಳಿದುಬರುತ್ತದೆ. ಕನ್ನಡ ತಾಯ್ನುಡಿಯ ಮೇಲಿನ ಪ್ರೀತಿ ಅಭಿಮಾನವನ್ನು ಎಳ್ಳಷ್ಟೂ ಕಡಿಮೆ ಮಾಡಿಕೊಳ್ಳದೆ ಆ ಜನರೊಂದಿಗೆ ಹಾಲಿನಲ್ಲಿ ಸಕ್ಕರೆ ಬೆರೆತಂತೆ ಸಮರಸವಾಗಿ ಬಾಳಬೇಕು ಎನ್ನುವುದು ಅವರ ಮನೋಧರ್ಮವಾಗಿತ್ತೆಂದು ತಿಳಿಯುತ್ತದೆ.

ಗಡಿನಾಡ ಕನ್ನಡ ಶಾಲೆಗಳು ಸುಧಾರಿಸಿಕೊಳ್ಳಬೇಕಾದ ಹಾಗೂ ಶಾಲೆಗಳ ಸಂಖ್ಯೆಗಳು ಹೆಚ್ಚಾಗಬೇಕಾದ ಅನಿವಾರ್ಯತೆಯನ್ನು ಅವರು ಚನ್ನಾಗಿ ಅರಿತಿದ್ದರು. ಆ ಪ್ರಾಂತ್ಯದಲ್ಲಿ ನಡೆಯುತ್ತಿದ್ದ ಎಲ್ಲಾ ಬಗೆಯ ಸಾಹಿತ್ಯದ ಚಟುವಟಿಕೆಗಳಿಗೆ ಮುಗಳಿ ಅವರ ಬೆಂಬಲವಿರುವುದರಿಂದಲೇ "ಅಥಣಿ ಗ್ರಂಥಮಾಲೆ, ಸೇಡಬಾಳದ ಮಿರ್ಜಿ ಅಣ್ಣರಾಯರ ಶಾಂತಿಸೇವಾಸದನ, ಶಮನೇವಾಡಿಯ ಸ್ನೇಹ ಪ್ರಕಾಶನ, ಸಾಂಗಲಿಯ ಕಾವ್ಯ ಪ್ರಕಾಶನ ಸಮಿತಿ ಮುಂತಾದವು ಮುಗಳಿ ಅವರ ಆಸ್ಥೆಯಿಂದ ಬೆಳೆದವು. ಇವೆಲ್ಲವುಗಳಿಂದಾಗಿ 'ಗಡಿನಾಡಿನ ಕನ್ನಡ ದೀಪ' ಎಂಬ ಹೆಗ್ಗಳಿಕೆಗೆ ಅವರು ಪಾತ್ರರಾದರು. ಮುಗಳಿ ಅವರು ತಮ್ಮಮಟ್ಟಿಗೆ 'ಕನ್ನಡ ಹೆತ್ತತಾಯಿ; ಮರಾಠಿ ಹೊತ್ತತಾಯಿ' ಎಂದು ತಿಳಿದು ಹಾಗೆಯೇ ಬದುಕು ಸಾಗಿಸಿದರು. ಈ ರೀತಿ ಇಬ್ಬರೂ ತಾಯಂದಿರ ಋಣ ತೀರಿಸಿದರು"[೧] ಎಂಬುದು ತಿಳಿದುಬರುತ್ತದೆ.

ಮುಗಳಿ ಅವರು ದೈಹಿಕವಾಗಿ ಸಾಂಗಲಿಯಲ್ಲಿದ್ದರೂ ಅವರ ಮನಸ್ಸು ಮಾತ್ರ ಧಾರವಾಡದ ಸಾಹಿತ್ಯ ವಲಯವನ್ನು ಸದಾ ಧ್ಯಾನಿಸುತ್ತಲಿತ್ತು. ಬೇಂದ್ರೆಯವರ ಗೆಳೆಯರ ಗುಂಪಿನಲ್ಲಿದ್ದ ಸದಸ್ಯರಲ್ಲಿ ಅವರೂ ಒಬ್ಬರಾಗಿದ್ದರು. ೧೯೪೦ರಿಂದ ೧೯೪೩ರ ವರೆಗೆ 'ಜೀವನ' ಪತ್ರಿಕೆಯನ್ನು ಅವರು ಸಾಂಗಲಿಯಲ್ಲಿದ್ದುಕೊಂಡೆ ನಡೆಸಿದರು. ಮುಂದೆ ಜಿ.ಬಿ. ಜೋಶಿಯವರು 'ಮನೋಹರ ಗ್ರಂಥಮಾಲೆ'ಯನ್ನು ಆರಂಭಿಸಿದಾಗ ಅದರ ಸಾಹಿತ್ಯ ಸಲಹೆಗಾರರಾದರು. ನಮ್ಮ ಭಾಷಾಸಂಸ್ಕೃತಿಯ ಮೇಲ್ಮೈಗಾಗಿ ಶ್ರಮಿಸಬಯಸುವವರು ನೆರೆಭಾಷೆಗಳೊಂದಿಗೆ ಮಧುರ ಬಾಂಧವ್ಯ ತಾಳಬೇಕೆಂಬುದು ಮುಗಳಿ ಅವರ ಧೋರಣೆಯಾಗಿತ್ತು. ಕರ್ನಾಟಕದ ಹಾಗೂ ಮಹಾರಾಷ್ಟ್ರದ ಸಾಮರಸ್ಯದ ಸೂತ್ರವನ್ನೆ ಹಿಡಿದು ಅವರು ತಮ್ಮ ಬಾಳಿಗೆ ಧನ್ಯತೆ ತಂದುಕೊಂಡರು. 'ಭಾಷೆ ಇರುವುದು ಕೂಡಿಸುವುದಕ್ಕಾಗಿಯೇ ಹೊರತು ಕೆಡಿಸುವುದಕ್ಕಾಗಿ ಅಲ್ಲ' ಕನ್ನಡ ಮರಾಠಿ ಅದರೊಂದಿಗೆ ಭಾರತದ ಎಲ್ಲಾ ಭಾಷೆಗಳು ಪರಸ್ಪರ ಹಿತಸಂವರ್ಧನೆಗಾಗಿ ಬಾಳುವ ಮನೋವೃತ್ತಿಯನ್ನು ಬೆಳೆಸಿಕೊಳ್ಳಬೇಕು ಎಂಬುದೇ ಅವರು ವಿಶ್ರಾಮಭಾಗಕ್ಕೆ ಕೊಟ್ಟ ಸಂದೇಶವಾಗಿದೆ. ಭಾರತೀಯ ಐಕ್ಯದೊಂದಿಗೆ, ಮಾನವೀಯ ಐಕ್ಯತೆಗಾಗಿ ಭಾರತದ ಸಂಸ್ಕೃತಿಯನ್ನು ವಿದೇಶದಲ್ಲಿಯೂ ಪಸರಿಸಿದರು.

ಮುಗಳಿ ಅವರಿಗೆ ಸಂಘಜೀವನದಲ್ಲಿ ಅಪಾರವಾದ ಕಾಳಜಿ ಹೊಂದಿದವರಾಗಿದ್ದರು. ಶಿಕ್ಷಣ ಪ್ರಸಾರಕ್ಕೆ ಮೀಸಲಾದ ಒಂದು ಸಂಸ್ಥೆಯೇ ತಮ್ಮ ಅನ್ನದಾತ ಎಂಬುದನ್ನು ಅವರು ಮರೆಯಲಾರರು. ಸತತವಾಗಿ ೩೩ ವರ್ಷಗಳ ಕಾಲ ಅಧ್ಯಾಪಕ, ಪ್ರಾಂಶುಪಾಲರಾಗಿ ಕಟ್ಟಿಬೆಳೆಸಿದ ಕಾಲೇಜನ್ನು ಬಿಟ್ಟು ಹೊರಬರಬೇಕಾದ ಸಂದರ್ಭ ಕೂಡಿಬಂದಿತು. ಹೀಗಾಗಿ ೧೯೬೬ರಲ್ಲಿ ಮುಗಳಿ ಅವರು ವಿಲ್ಲಿಂಗ್ಡನ್ ಕಾಲೇಜಿನಿಂದ ನಿವೃತ್ತಿಯಾದರು. ಸಾಂಗಲಿಯಲ್ಲಿ ಅಲ್ಲಿನ ಮಹಾರಾಜರ ಅಧ್ಯಕ್ಷತೆಯಲ್ಲಿ ಸನ್ಮಾನ ಸಮಾರಂಭ ನಡೆಯಿಸಿ ಪ್ರಶಸ್ತಿ, ಫಲಪುಷ್ಪಗಳನ್ನು ಅರ್ಪಿಸಲಾಗುತ್ತದೆ. ತಾವು ಪಡೆದ ಪ್ರಶಸ್ತಿಯನ್ನು ಮುಗಳಿ ಅವರು ಕೊಲ್ಲಾಪುರದ ಛತ್ರಪತಿ ಶಿವಾಜಿ ವಿಶ್ವವಿದ್ಯಾಲಯಕ್ಕೆ ದೇಣಿಗೆ ರೂಪದಲ್ಲಿ ನೀಡುತ್ತಾರೆ. ವಿಲ್ಲಿಂಗ್ಡನ್ ಕಾಲೇಜಿನಿಂದ ನಿವೃತ್ತರಾದ ನಂತರ ಮುಗಳಿ ಅವರು ಬೆಂಗಳೂರಿನಲ್ಲಿ ಬಂದು ನೆಲೆಸುತ್ತಾರೆ. ಕೆಲವು ಕಾಲ ಮೈಸೂರು ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಪ್ರಧಾನಾಧಿಕಾರಿಗಳಾಗಿದ್ದುಕೊಂಡು ೧೯೬೭ರಿಂದ ಮೂರು ವರ್ಷಗಳ ಕಾಲ ಬೆಂಗಳೂರು ವಿಶ್ವವಿದ್ಯಾನಿಲಯದ ಮೊದಲ ಕನ್ನಡ ಪ್ರಾಧ್ಯಾಪಕ ಮತ್ತು ವಿಭಾಗದ ಮುಖ್ಯಸ್ಥರಾಗಿ ವಿಭಾಗವನ್ನು ಕಟ್ಟಿ ಬೆಳೆಸುತ್ತಾರೆ. ೧೯೭೦ರಿಂದ ೭೩ರ ವರೆಗೆ ಯುಜಿಸಿ ಪ್ರಾಧ್ಯಾಪಕರಾಗಿದ್ದ ಮುಗಳಿ ಅವರನ್ನು ಮುಂದೆ ಬೆಂಗಳೂರು ವಿಶ್ವವಿದ್ಯಾಲಯದಿಂದ ಕನ್ನಡ ಅಧ್ಯಯನ ಕೇಂದ್ರವು ಯೋಜಿಸಿದ ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆಯ ಸಂಪುಟಗಳಿಗೆ ಕಾರ್ಯನಿರ್ವಾಹಕ ಸಂಪಾದಕರನ್ನಾಗಿ ನೇಮಿಸಲಾಗುತ್ತದೆ. ಸಾಹಿತ್ಯ ಚರಿತ್ರೆಯ ವಿಷಯದಲ್ಲಿ ಅವರಿಗಿದ್ದ ವಿಶೇಷ ಪರಿಣಿತಿ ಸುಧೀರ್ಘ ಅನುಭವಗಳು ಈ ಯೋಜನೆಯ ಯಶಸ್ಸಿಗೆ ಕಾರಣವಾದವು. ಕೆಲಕಾಲ ಅವರು ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದ ಮುಖ್ಯಸ್ಥರಾಗಿಯೂ ಕಾರ್ಯನಿರ್ವಹಿಸುತ್ತಾರೆ.

ಮುಗಳಿ ಅವರು ಕನ್ನಡ ಸಾಹಿತ್ಯ ವಲಯದಲ್ಲಿ ತಮ್ಮದೇ ಆದ ಛಾಪು ಮೂಡಿಸಿದ್ದಾರೆ. ಕಾವ್ಯ, ಸಣ್ಣಕತೆ, ಕಾದಂಬರಿ, ನಾಟಕ, ವಿಮರ್ಶೆ, ಲಲಿತಪ್ರಬಂಧ, ಜೀವನಚರಿತ್ರೆ, ಆತ್ಮಚರಿತ್ರೆ ಹಾಗೂ ಸಾಹಿತ್ಯ ಚರಿತ್ರೆ ಮುಂತಾದ ಎಲ್ಲಾ ಪ್ರಕಾರಗಳಲ್ಲಿ ಕೃತಿಗಳನ್ನು ರಚಿಸಿದ್ದಾರೆ. ಬಾಸಿಗ, ಅಪಾರ ಕರುಣೆ, ಓಂ ಅಶಾಂತಿ, ನಿತ್ಯನಿರಂತರ, ನವಮಾನವ, ಮಣಿಮಾಲೆ, ಮೋಟುಮರ ಮಾತಾಡಿತು, ಕನ್ನಡವೆಂಬ ಮಂತ್ರ, ಸಾವಿತ್ರಿ(ಅನುವಾದ) ಕವನಸಂಕಲನಗಳು; ಕನಸಿನ ಕೆಳದಿ, ಕಥಾ ಸಂಕಲನ; ಬಾಳುರಿ, ಕಾರಣಪುರುಷ, ಅನ್ನ ಮತ್ತು ಅಗ್ನಿವರ್ಣ ಕಾದಂಬರಿಗಳು; ಎತ್ತಿದ ಕೈ, ಸೇವಾ ಪ್ರದೀಪ, ಅಕ್ಕಮಹಾದೇವಿ, ಪಾವನ ಪಾವಕ, ನಾಮಧಾರಿ ಮನೋರಾಜ್ಯ, ವಿಜಯ ಸಾಮ್ರಾಜ್ಯ, ಧನಂಜಯ, ಹೋಂರೂಲು ಮತ್ತು ಬಂಡ್ವಾಳ್ವಿಲ್ಲದ ಬಡಾಯಿ(ಅನುವಾದ) ಹಾಗೂ ಅಪೂರ್ವ, ಪ್ರಳಯದ ಕಸ(ಏಕಾಂಕ ಸಂಗ್ರಹಗಳು) ನಾಟಕಗಳು; ಅರವಿಂದರ ಮಕರಂದ, ಶಾಂತಕವಿ ಇವು 'ಜೀವನ ಚರಿತ್ರೆಗಳಾದರೆ, ಜೀವನ ರಸಿಕ ಮುಗಳಿ ಅವರ ಆತ್ಮಕಥನ. ಕನ್ನಡ ಸಾಹಿತ್ಯ ಚರಿತ್ರೆ, ಕನ್ನಡ ಸಾಹಿತ್ಯ ಇತಿಹಾಸ ಮತ್ತು ಪ್ರಾಚೀನ ಕನ್ನಡ ಸಾಹಿತ್ಯರೂಪಗಳು ಸಾಹಿತ್ಯ ಚರಿತ್ರೆಗೆ ಸಂಬಂಧಿಸಿದವುಗಳಾಗಿವೆ. ರನ್ನನ ಕೃತಿರತ್ನ, ಸಾಹಿತ್ಯೋಪಾಸನೆ, ಕನ್ನಡ ಸಾಹಿತ್ಯದಲ್ಲಿ ಸರಸ್ವತಿ ದರ್ಶನ, ತವನಿಧಿ, ಸಾಹಿತ್ಯ ವಿಮರ್ಶೆಯ ಮಾರ್ಗದರ್ಶಕ ಸೂತ್ರಗಳು, ವಿಮರ್ಶೆಯ ವೃತ, ಮಹಾಕೃತಿ, ಬೇಂದ್ರೆಕಾವ್ಯ, ಪುನರ್ನವೋದಯ ಇವುಗಳು ವಿಮರ್ಶಾಕೃತಿಗಳು. ಮಾತೆಂಬುದು ಜ್ಯೋತಿರ್ಲಿಂಗ, ಕನ್ನಡದ ಕರೆ, ಶಿಕ್ಷಣದ ಮುನ್ನಡೆ, ಕನ್ನಡ ನಾಡಿನ ಪರೋಪಕಾರ, ಕನ್ನಡ ನುಡಿ ತನ್ನ ಮೇಲೆ ತಾ ನಿಲ್ಲಬಹುದೇ? ಕಟುಸತ್ಯ, ಪಾಥೇಯ, ನವೀನ ಪ್ರಜ್ಞೆಯ ಸೂತ್ರಗಳು; ಇವು ಲಘು ನಿಬಂಧಗಳು ಕನ್ನಡದಲ್ಲಿ ಅಷ್ಟೆ ಅಲ್ಲದೆ ಇಂಗ್ಲಿಷ್‌ನಲ್ಲಿ ಬರೆದ The Heritage of Karanataka ಹಾಗೂ History of Kannada Language ಎಂಬ ಕೃತಿಗಳನ್ನು ರಚಿಸಿದ್ದಾರೆ.

ಮುಗಳಿ ಅವರ ಅಪಾರವಾದ ಸಾಹಿತ್ಯಸೇವೆಯನ್ನು ಮೆಚ್ಚಿ ಅವರ ಕನ್ನಡ ಸಾಹಿತ್ಯ ಚರಿತ್ರೆ ಕೃತಿಗೆ ೧೯೫೬ರಲ್ಲಿ ಪುಣೆ ವಿಶ್ವವಿದ್ಯಾಲಯದಿಂದ ಡಿಲಿಟ್ ಪದವಿ ದೊರೆತರೆ, ಅದೇ ವರ್ಷವೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಹಾಗೂ ರಾಜ್ಯೋತ್ಸವ ಪ್ರಶಸ್ತಿ ದೊರೆಯುತ್ತದೆ. ೧೯೬೩ರಲ್ಲಿ ತುಮಕೂರಿನ ಸಿದ್ಧಗಂಗಾದಲ್ಲಿ ನಡೆದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆಯ ಸ್ಥಾನಮಾನಗಳು ಅವರನ್ನು ಅರಸಿಬರುತ್ತವೆ. ಎಂಬತ್ತೇಳು ವರ್ಷಗಳ ತುಂಬುಜೀವನವನ್ನು ನಡೆಸಿದ ರಂ.ಶ್ರೀ.ಮುಗಳಿ ಅವರು ೧೯೯೩ ಫೆಬ್ರವರಿ ೨೦ರಂದು ನಿಧನರಾಗುತ್ತಾರೆ.

೨.೨. ವ್ಯಕ್ತಿತ್ವ

ರಂ.ಶ್ರೀ.ಮುಗಳಿ ಅವರ ವ್ಯಕ್ತಿತ್ವ ಕುರಿತು 'ರಸಿಕ ರಂಗದರ್ಶನ' ಅಭಿನಂದನ ಗ್ರಂಥದಲ್ಲಿ ವಿದ್ವಾಂಸರು, ಸ್ನೇಹಿತರು, ವಿದ್ಯಾರ್ಥಿಗಳು ಒಡಗೂಡಿ ಅವರ ವ್ಯಕ್ತಿತ್ವದ ಬಗ್ಗೆ ಗುಣಗಾನ ಮಾಡಿದ್ದಾರೆ. ಮುಗಳಿ ಅವರು ಸದಾ ಮನಸ್ಸಿನೊಳಗಡೆಯೇ ಚಿಂತನಾ ಪ್ರವೃತ್ತಿಯೊಂದಿಗೆ ತಮ್ಮನ್ನು ತಾವು ತೊಡಗಿಸಿಕೊಳ್ಳುತ್ತಿದ್ದರೆಂಬುದು ತಿಳಿದುಬರುತ್ತದೆ.

ಮೊದಮೊದಲು ಮುಗಳಿ ಅವರಿಗೆ ಗಡಿಪ್ರದೇಶದ ಮರಾಠಿ ಭಾಷಿಕರೊಂದಿಗೆ ಹೊಂದಿಕೊಳ್ಳಲು ಕಷ್ಟವೆನಿಸಿದರೂ ತದನಂತರ ಮರಾಠಿಗರ ಹೃದಯ ಗೆಲ್ಲುತ್ತಾರೆ. ಮುಗಳಿ ಅವರ ಕೂಡ ಚರ್ಚಿಸಲು ಸ್ನೇಹಿತರು ಮತ್ತು ವಿದ್ಯಾರ್ಥಿಗಳು ಬಂದು ಹೋಗುವ ಒಡನಾಟದಿಂದಾಗಿ ಉತ್ತಮ ಬಾಂಧವ್ಯ ಬೆಳೆಯಲು ಸಹಾಯವಾಯಿತೆಂದು ಹೇಳಿಕೊಂಡಿದ್ದಾರೆ. ಆದರೆ ಕಾಲೇಜಿನ ಪ್ರಾಧ್ಯಾಪಕ ವೃಂದದವರು ಅಷ್ಟೊಂದು ಆತ್ಮೀಯತೆಯನ್ನು ತೋರದಿದ್ದರೂ ಮುಗಳಿ ಅವರು ಮಾತ್ರ ಎಲ್ಲರನ್ನೂ ಸ್ನೇಹಮಯಿಗಳಾಗಿ ಕಂಡು ಎಲ್ಲಾ ನೌಕರ ವರ್ಗದವರನ್ನು ತುಂಬ ಸೌಜನ್ಯತೆಯಿಂದ ಮಾತನಾಡಿಸುತ್ತಿದ್ದರೆಂಬುದು ತಿಳಿದು ಬರುತ್ತದೆ. ಆ ಸಂದರ್ಭದಲ್ಲಿಯೇ ಧಾರವಾಡದಿಂದ ಕವಿಮಿತ್ರ ವಿ.ಕೃ.ಗೋಕಾಕ್, ವರಕವಿ ಬೇಂದ್ರೆ ಅವರ ಪತ್ರಗಳು ಬಂದು ಕೈಸೇರಿದಾಗ ಸಂತೋಷಗೊಂಡು ಮರಳಿ ಪತ್ರ ಬರೆಯುತ್ತಿದ್ದರಂತೆ. ಈ ರೀತಿಯಾಗಿ ಧಾರವಾಡದ ಎಲ್ಲಾ ಸಾಹಿತ್ಯ ಚಟುವಟಿಕೆಗಳನ್ನು ಸಾಂಗಲಿಯಲ್ಲಿದ್ದುಕೊಂಡೆ ತಿಳಿದುಕೊಳ್ಳುತ್ತಿದ್ದರೆನ್ನುವುದನ್ನು ತಿಳಿಸಿದ್ದಾರೆ. ತರಗತಿಯಲ್ಲಿ ಮುಗಳಿ ಅವರ ಬೋಧನೆ ಎಂದರೆ ಎಲ್ಲರಿಗೂ ಅಚ್ಚುಮೆಚ್ಚು. ಬೋಧನೆಯ ಮುನ್ನ ಮುಗಳಿ ಅವರ ಕವಿತಾ ವಾಚನದಿಂದಾಗಿ ಮಕ್ಕಳು ಆಸಕ್ತಿಯುಳ್ಳವರಾಗಿ ಪಾಠ ಕೇಳುತ್ತಿದ್ದರಂತೆ, ಅಲ್ಲದೆ ಅವರ ಆಪ್ತವಲಯದವರು ಮುಗಳಿ ಅವರದು ತಾಯಿ ಸಹೃದಯ ಎಂದು ಅವರನ್ನು ಗುಣಗಾನ ಮಾಡಿದ್ದಾರೆ. ಚನ್ನವೀರ ಕಣವಿ ಅವರು 'ಎರಡು ದಡ' ಕವನದ 'ರಸಿಕ ರಂಗ' ಶೀರ್ಷಿಕೆ ಇರುವ ಕವನದಲ್ಲಿ

"ಜೀವನದ ಯಾತ್ರೆಯಲಿ ಕಣ್ಣೀರ ತೀರ್ಥವ
ಕುಡಿದು, ನೋವುಗಳ ತಗ್ಗಿನಲಿ ನುಗ್ಗುನುರಿಯಾಗಿ
ಮುಗ್ಗರಿಸದೆಯೆ ಮುಂದಕಡಿಯಿಟ್ಟು ಮುಡಿಬಾಗಿ
ಹಿಗ್ಗು-ದಿಣ್ಣೆಯನೇರಿ ನಿಂತ ರಸಿಕ! ಬೈರವ
ರೂಪದೆದುರು ಸೌಮ್ಯ ನಂದಾದೀಪ, ಮಲ್ಲಿಗೆ"[೨]

ಯಾಗಿ ಮುಗಳಿ ಅವರ ವ್ಯಕ್ತಿತ್ವವನ್ನು ವರ್ಣಿಸಿದ್ದಾರೆ. ಹಾಗೆಯೇ ಸು.ರಂ. ಎಕ್ಕುಂಡಿ ಅವರು ಮುಗಳಿ ಅವರ ವ್ಯಕ್ತಿತ್ವವನ್ನು ಕುರಿತು.

"ಇಷ್ಟೆಲ್ಲಾ ತುಂಬಿದರೂ ಒಮ್ಮೆಯೂ ತುಳುಕಿಲ್ಲ
ಕನ್ನಡದ ಈ ಕಳಶ, ನುಡಿಯ ಜೇನುಣಿಸಿದರು.
ಬಂದ ಬಂದವರೆದೆಯ ದಾಹವನ್ನು ತಣಿಸಿದರು"[೩]

ಎಂದು ಗುಣಗಾನ ಮಾಡಿದ್ದಾರೆ.

'ಮಗಳ ದೃಷ್ಟಿಯಲ್ಲಿ ಮುಗಳಿ' ಎಂಬ ಲೇಖನದಡಿಯಲ್ಲಿ ತಂದೆಯ ಕುರಿತು ಮಗಳು ಶ್ರೀಮತಿ 'ಪರಿಮಳೆ' ಅವರು ತಮ್ಮ ಮನದಾಳದ ಅನಿಸಿಕೆಗಳನ್ನು ಈ ರೀತಿ ಹಂಚಿಕೊಂಡಿದ್ದಾರೆ. "ನನ್ನನ್ನು ನೋಡಿ ತಮ್ಮ ಮುಗುಳುನಗೆಯಿಂದ 'ಇಷ್ಟೊತ್ತು ಮಲಗಬಾರದಮ್ಮ ನೋಡು ಸಾಲೀ

ಹೊತ್ತಾತು' ಅಂದರು ಆಗಲೆ ನನಗೆ ನಿರಾಶೆಯಾಯಿತು. ಅವರ ಪ್ರೀತಿಯ ಮಗಳಾದ ನಾನು 'ಮಾಸ್ತರು ಇವತ್ತು ಒಂದು ನಿಬಂಧ ಬರೆದುಕೊಂಡು ಬರಲಿಕ್ಕೆ ಹೇಳ್ಯಾರ, ಛಲೋ ಬರೆದವರಿಗೆ ಒಂದು ಪ್ರೈಜ್ ಇಟ್ಟಾರ. ಎಲ್ಲಾರೂ ನನಗೆ ಸಿಗತದೆ ಅಂತಾರ. ಅಪ್ಪಾಜಿ ನನಗೆ ಸ್ವಲ್ಪ ಹೇಳಿಕೊಡತೀಯ ಹ್ಯಾಂಗ ಬರೀಬೇಕು ಅಂಬುದು? ಅಂದೆ ಅವರು ಹೇಳಿಯೇ ಹೇಳುತ್ತಾರೆಂಬ ನಂಬಿಕೆ ನನ್ನದಾಗಿತ್ತು. ಪ್ರಶಸ್ತಿ ನನಗೆ ಬರುವುದು ಖಚಿತವೆಂದು ನಂಬಿದ್ದೆ. ಆದರೆ ಅಪ್ಪ ಒಂದು ಕ್ಷಣ ಮೌನವಾಗಿದ್ದು, 'ನೋಡು ಪರಿಮಳಾ ನನಗೆ ಈಗ ಪೇಪರ್ ಓದೋ ಕೆಲಸವಿದೆ. ಹೀಗೆ ನಿಬಂಧವನ್ನು ಬೇರೆಯವರು ಹೇಳಿಕೊಟ್ಟಂತೆ ಬರೆಯಬಾರದು ನಿನಗೆ ಏನು ತಿಳಿಯುತ್ತದೆಯೋ ಅದನ್ನು ಬರೆದುಕೊಂಡು ಬಾ ತಪ್ಪು ಆದರೆ ನಾನು ತಿದ್ದಿ ಕೊಡತೀನಿ' ಎಂದಿದ್ದರು.

ನನ್ನ ಮಾತನ್ನು ತಂದೆಯವರು ನೆರವೇರಿಸದಕ್ಕೆ ಬಹಳ ಸಿಟ್ಟುಗೊಂಡು ಇಡೀ ದಿನ ಅತ್ತು ಅತ್ತು ಶಾಲೆಗೆ ಹೋಗದೆ ಮನೆಯಲ್ಲಿಯೇ ಮಲಗಿದ ವಿಷಯ ತಾಯಿಗೆ ಗೊತ್ತಾಗುತ್ತದೆ. 'ಹುಡುಗಿ ಊಟ ಸಹಿತಾ ಮಾಡಿಲ್ಲ ಏನು ಅಂಥಾ ಕೆಲಸ? ಏನು ಕೇಳತಾಳ ಬರ್ದು ಕೊಡಬಾರದಾ?' ಎಂಬ ತಾಯಿಯ ಕೂಗಿಗೂ ಅವರು ಜಗ್ಗಲಿಲ್ಲ. ಸಂಜೆಯವರೆಗೂ ತಂದೆಯ ಬಳಿ ಪರಿಮಳೆ ಬರದೆ ಇರುವುದನ್ನು ಮನಗಂಡು ಮುಗಳಿ ಅವರ ಮೃದು ಹೃದಯ ಕರಗಿತು. 'ಪರಿಮಳಾ, ನಿನಗೆ ಗೊತ್ತಿಲ್ಲೇನು ನಾನು ನಿನ್ನ ಎಷ್ಟು ಪ್ರೀತಿಸತೀನಿ? ಅನ್ನುವುದು, ನಿನ್ನ ಹಿತದ ಸಲುವಾಗೇ ನಾ ಹಂಗೆ ಹೇಳಿದೆ. ನೀನು ಮುಗಳಿ ಅವರ ಮಗಳು ಎಂದು ಹೆಸರಾಗಬೇಡ. ಪರಿಮಳೆ ಎಂದು ಸ್ವತಂತ್ರವಾಗಿ ಜನರು ನಿನ್ನನ್ನು ಗೌರವಿಸಬೇಕೆಂಬುದು ನನ್ನ ಇಚ್ಛೆ' ಎಂದು ಮಗಳನ್ನು ರಮಿಸುವರು."[೪] ಈ ಮಾರ್ಗದರ್ಶನದಡಿಯಲ್ಲಿಯೇ ಮಕ್ಕಳಾದ ಆನಂದ ಮುಗಳಿ ವೈದ್ಯರಾಗಿ, ಪರಿಮಳಾ ಮುಗಳಿ ಗೃಹಿಣಿಯಾಗಿ ಸ್ವಾವಲಂಬನೆಯ ಜೀವನ ನಡೆಸುತ್ತಿದ್ದಾರೆ.

ಮುಗಳಿ ಅವರಿಗೆ ಹಾಳು ಹರಟೆ ಎಂದರೆ ಆಗದ ಮಾತಾಗಿತ್ತು. ಜೀವನದಲ್ಲಿ ಸಿಗುವ ಈ ಅಮೂಲ್ಯವಾದ ಅಲ್ಪಕಾಲವನ್ನು ಹರಟೆ ಹೊಡೆದು ವ್ಯರ್ಥಮಾಡಬೇಡಿರಿ ಎಂದು ಯಾವಾಗಲೂ ಮೃದುಮಾತುಗಳಿಂದಲೇ ಹೇಳುತ್ತಿದ್ದರೆಂದು ತಮ್ಮಲ್ಲಿರುವ ಕನ್ನಡ ಅಭಿಮಾನವನ್ನು ಅವರು ನನಗೆ ತಿಳಿಸಿಕೊಟ್ಟಿದ್ದರು. ಬೇರೆ ಭಾಷೆಯ ಮೇಲೆ ದ್ವೇಷ ಮಾಡಬಾರದೆಂದೂ ವಿಷಯ ಬಂದಾಗಲೆಲ್ಲಾ ಹೇಳುತ್ತಿದ್ದರು. ಒಣ ಅಭಿಮಾನ ಸರಿಯಲ್ಲ. ನೀನು ನಿನ್ನ ಮಾತೃಭಾಷೆಯ ಸುಂದರತೆಯನ್ನು ಅರಿತುಕೊಂಡು ಬೇರೆಯವರಿಗೆ ಅದನ್ನು ತೋರಿಸಿಕೊಂಡು ಬೇರೆಯವರ ಭಾಷೆಯಲ್ಲಿದ್ದ ಸುಂದರತೆಯನ್ನು ನೀನೂ ಅರಿತುಕೊಳ್ಳುವ ಪ್ರಯತ್ನ ಮಾಡು ಎಂದು ಸಲಹೆ ಕೊಡುತ್ತಿದ್ದರು ಎಂಬುದಾಗಿ ಪರಿಮಳೆಯವರು ತಮ್ಮ ತಂದೆಯ ವ್ಯಕ್ತಿತ್ವವನ್ನು ಕುರಿತು ಹೆಮ್ಮೆಯಿಂದ ಹೇಳಿಕೊಂಡಿದ್ದಾರೆ.

ಮುಂದುವರಿದು ಮುಗಳಿ ಅವರು ಸಮಯಕ್ಕೆ ಎಷ್ಟೊಂದು ಮಹತ್ವ ಕೊಡುತ್ತಿದ್ದರೆಂಬುದಕ್ಕೆ ಅವರ ದಿನನಿತ್ಯದ ದಿನಚರಿಯ ಮೂಲಕ ತಿಳಿಸಲು ಉತ್ಸುಕರಾಗುತ್ತಾ ಮನೆಯ ಗೋಡೆಗಡಿಯಾರದ ಸಂಖ್ಯೆ ಹಿಂದೆ ಮುಂದೆ ಹೋಗಬಹುದು, ಸೂರ್ಯಚಂದ್ರರೂ ಬೇಸರದಿಂದ ತಮ್ಮ ಗತಿಯನ್ನು

ಬದಲಿಸಬಹುದು. ಆದರೆ ತಂದೆ ಅವರ ಎಲ್ಲಾ ಕೆಲಸಗಳೂ ಸರಿಯಾಗಿ ನಡೆಯಬೇಕು. ಬೆಳಗ್ಗೆ ಎದ್ದೊಡನೆ ಬಿಸಿನೀರು ನಿಂಬೆಹಣ್ಣು, ಆಮೇಲೆ ಚಹ ಕುಡಿದ ನಂತರ ವರ್ತಮಾನ ಪತ್ರವಾಚನ, ರೇಡಿಯೋ ಸಂಗೀತವನ್ನು ಆಲಿಸುವುದು, ಮುಂದೆ ಸ್ನಾನ ಮಾಡಿಕೊಂಡು ಕಾಲೇಜಿಗೆ ಹೋಗಿ ಪಾಠಬೋಧನೆ ಇತ್ಯಾದಿ. ದಿನಾಲು ಮಧ್ಯಾಹ್ನ ಸುಮಾರು ಒಂದು ತಾಸು ವಿದ್ಯಾರ್ಥಿಗಳ ಹಾಗೂ ಆಪ್ತೇಷ್ಟರ ಬಂದ ಪತ್ರಗಳಿಗೆ ಉತ್ತರ ಬರೆಯುವುದರಲ್ಲಿ ಕಾಲ ಕಳೆಯುತ್ತಿದ್ದರು. ಕೊನೆಯದಾಗಿ ಸಂಪೂರ್ಣವಾಗಿ ಅಪ್ಪಾಜಿಯವರನ್ನು ನಾನು ತಿಳಿದಿದ್ದೇನೆ ಎಂದು ಎದೆತಟ್ಟಿ ಹೇಳಲಾರೆ. ಅದೆಷ್ಟೋ ಸುಪ್ತಶಕ್ತಿಗಳು ಅವರಲ್ಲಿ ಅಡಗಿಕೊಂಡಿವೆ. ಬಹಳಷ್ಟು ದುಃಖಗಳಿಗೆ ಎದೆಕೊಟ್ಟು ಅವರು ಎಂತಹ ಕಷ್ಟ ಬಂದರೂ ಕುಗ್ಗದೆ, ಎಂಥ ಸುಖ ಬಂದರೂ ಹಿಗ್ಗದೆ, ತಮ್ಮನ್ನು ತಾವು ತೊಡಗಿಸಿಕೊಳ್ಳುತ್ತಿದ್ದರು. ಅಪ್ಪಾಜಿ ಅವರಿಂದ ಎಲ್ಲವನ್ನೂ ಕಲಿಯಲಾಗದಿದ್ದರೂ ಅವರಲ್ಲಿದ್ದ ಮನಸ್ಸಿನ ಹಿಡಿತ, ಸಮತೋಲನ, ಬುದ್ಧಿ ಅರಿತು ಕಲಿಯುವುದೇ ನನ್ನ ಜೀವನದ ಗುರಿಯಾಗಿದೆ ಎಂದು ಪರಿಮಳೆ ಅವರು ತಿಳಿಸುವರು.

ವಿದ್ಯಾರ್ಥಿಗಳ ಪಾಲಿಗೆ ರಂ.ಶ್ರೀ. ಮುಗಳಿ ಅವರೇ ಅಪ್ಪಟ ಗುರುವರ್ಯರಾಗಿದ್ದರು. ಯಾವ ವಿಷಯವಿದ್ದರೂ ಸರಳೀಕರಿಸಿ ವಿದ್ಯಾರ್ಥಿಗಳಿಗೆ ಮನಮುಟ್ಟುವ ಹಾಗೆ ಬೋಧಿಸುವುದರಲ್ಲಿ ಸಿದ್ಧಹಸ್ತರಾಗಿದ್ದಾರೆಂಬುದು ತಿಳಿದು ಬರುತ್ತದೆ. ಹೊಸ ಹೊಸ ಕೃತಿಗಳನ್ನು ಓದುವಾಗ ಅದರಲ್ಲಿದ್ದ ಲೋಪದೋಷಗಳ ಕುರಿತು ಸೌಜನ್ಯದಿಂದ ಲೇಖಕರ ಗಮನಕ್ಕೆ ತರುತ್ತಿದ್ದರು. ಅದೇ ರೀತಿ ಉತ್ತಮ ಕೃತಿ ಪ್ರಕಟಗೊಂಡರೆ ಪ್ರಶಂಸನೀಯ ಮಾತುಗಳಲ್ಲಿ ಅವರಿಗೆ ಪತ್ರ ಬರೆಯುತ್ತಿದ್ದರು. ಸಾಹಿತ್ಯವಲಯವು ತುಂಬಾ ಆರೋಗ್ಯಯುತವಾಗಿ ಬೆಳೆಯಬೇಕೆಂಬ ಮಹಾದಾಸೆಯಿಂದ ಹೊಸ ಲೇಖಕರಿಗೆ ಸಲಹೆ ಸೂಚನೆಗಳನ್ನು ಕೊಡುತ್ತಿದ್ದರು.

ಮುಗಳಿ ಅವರ ತಾಳ್ಮೆ, ಉತ್ಸಾಹ, ಸಹಕಾರ, ಸೌಜನ್ಯಯುತ ಜೀವನಕ್ರಮದಿಂದಲೇ ಅವರು ಎತ್ತರಸ್ಥಾನಕ್ಕೇರಲು ಸಹಕಾರಿಯಾಗಿವೆ. 'ಮುಗಳಿ' ಎಂಬ ಹೆಸರಿಗೆ ತಕ್ಕಂತೆ ಅವರು ಯಾವಾಗಲೂ ಮುಗುಳುನಗೆಯಿಂದಲೇ ಕಂಗೊಳಿಸುತ್ತಾರೆ. ವಿದ್ಯಾರ್ಥಿಗಳು ಹಾಗೂ ಶಿಕ್ಷಕವರ್ಗದ ನಡುವೆ ಆತ್ಮೀಯ ಭಾವನೆ ಏರ್ಪಡಿಸುವುದರಿಂದ ಶಿಕ್ಷಣದ ಗುಣಮಟ್ಟ ಹೆಚ್ಚಾಗುವುದೆಂಬುದು ಅವರ ನಂಬಿಕೆಯಾಗಿತ್ತು. ಅಲ್ಲದೇ ಭಾರತೀಯ ಸಂಸ್ಕೃತಿಯ ಹಿರಿಮೆ ಗರಿಮೆಗಳನ್ನು ವಿಶ್ವಕ್ಕೆ ಎತ್ತಿ ತೋರಿಸುವ ಮಹತ್ವಾಕಾಂಕ್ಷೆಯನ್ನು ಹೊಂದಿದವರಾಗಿದ್ದರು. ಬೋಧನೆ ಯಾವುದೇ ವಿಷಯದ ಕುರಿತು ಮಾಡಿದರೂ ಅವರ ವಾಕ್‌ಚಾತುರ್ಯದಿಂದ ಕೇಳುಗರ ಮನಗೆಲ್ಲುತ್ತಿದ್ದರು. ಹೀಗಾಗಿ ಮೂವತ್ಮೂರು ವರ್ಷಗಳ ಕಾಲ ಸಾಂಗಲಿಯಲ್ಲಿಯೇ ನೆಲೆನಿಂತವರಾಗಿದ್ದರು.

೨.೩. ಗೆಳೆಯರ ಗುಂಪಿನಲ್ಲಿ ರಂ.ಶ್ರೀ.ಮುಗಳಿ

೧೯೨೨ರಲ್ಲಿ ಮಧುರಚೆನ್ನ ಹಲಸಂಗಿ ಗೆಳೆಯರ ನೇತೃತ್ವದಲ್ಲಿ 'ಶಾರದಾ ಮಂಡಲ' ರಚನೆಗೊಂಡಿತು. ಆ ಮಂಡಲದ ಸದಸ್ಯರುಗಳಾಗಿ ಮಧುರಚೆನ್ನ, ಸಿಂಪಿ ಲಿಂಗಣ್ಣ, ಕಾಪಸೆ

ರೇವಪ್ಪ, ಮಾದಣ್ಣ ಓಲೆಕಾರ, ಚೆನ್ನಬಸಪ್ಪ ಸರಸಂಬಿ, ಅದಮ ಮಸಳಿ, ಶಿವಲಿಂಗಪ್ಪ ಸರಸಂಬಿ, ಗುರುಬಸಪ್ಪ ಹಲಗಲಿ, ಬಸಣ್ಣ ಅಕ್ಕಿ, ಪದ್ಮರಾಜ ಹುನಗುಂದ ಮೊದಲಾದವರು ಕೂಡಿಕೊಂಡು ನಿಗದಿಗೊಳಿಸಿದ ಸ್ಥಳದಲ್ಲಿಯೇ ಒಂದೊಂದು ವಿಷಯ ಕುರಿತು ಚರ್ಚಿಸುವುದು ಹಾಗೂ ಸಾಹಿತ್ಯ ರಚನೆಯಲ್ಲಿ ತಮ್ಮನ್ನು ತಾವು ತೊಡಗಿಸಿಕೊಳ್ಳುತ್ತಿದ್ದರು. ಹೀಗಾಗಿ ಬೇಂದ್ರೆಯವರು ಸಹ ಧಾರವಾಡದಲ್ಲಿ ಮೊದಲಿಗೆ 'ಶಾರದಾ ಮಂಡಲ' ಶೀರ್ಷಿಕೆಯಡಿಯಲ್ಲಿಯೇ ವೇದಿಕೆ ಸಿದ್ಧಗೊಳಿಸಿಕೊಳ್ಳುತ್ತಾರೆ. ತಮ್ಮದೆಯಾದ ಗೆಳೆಯರ ಗುಂಪನ್ನು ಕಟ್ಟಿಕೊಂಡು, ಅನೇಕ ವಿದ್ಯಾರ್ಥಿಗಳಿಗೆ ಕಥೆ, ಕವನ, ಲೇಖನಗಳನ್ನು ಬರೆಯಲು ಪ್ರೇರೇಪಿಸುತಿದ್ದರು. ರವೀಂದ್ರನಾಥ ಟಾಗೂರ್, ಅರವಿಂದಘೋಷ, ಶೆಲ್ಲಿ, ಕೀಟ್ಸ್, ಶೆಕ್ಸ್‌ಪಿಯರ್, ಕಾಳಿದಾಸ, ಜಗನ್ನಾಥ ಪಂಡಿತ, ಜಯದೇವ, ಶಂಕರಾಚಾರ್ಯ, ಇಮರ್ಸನ್, ಏ.ಈ ಮೆಟರ್‌ಲಿಂಕ್, ಸರ್ವಜ್ಞ, ಕನಕದಾಸ, ಬಸವಣ್ಣ, ಅಕ್ಕಮಹಾದೇವಿ ಇನ್ನೂ ಮೊದಲಾದ ಸಾಹಿತಿಗಳ ಕುರಿತು ಪ್ರಿಯವಾದ ಎಲ್ಲಾ ಸಾಹಿತ್ಯವನ್ನು ಗೆಳೆಯರ ಸಮ್ಮುಖದಲ್ಲಿ ಓದಿ ತೋರಿಸಿ ಅವರನ್ನು ಬಹುಶ್ರುತರನ್ನಾಗಿ ಮಾಡುತ್ತಿದ್ದರು. ವಿದ್ಯಾರ್ಥಿಗಳ ಮಟ್ಟಕ್ಕೆ ತಕ್ಕಂತೆ ವಿಚಾರಗಳನ್ನು ಹದವರಿಸಿ ಹೇಳುತ್ತಿದ್ದುದರಿಂದ ಗೆಳೆಯರ ಸಂಖ್ಯೆಯು ಇಮ್ಮಡಿಗೊಳ್ಳುತ್ತಿತ್ತು ಎಂದು ವಾಮನ ಬೇಂದ್ರೆ ಅವರು ತಿಳಿಸುತ್ತಾರೆ.

ಹಲಸಂಗಿ ಗೆಳೆಯರು ಪ್ರೀತಿಪೂರ್ವಕವಾಗಿ ಸ್ನೇಹಮಯಿಗಳಾಗಿ ಬೇಂದ್ರೆಯವರ ಜೊತೆ ಸೇರಿಕೊಂಡು ೧೯೨೨ರಲ್ಲಿ ಬೇಂದ್ರೆಯವರ ನೇತೃತ್ವದಲ್ಲಿ ಗೆಳೆಯರ ಗುಂಪು ಧಾರವಾಡದಲ್ಲಿ ರೂಪು ಪಡೆದ ನಂತರ ಮೊದಲ ಹಂತದ ಗೆಳೆಯರ ಗುಂಪಿನ ಸದಸ್ಯರಾಗಿ "ದ.ರಾ. ಬೇಂದ್ರೆ, ವಿ.ಕೃ. ಗೋಕಾಕ್, ರಂ.ಶ್ರೀ. ಮುಗಳಿ, ಸೀತಾರಾಮ ಮಾಳಗಿ, ಮದುರಚೆನ್ನ, ಸಿಂಪಿ ಲಿಂಗಣ್ಣ, ಶಂಭಾ ಜೋಶೀ, ಆನಂದ ಕಂದ, ಸಾಲಿ ರಾಮಚಂದ್ರರಾಯ, ಚಿದಂಬರ ಸಾಗರ, ಬಿಂದು ಮಾಧವ, ಕೊಲ್ಲಾರ, ತಿವಾರಿ, ಹಬ್ಬೂ ರಂಗಪ್ಪ, ಪೋತದಾರ, ಧೂಲ ಕಾಪಸೆ, ನಾ. ಬಾ. ಶಾಸ್ತ್ರಿ ಸಹೋದರರು(ಕೊಪ್ಪಳ), ಶಂಕರ ಗೌಡರು, ಗೋವರ್ಧನ ಮಳಿಯ, ಪದ್ಮರಾಜ ಹುನಗುಂದ, ವಿನೀತ ರಾಮಚಂದ್ರ, ಪ್ರಹ್ಲಾದ ನರೇಗಲ್ಲ, ಕೃಷ್ಣಕುಮಾರ ಕಲ್ಲೂರ, ಶೇ.ಗೋ. ಕುಲಕರ್ಣಿ, ನಾರಾಯಣ ಸಂಗಮ, ಲಕ್ಷ್ಮಣರಾವ ಜಮಖಂಡಿ, ಅಕ್ಕಿ ಬಸಣ್ಣ, ಗೋವಿಂದ ಚುಳಕಿ, ಮನೋಹರ್ ರಾವ್ ದೇಶಪಾಂಡೆ, ಮನಸೂ ಬದಾರ ಗೆಳೆಯರು, ಸಿದ್ಧವನಹಳ್ಳಿ ಕೃಷ್ಣಶರ್ಮ"[೫] ಮುಂತಾದ ಮಹನೀಯರು ಗೆಳೆಯರ ಗುಂಪಿನ ಸದಸ್ಯರಾಗಿದ್ದುಕೊಂಡು ಸೃಜನಶೀಲ ಸಾಹಿತ್ಯ ಚಟುವಟಿಕೆಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡು ಗೆಳೆಯರ ಗುಂಪು ಇಮ್ಮಡಿಯಾಗುವಂತೆ ಸಹಕರಿಸಿದರು.

ಧಾರವಾಡ ಗೆಳೆಯರ ಗುಂಪು ವಿಶೇಷವಾಗಿ ಉತ್ತರ ಕರ್ನಾಟಕಕ್ಕೆ ಸೀಮಿತಗೊಳ್ಳದೆ, ಅದರ ಶಾಖೆಗಳು ಇಡೀ ಕರ್ನಾಟಕದುದ್ದಕ್ಕೂ ಚಾಚಿಕೊಂಡಿದ್ದವು. ಮೈಸೂರಿನ ಕಡೆಗೂ ಕೆಲವರು ಗೆಳೆಯರ ಗುಂಪಿನ ಸದಸ್ಯರುಗಳಿದ್ದರು. ಅಲ್ಲದೆ ಹೈದರಾಬಾದಿನಲ್ಲಿಯೂ ಅದರ ಒಂದು ಶಾಖೆ ರೂಪುಗೊಂಡಿತ್ತು. ಗೆಳೆಯರ ಗುಂಪಿನಲ್ಲಿ ಎಲ್ಲಾ ಸದಸ್ಯರು ಸಾಹಿತ್ಯದ ಅಭಿರುಚಿಯುಳ್ಳ ಸೃಜನಶೀಲ

ಮನೋಭಾವದವರಾಗಿದ್ದರು. ಸಾಹಿತ್ಯದ ಮೂಲಕ ನಾಡಿನ ಸೇವೆ ಮಾಡಬೇಕೆಂಬ ಉದ್ದೇಶವುಳ್ಳವರೇ ಅದರಲ್ಲಿ ಹೆಚ್ಚಾಗಿದ್ದರು. ರಾಷ್ಟ್ರೀಯತೆ, ಸಾಂಸ್ಕೃತಿಕವಾಗಿ, ಆಧ್ಯಾತ್ಮಿಕವಾಗಿ, ಸಾಹಿತ್ಯಿಕವಾಗಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದರು.

ಈ ಸದಸ್ಯರುಗಳ ಗುರಿ ಉದ್ದೇಶಗಳು ಕನ್ನಡಿಗರನ್ನು ಎಚ್ಚರಗೊಳಿಸುವುದು, ನಮ್ಮ ಉಜ್ವಲ ಸಂಸ್ಕೃತಿಯನ್ನು ಪುನರುಜ್ಜೀವನಗೊಳಿಸುವುದು, ಸಾಹಿತ್ಯಕ್ಕೆ ನವೀನ ಚೈತನ್ಯ ತಂದುಕೊಡುವುದು (ಹೊಸಗನ್ನಡದಲ್ಲಿ ಸಾಹಿತ್ಯ ರಚನೆ) ಆಧ್ಯಾತ್ಮಿಕ ಮನೋಭೂಮಿಕೆಯ ಮೇಲೆ ನಾಡನ್ನು ಕಟ್ಟುವುದು. ರಾಷ್ಟ್ರಕಾರ್ಯಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಳ್ಳುವುದು, ಈ ರೀತಿಯ ಗುರಿ, ಉದ್ದೇಶಗಳನ್ನು ಈಡೇರಿಸುವ ಸಲುವಾಗಿ ಹಲವಾರು ಮಹನೀಯರು ಗೆಳೆಯರ ಗುಂಪು ಸೇರಿಕೊಂಡರು. ತಮ್ಮದೇ ಆದ ಪತ್ರಿಕಾ ವಲಯವಾದ "ಜಯಕರ್ನಾಟಕ, ಪ್ರಬುದ್ಧ ಕರ್ನಾಟಕ, ವಿಶ್ವಕರ್ನಾಟಕ, ವಾಗ್ಭೂಷಣ, ಪ್ರಬೋಧ, ಸುವಾಸಿನಿ, ಲೋಕಪಾವನ, ರಂಗಭೂಮಿ, ಕಾದಂಬರಿ, ಶಿವಾನುಭವ, ಸುಭೋದ"[5] ಮುಂತಾದ ಪತ್ರಿಕೆಗಳನ್ನೊಳಗೊಂಡಿತ್ತು. ಅದರಲ್ಲಿಯೂ ಜಯಕರ್ನಾಟಕ ಮತ್ತು ಸ್ವಧರ್ಮ ಪತ್ರಿಕೆಗಳು ಗೆಳೆಯರ ಬಳಗದ ಸದಸ್ಯತ್ವದಲ್ಲಿಯೇ ನಡೆಯುತ್ತಿದ್ದು, ಪ್ರಧಾನ ಸಂಪಾದಕರು ಬೇಂದ್ರೆಯವರೇ ಆಗಿದ್ದರು. ಇಂಥ ಪತ್ರಿಕಾವಲಯವನ್ನು ಸೃಷ್ಟಿಸಿಕೊಂಡು ಸಾರಸ್ವತ ಪ್ರಪಂಚದಲ್ಲಿ ಗೆಳೆಯರ ಗುಂಪಿನವರು ಒಂದು ಐತಿಹಾಸಿಕ ದಾಖಲೆಯನ್ನು ಸೃಷ್ಟಿಸಿದರು. ಈ ನಿಟ್ಟಿನಿಂದಾಗಿ ನವೋದಯ ಸಾಹಿತ್ಯ ವಲಯದಲ್ಲಿ ಅಭ್ಯಾಸದ ಪ್ರಯೋಗಗಳನ್ನು ಮಾಡುವ ಮೂಲಕ ತಮ್ಮ ಸಾಹಿತ್ಯವನ್ನು ಉನ್ನತೀಕರಿಸಿಕೊಂಡಿದ್ದರು. ಅಲ್ಲದೇ ನಾಡಹಬ್ಬ, ಪಂಪೋತ್ಸವ ಮೊದಲಾದವುಗಳು ಅವರು ಕೈಗೊಂಡ ಮಹತ್ವದ ಸಾಂಸ್ಕೃತಿಕವಾದ ಮೊದಲ ಕಾರ್ಯಗಳಾಗಿವೆ. ಹೀಗೆ ನಾಡುನುಡಿ ಬೆಳವಣಿಗೆಗನುಗುಣವಾಗಿ ಕೈಗೊಂಡ ಕಾರ್ಯಗಳಲ್ಲಿ ಅವರು ಯಶಸ್ವಿಗೊಂಡವರಾಗಿದ್ದರು. ಇಂದು ಸಹ ನಾಡಿನಾದ್ಯಂತ ನಡೆಯುತ್ತಿರುವ ಸಂಸ್ಕೃತಿ ಬಿತ್ತರಿಸುವಂತಹ ಅಖಿಲ ಕರ್ನಾಟಕ ಸಾಹಿತ್ಯ ಸಮ್ಮೇಳನ, ಜಿಲ್ಲಾ ತಾಲೂಕು ಸಮ್ಮೇಳನಗಳು, ನಾಡಹಬ್ಬಗಳು, ವಿವಿಧ ಸಾಹಿತ್ಯಗೋಷ್ಠಿಗಳು ಇನ್ನೂ ಇತರೆ ಕಾರ್ಯಕ್ರಮಗಳು ಅವರ ಪ್ರೇರಣೆ ಪ್ರಭಾವಗಳಿಂದಲೇ ಆಗಿವೆ ಎಂದರೆ ತಪ್ಪಾಗಲಾರದು.

ಗೆಳೆಯರ ಗುಂಪಿನ ಚಟುವಟಿಕೆಗಳ ಬಗೆಗೆ ಬರೆಯುತ್ತಾ ಕೀರ್ತಿನಾಥ ಕುರ್ತಕೋಟಿ ಅವರು, 'ಗುಂಪಿನ ಉದ್ದೇಶ ಒಬ್ಬೊಬ್ಬರಲ್ಲಿಯೂ ಹುದುಗಿದ್ದ ಶಕ್ತಿ ವಿಕಾಸಕ್ಕೆ ಅದು ಯಾವುದೇ ಅಭ್ಯಾಸ, ಸಾಹಿತ್ಯ ವಿನೋದ, ಬರೆಯುವುದು ಬರೆದದ್ದನ್ನು ಗೆಳೆಯ ರಸಿಕರಿಗೆ ಓದಿತೋರಿಸುವುದು, ಪ್ರಕಟಗೊಳಿಸುವುದು ಇವು ಅವರ ದೈನಂದಿನ ಚಟುವಟಿಕೆಗಳಾಗಿದ್ದವು. ಆಗಿನ ಕಾಲ ಅಮೋಘವಾದ ಸೃಷ್ಟಿಯ ಕಾಲ. ಹೊಸಗನ್ನಡ ಸಾಹಿತ್ಯದ ಚಂದ್ರಮಾನ, ಕನಸುಗಾರಿಕೆಯ ಬೆಳದಿಂಗಳಲ್ಲಿ ಅರಳಿದ ಸಾಹಿತ್ಯಪುಷ್ಪಗಳಿಗೆ ಲೆಕ್ಕವೆ ಇಲ್ಲ. ಎಂದಿದ್ದಾರೆ. ಹಾಗೆಯೇ ಮುಂದುವರಿದು 'ಗೆಳೆಯರ ಗುಂಪು'ಕನಸುಗಾರಿಕೆಯ ಬೆಳದಿಂಗಳಷ್ಟೆ ಆಗಿರದೆ, ಜೀವಿತದ ಧ್ಯೇಯವೂ ಆಗಿತ್ತೆಂಬುದನ್ನು ಮರೆಯುವಂತಿಲ್ಲ ಎಂದು ಅಭಿಪ್ರಾಯಪಟ್ಟಿದ್ದಾರೆ.

ಮಹಾತ್ಮಾ ಗಾಂಧೀಜಿ, ರವೀಂದ್ರನಾಥ ಟಾಗೂರ, ಅರವಿಂದ ಘೋಷ, ಈ ಮೂವರು ಮಹನೀಯರು ಗೆಳೆಯರ ಗುಂಪಿನ ಸದಸ್ಯರುಗಳ ಮೇಲೆ ಪ್ರಭಾವ ಬೀರಿದವರಾಗಿದ್ದಾರೆ. ಗಾಂಧೀಜಿಯವರು ರಾಷ್ಟ್ರಜೀವನ, ರವೀಂದ್ರ ಕಾವ್ಯಜೀವನ, ಅರವಿಂದರ ಆಧ್ಯಾತ್ಮಿಕ ಜೀವನಗಳ ಬಗ್ಗೆ ತಿಳಿದುಕೊಂಡು ಜೀವನ ಸಾರ್ಥಕವನ್ನು ಪಡೆಯಲು ಹಂಬಲವುಳ್ಳವರಾಗಿದ್ದರು. ರಾಮಕೃಷ್ಣ ಪರಮಹಂಸ, ಸ್ವಾಮಿ ವಿವೇಕಾನಂದ, ಜಿ. ಕೃಷ್ಣಮೂರ್ತಿಯವರಂಥವರ ಉಪದೇಶಗಳು, ಶರಣರ, ದಾಸರ, ತೀರ್ಥಂಕರರ ಜೀವನದರ್ಶನಗಳು ಅವರಿಗೆ ಪ್ರಿಯವಾಗಿದ್ದವು. ಐನ್‌ಸ್ಟೀನ್‌ನಂಥ ವಿಜ್ಞಾನಿಗಳ ಹೊಸಹೊಸ ಸಂಶೋಧನೆಗಳನ್ನು ಗಮನಿಸುತ್ತಿದ್ದರು. ಹೀಗೆ ಒಂದೊಂದು ವಲಯದಲ್ಲಿಯೂ ಗೆಳೆಯರು ಕ್ರಿಯಾಶೀಲತೆಯಿಂದ ಕೂಡಿಕೊಂಡು ಸಾಹಿತ್ಯ ಚಟುವಟಿಕೆಗಳ ಮೂಲಕ ನಾಡಿಗೆ ಬೆಳಕು ನೀಡಿದವರಾಗಿದ್ದಾರೆ. ಹೀಗೆ ಸುಮಾರು ಎರಡು ದಶಕಗಳವರೆಗೆ ಅಭೂತಪೂರ್ವ ಕಾರ್ಯಗೈದು, ಕಾರಣಾಂತರಗಳಿಂದ ಗೆಳೆಯರ ಗುಂಪು ಅವನತಿ ಹೊಂದುತ್ತಾ ಹೋದರೂ ಹಲವಾರು ಗೆಳೆಯರು ಸ್ನೇಹಪೂರ್ವಕವಾಗಿ ಅನಂತರವೂ ಕಾರ್ಯನಿರ್ವಹಿಸಿದುದು ಗಮನಕ್ಕೆ ಬರುತ್ತದೆ.

ಗೆಳೆಯರ ಗುಂಪಿನಲ್ಲಿ ವಿವಿಧ ಪ್ರಯೋಗಗಳ ಮೂಲಕ ಸಾಹಿತ್ಯ ರಚನೆಯಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡ ದ.ರಾ. ಬೇಂದ್ರೆ, ವಿ.ಕೃ. ಗೋಕಾಕ್, ರಂ.ಶ್ರೀ.ಮುಗಳಿ, ಸೇತುರಾಮ ಮಳಗಿ, ನ.ಕೃ. ದೀಕ್ಷಿತ್, ಗ.ಕ. ಗದ್ರೆ, ವಿನಿತ್ ರಾಮಚಂದ್ರರಾವ್ ಈ ಏಳು ಜನರು ಸೇರಿಕೊಂಡು ಸಾಹಿತ್ಯ ವ್ಯುತ್ಪತ್ತಿ, ಸಾಹಿತ್ಯದ ಸಾರ್ಥಕತೆಯನ್ನು ಕಂಡುಕೊಳ್ಳಲು ಗೆಳೆಯರ ಗುಂಪಿನ ಮೂಲಕ ಮುಂದಾಗುತ್ತಾರೆ. ಈ ಗೆಳೆಯರ ಗುಂಪು ಸಾಹಿತ್ಯ ರಚನೆಯಲ್ಲಿ 'ಮೂರು ಮೌನವಾರ'ವನ್ನು ಕಳೆಯಲು ತೀರ್ಮಾನಿಸಿಕೊಳ್ಳುತ್ತಾರೆ. ಅದರಂತೆ

'ಪ್ರಥಮ ಮೌನ ಸಪ್ತಾಹ'(೨೧.೦೫.೧೯೪೪) ಧಾರವಾಡದ ನರಸಿಂಗರಾವ್ ದೀಕ್ಷಿತರ ಮನೆಯ ಔಟ್‌ಹೌಸ್‌ನಲ್ಲಿ ಮೇ ತಿಂಗಳ ಕೊನೆಯ ವಾರದಂದು ಈ ಏಳು ಜನ ಗೆಳೆಯರು ಸೇರಿಕೊಂಡು ಏಳು ದಿನ ಕಾಲ ಮೌನ ಸಾಪ್ತಾಹ ಪಾಲಿಸುವರು. ಇವರ ಊಟೋಪಚಾರಗಳನ್ನು ದೀಕ್ಷಿತ್ ಅಳಿಯಂದಿರಾದ ವಾಸುದೇವರಾಯರು ಬಹಳ ಮುತುವರ್ಜಿಯಿಂದ ನೋಡಿಕೊಳ್ಳುತ್ತಾರೆ. ಎರಡು ಹೊತ್ತಿನ ಊಟವನ್ನು ಹಾಗೂ ತಮ್ಮ ಓದು-ಬರಹ ಇವುಗಳನ್ನು ಮೌನವಾಗಿಯೇ ಮಾಡುತ್ತಿದ್ದರು. 'ಪ್ರಥಮ ಮೌನ ಸಪ್ತಾಹ'ದಲ್ಲಿ ರಂ.ಶ್ರೀ.ಮುಗಳಿ ಅವರು ಸ್ನೇಹಬಳಗದಲ್ಲಿದ್ದುಕೊಂಡು 'ಮೌನದ ಮೀಮಾಂಸೆ' ಮತ್ತು 'ಮೌನಶಾಂತಿ' ಎಂಬೆರಡು ಲೇಖನಗಳನ್ನು ರಚಿಸುತ್ತಾರೆ.

'ಮೌನ ಮೀಮಾಂಸೆ' ಲೇಖನದಲ್ಲಿ ತಿಳಿಸಿರುವಂತೆ "ಮಾತು ಬಲ್ಲವರಾಗಬೇಕಾದರೆ; ಮೌನ ಬಲ್ಲವರಾಗಬೇಕು ಮಾತು ಹೊರಗೆ ಕೇಳಿಸುವಾಗ ರೂಪದಲ್ಲಿದ್ದಂತೆ; ಮೌನ ಒಳಗೆ ಕೇಳಿಸಿದ ರೂಪದಲ್ಲಿರುತ್ತದೆ. ಮನದ ಟಂಕಸಾಲೆಯಲ್ಲಿ ಮಾತು ಎಲ್ಲಾ ಪ್ರಕ್ರಿಯೆಗಳಲ್ಲಿ ಹಾದು ಸಿದ್ಧವಾಗಿ, ಹೊರಗೆ ಬಂದು ನಾಣ್ಯವಾಗಿ ರೂಢವಾಗುತ್ತದೆ. ನಾಣ್ಯಕ್ಕೆ ಹೆಚ್ಚಿನ ಬೆಲೆ ಬರಬೇಕಾದರೆ,

ಟಂಕಸಾಲೆಯಲ್ಲಿ ಅದಕ್ಕೆ ರೂಪ ಬರಬೇಕು. ಮಾನ್ಯತೆ ದೊರೆಯಬೇಕು. ಕೊಟ್ಟೆನಾಣ್ಯಗಳ್ನು ಬೇಕಾದಷ್ಟು ತಯಾರಿಸಬಹುದು. ಅದಕ್ಕೆ ಲೋಕದಲ್ಲಿ ಮಾನ್ಯತೆ ದೊರೆಯದು ಮಾತಿಗೆ ಬೆಲೆ ಬರಬೇಕಾದರೆ, ಮನದಲ್ಲಿ ಅದಕ್ಕೆ ರೂಪ ಬರಬೇಕು. ಇದು ಸುಲಭವಾಗಿ ಪ್ರಾಪ್ತವಾಗುವಂತದ್ದಲ್ಲ. ಇದನ್ನು ಒಲಿಸಿಕೊಳ್ಳಬೇಕಾಗುತ್ತದೆ."[೭] ಎಂದು ತಿಳಿಸುತ್ತಾರೆ.

ಹಾಗೆಯೇ ಎರಡನೆ ಮೌನ ಸಪ್ತಾಹ(೧೧.೦೫.೧೯೪೯) ಮುಗಳಿ ಅವರು ಮೌನ ಸಾಧನೆಯ ಕುರಿತು ಲೇಖನದಲ್ಲಿ ತಿಳಿಸಿರುವಂತೆ "ಮಾತಿನ ವಿವರಣೆಗೆ ಮನದ ವಿಕೃತಿ ಕಾರಣ. ಆ ವಿಕೃತಿಯನ್ನು ಎದುರಿಸಲಾರದೆ ಮಾತಿನ ಆಶ್ರಯ ಪಡೆದು ಸಮಾಧಾನ ಹೊಂದುತ್ತಿರುತ್ತೇವೆ. ಮೌನದೊಡನೇ ಮನವನ್ನು ಇದಿರಿಸಬೇಕು"[೮] ಎಂದಿದ್ದಾರೆ. ಬೇಂದ್ರೆ ಅವರು 'ಮೌನತಪ' ಲೇಖನದಲ್ಲಿ ಮೌನವು ಮಾತಿನ ತಪಸ್ಸು ಮೊದಲು ಮೆಟ್ಟಿಲು ಎರಡನೆಯ ಮೆಟ್ಟಿಲಲ್ಲಿ ಅದು ಮನದ ಅವಸ್ಥಾ ಶಿಖರ! ನಿಜವಾದ ಉತ್ತಮ ಮೌನವು ಮನದ ಗೌರಿಶಂಕರ! ಧವಳಗಿರಿ! ಎಂದು ಬಣ್ಣಿಸಿದ್ದಾರೆ.

ಗೆಳೆಯರ ಗುಂಪಿನಿಂದ ಯುವ ಸಾಹಿತಿಗಳನ್ನು ಪ್ರೋತ್ಸಾಹಿಸಿ ಬೆಳೆಸುವ ನಿಟ್ಟಿನಲ್ಲಿ ಬೇಂದ್ರೆ ಅವರು

> "Mine is but a flower's wish
> To love Some seeds behind"[೯]

(ನನ್ನದೊಂದು ಹೂವಿನಂತ ಕೋರಿಕೆ ನನ್ನ ಹಿಂದೆ ಹಲವು ಬೀಜಗಳನ್ನು ಬಿಟ್ಟುಹೋಗುವುದು) ಎಂದಿದ್ದಾರೆ.

೨.೪. ರಂ.ಶ್ರೀ.ಮುಗಳಿ ಅವರ ಮೇಲೆ ಅರವಿಂದರ ಪ್ರಭಾವ

ಪಶ್ಚಿಮ ಬಂಗಾಳವು ಕವಿಗಳ, ಕಲಾವಿದರ, ಜ್ಞಾನಯೋಗಿಗಳಾದ ರಾಮಕೃಷ್ಣ ಪರಮಹಂಸ, ಸ್ವಾಮಿ ವಿವೇಕಾನಂದ, ರವೀಂದ್ರನಾಥ ಟಾಗೋರ್, ಸರೋಜಿನಿ ನಾಯ್ಡು, ಸುಭಾಸ್ ಚಂದ್ರ ಭೋಸ್, ಅರವಿಂದ ಘೋಷ್ ಇಂಥ ಮಹನೀಯರನ್ನು ಜನ್ಮತಾಳಿದ ಪುಣ್ಯಭೂಮಿಯಾಗಿದೆ.

ಅರವಿಂದ ಘೋಷರ ಪ್ರೇರಣೆ, ಪ್ರಭಾವ ರಂ.ಶ್ರೀ.ಮುಗಳಿ ಅವರ ಮೇಲೆ ಆದದ್ದರ ಪರಿಣಾಮವಾಗಿ ಮುಗಳಿ ಅವರಲ್ಲಿ ಶ್ರದ್ಧೆ, ತಾಳ್ಮೆ, ಸಂಯಮ, ಸಹಕಾರ, ಸಮಯನಿಷ್ಠೆ, ಕೆಲಸದಲ್ಲಿ ತಮ್ಮನ್ನು ತಾವು ತೊಡಗಿಸಿಕೊಳ್ಳುವಂತ ಗುಣಗಳು ಅವರಿಂದಲೇ ಬಂದಿರಬೇಕು. ಅರವಿಂದರ ಮಹತ್ವವಾದ ಜ್ಞಾನಶಕ್ತಿ ತಮ್ಮ ನಾಡನ್ನಷ್ಟೇ ಅಲ್ಲದೆ ಮನುಷ್ಯಕುಲವನ್ನೇ ಎಚ್ಚರಗೊಳಿಸುವ ಪ್ರೇರಕ ಶಕ್ತಿಯಾಗಿದೆ. ಪಾಂಡಿಚೇರಿಯಲ್ಲಿ ಬೃಹದಾಕಾರವಾಗಿ ಬೆಳೆದ ಶ್ರೀ ಅರವಿಂದಾಶ್ರಮ ಶ್ರೀ ಮಾತೆಯರ ಮಾರ್ಗದರ್ಶನದಲ್ಲಿ ರೂಪುಪಡೆಯುತ್ತದೆ. "ಅರವಿಂದರು ೧೮೭೨ನೇ ಆಗಸ್ಟ್ ೧೫ ರಂದು ಕಲ್ಕತ್ತೆಯಲ್ಲಿ ಜನಿಸುತ್ತಾರೆ. ಇಪತ್ತೊಂದು ವಯಸ್ಸಿನ ವರಗಿನ ಅವರ ವಿದ್ಯಾಭ್ಯಾಸ ಸಂಪೂರ್ಣವಾಗಿ

ಇಂಗ್ಲೆಂಡಿನಲ್ಲಿ ಹದಿನಾಲ್ಕು ವರ್ಷಗಳ ಕಾಲ ವ್ಯಾಸಂಗ ಮಾಡಿ ಅರವಿಂದರು ಗ್ರೀಕ್, ಲ್ಯಾಟಿನ್, ಸ್ಪ್ಯಾನಿಷ್, ಇಟಾಲಿಯನ್, ಫ್ರೆಂಚ್, ಜರ್ಮನ್ ಭಾಷೆಗಳೆಲ್ಲವನ್ನು ಕರಗತ ಮಾಡಿಕೊಂಡಿದ್ದರು. ಐ.ಪಿ.ಎಸ್ ಪರೀಕ್ಷೆಯಲ್ಲಿ ಉತ್ತೀರ್ಣಗೊಂಡು ಭಾರತಕ್ಕೆ ಬಂದಾಗ ಬ್ರಿಟಿಷರ ದಬ್ಬಾಳಿಕೆಯನ್ನು ಮನಗಾಣುತ್ತಾರೆ"[೧೦] ಸರ್ಕಾರದ ಕೆಲಸವನ್ನು ಬಿಟ್ಟು ಸ್ವಾತಂತ್ರ್ಯ ಸಂಗ್ರಾಮದಲ್ಲಿ ತೊಡಗಿಸಿಕೊಳ್ಳುತ್ತಾರೆ. ಬ್ರಿಟಿಷರ ದಬ್ಬಾಳಿಕೆಯ ವಿರುದ್ಧ, 'ವಂದೇಮಾತರಂ' ಮತ್ತು 'ಯುಗಾಂತರ' ದೇಸಿ ಪತ್ರಿಕೆಗಳಲ್ಲಿ ಪ್ರಚೋದನಕಾರಿ ಲೇಖನಗಳನ್ನು ಬರೆಯುವ ಮೂಲಕ ಯುವಪೀಳಿಗೆಯಲ್ಲಿ ಸ್ವಾತಂತ್ರ್ಯ ಪಡೆಯುವ ಜಾಗೃತಿ ಮೂಡಿಸುತ್ತಾರೆ. ಯೋಗಸಿದ್ಧಿಯಿಂದ ರೂಪ ಪಡೆದ ಇವರ ಸಾಹಿತ್ಯವು ಜಗತ್‌ಪ್ರಸಿದ್ಧವಾಗಿದೆ. ೧೯೨೬ರಲ್ಲಿ ಅರವಿಂದರು ಹೊರಗಿನ ಪ್ರಪಂಚದಿಂದ ಸಂಪೂರ್ಣವಾಗಿ ದೂರವಾದರು. ಏಕಾಂತ ಬಯಸಿ ಧ್ಯಾನಾಸಕ್ತರಾಗುವರು. ೧೯೪೭ರಲ್ಲಿ ಭಾರತ ಸ್ವಾತಂತ್ರ್ಯಗೊಳ್ಳುವುದು. ೧೯೫೦ರ ಡಿಸೆಂಬರ್ ೫ರಂದು ಅರವಿಂದರು ಇಹಲೋಕ ತ್ಯಜಿಸುವರು. ಅರವಿಂದರು ವಿಶ್ವಭ್ರಾತೃತ್ವ ಮೂಡಿಸುವಂತ ತಮ್ಮದೆಯಾದ ತತ್ವಜ್ಞಾನವನ್ನು ಪ್ರಪಂಚಕ್ಕೆ ಕೊಡುವ ಮೂಲಕ ಅರವಿಂದರು ತಮ್ಮನ್ನು ತಾವು ತೊಡಗಿಸಿಕೊಂಡಿರುವುದು ತಿಳಿದುಬರುತ್ತದೆ. ಹೀಗಾಗಿ ಅರವಿಂದರ ಲೇಖನಗಳನ್ನು ಹಾಗೂ ಸಾಹಿತ್ಯ ಕೃತಿಗಳನ್ನು ಓದುವ ವರ್ಗಕ್ಕೆ ಸೇರಿದ ರಂ.ಶ್ರೀ.ಮುಗಳಿ ಅವರು ಸಹಜವಾಗೇ ಅರವಿಂದರ ಪ್ರಭಾವಕ್ಕೊಳಗಾಗುತ್ತಾರೆ. ಇದಕ್ಕೆ ಪುಷ್ಟೀಕರಿಸುವಂತೆ ಮುಗಳಿ ಅವರು ಅರವಿಂದರ 'ಸಾವಿತ್ರಿ' ಮಹಾಕೃತಿಯ ಆಯ್ದ ಭಾಗಗಳನ್ನು ಸಂಗ್ರಹಿಸಿ, ಅನುವಾದಗೊಳಿಸಿ ಮೂರು ಸಂಪುಟಗಳಲ್ಲಿ ಪ್ರಕಟಿಸುತ್ತಾರೆ. ಅದರ ದೀರ್ಘವಾದ ಮುನ್ನುಡಿಯನ್ನು ಮತ್ತು ಕಥಾಸಾರವನ್ನು ಬರೆಯುತ್ತಾರೆ. ಅಲ್ಲದೇ 'ಅರವಿಂದರ ಮಕರಂದ' ಎಂಬ ಶೀರ್ಷಿಕೆಯಡಿಯಲ್ಲಿ ಅವರ ಸಂಪೂರ್ಣ ಜೀವನ ಚರಿತ್ರೆಯನ್ನು ಪ್ರಕಟಿಸುತ್ತಾರೆ. ಕೋ. ಚನ್ನಬಸಪ್ಪನವರು 'ಸಾವಿತ್ರಿ' ಮಹಾಕಾವ್ಯವನ್ನು ಕನ್ನಡಕ್ಕೆ 'ದಿವ್ಯಜೀವನ' ಎಂಬ ಶೀರ್ಷಿಕೆಯಡಿಯಲ್ಲಿ ಸಂಪೂರ್ಣ ಕೃತಿಯನ್ನು ಅನುವಾದಗೊಳಿಸುತ್ತಾರೆ. ಈ ಕಾವ್ಯಕ್ಕೆ ಮುನ್ನುಡಿಯನ್ನು ಕುವೆಂಪುರವರು ಮತ್ತು ಪ್ರಸ್ತಾವನೆಯನ್ನು ರಂ.ಶ್ರೀ.ಮುಗಳಿ ಅವರು ಬರೆಯುತ್ತಾರೆ. ಒಟ್ಟಿನಲ್ಲಿ ಅರವಿಂದರ ಸಾವಿತ್ರಿ ಮಹಾಕಾವ್ಯವು ಅನುವಾದಗೊಂಡು ೨೩,೮೧೨ ಸಾಲಿನ ಬೃಹತ್ ಕಾವ್ಯವಾಗಿ ರೂಪಪಡೆಯುತ್ತದೆ.

ಅರವಿಂದರ ಪ್ರಭಾವ ಮುಗಳಿ ಅವರ ಮೇಲಷ್ಟೆ ಅಲ್ಲದೆ "ದ.ರಾ.ಬೇಂದ್ರೆ, ವಿ.ಕೃ. ಗೋಕಾಕ್, ಕುವೆಂಪು, ಜಿ.ಎಸ್. ಶಿವರುದ್ರಪ್ಪ, ಸ.ಶಿ. ಮರುಳಯ್ಯ, ಸಿಂಪಿ ಲಿಂಗಣ್ಣ, ಮಧುರಚೆನ್ನ ಹರ್ಡೇಕರ್ ಮಂಜಪ್ಪ, ಗಂಗಾಧರರಾವ್ ದೇಶಪಾಂಡೆ, ನಾಡಗೀರ, ಗೋರೆ, ರಾಣಿಬೆನ್ನೂರಿನ ನಾಯಕ, ಫ.ಗು. ಹಳಕಟ್ಟಿ, ನಾರಾಯಣ ಸಂಗಮ, ಪ್ರಲ್ಹಾದ ನರೆಗಲ್ಲ, ದೇಸಾಯಿ ದತ್ತಮೂರ್ತಿ, ವಿನೀತ ರಾಮಚಂದ್ರರಾವ್, ಮಕ್ತಲಿ, ರೇವಪ್ಪ ಕಪಾಸೆ, ದೂಲಾ, ಜಹಂಗೀರದಾರ"[೧೧] ಇನ್ನೂ ಮುಂತಾದ ಮಹನೀಯರು ಅರವಿಂದರ ಪ್ರಭಾವ ಪ್ರೇರಣೆಗೆ ಒಳಗಾದವರಾಗಿದ್ದಾರೆ.

ಈ ರೀತಿಯಾಗಿ ಪ್ರೇರಣೆ ಪ್ರಭಾವಗೊಂಡ "ಧಾರವಾಡದ ಗೆಳೆಯರ ಗುಂಪು ೧೯೪೮-೪೯ರಲ್ಲಿ ತನ್ನದೆಯಾದ ಪ್ರಯೋಗಾತ್ಮಕವಾದ ಕಾರ್ಯದಲ್ಲಿ ತೊಡಗಿಕೊಂಡು, ಮೌನಯೋಗ ಸಪ್ತಾಹ"[೧೨] ದಂತಹ ಶಿಬಿರದಲ್ಲಿ ಮುಗಳಿ ಹಾಗೂ ಅವರ ಆಪ್ತಸ್ನೇಹಿತ ವಲಯದವರು ಒಂದುವಾರ ನಿಗದಿಗೊಳಿಸಿದ ಮನೆಯೊಳಗಡೆ ಕೂಡಿಕೊಂಡು ಮೌನವಾಗಿ ಸಾಹಿತ್ಯಕೃಷಿಯಲ್ಲಿ ತಮ್ಮನ್ನು ತಾವು ತೊಡಗಿಸಿಕೊಳ್ಳುತ್ತಾರೆ. ಆ ಕಾಲಾವಧಿಯಲ್ಲಿ ಗೆಳೆಯರು ತಮ್ಮ ತಮ್ಮ ಲೇಖನಗಳನ್ನು ರಚಿಸುತ್ತಾರೆ. ಅಂದು ಮುಗಳಿ ಅವರು ಮೂರು ಲೇಖನಗಳನ್ನು ರಚಿಸುತ್ತಾರೆ. ಮೌನದ ಮೀಮಾಂಸೆ, ಮೌನಶಾಂತಿ, ಮೌನದ ಸಾಧನೆಗಳೆಂಬ ಮೌನದ ಕುರಿತಾಗಿಯೇ ಬರೆದ ಲೇಖನಗಳಾಗಿವೆ. ಈ ಲೇಖನಗಳ ರಚನೆಯ ಮೂಲಕ ಗೆಳೆಯರ ಗುಂಪಿಗೆ ಅರವಿಂದರ ಪ್ರಭಾವವನ್ನು ಸ್ಮರಿಸಬಹುದಾಗಿದೆ. ಮುಗಳಿ ಅವರ ಸಾಹಿತ್ಯ ಪ್ರಕಾರದ ಕೃತಿಗಳಾದ ಕಾವ್ಯ, ಕತೆ, ಕಾದಂಬರಿಗಳಲ್ಲಿಯೂ ಸಹ ಅವರ ಆದರ್ಶವಾದ ತತ್ವವನ್ನು ಗುರುತಿಸಬಹುದಾಗಿದೆ.

೨.೫. ಮನೋಹರ ಗ್ರಂಥಮಾಲೆಯೊಂದಿಗೆ ರಂ.ಶ್ರೀ.ಮುಗಳಿ

ಮನೋಹರ ಗ್ರಂಥಮಾಲೆಯು ೧೯೩೩ರಲ್ಲಿ ಪ್ರಾರಂಭಗೊಳ್ಳುತ್ತದೆ. ಅಂದಿನ ಸಾಹಿತಿಗಳಿಗೂ ಮನೋಹರ ಗ್ರಂಥಮಾಲೆಗೂ ಅವಿನಾಭಾವ ಸಂಬಂಧವಿರುವುದು ತಿಳಿದುಬರುತ್ತದೆ. ಈ ಗ್ರಂಥಮಾಲೆಯು ಅಂದಿನಿಂದ ಇಂದಿನವರೆಗೂ ತನ್ನದೆ ಆದ ಗುಣಮಟ್ಟವನ್ನು ಉಳಿಸಿ ಬೆಳೆಸಿಕೊಂಡು ಬಂದಿದೆ. ೧೯೩೩ರಲ್ಲಿ ಗೆಳೆಯರ ಗುಂಪಿನ ಒಂದು ಭಾಗವಾಗಿ ಹೊರಹೊಮ್ಮಿದ ಗ್ರಂಥಮಾಲೆಯು ಮೊದಮೊದಲು ಸಾಹಿತ್ಯ, ಕಲೆ, ಸಂಗೀತ, ಕೃಷಿ, ವ್ಯಾಪಾರ ಕ್ಷೇತ್ರಗಳಿಗೆ ಮಹತ್ವ ಕೊಡುವಂತಹ ಸಾಹಿತ್ಯ ಪತ್ರಿಕೆಗಳನ್ನು ಪ್ರಕಟಪಡಿಸಿರುವುದನ್ನು ಇಲ್ಲಿ ಸ್ಮರಿಸಬಹುದಾಗಿದೆ.

ಗ್ರಂಥಮಾಲೆಯ ಅಂದಿನ ಲೇಖಕರ ಬಳಗವು ಸಂಪೂರ್ಣ ಕರ್ನಾಟಕ ವ್ಯಾಪಿಸುವಷ್ಟು ವ್ಯಾಪ್ತಿಯನ್ನು ಹೊಂದಿರುವುದು ತಿಳಿದುಬರುತ್ತದೆ. ಮನೋಹರ ಗ್ರಂಥಮಾಲೆಯ ಕೇಂದ್ರಸ್ಥಾನ ಧಾರವಾಡವಾಗಿದ್ದರೂ ಬೆಂಗಳೂರು, ಮೈಸೂರು, ದಕ್ಷಿಣ ಕನ್ನಡ, ಬಳ್ಳಾರಿ, ಹಳೆಯ ಹೈದರಾಬಾದ್ ಕರ್ನಾಟಕ ಈ ಪ್ರದೇಶದ ಲೇಖಕರನ್ನು ಆಮಂತ್ರಿಸಿ ಅವರ ಲೇಖನ, ಕೃತಿಗಳನ್ನು ಪ್ರಕಟಿಸಿರುವುದು ಗಮನಾರ್ಹವಾದುದಾಗಿದೆ.

ಮನೋಹರ ಗ್ರಂಥಮಾಲೆಯಿಂದ ಪ್ರಥಮವಾಗಿ ಬೆಟಗೇರಿ ಕೃಷ್ಣಶರ್ಮರ 'ಸಂದರ್ಶನ' ಕಾದಂಬರಿಯು ಪ್ರಕಟಗೊಳ್ಳುತ್ತದೆ. ಹಾಗೂ ತೂರಮರಿಯವರ 'ಬಾಣ' ಕಾದಂಬರಿ, ಕುಲಕರ್ಣಿ ಅವರ 'ನಾಡ ನೆಲೆಗಾರ' ಮುಗಳಿ ಅವರ 'ಬಾಳುರಿ', 'ಕಾರಣಪುರುಷ', 'ಅನ್ನ' ಕಾದಂಬರಿಯನ್ನೊಳಗೊಂಡಂತೆ ಮತ್ತು ಲೇಖನ ಸಾಹಿತ್ಯ, ವಿಮರ್ಶಾ ಸಾಹಿತ್ಯ, ಪತ್ರಿಕಾ ಸಾಹಿತ್ಯ, ಗದ್ಯ ಸಾಹಿತ್ಯ ಇವುಗಳಲ್ಲಿ ಪ್ರಾದೇಶಿಕತೆಯ ಸೊಗಡು ಕೆಡದಂತೆ ರೂಪಿತಗೊಂಡವುಗಳು ಪ್ರಕಟಗೊಳ್ಳುತ್ತಿದ್ದವು.

ಉತ್ತರ ಕರ್ನಾಟಕದ ಗದ್ಯ ಸಾಹಿತ್ಯದ ಮೇಲೆ ರಚನೆಗೊಂಡ ಅ.ನ.ಕೃ. ಅವರ ಕಾದಂಬರಿಯಾದ 'ಸಂಧ್ಯಾರಾಗ'ವು ಮನೋಹರ ಗ್ರಂಥಮಾಲೆಯಿಂದ ೧೯೩೮ರಲ್ಲಿ ಪ್ರಕಟಗೊಂಡಿತು. ಉತ್ತರ ಕರ್ನಾಟಕದವರ ಆಡುಮಾತು, ಮೈಸೂರಿನವರ ಗ್ರಂಥಸ್ಥ ಭಾಷೆಯ ಬಗ್ಗೆ ಒಲವು ತೋರಿರುವುದು ಐತಿಹಾಸಿಕವಾಗಿದೆ. ಗ್ರಂಥಮಾಲೆಯಿಂದ ಪ್ರಕಟಿಸಿದ 'ನವಿಲುಗರಿ' ಕಥಾಸಂಗ್ರಹದಲ್ಲಿ ಆನಂದಕಂದರ 'ಮಾಲ್ಕೀ ಹಕ್ಕು' ಇವುಗಳು ಗ್ರಂಥಸ್ಥ ಗದ್ಯವನ್ನು ಆಯ್ದುಕೊಂಡಿವೆ. ಮೇವುಂಡಿ ಮಲ್ಲಾರಿ ಅವರ 'ಬೆಳಕಿನ ಕತ್ತಲೆ' ಬೇಂದ್ರೆ ಅವರ 'ನಿರಾಭರಣ ಸುಂದರಿ' ಇವು ಉತ್ತರ ಕರ್ನಾಟಕದ ಗದ್ಯ ಶೈಲಿಯ ಉತ್ತಮ ಕೃತಿಗಳಾಗಿವೆ. ಇವುಗಳೆಲ್ಲವೂ ಮನೋಹರ ಗ್ರಂಥಮಾಲೆಯಿಂದ ಪ್ರಥಮ ಹಂತದಲ್ಲಿ ಮುದ್ರಣಗೊಂಡವುಗಳಾಗಿವೆ.

ಮನೋಹರ ಗ್ರಂಥಮಾಲೆಯ ಯೋಜನೆಯನ್ನು ರೂಪಿಸಿಕೊಟ್ಟವರು ಹಾಗೂ ಮಾರ್ಗದರ್ಶನ ಮಾಡಿದರು. ಗೆಳೆಯರ ಗುಂಪಿನ ಹಿರಿಯರಾದ ಶಂ.ಬಾ.ಜೋಷಿ ಅವರು, ಜೊತೆಗೆ ರಂ.ಶ್ರೀ ಮುಗಳಿ ಅವರು ಗ್ರಂಥಮಾಲೆಯ ಜವಾಬ್ದಾರಿಯುತ ಸಲಹೆಗಾರರಾಗಿ ಇದ್ದುಕೊಂಡು ವ್ಯಾಪಾರದ ಲಾಭನಷ್ಟಗಳನ್ನು ಲೆಕ್ಕಿಸದೆ ಗ್ರಂಥಮಾಲೆಯ ವ್ಯಕ್ತಿತ್ವವನ್ನು, ಮನೋಬಲವನ್ನು, ಪ್ರಯೋಗಪ್ರಿಯತೆಯನ್ನು, ಉತ್ಸಾಹಪ್ರಿಯತೆಯನ್ನು ತಂದುಕೊಟ್ಟಿದ್ದಾರೆ. ಅವರೊಬ್ಬ ಉತ್ತಮ ಸಲಹೆಗಾರರಾಗಿದ್ದರಿಂದಲೇ ಅವರ ಕಾಲಾವಧಿಯಲ್ಲಿ ಉತ್ತಮ ಕೃತಿಗಳು ಪ್ರಕಟಗೊಂಡಿವೆ. ಹೀಗಾಗಿ ಈ ಗ್ರಂಥಮಾಲೆಯು ಸಾಮಾಜಿಕವಾಗಿ, ಸಾಹಿತ್ಯಿಕವಾಗಿ ಅವಿನಾಭಾವ ಸಂಬಂಧವನ್ನು ಉಳಿಸಿ, ಬೆಳೆಸಿಕೊಂಡು ಬಂದಿರುವುದನ್ನು ಕಾಣಬಹುದು.

ಮುಗಳಿ ಅವರ ಅಭಿಪ್ರಾಯದಲ್ಲಿ ಸಾಹಿತ್ಯ ಕೃತಿಗಳನ್ನು ಓದುವವರೆಲ್ಲಾ ಮಧ್ಯಮವರ್ಗಕ್ಕೆ ಸೇರಿದವರಾಗಿದ್ದಾರೆ. ಹೊಸ ರೀತಿ ಶಿಕ್ಷಣ ಪಡೆದುಕೊಂಡ ಅವರಿಗೆ ಸಾಹಿತ್ಯದ ಪರಿಚಯ ಹೊಸ ರೀತಿಯಲ್ಲಿ ಆಗಬೇಕಾಗಿದೆ. ಏಕೆಂದರೆ ಮಧ್ಯಮ ವರ್ಗದ ಎಲ್ಲಾ ಪರಿಮಿತಿಗಳು ಅವರನ್ನು ಬಂಧಿಸುತ್ತವೆ. ಅವರಲ್ಲಿರುವ ದೌರ್ಬಲ್ಯಗಳು ಕಾಡುತ್ತವೆ. ಇಷ್ಟೆಲ್ಲಾ ಇದ್ದೂ ನಮ್ಮ ಹೊಸ ಸಾಹಿತ್ಯ ಬದುಕಿರುವುದು ಈ ವರ್ಗದವರ ಮೂಲಕವೇ ಎಂದರೆ ತಪ್ಪಾಗಲಾರದು. ಕಾರಣವೆಂದರೆ ಸುಶಿಕ್ಷಿತರಿಗೆ ಬರವಣಿಗೆ ಎಂದರೆ ಶ್ರದ್ಧೆ, ಭಯ, ಭಕ್ತಿಯಿಂದ ಕೂಡಿರುವಂತದ್ದು. ಅದೇ ವ್ಯವಸಾಯ ಮಾಡುವವರಿಗೆ ಅವರ ಸುತ್ತಮುತ್ತಲಿನ ನಿಸರ್ಗದ ಅನುಭವದಿಂದ ತಿಳಿದುಕೊಂಡರೆ, ಸುಶಿಕ್ಷಿತನಾದವನಿಗೆ ಅವೆಲ್ಲವೂ ಬರವಣಿಗೆಯಿಂದಲೇ ರೂಪುಗೊಳ್ಳಬೇಕು. ನಮ್ಮ ಹೊಸ ಸಾಹಿತ್ಯ ಕೂಡ ಬರವಣಿಗೆಯಿಂದಲೇ ಮೈತಾಳಬೇಕಿದೆ ಎಂದು ತಮ್ಮ ಅಭಿಪ್ರಾಯವನ್ನು ಹಂಚಿಕೊಂಡಿದ್ದಾರೆ.

ಬರವಣಿಗೆ ಮತ್ತು ಓದು, ಒಂದನ್ನು ಬಿಟ್ಟು ಒಂದು ಇರುವುದಿಲ್ಲ. ಇವುಗಳ ಮಧ್ಯೆ ಅವಿನಾಭಾವ ಸಂಬಂಧವಿದೆ. ಸಾಹಿತಿಯಾದವನು ಸಾಹಿತ್ಯ ರಚನೆಯಲ್ಲಿ ತೊಡಗಿಸಿಕೊಂಡು ಗೊತ್ತಿಲ್ಲದ ವಿಷಯವನ್ನು ಬರವಣಿಗೆ ಮಾಡಿದರೆ ಓದುಗನಿಗೆ ಹೇಗೆ ಅರ್ಥವಾಗಬೇಕು? ಎಲ್ಲಾ ಗೊತ್ತಿರುವಂತ ವಿಷಯವನ್ನೇ ಹೇಳಿದರೆ, ಅವನು ಏಕೆ ಓದಬೇಕು? ಈ ಸಮಸ್ಯೆಗಳಿಗೆ ಪರಿಹಾರವನ್ನು

ಕಂಡುಕೊಳ್ಳಲು ಸಾಹಿತ್ಯದಲ್ಲಿ ಹೊಸಹೊಸ ಮಾದರಿಯ ತಂತ್ರಗಳನ್ನು ಅಳವಡಿಸಿಕೊಳ್ಳುವ ಅವಶ್ಯಕತೆಯಿದೆ ಎಂದಿದ್ದಾರೆ. ಮಧ್ಯಮ ವರ್ಗದ ಸುಶಿಕ್ಷಿತರಿಗೆ ಅರ್ಥ ಮುಖ್ಯವಾಗಿರುವುದರಿಂದ ಬೇರೆ ಬೇರೆ ಅರ್ಥಗಳ ಮಜಲುಗಳನ್ನು ಕಟ್ಟಿಕೊಡಬೇಕಾಗಿದೆ. ಈ ರೀತಿಯಾದ ಹೊಸ ತಂತ್ರಗಳನ್ನು ಬಳಸಿಕೊಂಡು ಸಾಹಿತ್ಯ ರಚನೆಯಲ್ಲಿ ತೊಡಗಿಸಿಕೊಳ್ಳಬೇಕೆಂಬುದನ್ನು ಮನೋಹರ ಗ್ರಂಥಮಾಲೆಯ ಸಲಹೆಗಾರರಾಗಿದ್ದ ಸಂದರ್ಭದಲ್ಲಿ ಮುಗಳಿ ಅವರು ಹೇಳಿರುವ ಮಾತಾಗಿದೆ.

ಮುಗಳಿ ಅವರು ಅಂದಿನ ಬದಲಾದ ಪರಿಸ್ಥಿತಿಯನ್ನು ಅರಿತು ಓದುಗರ ಅಪೇಕ್ಷೆಗಳನ್ನು ಪೂರೈಸುವುದು ಬರವಣಿಗೆಯ ಕರ್ತವ್ಯವಾಗಿದೆ ಎಂದು ಭಾವಿಸಿಕೊಂಡಿದ್ದಾರೆ. ಗ್ರಂಥಮಾಲೆಯಿಂದ ಪ್ರಕಟಗೊಳ್ಳುವ ದಿನಪತ್ರಿಕೆ, ವಾರಪತ್ರಿಕೆ, ಮಾಸಪತ್ರಿಕೆಗಳಲ್ಲಿ ಗುಣಮಟ್ಟವನ್ನು ಕಾಯ್ದುಕೊಳ್ಳುವ ಅಗತ್ಯತೆ ಇದೆ. ಏಕೆಂದರೆ ಮನೋಹರ ಗ್ರಂಥಮಾಲೆಯು ಸಾವಿರಾರು ಸಂಖ್ಯೆಯ ಓದುಗರನ್ನು ತನ್ನೆಡೆಗೆ ಸೆಳೆದುಕೊಂಡು ಸಾಹಿತ್ಯದ ಅಭಿರುಚಿಯನ್ನು ಉಣಬಡಿಸಿದ ಗ್ರಂಥಮಾಲೆಯಾಗಿದೆ. ಇದರ ಗುಣಮಟ್ಟವನ್ನು ಹೀಗೆಯೇ ಕಾಯ್ದುಕೊಂಡು ಮುನ್ನಡೆಯುವುದು ಅವರ ಅಭಿಲಾಷೆಯಾಗಿತ್ತು.

೨.೬. ರಂ.ಶ್ರೀ.ಮುಗಳಿ ಮತ್ತು ಮರಾಠಿ ಸಾಹಿತ್ಯ ಸಂಸ್ಕೃತಿ

ರಂ.ಶ್ರೀ.ಮುಗಳಿ ಅವರ ಶಿಕ್ಷಕ ವೃತ್ತಿಯು ಹುಬ್ಬಳ್ಳಿಯ ನ್ಯೂ ಇಂಗ್ಲೀಷ್ ಶಾಲೆಯಲ್ಲಿ ಪ್ರಾರಂಭಗೊಂಡಿತು. ಆಮೇಲೆ ೧೯೩೩ರಲ್ಲಿ ಮಹಾರಾಷ್ಟ್ರದ ಸಾಂಗಲಿಯ ವಿಶ್ರಾಮ ಭಾಗದ ವಿಲ್ಲಿಂಗ್ಡನ್ ಕಾಲೇಜಿಗೆ ಅಧ್ಯಾಪಕರಾಗಿ ಸೇರಿಕೊಂಡರು. ೧೯೬೬ರಲ್ಲಿ ಶಾಶ್ವತವಾದ ವೃತ್ತಿಜೀವನವನ್ನು ಮಹಾರಾಷ್ಟ್ರದ ಸಾಂಗಲಿಯಲ್ಲಿಯೇ ಕಳೆಯಬೇಕಾಯಿತು. ಮುಗಳಿ ಅವರಿಗೆ ಆಪ್ತಮಿತ್ರರಾಗಿ ಕವಿಗಳು, ವಿದ್ವಾಂಸರೂ ಆದ ವಿ.ಕೃ.ಗೋಕಾಕರು ಸಾಂಗಲಿಯ ವಿಲ್ಲಿಂಗ್ಡನ್ ಕಾಲೇಜಿಗೆ ಪ್ರಾಧ್ಯಾಪಕರಾಗಿ ಸೇರಿಕೊಂಡರು. ಈ ಇಬ್ಬರೂ ಸ್ನೇಹಿತರು 'ವರುಣ ಕುಂಜ' ಸಾಹಿತ್ಯ ವೇದಿಕೆಯ ಮೂಲಕ ಮುಂದಿನ ಯುವಪೀಳಿಗೆಯಲ್ಲಿ ಸಾಹಿತ್ಯಾಭಿರುಚಿಯನ್ನು ಬೆಳೆಸಿ ನಾಡಿಗರ್ಪಿಸಿದ ಮಹನೀಯರಾಗಿದ್ದಾರೆ. ಅಷ್ಟೇ ಅಲ್ಲದೆ ಗಡಿನಾಡಿನ ಸಮಸ್ಯೆ, ಆಡಳಿತ ಭಾಷಾ ಸಮಸ್ಯೆ, ಇಂಗ್ಲಿಷ್ ಭಾಷಾ ಪ್ರಭಾವ, ಇವುಗಳ ಮಧ್ಯ ನಿಂತುಕೊಂಡು ಮರಾಠಿ-ಕನ್ನಡ ಸಾಮರಸ್ಯದ ರಾಯಭಾರಿಯಾಗಿ ಮುಗಳಿ ಅವರು ಮಾಡಿದ ಕೆಲಸ ಮಹತ್ವದ್ದಾಗಿದೆ. ಸಾಂಗಲಿಯ ಮರಾಠಿ ಭಾಷಿಕ ವಾತಾವರಣ ಅವರನ್ನು ಅಧೀರರನ್ನಾಗಿಸಲಿಲ್ಲ. ಮತ್ತು ಅನೇಕ ಕನ್ನಡಿಗರಂತೆ ಅವರು ಒಬ್ಬರಾಗಿ ಇರದೆ ಮರಾಠಿಗರೊಂದಿಗೆ ಶುದ್ಧ ಮರಾಠಿಯಲ್ಲಿಯೇ ಮಾತನಾಡುವಷ್ಟು ಪರಿಣಿತಿಯನ್ನು ಗಳಿಸಿಕೊಂಡರು. ಪುಣೆಯ ಅಂತರಭಾರತಿಯೊಂದರಲ್ಲಿ ಕನ್ನಡ ಸಾಹಿತ್ಯದ ಬಗ್ಗೆ ಮರಾಠಿ ಭಾಷೆಯಲ್ಲಿಯೇ ನಿರಾಯಾಸವಾಗಿ ಉಪನ್ಯಾಸ ಮಾಡಿದರು. ಅವರ ಮರಾಠಿಯ ವಾಕ್‌ಚಾತುರ್ಯವನ್ನು ಕಂಡು ಹಲವರು ಇವರು ಮೂಲತಃ ಮರಾಠಿಗರೆಂದೇ ಭಾವಿಸಿ ಅವರ ಮುಂದೆ ಕನ್ನಡಿಗರನ್ನು ದೂಷಿಸಿದ್ದೂ ಇದೆ.

ಗಡಿನಾಡ ಸಮಸ್ಯೆಗಳನ್ನು ಅರಿತುಕೊಂಡಿದ್ದ ಮುಗಳಿ ಅವರು ಗಡಿನಾಡಿನ ಕನ್ನಡ ಶಾಲೆಗಳು ಉತ್ತಮಗೊಳ್ಳಬೇಕಾದ ಮತ್ತು ಹೆಚ್ಚಿಸಬೇಕಾದ ಅನಿವಾರ್ಯತೆಯನ್ನು ಅರಿತವರಾಗಿದ್ದರು. ಆ ಪ್ರಾಂತ್ಯದಲ್ಲಿ ನಡೆಯುತ್ತಿದ್ದ ಎಲ್ಲಾ ಬಗೆಯ ಸಾಹಿತ್ಯದ ಚಟುವಟಿಕೆಗಳಿಗೆ ಅವರ ಬೆಂಬಲವಿರುತ್ತಿತ್ತು. ಅಥಣಿಯ ಗ್ರಂಥಮಾಲೆ, ಸೆಡಬಾಳದ ಮಿರ್ಜಿ ಅಣ್ಣಾರಾಯರ ಶಾಂತಿಸೇವಾ ಸದನ, ಶಮನೇವಾಡಿಯ ಸ್ನೇಹ ಪ್ರಕಾಶನ, ಸಾಂಗಲಿಯ ಕಾವ್ಯ ಪ್ರಕಾಶನ ಸಮಿತಿ, ಮುಂತಾದವು ಮುಗಳಿ ಅವರ ಸಲಹೆಯಿಂದ ಬೆಳವಣಿಗೆ ಹೊಂದಿದಂತಹವುಗಳಾಗಿವೆ. ಇವುಗಳೆಲ್ಲದರಿಂದಾಗಿ ಸಾಹಿತ್ಯ ಚಟುವಟಿಕೆಗಳಲ್ಲಿ ಮತ್ತು ಎರಡು ರಾಜ್ಯಗಳ ಗಡಿಯಂಚಿನ ಭಾಗದಲ್ಲಿದ್ದುಕೊಂಡು ಮಕ್ಕಳಿಗೆ ಬೋಧನೆ ಮಾಡುತ್ತಾ ಸ್ಥಳೀಯರಿಗೆ ಆಪ್ತರಾಗಿ ಕನ್ನಡ ಮರಾಠಿಯೊಂದಿಗೆ ಸಾಮರಸ್ಯದ ಬದುಕನ್ನು ಕಳೆದು 'ಗಡಿನಾಡಿನ ಕನ್ನಡ ದೀಪ' ಎಂಬ ಹೆಗ್ಗಳಿಕೆಗೆ ಅವರು ಪಾತ್ರರಾಗಿದ್ದಾರೆ.

ಮುಗಳಿ ಅವರು ತಮ್ಮ ಮಟ್ಟಿಗೆ 'ಕನ್ನಡ ಹೆತ್ತತಾಯಿ, ಮರಾಠಿ ಹೊತ್ತತಾಯಿ' ಎಂದು ಹೇಳಿಕೊಂಡು ಅದೇ ರೀತಿಯಾಗಿ ನಡೆದುಕೊಂಡು ಇಬ್ಬರು ತಾಯಂದಿರ ಋಣ ತೀರಿಸಿದರು. ಹಾಗೂ ಅವರು ಸಂಪಾದಿಸಿದ ಪ್ರೀತಿ ಗೌರವಗಳ ಬಗ್ಗೆ ಮತ್ತು ಅಲ್ಲಿನ ಬಿಕ್ಕಟ್ಟುಗಳ ಬಗ್ಗೆ ತಮ್ಮ ಆತ್ಮಕಥನವಾದ ಜೀವನ ರಸಿಕದಲ್ಲಿ ಹೇಳಿಕೊಂಡಿದ್ದಾರೆ. ಮುಗಳಿ ಅವರು ಮೂವತ್ತಮೂರು ವರ್ಷಗಳ ಕಾಲ ಸಾಂಗಲಿಯಲ್ಲಿ ವಾಸವಾಗಿದ್ದರು. ಅವರು ತಮ್ಮ ಹುಟ್ಟೂರನ್ನು ಮರೆಯದೆ ನಗರ ಜೀವನದ ನೋವು ನಲಿವುಗಳನ್ನು ಪ್ರತ್ಯಕ್ಷವಾಗಿ ಕಂಡುಂಡು ಅದನ್ನು ತಮ್ಮ ಸಾಹಿತ್ಯ ಕೃತಿಗಳಲ್ಲಿ ಕಂಡರಿಸಿ ಕನ್ನಡ ಸಹೃದಯ ಓದುಗರಿಗೆ ಪರಿಚಯಿಸಿದ್ದಾರೆ. ಹಾಗೂ ಕನ್ನಡ ಮತ್ತು ಸೌಹಾರ್ದತೆಯ ಭಾಷಾ ಬಾಂಧವ್ಯದ ಕೊಂಡಿಯನ್ನು ಬೆಸೆಯಲು ಮರಾಠಿ ಮತ್ತು ಕನ್ನಡ ಗಡಿಭಾಗದಲ್ಲಿ ಹಾಗೂ ಕರ್ನಾಟಕದ ಉದ್ದಗಲಕ್ಕೂ ಅನೇಕ ವಿದ್ವತ್‌ಪೂರ್ಣ ಭಾಷಣಗಳನ್ನು ಮಂಡಿಸಿದ್ದಾರೆ. ಮುಂಬಯಿ ಕನ್ನಡಿಗರ ಚಟುವಟಿಕೆಗಳಲ್ಲಿ ಇವರದು ಪ್ರಧಾನ ಪಾತ್ರವಾಗಿದೆ. ಮುಂಬಯಿ ಬದುಕಿನ ಹಲವಾರು ಮುಖಗಳನ್ನು ವಿವಿಧ ರೀತಿಯಲ್ಲಿ ಕನ್ನಡಿಗರಿಗೆ ಮನದಟ್ಟು ಮಾಡಿಕೊಡುವಲ್ಲಿ ಮುಗಳಿ ಅವರ ಪ್ರಯತ್ನ ಅಮೋಘವಾಗಿದೆ. ಕನ್ನಡದ ಉಳಿವಿಗಾಗಿ ದುಡಿದ ಅನೇಕ ಹಿರಿಯರಲ್ಲಿ ಇವರು ಒಬ್ಬರಾಗಿದ್ದಾರೆ.

ಆದರೆ ಇಂದೂ ಸಹ ಕರ್ನಾಟಕ-ಮಹಾರಾಷ್ಟ್ರ ಗಡಿನಾಡಿನ ಸಮಸ್ಯೆಗಳು ಉಲ್ಬಣಿಸುತ್ತಿರುವುದು ಗಮನಾರ್ಹವಾಗಿದೆ. ಗಡಿಭಾಗದ ಕನ್ನಡ ಶಾಲೆಗಳ ಸ್ಥಿತಿ ಶೋಚನೀಯವಾಗಿಯೇ ಉಳಿದಿದೆ. ಕನ್ನಡ ಭಾಷೆಯ ಮೇಲೆ ಗಡಿನಾಡಿನ ಅನ್ಯಭಾಷೆಗಳ ಪ್ರಭಾವ ಅದರಲ್ಲೂ ಜಾಗತೀಕರಣಕ್ಕೆ ಒಳಗಾದ ಇಂಗ್ಲಿಷ್ ಭಾಷೆಯಿಂದಾಗಿ ಕನ್ನಡವು ಮಂಕು ಕವಿದಂತಹ ಪರಿಸ್ಥಿತಿಯನ್ನು ಎದುರಿಸುತ್ತಿರುವುದು ಕಂಡುಬರುತ್ತದೆ. ಹಾಗೂ ಕನ್ನಡ ಭಾಷಿಕರು ಹೆಚ್ಚಿನ ಸಂಖ್ಯೆಯಲ್ಲಿರುವ ಭಾಗಗಳಲ್ಲಿ ಕನ್ನಡ ಶಾಲೆಗಳನ್ನು ನಿರ್ಲಕ್ಷಿಸಿ ಮರಾಠಿ ಶಾಲೆಗಳಿಗೆ ಹೆಚ್ಚಿನ ಪ್ರೋತ್ಸಾಹ ನೀಡಲಾಗುತ್ತಿದೆ ಎಂಬ ಕೂಗು ಕೇಳಿಬರುತ್ತಿದೆ. ಇದರಿಂದ ಕನ್ನಡ ಮಾಧ್ಯಮದ ಶಾಲೆಯ ಎದುರಿಗೆ ಮರಾಠಿ ಮಾಧ್ಯಮದ ಹೊಸ

ಶಾಲೆಗಳನ್ನು ಪ್ರಾರಂಭಿಸುತ್ತಿರುವುದರಿಂದ ಕನ್ನಡ ಕಲಿಕೆಯ ಬಗೆಗಿನ ಆಸಕ್ತಿ ಕಡಿಮೆಯಾಗುತ್ತಿದೆ. ಎಂಬುದು ಇಂದು ಸ್ಥಳೀಯರ ವಾದವಾಗಿದೆ.

ನಮ್ಮ ಒಳನಾಡಿನ ಯೋಗಕ್ಷೇಮವು ಗಡಿನಾಡನ್ನೆ ಅವಲಂಬಿಸಿರುವುದರಿಂದ ಇಂಥ ಪ್ರದೇಶಗಳಲ್ಲಿ ಶಿಕ್ಷಣ, ಸಾಹಿತ್ಯ, ಕೈಗಾರಿಕೆ, ಕೃಷಿಮೂಲ, ಸೌಕರ್ಯಗಳಿಗೆ ಸರಕಾರ ಹೆಚ್ಚು ಪ್ರಾಶಸ್ತ್ಯ ಕೊಡಬೇಕಾದ ಅಗತ್ಯತೆ ಇದೆ. ಮಹಾರಾಷ್ಟ್ರ ಸರಕಾರವು ಗಡಿಭಾಗದಲ್ಲಿ ಓದಿದ ಮರಾಠಿ ಮಾತೃಭಾಷೆಯ ವಿದ್ಯಾರ್ಥಿಗಳಿಗೆ ವೃತ್ತಿ ಶಿಕ್ಷಣದಲ್ಲಿ ಶೇಕಡಾ ಎರಡರಷ್ಟು ಮೀಸಲಾತಿಯನ್ನು ನಿಗದಿಪಡಿಸಿದೆ. ಇಂಥ ಪ್ರೋತ್ಸಾಹದಾಯಕ ಯೋಜನೆಗಳನ್ನು ಕರ್ನಾಟಕ ಸರಕಾರ ಗಡಿನಾಡ ಕನ್ನಡಿಗರಿಗೂ ನೀಡಬೇಕಾದ ಅಗತ್ಯತೆ ಇದೆ.

೨.೭. ರಂ.ಶ್ರೀ.ಮುಗಳಿ ಅವರ ದೃಷ್ಟಿಯಲ್ಲಿ ಶಿಕ್ಷಣ

ಮುಗಳಿ ಅವರ ಬಹುತೇಕ ಪ್ರಬಂಧಗಳು ವಿದ್ಯಾರ್ಥಿ ಸಮುದಾಯವನ್ನೇ ಕೇಂದ್ರವಾಗಿಟ್ಟುಕೊಂಡು ರಚಿತವಾಗಿರುವವು. ಅವರ 'ನವೀನ ಪ್ರಜ್ಞೆಯ ಸೂತ್ರಗಳು' ಪ್ರಬಂಧವು ಪ್ರಮುಖವಾಗಿ ಶಿಕ್ಷಣವನ್ನು ಕುರಿತು ರಚಿತವಾಗಿರುವುದು. ಮುಗಳಿ ಅವರು ಯೋಚಿಸುವ ಶಿಕ್ಷಣದ ಕ್ರಮಗಳು ಎಂದರೆ ಶಿಕ್ಷಕ ಮತ್ತು ವಿದ್ಯಾರ್ಥಿಗಳ ನಡುವಿನ ಸಂಬಂಧ ಅನ್ಯೋನ್ಯತೆಯಿಂದ ಕೂಡಿರಬೇಕು. ಶಿಕ್ಷಣ ಕಲಿಕೆಯಿಂದಾಗಿ ಪ್ರತಿಯೊಂದು ಮಗುವು ತನ್ನ ವಿಕಾಸವನ್ನು ತಾನೇ ಕಂಡುಕೊಳ್ಳಲು ಮುಕ್ತವಾದ ವಾತಾವರಣ, ಅವಕಾಶಗಳನ್ನು ಸೃಷ್ಟಿಸಬೇಕು. ಪ್ರಚಲಿತ ಪದ್ಧತಿಯಂತೆ ಬಾಲ್ಯದಿಂದ ಬೆನ್ನು ಬಾಗುವ ಹಾಗೆ ಪುಸ್ತಕಗಳ ಭಾರವನ್ನು ಅವುಗಳಲ್ಲಿರುವ ಯಾಂತ್ರಿಕ ತಿಳಿವಳಿಕೆಯ ಹೊರೆಯನ್ನು ಆ ಮಕ್ಕಳ ತಲೆಯ ಮೇಲೆ ಹೊರಿಸಿ ಆತ್ಮವಿಕಾಸ ಕುಗ್ಗಿಸುವುದು ಸರಿಯಲ್ಲ. ಶಿಕ್ಷಣವೆಂಬುದು ಮೆದುಳಿನಲ್ಲಿರುವ ಮಾಹಿತಿಯ ರಾಶಿಯಲ್ಲ. ವಿವೇಕಾನಂದರು ಮೇಲಿಂದ ಮೇಲೆ ಹೇಳಿದಂತೆ ಜೀವನಕ್ಕೆ ಹತ್ತಿರವಾದ ಶೀಲಸಾಧಕವಾದ ಅಂದರೆ ಮಾನವ ನಿರ್ಮಾಪಕವಾದ ಶಿಕ್ಷಣ ಪಥ್ಯವು ಬಹುಮುಖ್ಯವಾದದ್ದು. ಓದಿನ ಜತೆಗೆ ಉತ್ತಮ ಜೀವನಕ್ಕೆ ನೆರವಾಗುವ ವಿಚಾರಗಳನ್ನು ಪಡೆಯುವುದು ಅವಶ್ಯ, ಚಾರಿತ್ರಿಕ ಘಟನೆಗಳನ್ನು ಅರಿಯಬೇಕು. ಬುದ್ಧಿ ಅರಳಬೇಕು. ಸ್ವಂತ ಕಾಲ ಮೇಲೆ ನಿಲ್ಲುವ ಸಾಮರ್ಥ್ಯ ಬರಬೇಕು. ಇದಾದರೆ ಮಾತ್ರ ನಿಜವಾದ ಶಿಕ್ಷಣ ಸಾರ್ಥಕವಾಗುತ್ತದೆ ಎಂದಿದ್ದಾರೆ. ಹಾಗೆಯೇ ಶಿಕ್ಷಣವೆಂದರೆ ಪರಕೀಯ ಭಾಷೆಯಲ್ಲಿರುವ ವಿಚಾರಗಳನ್ನು ಮಾತ್ರ ತಲೆಯಲ್ಲಿ ತುಂಬಿಕೊಂಡು ಅವನ್ನು ಹುಟ್ಟಿಹಾಕಿ ಪರೀಕ್ಷೆಯಲ್ಲಿ ಒಪ್ಪಿಸಿಬಿಟ್ಟು ಉತ್ತಮ ಪದವಿಯನ್ನು ಪಡೆದು ಬಿಟ್ಟರೆ ಅಥವಾ ಕ್ರಮಗಳಿಂದ ತೇರ್ಗಡೆ ಹೊಂದಿದರೆ ಸಾಕು ತಾವು ಶಿಕ್ಷಿತರಾದೆವೆಂದು ಅನೇಕರು ಭಾವಿಸುತ್ತಾರೆ. ಇಂಥಹವರಿಗೆ ಆತ್ಮವಿಕಾಸವಾಗಲೀ, ಚಾರಿತ್ರ್ಯ ಸಂವರ್ಧನೆಯಾಗಲೀ ಮಹತ್ವ ಎಂದು ಅನ್ನಿಸುವುದಿಲ್ಲ ಎಂಬ ಅಭಿಪ್ರಾಯಕ್ಕೆ ಬರುತ್ತಾರೆ.

ಗುರು ಶಿಷ್ಯ ಸಂಬಂಧ ಶಿಕ್ಷಕ ವಿದ್ಯಾರ್ಥಿಗಳ ಸಂಬಂಧವು ಹೇಗಿರಬೇಕು ಎಂಬುದೇ ಇಂದಿನ ಶೈಕ್ಷಣಿಕ ಸಮಸ್ಯೆಗಳಲ್ಲಿ ಒಂದಾಗಿದೆ. ವಿದ್ಯಾರ್ಥಿಗಳ ಸಂಖ್ಯೆಯಲ್ಲಿನ ವಿಪರೀತ ಹೆಚ್ಚಳದಿಂದಾಗಿ

ಶಿಕ್ಷಕರೊಡನೆ ಅವರ ಸಂಪರ್ಕವು ಅಸಾಧ್ಯವಾಗಿಬಿಟ್ಟಿದೆ. ಈ ಸಂಪರ್ಕದ ಅಭಾವದಿಂದಾಗಿ ಅವರ ಮೇಲೆ ಶಿಕ್ಷಕರ ವ್ಯಕ್ತಿತ್ವದ, ಚಾರಿತ್ರ್ಯದ ಪ್ರಭಾವವೇನೂ ಆಗುವುದಿಲ್ಲ. ಶಿಕ್ಷಕ-ವಿದ್ಯಾರ್ಥಿ ಸಂಬಂಧವು ಸ್ವತಂತ್ರ್ಯ ಅನ್ಯೋನ್ಯತೆಯಿಂದ ಕೂಡಿರಬೇಕು. ಶಿಕ್ಷಣದ ಪವಿತ್ರ ಕಾರ್ಯಕ್ಕೆ ತಮ್ಮನ್ನು ಅರ್ಪಣೆ ಮಾಡಿಕೊಳ್ಳಬೇಕೆಂಬ ಅರಿವು ಇಬ್ಬರಲ್ಲಿರಬೇಕು. ಇದರಿಂದ ಉತ್ತಮ ಬಾಂಧವ್ಯ ಬೆಳೆಯಲು ಸಹಾಯವಾಗುತ್ತದೆ.

ಶಿಕ್ಷಕನಾದವನು ತಾನು ಎಲ್ಲಾ ವಿಷಯಗಳನ್ನೂ ಅರಿತವನೆಂದು ವಿದ್ಯಾರ್ಥಿಗಳನ್ನು ಕಡೆಗಣಿಸಿದರೆ ವಿದ್ಯಾರ್ಥಿಗಳು ಶಿಕ್ಷಕರ ಮೇಲೆ ಅಂಧಶ್ರದ್ಧೆ ತೋರಿಸುತ್ತಾರೆ. ಆದ್ದರಿಂದ ವಿದ್ಯಾರ್ಥಿಗಳ ಭಾವನೆಗಳನ್ನು ಅರಿತು ಒಂದು ಶಿಸ್ತಿನ ಚೌಕಟ್ಟಿನೊಳಗಡೆ ಬೋಧಿಸಬೇಕು. 'ಶಿಷ್ಯವೆಂದರೆ ಶಾಸನಕ್ಕೆ ಒಳಪಟ್ಟವನು ಅಂದರೆ, ತನ್ನ ಕಲ್ಯಾಣಕ್ಕಾಗಿ ಗುರುವಿನ ಮತ್ತು ಆತ್ಮಸಾಕ್ಷಿಯ ಶಾಸನಕ್ಕೆ ಒಳಪಟ್ಟವನು' ಎಂದು ತಿಳಿಸುವರು. ಶಿಕ್ಷಕನಾದವನು ಸೋಮಾರಿತನದಿಂದ ಹೊರಬಂದು ದಿನನಿತ್ಯವೂ ಪಾಠಬೋಧನೆಯಲ್ಲಿ ತೊಡಗಿಕೊಂಡು ಅತ್ಯುತ್ತಮ ಶಿಕ್ಷಕನಾಗಬೇಕು. ತಮ್ಮ ಕ್ಷೇತ್ರದ ಬಗ್ಗೆ ಅಪಾರವಾದ ಜ್ಞಾನ, ಕಾಳಜಿ ಹೊಂದಿರಬೇಕೆಂದಿದ್ದಾರೆ.

ವಿದ್ಯಾರ್ಥಿಗಳನ್ನು ಕೇಂದ್ರೀಕರಿಸಿ ತಿಳಿಸುವ ಮುಗಳಿ ಅವರು ನೀವು ತೊಡಗಿಕೊಂಡ ಕೆಲಸದಲ್ಲಿ ಸೋಲುಂಟಾದರೆ ನಿರಾಶೆ, ಜಿಗುಪ್ಸೆಗಳು ಬಂದು ಸುಳಿದಾಡುತ್ತವೆ. ಅವುಗಳಿಗೆ ಹೆದರದೆ ಅಂಜದೆ ನೀವು ಮಾಡುವ ಕೆಲಸದಲ್ಲಿ ಶ್ರದ್ಧೆಯಿಂದ ತೊಡಗಿಸಿಕೊಂಡು ಮರಳಿ ಯತ್ನವ ಮಾಡಬೇಕೆಂದಿದ್ದಾರೆ. ಯಾವುದೇ ಸಮಯದಲ್ಲಿಯೂ ಶಾಂತಿ, ಸಂಯಮದಿಂದ ವರ್ತಿಸಬೇಕು ಎಂದಿದ್ದಾರೆ. ಸಂಯಮ ಕುರಿತು ಈ ಭಾಗದಲ್ಲಿ ಸಮಾಜ ಸುಧಾರಕರ ನೀತಿಪರವಾದ ಬೋಧನೆಯುಳ್ಳ ಮಾತುಗಳನ್ನು ತಿಳಿಸುತ್ತಾರೆ. 'ಕನ್ನಡ ನಾಡಿನಲ್ಲಿ ಪರೋಪಕಾರ' ಪ್ರಬಂಧದಲ್ಲಿ ವಿದ್ಯಾರ್ಥಿಗಳನ್ನು ಕುರಿತು ತಿಳಿಸುವಂತೆ ಪ್ರತಿಯೊಬ್ಬ ವಿದ್ಯಾರ್ಥಿ ಯುವ ಸಮೂಹವು ಪರೋಪಕಾರ ಬುದ್ಧಿಯನ್ನು ಬೆಳೆಸಿಕೊಳ್ಳಬೇಕೆಂದು ರಾಷ್ಟ್ರಕೂಟ ದೊರೆ ನೃಪತುಂಗ, ಶಾತವಾಹನ, ಕದಂಬ, ಗಂಗ, ಹೊಯ್ಸಳ, ಚಾಲುಕ್ಯ, ರಾಷ್ಟ್ರಕೂಟ, ವಿಜಯನಗರ ಇತ್ಯಾದಿ ಅರಸು ಮನೆತನಗಳು ಪರೋಪಕಾರವನ್ನು ಮಾಡಿ ಬಡವರಿಗೆ ಸಹಾಯ ಮಾಡುತ್ತಿದ್ದವೆಂದು ಬೋಧಿಸಿದಂತಿದೆ.

ಶಿಕ್ಷಣ ಕುರಿತು 'ಪಾಥೇಯ' ಪ್ರಬಂಧದಲ್ಲಿ ತಿಳಿಸುವಂತೆ ವಿದ್ಯಾರ್ಥಿ ಯುವಸಮೂಹವನ್ನು ಕೇಂದ್ರೀಕರಿಸಿ ನಿಮ್ಮ ಬಾಳಿನ ಗುರಿಯನ್ನು ತಮಗೆ ಸಾಧ್ಯವಿದ್ದ ಪದವಿಯನ್ನು ಪ್ರಾವೀಣ್ಯವನ್ನು ಪಡೆದಮೇಲೆ ತಮ್ಮ ಉಪಜೀವನಕ್ಕಾಗಿ ಏನು ಮಾಡಬೇಕೆಂದು ಯೋಚಿಸದೆ ತಮ್ಮ ದಾರಿಯನ್ನು ತಾವೇ ಕಂಡುಕೊಳ್ಳಬೇಕು. ಅದರಂತೆ ತಾವೆ ನಡೆಯಲು ಹವಣಿಸಬೇಕು. ಸರಿಯಾದ ಮಾರ್ಗವನ್ನು ಅರಿತು ಪರಾಮರ್ಶಿಸಿಕೊಂಡು ಮುಂದೆ ಸಾಗಬೇಕೆಂದು ನಿಲುವನ್ನು ವ್ಯಕ್ತಪಡಿಸುತ್ತಾರೆ. ವಿದ್ಯಾರ್ಥಿಯು ತನ್ನ ಶಕ್ತಿ ಅಶಕ್ತಿಗಳನ್ನು ಅರಿತುಕೊಂಡು ತನ್ನ ಪರಿಸರಕ್ಕೆ ಹೊಂದಿಕೊಂಡು ತನ್ನ ಶಕ್ತಿಗಳನ್ನು ಬೆಳೆಸಿಕೊಳ್ಳಬೇಕು. ವೇಳೆಯನ್ನು ಹಾಳುಮಾಡದೆ ಸರಿಯಾಗಿ ಬಳಸಿಕೊಳ್ಳಬೇಕು. ಮನುಷ್ಯರೆಲ್ಲರೂ

ಅಂದರೆ ಹೆಣ್ಣಿರಲಿ, ಗಂಡಿರಲಿ ಒಂದು ವಿಶಿಷ್ಟ ಸ್ವಭಾವ ಯೋಗ್ಯತೆ ಒಲವು ಪಡೆದುಕೊಂಡು ಬಂದಿರುತ್ತಾರೆ. ಅದನ್ನು ಎಷ್ಟು ಬೇಗ ಅರಿತುಕೊಂಡು ತಮ್ಮದೇ ಆದ ವ್ಯಕ್ತಿತ್ವವನ್ನು ರೂಢಿಸಿಕೊಳ್ಳಲು ಹವಣಿಸುತ್ತಾರೋ ಅಷ್ಟು ಬೇಗ ನಿಜವಾದ ವ್ಯಕ್ತಿಗಳಾಗುತ್ತಾರೆ. ವ್ಯಕ್ತಿ ಸಂಪನ್ನರಾಗುತ್ತಾರೆ.

ಮುಗಳಿ ಅವರ ಶಿಕ್ಷಣದ ವಿಚಾರ ಕುರಿತಂತೆ 'ಮಾಧವ ಮಹಿಷಿ' ಅವರು ಈ ರೀತಿ ಅಭಿಪ್ರಾಯಪಡುತ್ತಾರೆ. 'ಮುಗಳಿ ಅವರಂತಹ ಶಿಕ್ಷಣ ವಿಚಾರಗಳಿಗೆ ಈ ಉಚ್ಚ ಗುರಿಯೇ ತಳಹದಿ. ವಾಸ್ತವನಿಷ್ಠ, ಧ್ಯೇಯಪ್ರಮಾಣ ಮತ್ತು ವಿಧೇಯಕವಾದ ಸಾಮಾನ್ಯ ದೃಷ್ಟಿಯಿಂದಲೇ ಅವರು ಈ ಸಮಸ್ಯೆಗಳತ್ತ ನೋಡುತ್ತಾರೆ. ವಾಸ್ತವನಿಷ್ಠವಾಗಿ ಕಠೋರವಾದ ಸತ್ಯವನ್ನು ಕಂಡುಹಿಡಿಯಬೇಕು. ಧ್ಯೇಯಪ್ರಮಾಣವಾಗಿ ಅಂತಿಮಸಾಧ್ಯವನ್ನು ಅರಿತುಕೊಳ್ಳಬೇಕು. ವಿಧಾಯಕವಾಗಿ ಪ್ರಗತಿಯ ಮಾರ್ಗವನ್ನು ಸೂಚಿಸಬೇಕು ಎಂಬುದು ಅವರ ದೃಷ್ಟಿ ಜೀವನದಲ್ಲಿ ಸಮನ್ವಯ ಉಪಕಾರವಾದ ಅವರಿಗೆ ಈ ಒಲವು ಪ್ರತ್ಯಕ್ಷ ಕೃತಿಯಲ್ಲಿ ಕಷ್ಟಸಾಧ್ಯವೆನಿಸಿದರೂ ಅಸಾಧ್ಯವೆಂದು ಮಾತ್ರ ತೋರುವುದಿಲ್ಲ. ಇಂದು ಕಷ್ಟಸಾಧ್ಯವೆಂದು ತೋರುತ್ತಿರುವುದನ್ನು ಸಾಧಿಸಿದಾಗಲೇ ನಮ್ಮ ಶಿಕ್ಷಣಕ್ಕೆ ಅದರ ನಿಜವಾದ ಅರ್ಥ ಅನ್ವರ್ಥಕವಾಗಬಲ್ಲದು. ಎಂಬ ಅಭಿಪ್ರಾಯ ಅವರದಾಗಿದೆ.

೨.೮. ರಂ.ಶ್ರೀ.ಮುಗಳಿ ಅವರ ಸಾಹಿತ್ಯದ ಇತಿಮಿತಿಗಳು

ಕನ್ನಡ ಸಾಹಿತ್ಯ ಚಿಂತನಾ ಸ್ವರೂಪದಲ್ಲಿ ಹಲವು ಸಾಹಿತ್ಯಕ ಪಂಥಗಳನ್ನು ಗುರುತಿಸುತ್ತೇವೆ. ಇದರಲ್ಲಿ ಮುಖ್ಯವಾಗಿ ನವೋದಯ ಕಾಲಘಟ್ಟವು ಮುಂಚೂಣಿಗೆ ಬರುತ್ತದೆ. ಏಕೆಂದರೆ ಹಳಗನ್ನಡ ಪರಂಪರೆ ಸಾಂಪ್ರದಾಯಿಕತೆ, ಪಾಶ್ಚಾತ್ಯ ಪ್ರಭಾವದ ಪ್ರೇರಕವಾದ ಬರಹಗಳು ನವೋದಯ ಕಾಲಘಟ್ಟದಲ್ಲಿ ಒಳಗೊಂಡಿವೆ. ಹಾಗಾಗಿ ಈ ಸಂದರ್ಭದಲ್ಲಿ ಬಿ.ಎಂ.ಶ್ರೀ., ಡಿ.ವಿ.ಜಿ., ಬೇಂದ್ರೆ, ಮಾಸ್ತಿ, ಕುವೆಂಪು, ಕಾರಂತ, ಗೋಕಾಕರಂತಹ ಇನ್ನು ಅನೇಕ ಬರಹಗಾರರು ಮುಖ್ಯರಾಗುತ್ತಾರೆ. ಇಲ್ಲಿ ಹಳಯದರಿಂದ ಹೊಸತನದೆಡೆಗೆ ನಡೆಯುವ ಪ್ರಕ್ರಿಯೆ ಕಂಡುಬರುತ್ತದೆ. ಅಂಥ ಸಾಹಿತ್ಯ ರಚಿಸಿದವರುಗಳಲ್ಲಿ ರಂ.ಶ್ರೀ.ಮುಗಳಿ ಅವರು ಒಬ್ಬರು. ಕನ್ನಡ ವಲಯದಲ್ಲಿ ಮುಗಳಿ ಅವರ ಹೆಸರು ಕೇಳಿದ ಕೂಡಲೆ ನಮಗೆ ನೆನಪಿಗೆ ಬರುವುದು ಅವರ ಕನ್ನಡ ಸಾಹಿತ್ಯ ಚರಿತ್ರೆ, ೧೯೫೩ ರಲ್ಲಿ ಪ್ರಕಟಗೊಂಡ ಈ ವಿಮರ್ಶಾ ಕೃತಿಯು ಶಿಕ್ಷಕರ, ಪ್ರಾಧ್ಯಾಪಕರ, ವಿದ್ಯಾರ್ಥಿಗಳ, ಸಾಹಿತ್ಯಾಸಕ್ತರ ಕನ್ನಡ ಸಾಹಿತ್ಯದ ದಾಹ ನೀಗಿಸುವಂತಹ ಕೃತಿಯಾಗಿ ಹೊರಹೊಮ್ಮಿತು. ಕನ್ನಡ ಸಾಹಿತ್ಯ ವಲಯದ ಎಷ್ಟೋ ಕನ್ನಡ ಸಾಹಿತ್ಯ ಚರಿತ್ರೆಗಳು, ಸಮಗ್ರ ಸಂಪುಟಗಳು ಬಂದರೂ ಸಹ ಮುಗಳಿ ಅವರ ಕನ್ನಡ ಸಾಹಿತ್ಯ ಚರಿತ್ರೆಯ ಮಹತ್ವ ಕಡಿಮೆಯಾಗುವುದಿಲ್ಲವೆಂದೇ ಹೇಳಬೇಕು. ಏಕೆಂದರೆ ಪಂಪನಿಂದಿಡಿದು ಮುದ್ದಣ್ಣನವರೆಗೆ ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆಯನ್ನು ಕಟ್ಟಿಕೊಟ್ಟ ಪರಿ ಬೆರಗುಗೊಳಿಸುವಂತದ್ದಾಗಿದೆ. ಏಕೆಂದರೆ ಪುಟಮಿತಿಯೊಳಗಡೆಯೆ ತಿಳಿಸುವ ವಿಷಯವಸ್ತು, ವಿಷಯ ವಿಶ್ಲೇಷಣೆ, ವಿಷಯ ಮೌಲ್ಯಮಾಪನದಂತಹ ಅಂಶಗಳಿಂದಾಗಿ ಮಹತ್ವ ಪಡೆಯುತ್ತದೆ. ಅದೇ ರೀತಿ ಗೆಳೆಯರ ಗುಂಪಿನ ಸದಸ್ಯರೊಂದಿಗೆ ಮುಗಳಿ ಅವರು ಮಾಡಿದ ಕೆಲಸ ಮಹತ್ವದ್ದಾಗಿದೆ. ಏಕೆಂದರೆ

ಸಾಹಿತ್ಯ ರಚನೆಯಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡು 'ಮೌನಸಾಪ್ತಾಹ'ದಂತ ಕಾರ್ಯಕ್ರಮದ ಮೂಲಕ ಸಾಹಿತ್ಯ ಕೃಷಿಗೈದಿದ್ದಾರೆ. ಜಯಕರ್ನಾಟಕ, ಪ್ರಬುದ್ಧ ಕರ್ನಾಟಕ, ವಿಶ್ವಕರ್ನಾಟಕ, ವಾಗ್ಭೂಷಣ, ಪ್ರಬೋಧ, ಸುವಾಸಿನಿ, ಲೋಕಪಾವನ, ಶಿವಾನುಭವ, ಸುಭೋದ ಪತ್ರಿಕೆಗಳ ಮೂಲಕ ಅಂದಿನ ಕರ್ನಾಟಕ ಏಕೀಕರಣ ಚಳುವಳಿಯಲ್ಲಿ ಗೆಳಯರ ಗುಂಪಿನ ಸದಸ್ಯರು ಮಹತ್ವ ಪಾತ್ರವಹಿಸಿದ್ದಾರೆ. ಈ ಕಾಲಾವಧಿಯಲ್ಲಿಯೇ ಮುಗಳಿ ಅವರು ಸಕ್ರಿಯವಾಗಿ ಸಾಹಿತ್ಯ ಚಟುವಟಿಕೆಗಳಲ್ಲಿ ತೊಡಗಿಕೊಂಡಿರುತ್ತಾರೆ.

ನಂತರ ಮಹಾರಾಷ್ಟ್ರದ ವಿಲ್ಲಿಂಗ್ಡನ್ ಕಾಲೇಜಿಗೆ ಪ್ರಾಧ್ಯಾಪಕರಾಗಿ ಸೇರಿಕೊಂಡ ಅವಧಿಯಲ್ಲಿ ಅಂದಿನ ಗಡಿನಾಡಿನ ಸಮಸ್ಯೆ, ಆಡಳಿತ ಭಾಷಾಸಮಸ್ಯೆ, ಇಂಗ್ಲಿಷ್ ಭಾಷಾಪ್ರಭಾವ ಇವುಗಳ ಮಧ್ಯೆ ನಿಂತುಕೊಂಡು ಮರಾಠಿ–ಕನ್ನಡದ ರಾಯಭಾರಿಯಾಗಿ ಮಾಡಿರುವ ಕೆಲಸ ಮಹತ್ವದ್ದಾಗಿದೆ. ಉದಾಹರಣೆಗೆ ಹೇಳುವುದಾದರೆ 'ವರುಣಕುಂಜ' ವೇದಿಕೆಯ ಮೂಲಕ ವಿ.ಕೃ.ಗೋಕಾಕರ ಜೊತೆಗೂಡಿ ಯುವ ಬರಹಗಾರರಲ್ಲಿ ಸಾಹಿತ್ಯಾಭಿರುಚಿಯನ್ನು ಮೂಡಿಸುವುದರೊಂದಿಗೆ ಗಡಿನಾಡಿನ 'ಕನ್ನಡ ದೀಪವಾಗಿ' ಇದ್ದುಕೊಂಡು ಕನ್ನಡ ಶಾಲೆಗಳು ಉತ್ತಮಗೊಳ್ಳಬೇಕೆಂದು, ಕನ್ನಡಿಗರ ಮಕ್ಕಳಿಗೆ ಕನ್ನಡದಲ್ಲಿಯೇ ಬೋಧಿಸಬೇಕೆಂಬ ಮನದಾಳದ ಇಂಗಿತ ಅವರ ಕೃತಿಗಳ ಆಶಯವಾಗಿರುವುದನ್ನು ಗಮನಿಸಬಹುದು.

ಮುಗಳಿ ಅವರ ಬಹುತೇಕ ಕತೆ, ಕಾದಂಬರಿ, ನಾಟಕ, ಲಲಿತಪ್ರಬಂಧಗಳಲ್ಲಿ ಕನ್ನಡ ನಾಡುನುಡಿಯ ಯೋಚಿಸುವ ಧ್ಯಾನಸ್ಥ ಸ್ಥಿತಿಯು ಕಂಡುಬರುತ್ತದೆ. ಅಂತವುಗಳಲ್ಲಿ 'ಕಾರಣಪುರುಷ' ಕಾದಂಬರಿಯು ಒಂದು, ಅದರಲ್ಲಿ ಸದಾ ಕನ್ನಡ ಏಳಿಗೆಯನ್ನೆ ಬಯಸುವ ಕಾರ್ಯಕರ್ತನಾಗಿ ವಾಮಣ್ಣನ ಪಾತ್ರವು ಕಂಡು ಬರುತ್ತದೆ. ಸಾಹಿತ್ಯ ಸಮ್ಮೇಳನಕ್ಕೆ ಹಣ ಸಂಗ್ರಹಿಸುವ ನಿಷ್ಠಾವಂತ ಕಾರ್ಯಕರ್ತನಾಗಿ ಕಾರ್ಯನಿರ್ವಹಿಸಿದರೂ ಕೂಡ ಹಣಕಾಸು ವ್ಯವಹಾರದಲ್ಲಿ ದುರುಪಯೋಗವಾಗಿದೆ ಎಂದು ಅಪವಾದ ಕೇಳಿ ಬರುತ್ತದೆ. ಕಾದಂಬರಿಯಲ್ಲಿ ಬರುವ ವಾಮಣ್ಣನ ಪಾತ್ರವು 'ಮನೆಗೆ ಮಾರಿ ಊರಿಗೆ ಉಪಕಾರಿ' ಎಂಬಂತೆ ಕನ್ನಡದ ಏಳಿಗೆಗಾಗಿಯೇ ಶ್ರಮಿಸುವ ಪಾತ್ರವಾಗಿ ಕಾರಣಪುರುಷ ಕಾದಂಬರಿಯಲ್ಲಿ ಮಹತ್ವ ಪಡೆಯುತ್ತದೆ.

ಸ್ವಾತಂತ್ರ್ಯ ಕಾಲಘಟ್ಟದಲ್ಲಿ ರಚನೆಗೊಂಡ 'ಅನ್ನ' ಕಾದಂಬರಿಯು ಬರಗಾಲದ ಪರಿಸ್ಥಿತಿಯನ್ನು ತಿಳಿಸುವ ಕನ್ನಡದ ಅಪರೂಪದ ಕಾದಂಬರಿಯಾಗಿದೆ. 'ಅಮೃತ' ಹುಡುಗನ ಪಾತ್ರದ ಮೂಲಕ ಅನಾವರಣಗೊಂಡ ಈ ಕಾದಂಬರಿಯು ಅಂದಿನ ಕಾಮಗಾರಿ ಕೆಲಸಗಳಲ್ಲಿ ನಡೆಯುವ ಮೋಸ, ವಂಚನೆ, ಭ್ರಷ್ಟಾಚಾರ, ಲಂಚಗುಳಿತನದಂತ ಅಂಶಗಳೊಂದಿಗೆ ಮಾನವೀಯತೆ, ಸಹಾಯಗುಣ, ಆದರ್ಶವಾದ ಅಂಶಗಳನ್ನು ಈ ಕಾದಂಬರಿಯು ಒಳಗೊಂಡಿದೆ.

ಮುಗಳಿ ಅವರು ನಾಟಕ ಸಾಹಿತ್ಯದಲ್ಲಿ ಹೊಸಪ್ರಯೋಗ ತಂತ್ರಗಳನ್ನು ಸೃಷ್ಟಿಸಿದ್ದಾರೆಂದರೆ ತಪ್ಪಾಗಲಾರದು. ಏಕೆಂದರೆ 'ಸೋಗಿನ ಸ್ಥರಗಳು' ಐತಿಹಾಸಿಕ ನಾಟಕದಲ್ಲಿ ಮಹರಾಣಿ ಪಾತ್ರನಿರ್ವಹಿಸಿದ

ಮಹಿಳೆಯು, ದಿನನಿತ್ಯದ ಶೋಚನೀಯ ಬಡತನ ಪರಿಸ್ಥಿತಿಯನ್ನು ನಾಟಕವು ಪ್ರಯೋಗಗೊಂಡ ಸಂದರ್ಭದಲ್ಲಿಯೇ ತಿಳಿಸಿ ಬಿಡುತ್ತಾಳೆ. ಈ ಸಂದರ್ಭದಲ್ಲಿ ಪ್ರೇಕ್ಷಕವರ್ಗದವರಿಂದ ಗುಜುಗುಜು ಸದ್ದುಕೇಳುವ, ಪ್ರಶ್ನಿಸುವ ರೀತಿಯಲ್ಲಿ ನಾಟಕದಲ್ಲಿ ತಂತ್ರಗಾರಿಕೆಯನ್ನು ಬಳಸುತ್ತಾರೆ. ಅದೇ ರೀತಿ ಮುಗಳಿ ಅವರು ಟಿ.ಪಿ.ಕೈಲಾಸಂರವರು ರಚಿಸಿರುವ ಹೋಮರೂಲ್, ಬಂಡ್ವಾಳ್ವಿಲ್ಲದ ಬಡಾಯಿ ನಾಟಕಗಳನ್ನು ಉತ್ತರ ಕರ್ನಾಟಕದ ದೇಸಿ ಭಾಷೆಗೆ ಅನುವಾದಿಸಿರುವಂತ ಪ್ರಯೋಗಗಳನ್ನು ಈ ಅಧ್ಯಾಯನದಲ್ಲಿ ಕಂಡುಕೊಳ್ಳಲಾಗಿದೆ.

ಮುಗಳಿ ಅವರ 'ಕನ್ನಡ ಸಾಹಿತ್ಯದಲ್ಲಿ ಸರಸ್ವತಿದರ್ಶನ' ಕೃತಿಯಲ್ಲಿ ಸರಸ್ವತಿಯನ್ನು ಕಂಡುಕೊಂಡ ರೀತಿ ಮಹತ್ವದ್ದಾಗಿದೆ. ರನ್ನನಿಗೆ ಸರಸ್ವತಿಯು 'ವಾಕ್ಸುಂದರಿ' ಯಾಗಿ ಕಂಡರೆ ನಾಗವರ್ಮನಿಗೆ ವಾಕ್ಸತಿಯಾಗಿ, ಕೇಶಿರಾಜ, ಹರಿಹರರಿಗೆ ವಾಗ್ದೇವಿಯಾಗಿ ಕಾಣಿಸಿಕೊಂಡ ಪರಿಯನ್ನು ಮತ್ತು ಹೊಸಗನ್ನಡ ಸಾಹಿತ್ಯದ ಕವಿಗಳಾದ ಡಿ.ವಿ.ಜಿ., ಕುವೆಂಪು, ಬೇಂದ್ರೆ, ಮಾಸ್ತಿಯವರಂತ ಕವಿಗಳಾದಿಯಾಗಿ ಪ್ರಕೃತಿವರ್ಣನೆಯ ಕವಿತೆಗಳಲ್ಲಿ ಸರಸ್ವತಿಯ ದರ್ಶನವನ್ನು ಕಂಡುಕೊಂಡ ಪರಿಯನ್ನು ಅವರ ಈ ಕೃತಿಯಿಂದ ಕಂಡುಕೊಳ್ಳಲಾಗಿದೆ.

ಮುಗಳಿ ಅವರ ಕನ್ನಡ ಸಾಹಿತ್ಯ ಚರಿತ್ರೆಯನ್ನು ಹೊರತುಪಡಿಸಿದರೆ ಅವರ ಬಹುತೇಕ ಕೃತಿಗಳು ಅಷ್ಟೊಂದು ಮುನ್ನೆಲೆಗೆ ಬರದೆ ಇರಲು ಕಾರಣಗಳನ್ನು ಸೂಕ್ಷ್ಮವಾಗಿ ಅವಲೋಕಿಸಿದಾಗ ಅವರ 'ಅನ್ನ' ಕಾದಂಬರಿಯು ಬರಗಾಲದ ಪರಿಸ್ಥಿತಿಯನ್ನು ತಿಳಿಸುವ ಕನ್ನಡದ ಅಪರೂಪ ಕಾದಂಬರಿಯಾದರೂ ಸಹ ಆ ಕಾಲಘಟ್ಟದಲ್ಲಿಯೇ ರಚನೆಗೊಂಡ 'ಚೋಮನ ದುಡಿ' ಮಹತ್ವ ಪಡೆಯುತ್ತದೆ. ಈ ಕಾದಂಬರಿಯಲ್ಲಿ ಬಂಡಾಯದಗುಣ ಕಂಡುಬಂದರೆ, ಅನ್ನ ಕಾದಂಬರಿಯಲ್ಲಿ ಬರುವ ಗುಳೆಹೊದ ಬಹುತೇಕ ಪಾತ್ರಗಳು ಆ ಕಷ್ಟಗಳಿಗೆ ಒಗ್ಗಿಕೊಂಡೆ ಆ ಪಾತ್ರಗಳು ಮುಂದುವರೆಯುವುದರಿಂದ ಅಷ್ಟೊಂದು ಯಶಸ್ವಿಹಂತವನ್ನು ತಲುಪುವುದಿಲ್ಲವೆಂದೇ ಹೇಳಬೇಕು. ಈ ಮಾತು ಅವರ ಇತರೆ ಕಾದಂಬರಿಗಳಾದ ಬಾಳುರಿ, ಕಾರಣಪುರುಷಗಳಿಗೂ ಅನ್ವಯವಾಗುತ್ತದೆ.

ಮುಗಳಿ ಅವರ ಬಹುತೇಕ ನಾಟಕಗಳು ತಾತ್ವಿಕ ಚಿಂತನೆಗೆ ಒಳಪಡದೆ ಕೌಟುಂಬಿಕ, ಸಾಮಾಜಿಕ ನಾಟಕಗಳಾಗಿವೆ. ಅವರ ನಾಟಕಗಳಲ್ಲಿ ಬರುವ ನಿರೂಪಣೆಯು ಉದ್ದುದ್ದ ಸಾಲುಗಳು ಬಳಕೆಗೊಂಡಿವೆ. ಭಾಷೆಯು ಉತ್ತರಕರ್ನಾಟಕದ ಭಾಷೆಯನ್ನು ಬಳಸುವರಾದರು ಕೆಲವೊಂದು ಸಂದರ್ಭದಲ್ಲಿ ಭಾಷೆಯು ಓದುಗನಿಗೆ ಬೇಗನೆ ಅರ್ಥವಾಗದೆ ದ್ವಂದ್ವಕ್ಕೆ ಸಿಲುಕಿಸುತ್ತದೆ. ಉದಾರಣೆಗೆ ಬಂದಕ್ಯಾಸದಂತ ಪದಗಳನ್ನು ಬಳಸುತ್ತಾರೆ. ಕ್ಯಾಸ ಎಂಬ ಪದದ ಮೂಲಾರ್ಥ ತಿಳಿಯುವುದೆ ಇಲ್ಲ. ಅದೇ ರೀತಿ ಅವರ ಬಹುತೇಕ ಲಲಿತಪ್ರಬಂಧಗಳು ವಿದ್ಯಾರ್ಥಿಗಳನ್ನು ಕೇಂದ್ರಿಕರಿಸಿ ರಚಿಸಿದಂತಿವೆ. ಏಕೆಂದರೆ ಯಾವುದೇ ತಾತ್ವಿಕ ವಿವೇಚನೆಗೆ ಒಳಗಾಗಿ ಚರ್ಚಿಸಿರುವ ಪ್ರಬಂಧಗಳಾಗಿರುವುದಿಲ್ಲ ಬಹುತೇಕ ವಿದ್ಯಾರ್ಥಿಗಳನ್ನು ಕೇಂದ್ರಿಕರಿಸಿಯೇ ರಚಿಸಿರುವ ಈ ಪ್ರಬಂಧಗಳು ವಿದ್ಯಾರ್ಥಿಗಳ ಶ್ರೇಯೋಭಿವೃದ್ಧಿ ಮತ್ತು ಓದಿನ ಕಡೆಗೆ ಹೆಚ್ಚು ಮಹತ್ವ ಕೊಡಬೇಕೆಂಬ

ಪ್ರೇರಣಾತ್ಮಕ ಅಂಶಗಳಿಂದ ಕೂಡಿದ ಪ್ರಬಂಧಗಳಾಗಿವೆ. ಕೆಲವು ಪ್ರಬಂಧಗಳು ಒಂದು ಸಾರಿ ಓದುವಂತ ಪ್ರಬಂಧಗಳಾಗಿವೆ. ಈ ರೀತಿಯಿಂದಾಗಿ ಮುಗಳಿ ಅವರ ಬರಹಗಳು ಓದುಗ ವಲಯಕ್ಕೆ ಹೆಚ್ಚು ಹತ್ತಿರವಾಗಲಿಲ್ಲವೆಂದು ಅನಿಸುತ್ತದೆ. ಮುಗಳಿ ಅವರು ಮೊದಲ ಹಂತದಲ್ಲಿ ಶಾಸನಗಳನ್ನು ಅಭ್ಯಾಸಮಾಡುವುದರ ಜೊತೆಗೆ 'ಕರ್ನಾಟಕ ಸಾಂಸ್ಕೃತಿಕ ಪರಂಪರೆ' ಎಂಬ ಐತಿಹಾಸಿಕ ಕೃತಿಯನ್ನು ರಚಿಸಿದರು. ಈ ಹಿನ್ನೆಲೆಯಲ್ಲಿ ಇವರನ್ನು ಇತಿಹಾಸಕಾರರೆಂದು ಗುರುತಿಸಿರುವುದು ತಿಳಿದುಬರುತ್ತದೆ. ಹಾಗೆಯೇ ಇವರ ಕತೆ ಕಾದಂಬರಿಗಳಲ್ಲಿ ಬ್ರಾಹ್ಮಿಣಿಜಂ ಅಂಶವು ಅಲ್ಲಲ್ಲಿ ಕಂಡುಬಂದಿರುವುದನ್ನು ಗಮನಿಸಬಹುದಾಗಿದೆ.

೨.೯. ರಂ.ಶ್ರೀ.ಮುಗಳಿ ಅವರ ಸಾಹಿತ್ಯ ಕುರಿತು ಇಲ್ಲಿಯವರೆಗೆ ನಡೆದ ಅಧ್ಯಯನಗಳ ಸಮೀಕ್ಷೆ

'ರಸಿಕರಂಗದರ್ಶನ' ರಂ.ಶ್ರೀ.ಮುಗಳಿ ಅವರ ಅಭಿನಂದನ ಗ್ರಂಥವಾಗಿದೆ. ಬಸವರಾಜ ಕಟ್ಟಿಮನಿ, ಮಾಧವ ಮಹಿಷಿಯವರು ಸಂಪಾದಿಸಿದ್ದಾರೆ. ಈ ಕೃತಿಯಲ್ಲಿ ಶಾಮರಾವ್ ಗಜೇಂದ್ರಗಡ ಅವರು ಮುಗಳಿ ಅವರ ಬಾಲ್ಯಜೀವನ ಕುರಿತು ಲೇಖನ ಬರೆದಿದ್ದಾರೆ. ಅದೇ ರೀತಿ ಮುಗಳಿ ಅವರ ಮಗಳಾದ ಪರಿಮಳೆ ಅವರು 'ಮಗಳ ದೃಷ್ಟಿಯಲ್ಲಿ ಮುಗಳಿ' ಎಂಬ ಲೇಖನವನ್ನು ಬರೆದಿದ್ದಾರೆ. ಮುಗಳಿ ಅವರ ವ್ಯಕ್ತಿತ್ವ ಕುರಿತಂತೆ ವಿ.ಕೃ.ಗೋಕಾಕರು, ಬಸವರಾಜ ಕಟ್ಟಿಮನಿ ಅವರು ಲೇಖನಗಳನ್ನು ಬರೆದರೆ, ಚನ್ನವೀರ ಕಣವಿ, ಸು.ರಂ. ಎಕ್ಕುಂಡಿ ಅವರು ಕವನಗಳನ್ನು ರಚಿಸಿದ್ದಾರೆ. ಮುಗಳಿ ಅವರ ವ್ಯಕ್ತಿತ್ವ ಕುರಿತಂತೆ ಸ್ನೇಹಿತರು, ವಿದ್ಯಾರ್ಥಿಗಳು, ಸಾಹಿತಿಗಳು ಲೇಖನಗಳನ್ನು ರಚಿಸಿದ್ದಾರೆ. ಅವರ ಸಾಹಿತ್ಯ ಕುರಿತಂತೆ ಕಾವ್ಯ, ಕತೆ, ಕಾದಂಬರಿ, ನಾಟಕ, ವಿಮರ್ಶೆ, ಲಲಿತ ಪ್ರಬಂಧ ಕುರಿತಂತೆ ಹಲವಾರು ವಿದ್ವಾಂಸರುಗಳು ಲೇಖನಗಳನ್ನು ರಚಿಸಿದ್ದಾರೆ. ಅವರ ಕಾವ್ಯವನ್ನು ಕುರಿತು ಗೌರೀಶ್ ಕಾಯ್ಕಿಣಿ ಅವರು 'ರಸಿಕರಂಗ ಭಾವಗೀತೆಗಳು' ಶೀರ್ಷಿಕೆಯಡಿಯಲ್ಲಿ ವಿಮರ್ಶೆಗೆ ಒಳಪಡಿಸಿದ್ದಾರೆ. ಅದೇರೀತಿ ಕಾದಂಬರಿಗಳ ಬಗ್ಗೆ ಕೆ.ಕಿತ್ತೂರ, ಸಿ.ಡಿ.ಗೋವಿಂದರಾವ್ ಅವರು ವಿಮರ್ಶಿಸಿರುವ ಲೇಖನಗಳನ್ನೊಳಗೊಂಡಿದೆ. 'ಕನಸಿನ ಕೆಳದಿ' ಕಥಾ ಸಂಕಲನದ ಕುರಿತು ವಾಮನ ಬೇಂದ್ರೆ ಅವರು ನಾಟಕ ಸಾಹಿತ್ಯದ ಕುರಿತು ಎನ್.ಕೆ. ಕುಲಕರ್ಣಿ ಅವರು ಲೇಖನವನ್ನು ಬರೆದಿದ್ದಾರೆ. ಗ್ರಂಥದ ಕೊನೆಯ ಭಾಗದಲ್ಲಿ ವಿಮರ್ಶಾ ಸಾಹಿತ್ಯ, ಪ್ರಬಂಧ ಸಾಹಿತ್ಯ, ಹಾಗೂ ಸಾಹಿತ್ಯ ಚರಿತ್ರೆ ಕುರಿತಂತೆ ಸಂಶೋಧನಾತ್ಮಕವಾದ ಲೇಖನಗಳನ್ನು ಒಳಗೊಂಡಿದೆ.

'ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪುರಸ್ಕೃತ ಕನ್ನಡ ಲೇಖಕರು ರಂ.ಶ್ರೀ.ಮುಗಳಿ' ಕಿರು ಪುಸ್ತಕವನ್ನು ತಾಳ್ತಜೆ ವಸಂತ ಕುಮಾರ್ ಅವರು ರಚಿಸಿದ್ದಾರೆ. ಹಾ.ಮಾ ನಾಯಕ ಮತ್ತು ಪ್ರಧಾನ ಗುರುದತ್ತ ಅವರು ಸಂಪಾದಿಸಿದ್ದಾರೆ. ಇದು ನವಕರ್ನಾಟಕ ಪ್ರಕಾಶನದಿಂದ ೨೦೦೧ರಲ್ಲಿ ಮುದ್ರಣಗೊಂಡಿದೆ. ಈ ಕೃತಿಯು ಮೊದಲು ಅರಿಕೆ, ಬದುಕು, ಬರೆಹಗಳು ಕನ್ನಡ ಸಾಹಿತ್ಯ ಚರಿತ್ರೆ, ಸಮಾಪನ, ಅನುಬಂಧಗಳು, ಮುಖ್ಯವರ್ಷಗಳು, ಕೃತಿಸೂಚಿಯನ್ನು ತಿಳಿಸುತ್ತಾ ಸಂಕ್ಷಿಪ್ತವಾಗಿ

ಚರ್ಚಿಸಿ ವಿವರಿಸಿದ್ದಾರೆ. ಕೀರ್ತಿನಾಥ ಕುರ್ತಕೋಟಿ ಅವರು ತಮ್ಮ ಯುಗಧರ್ಮ ಹಾಗೂ ಸಾಹಿತ್ಯ ದರ್ಶನ ಕೃತಿಯಲ್ಲಿಯೂ ಸಹ ಮುಗಳಿ ಅವರ ಕತೆ ಕಾದಂಬರಿಗಳ ಕುರಿತಾಗಿ ಚರ್ಚಿಸಿದ್ದಾರೆ.

ಮುಗಳಿ ಅವರ 'ಬೇಂದ್ರೆ ಕಾವ್ಯ' ವಿಮರ್ಶಾಕೃತಿಯನ್ನು ಶ್ರೀನಿವಾಸ ಹಾವನೂರು ಸಂಪಾದಿಸಿ ಪ್ರಸ್ತಾವನೆಯನ್ನು ಬರೆದಿದ್ದಾರೆ(೧೯೮೬-೨೦೦೯). ಈ ಕೃತಿಯು ಅಭಿನವ ಪ್ರಕಾಶನದಿಂದ ಪ್ರಕಟಗೊಂಡಿದೆ. ಈ ಕೃತಿಯು ಬೇಂದ್ರೆಕಾವ್ಯ ಕುರಿತು ಪ್ರಕೃತಿ, ಪ್ರೀತಿ, ತಾಯಿ, ಮಾನವೀಯ ಪರಿಸ್ಪಂದನ, ವಿರಾಟ ದರ್ಶನ, ಆಧ್ಯಾತ್ಮಿಕ ಅಭಿವ್ಯಕ್ತಿ, ಸಮಾಪನ ಎಂಬ ಅಂಶಗಳ ಮುಖೇನ ಮುಗಳಿ ಅವರು ವಿಮರ್ಶಿಸಿರುವ ಕೃತಿಯಾಗಿದೆ. 'ಡಾ. ರಂ.ಶ್ರೀ ಮುಗಳಿ ಚಿತ್ರಿಸಿದ ಪಂಪ ರನ್ನರು' ಕೃತಿಯು ಮುಗಳಿ ಅವರ ಆಯ್ದ ಲೇಖನಗಳನ್ನೊಳಗೊಂಡಿದೆ. ಈ ಕೃತಿಯ ಪ್ರವೇಶಿಕೆ ಭಾಗವಾಗಿ ಮುಗಳಿ ಅವರ ವಿದ್ಯಾರ್ಥಿಯಾದ ವಿ ಸುಜಾತ ಅವರು ಬರೆದಿದ್ದಾರೆ. ಪ್ರಸ್ತಾವನೆಯನ್ನು ಶ್ರೀನಿವಾಸ ಹಾವನೂರರು ಬರೆದಿದ್ದಾರೆ. ಇದು ೨೦೦೬ರಲ್ಲಿ ಮೈಸೂರಿನ ಅತ್ತಿಮಬ್ಬೆ ಪ್ರಕಾಶನದಿಂದ ಪ್ರಕಟಗೊಂಡಿದೆ. ಈ ಕೃತಿಯು ಪಂಪ ಒಂದು ಸಮಗ್ರ ವಿವೇಚನೆ, ಪಂಪನ ದೇಸೀ, ಪಂಪನ ದೃಷ್ಟಿಯಲ್ಲಿ ಭರತ ಬಾಹುಬಲಿ, ರನ್ನ ಹಾಗೂ ಅವನ ಕೃತಿರತ್ನ-ಗದಾಯುದ್ಧ, ಡಿ.ಎಲ್.ನರಸಿಂಹಾಚಾರ್ಯರ ಪಂಪಭಾರತ ದೀಪಿಕೆಯ ಮುಂದುವರಿಕೆ ಕುರಿತು ವಿಮರ್ಶೆಗೊಳಪಟ್ಟ ಕೃತಿಯಾಗಿದೆ.

'ಕನ್ನಡ ಸಾಹಿತ್ಯ ವಿಮರ್ಶೆಯ ತಾತ್ವಿಕ ವಿವೇಚನೆ' ಈ ಸಂಪಾದಿತ ಕೃತಿಯು, ೧.ಕನ್ನಡ ಸಾಹಿತ್ಯದಲ್ಲಿ ಸರಸ್ವತಿ ದರ್ಶನ, ೨.ಸಾಹಿತ್ಯ ವಿಮರ್ಶೆಯ ಮಾರ್ಗದರ್ಶಕ ಸೂತ್ರಗಳು, ೩.ಮಹಾಕೃತಿಯೆಂಬ ಮೂರು ಕೃತಿಯನ್ನೊಳಗೊಂಡ ಸಂಪಾದಿತ ಕೃತಿಯಾಗಿದೆ. ಎಸ್.ಎಲ್. ಶ್ರೀನಿವಾಸ ಮೂರ್ತಿಯವರು ಈ ಕೃತಿ ಸಂಪಾದಿಸಿ ಪ್ರಸ್ತಾವನೆಯನ್ನು ಬರೆದರೆ, ಕುವೆಂಪು ಅವರು ಮುನ್ನುಡಿಯನ್ನು ಬರೆದಿದ್ದಾರೆ. ಇದರಲ್ಲಿ ಮೊದಲನೆ ಕೃತಿಯಾದ 'ಸಾಹಿತ್ಯದಲ್ಲಿ ಸರಸ್ವತಿ ದರ್ಶನ' ಮೈಸೂರು ವಿಶ್ವವಿದ್ಯಾನಿಲಯದಲ್ಲಿ ನಡೆದ ಮೂರು ವಿಶೇಷ ಉಪನ್ಯಾಸಗಳ ಲೇಖನಗಳನ್ನು ಈ ಕೃತಿ ಒಳಗೊಂಡಿದೆ. ಅದರಲ್ಲಿ ಮಾರ್ಗಕಾವ್ಯದಲ್ಲಿ ಸರಸ್ವತಿ ದರ್ಶನ, ದೇಸಿ ಕಾವ್ಯದಲ್ಲಿ ಸರಸ್ವತಿ ದರ್ಶನ, ಹೊಸ ಕಾವ್ಯಗಳಲ್ಲಿ ಸರಸ್ವತಿ ದರ್ಶನ, ವೇದಪುರಾಣಗಳಲ್ಲಿ ಸರಸ್ವತಿ ವರ್ಣನೆ. ಸಂಸ್ಕೃತ ಕವಿಗಳ ಸರಸ್ವತಿ ಸ್ತುತಿಪರ ಪದ್ಯಗಳು, ಸರಸ್ವತಿಗೆ ಸದೃಶವಾದ ಪಾಶ್ಚಾತ್ಯರ ಕಲ್ಪನೆಗಳನ್ನು ಕುರಿತಂತೆ ವಿವೇಚನೆಯುಳ್ಳ ವಿಮರ್ಶಾ ಕೃತಿಯಾಗಿದೆ.

'ವಿಮರ್ಶೆಯ ಮಾರ್ಗದರ್ಶಕ ಸೂತ್ರಗಳು' ಈ ವಿಮರ್ಶಾ ಕೃತಿಯು ಕರ್ನಾಟಕ ವಿಶ್ವವಿದ್ಯಾಲಯದಲ್ಲಿನ ವಿಶೇಷ ಉಪನ್ಯಾಸಗಳ ಮೂರು ಲೇಖನಗಳನ್ನೊಳಗೊಂಡಿದೆ. ೧ನೇ ಪ್ರಕರಣದಲ್ಲಿ ಸಾಹಿತ್ಯ ವಿಮರ್ಶೆಯ ಸೂತ್ರಗಳ ಸಾಧ್ಯಾಸಾಧ್ಯತೆ, ೨ನೇ ಪ್ರಕರಣ ಸಾಹಿತ್ಯ ವಿಮರ್ಶೆಯ ವಿಧಿವಿಧಾನ, ೩ನೇ ಪ್ರಕರಣ ಸಾಹಿತ್ಯ ವಿಮರ್ಶೆಯಲ್ಲಿ ತರತಮ ಮೌಲ್ಯ ನಿರ್ಣಯ ಕುರಿತು ಹೇಳಿರುವ ವಿವರಗಳನ್ನು ಒಳಗೊಂಡಿದೆ. 'ಮಹಾಕೃತಿ'ಯು ಮುಗಳಿ ಅವರು ಮುಂಬಯಿ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ವಿಭಾಗದಲ್ಲಿ ಮಂಡಿಸಿದ ವಿಶೇಷ ಉಪನ್ಯಾಸಗಳ ಸಾರವನ್ನು

ಒಳಗೊಂಡಿದೆ. ಪ್ರಸ್ತಾವನೆಯನ್ನು ಶ್ರೀನಿವಾಸ ಹಾವನೂರರು ಬರೆದಿದ್ದಾರೆ. ಮುನ್ನುಡಿಯನ್ನು ಮುಗಳಿ ಅವರು ಬರೆದರೆ ಅರಿಕೆ ನುಡಿಗಳನ್ನು ದೇ.ಜ.ಗೌ ಅವರು ಬರೆದಿದ್ದಾರೆ. ಈ ಸಂಪಾದಿತ ಕೃತಿಯಲ್ಲಿ ಮಹಾಕೃತಿಯ–ಸನ್ನದ್ಧತೆ, ಮಹಾಕೃತಿ–ವ್ಯಕ್ತಿತ್ವ, ಮಹಾಕೃತಿಯ ಬದ್ಧತೆ, ಮಹಾಕೃತಿಯ ಮಾನದಂಡ,(ಪ್ರಾಚೀನ ಭಾರತೀಯ), ಮಹಾಕೃತಿ–ಮಾನದಂಡ(ಅರ್ವಾಚೀನ–ಪಾಶ್ಚಾತ್ಯ), ಮಹಾಕೃತಿ ಮಾನದಂಡ(ಅರ್ವಾಚೀನ–ಭಾರತೀಯ) ಮಹಾಕೃತಿ ಮೌಲ್ಯಮಾಪನ–ಮೂಲತತ್ವಗಳು, ಸಂಸ್ಕೃತಿ, ಮಹಾಕೃತಿ ಮೇರುಕೃತಿ ಎಂಬ ಅಂಶಗಳನ್ನೊಳಗೊಂಡ ಸಂಪಾದಿತ ಕೃತಿಯಾಗಿದೆ. (ಈ ಕೃತಿಗಳಿಗೆ ಸಂಬಂಧಿಸಿದಂತೆ ಅಧ್ಯಾಯ–೫.೧ ರಲ್ಲಿ ಚರ್ಚಿಸಿ ವಿವರಿಸಲಾಗಿದೆ.)

ಮುಗಳಿ ಅವರ 'ಕನ್ನಡ ಸಾಹಿತ್ಯ ಚರಿತ್ರೆ'ಯ ಕುರಿತಂತೆ ಚರ್ಚಿಸಿರುವ ಪ್ರಮುಖ ಲೇಖಕರ ಲೇಖನಗಳು ಇವೆ. 'ಕನ್ನಡ ಸಾಹಿತ್ಯ ಚರಿತ್ರೆ ಕ್ಷೇತ್ರದಲ್ಲಿ ಸಂಶೋಧನೆ' ಇದೊಂದು ಸುಧೀರ್ಘವಾದ ಲೇಖನವಾಗಿದೆ. ಈ ಲೇಖನವನ್ನು ಕೆ. ಅನಂತರಾಮುರವರು ರಚಿಸಿದ್ದಾರೆ. 'ಕನ್ನಡ ಸಾಹಿತ್ಯ ಚರಿತ್ರೆ:ಸ್ವರೂಪ ಸಮೀಕ್ಷೆ' ಲೇಖನವನ್ನು ಹಾ.ಮಾ ನಾಯಕರವರು ಸಂಪಾದಿಸಿಕೊಟ್ಟಿದ್ದಾರೆ. ಇದೂ ಕೂಡ ಸುಧೀರ್ಘವಾದ ಲೇಖನವಾಗಿದೆ. 'ಕನ್ನಡ ಸಾಹಿತ್ಯ: ಚಾರಿತ್ರಿಕ ಬೆಳವಣಿಗೆ' ಮತ್ತು 'ಕನ್ನಡ ಸಾಹಿತ್ಯ ಚರಿತ್ರೆಗಳ ಚರಿತ್ರೆ' ಇವುಗಳನ್ನು ಸಿ.ವೀ.ರಂಗಣ್ಣನವರು ರಚಿಸಿದರೆ, 'ಸಾಹಿತ್ಯ ಚರಿತ್ರೆ ಅಥವಾ ಸಾಹಿತ್ಯದಲ್ಲಿ ಚರಿತ್ರೆ' ಕೆ.ವಿ ನಾರಾಯಣ, 'ಕನ್ನಡ ಸಾಹಿತ್ಯ ಚರಿತ್ರೆಯ ಸ್ವರೂಪವೇನು?' ಬಸವರಾಜ ಮಲ್ಲಶೆಟ್ಟಿ, 'ಪರಂಪರೆ ಸಾಹಿತ್ಯ, ಸಾಹಿತ್ಯ ಚರಿತ್ರೆ' ಸಿ.ಎನ್ ರಾಮಚಂದ್ರ, 'ಕನ್ನಡ ಸಾಹಿತ್ಯ ಚರಿತ್ರೆ' ಕೀರ್ತಿನಾಥ ಕುರ್ತಕೋಟಿ, 'ಕನ್ನಡ ಸಾಹಿತ್ಯ ಚರಿತ್ರೆಗಳು ಒಂದು ಅದ್ಯಯನ' (ಪಿಎಚ್.ಡಿ ಮಹಾಪ್ರಬಂಧ) ಆರ್ ನರಸಿಂಹಮೂರ್ತಿ, ಬೆಂ.ವಿ.ವಿ.

ಕೊನೆ ಟಿಪ್ಪಣಿಗಳು

೧. ಶ್ರೀನಿವಾಸಮೂರ್ತಿ ಎಸ್.ಎಲ್.(ಸಂ), ಕನ್ನಡ ಸಾಹಿತ್ಯ ವಿಮರ್ಶೆಯ ತಾತ್ವಿಕ ವಿವೇಚನೆ, ಹೇಮಂತ್ ಸಾಹಿತ್ಯ, ಬೆಂಗಳೂರು, ೨೦೦೯, ಪುಟ VII

೨. ಬಸವರಾಜ ಕಟ್ಟಿಮನಿ, ಮಾಧವ ಮಹಿಷಿ(ಸಂ), ರಸಿಕರಂಗ ದರ್ಶನ, ಅಭಿನಂದನ ಗ್ರಂಥ (ಕವಿತೆ ರಸಿಕರಂಗ–ಚನ್ನವೀರ ಕಣವಿ), ಉಷಾ ಸಾಹಿತ್ಯಮಾಲೆ ಮೈಸೂರು, ೧೯೬೬, ಪುಟ ೧೦

೩. ಬಸವರಾಜ ಕಟ್ಟೀಮನಿ, ಮಾಧವ ಮಹಿಷಿ(ಸಂ), ರಸಿಕರಂಗ ದರ್ಶನ, (ಕವಿತೆ ರಂಗನಾಥ ಮುಗಳಿ ಸು.ರ. ಎಕ್ಕುಂಡಿ), ಉಷಾ ಸಾಹಿತ್ಯಮಾಲೆ, ಮೈಸೂರು, ೧೯೬೬, ಪುಟ ೯

೪. ಬಸವರಾಜ ಕಟ್ಟೀಮನಿ, ಮಾಧವ ಮಹಿಷಿ(ಸಂ), ರಸಿಕರಂಗ ದರ್ಶನ(ಲೇಖನ ಮಗಳ ದೃಷ್ಟಿಯಲ್ಲಿ ಮುಗಳಿ–ಪರಿಮಳ), ಉಷಾ ಸಾಹಿತ್ಯಮಾಲೆ, ಮೈಸೂರು, ೧೯೬೬, ಪುಟ ೬೧

೫. ಕಾಪಸೆ, ಜಿ.ಎಸ್. ಮದುರಚೆನ್ನ, ಜೀವನ ಹಾಗೂ ಕೃತಿಗಳ ಸಮೀಕ್ಷೆ, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೭೬, ಪುಟ ೧೨೪

೬. ಅದೇ, ಪುಟ ೧೨೪

೭. ವಾಮನಬೇಂದ್ರೆ(ಸಂ), ಮೌನಯೋಗ, ದ.ರಾ. ಬೇಂದ್ರೆ ಸಂಶೋಧನಾ ಸಂಸ್ಥೆ, ಹುಬ್ಬಳ್ಳಿ, ೨೦೦೮, ಪುಟ ೨೭

೮. ವಾಮನಬೇಂದ್ರೆ(ಸಂ), ಗೆಳೆಯರ ಗುಂಪು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೯, ಪುಟ ೧೪

೯. ಅದೇ, ಪುಟ ೧೪೦

೧೦. ವಾಮನಬೇಂದ್ರೆ(ಸಂ), ಔದುಂಬರ ಗಾಥೆ, ದ.ರಾ.ಬೇಂದ್ರೆ ಸಂಶೋಧನಾ ಸಂಸ್ಥೆ, ಹುಬ್ಬಳ್ಳಿ, ೨೦೦೫, ಪುಟ ೩೦೩

೧೧. ವಾಮನಬೇಂದ್ರೆ(ಸಂ), ಮೌನಯೋಗ, ದ.ರಾ.ಬೇಂದ್ರೆ ಸಂಶೋಧನಾ ಸಂಸ್ಥೆ, ಹುಬ್ಬಳ್ಳಿ, ೨೦೦೮, ಪುಟ–೨೭

೧೨. ಬುದ್ದಣ್ಣ ಹಿಂಗಮಿರೆ(ಸಂ), ಇಳಿದು ಬಾ ತಾಯಿ, ದ.ರಾ.ಬೇಂದ್ರೆ, ಅಭಿನಂದನಗ್ರಂಥ, ಮಂಗಳಾ ಚಿ.ನ., ಬೇಂದ್ರ ಅವರ ಕಾವ್ಯದಲ್ಲಿ ಕಲ್ಪನಾ ವಿಲಾಸ(ಲೇಖನ), ಸಮಾಜ ಪುಸ್ತಕಾಲಯ, ಧಾರವಾಡ, ೧೯೭೭, ಪುಟ ೩೨೧

೧೩. ಅದೇ, ಪುಟ ೩೨೧

ಅಧ್ಯಾಯ ಮೂರು

ರಂ.ಶ್ರೀ.ಮುಗಳಿ ಅವರ ಸೃಜನಶೀಲ ಸಾಹಿತ್ಯ

ರಂ.ಶ್ರೀ.ಮುಗಳಿ ಅವರ ಸೃಜನಶೀಲ ಸಾಹಿತ್ಯ

೩.೧. ಕಾವ್ಯ

೩.೨. ಕತೆ

೩.೩. ಕಾದಂಬರಿ

೩.೪. ನಾಟಕ

೩.೫. ಲಲಿತ ಹಾಗೂ ವೈಚಾರಿಕ ಪ್ರಬಂಧಗಳು

೩.೬. ಆತ್ಮಚರಿತ್ರೆ

ಅಧ್ಯಾಯ ಮೂರು

ರಂ.ಶ್ರೀ.ಮುಗಳಿ ಅವರ ಸೃಜನಶೀಲ ಸಾಹಿತ್ಯ

೩.೧. ಕಾವ್ಯ

ಆಧುನಿಕ ಕನ್ನಡ ಸಾಹಿತ್ಯವನ್ನು ಅಧ್ಯಯನದ ದೃಷ್ಟಿಯಿಂದ ನವೋದಯ, ಪ್ರಗತಿಶೀಲ, ನವ್ಯ ಹಾಗೂ ದಲಿತ–ಬಂಡಾಯ ಎಂಬುದಾಗಿ ನಾಲ್ಕು ಘಟ್ಟಗಳಲ್ಲಿ ಗುರುತಿಸಲಾಯಿತು. ಅದರಲ್ಲಿ ಮೊದಲನೆಯ ಘಟ್ಟವಾದ ನವೋದಯ ಎನ್ನುವ ಹೆಸರು 'ರೊಮ್ಯಾಂಟಿಕ್' ಪದಕ್ಕೆ ಪರ್ಯಾಯವಾಗಿ ಬಂದಿತು. ಹೊಸಗನ್ನಡ ಕವಿತೆಯ ಮೇಲೆ ಇಂಗ್ಲಿಷ್ ಸಾಹಿತ್ಯದ ಪ್ರಭಾವದಿಂದಾಗಿ ಬಿ.ಎಂ.ಶ್ರೀ. ಅವರು 'ಇಂಗ್ಲೀಷ್ ಗೀತಗಳು' ಸಂಕಲನ ಪ್ರಕಟಿಸಿ ಹೊಸ ಅಧ್ಯಾಯದ ಸೃಷ್ಟಿಗೆ ಕಾರಣಕರ್ತರಾದರು. "ಸ್ಥಗಿತಗೊಂಡ ಕನ್ನಡ ಕಾವ್ಯ ಹೊಸತನದಿಂದ ಚಾಲನೆ ಬರಬೇಕಾದರೆ ಇಂಗ್ಲೀಷ್ ಸಾಹಿತ್ಯದ ಸ್ಫೂರ್ತಿಯೊಂದರಿಂದಲೇ ಸಾಧ್ಯ"[೧] ಎಂದು ಘೋಷಿಸಿರುವರು. 'ನವೋದಯ' ಶಬ್ದದ ಅರ್ಥವೇ 'ಹೊಸಹುಟ್ಟು' ಈ ಹೊಸಹುಟ್ಟನ್ನು ಹಲವಾರು ಕವಿಗಳು ಗುರುತಿಸಿ ಸ್ವಾಗತಿಸಿ ಬರಮಾಡಿಕೊಂಡರು. ಅಂತವರಲ್ಲಿ ಬಿ.ಎಂ.ಶ್ರೀ., ಕುವೆಂಪು, ದ.ರಾ.ಬೇಂದ್ರೆ, ಕೆ.ಎಸ್.ನರಸಿಂಹಸ್ವಾಮಿ, ಮಾಸ್ತಿ, ಡಿ.ವಿ.ಜಿ., ಪು.ತಿ.ನ., ವಿ.ಸೀತಾರಾಮಯ್ಯ, ಆನಂದಕಂದ, ಮಧುರಚೆನ್ನ, ರಂ.ಶ್ರೀ.ಮುಗಳಿ, ತೀ.ನಂ.ಶ್ರೀ., ಜಿ.ಪಿ.ರಾಜರತ್ನಂ, ಕಯ್ಯಾರ ಕಿಞ್ಞಣ್ಣ ರೈ, ಕಡೆಂಗೋಡ್ಲು ಶಂಕರಭಟ್ಟ, ಕಾವ್ಯಾನಂದ, ಜಿ.ಎಸ್.ಶಿವರುದ್ರಪ್ಪ, ಚನ್ನವೀರ ಕಣವಿ ಇನ್ನೂ ಮುಂತಾದ ಮಹನೀಯರಿದ್ದಾರೆ.

ನವೋದಯ ಕವಿಗಳು ತಮ್ಮದೇ ಆದ ಭಾಷಾಶೈಲಿ, ಭಾವಗೀತಾತ್ಮಕ ಲಯ, ಛಂದಸ್ಸು, ನುಡಿಗಟ್ಟು, ಹಾಡುಗಬ್ಬ, ಪ್ರಾಸಪದಗಳು, ಜಾನಪದ ಧಾಟಿಯಲ್ಲಿ ಕಾವ್ಯಗಳನ್ನು ರಚಿಸುವಲ್ಲಿ ಹೊಸಪ್ರಯೋಗ ಬಳಸಿದವರಾಗಿದ್ದಾರೆ. "ದ.ರಾ.ಬೇಂದ್ರೆ ಅವರು ಜಾನಪದ ಕಾವ್ಯದ ಸಹಜ ವರಸೆಯನ್ನು ಕಸಿ ಮಾಡಿದರು ಹಾಗೂ ಛಂದಸ್ಸಿನ ದೃಷ್ಟಿಯಿಂದ ಹೊಸ ಪ್ರಯೋಗ ಮಾಡಿದರು. 'ಮುಗಳಿ' ಮತ್ತು 'ಆನಂದಕಂದ'ರು ಹಾಡುಗಬ್ಬವನ್ನು ಹೆಚ್ಚು ಬಳಕೆಗೆ ತಂದರು. ಸಾಲಿ ರಾಮಚಂದ್ರರಾಯರು, ಪು.ತಿ.ನ. ಅವರು, ವಿ.ಕೃ.ಗೋಕಾಕರು, ಮಧುರಚೆನ್ನರು ಹೊಸ ಪ್ರಯೋಗ ಮಾಡಿದರು. ಕುವೆಂಪು ಹಾಗೂ ಬೇಂದ್ರೆ ಅವರು ವೈವಿಧ್ಯಮಯ ರೀತಿಯಲ್ಲಿ ಕನ್ನಡವನ್ನು ಬಳಸುವ ಮೂಲಕ ರಮ್ಯಕಾವ್ಯಕ್ಕೆ ಬೆರಗು ನೀಡಿದರು. ಶ್ರೀ ಅವರ ನಂತರದಲ್ಲಿ ಮಾಸ್ತಿ, ಕುವೆಂಪು, ವಿಸೀ ಅವರ ಶಿಷ್ಯವರ್ಗದಲ್ಲಿ ಅತ್ಯಂತ ಹಿರಿಯರು ಶ್ರೀನಿವಾಸ ಕಾವ್ಯನಾಮದ ಮಾಸ್ತಿಯವರು.

ಅವರ ಪ್ರಾರಂಭದ 'ಬಿನ್ನಹ'(೧೯೨೨) ಸಂಕಲನದಲ್ಲೇ ಅನುಭಾವದ ಎಳೆಗಳಿವೆ. ರಮ್ಯವಾದಿ ಮನೋಭಾವ ನಿಚ್ಚಳವಾಗಿ ಇಲ್ಲಿನ ಕವಿತೆಗಳಲ್ಲಿ ನಿರೂಪಿತವಾಗಿದೆ. 'ಬಿನ್ನಹ' ಸಂಕಲನ ಭಾವಗೀತದ ಗೊಂಚಲು. 'ಅರುಣ'ದ ಮುನ್ನುಡಿಯಲ್ಲಿ ಬಹಳ ಮುಖ್ಯವಾದ ಸಂಗತಿಯೊಂದನ್ನು ಮಾಸ್ತಿ ಹೊರಗೆಡವಿದ್ದಾರೆ. ಅವರು ಇಂಗ್ಲಿಷ್ ಭಾಷೆಯನ್ನು ಕಲಿತರೂ, ಕನ್ನಡವು ಶ್ರೇಷ್ಠ ಭಾಷೆಯಾದುದರಿಂದಲೂ ಚಿಕ್ಕಂದಿನಲ್ಲಿ ಕಲಿತ ಭಾಷೆಯಾದುದರಿಂದಲೂ ಕನ್ನಡದಲ್ಲಿಯೇ ಕವಿತೆಗಳನ್ನು ರಚಿಸಿರುವುದಾಗಿ ಹೇಳಿಕೊಂಡಿದ್ದಾರೆ. ಇವೆಲ್ಲವೂ ರಮ್ಯಕವಿಗಳ ಭಾಷಾಭಿಮಾನವನ್ನು ಸೂಚಿಸುತ್ತದೆ. ಮೌಲ್ಯನಿಷ್ಠೆಯನ್ನು ಬಿಂಬಿಸುತ್ತದೆ. ರಮ್ಯವಾದಿ ಕವಿಗಳ ಕಾಲಕ್ಕೆ ಕನ್ನಡ ಭಾಷೆ ಹಾಗೂ ಹೊಸಗನ್ನಡ ಛಂದಸ್ಸು ಇವೆರಡೂ ಬಗೆಯಿಂದ ನವೋದಯ ಕನ್ನಡ ಕಾವ್ಯ ಹೊಸಹುಟ್ಟನ್ನೇ ಪಡೆದಿದ್ದು ಗಮನಾರ್ಹವಾದ ಐತಿಹಾಸಿಕ ಸಂಗತಿಯಾಗಿದೆ. ರಮ್ಯವಾದಿ ಕವಿಗಳು ಭಾವಕ್ಕೆ ಬೆಲೆ ಕೊಟ್ಟಷ್ಟೇ ವಿಚಾರಗಳಿಗೂ ಬೆಲೆ ಕೊಡುವ ಮೂಲಕ ವೈಚಾರಿಕತೆ ಅಂತರ್ಗತವಾಗಿ ಕನ್ನಡ ಕಾವ್ಯದಲ್ಲಿ ಪ್ರವಹಿಸಲು ಕಾರಣರಾದರು"[೨] ಎಂಬ ಅಭಿಪ್ರಾಯಕ್ಕೆ ಬರುತ್ತಾರೆ. ಈ ಮಾದರಿಯಲ್ಲಿ ರಚನೆಗೊಂಡ ಮುಗಳಿಯವರ 'ಬಾಸಿಗ' ಕವನಸಂಕಲನ ಒಂದು.

'ಬಾಸಿಗ' ಇದು ರಂ.ಶ್ರೀ.ಮುಗಳಿ ಅವರ ಮೊದಲ ಕವನಸಂಕಲನವಾಗಿದೆ. ನವೋದಯ ಕಾಲಘಟ್ಟದಲ್ಲಿ ರಚನೆಗೊಂಡ ಈ ಕವನಸಂಕಲನವು ಅಂದು ಹೆಚ್ಚು ಜನಮನ್ನಣೆ ಗಳಿಸಿರುವಂತದ್ದು ತಿಳಿದುಬರುತ್ತದೆ. ಮುಖ್ಯವಾಗಿ ಪ್ರಕೃತಿ ಸೌಂದರ್ಯ, ರಾಷ್ಟ್ರೀಯತೆ, ನಾಡುನುಡಿ ಚಿಂತನೆ, ಭಕ್ತಿ, ಸಂಸಾರ, ಗೆಳೆತನ, ವಾತ್ಸಲ್ಯಯುತ ಇತರೆ ಅಂಶಗಳನ್ನೊಳಗೊಂಡ ಈ ಸಂಕಲನವನ್ನು ವಿಮರ್ಶಿಸುವುದು ಅವಶ್ಯ.

"ಮಂದಾರ ಹೂವನು ಒಂದಾರ ಕೊಳ್ಳಲಿಲ್ಲ
ಒಂದಾರ ಕೊಳ್ಳಲಿಲ್ಲ ಲೋಕದ ಮಂದಿ
ನಿಂದಾರ ಲೋಕದ ಬಲು ಹೂವು ಎಂದೇನೋ!"(ಪು.೨೦)

ಈ ಕವನದ ಮೌಲ್ಯನಿಷ್ಠತೆ, ರಸಾನುಭೂತಿಯನ್ನು ಒಳಗೊಂಡ ರೂಪಕಶಕ್ತಿ, ಪ್ರತಿಮಾ ನಿರ್ಮಾಣದಂತ ಕೌಶಲ್ಯಯುತ ಅಂಶಗಳನ್ನೊಳಗೊಂಡಿದೆ. ಹೂವನು ಮಾರುವ ಹೂವಾಡಗಿತ್ತಿಯರು ಭೂಲೋಕಕ್ಕೆ ಮಾರಲು ಬಂದರೂ ಯಾರೂ ಕೊಳ್ಳದೆ ಇರುವುದು ಅವರಿಗೆ ಬೇಸರವನ್ನು ತರಿಸುತ್ತದೆ. ತಿರುಗಿ ಹೋಗಿ ನಂದನ ತೋಟದ ಕಡೆ ಆ ಹೂವುಗಳನ್ನು ಎಸೆಯುತ್ತಾರೆ. ಈ ರೂಪಕಾರ್ಥದಲ್ಲಿ ಬಳಸಿದ ಕವಿಗಳು ಸಮಾಜದಲ್ಲಿನ ಅತ್ಯಂತ ಸಹಜವಾದ ರೀತಿಯಲ್ಲಿ ಕಂಡ ಮೌನ ಪ್ರವೃತ್ತಿಗೆ ನೊಂದ ಕವಿ ಅವರ ಹೃದಯ ಸಂವೇದನೆಗಳು ಈ ಕಾವ್ಯದಲ್ಲಿ ಅಭಿವ್ಯಕ್ತವಾಗುವುದನ್ನು ಕಾಣಬಹುದು.

ಸಾಂಕೇತಿಕ ನೆಲೆಯಲ್ಲಿಯೂ ಅರ್ಥವನ್ನು ಪಡೆಯುವ ಈ ಕವನವು ತನ್ನದೇ ಆದ ಭಾವಪ್ರಪಂಚದಲ್ಲಿ ಮಹತ್ವವನ್ನು ಪಡೆಯುತ್ತದೆ. ಇದರಿಂದ ಮುಗಳಿ ಅವರ ಕವನಗಳು ದ.ರಾ.ಬೇಂದ್ರೆ, ಚನ್ನವೀರ ಕಣವಿಯವರಂಥ ಕಾವ್ಯಗಳೊಂದಿಗೆ ಸಾಮ್ಯತೆಯನ್ನು ಬಯಸುತ್ತವೆ.

ಚನ್ನವೀರ ಕಣವಿ ಅವರು ರಚಿಸಿರುವ 'ಹೂವು ಹೊರಳುವವು ಸೂರ್ಯನ ಕಡೆಗೆ' ಕವನವನ್ನು ನೋಡುವುದಾದರೆ

"ಹೂವು ಹೊರಳುವವು ಸೂರ್ಯನ ಕಡೆಗೆ
ನಮ್ಮ ದಾರಿ ಬರಿ ಚಂದ್ರನವರೆಗೆ"[೩]

ಕಣವಿ ಅವರ ಈ ಕವನದಲ್ಲಿ ಸೂರ್ಯನಡೆಗೆ ಹೊರಳುವ ಹೂವುಗಳು ಕಂಡುಬಂದರೆ ಮುಗಳಿ ಅವರ ಕವನದಲ್ಲಿ ಹೂವನು ಮಾರುವ ಕಾಯಕದಲ್ಲಿ ಹೂವಾಡಗಿತ್ತಿಯರನ್ನು ರೂಪಕವಾಗಿ ಬಳಸಿಕೊಳ್ಳುತ್ತಾರೆ. ಕಣವಿ ಅವರು ಪ್ರಕೃತಿಗೆ ಹೊಂದಿಕೆಯಾಗಿ ಕಂಡುಬರುವ ವಾಸ್ತವವನ್ನು ಹೊಸದರ್ಶನಕ್ಕೆ ಆಹ್ವಾನಿಸಿಕೊಳ್ಳುವ ರೀತಿಯಲ್ಲಿ ಕಾವ್ಯಗಳನ್ನು ರಚಿಸುತ್ತಾರೆ.

ಮುಗಳಿ ಅವರ 'ಮೀನುಗಾರ'ನಿಗೆ ಈ ಕವನದಲ್ಲಿ ಮನುಷ್ಯನ ದಿನನಿತ್ಯದ ತಾಕಲಾಟ, ಬಯಕೆಗಳು, ಮನಸ್ಸಿನ ಸಂವೇದನೆಗಳು ಜಾನಪದೀಯ ಹಿನ್ನೆಲೆಯಲ್ಲಿ ಮೂಡಿಬಂದಿವೆ.

"ಮೋಹ ಮಾಟಗಳಿಂದ ಸಾವಸೆರೆತರುವ
ಜಾಳಿಗೆಯ ಬೀಸಾಡಿ ಜೀವ ಕೊಳಬೇಡೋ
ಓಲಾಡುತಿಹೆನು ಹಿರಿಹಿಗ್ಗಿ ನಾನಿಲ್ಲಿ
ಜಾಲದಲಿ ಹಿಡಿದೆನ್ನ ನಡೆ ತಡೆಯಬೇಡೋ"(ಪು.೧೨)

ಮನುಷ್ಯನು ದಿನನಿತ್ಯದ ವೇಗದ ಬದುಕಿಗೆ ಒಗ್ಗಿಕೊಳ್ಳುವಂತದ್ದು, ಸುಲಭವಾಗಿ ಅದರಿಂದ ಬಿಡಿಸಿಕೊಳ್ಳಲು ಆಗದಿರುವಂತದ್ದು ಈ ಕವನದಿಂದ ತಿಳಿದುಬರುತ್ತದೆ. 'ಮೀನು' ಆ ಮೀನುಗಾರನನ್ನು ಪ್ರಶ್ನಿಸುವ ಮಾದರಿಯಲ್ಲಿ ಈ ಕವನದಲ್ಲಿ ನಿರೂಪಿತವಾಗಿದೆ. ಮೋಹ ಮಾಟಗಳಿಂದ ಬಲೆಯನ್ನು ಬಿಸಾಡಿ ನನ್ನ ಜೀವನವನ್ನು ತೆಗೆಯಬೇಡಿ! ಎನ್ನುವ ಮೀನು ತನ್ನನ್ನು ರಕ್ಷಸಿಕೊಳ್ಳುವಂತದ್ದು ಒಂದು ಹಂತದಲ್ಲಿ ಕಂಡುಬಂದರೆ, ಕವಿಯು ಈ ಕವಿತೆಯಲ್ಲಿ ಈ ರೂಪಕವನ್ನು ಬಳಸಿಕೊಂಡು ಮತ್ತೊಂದನ್ನೇನೋ ಹೇಳಲು ಹೊರಟಿರುವುದು ತಿಳಿದುಬರುತ್ತದೆ.

ಗೌರೀಶ ಕಾಯ್ಕಿಣಿ ಅವರು ರಸಿಕರಂಗದರ್ಶನದಲ್ಲಿ ಬರೆದ ಲೇಖನದಲ್ಲಿ "ನಿಜವಾಗಿಯೂ ಒಂದೇ ಒಂದು ಕವಿತೆಯಿಂದ ಕವಿಯ ಕೀರ್ತಿಯನ್ನು ಪಡೆಯುವುದಕ್ಕೆ ಇದೊಂದೇ ಕವನವು 'ರಸಿಕರಂಗ'ರಿಗೆ 'ಬಾಸಿಗ' ಕಟ್ಟಲು ಸಾಕು. ಅಷ್ಟು ಉತ್ಕಟತೆಯನ್ನು ಪ್ರಭಾವದ ಪ್ರಕರ್ಷವನ್ನು ಇಲ್ಲಿ ಸಾಧಿಸಲಾಗಿದೆ"[೪] ಎಂದಿದ್ದಾರೆ. ಗೌರೀಶ ಕಾಯ್ಕಿಣಿ ಅವರ ಮಾತನ್ನು ಒಪ್ಪಬಹುದಾದರೂ ಮುಗಳಿ ಅವರ ಎಲ್ಲಾ ಕವನ ಸಂಕಲನಗಳು ಇದಕ್ಕೆ ಅನ್ವಯವಾಗುವುದಿಲ್ಲ. 'ಬಾಸಿಗ' ಮೋಟುಮರ ಮಾತಾಡಿತು' ಈ ಕವನಸಂಕಲನಗಳು ಈ ವ್ಯಾಪ್ತಿಗೆ ಬರುವಂತಹವುಗಳಾಗಿವೆ. 'ಬಾಸಿಗ'ದಲ್ಲಿ ಬರುವ 'ರತ್ನಗಂಬಳಿ' ಎಂಬ ಇನ್ನೊಂದು ಕವನದಲ್ಲಿ

"ನೋಡೆ ಸುಖವು, ಸೊಂಕೆ ಸುಖವು ಸಂತಸ

ಬಾಡಿ ಬೆರೆತ ಜೀವಲತೆಗೆ ನವರಸ"(ಪು.೩೧)

ಜೀವನದ ಪರಮಸುಖದ ಕಲಾನುಭವದ ಅಭಿವ್ಯಕ್ತಿ, ತಾದ್ಯಾತ್ಮದ ಅನಿಸಿಕೆಗಳನ್ನು ಹೊರಹಾಕುವ ಈ ಕವಿತೆ ಜೀವನದ, ಚೈತನ್ಯದ ಪರಿಪಕ್ವವನ್ನು ಸಾಂಕೇತಿಸುವಂತದ್ದಾಗಿದೆ. ಸಾಮಾನ್ಯವಾದ ವಸ್ತುವಿಗೂ ಕಾವ್ಯಾತ್ಮಕತೆಯ ಸ್ಪರ್ಶದ ಮೂಲಕ ವೈಶಿಷ್ಟ್ಯವನ್ನು ಕಲ್ಪಿಸುವ ಮುಗಳಿ ಅವರ ರೂಪಕಾತ್ಮಕ ಶೈಲಿ ಈ ಕವನದಲ್ಲಿ ಮೂಡಿಬಂದಿದೆ.

'ಬಿದಿಗೆ ಚಂದಿರ' ಕವನದಲ್ಲಿ ಪ್ರಕೃತಿಯ ಸೌಂದರ್ಯವನ್ನು ಎದುರುಗೊಳ್ಳುವ ಕವಿತೆಯನ್ನು ಈ ರೀತಿ ರಚಿಸಿದ್ದಾರೆ.

"ಏನು ಈ ಬಿಳಿ ಬೆಳಗಿ

ನವತಾರ! ಬಾಂದಳದಿ

ಏನಂಥ ಕಿರಿದರೊಳು

ಹಿರಿ ಚೆಲುವು"(ಪು.೪೫)

ಎನ್ನುವ ರಸಾಸ್ವಾದ ಪ್ರವೃತ್ತಿಯ ಈ ಕವಿತೆಯು ಕವಿಯ ಮನದ ಇಂಗಿತವನ್ನು ಅಭಿವ್ಯಕ್ತಿಸುತ್ತದೆ. ವಾಯುವಿಹಾರಕ್ಕೆಂದು ಸಂಜೆ ಮಬ್ಬುಗತ್ತಲಲ್ಲಿ ತೆರಳಿದ ಕವಿಗೆ, ಹುಣ್ಣಿಮೆ ಬೆಳದಿಂಗಳ ಚೆಲುವಿಕೆಗೆ ಮನಸೋತ ಕವಿಯು ಈ ಪ್ರಕೃತಿ ಸೌಂದರ್ಯವನ್ನು ಆಶ್ಚರ್ಯಚಕಿತರಾಗಿ ವೀಕ್ಷಿಸಿ ತಮ್ಮ ಹೃದಯದ ಭಾವಾಭಿವ್ಯಕ್ತಿಯನ್ನು ಈ ಕವನದಲ್ಲಿ ಸ್ಪಷ್ಟಪಡಿಸುತ್ತಾರೆ.

'ಹಿರಿಯ ಚಂದವು' ಕವನದಲ್ಲಿ ರಚನೆಗೊಂಡಂತೆ

"ಪ್ರಳಯದಿರುಳು ಸುತ್ತಿಮುತ್ತಿ

ಕಳೆದರೇನು ಕಣ್ಣಹೊಳಪು

ತಿಳಿವು ಸೂರ್ಯ ನಲಿವು ಚಂದ್ರ

ಬೆಳಗೆ ಬೆಳಗು ಆಗಿಸಾಗಿ" (ಪು.೧೦೬)

ಕವಿಯು ಕಾವ್ಯಗಳಲ್ಲಿ ರೂಪಕವಾಗಿ ಬಳಸುವ ಈ ಭಾಷೆಯು ಅನನ್ಯವಾಗಿದೆ. ಈ ಕವಿತೆಗಳಲ್ಲಿ ಆದರ್ಶವಾದ, ಆಶಾಭಾವನೆ ತುಂಬಿರುವಂತದ್ದು, ಪ್ರಳಯದಿಂದ ಆಸ್ತಿಪಾಸ್ತಿ ಹಾನಿ, ಸಾವು ನೋವು ಸಂಭವಿಸಿದರೂ ಅದಕ್ಕೆಲ್ಲ ಅಂಜದೆ ಅಳುಕದೆ ಮುಂದೆ ಸಾಗುವಂತ ಸೂರ್ಯಚಂದ್ರರಿಗೆ ಹೋಲಿಕೆ ನೀಡುವ ಹೊಸಜೀವನವನ್ನು ಕಟ್ಟಿಕೊಳ್ಳುವ ಕಡೆಗೆ, ಕವಿಯ ಆಶಾವಾದ ಈ ಕಾವ್ಯದ ವಸ್ತುವಾಗಿ ಮೂಡಿಬಂದಿದೆ. ಅದೇ ರೀತಿ ಮುಗಳಿ ಅವರು ಮುನ್ನುಡಿಯಲ್ಲಿ ತಿಳಿಸಿರುವಂತೆ "ಜೀವನದಲ್ಲಿಯ ಸೋಲಿನಿಂದ ಹತಾಶವಾದ ಜೀವ, ದುಃಖದಿಂದ ಜರ್ಜರಿತವಾದ ಹೃದಯ ಇವುಗಳೇ ಇಲ್ಲಿಯ ಕವಿ ವ್ಯಕ್ತಿಯನ್ನು ಬಹುಶಃ ಚಿತ್ರಿಸುತ್ತವೆ. ಲೋಕದ ಕರುಣ ಕತೆಯಿಂದಲೂ

ದುರ್ವಿಧಿಯ ಅಣಕಾಟದಿಂದಲೂ ಅತ್ಯಂತ ಅತೃಪ್ತವಾದ ಜೀವವು ಕಲಮಲಗೊಂಡು ಕೂಗಿಕೊಂಡಂತೆ ಇಲ್ಲಿ ಅನಿಸಬಹುದು. ಹಲವು ಕವನಗಳು ನಿರಾಶೆಯನ್ನು ಮೀರಿ ನಿಂತ ಆಶಾವಾದ, ದುಃಖವನ್ನು ಗೆದ್ದುನಿಂತ ಆನಂದ ಇವುಗಳಿಂದ ಉಂಟಾದ ರಸನಿಮಿಷಗಳಲ್ಲಿ ಮೈದೋರಿವೆ. ಪ್ರತ್ಯಕ್ಷವಾದ ಕವನಗಳಿಂದ ಆ ರಸನಿಮಿಷಗಳನ್ನು ನಾನು ಆಯುಷ್ಯದ ಆಶಯನಿಧಿಯೆಂದು ಭಾವಿಸಿದ್ದೇನೆ"(ಮುನ್ನುಡಿ ಪು.೫).

ಈ ಕಾವ್ಯಗಳಿಂದ ಬದುಕಿನ ಸವಾಲುಗಳನ್ನು ಆಹ್ವಾನಿಸಿಕೊಳ್ಳುವ ಪರಿಯೊಂದಿಗೆ ಪ್ರಕೃತಿ ಸೌಂದರ್ಯ, ರಾಷ್ಟ್ರೀಯತೆ, ನಾಡುನುಡಿ ಚಿಂತನೆ, ಭಕ್ತಿ, ಸಂಸಾರ, ವಾತ್ಸಲ್ಯಯುತ ಅಂಶಗಳಿಂದ ಹಾಗೂ ತೆಳುವಾದ ಕನಸುಗಾರಿಕೆಗಳಿಂದ ತುಂಬಿರುವ ಚಿಕ್ಕ ಕವನಸಂಕಲನವಾಗಿದೆ.

'ಅಪಾರ ಕರುಣೆ' ರಂ.ಶ್ರೀ.ಮುಗಳಿ ಅವರ ಎರಡನೇ ಕವನಸಂಕಲನ. ಈ ಸಂಕಲನದಲ್ಲಿ ಪ್ರಕೃತಿ ಪ್ರಪಂಚ ಎಂಬೆರಡು ಶೀರ್ಷಿಕೆಯಡಿಯಲ್ಲಿ ಕಾವ್ಯಗಳನ್ನು ರಚಿಸಿದ್ದಾರೆ. ನವೋದಯ ಕಾಲಘಟ್ಟದಲ್ಲಿ ಕಂಡುಬರುವ ಅವರ ಬಹುತೇಕ ಕವನಸಂಕಲನಗಳಲ್ಲಿ ನಿಸರ್ಗಪ್ರೇಮ, ನಾಡುನುಡಿಗೆ ಸಂಬಂಧಿಸಿದ ಅಂಶಗಳು ಕಂಡುಬರುವಂತೆ ಇಲ್ಲಿಯೂ ಸಹ ಸೂರ್ಯೋದಯ, ಸೂರ್ಯಾಸ್ತ, ಹುಣ್ಣಿಮೆ, ಬೆಳದಿಂಗಳು, ಚಂದ್ರ ಮತ್ತು ಮಳೆಯ ವರ್ಣನೆಗಳ ಬಗ್ಗೆ ಕವಿಯ ಮನದಾಳದ ಇಂಗಿತ ವ್ಯಕ್ತವಾಗಿದೆ. ನಿಸರ್ಗ ಪ್ರೇಮಕ್ಕೆ ಹತ್ತಿರವಾದ 'ಪಡುವಣದ ಬಿರುಗಾಳಿ' ಕಾವ್ಯದಲ್ಲಿ ಬರುವಂತೆ

"ಬಂತು ಬಂತಕೋ ಭೂತ ಬೆಂತರದಂತೆ
ಪಡುವಣದ ಬಿರುಗಾಳಿ
ಚೈತ್ರಮಾಸದ ಕಾಳಿ
ಊದುವೊಲು ಭವೆಂದು ಬೀಸುಬೀಸುತ ಮುಂತೆ
ಸುಡುಬಿಸಿಲ ಕೊಡೆ ಬಿಡಿಸಿ ಬೇಸಗೆಯ ರವಿ ಮರೆಯೆ
ಜಡವು ಜಂಜಡವಾಗೆ
ಚೇತನವು ಕೊರಡಾಗೆ
ಮಂತ್ರ ಹಾಕಿದ ಹಾಗೆ ಮರವೆಲ್ಲ ಮಿಡುಕದಿರೆ" (ಪು.೩)

ರೂಪಾತ್ಮಕವಾದ ಈ ಕಾವ್ಯದಲ್ಲಿ ಪಾಶ್ಚಾತ್ಯರಿಂದ ವಿವಿಧ ಆಯಾಮ ಒಳಗೊಂಡ ಭಾರತವನ್ನು ಪ್ರವೇಶಿಸಿದ ಇಂಗ್ಲಿಷ್ ಶಿಕ್ಷಣ ಭಾಷೆ, ವೈಚಾರಿಕತೆ, ವೈಜ್ಞಾನಿಕತೆ, ಆಧುನಿಕತೆ, ಕೈಗಾರೀಕರಣ ನೀತಿ, ವ್ಯಾಪಾರೀಕರಣ ಮನೋಧರ್ಮ ಮತ್ತು ಸಾಂಸ್ಕೃತಿಕ ಶೋಧನೆ, ಪುನರ್‌ಮೌಲ್ಯೀಕರಣ ಇನ್ನೂ ಮೊದಲಾದ ಮನೋಧರ್ಮವು ಭಾರತೀಯ ಸಂಸ್ಕೃತಿ ಮತ್ತು ಸಾಹಿತ್ಯವನ್ನು ಮುಖಾಮುಖಿಯಾಗುವುದರ ಕುರಿತು ಕವಿಗಳ ಕಲ್ಪನೆಯಲ್ಲಿ ಅರಳಿದ ಈ ಕಾವ್ಯವು ಒಂದು ಅವಿಸ್ಮರಣೀಯ ಚಿತ್ರವಾಗಿದೆ. ಭೂತ ಬೇತಾಳದಂತೆ, ಚೈತ್ರಮಾಸದ ಕಾಳಿಯಂತೆ ಆ ಪಾಶ್ಚಿಮಾತ್ಯ ಗಾಳಿಯು ಭಯಾನಕ ರೀತಿಯಲ್ಲಿ

ಭಾರತವನ್ನು ಪ್ರವೇಶಿಸಿದ್ದರ ಕುರಿತು ಹಾಗೂ ಅದರಿಂದಾದ ಪ್ರಯೋಜನದ ಬಗ್ಗೆ ಕವಿಯು ಈ ಕಾವ್ಯದಲ್ಲಿ ಅಭಿವ್ಯಕ್ತಿಸಿದ್ದಾರೆ.

'ಉಗಾರದ ಹೊಳೆಯ ಬಳಿ' ಕವನದಲ್ಲಿ ತಿಳಿಸುವಂತೆ

"ಚಿಟ್ಟಗುಬ್ಬಿ ಚೀರುತಿರಲು
ಚಣವು ನಿಲದೆ ಹಾರಾಡುತ
ಕಾಗೆಯಸರ ಪಿಕದಿಂಚರ
ಕೇಳುತಿಹವು ಎಲ್ಲ ಬೆರೆತು" (ಪು.೧೦)

ಕವಿ 'ಉಗಾರದ ಹೊಳೆಯ ಬಳಿಯಲ್ಲಿ ಹೋಗುವ ಸಂದರ್ಭದಲ್ಲಿ ಪಕ್ಷಿಸಂಕುಲದ ಕಲರವವನ್ನು ಕೇಳುತ್ತಾರೆ. ಅವುಗಳಲ್ಲಿ ಪ್ರಭೇದ ಬೇರೆ ಬೇರೆ ಇದ್ದರೂ ಅವುಗಳೆಲ್ಲ ಸೇರಿಕೊಂಡು ಪ್ರೀತಿಯುತ ಸಹಬಾಳ್ವೆಯ ಜೀವನ ಸಾಗಿಸುವಂತೆ ಕವಿಗೆ ಕಂಡುಬರುತ್ತದೆ. ಚಿಟ್ಟಗುಬ್ಬಿ ಕ್ಷಣವು ನಿಲ್ಲದೆ ಕೂಗುತ್ತಿರುವುದನ್ನು ಕಾಗೆಗಳು, ಕೋಗಿಲೆಗಳು ಕೇಳುತ್ತಿರುವಂತೆ ಕವಿಗಳಿಗೆ ತೋರಿರುವುದನ್ನು ಸ್ಪಷ್ಟಪಡಿಸಿದ್ದಾರೆ.

ಅದೇ ರೀತಿಯಾಗಿ ಕವನದ ಕೊನೆಯ ಭಾಗದಲ್ಲಿ "ವಿಶ್ವವೆಲ್ಲ ಒಂದುಗೂಡು ವಿಶ್ವದೊಡನೆ ಒಂದುಗೂಡು"(ಪು.೧೧) ಎಂದು ಕವಿಗಳು ತಮ್ಮ ಸಂದೇಶವನ್ನು ರವಾನಿಸುತ್ತಾ, ಶ್ಲೇಷಾರ್ಥವು ಒಳಗೊಂಡಂತೆ ವಿಶ್ವವೆಲ್ಲಾ ಒಂದೇ ಮನೆಯೆಂಬ ಭಾವವು ಇಲ್ಲಿ ವ್ಯಕ್ತವಾಗುತ್ತದೆ. ವಿಶ್ವದೊಡನೆ ಒಂದುಗೂಡುವ ಸಂದೇಶವು ಕಂಡುಬರುತ್ತದೆ. ಕವಿಯ ಆಧ್ಯಾತ್ಮಿಕ ಪ್ರವೃತ್ತಿ, ಪ್ರಕೃತಿಸೌಂದರ್ಯದ ಅನುಭವವನ್ನೇ ಇಟ್ಟುಕೊಂಡು ಲೋಕಾನುಭವವನ್ನು ಮೂಡಿಸುತ್ತದೆ. 'ಮಳೆಗಾಲದ ಮೊದಲ ಮಳೆ' ಎಂಬ ಕವನದಲ್ಲಿ ರಂ.ಶ್ರೀ.ಮುಗಳಿ ಅವರು ಮೊದಲ ಮಳೆಗಾಲವನ್ನು ಕುರಿತು ಈ ರೀತಿ ಕಾವ್ಯ ರಚಿಸಿದ್ದಾರೆ.

"ಎಲ್ಲ ಕಡೆಗೆ ಒಂದೆ ಸವನೆ
ಒಂದೆ ಸಮಯ ಸುರಿದಿದೆ
ಮಳೆಗಾಲದ ಮೊದಲ ಮಳೆಯು
ಮುಗಿಲೆ ತಾನು ಹರಿದಿದೆ."(ಪು.೨೧)

ಮಳೆಗಾಲದ ಪ್ರಾರಂಭದ ಮಳೆಯು ಜನರಿಗೆ ಬೇಸರ ತರಿಸುವಂತದ್ದಾಗಿದೆ. ಏಕೆಂದರೆ ಹದವರಿತ ಭೂಮಿಗೆ ಕಡಿಮೆ ಮಳೆಯಾದರೆ ಸಾಕು. ಆದರೆ ಈ ಮಳೆಯು ಮುಗಿಲು ಹರಿದು ಸುರಿಯುತ್ತಿದೆಯೇನೋ ಎಂಬಂತೆ ಭಾಸವಾಗುವಂತ ಸಂದರ್ಭ ಅರಿತ ಕವಿಯ ಮನಸ್ಸಿಗೆ ಕಿರಿಕಿರಿ ಬೇಸರ ತರಿಸುವಂತೆ ಕಂಡುಬರುತ್ತದೆ. ಅದೇ ರೀತಿ

"ಅಲ್ಲಿ ಇಲ್ಲಿ ನೀರೆ ನೀರು
ಮುಗಿಲ ನೆಳಲ ಮೂಡಿಸೆ
ಬಿಸಿಲ ಬಿರುವಿನಿಂದ ಬೆಂದ
ನೆಲಕೆ ತಂಪನೂಡಿಸೆ" (ಪು.೨೧)

ಮಳೆಗಾಲದ ಮೊದಲ ಮಳೆಯಿಂದ ಬೆಂದ, ಸುಡುವ ಭೂಮಿಗೆ ತಂಪುಗೊಳ್ಳುವುದನ್ನು ಕಂಡು ಕವಿಯ ಮನಸ್ಸು ಹರ್ಷಗೊಂಡು ಮಳೆಗಾಲವನ್ನು ಆಹ್ವಾನಿಸಿಕೊಳ್ಳುವ ಪರಿ ಈ ರೀತಿ ಕಂಡುಬಂದರೆ ಚನ್ನವೀರ ಕಣವಿಯವರ 'ಧಾರವಾಡದಲ್ಲಿ ಮಳೆಗಾಲ' ಕವನದಲ್ಲಿ ಮೊದಲ ಮಳೆಯನ್ನು ಈ ರೀತಿ ಪರಿಚಯಿಸಿದ್ದಾರೆ.

"ಕೊಡೆ ಹಿಡಿದು ಕಾಯಿಪಲ್ಲೆ ತಂದರೆ ಪ್ಯಾಂಟು ಕೂಡಲೆ ಪಚಡಿಯು
ಕಾರು ಹಾಯ್ದರೆ ಬಾಯ್ಗೆ ಸಿಡಿವುದು ಕೆಂಪುಗೋದಿಯ ಕಿಚಡಿಯು"[೫]

ಕಣವಿ ಅವರು ಜಿಟಿಜಿಟಿ ಹಿಡಿದ ಮಳೆಯಿಂದಾಗಿ ಬೇಸರ ಮಾಡಿಕೊಳ್ಳದೆ ತಿಳಿಹಾಸ್ಯ ಮಾಡಿರುವಂತದ್ದು ಈ ಕವನದಲ್ಲಿ ತಿಳಿದುಬರುತ್ತದೆ. ಈ ರೀತಿಯಾಗಿ ಕವಿಗಳು ತಮ್ಮದೇ ಆದ ಶೈಲಿಯಿಂದ ಮುಂಗಾರು ಮಳೆಯನ್ನು ಆಹ್ವಾನಿಸಿಕೊಳ್ಳುವ ಪರಿ ಇದಾಗಿದೆ.

'ಹೊಂಬಿಸಿಲು' ಕವನದಲ್ಲಿ ಸೂರ್ಯೋದಯವನ್ನು ಆಹ್ವಾನಿಸಿಕೊಂಡ ಪರಿಯು ಸೊಗಸಾಗಿ ಮೂಡಿಬಂದಿದೆ.

"ತೆಳು ನೀಲ ಕರಿಬಿಳಿಯ
ಮೋಡಗಳು ಮುಸುಕಿರಲು ಸೂರ್ಯನನು
ಮಂದಗತ್ತಲೆ ತೆರೆಯ
ಬಂತು ಭೇದಿಸಿ ಹೊನ್ನ ಬಿಸಿಲ ಹಸನು" (ಪು.೩೪)

ಸೂರ್ಯೋದಯವು ಲೇಖಕರಿಗೆ ಕಾಣುವ ಪರಿ ಇದಾಗಿದೆ. ಇದು ಬೆಳಗಿನ ಜಾವ ಪೂರ್ವದಿಕ್ಕಿನ ಮೋಡಗಳ ಮರೆಯಿಂದ ನಿಧಾನಗತಿಯಲ್ಲಿ ಮೇಲಕ್ಕೆ ಬರುವ ಆ ಸೂರ್ಯನನ್ನು ಚಿನ್ನದ ನಕ್ಷತ್ರಕ್ಕೆ ಹೋಲಿಸಿ ಸ್ವಾಗತಿಸುವ ಪರಿ ಈ ರೀತಿ ಕಂಡರೆ, 'ಬೆಳಗು' ಕವನದಲ್ಲಿ ಬೇಂದ್ರೆಯವರು "ಮೂಡಲ ಮನೆಯ ಮುತ್ತಿನ ನೀರಿನ ಎರಕಾವಾ ಹೊಯ್ದಾ ನುಣ್ಣನೆ ಎರಕಾವಾ ಹೊಯ್ದ"[೬] ಎಂದು ಆ ಮುಂಜಾನೆಯ ಸೂರ್ಯೋದಯ ಮೂಡಲ ಮನೆಗೆ ಮಂಜಿನ ಹನಿಗಳು ಮುತ್ತಿನ ಹನಿಗಳಿಂದ ಹರಡಿದ ರೀತಿಯಲ್ಲಿ ಕವಿಗೆ ಕಂಡುಬಂದಿದೆ. ಈ ಕವಿತೆಯು ಹೊಸತನವನ್ನು ಆಹ್ವಾನ ಪಡೆದುಕೊಳ್ಳುವ ನಿಟ್ಟಿನಲ್ಲಿ ರಚನೆಗೊಂಡಿದೆ. ಅದೇ ರೀತಿ 'ಒಂದು ಬೆಳಗು' ಕವನದಲ್ಲಿ "ಮನೆಯ ಪಕ್ಕದಲ್ಲಿ ಹಕ್ಕಿಗಳು ಚಿಲಿಪಿಲಿ ಗುಟ್ಟಿದಾಗ"[೭] ದಿಂದ ಅವರ ಕಾವ್ಯಮುಂಜಾನೆಯ ಸೂರ್ಯೋದಯದ ಈ ವರ್ಣನೆ ಕಂಡುಬರುತ್ತದೆ. ಈ ಮೂರು ಕವಿಗಳು ರಮ್ಯತೆಯಿಂದ

ಕೂಡಿದ ಹಾಗೂ ಪ್ರಕೃತಿಯ ಮಡಿಲಲ್ಲಿ ಅಡಗಿರುವ ಸಾಹಿತ್ಯ ಸಿರಿಯನ್ನು ತಮ್ಮದೇ ಆದ ಶೈಲಿಯಲ್ಲಿ ಬಳಸಿ ಅಭಿವ್ಯಕ್ತಿಸಿದ್ದಾರೆ. ಮುಗಳಿ ಅವರ ಈ ಕೆಳಗಿನ ಕವನದಲ್ಲಿ ಅನ್ನದ ಬಗೆಗಿನ ಪ್ರಸ್ತಾಪವು ಈ ರೀತಿ ಮೂಡಿಬಂದಿದೆ.

"ಅನ್ನ! ಅನ್ನ! ಕೊಟ್ಟರೆ ಚೆನ್ನ!
ಕೊಡದಿರೆ ನಾವೂ ನೀವೂ ಸಾವಿನ ಬಾಯಿಗೆ ಅನ್ನ!
ನಮಗಿಲ್ಲದೆ ನೀವುಣ್ಣುವ ತುತ್ತು
ನಮ್ಮಯ ವಿಷದುಸಿರಿನ ಹೆಬ್ಬಾವಿನ ಹುತ್ತು" (ಪು.೬೧)

ಸಮಾಜಮುಖಿ ಚಿಂತನೆ, ಗಾಂಧೀ ತತ್ವಗಳನ್ನೊಳಗೊಂಡ ಈ ಕವನವು ಅಂದಿನ ಬಡತನ, ಹಸಿವಿನ ಚಿತ್ರಣವನ್ನು ತಿಳಿಸುವಂತದ್ದಾಗಿದೆ. ದೇಶದ ಅನ್ನ ಸಮಸ್ಯೆ ಎದ್ದು ಕಾಣುವ ಅಂಶಗಳು, ಉನ್ನತವಾದ ದೇಶಭಕ್ತಿ, ಉತ್ಕಟವಾದ ಭಾವಾವೇಶ ಕೂಡಿದ ಈ ಕಾವ್ಯದಲ್ಲಿ ಅನ್ನದ ಬಗ್ಗೆ ಪ್ರಶ್ನೆ ಮಾಡಲು ಮುಂದಾಗುತ್ತಾರೆ. 'ಅನ್ನ' ದೊರೆಯದೆ ನಿರ್ಲಕ್ಷ್ಯಕ್ಕೆ ಒಳಗಾದವರ ಬಗ್ಗೆ ಮರುಕ ವ್ಯಕ್ತಪಡಿಸುವರು. ಅಂದು ಅನ್ನಛತ್ರದಲ್ಲಿ ಬದುಕುವ ಬಡಜನರ ಬಗ್ಗೆ ಮೇಲ್ವರ್ಗದವರು ನಿಷ್ಕಾಳಜಿ ಮನೋಭಾವ ತೋರಿದ್ದರಿಂದಲೋ ಏನೋ ಅವರ ಕಾವ್ಯ ಬಂಡಾಯ ರೀತಿಯಲ್ಲಿ ವ್ಯಂಗ್ಯ ಮಾಡುವ, ಪ್ರಶ್ನಿಸುವ, ಸಹಾಯಹಸ್ತವನ್ನು ಚಾಚಿದಂತೆ ಭಾಸವಾಗುತ್ತದೆ.

ಬೇಂದ್ರೆ ಅವರ 'ಅನ್ನ' ಕುರಿತು 'ಚಿಂತನ' ಕವನದ ಜೊತೆಗೆ ಸಮೀಕರಿಸುವುದಾದರೆ,

"ಅನ್ನ ಬಾಳಾಗಿ ಕಾಮಕೆ ಹೋಳಾಗಿ ಮನಕೆ ಆಳಾಗಿ ಉಸಿರೆಳೆದು
ಬಾಳಲ್ಲ ಬದುಕಲ್ಲ! ಜೀವ ಜೀವಕೆ ಉದ್ದೀಪನವಾದುದೇ ಜೀವನವು!"[೮]

ಬದುಕೆಂಬ ಮೂರು ದಿನದ ಆಟದ ಪ್ರೀತಿಯಲ್ಲಿ ಹೃದಯ ಹೃದಯವನ್ನು ಹತ್ತಿರವಾಗಿಸುವ ಬೇಂದ್ರೆ ಅವರ ಈ ಕವನವು ಮನೋಜ್ಞವಾಗಿ ಮೂಡಿಬಂದಿದೆ. ಕೌಟುಂಬಿಕ ಜೀವನದಲ್ಲಿ ಪ್ರೀತಿಪೂರ್ವಕವಾದ ಸಂಬಂಧವನ್ನು ಬೆಸೆಯುವಂತಹ ಬೇಂದ್ರೆ ಅವರ ಈ ಕವನಕ್ಕೂ ಮುಗಳಿ ಅವರ 'ಅನ್ನ' ಕವನಕ್ಕೂ ಸಮೀಕರಿಸಿದರೆ ಸಾಮ್ಯತೆ ಇರುವುದು ಕಂಡುಬರುತ್ತದೆ. ಅಲ್ಲಿ 'ಅನ್ನ'ದ ಹಸಿವು, ಇಲ್ಲಿ 'ಪ್ರೀತಿ'ಯ ಹಸಿವು ಚಿತ್ರಿತಗೊಂಡಂತಿದೆ.

'ಗಾಂಧಿಕಿರಣ' ಎಂಬ ಶೀರ್ಷಿಕೆಯಡಿಯಲ್ಲಿ ರಚಿಸಿರುವ ಮುಗಳಿ ಅವರ ಈ ಕವನದಲ್ಲಿ

"ಅಂದಿಗಿಂದು ಮೊಳಗುತಿಹುದು
ಒಂದೆ ದೈವವಾಣಿಯು;
ಪ್ರೀತಿಯೊಂದೆ ಎಲ್ಲ ನೀತಿ
ವಿಶ್ವವಾಳ್ವ ರಾಣಿಯು" (ಪು.೮೧)

"ಇಂತುಸಾರಿ ಜಗವು ಬೆಳಗಿ
ಹೊರಟಿತಯ್ಯ ಕಿರಣವು
ಕೊಲ್ಲಲಿಲ್ಲ ಅದನು ಸುತ್ತಿ
ಮತ್ತಿ ಬಂದ ಮರಣವು" (ಪು.೮೩)

ಸ್ವಾತಂತ್ರ್ಯ ಪೂರ್ವದಲ್ಲಿಯೇ ಕಾವ್ಯರಚನೆಯಲ್ಲಿ ತೊಡಗಿದ ಕವಿ ಮುಗಳಿ ಅವರು ಅಂದಿನ ನವೋದಯ ಪರಿಸರದ ಇತರೆ ಕವಿಗಳಂತೆಯೇ ದೇಶಪ್ರೇಮ, ಸ್ವಾತಂತ್ರ್ಯ ಹೋರಾಟ, ನಾಡುನುಡಿ ಚಿಂತನೆ ಮತ್ತು ರಾಷ್ಟ್ರೀಯ ನಾಯಕರಾದ ಗಾಂಧೀಜಿ ಅವರ ಆದರ್ಶ ತತ್ವಗಳಿಗೆ ಪ್ರಭಾವಿತರಾದವರು. ಅಹಿಂಸಾ ತತ್ವದ ಮೂಲಕ ಭಾರತೀಯರಿಗೆ ಸ್ವಾತಂತ್ರ್ಯ ದಕ್ಕಿಸಿಕೊಡುವಲ್ಲಿ ಶ್ರಮಿಸಿದ ಗಾಂಧೀಜಿ ಅವರ ಬಗ್ಗೆ ಪ್ರೀತಿಪೂರ್ವಕವಾಗಿ ರಚಿಸಿರುವ ಕಾವ್ಯ ಇದಾಗಿದೆ. ಅದೇ ರೀತಿ ಚನ್ನವೀರ ಕಣವಿಯವರ "ಗಾಂಧೀ' ಕವನದೊಂದಿಗೆ ಸಮೀಕರಿಸುವುದಾದರೆ,

"ಕೂಟು ಕೂಟಿನಲಿ ನಿನ್ನ ನಗುವ ಮೂರ್ತಿ
ಕಂಡು ಕಾಣದ ಹಾಗೆ ದಾಟಿ ಹೋಗುತ್ತೇವೆ."

ಕಣವಿ ಅವರು ಈ ಕವನದಲ್ಲಿ ಗಾಂಧೀಜಿ ಅವರ ಬಗ್ಗೆ ತಮ್ಮ ಇಂಗಿತವನ್ನು ಈ ರೀತಿ ವ್ಯಕ್ತಪಡಿಸುತ್ತಾರೆ. ಭಾರತವು ಬ್ರಿಟಿಷರಿಂದ ಬಂಧವಿಮೋಚನೆಗೊಂಡು ಶಾಂತಿ, ಪ್ರೀತಿ, ಸ್ನೇಹಮೂಲದ ಸತ್ಯಾಗ್ರಹದ ತಾತ್ವಿಕತೆಯನ್ನು ಕಟ್ಟಿಕೊಡುತ್ತದೆ. ಕೊನೆಯ ಭಾಗವು ಸಮಕಾಲೀನ ಸಾಮಾಜಿಕ ವಾಸ್ತವದಲ್ಲಿ ಗಾಂಧಿ ತತ್ವಾದರ್ಶಗಳು ಬದುಕಿನಿಂದ ಕಣ್ಮರೆಯಾಗುವಂತಹ ವಿಷಾದವನ್ನು ಧ್ವನಿಸುತ್ತದೆ. ಹಾಗೆಯೇ ಅನೀತಿ-ಅನ್ಯಾಯದ ಆತ್ಮವಿನಾಶಕ್ಕೆ ಪ್ರತಿಯಾಗಿ ಪ್ರೀತಿ, ಸ್ನೇಹ, ಸತ್ಯದ ದಾರಿಯನ್ನು ಪರಿಚಯಿಸಿದ ಗಾಂಧಿ ಮಾನವ ಘನತೆ-ಗೌರವದ ಸಂಕೇತವಾಗಿ ಈ ಕವನದಲ್ಲಿ ಕಂಡುಬರುತ್ತದೆ. ಈ ಇಬ್ಬರ ಕವಿಗಳಲ್ಲಿ ಸಾಮ್ಯತೆ ಒಂದೇ ಅನಿಸಿದರೂ ಶೈಲಿ ಬೇರೆ ಬೇರೆಯಾಗಿರುವುದು ಕಂಡುಬರುತ್ತದೆ.

'ಓಂ ಅಶಾಂತಿಃ' ಇದು ಮುಗಳಿ ಅವರ ಮೂರನೇ ಕವನಸಂಕಲನ. ಈ ಸಂಕಲನದಲ್ಲಿ ಹೆಚ್ಚು ಕವನಗಳು ವ್ಯಕ್ತಿಗತವಾದ ಆತ್ಮನಿವೇದನೆಯಾಗಿವೆ. ಗೆಳೆಯ ವಿನಾಯಕ, ಮಹಾತಾಯಿ, ಅರವಿಂದರ ಮಕರಂದವೇ! ಸೋದರತ್ತೆ, ಮಗಳು ಪರಿಮಳೆ, ಜೀವನದ ಜೊತೆಗಾತಿ ಇತ್ಯಾದಿ ಕವನಗಳಲ್ಲಿ ವ್ಯಕ್ತಿಗತ ಅಂಶಗಳು ಭಾವಗೀತೆಗಳಲ್ಲಿ ಒಡಮೂಡಿವೆ. ಇವರ ಇತರೆ ಕವಿತೆಗಳಾದ 'ನಿನ್ನ ಕಣ್ಣು', 'ಓಂ ಅಶಾಂತಿ', 'ಅಗ್ನಿದಿವ್ಯ' ಮುಂತಾದ ಉಲ್ಲೇಖಿತಗೊಂಡ ಕವಿತೆಗಳಲ್ಲಿ ಛಂದಸ್ಸುಗಳ ಒಳಹರಿವು ಕಂಡುಬರುತ್ತದೆ.

ಓಂ ಅಶಾಂತಿಃ ಕವನದಲ್ಲಿ ರಚನೆಗೊಂಡಂತೆ,

"ನನಗಿಲ್ಲ ಶಾಂತಿ! ಯಾರಿಗೂ ಇಲ್ಲ ಶಾಂತಿ!

ಬೇಕಾದುದೆನಗೆ ದೊರೆತಿಲ್ಲ, ಬೇಡಾದುದೆನ್ನ ತೊರೆದಿಲ್ಲ
ನನಗೆ ಸಲ್ಲುವುದೆನ್ನ ಬಳಿ ಬರಲೊಲ್ಲದು, ಬಾಳು ನಿಲ್ಲದು" (ಪು.೮೩)

ಅಂದಿನ ಕಾಲದ ಬಡತನ, ಹಸಿವು, ಬರಗಾಲದ ಪರಿಸ್ಥಿತಿಗಳನ್ನು ಅರಿತರಿತು ಮನನೊಂದ ಕವಿಯು ಬಹುಬೇಗ ನೆಮ್ಮದಿ ಶಾಂತಿ ಈ ಸ್ಥಳದಲ್ಲಿ ಲಭಿಸಲಿ ಎಂದು ತಮ್ಮ ಭಾವನೆಗಳನ್ನು ವ್ಯಕ್ತಪಡಿಸುತ್ತಾರೆ.

'ಅರವಿಂದರ ಮಕರಂದವೇ!' ಈ ಕವನವು ಭಾರತ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸುವಂತೆ ಪ್ರೇರಣಾತ್ಮಕವಾದ ಅಂಶಗಳನ್ನು ಈ ಕವಿತೆ ಒಳಗೊಂಡಿದೆ.

"ದಶದಿಕ್ಕುಗಳ ಗಾಳಿಗಾಳಿಯಲಿ
ಜೀವಜೀವದ ಭಾವದಾಳದಲಿ
ದಿವ್ಯ ಜೀವನರಸದ ತೊರೆಯಾಗಿ
ಹರಿದು ಬಾ ಅರಿವಿನಾ ನೆರೆಯಾಗಿ" (ಪು.೬೫)

ಈ ಕವನದಲ್ಲಿ ಭಾರತಕ್ಕೆ ಸ್ವಾತಂತ್ರ್ಯ ದೊರಕಿಸಿಕೊಡುವ ನಿಟ್ಟಿನಲ್ಲಿ ಜನರನ್ನು ಒಗ್ಗೂಡಿಸುವಂತೆ ಕವಿಗಳು ಅರವಿಂದರಿಗೆ ಕರೆ ನೀಡುತ್ತಾರೆ. ಅರವಿಂದರ 'ವಂದೇ ಮಾತರಂ' ಪತ್ರಿಕೆ ಮೂಲಕ, ಅಂದಿನ ಜನಪರ ಸಮಾಜಮುಖಿ ಚಿಂತನೆಗಳನ್ನೊಳಗೊಂಡ ಅವರ ಲೇಖನಗಳು ಅಂದಿನ ಜನರ ಮನಸ್ಸನ್ನು ತಟ್ಟಿರುತ್ತವೆ. ಆದ್ದರಿಂದ ಕವಿ ಅವರು ಅರವಿಂದರಿಗೆ, ಸ್ವಾತಂತ್ರ್ಯದ ಕಹಳೆ ಮೊಳಗಿಸಿ ಜನರನ್ನು ಪ್ರೇರೇಪಿಸುವ ಲೇಖನ ಮೂಡಿಬರಲಿ ಎಂಬಂತೆ ಈ ಕವನ ರಚಿತಗೊಂಡಿದೆ.

ಕವಿಮಿತ್ರರಾದ ವಿ.ಕೃ.ಗೋಕಾಕರ ಕುರಿತು ರಚಿಸಿರುವ ಈ ಕವಿತೆಯು ಇಬ್ಬರ ಸ್ನೇಹಭಾವ ಒಡನಾಟ, ಆತ್ಮೀಯತೆಯ ದ್ಯೋತಕವಾಗಿ ಒಡಮೂಡಿದ ಈ ಕವಿತೆಯು ವ್ಯಾಪಕವಾಗಿ ರಚನೆಗೊಂಡಿದೆ.

"ನಿನ್ನ ಕಾರ್ಯ ನಿನ್ನ ಕೀರ್ತಿ
ಕೂಡಿ ಹಿಗ್ಗಿ ಕನ್ನಡಕ್ಕೆ ಗುಡಿಯ ಕಟ್ಟಲಿ
ನಿನ್ನ ಆತ್ಮಪ್ರಜ್ಞೆ ಮಾಗಿ
ಶ್ರೇಯ ಪಥದಿ ಸಾಗಿ ಗುರಿಯ ಬೇಗ ಮುಟ್ಟಲಿ"(ಪು.೩೭)

ರಂ.ಶ್ರೀ.ಮುಗಳಿ ಮತ್ತು ವಿ.ಕೃ.ಗೋಕಾಕರು ಸಾಂಗಲಿಯ ವಿಲ್ಲಿಂಗ್ಡನ್ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿ ಕಾರ್ಯ ನಿರ್ವಹಿಸುವ ವೇಳೆಗಾಗಲೆ ಇವರ ಸ್ನೇಹ ಹೆಮ್ಮರವಾಗಿ ಬೆಳೆದು ವರುಣಕುಂಜ ವೇದಿಕೆಯ ಮೂಲಕ ಸಾಹಿತ್ಯ ಅಭಿರುಚಿ ಮೂಡಿಸಿದ ಗೆಳೆಯರಿವರು. ವಿನಾಯಕರೊಂಡನೆ ವ್ಯಕ್ತಿತ್ವ ಕುರಿತು ಚರ್ಚಿಸಿರುವ ಇನ್ನೊಂದು ಕವನ ಈ ರೀತಿ ಇದೆ.

"ನೀನು ತೀಕ್ಷ್ಣ, ನಾನು ಸೂಕ್ಷ್ಮ
ನಮ್ಮ ಮತಿಯ ಮಟ್ಟ ಬೇರೆ ಬೇರೆ ಭಾವನೆ

ನನಗೆ ಕರ್ಮ, ನಿನಗೆ ಜ್ಞಾನ
ನಾನು ತಪದಿ ನಿಷ್ಠ, ನೀನು ಸಹಜಯೋಗನೆ" (ಪು.೩೮)

ಕವಿಯು ಮನದಾಳದ ತುಮುಲವನ್ನು ಹೊರಹಾಕುವ ಗೆಳೆಯನ ಸ್ನೇಹಪರತೆಯನ್ನು ಈ ಕವಿತೆಯಲ್ಲಿ ಬಣ್ಣಿಸಲಾಗಿದೆ. ಇಬ್ಬರು ಕವಿಗಳ ವ್ಯಕ್ತಿತ್ವ, ಮನಸ್ಸಿನ ಸಂವೇದನೆ, ಸೂಕ್ಷ್ಮ ಮನಸ್ಥಿತಿ, ಯೋಚನಾಲಹರಿ, ವೃತ್ತಿ ಬದುಕಿನಲ್ಲಿ ಕಂಡುಕೊಂಡ ಅನುಭಾವಗಳು, ವಿನಾಯಕರ ಕವನಗಳ ಬಗ್ಗೆ ಇದ್ದಂತ ಪ್ರೀತಿ ಕಾಳಜಿ, ಗೌರವಭಾವ, ಮಧುರವಾದ ಮಾತುಗಾರಿಕೆ, ವಾತ್ಸಲ್ಯ ಭಾವನೆಗಳನ್ನೊಳಗೊಂಡ ಈ ಕವನದಲ್ಲಿ ರೂಪಕ, ಹೋಲಿಕೆ ಪ್ರತಿಮೆಗಳಂತಹ ಅಂಶಗಳು ಬಳಕೆಗೊಂಡಿವೆ.

'ದೀಪಸ್ತಂಭ' ಕವನದಲ್ಲಿ
"ಸುತ್ತೆಲ್ಲ ನೀರೆ ನೀರಾದ ಕಡಲಿನ ಹರವು
ಎತ್ತಲೂ ಏರೇರಿ ಬರುವ ತೆರೆ ಸಾವಿರವು
ಇದು ಏನು ಯಾಕೆಂದು ತಿಳಿವ ಬಗೆನಾವೆಗಳು
ಮನದಿ ಸುಳಿದಾಗಿಹವು ಬರಿ ಮೂಡುಮುಳುಗುಗಳು" (ಪು.೧೦)

ಕವಿಯು ಸಮುದ್ರದಂಡೆಯಲ್ಲಿ ನಿಂತು ವೀಕ್ಷಿಸಿದಾಗ ಕಂಡುಬರುವ ಸೂರ್ಯೋದಯವು ದೀಪಸ್ತಂಭದಂತೆ ಹಾಗೂ ಒಂದರ ಹಿಂದೆ ಒಂದರಂತೆ ಬರುವ ತೆರೆಗಳನ್ನು ಲೆಕ್ಕಿಸದೆ ಸಾಗುವ 'ದೋಣಿ' ಅಂಜದೆ ಅಳುಕದೆ ಮುಂದೆ ಮುಂದೆ ಸಾಗುತ ಆ ಸೂರ್ಯನು ಉದಯಿಸುವ ದಿಕ್ಕಿನೆಡೆಗೆ ಹತ್ತಿರವಾಗುವ ದೋಣಿ ಕವಿಯ ಮನಸ್ಸಿಗೆ 'ದೀಪಸ್ತಂಭ'ದಂತೆ ಕಂಡು ಆ ಪ್ರಕೃತಿವರ್ಣನೆಯಲ್ಲಿ ತೊಡಗುತ್ತಾರೆ.

ಚನ್ನವೀರ ಕಣವಿ ಅವರು ತಮ್ಮ 'ಕನ್ನಡ ಜ್ಯೋತಿಯ ದೀಪಗಳು' ಕವನದಲ್ಲಿ "ಒಂದೇ ಮಾನವ ಜಾತಿ ಸ್ತಂಭ ದೀಪಿಕೆಯಂತೆ ಪ್ರಜ್ವಲಿಸೆ ಕನ್ನಡಕ್ಕೊಡೆಯನದೆ ಪೆಂಪು"[೧೦] ಕವನದೊಂದಿಗೆ ಮುಗಳಿ ಅವರ ಕವಿತೆಯನ್ನು ಸಮೀಕರಿಸಿದರೆ, ಕಣವಿ ಅವರ ಕಾವ್ಯ ಜಾತ್ಯತೀತವಾಗಿ ಆದರ್ಶ ಮನೋಭಾವದಿಂದ ಒಂದೇ ಸ್ತಂಭದ ದೀಪಿಕೆಯಡಿಯಲ್ಲಿ ಜೀವಿಸಲು ಮುಂದಾದಾಗ ಮಾತ್ರ ಕನ್ನಡದ ಪರಿಮಳವು ಹೆಚ್ಚಾಗುವುದು ಎಂಬಂತೆ ಭಾವಾಭಿವ್ಯಕ್ತಗೊಂಡಿದೆ. ಇಲ್ಲಿ ಇಬ್ಬರು ಕವಿಗಳು ಒಂದೇ ಶೀರ್ಷಿಕೆಯಡಿಯಲ್ಲಿ ಕಾವ್ಯವನ್ನು ರಚಿಸಿದರೂ ಸಹ ಆಶಯ ಬೇರೆ ಬೇರೆಯಾಗಿ ಕಂಡುಬರುತ್ತದೆ.

'ಪ್ರೀತಿ ಮಾತೆ' ಶೀರ್ಷಿಕೆಯ ಕವನದಲ್ಲಿ ಮುಗಳಿ ಅವರು ರಚಿಸಿರುವ ಈ ಕವನದಲ್ಲಿ ಕನ್ನಡ ನಾಡಿನ ಚಿಂತನೆ, ತಾಯಿನುಡಿಯ ಒಲುಮೆ, ಮಮಕಾರ, ಪ್ರೀತಿ ಕರುಣೆ ದ್ಯೋತಕವಾಗಿ ಈ ಕವನದಲ್ಲಿ ಮೂಡಿಬಂದಿದೆ.

"ಮೈಮನದಿ ನೆರೆತುಂಬಿ
ಕಣ್ಣಿನಲಿ ತೆರೆಚಿಮ್ಮಿ
ಮಾತಿನಲಿ ಹೊರಹೊಮ್ಮಿ
ಪ್ರೀತಿಮಾತೇ ಓ ಪ್ರೀತಿಮಾತೆ" (ಪು.೭೭)

"ನಿನ್ನ ಕಾಣಿಕೆಯೊಡನೆ
ಕಣ್ದೆರೆಯಿತೀ ಬಾಳು
ನಿನಗಾಗಿ ಮೀಸಲವು
ಜನುಮ ಜನುಮದ ತಪವು" (ಪು.೭೭)

ಮುಗಳಿ ಅವರು ಕನ್ನಡ ನಾಡು ನುಡಿ ಚಿಂತನೆ ಬಗ್ಗೆ ಪ್ರೀತಿಪೂರ್ವಕವಾಗಿ ಕನ್ನಡಾಂಬೆಯನ್ನು ಮನದಲ್ಲಿ ಆಹ್ವಾನಿಸಿಕೊಳ್ಳುವ ಬಗೆ ಹಾಗೂ ಕನ್ನಡ ತಾಯಿಯ ಬಗ್ಗೆ ಇರುವ ಅಪಾರ ಕಾಳಜಿ ಈ ಕಾವ್ಯದಲ್ಲಿ ಎದ್ದುಕಾಣುವಂತಹ ಅಂಶವಾಗಿದೆ. ಕವಿಯ ಮನದಾಳದ ಭಾವನೆಗಳು ಈ ಕವನಗಳ ಮೂಲಕ, ಕನ್ನಡ ನಾಡಿನಲ್ಲಿ ಹುಟ್ಟಿದ ನಾನು ಧನ್ಯನು, ಈ ನಿನ್ನ ಕಾಣಿಕೆಯನ್ನು ಸ್ವೀಕರಿಸಿ ನಿನಗಾಗಿ ಈ ಜೀವನವನ್ನು ಮುಡಿಪಾಗಿಟ್ಟು ನಿನ್ನ ಏಳಿಗೆಗಾಗಿ ಶ್ರಮಿಸುವೆ ಎನ್ನುವ ಮನದಾಳದ ಇಂಗಿತ ಇಲ್ಲಿ ವ್ಯಕ್ತವಾಗಿದೆ.

ಇದಕ್ಕೆ ಅನ್ವಯದ ರೀತಿಯಲ್ಲಿ ಬರುವ ಬೇಂದ್ರೆ ಅವರ 'ನಾದಲೀಲೆ' ಕವನ ಸಂಕಲನದ 'ನಾನು ಬಡವಿ' ಕವನವನ್ನು ನೋಡುವುದಾದರೆ, "ನಾನು ಬಡವಿ ಆತ ಬಡವ ಒಲವೆ ನಮ್ಮ ಬದುಕು, ಬಳಸಿಕೊಂಡೆವದನೆ ನಾವು ಅದಕು ಇದಕು ಎದಕು"[೧೦] ಕವನದಲ್ಲಿ ಬೇಂದ್ರೆ ಅವರು ಬಡತನವನ್ನು ಮೀರಿ ನಿಲ್ಲುವ ಪ್ರೀತಿ, ಶ್ರೀಮಂತಿಕೆಯ ವಿವರವನ್ನು ಅರ್ಥ ತುಂಬಿ ಎತ್ತಿತೋರಿಸುವ ಈ ಕವನವು ಪ್ರೀತಿ ದ್ಯೋತಕವಾಗಿ ಒಡಮೂಡಿದೆ. ಇಲ್ಲಿ ಬೇಂದ್ರೆ ಅವರು ಮನುಷ್ಯರ ಬಗ್ಗೆ ಇರುವ ಕಾಳಜಿ ಪ್ರೀತಿಯ ಬಗ್ಗೆ ಪರಿಚಯಿಸಿದರೆ, ಮುಗಳಿ ಅವರು ಕನ್ನಡ ತಾಯಿಯ ಏಳಿಗೆ ನಾಡು ನುಡಿ ಚಿಂತನೆಗಳು, ಕಾಳಜಿಪರ ಅಂಶಗಳು ಈ ಕವನದಿಂದ ಕಂಡುಕೊಳ್ಳಲಾಗಿದೆ.

'ನವಮಾನವ' ಮುಗಳಿ ಅವರ ನಾಲ್ಕನೇ ಕವನಸಂಕಲನವಾಗಿದೆ. ಈ ಕವನಸಂಕಲನ ಧೀರ್ಘವಾದ ಮೂರು ನೀಳ್ಗವನಗಳನ್ನು ಒಳಗೊಂಡಿದೆ. ಐವತ್ತು ಪುಟಗಳಷ್ಟು ವಿಸ್ತೃತಗೊಂಡ ಈ ಕವನ ಮುಗಳಿ ಅವರು ೫೦ನೇ ವರ್ಷಕ್ಕೆ ಕಾಲಿಟ್ಟಾಗ ಬರೆಯಲು ಪ್ರಾರಂಭಿಸಿ ಮುಗಿಸಲು ಹತ್ತು ವರ್ಷಗಳ ಕಾಲ ತೆಗೆದುಕೊಂಡಿತೆನ್ನುವುದನ್ನು ಮುನ್ನುಡಿಯಲ್ಲಿ ಸ್ಪಷ್ಟಪಡಿಸುತ್ತಾರೆ. ಅವರ 'ಜೀವನ ರಸಿಕ' ಆತ್ಮಚರಿತ್ರೆಯಂತೆಯೇ ಸ್ವದರ್ಶನ, ಸ್ವವಿಮರ್ಶೆ, ಸ್ವಸಮೀಕ್ಷೆ ಮಾಡಿಕೊಳ್ಳುವಂತಹ ಅಂಶಗಳು ಈ ಕವನದಿಂದ ತಿಳಿದುಬರುತ್ತದೆ. ಈ ಕವನದ ಮುನ್ನುಡಿಯಲ್ಲಿ ಹೇಳಿಕೊಂಡಂತೆ "ಇದು ವಿಶೇಷವಾದ ಅರ್ಥದಲ್ಲಿ ನನ್ನ ಆತ್ಮಚರಿತ್ರೆ ಅಂದರೆ ಆತ್ಮದ ಸೋಲು ಗೆಲುವುಗಳ, ಹಿಗ್ಗು-ಕುಗ್ಗಿನ ಕತೆ. ಇದರಲ್ಲಿ ಅನುಸುತವಾಗಿ 'ನವಮಾನವ'ನಾಗಬೇಕೆಂಬ ನನ್ನ ಗುರಿ, ಅದಕ್ಕಾಗಿ ನಾನು

ಮಾಡಿದ ಸಾಧನೆ, ಅದರ ಯಶ-ಅಪಯಶ, ಈ ಶತಮಾನದಲ್ಲಿ ನವಮಾನವನಿಗಾಗಿ ನಡೆದ ಶೋಧ, ಅದರ ಸಾಫಲ್ಯ, ವೈಫಲ್ಯ ಈ ಅಂಶಗಳು ಆತ್ಮಚರಿತ್ರೆಯ ಅವಶ್ಯ ಅಂಗವಾಗಿ ಬೆರೆತಿರುತ್ತದೆ"(ಮುನ್ನುಡಿ).

ಈ ಕವನದಲ್ಲಿ ಮುಗಳಿ ಅವರು ಇಂದಿನ ವರ್ತಮಾನದ ಸ್ಥಿತಿಗತಿಗಳ ಬಗೆಗೆ ಸಮಕಾಲೀನ ಬದುಕಿನ ಮೌಲ್ಯಗಳ ಬಗೆಗೆ ಅವರು ಆತ್ಮತೃಪ್ತಿ ವ್ಯಕ್ತಪಡಿಸುತ್ತಾರೆ. ಹಾಗಾಗಿಯೇ ಹೊಸತನ ಬಯಸುತ್ತಾ ತಮ್ಮೊಳಗೆ ಜಾಗೃತರಾಗುವ ಮುಗಳಿ ಹೊಸ ಹುಟ್ಟಿನೊಂದಿಗೆ ಅನಿವಾರ್ಯವಾಗಿ ಬೆಸೆದುಕೊಂಡಿರುವ ನೀರೀಕ್ಷೆ, ಒತ್ತಡ, ಇರಿಸು-ಮುರುಸು, ಅಸಹನೆ, ಸಣ್ಣತನ, ಹೊಣೆಗೇಡಿತನಗಳು ಈ ಕವನದಲ್ಲಿ ಹಾದುಹೋಗುವಂತಹ ಅಂಶಗಳಾಗಿವೆ.

"ಏನು ನನ್ನಯ ಗುರಿಯು? ಯಾವುದೆನ್ನಯ ದಾರಿ? ಕವಲೊಡೆದ ಕೂಟದಲಿ ನಿಂತು ಕೇಳಿದೆನೀ

ಕೂಟ ಪ್ರಶ್ನೆಯನು ಒಳಗೊಳಗೆ ಇಳಿಧಾತ್ಮಶೋಧದಲಿ ತಳಬುಡವನು ಅಲುಗಾಡಿಸಿದೆನು"(ಪು.೫)

ಈ ಕವನದಲ್ಲಿ ಕವಿಯು ಮನುಷ್ಯನೊಳಗಿರುವ ದ್ವಂದ್ವಗಳು, ತುಮುಲಗಳ ಬಗ್ಗೆ ತಿಳಿಸುವ ಈ ಕವನ, ಅವರ 'ಕೂಟಪ್ರಶ್ನೆ' ಕತೆಯಲ್ಲಿ ಬರುವ 'ಗಣೇಶ' ಪಾತ್ರಧಾರಿಯ ಮೂಲಕ ಈ ಪ್ರಶ್ನೆಗಳಿಗೆ ಉತ್ತರ ಕಂಡುಕೊಂಡಂತಹ ಮನುಷ್ಯನ ಅಂತರಾಳದ ತುಮುಲಗಳನ್ನು ಪರಾಮರ್ಶಿಸುವಂತದ್ದು ಈ ಕತೆಯಲ್ಲಿ ತಿಳಿದುಬರುತ್ತದೆ.

ವಸಂತಕುಮಾರ ತಾಳ್ತಜೆ ಅವರು ಹೇಳುವಂತೆ, "ಬಿದ್ದ ನಕ್ಷತ್ರವಾದ ನೋವು, ಬಿದ್ದರೂ ಗೆದ್ದ ನಗೆಯಿಂದ ಏಳುಗನಸನು ಹೊತ್ತು ಹೊರಟ ನಕ್ಷತ್ರವಾಗುವ ಹುಮ್ಮಸ್ಸುಗಳ ಸಮತೋಲನ ಈ ಕವನದ ಉಲ್ಲೇಖಾರ್ಹ ಅಂಶವಾಗಿದೆ. ಇದು ಸ್ವಂತದ ಅನ್ವೇಷಣೆಯ ಪ್ರಯತ್ನವಾಗಿರುವಂತೆಯೇ ಸ್ವಂತದೊಳಗಿನ ನಿರೂಪಣೆಯೂ ಆಗಿದೆ. ಹಾಗಾಗಿ ಅಲ್ಲಿ ಅವಮಾನದ ಪರಿಸರವೊಂದು ಬಯಲಿಗೆ ಬರುತ್ತದೆ. ಸದಾ ಮುಖವಾಡಗಳ ಹಿಂದೆಯೇ ಬೈತಿರಿಸಿಕೊಳ್ಳುವ ಪ್ರವೃತ್ತಿಯ ಬಗೆಗಿನ ಆಕ್ರೋಶಕ್ಕೆ ಅಭಿವ್ಯಕ್ತಿ ಸಿಗುತ್ತದೆ. ಸುತ್ತಲಿನ ಕೆಡುಕುಗಳನ್ನು ಮರೆಸುವ ಕ್ಷೇಮಭಾವದ ಹಂಬಲಕ್ಕೆ ಧ್ವನಿ ದೊರೆಯುತ್ತದೆ"[೨] ಎಂದಿದ್ದಾರೆ.

"ಜಿನುಗೆಳೆಯ ಬಿಳಿಬಿಳಿಯ ಬಲೆಯನು ಬೀಸಿ
ನೀರುಗಾಲಿನ ತಿವಿತದಲಿ ಸೆಳೆಸೆಳೆದು ಕೀಸಿ
ಜೀವ ನೊಣವನು ಕುಕ್ಕಿ ಕವಳಿಸುವ
ಕ್ರೂರ ವಿಧಿಯ ಜೇಡಗಿನ್ನೊಂದು ಗೆಲುವು" (ಪು.೧೫)

ಜೇಡದ ಹುಳುವು ತನ್ನ ಜೊಲ್ಲಿನಿಂದ ತನ್ನ ಮನೆಯನ್ನು ನೆಯ್ದುಕೊಳ್ಳುತ್ತದೆ. ಈ ಮನೆಯಲ್ಲಿಯೇ ಆಹಾರವಾಗಿ ನೊಣಗಳು-ಕ್ರಿಮಿಕೀಟಗಳು ಸಿಲುಕಿಕೊಳ್ಳುತ್ತವೆ. ಈ ರೀತಿಯಾದ

ಪ್ರಕೃತಿವಿಸ್ಮಯವನ್ನು ನೋಡಿದ ಕವಿಯು ಈ ವಸ್ತುವನ್ನು ರೂಪಕವಾಗಿ ತಮ್ಮ ಕವನದಲ್ಲಿ ರಚಿಸುತ್ತಾರೆ.

ಸದಾ ಮನುಷ್ಯನು ಕುತಂತ್ರ ಬುದ್ಧಿ, ಮುಖವಾಡಗಳ ಹಿಂದೆಯೇ ಅಡಗಿಕೊಳ್ಳುವಂತಹ ಪ್ರವೃತ್ತಿಯನ್ನು ಪ್ರಶ್ನಿಸುವಂತಹ, ನಮ್ಮ ಸುತ್ತ ನಡೆಯುವ ಕೆಡುಕುಗಳನ್ನು ತಪ್ಪಿಸುವಂತಹ ಮನೋಭಾವ, ಕ್ಷೇಮಭಾವ ಈ ಕವಿತೆಗಳಲ್ಲಿ ಕಂಡುಬರುತ್ತದೆ. "ನಾನು ನವಮಾನವನಾಗುವೆನು ಮುಂದೆ ಸಾಗುವೆನು"(ಪು.೫೦) ಎಂಬಂತೆ ದೀರ್ಘವಾದ ಕವನವು ಹೊಸತನವನ್ನು ಬಯಸುತ್ತಾ ಕವನ ಕೊನೆಗಾಣುತ್ತದೆ. 'ನವಮಾನವ' ಕವನದ ಕಾವ್ಯಮೌಲ್ಯಕ್ಕಿಂತ ಹೆಚ್ಚಾಗಿ ತನ್ನ ಆತ್ಮವೃತ್ತಾತ್ಮಕ ನಿಲುವು, ಕವಿಯ ಮನಸ್ಸಿನ ಒಳಸುಳಿಗಳ ಸುಳಿದಾಟ, ಏರಿಳಿವು, ಗೊಂದಲ, ತಾಕಲಾಟಗಳ ವ್ಯಾಖ್ಯಾನವಾಗಿ ಮಹತ್ವವನ್ನು ಪಡೆಯುತ್ತದೆ.

'ಜಾತಕ ವೃತ' ಎಂಬ ಎರಡನೇ ಭಾಗದಲ್ಲಿ ಕವಿ ಅವರ ಸಾಹಿತ್ಯ, ವಿಷಯ ವಸ್ತು ಆದರ್ಶೀಕರಣದ ಹಿನ್ನೆಲೆಯಲ್ಲಿಯೇ ಇರುವುದರಿಂದ ಈ ಕವಿತೆಯಲ್ಲಿ ಈ ಅಂಶಗಳನ್ನು ಕಾಣಬಹುದಾಗಿದೆ.

"ಬೇಡಿ ಪಡೆದು ದಿವ್ಯರಸವ ಜಾತಕ
ಮಾಡು ನಿನ್ನ ಜನ್ಮಜಾಲ ಸಾರ್ಥಕ
ಜಗದ ನೀರು ಹರಿದು ಬಂದು ಕರೆದರು
ಮುಗಿಲ ಹನಿಯ ಪಡೆವವರಿಗೆ ತಡೆದಿರು" (ಪು.೫೬)

ಎನ್ನುವ ಆದೇಶಾತ್ಮಕ ರೀತಿಯಲ್ಲಿ ಈ ಕವಿತೆ ಮುಂದೆ ಸಾಗುತ್ತದೆ. ಮನಸ್ಸಿನ ದ್ವಂದ್ವತೆಯ ತುಮುಲಗಳನ್ನು ಪರಾಮರ್ಶಿಸಿಕೊಳ್ಳುವ ನೆಲೆಯಲ್ಲಿ ಕವಿತೆಯ ಆಶಯ ಕಂಡುಬರುತ್ತದೆ. ಆದರ್ಶಗುಣ ಹೊತ್ತ ಈ ಕವನವು 'ಹುತಾತ್ಮತನ'ದ ಪ್ರತಿಪಾದನೆಯೊಂದಿಗೆ ಕೊನೆಗೊಳ್ಳುತ್ತದೆ.

ಈ ಸಂಕಲನದ ಮೂರನೇ ಹಂತದಲ್ಲಿ ಕಂಡುಬರುವ ಕವನ 'ಜಕ್ಕವ್ವ ಜಾಣೆ' ಈ ಕವನವು ಜಾನಪದೀಯ ಧಾಟಿಯಲ್ಲಿ ಇರುವ ಕಥನಕವನವಾಗಿದೆ. ನಮ್ಮ ಪೂರ್ವಿಕರ ಜನಪದ ಸಾಹಿತ್ಯದಲ್ಲಿ ಹೇರಳವಾಗಿ ಕಂಡುಬರುವ ಬಲಿದಾನ ವಸ್ತುವನ್ನು ಇದರಲ್ಲಿ ಬಳಸಿಕೊಳ್ಳಲಾಗಿದೆ. ಇದರ ನಿವೇದನೆಯಲ್ಲಿ ತಿಳಿಸಿದ ಮುಗಳಿ ಅವರು "ಇಂದಿನ ಹೊಸ ರಾಷ್ಟ್ರ ನಿರ್ಮಾಣದ ಸಂದರ್ಭದಲ್ಲಿ ಇಂಥ ಕತೆಗಳು ಹೊಸ ಅರ್ಥದಲ್ಲಿ ಸ್ಫೂರ್ತಿದಾಯಕವಾಗುತ್ತವೆ. ಅಂತೆಯೇ ಈ ಕವನವನ್ನು ಬರೆಯಬೇಕೆಂದು ಪ್ರೇರಣೆಯಾಯಿತು" (ನಿವೇದನ ಪು.VIII) ಎಂಬುದರ ಬಗ್ಗೆ ತಿಳಿಸುತ್ತಾರೆ. ಮುಗಳಿ ಅವರ ಈ ಕವನಗಳಲ್ಲಿ ದೇಸೀಯ ಸೊಗಡು ಸೊಗಸಾಗಿ ಮೂಡಿಬಂದರೂ ವಸ್ತು ನಿರೂಪಣೆ, ತಂತ್ರಗಳಲ್ಲಿ ಹೊಸತೇನೂ ಕಂಡುಬರುವುದಿಲ್ಲ.

'ಮೋಟಮರ ಮಾತಾಡಿತು' ಮುಗಳಿ ಅವರ ಕೊನೆಯ ಕವನಸಂಕಲನವಾಗಿದೆ. ಪ್ರಕೃತಿಯ ಮಡಿಲಲ್ಲಿ ಮೋಟಮರ ಮತ್ತು ಹಸಿರು ಮಾವಿನ ಮರ ಮಾತನಾಡುವ ಶೈಲಿಯಲ್ಲಿ ಸಂಭಾಷಣೆ ಮೂಡಿಬಂದಿದೆ.

"ಬಟ್ಟಬಯಲ ನಟ್ಟನಡುವೆ ನಿಂತಿದೆ ಒಂದು ಮೋಟಮರ
ಈ ಮೊದಲು ಏನಿತ್ತು ಹೇಗಿತ್ತು ಯಾರಿಗಿಂದು ತಾನೆ ಗೊತ್ತು?
ಈಗಂತು ಒಣಒಣ ಭಣಭಣ ಮೋಟಮರ" (ಪು.೧)

ಕವಿಯು ಬಯಲಿನ ಒಂದು ಮೋಟಮರದ ಸ್ಥಿತಿಗತಿಯನ್ನು ನೋಡುತ್ತಾರೆ. ಜೋತುಬಿದ್ದ ಕೊಂಬೆ, ಸಪ್ಪೆಮೋರೆ, ಮೊಂಡುಮೂಗು, ಕುರುಡುಗಣ್ಣುಗಳನ್ನುಳ್ಳ ಈ ಮೋಟುಮರ ಬಲು ಹಿಂದೆಯೇ ತುಂಬುಜೀವನ ಬದುಕಿ ಬಾಳಿದ ಮರವಾಗಿದೆ. ಇಂದು ಇದು ಅಸ್ತಿಪಂಜರದಂತೆ ಸ್ಥಿರವಾಗಿ ನಿಂತಿದೆಯಲ್ಲಾ! ಎಂದು ಆಶ್ಚರ್ಯ ವ್ಯಕ್ತಪಡಿಸಿರುವುದನ್ನು ಈ ಕವನದಿಂದ ಕಂಡುಕೊಳ್ಳಲಾಗಿದೆ.

ಮೋಟುಮರವನ್ನು ನೋಡಿ ಪಕ್ಕದ ತೋಟದಲ್ಲಿರುವ ಹಸಿರು ಮಾವಿನ ಮರ(ಹಣ್ಣೆಲೆ ಉದುರುವಾಗ ಚಿಗುರೆಲೆ ನಗುವ ರೀತಿಯಲ್ಲಿ) ತನ್ನ ಚೆಲುವಿಕೆ, ತನ್ನ ಪ್ರಯೋಜನದ ಬಗ್ಗೆ, ತನ್ನಲ್ಲಿರುವ ಅಹಂಕಾರ, ಹಮ್ಮುಬಿಮ್ಮಿನ ಬಗ್ಗೆ ಈ ಕಾವ್ಯದಲ್ಲಿ ಅಭಿವ್ಯಕ್ತಗೊಂಡಿದೆ.

"ಏನದರ ಬಿಂಕ ಬೆಡಗು
ರೆಂಬೆ ಕೊಂಬೆ ಕೆಂಪು ತಳಿರು" (ಪು.೨)

ಹಚ್ಚ ಹಸಿರಿನಿಂದ ಕಂಗೊಳಿಸುವ ಮಾವಿನ ಮರವು ಮೋಟುಮರಕ್ಕೆ ವ್ಯಂಗ್ಯ ಮಾಡುವ ರೀತಿಯಲ್ಲಿ ನನ್ನಿಂದ ಮನುಕುಲಕ್ಕೆ ಎಷ್ಟೊಂದು ಪ್ರಯೋಜನವಿದೆ! ಎಂಬಂತೆ, ಹಸಿರಿದೆ, ಹೂವಿದೆ, ಹಣ್ಣಿದೆ, ಎಲ್ಲವೂ ನನ್ನಲ್ಲಿದೆ. ನಿನ್ನಲ್ಲೇನಿದೆ? ಬರಿ ಕೊರಡು ಮಾತ್ರ ಇದೆ! ಎಂಬಂತೆ ಮೋಟುಮರಕ್ಕೆ ವ್ಯಂಗ್ಯ ಮಾಡಿದ ಹಸಿರು ಮಾವಿನ ಮರದ ತಾರತಮ್ಯ ಭಾವವಿರುವಂತದ್ದು ಈ ಕಾವ್ಯದಿಂದ ಅಭಿವ್ಯಕ್ತವಾಗುತ್ತದೆ.

ಈ ಮಾತಿಗೆ ಮೋಟುಮರಕ್ಕೆ ಸಿಟ್ಟುಬಂದು,

"ಹೌದು ನಾನು ಮೋಟು ಮರ
ಹೇಳಿಕೇಳಿ ಬರಿ ಕೊರಡು"(೩)

ಈ ರೀತಿಯಾಗಿ ತನ್ನ ಅಸಹಾಯಕತೆಯನ್ನು ಹೊರಹಾಕುತ್ತಾ

"ಆದರೆ ನಿನ್ನನ್ನು ನೀನು ಅರಿತಿರುವೆಯ ಬಂದ ಮಾವೇ?
ಯಾವುದೋ ಕಣ್ಣಿಗೆಟುಕದ ಕೇಡಿಹುಳು
ಒಳಹೊಕ್ಕು ಅರಿಯದೊಲು ಕೊರೆಯುತಿರೆ

ಸಿರಿಗನ್ನಡ ಗ್ರಂಥಾಲಯ
ಕನ್ನಡ ವಿಶ್ವವಿದ್ಯಾಲಯ,ಹಂಪಿ

ಪುಡಿಪುಡಿಯಾಗಿ ಉದುರುತಿವೆ ನಿನ್ನ ರೆಂಬೆ ಕೊಂಬೆಗಳು
ನಿನ್ನೆಲೆಯ ದೇಟುದೇಟಿನಲಿ
ಹಳೆಯ ಹೊಸ ಜಿಡ್ಡುಗಳು ಮಡ್ಡುಗಳು
ಒಡ್ಡು ಕಟ್ಟಿವೆ ಹರಿವ ಹೊನಲಿಗೆ" (ಪು.೩)

ಹಸಿರು ಮಾವಿನ ಮರದ ವ್ಯಂಗ್ಯಮಾತಿಗೆ ಪ್ರತೀಕಾರವಾಗಿ ಮೋಟುಮರ ಈ ಕಾವ್ಯದಲ್ಲಿ ಸ್ಪಷ್ಟಪಡಿಸುತ್ತದೆ. ನಾನು ಉತ್ತಮ ಸ್ಥಿತಿಯಲ್ಲಿದ್ದೇನೆಂದು ಪರಿಭಾವಿಸಿಕೊಂಡು ವ್ಯಂಗ್ಯ ಮಾಡದಿರು. ಕೇಡುಹುಳು ಒಮ್ಮೆ ಹೊಕ್ಕಿತೆಂದರೆ ನಿನ್ನ ಸ್ಥಿತಿಯು ಅಯೋಮಯವಾಗುತ್ತದೆ. ಅದಕ್ಕೆ ಯಾರಿಗೂ ಕೆಡುಕು ಬಯಸದೆ ವ್ಯಂಗ್ಯ ಮಾಡದೆ ಸುಮ್ಮನಿರು ಎಂದು ಮೋಟುಮರವು ಹಸಿರು ಮಾವಿನ ಮರಕ್ಕೆ ನೀತಿಪಾಠ ಹೇಳಿದಂತೆ ಕಾವ್ಯದಲ್ಲಿ ಮೂಡಿಬಂದಿದೆ.

ಲೇಖಕರ ನಿರೂಪಣೆ ಮತ್ತು ಶೈಲಿ ದೇಸಿಮಯವಾಗಿದೆ. ಮುನ್ನುಡಿಯಲ್ಲಿ ಕಾವ್ಯದ ಬಗ್ಗೆ ಈ ರೀತಿ ಹೇಳಿಕೊಂಡಿದ್ದಾರೆ. 'ಇಂದಿನ ಸಂಕೀರ್ಣ ಜೀವನದಲ್ಲಿ ವ್ಯಷ್ಟಿ ಸಮಷ್ಟಿಗಳು ಹೇಗೆ ನನಗೆ ಕಂಡಿವೆ ಎಂಬುದರ ಕಾವ್ಯಾತ್ಮಕ ಚಿತ್ರಣಗಳಾಗಿವೆ. ಇದಲ್ಲದೆ ಕೆಲವದರಲ್ಲಿ ನನ್ನ ಅಂತರಂಗದ ವಿವಿಧ ಅನುಭವಗಳು, ವ್ಯಕ್ತಿ ವಿಶಿಷ್ಟವಾದ ರೀತಿಯಲ್ಲಿ ಮೂಡಿಬಂದಿವೆ. ಇಲ್ಲಿ ನಿರಾಶೆಯ ನೋವುಗಳಿವೆ. ಇಲ್ಲಮೆಯ ಸೊಲ್ಲುಗಳಿವೆ. ಜೊತೆಗೆ, ಭಯ-ಅಭಯ, ಈ ಎರಡರ ಸಮ್ಮಿಶ್ರ ಪಾಕವೂ ಇದೆ. ಇರುವೆನೆಂದಿಗೂ ಇರುವಂತೆಯೇ ಇರುವೆ ಎಂಬ ದೊಡ್ಡ ಹರವಿನ ಕವಿತೆಯಲ್ಲಿ ಮರಣವನ್ನು ಅಲ್ಲಗಳೆಯದೆಯೂ ಅದನ್ನು ಮೀರಿ ನಿಲ್ಲುವ ಜೀವನ ಶ್ರದ್ಧೆ ಮೈದಾಳಿದೆ' ಎಂದಿದ್ದಾರೆ.

132017

ಮುಗಳಿ ಅವರು 'ನಡೆದಾಡುವ ವಿಶ್ವಕೋಶ' ಎಂಬ ಸರಳವಾದ ಕವನವನ್ನು ರಚಿಸಿದ್ದಾರೆ. ಸಣ್ಣ ಮುದ್ದು ಮಗುವಿನ ಪ್ರೀತಿ ಮಮಕಾರ ಹಾಗೂ ಅವನ ತುಂಟಾಟವನ್ನು ಈ ಕವನದಲ್ಲಿ ಬಣ್ಣಿಸಿದ್ದಾರೆ.

"ಮೂಲೆ ಮೂಲೆಗೆ ಇವನು ಸಾಕಿದ ಹುಲಿ, ಕರಡಿ, ನಾಯಿ, ಕೋತಿ
ಇವನು ಮೆಚ್ಚಿ ಚಚ್ಚಿದ ರೋಜಿ, ಮಾಧುರಿ ಎಂಬ ಸಂಗಾತಿ
ಬಾಲು, ಕೋಲು, ಹರಿದೊಗೆದು ಪತ್ರಿಕೆಗಳ ಸಾಲು ಸಾಲು
ಇವನು ಸೂರೆ ಮಾಡಿದ ಕಸ, ಓ ಅದೊಂದು ಅದ್ಭುತ ರಸ" (ಪು.೪೦)

ಮಗುವು ಮನೆಯಲ್ಲಿ ವಿಪ್ಲವ(ಕ್ರಾಂತಿ) ಮಾಡಿದಂತೆ ಕವಿಗಳಿಗೆ ಅನಿಸುತ್ತದೆ. ಅವನ ಆಟಿಕೆ ವಸ್ತುಗಳೊಂದಿಗೆ ಅವನದೆಯಾದ ಒಡನಾಟದಿಂದ ಇರುವುದನ್ನು ಗಮನಿಸಿದ ಕವಿ ಈ ಕವಿತೆ ರಚಿಸಿದಂತಿದೆ. ಆ ಮಗುವಿನ ಬಾಲಭಾಷೆಯೊಂದಿಗೆ ಕವಿಯು ಸಹ ಮಗುವಿನಂತಾಗಿ ಅವನ ಬಾಲಕ್ರೀಡೆಯನ್ನು ನೋಡುತ್ತಾ ಮಂತ್ರಮುಗ್ಧರಾಗುತ್ತಾರೆ.

ಕವಿಯು 'ದೋಣಿದೀಪ' ಎಂಬ ಕವನ ರಚಿಸಿ ಇದರ 'ದೋಣಿ'ಯನ್ನು ರೂಪಕವಾಗಿ ಬಳಸಿಕೊಂಡಿದ್ದಾರೆ.

"ತೇಲಾಡುತಿಹುದು ಜೋಲಾಡುತಿಹುದು
ತೆರೆಯ ಮೇಲೊಂದು ಕಿರುದೋಣಿದೀಪ
ಯಾವಾಗಲೊಮ್ಮೆ ಆರಿ ಬಿಡುವುದಿದು
ಎನ್ನುವೊಲು ಅದಕೆ ತಾಗಿರಲು ಶಾಪ. (ಪು.೫೧)

ಕವಿಯು ಮನುಷ್ಯನ ಮನುಷ್ಯತ್ವದ ಬಗ್ಗೆ ತಿಳಿಹೇಳುವ ಅದನ್ನು ಪ್ರಶ್ನಿಸಿಕೊಳ್ಳುವ ಮಾದರಿಯಲ್ಲಿ ಈ ಕವಿತೆಯನ್ನು ರಚಿಸಿದ್ದಾರೆ. 'ದೋಣಿ'ಯನ್ನು ರೂಪಕವಾಗಿ ಬಳಸಿಕೊಂಡ ಕವಿಯು ಮನುಷ್ಯ ಜೀವನವು ನೀರಿನ ಮೇಲಿರುವ ಕಿರಿದಾದ ದೀಪದಂತೆ. ಅದು ಯಾವತ್ತಾದರೂ ಆರಿಬಿಡಬಹುದು. ನಾವು ಬದುಕಿರುವವರೆಗಾದರೂ ಒಳ್ಳೆಯ ಕೆಲಸಗಳಲ್ಲಿ ತೊಡಗಿಸಿಕೊಳ್ಳಬೇಕೆಂಬುದು ಕವಿತೆಯ ಆಶಾಭಾವವಾಗಿದೆ.

'ದೀಪದ ಹುಳು' ಕವಿತೆಯಲ್ಲಿ ಕವಿಯು ಮುಸ್ಸಂಜೆಯ ಮಬ್ಬುಗತ್ತಲಲ್ಲಿ ಕಂಡುಬರುವ ದೀಪದ ಹುಳುವಿಗೆ ಆಕರ್ಷಿತರಾಗಿ ಆ ಹುಳುವಿನ ವರ್ಣನೆ ಮಾಡುತ್ತಾರೆ.

"ಕಂಡಿರೇನು ಕಂಡಿರೇನು ದೀಪದ ಹುಳ ದೀಪದ ಹುಳ?
ಏಸೊ ಬಣ್ಣ ವೇಸೊ ನಕ್ಷೆ ಸಾವಿರಾರು ರೂಪಸಂಕುಳ!
ಯಾವ ಮಾಯಾಗಾರ ಮೇಲೆ ಹೊಚ್ಚಿಮಗೆ ಮೇಲುದಗಳ
ತೊಡರ ಸುತ್ತು ಹಾರಿ ಕುಣಿಯೆ ಕಳಿಸುತಿರುವ ನರ್ತಕಿದಳ?
ಕಂಡಿರೇನು?" (ಪು.೫೩)

ಪ್ರತಿಯೊಂದು ಜೀವಿಯ ವೈವಿಧ್ಯತೆಯ ಬಗ್ಗೆ ಮನಗಂಡ ಕವಿಯು ದೀಪದ ಹುಳುವನ್ನು ನೋಡಿ ಪ್ರಕೃತಿಯ ವಿಸ್ಮಯತೆಯನ್ನು ಆಶ್ಚರ್ಯಕರ ರೀತಿಯಲ್ಲಿ ಪ್ರಶ್ನಿಸುತ್ತಾರೆ. ದಿನನಿತ್ಯದ ಜಂಜಾಟದ ಬದುಕಿಗೆ ಒಗ್ಗಿಕೊಂಡು ಪ್ರಕೃತಿಯ ವಿಸ್ಮಯಗಳ ಕುರಿತು ಕವಿಯು ಒಂದೊಂದೇ ಎಳೆ ಎಳೆಯಾಗಿ ಬಿಚ್ಚಿಡುತ್ತಾರೆ. ಆ ದೀಪದ ಹುಳುವಿನ ಸೌಂದರ್ಯವನ್ನು ಕವಿಯು ವರ್ಣಿಸಿದ್ದಾರೆ.

"ಏನು ಸೋಜಿಗ" ಕವಿತೆಯು ಹೆಮ್ಮರವಾಗಿ ಬೆಳೆದು ನಿಂತ ಮರವನ್ನು ಮಗನ ರೀತಿಯಲ್ಲಿ ಸಂಬಂಧಸೂಚಕದಂತೆ ಬಳಸಿಕೊಂಡು ಮರವೇ ಮಾತನಾಡಿರುವ ಧಾಟಿಯಲ್ಲಿ ಮೂಡಿಬಂದಿದೆ.

"ಆಗು ಮಗುವೆ ನೀ ಬೆಳೆಯುತ
ಎದೆಯ ಹರವು-ಹದ ಹಳೆಯುತ
ನೊಂದು ನರಳುವೆಲ್ಲ ನರರ
ಆಸರೆಯಹ ಇಂಥ ಹೆಮ್ಮರ" (ಪು.೫೪)

ಪರಿಸರ ಪ್ರಜ್ಞೆ ಮೂಡಿಸುವಂತಹ ಈ ಕವಿತೆಯ ಸಂಭಾಷಣೆಯಲ್ಲಿ ವೈವಿಧ್ಯತೆ ಇದೆ. ಮರವನ್ನು ರೂಪಕವಾಗಿ ಬಳಸಿಕೊಂಡು ಮನುಕುಲಕ್ಕೆ ಮತ್ತೊಂದೇನೋ ಹೇಳಲು ಹೊರಟಿರುವ ಕವಿಯು ಮನುಷ್ಯನು ಆಲಸ್ಯದಿಂದ ಬದುಕದೆ ತನ್ನ ದಿನನಿತ್ಯದ ಕೆಲಸಗಳಲ್ಲಿ ಶ್ರದ್ಧೆ, ಭಕ್ತಿ, ತಾಳ್ಮೆಯಿಂದ ತನ್ನನ್ನು ತಾನು ತೊಡಗಿಸಿಕೊಳ್ಳಬೇಕು ಎನ್ನುವ ನಿದರ್ಶನ ಸೂಚಿಸಿದಂತಿದೆ.

ತಾಯಿಯ ಅಂತಃಕರಣ ಸಂವೇದನೆಯನ್ನು ತಿಳಿಸುವ ಚಿತ್ರಣ ಈ ಕವಿತೆಯಲ್ಲಿ ಸೊಗಸಾಗಿ ಮೂಡಿಬಂದಿದೆ.

> "ದಟ್ಟವಾದ ಕತ್ತಲೆಯ ರಾತ್ರಿಯಲಿ ಅವಳೇಕೆ ಅಳುವಳೆಂದು
> ನನಗೆಂದಿಗೂ ತಿಳಿಯಲೇ ಇಲ್ಲ
> ಅವಳ ಬಾಳೆಲ್ಲವೂ ಬೀಸಿದ ಹಿಟ್ಟಾಗಿತ್ತು
> ಅವಳ ಮೈಯೆಷ್ಟು ಮುಟಿಗೆಯಾಗಿತ್ತು
> ಅಷ್ಟೆ ನೋವಿನ ನಿರಿಗೆಗಳ ನಕ್ಷೆಯಾಗಿತ್ತು" (ಪು.೫೮)

ಬಾಲ್ಯದ ದಿನಗಳಿಂದಲೂ ತಾಯಿಯ ಪ್ರೀತಿ ಮಮಕಾರ ಉಂಡು ಬೆಳೆದ ಆ ಹುಡುಗನಿಗೆ, ಮುಂದೊಂದು ದಿನ ತಾಯಿಯ ಮೇಲೆ ಪ್ರೀತಿಯ ಕನಿಕರ ಮೂಡುತ್ತದೆ. ದಿನನಿತ್ಯದ ಕಷ್ಟದ ಜೀವನ ಬಂಡಿ ಸಾಗಿಸಲು ತಾಯಿ ನೊಂದು ಬೆಂದಿರುವುದು ಅರಿವಿಗೆ ಬರುತ್ತದೆ. ಹುಡುಗನ ಸ್ಥಾನದಲ್ಲಿ ನಿಂತು ತಾಯಿ ಬಗ್ಗೆ ಯೋಚಿಸುವ ರೀತಿಯಲ್ಲಿ ಕವಿತೆಯ ಆಶಯ ಅಭಿವ್ಯಕ್ತಗೊಂಡಂತಿದೆ. ಬಂಡಾಯದ ಪ್ರವೃತ್ತಿಯನ್ನೊಳಗೊಂಡ ಈ ಕವಿತೆ ದಿನನಿತ್ಯದ ಕಷ್ಟಕೋಟಲೆಯಲ್ಲಿ ಹಸಿವು ಬಡತನದಲ್ಲಿ ಬೇಯುತ್ತಿರುವ ತಾಯಿಯ, ತಾಯ್ತನ ಮನಸ್ಸಿನ, ಸಂವೇದನೆಯುಳ್ಳ ಈ ಕವಿತೆ ಮೌನ ಪ್ರತಿಭಟನೆಗೆ ಇಂಬು ಕೊಟ್ಟಂತಿದೆ.

ಮುಗಳಿ ಅವರ ಕಾವ್ಯದ ವೈಶಿಷ್ಟ್ಯ ವೈವಿಧ್ಯಮಯವಾಗಿದೆ. ಅವರ ಬಹುತೇಕ ಕವನಗಳಲ್ಲಿ ಪ್ರಕೃತಿ ವರ್ಣನೆ, ಸೂರ್ಯೋದಯ, ಸೂರ್ಯಾಸ್ತ, ಬೆಳಕು, ಹುಣ್ಣಿಮೆ, ಮುಂಗಾರು ಮಳೆ, ಅದೇ ರೀತಿ ದೇಶಪ್ರೇಮ, ಭಕ್ತಿ, ಶೌರ್ಯ, ಹುಟ್ಟು, ಸಾವು, ಸುಖ, ದುಃಖ, ಶಾಂತಿ, ವ್ಯಕ್ತಿನಿಷ್ಠತೆ, ಗಾಂಧೀಕರಣ, ಗ್ರಾಮೋದ್ಧಾರಗಳಂತಹ ಅಂಶಗಳು ಸರಳವಾಗಿ, ಸಹಜವಾಗಿ ಉತ್ಸಾಹಯುತ ಪ್ರೀತಿಯಂತಹ ಅಂಶಗಳನ್ನೊಳಗೊಂಡಿವೆ.

ಮುಗಳಿ ಅವರ ಬಹುತೇಕ ಕವನಗಳು ಕಾವ್ಯದ ಸೌಂದರ್ಯದ ದೃಷ್ಟಿಯಿಂದ, ಸಾಹಿತ್ಯಕ ಮೌಲ್ಯಗಳ ದೃಷ್ಟಿಯಿಂದ ಬಹಳಷ್ಟು ಎತ್ತರಕ್ಕೆ ಏರದಿದ್ದರೂ ಮಧ್ಯಮಗುಣಗಳನ್ನು ಕಾಪಾಡಿಕೊಳ್ಳುವಂತಹವುಗಳಾಗಿವೆ. ಕನ್ನಡದ ಕಳಕಳಿ, ಸಮಾಜೋದ್ಧಾರದ ಆಸಕ್ತಿಗಳು ಮನುಷ್ಯ ಮನುಷ್ಯನನ್ನು ಬೆಸೆಯುವ ಸಂಬಂಧಗಳು ಗಮನಾರ್ಹವಾದ ಸಂಪರ್ಕ ಸೇತುವೆಗಳಾಗಿ ಇವರ ಕಾವ್ಯಗಳಲ್ಲಿ ನಿರೂಪಿತಗೊಂಡಿವೆ. 'ಬಾಸಿಗ' ಕವನದಲ್ಲಿ ಮೀನು ಪ್ರಶ್ನಿಸುವ ಮಾದರಿಯಲ್ಲಿ ತನ್ನನ್ನು ಮೋಹ, ಮಾಟದ ಬಲೆಯಿಂದ ರಕ್ಷಿಸಿಕೊಳ್ಳುವ ಜಾಣ್ಮೆ ಕಂಡುಬಂದರೆ, ಹಾಗೆಯೇ 'ಅಪಾರ

ಕರುಣೆ' ಕವನದಲ್ಲಿ ಪಾಶ್ಚಿಮಾತ್ಯ ಶಿಕ್ಷಣ ಪದ್ಧತಿಯು ನಮ್ಮ ದೇಶದ ಮೇಲೆ ಯಾವ ರೀತಿ ಪರಿಣಾಮ ಬೀರಿತು ಎಂಬುದನ್ನು ಅಭಿವ್ಯಕ್ತಿಸುತ್ತಾರೆ. "ಬಂತು ಬಂತಕೋ ಭೂತದ ಬೆಂತರದಂತೆ ಪಡುವಣ ಬಿರುಗಾಳಿ"(ಪು.೩) ಎಂದು ಅಭಿವ್ಯಕ್ತಿಸಿದರೆ, "ಓಂ ಅಶಾಂತಿ"ಯಲ್ಲಿ ಬರುವ ಹಾಗೆ ಬಡತನ, ಹಸಿವು, ಬರಗಾಲದ ಸ್ಥಿತಿಗತಿಗಳನ್ನು ತಿಳಿಸುವ ಕವನವಾಗಿದೆ. ಅದೇ ರೀತಿ 'ನವಮಾನವ'ದಲ್ಲಿ ಇಂದಿನ ವರ್ತಮಾನದ ಪರಿಸ್ಥಿತಿಗಳನ್ನು ಹಂಚಿಕೊಳ್ಳುತ್ತಾ ಹೊಸತನವನ್ನು ಬಯಸುವ ಮುಗಳಿ ಅವರು ತಮ್ಮೊಳಗೆ ಜಾಗೃತಭಾವದೊಂದಿಗೆ ಹೊಸಹುಟ್ಟಿಗೆ ಕಾರಣವಾಗುವ ಅಂಶಗಳಾದ ನಿರೀಕ್ಷೆ, ಒತ್ತಡ, ಇರಿಸು ಮುರಿಸು, ಅಸಹನೆ, ಸಣ್ಣತನದ ಅಂಶಗಳೊಂದಿಗೆ ಚರ್ಚಿಸುತ್ತಾರೆ. ಅದೇ ರೀತಿ ಮಣಿಮಾಲೆಯಲ್ಲಿ ಛಂದಸ್ಸಿನ ಲಯಗಾರಿಕೆ ಕಂಡುಬರುತ್ತದೆ. 'ಮೋಟಮರ ಮಾತಾಡಿತು' ಕವನವು ರೂಪಕಗಳನ್ನು ಬಳಸಿಕೊಳ್ಳುವ ಮೂಲಕ ಮನುಷ್ಯಸಂಬಂಧಿ ಜೀವನವನ್ನು ಕಟ್ಟಿಕೊಳ್ಳಲು ನೀತಿ, ನ್ಯಾಯಪರವಾದ ಆದರ್ಶವಾದ ತಳಹದಿಯಲ್ಲಿ ರಚನೆಗೊಂಡಿದೆ.

೩.೨. ಕತೆ

ಆಧುನಿಕ ಕನ್ನಡ ಸಾಹಿತ್ಯದಲ್ಲಿ ಕಥಾಸಾಹಿತ್ಯ ಅತ್ಯಂತ ಹುಲುಸಾಗಿ ಬೆಳೆದಿರುವ ಸಾಹಿತ್ಯ ಪ್ರಕಾರವಾಗಿದೆ. ಕಾಲಕಾಲಕ್ಕೆ ಬದಲಾಗುತ್ತಾ, ಬೆಳೆಯುತ್ತಾ ಹೊಸಹೊಸ ಆಹ್ವಾನಗಳಿಗೆ ತನ್ನನ್ನು ತಾನು ಒಡ್ಡಿಕೊಳ್ಳುತ್ತಾ ತನ್ನ ಜೀವಂತಿಕೆಯನ್ನು ಕಾಪಾಡಿಕೊಂಡು ಬಂದಿದೆ. ಸಣ್ಣಕತೆಯು ತನ್ನದೇ ಆದ ವಸ್ತು, ರೂಪ, ತಂತ್ರ, ಶೈಲಿ, ಭಾಷೆ, ಸಂವೇದನೆಯಲ್ಲಿ ಹೊಸ ಬದಲಾವಣೆಯನ್ನು ತಂದುಕೊಂಡಿತು. ಆಧುನಿಕ ಕನ್ನಡ ಸಾಹಿತ್ಯವನ್ನು ಪ್ರಮುಖವಾಗಿ ಅದರ ಆಶಯ, ಧೋರಣೆ, ಸಂವೇದನೆ, ಗ್ರಹಿಕೆಗನುಗುಣವಾಗಿ ನಾಲ್ಕು ಘಟ್ಟಗಳಲ್ಲಿ ವಿಶ್ಲೇಷಿಸಬಹುದು. ನವೋದಯ, ಪ್ರಗತಿಶೀಲ, ನವ್ಯ, ದಲಿತ-ಬಂಡಾಯ ನಂತರದ ಕಾಲಘಟ್ಟವನ್ನು ನವ್ಯೋತ್ತರ ಎಂದು ಕರೆಯಲಾಯಿತು.

ಮೊದಲನೆಯ ಘಟ್ಟದ ತಲೆಮಾರಿನ ಕತೆಗಾರರಲ್ಲಿ ಪಂಜೆ ಮಂಗೇಶರಾಯ, ಮಾಸ್ತಿ ವೆಂಕಟೇಶ ಅಯ್ಯಂಗಾರ್, ಕೆರೂರು ವಾಸುದೇವಾಚಾರ್ಯ, ರಂ.ಶ್ರೀ.ಮುಗಳಿ ಮುಂತಾದ ಮಹನೀಯರ ಹೆಸರುಗಳು ಕಂಡುಬರುತ್ತವೆ. ಪಂಜೆ ಮಂಗೇಶರಾಯರು ರಚಿಸಿರುವ ಕತೆಗಳಾದ ನನ್ನ ಚಿಕ್ಕ ತಾಯಿ, ಭಾರತ ಶ್ರವಣ, ಕಮಲಾಪುರದ ಹೋಟ್ಲಿನಲ್ಲಿ, ಇತ್ಯಾದಿ ಕತೆಗಳು 'ಸುವಾಸಿನಿ' ಪತ್ರಿಕೆಯಲ್ಲಿ ಮೊಟ್ಟಮೊದಲ ಬಾರಿ ಪ್ರಕಟಗೊಂಡಿವೆ. ಮಾಸ್ತಿ ವೆಂಕಟೇಶ ಅಯ್ಯಂಗಾರರ ಹೆಸರು ಆಧುನಿಕ ಕನ್ನಡ ಸಣ್ಣಕಥಾ ಸಾಹಿತ್ಯದಲ್ಲಿ ಅಚ್ಚಳಿಯದೆ ಉಳಿದಿದೆ. ಅವರು ೧೯೧೦-೧೧ರಲ್ಲಿ ರಂಗನ ಮದುವೆ, ಮೊಸರಿನ ಮಂಗಮ್ಮ, ಕಲ್ಮಾಡಿಯ ಕೋಣ, ಒಂದು ಹಳೆಯ ಕತೆ, ಜೋಗ್ಯೋರ ಅಂಜಪ್ಪನ ಕೋಳಿ ಕತೆ ಇನ್ನು ಮುಂತಾದ ಕತೆಗಳನ್ನು ರಚಿಸಿದ್ದಾರೆ. ಕೆರೂರು ವಾಸುದೇವಾಚಾರ್ಯರು ರಚಿಸಿರುವ ಪತ್ತೆದಾರಿ ಕತೆಗಳು – ರಾಖಿಬಂಧನ, ಬಂಧುತ್ವ, ಪ್ರಣಯದರ್ಪಣ, ಸಾಮಾಜಿಕ ಕತೆಗಳು-ಮಲ್ಲೇಶಿಯ ನಲ್ಲೆಯರು, ಮನೆಮನೆಯ ಸಮಾಚಾರ, ಐತಿಹಾಸಿಕ ಕತೆಗಳಾದ ನೂರ್‌ಜಹಾನ್

ಸಿಕಂದರ ಬಾದ್‌ಷಹ, ನರಗುಂದದ ಸಾವಿತ್ರಿಬಾಯಿ ಕತೆಗಳನ್ನು ರಚಿಸಿದ್ದಾರೆ. ಇವರಲ್ಲದೆ ಇನ್ನೂ ಮುಂತಾದ ಕತೆಗಾರರು ಕನ್ನಡ ಸಾಹಿತ್ಯಕ್ಕೆ ತಮ್ಮದೇ ಆದ ಕೊಡುಗೆ ನೀಡಿದ್ದಾರೆ.

ರಂ.ಶ್ರೀ.ಮುಗಳಿ ಅವರು 'ಕನಸಿನ ಕೆಳದಿ' ಕಥಾಸಂಕಲನದಲ್ಲಿ ಕನಸಿನ ಕೆಳದಿ, ನೀರಿನ ನಾರಪ್ಪ, ಮಂಜಿನಮನೆ, ವೇದಾಂತಿ, ಕಲ್ಯಾಣ ಮಂಟಪ, ಆಯುಷ್ಕರ್ಮ, ಜಗತ್ತು ಕಂಡವರು ಯಾರು, ವಿತಂತು ವೆಶ್ಯೆ!, ವಿರಕ್ತ ಸಂಚಾರಿ!, ಕೂಟಪ್ರಶ್ನೆ, ಕ..ಚ್ಚು!, ಕತೆಗಳನ್ನು ರಚಿಸಿದ್ದಾರೆ. ಮುಗಳಿ ಅವರ ಕತೆಗಳಲ್ಲಿ ಆಧುನಿಕತೆ, ಸುಧಾರಣಾವಾದ, ಮಾನವತಾವಾದ, ಆದರ್ಶವಾದದ ಅಂಶಗಳು ಕಂಡುಬರುತ್ತವೆ. ಅಂದಿನ ಗ್ರಾಮೀಣ ಜೀವನದ ಕೆಲವು ವಾಸ್ತವವಾದದ ಸ್ಥಿತ್ಯಂತರಗಳ ಬಗ್ಗೆ ಪರಿಣಾಮಕಾರಿಯಾಗಿ ರಚಿಸಿದ್ದಾರೆ. ಪ್ರತಿಯೊಂದು ಜಾತಿಯ ಚೌಕಟ್ಟಿನೊಳಗೂ ಬಡತನ ಮತ್ತು ಹೆಣ್ಣಿನ ಶೋಷಣೆಯನ್ನು ಮತ್ತೆ ಮತ್ತೆ ಗಮನಿಸುತ್ತಾರೆ. ಕೆಲವು ಸಂದರ್ಭಗಳಲ್ಲಿ ಬ್ರಾಹ್ಮಣ ಕುಟುಂಬಗಳಿಗೆ ಸೇರಿದ ವಿದ್ಯಾವಂತ ಪಾತ್ರಗಳ ನೆಲೆಯಿಂದ ಹಳ್ಳಿಯ ಇತರ ಸಮುದಾಯಗಳ ಗುಣಗಳನ್ನು, ಅವರ ಹಾಡುಪಾಡುಗಳನ್ನು ಗುರುತಿಸುತ್ತಾರೆ. ಕಥನ ಶೈಲಿಯು ತಾವೇ ನೋಡಿ ಹೇಳಿಕೊಂಡಂತೆ ವಾಸ್ತವತೆಯನ್ನು ಒಳಗೊಂಡಿದೆ.

'ಕನಸಿನ ಕೆಳದಿ' ರಂ.ಶ್ರೀ.ಮುಗಳಿ ಅವರ ಹನ್ನೊಂದು ಕತೆಗಳನ್ನೊಳಗೊಂಡ ಏಕೈಕ ಕಥಾ ಸಂಕಲನವಾಗಿದೆ. 'ಕನಸಿನ ಕೆಳದಿ' ಎಂಬ ಶೀರ್ಷಿಕೆಯಡಿಯಲ್ಲಿಯೇ ಒಬ್ಬ ಮನುಷ್ಯನ ಅಂತರಾಳದ ಭಾವನೆಗಳನ್ನು ಹೊರಹಾಕುವ ಅಥವಾ ಅದನ್ನೇ ಒಂದು ಕಥನರೂಪದಲ್ಲಿ ಎರಡು ಪಾತ್ರಗಳ ಮೂಲಕ ನಿರೂಪಿಸಿರುವುದು ಪ್ರಮುಖವಾಗಿದೆ. ಕಥಾಲೇಖಕ ಮತ್ತು ಅವನ ಮಡದಿ 'ಕನಸು' ಎಂಬ ಪಾತ್ರಗಳನ್ನು ಬಳಸಿಕೊಂಡು ಕತೆ ಕಟ್ಟಿರುವ ಪರಿಯೇ ಇದು. ಈ ಕತೆಗೆ ಕನಸೇ ಮೂಲ ಬೀಜವಾಗಿದೆ.

ಕನಸು ಕನಸಾಗಿಯೇ ಉಳಿಯಬಹುದು ಅಥವಾ ಅದು ನಶಿಸಿಯೂ ಹೋಗಬಹುದು. ಆದರೆ ಅದಕ್ಕೆ ಒಳ್ಳೆಯ ರೂಪ ಕೊಟ್ಟು ಕತೆಯಾಗಿ ಮಾಡುವ ಕಲೆಯನ್ನು ಮುಗಳಿ ಸಮರ್ಥವಾಗಿ ಕನಸಿನ ಕೆಳದಿಯಲ್ಲಿ ಬಳಸಿಕೊಂಡಿದ್ದಾರೆ. ಕತೆಯಲ್ಲಿ ಮದುವೆಯ ವಿಷಯ ಪ್ರಾರಂಭಗೊಂಡು ಲೀಲೆಯೊಡನೆ ವಿವಾಹ ನಿಶ್ಚಯವಾಗುವಂತಹದು, ಸಣ್ಣವಳಾದ ಲೀಲೆಯನ್ನು ಪ್ರೀತಿಯಿಂದ ಒಲಿಸಿಕೊಳ್ಳಲು ಹೋಗಿ ವಿಫಲವಾಗುವುದು. ಹಾಗೆಯೇ ಮುಂದುವರಿದು, "ಪ್ರೀತಿಯು ಹೃದಯದಿಂದ ಉಕ್ಕಿಬರಬೇಕು, ತೇಲಿ ಬರಬೇಕು. ಝುರಿ ಇಲ್ಲದ ಗುಡ್ಡಕ್ಕೆ ನೀರು ಸುರಿದರೆ ಹೊಳೆಯಾಗಿ ಹರಿಯುವುದೇ? ಎಂಬ ನಿರ್ಣಯದಿಂದ ಕನಸು, 'ಕನಸಿನ ಕೆಳದಿ', ಕೆಳದಿಯು ಸುಖವಿರಲಿ ಆದರೆ ನೀರಸ ಜೀವನ ಬೇಡ ಎಂದು ನಾಯಕ ಚೀರುತ್ತಾನೆ"(ಪು.೧೩೫) ಇಲ್ಲಿಗೆ ಕತೆ ಮುಗಿಯುತ್ತದೆ.

'ಕಾರಣಪುರುಷ' ಕಾದಂಬರಿಯಲ್ಲಿ ಕಂಡುಬರುವ ಗಂಭಿರವಾದ ಶೈಲಿ ಅವರ 'ಕನಸಿನ ಕೆಳದಿ' ಕತೆಯಲ್ಲಿಯೂ ಕಾಣಬಹುದಾಗಿದೆ. ಕನಸಿನ ಮೂಲಕ ಕತೆ ಹೇಳುವ ಹೊಸ ನಿರೂಪಣಾ ತಂತ್ರ ಬಳಕೆಯಾಗಿದೆ. ಕನಸಿನಲ್ಲಿ ಮೂಡುವ ಭಾವನೆಗಳನ್ನು, ತುಮುಲಗಳನ್ನು, ಅಚ್ಚುಕಟ್ಟಾಗಿ

ಸೆರೆಹಿಡಿಯುವ, ಪ್ರಶ್ನಿಸಿಕೊಳ್ಳುವ, ಸಂವೇದನೆಗಳನ್ನು ಹೊರಹಾಕುವಂತಹ ಲೇಖಕರ ಕನಸಿನ ಭಾಷೆ ಹೆಚ್ಚು ಅರ್ಥಪೂರ್ಣವಾಗಿ ಈ ಕತೆಯಲ್ಲಿ ಮೂಡಿಬಂದಿದೆ.

'ನೀರಿನ ನಾರಪ್ಪ': ೧೯೪೦ರ ಕಾಲಘಟ್ಟದಲ್ಲಿ ರಚನೆಯಾದ ಈ ಕತೆಯು ಅಂದಿನ ಸಮಾಜದ ಪ್ರೀತಿ, ಸಹಕಾರ, ತಾಳ್ಮೆ, ಗೌರವ ಭಾವನೆ, ಆದರ್ಶ, ಒಳಮನಸ್ಸಿನ ತುಮುಲಗಳನ್ನು ಈ ಕತೆಯಲ್ಲಿ ಕಂಡುಕೊಳ್ಳಲಾಗಿದೆ. ಕತೆಯಲ್ಲಿ 'ನೀರಿನ ನಾರಪ್ಪ' ಎಂಬ ವಯೋವೃದ್ಧನ ಪಾತ್ರ ಪ್ರಮುಖವಾಗಿದೆ. ಮುದ್ದಬ್ಬೆಹಳ್ಳಿಯ ಭಗವಂತರಾಯರ ಮಗಳ ಮದುವೆ ಕಾರ್ಯಕ್ಕೆ ನೀರಿನ ಕೊರತೆ ಎದ್ದುಕಾಣುತ್ತದೆ. ಪ್ರತಿದಿನ ಅವರ ಮನೆಗೆ ನೀರು ತಂದುಹಾಕಿ ಅವರ ಪ್ರೀತಿ ವಿಶ್ವಾಸ ಸಂಪಾದಿಸಿದ ನಾರಪ್ಪನಿಗೆ ದೊಡ್ಡೇನಹಳ್ಳಿಯ ನೀರನಾರಪ್ಪನೆಂದೇ ಹೆಸರು ಚಿರಪರಿಚಿತವಾಗಿರುತ್ತದೆ. ಭಗವಂತರಾಯರ ಮನೆಯ ಒಡನಾಡಿಯಂತೆ ಕಂಡುಬರುವ ನಾರಪ್ಪ ಮದುವೆಯ ಮತ್ತು ಮನೆಯ ಜವಬ್ದಾರಿಯುತ ಕೆಲಸ ಮಾಡುತ್ತಾನೆ. ಅದು ರಾಯರ ಎರಡನೇ ಹೆಂಡತಿಯಾಗಿ ಬಂದ ಸುಶೀಲಬಾಯಿಗೆ ಹಿಡಿಸುವುದಿಲ್ಲ. ಮದುವೆ ಮನೆಗೆ ನೀರಿನ ಕೊರತೆ ಇಲ್ಲದ ಹಾಗೆ ಮಾಡಿದ ನಾರಪ್ಪನನ್ನು ಊರಿನ ಜನರು ಕೊಂಡಾಡುತ್ತಾರೆ. ಇಂಥ ಸಂದರ್ಭದಲ್ಲಿಯೇ ಸುಶೀಲಬಾಯಿಯ ಚಿನ್ನದ ಸರಿಗೆ ಕಳೆದುಹೋಗುತ್ತದೆ, ಅದನ್ನು ನಾರಪ್ಪನೇ ಕದ್ದಿರುವನೆಂದು ಆರೋಪಿಸುತ್ತಾಳೆ. ಆದರೆ ಎರಡು ಮೂರು ದಿನಗಳ ನಂತರ ಮನೆಯಲ್ಲಿಯೇ ಆ ಚಿನ್ನದ ಸರಿಗೆ ಸಿಗುತ್ತದೆ. ಮನನೊಂದ ನಗುಮುಖದ ನಾರಪ್ಪ ದುಃಖಿತನಾಗಿ ಯಾರ ಮಾತು ಕೇಳದೆ ಊರು ತೊರೆಯಲು ಮುಂದಾಗುತ್ತಾನೆ. "ಎಲ್ಲಿಗೆ ಹೊರಟೆ ನಾರಪ್ಪ? ಎಲ್ಲಿಗೆ? ಎಲ್ಲಿಂದ ಬಂದೆ ಅಲ್ಲಿಗೆ? ಹಳ್ಳಿಕೋತಿ ಶಾರದೂರಿಗೆ ಬಂದರ ಹುಳ್ಳಿ ಕಟ್ಟಿಗಿಲೆ ಹೊಡದಟ್ಟಿದರಂತ"(ಪು.೧೪೯) ಎಂದು ನಾರಪ್ಪ ದುಃಖದಿಂದ ಹೆಜ್ಜೆ ಹಾಕುವಲ್ಲಿಗೆ ಕತೆಯು ಮುಗಿಯುತ್ತದೆ.

ಲೇಖಕರು ಕತೆಯಲ್ಲಿ ಅಂದಿನ ಸಮಾಜದ ವಾಸ್ತವತೆಯಲ್ಲಿ ಕಾಯಕ, ನಂಬಿಕೆ, ಹಿರಿಯರಿಗೆ ಕೊಡುವ ಗೌರವಗಳು, ಸ್ವಾಭಿಮಾನದಿಂದ ಬದುಕಿರುವವರು, ಒಂದು ವೇಳೆ ಸ್ವಾಭಿಮಾನಕ್ಕೆ ಧಕ್ಕೆಯಾದರೆ ಸಹಿಸದವರಾಗಿದ್ದರೆಂಬುದು ಈ ಕತೆಯಿಂದ ತಿಳಿಯುತ್ತದೆ. ಕತೆಯನ್ನು ಲೇಖಕರೇ ಹೇಳುವಂತ ನಿರೂಪಣಾ ಮಾದರಿ, ಗಾದೆ ಮಾತುಗಳು, ನುಡಿಗಟ್ಟಿನ ಸೊಗಡು ಎದ್ದುಕಾಣುತ್ತದೆ.

'ಮಂಜಿನ ಮನೆ' ಮುಗಳಿ ಅವರು ರಚಿಸಿರುವ ಮೂರನೇ ಕತೆಯಾಗಿದೆ. ನಿರೂಪಣಾ ಮಾದರಿಯು ಲೇಖಕರೇ ಹೇಳಿಕೊಂಡಂತಿದೆ. ಕಥಾವಸ್ತುವು ನಿಗೂಢವಾದ ಕೊಲೆಯ ಪ್ರಕರಣದ ಸುತ್ತ ಹೆಣೆದ ಸಾಮಾಜಿಕ ಚಹರೆಯನ್ನು ಒಳಗೊಂಡಿದೆ.

ಕತೆಯ ಪ್ರಾರಂಭದಲ್ಲಿ ಕೊಳದಲ್ಲಿ ಸಿಕ್ಕ ಶವ ಯಾರದು? ಬಡಕುಟುಂಬದ 'ಶ್ರೀಪಾದನದು' ಎಂದು ಗೊತ್ತಾಗುತ್ತದೆ. ರಕ್ತಸಿಕ್ತವಾದ ದೇಹದಿಂದ ಕೊಲೆಯೆಂದು ಮನಗಂಡ ಪೊಲೀಸರು ಊರಿನವರನ್ನು ವಿಚಾರಿಸುತ್ತಾರೆ. ಸುಳಿವು ಸಿಗದೆ ಸಿಐಡಿ ತನಿಖೆ ತೀವ್ರಗೊಳ್ಳುತ್ತದೆ. ಕೊಳದ ಪಕ್ಕದಲ್ಲಿ ಸಣ್ಣ ಕಾರಿನ ಗುರುತು ಕಂಡು, ಅದೇ ಊರಿನ 'ಜಹಾಗೀರದಾರ'ನದು ಎಂದು

ಗೊತ್ತಾಗುತ್ತದೆ. ಈ ಕೊಲೆ ದಲಿತಕೇರಿಯವರು ಮಾಡಿರಬಹುದೆಂದು ತಿಳಿದು ತೀವ್ರ ತನಿಖೆಗೆ ಒಳಪಡಿಸುತ್ತಾರೆ. ತದನಂತರ ಜಹಾಗೀರದಾರ ಮನೆಯವರೇ ಕಾರಣವೆಂದು, ಹುಡುಗಿಯ ವಿಷಯದಲ್ಲಿ ಇವರಿಬ್ಬರಿಗೂ ಜಗಳವಾಗಿತ್ತೆಂದೂ ಪೊಲೀಸರು ಅರಿಯುತ್ತಾರೆ. ತನಿಖೆ ತೀವ್ರಗೊಂಡು ಜಹಾಗೀರನ ಮಗ 'ಯುವರಾಜ'ನೆ ಈ ಕೊಲೆಗೆ ಕಾರಣನೆಂದು ತಿಳಿದು ಬಂಧಿಸುವ ಹಂತದಲ್ಲಿಯೇ ಹಣಬಲವುಳ್ಳ ಜಹಾಗೀರದಾರನು ಮಗನನ್ನು ಜಾಮೀನಿನ ಮೇಲೆ ಹೊರತರುತ್ತಾನೆ.

ಕೇಸು ಕೋರ್ಟ್ ಮೆಟ್ಟಿಲೇರುತ್ತದೆ. ಕೋರ್ಟಿನಲ್ಲಿ ಜಹಾಗೀರದಾರನ ಮಗನನ್ನು ಬಚಾವ್ ಮಾಡಲು ವಕೀಲನು ತಾನು ಹೆಣೆದ ಸುಳ್ಳಿನ ಕತೆಯಲ್ಲಿ ಒಬ್ಬ ಯುವಕನನ್ನು ನೇಮಿಸಿ ಯಶಸ್ವಿಯಾಗುತ್ತಾನೆ. ಇದೊಂದು ಆ್ಯಕ್ಸಿಡೆಂಟ್ ಎಂದು ಕೇಸ್ ಫಿಟ್ ಮಾಡಿ ಸಾಕ್ಷಿ ಒಪ್ಪಿಸುತ್ತಾರೆ. ಆ ರಾತ್ರಿ ಹೊತ್ತು ಡ್ರೈವಿಂಗ್ ನಾನೇ ಮಾಡುತ್ತಿದ್ದೆ. ಆ ಕ್ರಾಸಿನ ಕತ್ತಲಲ್ಲಿ ಒಬ್ಬ ಹುಡುಗ ಅಡ್ಡಬಂದು ಈ ದುರ್ಘಟನೆ ನಡೆಯಿತು ಎಂದು ವರದಿ ಒಪ್ಪಿಸುತ್ತಾನೆ. ಆ ಯುವಕನಿಗೆ ಇಪ್ಪತ್ತು ವರ್ಷ ಕಠಿಣ ಶಿಕ್ಷೆ, ಜಹಾಗೀರದಾರನ ಹೆಸರಿಗೆ ಒಂದು ಸಾವಿರ ರೂಪಾಯಿ ದಂಡ ವಿಧಿಸಿ ಕೋರ್ಟ್ ಆದೇಶಿಸುತ್ತದೆ.

ನ್ಯಾಯ ಸಿಗದೆ ಶ್ರೀಪಾದನ ತಂದೆ ಶಂಕರರಾಯರು ದುಃಖದಿಂದ "ಅವ್ವ ಸತ್ಯವು ಯಾರ ಕೈಗೆ ಸಿಗುತ್ತದೆ? ಸುಳ್ಳಲ್ಲ ನಾವೆಲ್ಲ ಇರೋ ಜಗತ್ತು ಒಂದು 'ಮಂಜಿನ ಮನೆ'. ಏನು ಕಂಡರೂ ಕಾಣದ ಹಾಗೆ ಆಗಿದೆ"(ಪು.೧೩೯) ಎಂದು ದುಃಖಿತರಾಗುವರು. ಇಲ್ಲಿಗೆ ಕತೆ ಕೊನೆಗೊಳ್ಳುವುದು. ಕತೆಯಲ್ಲಿ ಉಳ್ಳವರು ಹಣಬಲದಿಂದ ಕೇಸನ್ನು ತಮ್ಮ ಪರವಾಗಿ ಮಾಡಿಕೊಳ್ಳುವಂತಹದ್ದು ತಿಳಿದುಬರುತ್ತದೆ. ತನಿಖೆಯ ನೆಪದಲ್ಲಿ ಬಡವ ಬಲ್ಲಿದರನ್ನು ಶೋಷಣೆಗೆ ಒಳಪಡಿಸುವಂತದ್ದು, ಹಣದ ಆಮಿಷಕ್ಕೆ ಒಳಗಾಗಿ ಕಾರಿನ ಡ್ರೈವರ್ ತಾನೇ ಅಪರಾಧಿ ಎಂದು ಒಪ್ಪಿಕೊಳ್ಳುವಂತದ್ದು ಇವೆಲ್ಲವನ್ನು ಗಮನಿಸಿದರೆ ಪ್ರಭುತ್ವದ ವಿರುದ್ಧ ಎಲ್ಲಾ ವ್ಯವಸ್ಥೆ ಮಂಕಾದಂತಿದೆ. ಕೊನೆಗೆ ಶ್ರೀಪಾದನ ಕೊಲೆಯೆ? ಅಥವಾ ಆ್ಯಕ್ಸಿಡೆಂಟೋ? ಯಾಕೆ ನಡೆಯಿತು? ಎಂಬಿತ್ಯಾದಿ ಪ್ರಶ್ನೆಗಳನ್ನು ಕತೆಯಲ್ಲಿ ಲೇಖಕರು ನಿಗೂಢವಾಗಿಯೇ ಉಳಿಸಿದಂತಿದೆ.

'ವೇದಾಂತಿ!' ಶೀರ್ಷಿಕೆಯಡಿಯಲ್ಲಿ ರಚಿಸಿದ ಕತೆಯು 'ಗೀತಾ' ವಿಧವೆಯ ಸಾವಿಗೆ ಈ 'ವೇದಾಂತಿ'ಯೇ ಕಾರಣನೆ? ಈ ಕತೆಗೆ ವೇದಾಂತಿ ಹೆಸರಿನ ಬಳಿಕ ಮುಗಳಿ ಅವರು ಆಶ್ಚರ್ಯಸೂಚಕ ಚಿನ್ಹೆಯನ್ನು ಬಳಸಿದ್ದಾರೆ. 'ಮಂಜಿನ ಮನೆ' ಕತೆಯಲ್ಲಿ ಬರುವ ಹಾಗೆ ಕೊಲೆಗಾರ ಯಾರೆಂಬುದು ಈ ಕತೆಯಲ್ಲಿಯೂ ನಿಗೂಢವಾಗಿಯೇ ಉಳಿಯುತ್ತದೆ.

ಶ್ರೀಮಂತ ಮಾಧವರಾಯರು ಹೆಂಡತಿಯನ್ನು ಕಳೆದುಕೊಂಡ ದುಃಖದಲ್ಲಿಯೇ ಮಗಳು ಗೀತಾಳಿಗೂ ಮದುವೆ ಮಾಡುವರು. ಅವಳ ಗಂಡನು ತೀರಿಹೋಗಿ ವಿಧವೆಯಾಗುತ್ತಾಳೆ. ಮಗಳು ಗಂಡನ ಚಿಂತೆಯಲ್ಲಿಯೇ ಕೊರಗಿ ಕೊರಗಿ ಖಿನ್ನತೆಯಿಂದ ಬಳಲುತ್ತಾಳೆ. ಇದನ್ನು ಗಮನಿಸಿದ ತಂದೆ ಮಗಳ ಖಿನ್ನತೆಯನ್ನು ಹೋಗಲಾಡಿಸಲು ದೇವರ ಮೊರೆ ಹೋಗುತ್ತಾನೆ.

ವೇದಾಂತಾಚಾರ್ಯರಿಂದ ಪುರಾಣ ಪ್ರವಚನ ಹೇಳಿಸುವ ಕಾರ್ಯ ಮನೆಯಲ್ಲಿಯೇ ನಡೆಯುತ್ತದೆ. ವೇದಾಂತಿ ಪುರಾಣವನ್ನು ಹೇಳುತ್ತಾ ಅವರ ಮನೆಯಲ್ಲಿಯೇ ಉಳಿಯುತ್ತಾನೆ. ಮಗಳು ಖುಷಿಯಿಂದ ಓಡಾಡಿಕೊಂಡಿರುವುದನ್ನು ಕಂಡು ತಂದೆಗೆ ಸಂತೋಷವಾಗುತ್ತದೆ.

ಹೀಗೆ ಕೆಲದಿನಗಳು ಉರುಳುತ್ತವೆ. ಗೀತಾಳಲ್ಲಿ ದೈಹಿಕವಾಗಿ ವ್ಯತ್ಯಾಸವಾಗಿರುವುದನ್ನು ಗಮನಿಸಿದ ಅಡುಗೆಯವಳು ಅನುಮಾನಿಸಿ ವಿಚಾರಿಸಿದಾಗ ಗರ್ಭಿಣಿ ಎಂದು ತಿಳಿದುಬರುತ್ತದೆ. ಏನನ್ನೂ ಅರಿಯದ ಗೀತಾ ಸಮಾಜಕ್ಕೆ ಹೆದರಿ ಕೃಷ್ಣಾ ನದಿಗೆ ಹಾರಿ ಪ್ರಾಣಬಿಡುತ್ತಾಳೆ. ತಂದೆ ಕೆಲಸದ ನಿಮಿತ್ತ ಪರವೂರಿಗೆ ಹೋಗಿ ಬರುವ ವೇಳೆಗಾಗಲೇ ಈ ದುರ್ಘಟನೆ ಸಂಭವಿಸಿರುತ್ತದೆ. ಇದಕ್ಕೆಲ್ಲಾ ಕಾರಣ ವೇದಾಂತಾಚಾರಿಯೇ ಎಂದು ಅನುಮಾನಿಸಿ ಅವನನ್ನು ಎಳೆದುಕೊಂಡು ಬಂದು, "ಏನು ವೇದಾಂತಿ ವಿವೇಕಾಚಾರ್ಯರೆ, ಇದು ಪರಮಾತ್ಮನ ಸೇವೆಯೋ ಅಥವಾ ಭಗವಂತನ ಲೀಲೆಯೋ"(ಪು.೧೩೨) ಎಂದು ಕೇಳಿದಾಗ ವೇದಾಂತಿ ಕುಸಿದುಬೀಳುತ್ತಾನೆ. ಕಥಾಹಂದರವು ಇಲ್ಲಿಗೆ ಮುಗಿಯುತ್ತದೆ.

ಕತೆಯಲ್ಲಿ ಗೀತಾಳ ಸಾವು ನಿಗೂಢವಾಗಿಯೇ ಉಳಿಯುತ್ತದೆ. ಮುಗಳಿ ಅವರು ರಚಿಸಿದ ಈ ಕತೆಯು ಓದುಗರಿಗೆ ಅಪೂರ್ಣವಾಗಿದೆ ಎಂದೆನಿಸುತ್ತದೆ. ಸಮಾಜಕ್ಕೆ ಹೆದರಿ ಗೀತಾ ನದಿಗೆ ಹಾರಿ ಪ್ರಾಣ ಬಿಡಲು ವೇದಾಂತಿಯೇ ಕಾರಣವೆಂಬಂತೆ ಲೇಖಕರು ಆಶ್ಚರ್ಯಕರ ಚಿಹ್ನೆಯನ್ನು ಶೀರ್ಷಿಕೆಯಲ್ಲಿಯೇ ಬಳಸುತ್ತಾರೆ. ಅಂದಿನ ಸಮಾಜದ ಕಠಿಣ ಕಟ್ಟುಪಾಡುಗಳು, ಬಾಲ್ಯವಿವಾಹ, ಮೋಸಗಾರಿಕೆ, ವಂಚನೆ, ಕರ್ತವ್ಯಲೋಪಗಳಂತಹ ಅಂಶಗಳನ್ನು ಈ ಕತೆಯಲ್ಲಿ ಕಂಡುಕೊಳ್ಳಲಾಗಿದೆ.

'ಕಲ್ಯಾಣ ಮಂಟಪ' ಕತೆಯಲ್ಲಿ ತಾಯವ್ವ ಮುದುಕಿಯ ಪಾತ್ರ ಪ್ರಮುಖವಾಗಿದೆ. ನಾನು ಸತ್ತು ಹೋಗುವುದರೊಳಗಾಗಿಯೇ ಮೊಮ್ಮಗನಾದ ಹರೀಶನ ಮದುವೆ ಮುಗಿಸಬೇಕೆಂಬುದು ಆ ಮುದಿಜೀವದ ಆಸೆಯಾಗಿರುತ್ತದೆ. ಅನಾರೋಗ್ಯದಿಂದ ಬಳಲುವ ತಾಯವ್ವ ಮೊಮ್ಮಗನ ಮದುವೆಯ ಉತ್ಸಾಹದಲ್ಲಿ ಗುಣಮುಖಳಾಗುತ್ತಾಳೆ. ಹದಿನಾರು ವರ್ಷದ ಮೊಮ್ಮಗನ ಮದುವೆಯು ವಿಜೃಂಭಣೆಯಿಂದ ನೆಂಟರಿಷ್ಟರ ಸಮ್ಮುಖದಲ್ಲಿ ನಡೆಯುತ್ತದೆ. ಮದುವೆಯಾಗಿ ನಾಲ್ಕೈದು ದಿನ ಕಳೆಯುವುದರಲ್ಲಿಯೇ ಹುಡುಗಿ ಮೈನೆರೆಯುತ್ತಾಳೆ. ಈ ವಿಷಯ ತಿಳಿದ ಮುದುಕಿ ಹಿರಿಹಿರಿ ಹಿಗ್ಗಿ ಮೊಮ್ಮಗನಿಗೂ ಹುಡುಗಿಗೂ ಆ ಶಾಸ್ತ್ರ ಈ ಶಾಸ್ತ್ರವೆಂದು ಮಾಡಿ ಮುಗಿಸುತ್ತಾಳೆ. ಅಷ್ಟರಲ್ಲಿಯೇ ಹರೀಶನಿಗೆ ಜ್ವರದ ತಾಪ ಹೆಚ್ಚಾಗುತ್ತದೆ. ಜ್ವರ ಏನು ಮಾಡೀತು ಎಂದು ಅಲಕ್ಷಿಸಿ ಆಚರಣೆಗಳನ್ನು ಮುಂದುವರಿಸುತ್ತಾರೆ.

ಜ್ವರದ ತಾಪವು ಉಲ್ಬಣಗೊಳ್ಳುತ್ತದೆ. ವೈದ್ಯರು ಬಂದು ಪರೀಕ್ಷಿಸಿ, ಗುಣಮುಖವಾಗುವುದೆಂದು ಹೇಳಿಹೋಗುತ್ತಾರೆ. ಆ ರಾತ್ರಿ ಮನೆಯಲ್ಲಿಯೇ ಎಲ್ಲರೂ ಮಲಗಿರುತ್ತಾರೆ. ಮದುವೆ ಗಂಡು ಹರೀಗೆ ಕೆಂಡದಂತಹ ಜ್ವರದ ತಾಪದಿಂದ ಬೆಳಗಾಗುವುದೊರಳಗಾಗಿಯೇ ಸತ್ತುಹೋಗಿರುತ್ತಾನೆ. ಮದುವೆ ಮನೆ ಸ್ಮಶಾನಮೌನವಾಗಿ ದುಃಖತಪ್ತವಾಗುತ್ತದೆ. ಮೊಮ್ಮಗನ ಸಾವು ಕಂಡು ತಾಯವ್ವನ ಹೃದಯ ಒಡೆದಂತಾಗುತ್ತದೆ. ಇಲ್ಲಿಗೆ ಕತೆ ಮುಗಿಯುತ್ತದೆ.

ಈ ಕತೆಯಲ್ಲಿ ಕಂಡುಬರುವ ಹಿರಿಯರ ಆತುರದ ನಿರ್ಧಾರಗಳು, ಹೊಣೆಗೇಡಿತನಗಳು, ಬಾಲ್ಯವಿವಾಹ, ಮದುವೆ ಆಚರಣೆಯಲ್ಲಿ ಉಲ್ಬಣಗೊಂಡ ಹರೀಶನ ಜ್ವರವನ್ನು ಅಲಕ್ಷಿಸುವುದು, ತಿಳಿದು ಅಥವಾ ತಿಳಿಯದೆಯೋ ಆಗುವಂತಹ ಅವಗಡಗಳು, ತಪ್ಪುತಿಳಿವಳಿಕೆ, ಲೋಪದೋಷಗಳು ಈ ಕತೆಯಲ್ಲಿ ಕಂಡುಬರುತ್ತವೆ.

'ಆಯುಷ್ಕರ್ಮ': ಈ ಕತೆಯಲ್ಲಿ ವಿಚಾರವಂತನಾದ ನಾಡಗೌಡರ ಮಗ ಚಿಂತಾಮಣಿ'ಯು ಮನೆಯಿಂದ ಹೊರನಡೆದು "ಈ ಆಯುಷ್ಕರ್ಮದ ರಂಗಭೂಮಿಯಲ್ಲಿ ಯಾರು ಸುಖಿಗಳು, ಸುಖವೆಂದರೇನು? ಇಲ್ಲಿಂದ ವಿಚಾರ ಚಕ್ರವು ಇಮ್ಮಡಿಯಾಗಿ ಸುಖವೆಂದರೆ ದುಡ್ಡೇ, ಸುಖವೆಂದರೆ ನೌಕರಿಯೇ, ಸುಖವೆಂದರೆ ಹೊಲಮನೆಯೇ, ಸುಖವೆಂದರೆ ಹೆಂಡಿರುಮಕ್ಕಳೇ, ಸುಖವೆಂದರೆ ದೊಡ್ಡಸ್ತಿಕೆಯೇ"(ಪು.೧೮೫) ಎಂದು ಯೋಚಿಸುತ್ತಾ ಮುಂದೆ ಸಾಗುವನು.

ಶ್ರೀಮಂತ ವರ್ಗದವರಿಗೂ, ಸಾಮಾನ್ಯ ವರ್ಗದವರಿಗೂ ಹೋಲಿಕೆ ಮಾಡುತ್ತಾ ಬಡವನಾದ ನಾಗಪ್ಪನ ಹೃದಯವಂತಿಕೆಯ ಬಗ್ಗೆ ಗೆಳೆಯ ಮೂರ್ತಿಯೊಂದಿಗೆ ಚರ್ಚೆ ಮಾಡುತ್ತಾ ಬರುವನು. ಈ ಊರಿನಲ್ಲಿ ನಾಗಪ್ಪ ನಾರುಹುಣ್ಣು, ತಲೆಹುಣ್ಣಿಗೆ ಎಂತದೋ ಸೊಪ್ಪು ತಂದು ಉಪಚರಿಸುವ ಮಾನವೀಯತೆಯ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸುವನು. ಮನೆಯ ಆರ್ಥಿಕ ಪರಿಸ್ಥಿತಿ ಶೋಚನೀಯವಾಗಿದ್ದರೂ, ನಾಡಗೌಡನೆಂದು ಅಹಮಿಕೆಯಿಂದ ಬದುಕುತ್ತಿದ್ದ ತಂದೆಯ ಮನವೊಲಿಸಿ ತಮ್ಮ ಜಮೀನಿನಲ್ಲಿಯೇ ಶ್ರಮ ವಹಿಸಿ ದುಡಿಯಲು ಮುಂದಾಗುತ್ತಾನೆ. "ಮೂರ್ತಿ ಇಲ್ಲಿದೆ ನೋಡು ಆಯುಷ್ಕರ್ಮ, ತನ್ನ ಆಯುಷ್ಯದಲ್ಲಿಯೇ ಮನುಷ್ಯನು ಮಾಡಬೇಕಾದ ಕಾರ್ಯ ಪಡೆಯಬೇಕಾದ ಮುಕ್ತಿ!"(ಪು.೯೧) ಎಂಬ ಚರ್ಚೆಯೊಂದಿಗೆ ಕತೆ ಮುಗಿಯುತ್ತದೆ.

ಈ ಕತೆಯಲ್ಲಿ ಪ್ರೀತಿ, ಸಂತೋಷ, ತಾಳ್ಮೆ, ಸಹಕಾರ, ಆದರ್ಶವಾದ ಮೌಲ್ಯಗಳನ್ನು ಚಿಕ್ಕ ಚಿಕ್ಕ ಕುಟುಂಬಗಳಿಂದ ಅರಿಯಬಹುದು ಎಂಬಂತೆ ಲೇಖಕರು ಚಿಂತಾಮಣಿ ಹುಡುಗನ ಮೂಲಕ ನಿರೂಪಿಸುವ ಕ್ರಮದಲ್ಲಿ ಮೂಡಿಬಂದಿದೆ.

'ಜಗತ್ತು ಕಂಡವರು ಯಾರು' ಎಂಬ ಶೀರ್ಷಿಕೆಯಡಿಯಲ್ಲಿ ವಸಂತ ಮತ್ತು ಲಲಿತ ಎಂಬ ವಿದ್ಯಾರ್ಥಿಗಳು ವಿಶ್ವವಿದ್ಯಾಲಯದಿಂದ ಮನೆ ಕಡೆಗೆ ಹೆಜ್ಜೆ ಹಾಕುವ ಸಂದರ್ಭದಲ್ಲಿ ಈ ಕತೆಯು ಪ್ರಾರಂಭವಾಗುತ್ತದೆ. ಜಗತ್ತು ಕಂಡವರು ಯಾರು? ಎಂಬ ಪ್ರಶ್ನೆಯನ್ನು ಇಟ್ಟುಕೊಂಡು ಉತ್ತರ ಹುಡುಕುವ ರೀತಿಯಲ್ಲಿ ಕತೆಯ ನಿರೂಪಣಾ ಮಾದರಿ ಮೂಡಿಬಂದಿದೆ.

ಯಾವಾಗಲೂ ಹೊರಗಿನ ಜಗತ್ತು ನೋಡಬೇಕು, ತಿಳಿದುಕೊಳ್ಳಬೇಕು ಎಂಬ ಕುತೂಹಲದಲ್ಲಿ ಮುಂದೆ ಸಾಗುವರು. ವಸಂತನು ಮುಳುಗುತ್ತಿರುವ ರಕ್ತಮುದ್ದೆಯಂತಿರುವ ಸೂರ್ಯನೆಡೆಗೆ ಕಣ್ಣುಹಾಯಿಸಿದಾಗ ಲಲಿತನು ವಸಂತನನ್ನು ಗಮನಿಸುತ್ತಿದೆ. "ಇವನೂ ಒಬ್ಬನು ನಿಮ್ಮ ಜಗತ್ತು ಕಂಡ ಗಟ್ಟಿಯೇನು"(ಪು.೯೨) ವ್ಯಂಗ್ಯದ ಮಾತಿಗೆ ಸಂಶಯವೇ ಇಲ್ಲ ಎನ್ನುವನು. ಆಗತಾನೆ ಭಿಕ್ಷೆ ಬೇಡಿಕೊಂಡು ಹೊರಟಿರುವ ಕುರುಡು ಮುದುಕಿಯು ಚೆಲ್ಲಿರುವ ಕಾಳುಗಳನ್ನು ಹತ್ತು ವರ್ಷದ

ಹುಡುಗ ಆರಿಸಿಕೊಡುವನು. ಆ ಮುದುಕಿ, "ನೀನೇ ನನ್ನ ದೇವರಪ್ಪ" ಎಂದು ಆ ಮಗುವಿನ ತಲೆಯ ಮೇಲೆ ಕೈಯಾಡಿಸುವಳು. ಲಲಿತನು ವಸಂತನಿಗೆ, "ಏನು ಆ ಕುರುಡಿ ತಿರುಕಳವಳು ಜಗತ್ತು ಕಂಡವಳೇ?"(ಪು.೧೯೫) ಎಂದು ಹಾಸ್ಯ ಮಾಡಿದಾಗ 'ಇಲ್ಲಿ ಅವಳೇ ಜಗತ್ತು ಎಂದು ಲಲಿತನು ಹೇಳುವನು. ಈ ರೀತಿಯಾದ ಸಣ್ಣಸಣ್ಣ ಘಟನೆಗಳನ್ನಿಟ್ಟುಕೊಂಡು ಹಲವು ಪ್ರಶ್ನೆಗಳನ್ನು ಸೃಷ್ಟಿಸಿಕೊಳ್ಳುವ ಮೂಲಕ ಅವುಗಳಿಗೆ ಉತ್ತರಗಳನ್ನು ಕಂಡುಕೊಳ್ಳುವ ರೀತಿಯಲ್ಲಿ ಕಥಾನಿರೂಪಣೆಯು ಹೊಸದೆಂಬಂತೆ ಕಂಡುಬರುತ್ತದೆ.

'ಏತಂತು ವೇಶ್ಯೆ' ಕತೆಯ ಹಂದರವು ಒಬ್ಬ ವೇಶ್ಯೆಯ ವೃತ್ತಾಂತವನ್ನು ಒಳಗೊಂಡಿದೆ. ಒಬ್ಬ ಮುದುಕಿ ತನ್ನ ಬಾಲ್ಯ ಜೀವನದಿಂದ ವೃದ್ಧಾಪ್ಯದವರೆಗೆ ತನ್ನ ವೇಶ್ಯೆಯ ಬದುಕನ್ನು ಸ್ವತಃ ತಾನೆ ಹೇಳಿಕೊಂಡಂತೆ ನಿರೂಪಣಾ ಮಾದರಿ ಮೂಡಿಬಂದಿದೆ.

ದೂರದ ಸಂಬಂಧಿಕರ ಮನೆಯಲ್ಲಿ ಅನಾಥೆಯ ರೀತಿಯಲ್ಲಿ ಬೆಳೆದ ಹುಡುಗಿಗೆ, ಹೆಂಡತಿ ಸತ್ತು ಪಿಂಚಣಿ ಪಡೆಯುವ ಮುದುಕನಿಗೆ ಮದುವೆ ಮಾಡುತ್ತಾರೆ. ಮುಂದೆ ಮುದುಕನ ಮನೆಯವರು ಅವನ ಆಸ್ತಿಯನ್ನು ಲಪಟಾಯಿಸಲು ಸಂಚು ಮಾಡುತ್ತಾರೆ. ಹುಡುಗಿಗೆ ನಿನ್ನ ತವರು ಮನೆಗೆ ಹೋಗು ಎಂದು ಗದರಿಸುತ್ತಾರೆ. ಇವಳ ಗಂಡನು ಅವಳ ಮಾತು ಕೇಳದಾಗುತ್ತಾನೆ. ಮೊದಲಿದ್ದ ನಾಲ್ಕು ಮಕ್ಕಳನ್ನು ಸಾಕುವ ಜವಾಬ್ದಾರಿಯು ಇವಳ ಮೇಲೆ ಬೀಳುತ್ತದೆ. ಈ ಹುಡುಗಿಯ ಸ್ಥಿತಿಯನ್ನು ನೋಡಿದ ಪಕ್ಕದ ಮನೆಯವರು ಊಟ ಉಪಚಾರ ಕೊಟ್ಟು ಕೆಲದಿನ ತಮ್ಮ ಮನೆಯಲ್ಲಿಯೇ ಇರಿಸಿಕೊಳ್ಳುತ್ತಾರೆ. ಆ ಹುಡುಗಿಗೆ ಈ ಜೀವನ ಬೇಡವೆನಿಸಿ ಮಕ್ಕಳ ಸಾಕುವುದಕ್ಕಾಗಿ ಹೊಟ್ಟೆ ಹೊರೆಯಲು ವೇಶ್ಯೆ ವೃತ್ತಿಗೆ ಇಳಿಯುತ್ತಾಳೆ. ವೇಶ್ಯೆ ವೃತ್ತಿಗೆ ಇಳಿದ ಹುಡುಗಿ "ನನ್ನ ಮೈಯ್ಯೇ ನನ್ನ ದೇವರು, ನನ್ನ ಗುಡಿ ನನ್ನ ಸುಖವಿಲ್ಲಿಯೇ ಇರಲು ಅವರೇಕೆ ಇವರೇಕೆ ಎಂದುಕೊಳ್ಳದೆ"(ಪು.೨೦೬) ಬರುವ ಗಿರಾಕಿಗಳಿಗೆ ಕಾಮವನ್ನು ಉಣಬಡಿಸುತ್ತಾ ವೇಶ್ಯೆ ಜೀವನಕ್ಕೆ ತನ್ನನ್ನು ತಾನು ಒಗ್ಗಿಸಿಕೊಳ್ಳುತ್ತಾಳೆ.

ಹೀಗೆ ಒಂದು ದಿನ ಹಿರಿಯ ಮುದುಕನಾಗಿರುವವನು ವೇಶ್ಯೆಯ ಮನೆಗೆ ಬರುವನು. "ನನ್ನ ಹೆಂಡತಿ ತೀರಿ ಹೋಗಿರುವಳು. ಆ ಕಾರಣದಿಂದ ಒಂದು ಎಳೆ ಹುಡುಗಿಯನ್ನು ಹಣ ಕೊಟ್ಟು ತಂದಿರುವೆ"(ಪು.೨೦೭) ಎನ್ನುವನು. ಇದನ್ನು ಕೇಳಿದ ವೇಶ್ಯೆ ನನ್ನ ಜೀವನದ ವೃತ್ತಾಂತ ಇದ್ದ ಹಾಗೆ ಇದೆಯಲ್ಲ ಎಂದು ಆ ಗಿರಾಕಿಯನ್ನು ಬೈದು ಕಳಿಸುವಳು. ಜಿಗುಪ್ಸೆಗೊಂಡು ಈ ವೇಶ್ಯೆ ವೃತ್ತಿ ಬೇಡವೆನಿಸಿ ಮನೆಗೆ ಬೀಗ ಹಾಕಿ ಮನೆಯೊಳಗಡೆಯೇ ಇರುವಳು. ಸಾವು ಪ್ರಶ್ನಿಸಿದಂತಾಗಿ ಮತ್ತೆ ವೇಶ್ಯೆ ವೃತ್ತಿಯನ್ನು ಮುಂದುವರಿಸುವಳು. ಅಲ್ಲಿಗೆ ಕತೆಯು ಮುಗಿಯುತ್ತದೆ.

ಕತೆಯನ್ನು ಮುದುಕಿಯೇ ನಿರೂಪಿಸಿದಂತಿದೆ. ಆ ಕಾಲಘಟ್ಟದ ಸಾಮಾಜಿಕ ಚಹರೆಗಳನ್ನು ಸೆರೆಹಿಡಿಯುವ ಈ ಕತೆಯು ಅಂದಿನ ಆರ್ಥಿಕ ಸ್ಥಿತಿಗತಿಗಳು, ಬಡತನ, ಬಾಲ್ಯವಿವಾಹ, ವೇಶ್ಯಾವಾಟಿಕೆ ಹಾಗೂ ಶೋಷಣೆಯಂತಹ ಸಾಮಾಜಿಕ ಪಿಡುಗುಗಳ ಬಗ್ಗೆ ಚಿತ್ರಿಸಿದಂತಿದೆ.

'ವಿರಕ್ತ ಸಂಚಾರಿ' ಎಂಬ ಶೀರ್ಷಿಕೆಯಡಿಯಲ್ಲಿ ಲೇಖಕರು ಈ ಕತೆಯನ್ನು ಸೊಗಸಾಗಿ ಚಿತ್ರಿಸಿದ್ದಾರೆ. ಯುವಕನಾದ ಗೋಪಿನಾಥ ಪ್ರಮುಖ ಸ್ಥಾನದಲ್ಲಿ ಕಂಡುಬರುತ್ತಾನೆ. ಈ ಯುವಕ ಸಂಸಾರ ತಾಪತ್ರಯಕ್ಕೆ ಬೇಸತ್ತು ನರಸನ ಕೇರಿಯ ಹತ್ತಿರವಿರುವ ಕೇದಾರನ ಗುಡಿಯಲ್ಲಿಯೇ ಧ್ಯಾನ ಮಾಡುತ್ತಾ ಕಾಲ ಕಳೆಯುತ್ತಾನೆ.

ಮನೆಮಠ ಹೆಂಡತಿ ಮಕ್ಕಳನ್ನು ಮರೆತು ಸನ್ಯಾಸಿಯಂತೆ ವಾಸವಾಗಿರುವ ಗೋಪಿನಾಥನನ್ನು ಹುಡುಕುತ್ತಾ ಹೆಂಡತಿಯಾದ ಪಾರ್ವತಿಯು ಕೇದಾರನ ಗುಡಿಗೆ ಬರುತ್ತಾಳೆ. ಸಂಸಾರವೆಂಬ ಜಂಜಾಟದ ಬದುಕು ಬೇಡವೆಂದು ಸನ್ಯಾಸಿಯಾಗಿ ದೇವರ ಧ್ಯಾನದಲ್ಲಿ ಕಾಲ ಕಳೆಯಬೇಕೆಂದು ಮೊದಲೇ ನಿರ್ಣಯಿಸುತ್ತಾನೆ. ಗಂಡನ ಈ ಹುಚ್ಚುತನಕ್ಕೆ ಪಾರ್ವತಿ ದುಃಖಿತಳಾಗುತ್ತಾಳೆ. ಶಿವಸ್ಮರಣೆ ಮಾಡುತ್ತಾ ಕಾಲ ಕಳೆಯುತ್ತಿರುವಾಗಲೇ ಹೆಂಡತಿ ಗಂಡನನ್ನು ಕಾಡಿಬೇಡಿ ಮನವೊಲಿಸಲು ಮುಂದಾಗುತ್ತಾಳೆ. ಗೋಪಿನಾಥನು ತಾನು ಬರುವುದಿಲ್ಲವೆನ್ನುತ್ತಾನೆ. "ಪಾರ್ವತಿ ಗಂಡನನ್ನು ಅಪ್ಪಿಕೊಂಡು ಅಳುತ್ತಾ ನನ್ನನ್ನು ಕ್ಷಮಿಸಿರಿ ಎಂದು ಬೇಡಿಕೊಳ್ಳುತ್ತಾಳೆ"(ಪು.೨೧೭). ಆಗ ಇಬ್ಬರೂ ಕೆಲಹೊತ್ತು ಸ್ತಬ್ಧರಾಗಿ ನಿಂತು ದುಃಖಿತರಾಗಿ ಅತ್ತು ತಮ್ಮ ತಪ್ಪಿನ ಅರಿವಾಗಿ ಇನ್ನು ಮುಂದೆ ಪ್ರೀತಿಯಿಂದ ಉತ್ತಮ ಜೀವನ ನಡೆಸೋಣವೆಂದು ನಿಶ್ಚಯಿಸಿ ತಮ್ಮ ಊರಿಗೆ ಹೊರಟು ಹೋಗುತ್ತಾರೆ. ಇಲ್ಲಿಗೆ ಈ ಕತೆ ಮುಗಿಯುತ್ತದೆ.

ಕತೆಯಲ್ಲಿ ನಿರೂಪಣಾ ಮಾದರಿಯು ಲೇಖಕರೇ ಹೇಳಿಕೊಂಡಂತೆ ಮೂಡಿಬಂದರೂ ಮಧ್ಯಮಧ್ಯ ಪಾತ್ರಗಳ ಸಂಭಾಷಣೆಯು ಕಂಡುಬರುತ್ತದೆ. ಸಂಸಾರ ತಾಪತ್ರಯಕ್ಕೆ ಹೆದರಿ ಗೋಪಿನಾಥ ಸನ್ಯಾಸಿಯಾಗಿ ಗುಡಿಸೇರುವುದು ತಿಳಿದುಬರುತ್ತದೆ. ಈ ಕತೆಯಲ್ಲಿ ಪ್ರೀತಿ ವಿಶ್ವಾಸದ ಕೊರತೆ, ಹೊಂದಾಣಿಕೆ ಇಲ್ಲದಿರುವುದು ಮನುಷ್ಯನ ಹೊಣೆಗೇಡಿತನ, ಸಣ್ಣತನಗಳನ್ನು ಪ್ರಶ್ನಿಸಿಕೊಳ್ಳುವಂತಹ ಮನೋಭೂಮಿಕೆಯಲ್ಲಿ ಈ ಕತೆಯು ಮುಂದುವರಿಯುತ್ತದೆ.

'ಕೂಟಪ್ರಶ್ನೆ' ಕತೆಯಲ್ಲಿ ಚಂಚಲ ಮನಸ್ಸಿನ ಗಣೇಶನ ಪಾತ್ರವೇ ಪ್ರಮುಖವಾದುದು. ನಿರೂಪಣಾ ಮಾದರಿಯು ಲೇಖಕರೇ ಹೇಳಿಕೊಂಡಂತೆ ಕಂಡುಬರುತ್ತದೆ. ಗಣೇಶನಿಗೆ ಅವನ ಸಂಬಂಧಿಕರೇ ಒಂದು ಪೋಲೀಸ್ ಕೆಲಸವನ್ನು ಕೊಡಿಸಿರುತ್ತಾರೆ. ಕೆಲಸದಲ್ಲಿ ತನ್ನನ್ನು ತಾನು ಸರಿಯಾಗಿ ತೊಡಗಿಸಿಕೊಳ್ಳುವುದಿಲ್ಲ. ಮನೆಯಲ್ಲಿಯೂ ಸರಿಯಾಗಿರದೆ, ಪೋಲೀಸ್ ಕೆಲಸವನ್ನು ದುರುಪಯೋಗಪಡಿಸಿಕೊಳ್ಳುತ್ತಾನೆ. ಖಿನ್ನತೆಯಿಂದ, ಆಲಸ್ಯತೆಯಿಂದ ಕಲ್ಪನಾಲೋಕದಲ್ಲಿ ತೇಲುತ್ತಾ, "ನಾನು ವಕೀಲನಾದರೆ? ಕುಬೇರನಾಗುತ್ತಿದ್ದೆ! ರಾಜಕಾರಣಿಯಾಗಿದ್ದರೆ ದೇಶದ ಮುಖಂಡನಾಗುತ್ತಿದ್ದೆ" (ಪು.೨೧೮) ಎಂದು ಯೋಚಿಸುವ ಮನಸ್ಸು ಈ ಗಣೇಶನದ್ದಾಗಿರುತ್ತದೆ. ಸಿಟಿ ಪೋಲೀಸನಾದ ಈ ಯುವಕನಿಗೆ ಒಂದು ಕಾಯಂ ಕೂಟ(ಸ್ಥಳ) ವ್ಯಾಪ್ತಿಯಲ್ಲಿ ತನ್ನ ಕಾರ್ಯವನ್ನು ಮಾಡಬೇಕಾಗಿರುತ್ತದೆ. ಆ ಸ್ಥಳದಲ್ಲಿಯೇ ಹಲವಾರು ಪ್ರಶ್ನೆಗಳು ಅವನ ತಲೆಯಲ್ಲಿ ಮೂಡುತ್ತವೆ. ಚಂಚಲ ಮನಸ್ಸಿನವನಾದ ಗಣೇಶನು ವೇಶ್ಯೆಯ ಸಂಬಂಧವನ್ನು ಬೆಳೆಸುತ್ತಾನೆ ಮತ್ತು ಅವನ ಕೆಲಸದಲ್ಲಿ ಭ್ರಷ್ಟತೆ ಎದ್ದು

ಕಾಣುತ್ತದೆ. ಇದನ್ನು ಮನಗಂಡ ಪೊಲೀಸ್ ಮೇಲಧಿಕಾರಿಯು ಇವನನ್ನು ಕೆಲಸದಿಂದ ತೆಗೆದುಹಾಕುತ್ತಾನೆ. ಇತ್ತ ಮನೆಯಲ್ಲಿ ಮಗು ಹುಟ್ಟಿದ ಸಂಭ್ರಮದ ಸಂತೋಷದಲ್ಲಿ ಹೆಂಡತಿ, ತಾಯಿ, ಸಂಬಂಧಿಕರು ಇರುತ್ತಾರೆ. ಗಣೇಶನ ಕೆಲಸ ಹೋಗಿರುವ ವಿಚಾರ ತಿಳಿದು ಮನೆಯವರು ದುಃಖತಪ್ತರಾಗುತ್ತಾರೆ. ಇಲ್ಲಿಗೆ ಈ ಕತೆ ಮುಗಿಯುತ್ತದೆ.

'ಕೂಟಪ್ರಶ್ನೆ' ಈ ಕತೆಯಲ್ಲಿ ಖಿನ್ನತೆಯಿಂದ ಕಲ್ಪನಾಲೋಕದಲ್ಲಿ ತೇಲುವ ಗಣೇಶನ ಪಾತ್ರವು ಹೊಣೆಗೇಡಿತನದಿಂದ ಕೂಡಿದೆ. ಮುಗಳಿ ಅವರ ಬಹುತೇಕ ಕತೆ–ಕಾದಂಬರಿಗಳಲ್ಲಿ ಬರುವ ಹಾಗೆ ಬಡತನ, ಶೋಷಣೆ, ಅನಕ್ಷರತೆ, ನಿರುದ್ಯೋಗ, ಬಾಲ್ಯವಿವಾಹ, ದಾರಿದ್ರ್ಯ ಬದುಕಿನ ಚಿತ್ರಣ ಒಳಗೊಂಡ ಪಾತ್ರ ಚಿತ್ರಣಗಳು ಹಾಗೂ ಅಂದಿನ ಸಮಾಜದ ಚಹರೆಗಳನ್ನು ಬಿತ್ತರಿಸುವಂತಹ ಅಂಶಗಳು ಈ ಕತೆಯಲ್ಲಿ ಕಂಡುಬರುತ್ತವೆ.

'ಕ..ಚ್ಚು!' ಮುಗಳಿ ಅವರು ರಚಿಸಿರುವ ಕೊನೆಯ ಕತೆಯಾಗಿದೆ. ಈ ಕತೆಯು ಕಡುಬಡತನದಲ್ಲಿ ಬದುಕುವ ಒಂದು ಕೌಟುಂಬಿಕ ಕತೆಯಾಗಿದೆ. ಚಿಕ್ಕ ಮುರುಕಲು ಗುಡಿಸಲಿನಲ್ಲಿ ಗಂಡ ಹೆಂಡತಿ ಆಗತಾನೆ ಜನಿಸಿದ ಮಗುವಿನೊಂದಿಗೆ ವಾಸವಾಗಿರುತ್ತಾರೆ. ಮನೆಯಲ್ಲಿ ಒಂದು ಹೊತ್ತಿನ ಊಟಕ್ಕೆ ಕೊರತೆಯಿದ್ದರೂ ಅದಕ್ಕೆ ಯೋಚಿಸದೆ ಬರಿ ದೇವರ ಸ್ಮರಣೆಯಲ್ಲಿಯೇ ಕಾಲ ಕಳೆಯುತ್ತಾನೆ. ಹೆಂಡತಿಯು ಜೀವನದ ಬಂಡಿಯನ್ನು ಸಾಗಿಸುವ ಸಲುವಾಗಿ ತನ್ನ ಚಿನ್ನದ ಒಡವೆಗಳನ್ನು ಕಳೆದುಕೊಂಡಿರುತ್ತಾಳೆ. ಗಂಡನ ದೇವರ ಕಾರ್ಯವನ್ನು, ಹುಚ್ಚು ಭಕ್ತಿಯನ್ನು ಕಂಡು ಗಂಡನ ಮೇಲೆ ರೇಗಾಡುತ್ತಾಳೆ.

ಗಂಡನಾದ ಮಹಾಶಯನು "ಕೇಳು ಹೆಂಗಸೇ ಪರಮಾರ್ಥವೆಂದರೆ ನಿನಗೆ ಗೊತ್ತೆ? ಇದೇನು ನಿನ್ನದು? ಗಂಡನನ್ನು ಶಾಂತವಾಗಿ ಪಾರಾಯಣ ಮಾಡಲಿಕ್ಕೆ ಬಿಡದಿರುವುದು, ಯಾವಾಗಲೂ ಹೊಟ್ಟೆಪಾಡಿನ ಮಾತನ್ನೇ ಆಡುತ್ತಾ ತೊಂದರೆ ಕೊಡುವುದು, ಕೇಳು, ಹಕ್ಕಿಗಳಿಗೆ ಯಾರು ಹೊಟ್ಟೆಗೆ ಹಾಕುತ್ತಾರೆ? ಯಾವಾಗ ನೋಡಿದರೂ ದೇವರಲ್ಲಿ ಅಪನಂಬಿಕೆ!"(ಪು.೨೩೨) ಎಂದು ಹೆಂಡತಿಗೆ ಹೇಳುತ್ತಾನೆ. ಹಾಗಾದರೆ ಈ ಹಾಳು ಜನ್ಮ ನನಗೆ ಬೇಡವೆಂದು ಸಾಯಲಿಕ್ಕೆ ಹಗ್ಗವನ್ನು ದಿಟ್ಟಿಸಿ ನೋಡುತ್ತಾಳೆ. ಮಗುವು ಅಷ್ಟರಲ್ಲಿಯೇ ಚಿಟಾರನೆ ಚೀರಿ ಅಳುತ್ತದೆ. ತಾಯಿ ಮಗುವನ್ನು ಎತ್ತಿಕೊಂಡು "ಖೋಡಿ! ಉರುಲು ಹಾಕಿಕೊಳ್ಳಲು ನನ್ನನ್ನು ಬಿಡುವುದಿಲ್ಲ! ನೆಮ್ಮದಿಯಿಂದ ನಾನು ಉರುಲು ಹಾಕಿಕೊಳ್ಳುವಂತಿಲ್ಲ!"(ಪು.೨೩೪) "ತಗೋ ಹಾಗಾದರೆ ಆಸೆಬುರುಕ! ಅದೆ ಉಸರಿನಲ್ಲಿ ಕೂಗಿ ಆಕೆ ತನ್ನ ಒಣಗಿಹೋದ ಮೊಲೆಯನ್ನು ಅದರ ಬಾಯಲ್ಲಿ ತುರುಕಿ ಅಂದಳು ತಗೋ ಹಾಗಾದರೆ ಹೀರಿಬಿಡು ಕಚ್ಚು"(ಪು.೨೩೪) ಎಂಬಲ್ಲಿಗೆ ಕತೆ ಮುಗಿಯುತ್ತದೆ. ಮನೆಯ ಆರ್ಥಿಕ ಪರಿಸ್ಥಿತಿಯು ಶೋಚನೀಯವಾಗಿದ್ದರೂ ಅದನ್ನು ಗಮನಿಸದೆ ಕೇವಲ ದೇವರ ಧ್ಯಾನದಲ್ಲಿ ಮಗ್ನನಾಗಿರುವ ಗಂಡನನ್ನು ಜರಿದು ಪ್ರತಿಭಟಿಸುವ, ಹೆಂಡತಿಯ ಪಾತ್ರವು ಬಡತನದಲ್ಲಿ ಕೈತೊಳೆದಂತೆ ಈ ಕತೆ ಮೂಡಿಬಂದಿದೆ.

'ಕನಸಿನ ಕೆಳದಿ' ಮುಗಳಿ ಅವರು ಬರೆದಿರುವ ಏಕೈಕ ಕಥಾಸಂಕಲನ. ಇದರ ವೈಶಿಷ್ಟ್ಯತೆ ಈ ರೀತಿ ಇದೆ. ಮುಗಳಿ ಅವರ ಕತೆಗಳಲ್ಲಿ ಆಧುನಿಕತೆ ಸುಧಾರಣಾವಾದ, ಮಾನವತಾವಾದ ಮತ್ತು ಆದರ್ಶತನವನ್ನು ಈ ಕತೆಗಳು ಎತ್ತಿಹಿಡಿಯುತ್ತವೆ. ಮುಗಳಿ ಅವರು ಹಳ್ಳಿಗಳ ನೈಜವಾದ ವಾಸ್ತವ ಬದುಕನ್ನು ಕಟ್ಟಿಕೊಡಲು ಶ್ರಮಿಸಿದ್ದಾರೆ. ಜಾತಿಯ ಚೌಕಟ್ಟು, ಬಡತನ, ಹೆಣ್ಣಿನ ಶೋಷಣೆಗಳು, ಬಾಲ್ಯವಿವಾಹ, ದಾರಿದ್ರ್ಯದ ಬದುಕು, ನಿರುದ್ಯೋಗದ ಸಮಸ್ಯೆಗಳು, ಹೆಚ್ಚು ಎದ್ದುಕಾಣುವಂತ ಅಂಶಗಳಾಗಿವೆ. ಕೆಲವು ಸಂದರ್ಭಗಳಲ್ಲಿ ಬ್ರಾಹ್ಮಣ ಕುಟುಂಬಗಳಿಗೆ ಸೇರಿದ ವಿದ್ಯಾವಂತ ಪಾತ್ರಗಳ ಮುಖೇನ ಕತೆಗಳಲ್ಲಿ ಸಾಮಾಜಿಕ ಚಹರೆಯನ್ನು ಗುರುತಿಸುತ್ತಾರೆ.

ಕಥನದ ಶೈಲಿಯಲ್ಲಿ ಸಾಮಾನ್ಯವಾಗಿ ಆದರ್ಶತನದ ಕಣ್ಣುಗಳ ಮೂಲಕ ಕಂಡ ವಾಸ್ತವದ ನಿರೂಪಣೆಯೇ ಮೇಲುಗೈ ಸಾಧಿಸಿದೆ. ಅನ್ನಬಹುದು. ಅಂತಹ ಕತೆಗಳಲ್ಲಿ ನೀರಿನ ನಾರಪ್ಪ ಒಂದು. ಮನುಷ್ಯ ಸ್ವಭಾವದ ಸೂಕ್ಷ್ಮಗಳನ್ನು ಚೆನ್ನಾಗಿ ಬಿಡಿಸುತ್ತದೆ. ಅದೇ ರೀತಿ ಗೀತಾಳೊಡನೆ ಯಾವ ರೀತಿ ವರ್ತಿಸಬೇಕು ಎಂಬ ವಿವೇಕವಿಲ್ಲದ ಸಮಾಜಘಾತುಕ ಸ್ಥಾನದಲ್ಲಿ ವೇದಾಂತಿ ಕಾಣುತ್ತಾನೆ. ವಿವೇಕಾಚಾರ್ಯ 'ನಾ ಏಕೆ ಪೊಲೀಸನಾದೆ? ಎಂಬ ಕೂಟ ಪ್ರಶ್ನೆಗೆ ಉತ್ತರ ಸಿಗುವುದೇ ಇಲ್ಲ. ಹಾಗೂ ಕ...ಚ್ಚು ಕತೆಯಲ್ಲಿ ನಾಯಕಿಯ ಪ್ರಮುಖ ಪಾತ್ರಚಿತ್ರಣ ಒಳಗೊಂಡಿದೆ. 'ಜಗತ್ತು ಕಂಡವರಾರು?' 'ಕನಸಿನ ಕೆಳದಿ', 'ಮಂಜಿನ ಮನೆ', ಈ ಕತೆಗಳಲ್ಲಿ ಕೆಲಸಿಗರ ಕಷ್ಟಗಳು, ಕುರುಡುತನ, ಬಾಲ್ಯವಿವಾಹ, ಕೊಲೆ ಮತ್ತು ಮರಣ, ದಾರಿದ್ರ್ಯದಂತ ಅಂಶಗಳು ಕಂಡುಬರುತ್ತವೆ. 'ವೇದಾಂತಿ!' ಮತ್ತು 'ವಿತಂತು ವೇಶ್ಯೆ' ಕತೆಗಳು ಮನಸ್ಸಿನ ಪರಿವರ್ತನೆ ಮತ್ತು ಪತನವನ್ನು ನಿರೂಪಿಸುವಂತ ಕತೆಗಳಾಗಿವೆ.

"ಒಟ್ಟಿನಲ್ಲಿ ಮುಗಳಿ ಅವರ ಕತೆಗಳನ್ನು ಶ್ರೇಷ್ಠ ಕತೆಗಳೆಂದು ಕರೆಯಲಾಗದಿದ್ದರೂ ಅವು ತಮ್ಮ ಕಾಲದ ಸಮಸ್ಯೆಗಳನ್ನು ಗಂಭೀರವಾಗಿ ಗ್ರಹಿಸುವ ಮತ್ತು ಅವುಗಳನ್ನು ಹೊಸ ತಿಳಿವಳಿಕೆಯ ಬೆಳಕಿನಲ್ಲಿ ಬಿಡಿಸುವ ಪ್ರಯತ್ನವನ್ನು ಮಾಡುತ್ತವೆ. ಕನ್ನಡ ಸಣ್ಣಕತೆಗಳ ಸಾಲಿನಲ್ಲಿ ಇವುಗಳಿಗೆ ಬಹಳ ಮಹತ್ವದ ಸ್ಥಾನ ಸಿಗದೇ ಹೋಗಬಹುದು. ಆದರೆ ಮುಗಳಿ ಅವರ ಒಟ್ಟು ಬರೆಹಗಳ ಚೌಕಟ್ಟಿನಲ್ಲಿ ಹಾಗೂ ಆ ಕಾಲದ ಲೇಖಕರ ಪ್ರಯೋಗಶೀಲತೆಗೆ ಸೂಕ್ಷ್ಮವಾಗಿ ಅವುಗಳನ್ನು ಎಚ್ಚರಿಕೆ ಮತ್ತು ಕುತೂಹಲಗಳಿಂದ ಪರಿಶೀಲಿಸುವ ಅಗತ್ಯವಿದೆ"[೧೩] ಎಂದು ಎಚ್.ಎಸ್. ರಾಘವೇಂದ್ರರಾವ್ ಅವರು ಅಭಿಪ್ರಾಯಪಡುತ್ತಾರೆ.

೩.೩. ಕಾದಂಬರಿ

ಕನ್ನಡ ಸಾಹಿತ್ಯದ ಅನೇಕ ಪ್ರಕಾರಗಳಲ್ಲಿ ಕಾದಂಬರಿ ಪ್ರಕಾರವು ಹೆಚ್ಚು ಜನಪ್ರಿಯವಾಗಿದೆ. ಜೀವನದರ್ಶನ ನೀಡುವ ಈ ಕಾದಂಬರಿ ಪ್ರಕಾರಕ್ಕೆ ಮಹತ್ವದ ಸ್ಥಾನವಿದೆ. ಒಂದು ಕಾಲದಲ್ಲಿ ಮನರಂಜನೆಯ ಮಾಧ್ಯಮವಾಗಿದ್ದ ಕಾದಂಬರಿ ಪ್ರಕಾರ, ಆಧುನಿಕ ಸಾಹಿತ್ಯದಲ್ಲಿ ತತ್ವಜ್ಞಾನ, ಇತಿಹಾಸ, ರಾಜಕೀಯ ವಿಚಾರ, ಜಾನಾಂಗಿಕ ಸಮಸ್ಯೆಗಳನ್ನು ಬಿತ್ತರಿಸುವ ಬಂಡಾಯ, ಕ್ರೌರ್ಯ–

ಪ್ರತಿಭಟನೆ ವ್ಯಕ್ತಪಡಿಸುವ ಕರತಲ ರಂಗಭೂಮಿಯಾಗಿ ಮೈದಳೆದಿದೆ. ಮನರಂಜನೆ ಅದರ ಗುರಿಯಾದರೂ ಅದರದೆಯಾದ ವಿಚಾರಧಾರೆಗಳ ಯಶಸ್ವೀ ಮಾಧ್ಯಮವಾಗಿ ಪರಿಣಮಿಸಿದೆ.

ಕಾದಂಬರಿಯು 'ಸಾಮಾನ್ಯ ಮನುಷ್ಯನ ಮಹಾಕಾವ್ಯ' ಎಂಬ ಅಗ್ಗಳಿಕೆಯನ್ನು ಪಡೆದ ಈ ಪ್ರಕಾರ ವಿಶ್ವದ ಎಲ್ಲಾ ಭಾಷೆಗಳ ಸಾಹಿತ್ಯದಲ್ಲಿ ಶ್ರೇಷ್ಠ ಸ್ಥಾನವನ್ನು ಪಡೆದಿದೆ. ಇಂದು ಕಾದಂಬರಿ ಕತೆ, ಘಟನಾವಳಿಗಳು ಮನರಂಜನೆಯ ಘಟ್ಟ ದಾಟಿ, ಜನತೆಯ ಸಂಸ್ಕೃತಿಯ ಮಾನವೀಯ ನಿತ್ಯಸತ್ಯ ಸಂಗತಿಗಳ ಅಭಿವ್ಯಕ್ತಿಯಾಗಿ ಬೆಳೆದುನಿಂತಿದೆ. ಕನ್ನಡ ಕಾದಂಬರಿಗಳಲ್ಲಿ ಕೆಲವಾದರೂ ಉನ್ನತವಾದ ಸ್ಥಾನವನ್ನು ಪಡೆದಿವೆ. ವಿಶೇಷ ಚಿಂತನೆಗೆ ಆಹ್ವಾನವನ್ನೊದಗಿಸಿವೆ.

ಅದೇ ರೀತಿಯಾಗಿ ಭಾರತೀಯ ಕಾದಂಬರಿಯ ಇತಿಹಾಸವನ್ನು ನೋಡಿದಾಗ ಎರಡು ಪ್ರವೃತ್ತಿಗಳು ಸ್ಪಷ್ಟವಾಗಿ ಕಂಡುಬರುತ್ತವೆ. ಮೊದಲನೆಯದು ವಾಸ್ತವವಾದ, ಎರಡನೆಯದು ರಮ್ಯವಾದ. ಈಗ ನಾವು ವಾಸ್ತವವಾದವನ್ನಷ್ಟೇ ನೋಡುವುದಾದರೆ, ಭಾರತದಲ್ಲಿ ಕಾದಂಬರಿ ತಲೆದೋರುವ ವೇಳೆಗೆ ಅಂದರೆ ಯುರೋಪಿನಲ್ಲಿ ವಾಸ್ತವವಾದದ ಮಹಾಯುಗ ಆಗಲೇ ಕಳೆದುಹೋಗಿದ್ದಿತು. ಆದರೆ, ಈ ಮಾದರಿಗಳೇ ಆಗಿನ ಲೇಖಕರೆದುರು ಇದ್ದುದರಿಂದ ಅವುಗಳನ್ನು ಸ್ವೀಕರಿಸುವುದು ಒಂದು ರೀತಿಯಿಂದ ಅನಿವಾರ್ಯವಾಯಿತು. ಇಂಗ್ಲಿಷ್‌ನ್ನು ಒಳಗೊಂಡಂತೆ ಭಾರತೀಯ ಭಾಷೆಗಳಲ್ಲಿ ಹುಟ್ಟಿಕೊಂಡ ಮೊದಲ ಕಾದಂಬರಿಗಳಲ್ಲಿ ಬಹಳಷ್ಟು ವಾಸ್ತವ ಮಾರ್ಗವನ್ನೇ ಅನುಸರಿಸಿದುದು ಆರೋಗ್ಯಕರವಾದ ಬೆಳವಣಿಗೆಯಾಗಿತ್ತು. ಇವುಗಳಲ್ಲಿ ಕೆಲವನ್ನು ಇಲ್ಲಿ ಹೆಸರಿಸಬಹುದು. "ಬಾಬಾ ಪದಮನಜೀ ಅವರ ಮರಾಠಿ ಕಾದಂಬರಿ 'ಯಮುನಾ ಪರ್ಯಟನ'(೧೮೫೭), ಭರತೇಂದು ಹರೀಶ್ಚಂದ್ರರ ಹಿಂದಿ ಕಾದಂಬರಿ 'ಅಂಧೇರ್ ನಗರೀ ಚೌಪಟ್ ರಾಜಾ'(೧೮೮೧), ಮಿರ್ಜಾ ಮಹಮ್ಮದ್ ಹಾದಿರುಸ್ತಾರ ಉರ್ದು ಕೃತಿ ಉಮ್ರಾನ್‌ಜಾನ್(೧೮೯೯), ಪ್ಯಾರೀಚದ ಮಿತ್ರರ ಬಂಗಾಳಿ– ಅಲೇಶ್ ಫರೇರ್ ದುಲಾಲ್(೧೮೫೮), ಸೌಮ್ಯಅಲ್ ವೇದನಾಯಗಂ ಪಿಳ್ಳೈ ಅವರ ತಮಿಳು ಕಾದಂಬರಿ ಪ್ರತಾಪ ಮುದಲಿಯಾರ್ ಚರಿತ್ರಮ್(೧೮೭೯) ಲಾಲ್ ಬಿಹಾರಿ ಡೇ ಅವರ ಇಂಗ್ಲಿಷ್ ಕಾದಂಬರಿ 'Govinda Samant' ಗೋವರ್ಧನ ತ್ರಿಪಾದಿಯವರ ಗುಜರಾತಿ ಕಾದಂಬರಿ 'ಸರಸ್ವತೀ ಚಂದ್ರ' (೧೯೦೧)."[೧೪]

ಹಾಗೆಯೇ ಕನ್ನಡದಲ್ಲಿ ಕುವೆಂಪು ಅವರ ಕಾನೂರು ಸುಬ್ಬಮ್ಮ ಹೆಗ್ಗಡತಿ, ಮಲೆಗಳಲ್ಲಿ ಮದುಮಗಳು, ಶಿವರಾಮ ಕಾರಂತರ ಚೋಮನ ದುಡಿ, ಮರಳಿ ಮಣ್ಣಿಗೆ, ಬೆಟ್ಟದ ಜೀವ, ವಿ.ಕೃ ಗೋಕಾಕರ ಸಮರಸವೇ ಜೀವನ, ರಾವ್ ಬಹದ್ದೂರ್ ಅವರ ಗ್ರಾಮಾಯಣ, ಮಿರ್ಜಿ ಅಣ್ಣಾರಾಯರ 'ನಿಸರ್ಗ', ಶಂಕರ ಮೊಕಾಶಿ ಪುಣೇಕರರ ಗಂಗವ್ವ ಮತ್ತು ಗಂಗಾಮಾಯಿ, ಪಿ. ಲಂಕೇಶರ ಮುಸ್ಸಂಜೆಯ ಕಥಾಪ್ರಸಂಗ, ಚಂದ್ರಶೇಖರ ಕಂಬಾರರ ಕರಿಮಾಯಿ, ಶ್ರೀಕೃಷ್ಣ ಆಲನಹಳ್ಳಿ ಅವರ ಕಾಡು, ಪರಸಂಗದ ಗೆಂಡೆತಿಮ್ಮ ಮತ್ತು ಭುಜಂಗಯ್ಯನವರ ದಶಾವತಾರಗಳು, ಪೂರ್ಣಚಂದ್ರ ತೇಜಸ್ವಿ ಅವರ ಅಬಚೂರಿನ ಪೋಸ್ಟಾಪೀಸು ಹಾಗೂ ರಂ.ಶ್ರೀ.ಮುಗಳಿ ಅವರ ಬಾಳುರಿ,

ಕಾರಣಪುರುಷ, ಅನ್ನ ಕಾದಂಬರಿಗಳಲ್ಲಿಯೂ ಬದಲಾವಣೆ ಪ್ರಕ್ರಿಯೆ ಪ್ರತಿಬಿಂಬಿಸುವಂತಹ ವಾಸ್ತವವಾದಿ ಅಂಶಗಳು ಎದ್ದುಕಾಣುತ್ತವೆ.

ಮುಗಳಿ ಅವರು ಒಟ್ಟು ನಾಲ್ಕು ಕಾದಂಬರಿಗಳನ್ನು ರಚಿಸಿದ್ದಾರೆ. ಬಾಳುರಿ(೧೯೩೪), ಕಾರಣಪುರುಷ(೧೯೩೯), ಅನ್ನ(೧೯೪೪) ಮತ್ತು ಅಗ್ನಿವರ್ಣ(೧೯೮೨) ಕಾದಂಬರಿಗಳು ವಾಸ್ತವವಾದ, ಆದರ್ಶವಾದದ ಅಂಶಗಳನ್ನು ಒಳಗೊಂಡಿವೆ. ಅವರ ಮೂರು ಕಾದಂಬರಿಗಳು ಸ್ವಾತಂತ್ರ್ಯ ಕಾಲಘಟ್ಟದಲ್ಲಿ ರಚನೆಗೊಂಡಿದ್ದರೂ ಸಹ ಬಹುತೇಕ ವಿಷಯ ವಸ್ತುವು ಹಸಿವು ಬಡತನ, ದಾರಿದ್ರ್ಯ, ಬಾಲ್ಯವಿವಾಹ, ವೇಶ್ಯಾವಾಟಿಕೆ, ನಿರುದ್ಯೋಗ, ಜಮೀನ್ದಾರಿ ಪದ್ಧತಿಯ ದಬ್ಬಾಳಿಕೆ ಸಮಸ್ಯೆಗಳು ಮುಖ್ಯ ಘಟ್ಟದಲ್ಲಿ ಗೋಚರಿಸುತ್ತವೆ. ಅಂಥ ಕಾದಂಬರಿಗಳಲ್ಲಿ 'ಬಾಳುರಿ' ಒಂದಾಗಿದೆ.

'ಬಾಳುರಿ' ಮುಗಳಿ ಅವರು ರಚಿಸಿದ ಮೊದಲ ಕಾದಂಬರಿ. ಈ ಕಾದಂಬರಿಯಲ್ಲಿ ಪ್ರಮುಖವಾಗಿ ನಿರುದ್ಯೋಗಿ ಯುವಕರ ನಾಲ್ಕು ಪಾತ್ರಗಳು ಕಂಡುಬರುತ್ತವೆ. ಅಂತಹವುಗಳಲ್ಲಿ ಬಡವನಾದ ಜಗ್ಗಣ್ಣ, ಜಾಣ ಬುದ್ಧಿವಂತನಾದ ಅನಂತ, ಡೌಲಿನ ಉಡಾಳ ಕಾಮಣ್ಣ, ನಿಶ್ಚಿಂತ ಸೋಮಾರಿ ಜಯರಾಯ ಹಾಗೂ ಶ್ರೀಮಂತರಾದ ಕುಬೇರರಾಯರ ಹೆಂಡತಿ ಶಾಂತಾಬಾಯಿ, ವೇಶ್ಯೆಯಾದ ಕಾಂತಾಸಾನಿಯಂತಹ ಪಾತ್ರಗಳ ಮುಖೇನ ಅಂದಿನ ಕೌಟುಂಬಿಕ ಜೀವನ ವೃತ್ತಾಂತ ಕುರಿತು ಹೆಣೆದಿರುವ ಕಾದಂಬರಿ ಇದಾಗಿದೆ. ಕಾದಂಬರಿಯ ಕಥಾವಸ್ತುವಿನ ಭಾಷೆಯು ಉತ್ತರ ಕರ್ನಾಟಕದ ದೇಸಿ ಸೊಗಡನ್ನು ಬಳಸಿಕೊಂಡು ಮುಂದುವರಿಯುತ್ತದೆ. ೧೯೨೧ರಲ್ಲಿ ಖಾನೇಸುಮಾರಿ(ಜನಗಣತಿ) ಮಾಡುವ ಕೆಲಸದಿಂದಾಗಿ ಹಲವಾರು ನಿರುದ್ಯೋಗಿಗಳಿಗೆ ತಾತ್ಕಾಲಿಕ ಕೆಲಸ ಸಿಕ್ಕಂತಾಗುತ್ತದೆ. ಅಂಥ ಕೆಲಸದಲ್ಲಿ ಜಗ್ಗಣ್ಣನು ಸೇರಿಕೊಂಡು ಮುಗಿಸಿ ಮತ್ತೊಂದು ಕೆಲಸ ಮಾಡಲು ಸನ್ನದ್ಧನಾಗುತ್ತಾನೆ. ಕಾದಂಬರಿಯಲ್ಲಿ ಜಗ್ಗಣ್ಣನು ಉದ್ಯೋಗಕ್ಕಾಗಿ ನಡೆಯುವ ಅಲೆದಾಟ ತೊಂದರೆಗಳು, ಕೆಲಸ ಸಿಕ್ಕರೂ ಖಾಯಂ ಆಗದೇ ಇರುವುದು ತಿಳಿದುಬರುತ್ತದೆ.

ಇಂಥ ಒಂದು ಸನ್ನಿವೇಶವನ್ನು ತಿಳಿಯುವುದಾದರೆ, ಶ್ರೀಮಂತ ವಕೀಲರಾದ ಕುಬೇರರಾಯರ ಹತ್ತಿರ ಜಗ್ಗಣ್ಣ ಕೆಲಸ ಕೇಳಿದಾಗ ರಾಯರು "ಸಾಕಾಯ್ತು ಜನ್ಮ! ಈ ಹತ್ತಿರ ಕೆಲಸ ಎನ್ನುವವರ ಕಾಲೊಳಗೆ ಸಾಕಾತು! ನನ್ನ ಹತ್ತಿರ ಏನು ಕೆಲಸವಿದೆ ಮಣ್ಣು? ನನ್ನ ಕೆಲಸವೇ ಹೋಗಲಿಕ್ಕೆ ಕೂತಿದೆ"(ಪು.೯) ಎಂದು ರಾಯರು ರೇಗಾಡುವರು. ಈ ರೀತಿಯಾಗಿ ಕೆಲಸಕ್ಕೆ ಅಲೆದಾಡುವ ಯುವಕರ ದಂಡು ಕೆಲಸ ಸಿಗದೆ ಹತಾಶರಾಗುವಂತದ್ದು ಈ ಕಾದಂಬರಿಯಿಂದ ತಿಳಿದುಬರುತ್ತದೆ. ಅದೇ ರೀತಿ ಜಗ್ಗಣ್ಣನಿಗೂ ಕೆಲಸ ಸಿಗದೇ ಇದ್ದಾಗ ಮರಳಿ ಮನೆಗೆ ಬರುತ್ತಾನೆ. ಅಲ್ಲಿಯ ಒಂದು ಆಘಾತ ತಿಳಿದುಬರುತ್ತದೆ. ತಾಯಿಯಾದವಳು ಗೋದವ್ವ ಗಂಡನ ಸಣ್ಣ ನೌಕರಿ ಹೋತೂ ಎಂದು ಬಿಕ್ಕಿ ಬಿಕ್ಕಿ ಅಳುತ್ತಿರುವ ಈ ಸಂದರ್ಭ ಅರಿತ ಜಗ್ಗಣ್ಣ ನಾನೇ ಕೆಲಸ ಮಾಡಿ ನಿಮ್ಮನ್ನೆಲ್ಲ ಸಾಕಿ ಸಲಹುವೆನೆಂದು ತಾಯಿಯನ್ನು ಸಮಾಧಾನಗೊಳಿಸುತ್ತಾನೆ.

ಜಗ್ಗಣ್ಣ ಕೆಲಸ ಕೇಳಿಕೊಂಡು ವಕೀಲರಾದ ಕುಬೇರರಾಯರ ಹತ್ತಿರ ಬಂದು ಕೆಲಸಕ್ಕಾಗಿ ದುಂಬಾಲು ಬೀಳುವನು. ರಾಯರು ಅವನನ್ನು ನೋಡಿ, "ಏನೋ ಸಣ್ಣ ಹುಡುಗ ನಿನಗ್ಯಾಕ್ ನೌಕರಿ ಬೇಕೋ? ಇನ್ನು ಮಕ ಮೀಸೆ ಬಂದಿಲ್ಲ ಹೋಗ ತಿರುಗಿ ಸಾಲಿಗೆ, ಹೆಡ್‌ಮಾಸ್ತರರಿಗೆ ಚೀಟಿ ಕೊಡತೀನಿ"(ಪು.೧೮) ಎನ್ನುವರು. ನನ್ನ ತಂದೆಗೆ ನೌಕರಿ ಇಲ್ಲದಿರುವ ವೃತ್ತಾಂತ ತಿಳಿಸಿ, ವಕೀಲರ ಹತ್ತಿರವೇ ಕಾರಕೂನಿ ಕೆಲಸ ಮಾಡುವುದಕ್ಕೆ ಮುಂದಾಗುವನು. ಇದರಿಂದ ಕುಬೇರರಾಯರಿಗೂ ವೇಶ್ಯ ಕಾಂತಸಾನಿಗೂ ಪತ್ರವ್ಯವಹಾರ ನಡೆಸಲು ಮತ್ತಷ್ಟು ಅನುಕೂಲವಾಗುವುದು.

ಕುಬೇರರಾಯರ ಹೆಂಡತಿಯಾದ ಶಾಂತಾಬಾಯಿಯವರು ಮೊದಲ ಹೆರಿಗೆಗಾಗಿ ತವರುಮನೆಗೆ ಹೋಗುವರು. ಇತ್ತ ಕುಬೇರರಾಯರು ವೇಶ್ಯೆ ಕಾಂತಾಸಾನಿಯ ಸಹವಾಸದಿಂದ ಕಾಮಾಂಧರಾಗಿ ಹೆಚ್ಚುಕಾಲ ಅವಳ ಮನೆಯಲ್ಲಿಯೇ ಕಳೆಯುವರು. ಆ ಸಂದರ್ಭದಲ್ಲಿಯ ಮಾತಿನ ಸಂಭಾಷಣೆ ಈ ರೀತಿಯಾಗಿದೆ. ರಾಯರು ತಾವು ತಂದಿದ್ದ ಹಣದ ಚೀಲವನ್ನು ಅವಳ ಮುಂದೆ ಇಡುವರು. "ಯಾಕೆ ಬಹಳ ಆಯಾಸವಾಗಿರುವುದೇ? ಸೋಡಾ ತರಿಸಲೇ? ಅದೇಕೆ? ನಿನಗೆ ಹೇಳಬೇಕೆ? ಕಾಂತಾ ಇದ್ದಲ್ಲಿ ಎಲ್ಲ ಶಾಂತ"(ಪು.೨೮) ಎನ್ನುವ ವೇಶ್ಯೆ ಬದುಕಿನ ಸರಸಸಲ್ಲಾಪದ ಮಾತಿನ ಸಂಭಾಷಣೆಯು ಈ ಭಾಗದಲ್ಲಿ ತಿಳಿದುಬರುತ್ತದೆ.

ಇತ್ತ ಹೆರಿಗೆ ಮುಗಿಸಿಕೊಂಡು ಬಂದ ಶಾಂತಾಬಾಯಿಯವರಿಗೆ ಕುಬೇರರಾಯರು ಕಾಂತಸಾನಿ ಮನೆಗೆ ಹೋಗುವಂತದ್ದು, ಅದಕ್ಕೂ ಮುನ್ನ ಜಗ್ಗಣ್ಣ ಅಲ್ಲಿಗೆ ಚೀಟಿಯನ್ನು ಕೊಟ್ಟು, ಪುನಃ ಅಲ್ಲಿಂದ ಚೀಟಿಯನ್ನು ತೆಗೆದುಕೊಂಡು ಬರುವ ವೃತ್ತಾಂತ ತಿಳಿದು ಶಾಂತಾಬಾಯಿಯವರು ಕೆಂಡಾಮಂಡಲವಾಗುವರು. ಒಂದು ದಿನ ಯಾವುದೇ ಒಂದು ಕೆಲಸವನ್ನು ಸರಿಯಾಗಿ ಮಾಡಿಲ್ಲವೆಂದು ನೆಪ ಮಾಡಿಕೊಂಡು ಜಗ್ಗಣ್ಣನನ್ನು ಬೈಯುತ್ತಾ "ಎಲ್ಲದರೊಳಗೂ ಕಾರಭಾರ ಬ್ಯಾಡ ನಾನೇನು ಅಂತ ಕಾರಭಾರ ಮಾಡಿದೀನಿ ಬಾಯರೇ? ಎಂದು ಮುಗ್ಧನಂತೆ ಕೇಳುವನು ಜಗ್ಗಣ್ಣ. ಏನು ಕಾರಭಾರ ನಿನಗೆ ಯಾಕೆ ಗೊತ್ತಿದ್ದೀತು? ಅನುಭೋಗಿಸುವವರಿಗೆ ಗೊತ್ತು. ಮನಿ ತುಂಬಾ ನಿನ್ನದೇ ಆಗಿದೆ ಚೆಲ್ಲಾಟ ನಿನಗೆ ಹೇಳಿ ಕಳಿಸಿತ್ತೇ? ಬಡವನಾದರೆ ಭಿಕ್ಷೆ ಬೇಡಿ ಹೊಟ್ಟೆಹೊರೆದುಕೊಳ್ಳಬೇಕು" (ಪು.೩೯). ಅಷ್ಟರಲ್ಲಿಯೇ ಅಡುಗೆಯವಳು ಬಾಯಿಹಾಕಿ, "ಏನ್ ಕೇಳ್‌ತೀಯೋ ಜಗನ್ನಾಥರಾಯ, ಮಾಡುವುದನ್ನು ಮಾಡಿ? ನೀ ಬಂದಮ್ಯಾಲ ರಾಯರಿಗೆ ಹೊರಚಟ ಹತ್ಯದ"(ಪು.೩೯).

ಈ ವಿಷಯ ಕೇಳಿ ಜಗ್ಗಣ್ಣ ಜರ್ಜರಿತನಾಗುವನು. ಈ ವಿಷಯವನ್ನು ಅರಿತ ಅನಂತ(ಕುಬೇರ ರಾಯರ ತಮ್ಮನ ಮಗ) ಈ ಕೆಲಸವನ್ನು ಬಿಟ್ಟು ನನ್ನ ಮಾತು ಕೇಳಿ ಓದು-ಬರಹ ಮಾಡೆಂದು ತಿಳಿ ಹೇಳುವನು. ಶಾಂತಾಬಾಯಿ ಅವರು ಆಡಿರುವ ಮಾತನ್ನು ನೆನಪಿಸಿಕೊಂಡು ಜಗ್ಗಣ್ಣ ದುಃಖಿತನಾಗಿ ತನ್ನ ಮನೆಯಲ್ಲಿ ಮುಸುಕು ಹಾಕಿಕೊಂಡು ಬೇಸರದಿಂದ ಮಲಗುತ್ತಾನೆ. ತಾಯಿ ಗೋದವ್ವ ಮಗನನ್ನು ವಿಚಾರಿಸುತ್ತಾಳೆ. ಜಗ್ಗಣ್ಣ ದುಃಖದಿಂದ ಕುಬೇರರಾಯರ ಮನೆಯಲ್ಲಿ ನಡೆದ ವೃತ್ತಾಂತ ಹೇಳಿ ರಾಯರ ಮನೆಯ ನೌಕರಿ ಹೋತೆಂದು ದುಃಖತಪ್ತನಾಗಿ ಅಳುತ್ತಾನೆ. ಮಿತ್ರನಾದ

ಜಯರಾಜನೂ ಕೂಡ ಜಗ್ಗಣ್ಣನಿಗೆ ಮತ್ತೆ ಓದಲು ಪ್ರೇರೇಪಿಸುತ್ತಾನೆ. ಅವರ ಮನೆಯವರಿಗೆ ಆರ್ಥಿಕವಾಗಿ ಸಹಾಯ ಮಾಡುವುದಾಗಿ ತಿಳಿಸುತ್ತಾರೆ. ಅದೇ ವೇಳೆಗಾಗಲೇ ಸ್ನೇಹಿತ ಅನಂತ ದಕ್ಷಿಣ ಫೆಲೋಶಿಪ್ ಸಂಬಳ ಪಡೆಯುತ್ತಿದ್ದರಿಂದ ಅವನು ಜಗ್ಗಣ್ಣನಿಗೆ ಓದಲು ಸಹಾಯ ಮಾಡುವುದಾಗಿ ಹೇಳಿ ಧಾರವಾಡಕ್ಕೆ ಕರೆದುಕೊಂಡು ಹೋಗುತ್ತಾನೆ. ತದನಂತರ ಜಗ್ಗಣ್ಣನ ತಂದೆತಾಯಿಗಳಾದ ಬಂಡೆರಾಯ, ಗೋದವ್ವ ಮನೆಯ ಪರಿಸ್ಥಿತಿ ಹೇಗಿದ್ದರೂ ಪರವಾಗಿಲ್ಲ ಜಗ್ಗಣ್ಣನಿಗೆ ಮದುವೆ ಮಾಡುವ ನಿರ್ಣಯಕ್ಕೆ ಬರುತ್ತಾರೆ. ಅತ್ತ ಓದಲು ಹೋದ ಜಗ್ಗಣ್ಣನಿಗೆ ಕಾಲೇಜಿನ ಫೀಸ್ ಕಟ್ಟಲು ದುಡ್ಡಿಲ್ಲದೆ ಗೋಳಾಡುವ ಪರಿಸ್ಥಿತಿ ಬರುತ್ತದೆ. ಊರಿನಲ್ಲಿ ತಂದೆಯ ಕೆಲಸವು ಇಲ್ಲದ ಶೋಚನೀಯ ಪರಿಸ್ಥಿತಿಯನ್ನು ಅರಿತು, ಕೆಲಸಕ್ಕೆಂದು ಹೈದರಾಬಾದಿಗೆ ಹೋಗಿ ಅಲ್ಲಿ ಉರ್ದುಭಾಷೆ ಸರಿಯಾಗಿ ಬಾರದ ಕಾರಣ ಊರಿಗೆ ಬಂದು ಒಂದು ಚಿಕ್ಕ ಶಾಲೆಯನ್ನು ಸ್ಥಾಪಿಸಿ ಆ ಕೆಲಸದಲ್ಲಿಯೂ ಕೈಸುಟ್ಟುಕೊಳ್ಳುವನು. ಮನೆಯ ಪರಿಸ್ಥಿತಿ ದಿನೇ ದಿನೇ ಹದಗೆಟ್ಟು ಒಂದು ಹೊತ್ತಿನ ಊಟಕ್ಕೂ ಪರಿತಪಿಸುವಂತಹ ಪರಿಸ್ಥಿತಿ ಉಲ್ಬಣಿಸುತ್ತದೆ. ಮನೆಯಲ್ಲಿ ತಿನ್ನಲು ಏನೂ ಇಲ್ಲದ ಪರಿಸ್ಥಿತಿ ಅರಿತು ಗೋದವ್ವ ನಾನೇ ಬೇರೆಯವರ ಮನೆಯ ಕಸಮುಸುರೆ ಕೆಲಸ ಮಾಡಿ ನಿಮ್ಮನ್ನು ಸಾಕುವೆ ಎಂದು ಗೋದವ್ವ ಗೋಗರೆದಾಗ ಜಗ್ಗಣ್ಣನ ಮನಸ್ಸು ಒಡೆದಂತಾಗಿ, "ಇದೇನು ಹುಚ್ಚ ಹೂಡಿದಿ? ನನ್ನ ಕೈಲಾಗದಿದ್ದರೆ ಎಲ್ಲರೂ ಕೂಡಿ ಬಾವಿ ಬೀಳೋಣ"(ಪು.೧೧೩) ಎಂದು ಜಗ್ಗಣ್ಣ ಸಿಟ್ಟಿನಿಂದ ತಾಯಿಗೆ ಹೇಳುವನು. ಅತ್ತ ಹೋದ ಜಗ್ಗಣ್ಣ ತಡವಾಗಿಯಾದರೂ ಬಾರದಿದ್ದುದಕ್ಕೆ ಗೋದವ್ವ "ಎಷ್ಟು ಹುಡುಕಬೇಕು ಜಗ್ಗಣ್ಣ? ಎಲ್ಲಿ ಹೋಗಿದ್ದಿ? ನಾನೆಲ್ಲಿ ಹೋಗತೀನಿ? ಯಾಕೆ ಹುಡುಕಿದಿರಿ?"(ಪು.೧೨೦) ಆ ರೀತಿ ಸಿಟ್ಟಾಗಿ ಹೋದರೆ ನಾವೇನು ತಿಳಿದುಕೊಳ್ಳಬೇಕು ಎನ್ನುತ್ತಾಳೆ.

"ನಾನೆಲ್ಲಿ ಸಾಯಲಿಕ್ಕೆ ಹೋಗುವೆ? ನಿಮ್ಮನ್ನು ಬಿಟ್ಟು ಎಲ್ಲಿಗೆ ಹೋಗುವೆ?" ಎಂದು ಗೋಳಾಡುವನು. ಇವನ ಮಾತು ಕೇಳಿ ತಾಯಿ ಗೋದವ್ವ, ಹೆಂಡತಿ ಅಬ್ಬಕ್ಕ ಅವರು ದುಃಖತಪ್ತರಾಗುವರು. "ತಿಳಿಯಿತು ಒಬ್ಬಿಬ್ಬರಿರಬಹುದು-ಮರಣವೊಂದು ಜ್ವಾಲೆಯೆಂದು ತಿಳಿದು ತಪ್ಪಿಸಿ ಜೀವನ ಶಾಂತಿಯನ್ನು ಪಡೆಯುವರು ಒಬ್ಬಿಬ್ಬರು ಮಾತ್ರ. ಆದರೆ ಅನೇಕರು, ಅಸಂಖ್ಯರು ನಾವೆಲ್ಲಾ ಜೀವಜ್ವಾಲೆಯನ್ನು ತಪ್ಪಿಸಿ, ಮರಣಶಾಂತಿಯನ್ನು ಬೇಡುತ್ತೇವೆ. ಅದು ದೊರೆಯದೆ ಸತ್ತಂತೆ ಇರುತ್ತವೆ! ಇದು ನಿಜ. ಇದೇ ಜಗತ್ತಿನ ನನ್ನ ಖಾನೇಸುಮಾರಿ!!!"(ಪು.೧೨೦) ಎಂದು ಕಾದಂಬರಿ ಕೊನೆಗಾಣುತ್ತದೆ.

ಈ ರೀತಿಯಾಗಿ ಮುಗಳಿ ಅವರ ಬಾಳುರಿ' ಕಾದಂಬರಿಯು ಬಡತನ, ಹಸಿವು, ಅನಕ್ಷರತೆ, ನಿರುದ್ಯೋಗ, ಬಾಲ್ಯವಿವಾಹ, ಲಂಚಗುಳಿತನ, ವೇಶ್ಯಾವಾಟಿಕೆ, ಭ್ರಷ್ಟಾಚಾರದಂತ ಅಂಶಗಳನ್ನು ಒಡಲಲ್ಲಿ ಇರಿಸಿಕೊಂಡಿದೆ. ಮುಗಳಿ ಅವರ ಈ ಕಾದಂಬರಿಯು ಸ್ವಾತಂತ್ರ್ಯ ಕಾಲಘಟ್ಟದಲ್ಲಿ ರಚನೆಗೊಂಡಿರುವುದರಿಂದ ಅಂದಿನ ಸಾಮಾಜಿಕ ಹಾಗೂ ಕೌಟುಂಬಿಕ ಸ್ಥಿತಿಗತಿಗಳನ್ನು ಕುರಿತಂತೆ

ಉಳ್ಳವರ ಇಲ್ಲದವರ ನಡುವಿನ ಕಂದಕ ವ್ಯವಸ್ಥೆ, ಸೂಕ್ಷ್ಮ ಸ್ಥೂಲ ಶೋಷಣೆಗಳು, ಯುವಜನತೆಯ ಅಸಹಾಯಕತೆ, ಗೊಂದಲಗಳು, ಹೊಣೆಗೇಡಿತನಗಳು, ಬದ್ಧತೆ ಇಲ್ಲದಿರುವಂತ ಅಂಶಗಳನ್ನು ಕುರಿತಂತೆ ಕಾದಂಬರಿಯಲ್ಲಿ ಗಮನಿಸಬಹುದಾಗಿದೆ.

ಅದೇ ರೀತಿ ಶ್ರೀಮಂತರಾದ ಕುಬೇರರಾಯರ ಕೌಟುಂಬಿಕ ಚಿತ್ರದೊಂದಿಗೆ ಅಂದಿನ ಸಮಾಜದಲ್ಲಿ ನಡೆಯುವ ಲಂಚಗುಳಿತನ, ಭ್ರಷ್ಟಾಚಾರ, ವೇಶ್ಯಾವಾಟಿಕೆಯಂತಹ ಅಂಶಗಳನ್ನು ಒಂದು ಕಡೆ ಬಿತ್ತರಿಸಿದರೆ ಇನ್ನೊಂದು ಕಡೆ ಕುಬೇರರಾಯರ ಹೆಂಡತಿಯಾದ ಶಾಂತಾಬಾಯಿ ಅವರು ಆದರ್ಶ ಮಹಿಳೆಯಾಗಿ ಕಾದಂಬರಿ ಪಾತ್ರವು ಚಿತ್ರಿತಗೊಂಡಿದೆ. ಹಾಗೆಯೇ ಕುಬೇರರಾಯರು ಕಾಮಾಂಧರಾಗಿ ವೇಶ್ಯೆ ಕಾಂತಾಸಾನಿಯ ಸಂಘದಿಂದಾಗಿ ಇರುವ ಆಸ್ತಿಪಾಸ್ತಿಯನ್ನು ಕಳೆದುಕೊಂಡು ಶೋಚನೀಯ ಸ್ಥಿತಿಗೆ ಬರುವಂತಹ ಚಿತ್ರಣವು ಈ ಕಾದಂಬರಿಯಿಂದ ತಿಳಿದುಬರುತ್ತದೆ. ಹಾಗೆಯೇ ದಿನನಿತ್ಯದ ಬಡತನದಲ್ಲಿ ಕೈತೊಳೆಯುವ ಜಗ್ಗಣ್ಣನ ಮನೆಯ ಪರಿಸ್ಥಿತಿಯು ಅಂದಿನ ಸಮಾಜದ ದುಸ್ಥಿತಿಯನ್ನು ತಿಳಿಸಿದಂತಿದೆ.

'ಕಾರಣಪುರುಷ' ಮುಗಳಿ ಅವರು ರಚಿಸಿರುವ ಎರಡನೇ ಕಾದಂಬರಿ. ಈ ಕಾದಂಬರಿಯಲ್ಲಿ ವಾಮಣ್ಣ ಮುಖ್ಯಪಾತ್ರದಲ್ಲಿ ಕಂಡುಬರುವ ಯುವಕ. ಉದ್ಯೋಗ ಇಲ್ಲದೇ ಇರುವ ಅನಾಥ ಪದವೀಧರ. ಅವನ ಹೊಟ್ಟೆಯ ಹಸಿವಿಗಿಂತ ಕನ್ನಡ ಸೇವೆ ಮಾಡುವ ಹಸಿವೇ ಹೆಚ್ಚೆಂಬುದು ಕಾದಂಬರಿಯಲ್ಲಿ ತಿಳಿದುಬರುತ್ತದೆ. ಮಾವನಾದ ಬೆಣ್ಣೆ ಭೀಮರಾಯರಿಗೆ ಇವನು ಮಾಡುವ ಕೆಲಸ ನಿಷ್ಪ್ರಯೋಜಕ ಕಾರ್ಯವೆಂದು ತಿಳಿದು ಅಳಿಯನ ಮೇಲೆ ಮನೆಯಲ್ಲಿ ರೇಗಾಡುತ್ತಾರೆ. ಶಾಶ್ವತ ಒಂದು ಕೆಲಸ ಸಿಗದೇ ಇರುವ ವಾಮಣ್ಣ ಕೋಪಿಸಿಕೊಂಡು ಕೆಲಸವನ್ನು ಹುಡುಕುತ್ತಾ ಮುಂಬಯಿಗೆ ಹೋಗುತ್ತಾನೆ. ಅಲ್ಲಿಯೇ ಗಿರಣಿಯೊಂದರಲ್ಲಿ ಕೆಲಸ ಹಿಡಿದು ಸಂಸಾರ ಹೂಡುತ್ತಾನೆ. ವಾಮಣ್ಣನ ಕನ್ನಡ ಪ್ರೇಮವು ಅಲ್ಲಿಯೂ ಮುಂದುವರಿಯುತ್ತದೆ. ಅಲ್ಲಿದ್ದ ಕನ್ನಡದ ಕವಿಯೊಬ್ಬನೊಂದಿಗೆ ಸ್ನೇಹ ಬೆಳೆಸಲು ಮುಂದಾಗುತ್ತಾನೆ. ಆತನ ಮೂಲಕ ಕೂಲಿಗಾರರ ಕಷ್ಟಸುಖಗಳನ್ನು ತಿಳಿದುಕೊಳ್ಳುತ್ತಾನೆ. ತಾನೇ ಬಡತನದಲ್ಲಿದ್ದರೂ ಅಲ್ಲಿ ಕಂಡುಬರುವ ಕನ್ನಡ ಕೂಲಿಕಾರ್ಮಿಕರ ಬಡತನವನ್ನು ನೋಡಿ ಮರುಕ ವ್ಯಕ್ತಪಡಿಸುತ್ತಾನೆ.

ಒಂದು ದಿನ ಕೂಲಿಕಾರರ ಕೂಲಿ ಹೆಚ್ಚಳಕ್ಕಾಗಿ ನಡೆದ ಪ್ರತಿಭಟನೆಯಲ್ಲಿ ಸಿಕ್ಕು ಜೈಲುಶಿಕ್ಷೆಯನ್ನು ಅನುಭವಿಸುತ್ತಾನೆ. 'ಸಾಹಸದಲ್ಲಿಯೇ ಸೌಖ್ಯವಿದೆ' ಎಂದು ಮುಂಬಯಿಗೆ ಹೋಗಿದ್ದವನು 'ನನ್ನಂಥವರು ದೇಶಕಾರ್ಯಕ್ಕೆ ತೀರ ಅಯೋಗ್ಯರು' ಎಂದುಕೊಂಡು 'ಇನ್ನು ನನ್ನ ಕನ್ನಡ ನಾಡೇ ನನಗೆ ಗತಿ' ಎಂದು ಧಾರಾವಾಡಕ್ಕೆ ಹಿಂದಿರುಗುತ್ತಾನೆ. ಮತ್ತೆ ಭೀಮರಾಯರ ಮನೆಯಲ್ಲಿಯೇ ನೆಲೆಸಿ ಕನ್ನಡ ನಾಡಿನ ಬಗ್ಗೆ ಅಪಾರವಾದ ಕಾಳಜಿಯಿಂದ ಬಹಳ ಉತ್ಸುಕನಾಗಿ, ಧಾರವಾಡ ಸಂಸ್ಕೃತಿ ಸಮ್ಮೇಳನದ ಕಾರ್ಯದರ್ಶಿಯಾಗಿ, ಕನ್ನಡ ಅಭಿಮಾನಿಗಳಿಂದ ಹಣ ಸಂಗ್ರಹಿಸುವಲ್ಲಿ ಪ್ರಮುಖ

ಪಾತ್ರ ವಹಿಸುತ್ತಾನೆ. ತುಂಬಾ ಶ್ರದ್ಧೆಯಿಂದ ದುಡಿದರೂ 'ಹಣ ದುರುಪಯೋಗವಾಗಿದೆ' ಎಂದು ವದಂತಿ ಹಬ್ಬಿದ್ದರಿಂದ ವಾಮಣ್ಣನಿಗೆ ಕೆಡುಕೆನಿಸುತ್ತದೆ.

ಸಮ್ಮೇಳನ ಕೆಲಸಕ್ಕೆಂದು ತನ್ನನ್ನು ತಾನು ತೊಡಗಿಸಿಕೊಂಡು ಮನೆಯನ್ನೇ ಮರೆತಿದ್ದಾನಲ್ಲ ಎಂದು ಭೀಮರಾಯರು ಊಟಕ್ಕೆ ಕುಳಿತಾಗ ಸಿಟ್ಟಿನಿಂದ, ರೇಗಾಡುತ್ತಾ "ನಿಮ್ಮಂಥ ನಿರುಪಯೋಗಿಗಳಿಗೆ ಯಾತಕ್ಕೆ ಊಟ ಹಾಕಬೇಕು? ನಿಮಗೆ ನಿಮ್ಮ ಸಂಸಾರದ ಚಿಂತಿಲ್ಲ, ನಿಮ್ಮ ಹೆಂಡಿರು ಮಕ್ಕಳ ಕಾಳಜಿ ಇಲ್ಲ ಇಂತವರು ಮದವಿ ಮಾಡಕೋಬಾರದು. ಬೂದಿ ಬಡಕೊಂಡು ಸನ್ಯಾಸಿ ಆಗಬೇಕು. ನಾವೇನು ನಿಮ್ಮಂಥ ನಿರುದ್ಯೋಗಿಗಳ ದಸಿಂದ ಇಲ್ಲಿ ಅನ್ನಛತ್ರ ಇಟ್ಟಿಲ್ಲ. ಸ್ವಂತದ ಹೊಟ್ಟೆ ಉದ್ಯೋಗ ಬಿಟ್ಟು ಕತ್ತೇಬಜ್ ಕಾರ್‌ಬಾರ್ ಮಾಡಲಿಕ್ಕೆ ಮಾತ್ರ ನಿಮಗೆ ಬರ್ತದೆ. ಕನ್ನಡ ಚಳವಳಿಯಂತೆ ಚಳವಳಿ! ಕಲ್ಲು ಹಾಕಲಿ ಅದಕ್ಕೆ!"(ಪು.೩೯) ಎಂದು ಭೀಮರಾಯರು ರೇಗಾಡುತ್ತಾರೆ.

ವಾಮಣ್ಣನ ಮನಸ್ಸು ಜರ್ಜರಿತಗೊಂಡು ಎಲ್ಲಿಗೆ ಹೋಗಬೇಕೆಂದು ದಿಕ್ಕು ಕಾಣದೆ ಸಮಾಜ ಕಾರ್ಯಕರ್ತರಾದ ಆನಂದಮೂರ್ತಿಗಳ ಮನೆಗೆ ಹೋಗುತ್ತಾನೆ. ಆನಂದಮೂರ್ತಿಗಳು ವಾಮಣ್ಣನ ದೈನ್ಯ ಸ್ಥಿತಿಯನ್ನು ನೋಡಿ ಮರುಕಪಡುತ್ತಾರೆ. ಕನ್ನಡ ನಾಡಿನ ಬಗ್ಗೆಯೇ ವಿಚಾರ ಮಾಡುತ್ತಿರುವ ವಾಮಣ್ಣನ ತೊಳಲಾಟ ಕಂಡು, "ಏನು ವಾಮಣ್ಣ ಸ್ವಾಭಿಮಾನಮೂರ್ತಿಯಾಗಿ ಮಾವನ ಮನೆಯನ್ನು ಬಿಟ್ಟು ಬಂದೆ. ಮುಂದಿನ ವಿಚಾರವೇನು? ಎಂದಾಗ ವಿಚಾರವೇನು? ಕನ್ನಡಕ್ಕಾಗಿ ದುಡಿಯುವುದು ಅದರಲ್ಲಿಯೇ ಮಡಿಯುವುದು"(ಪು.೩೭೯) ಎಂದು ಉತ್ತರಿಸುತ್ತಾನೆ.

ಹೊಟ್ಟೆಪಾಡಿನ ವಿಚಾರವಾಗಿ ಆನಂದಮೂರ್ತಿ ಅವರು ಕನಿಕರದಿಂದ "ವಾಮಣ್ಣ ಕನ್ನಡದ ಬಗ್ಗೆ ಚಿಂತಿಸಬೇಡ, ಬಿರುಗಾಳಿಯು ಮಾಡುವ ಕೆಲಸವನ್ನು ಬೀಸಣಿಕೆಯ ಗಾಳಿಯು ಮಾಡಲಾರದು. ದೊಡ್ಡ ಕೆಲಸವನ್ನು ಅರೆಬರೆಯಾಗಿ ಮಾಡುವುದಕ್ಕಿಂತ ನಾವು ಸಣ್ಣ ಕೆಲಸವನ್ನು ಸಂಪೂರ್ಣವಾಗಿ ಮಾಡಬೇಕು. ಸಂಸ್ಥೆ ಕಟ್ಟಿ ಮಾಡುವುದಾಗದಿದ್ದರೆ, ವ್ಯಕ್ತಿಶಃ ಮಾಡುವುದನ್ನು ಮಾಡಬೇಕು"(ಪು.೨೭೩) ಎಂದು ಹೇಳುತ್ತಾರೆ. ಮೂರ್ತಿಯವರ ಮಾರ್ಗದರ್ಶನ ಪ್ರಾಯಶಃ ಎಲ್ಲಾ ಆದರ್ಶಗಳಿಗೂ ವಾಸ್ತವದ ಗಟ್ಟಿನೆಲವನ್ನು ಆಶ್ರಯಿಸಬೇಕೆನ್ನುವ ಸೂಚನೆಯಾಗಿಯೂ ಮಹತ್ವವನ್ನು ಪಡೆಯುತ್ತದೆ. ಸುತ್ತಮುತ್ತಲಿನ ಕನ್ನಡ ಮಕ್ಕಳಿಗೆ ಕನ್ನಡ ಕಲಿಸುವ, ಅವರಿಗೆ ವಾಚನಾಲಯವೊಂದರ ಸೌಲಭ್ಯಗಳನ್ನು ಕಲ್ಪಿಸುವ ಅವರ ಮಕ್ಕಳು, ಮೊಮ್ಮಕ್ಕಳು, ಮುಂದೆ ಒಂದಾಗುವ, ಕನ್ನಡ ನಾಡಿನ ವಿಶಾಲ ಛತ್ರದ ಕೆಳಗೆ ಕನ್ನಡ ಗೀತೆಗಳಲ್ಲಿ ದನಿಗೂಡಿಸಿ ಹಾಡಿದರೆ ಅದೇ ನಮ್ಮ ಧನ್ಯತೆ, ಅದೇ ಪರಮಾರ್ಥ ಎನ್ನುವ ನಿಲುವಿಗೆ ತಲುಪುವ ವಾಮಣ್ಣನ ಮನಸ್ಥಿತಿ ತೊಳಲಾಟಗಳಿಂದ ತಾತ್ಕಾಲಿಕ ಮುಕ್ತಿಯನ್ನು ಪಡೆಯುವಂತದ್ದು ಎಂಬ ಆನಂದಮೂರ್ತಿಗಳ ಹೇಳಿಕೆ ಸಮಂಜಸವೇ ಎನಿಸುತ್ತದೆ.

ಈ ಕಾದಂಬರಿಯಲ್ಲಿ ವಾಮಣ್ಣ ಪ್ರಮುಖ ಪಾತ್ರದಲ್ಲಿ ಕಂಡುಬಂದರೆ, ಅಸಹಾಯಕರಾದ ಪದ್ದಕ್ಕ ಸುಗುಣಾಬಾಯಿ, ಸರಸ ಇತ್ಯಾದಿ ಸ್ತ್ರೀ ಪಾತ್ರಗಳಿವೆ. ಅದರ ಚೌಕಟ್ಟಿಗೆ ಹೊಂದಿಕೊಂಡಂತಿರುವ ಸತ್ಯಕಾಮರ ಪಾತ್ರ ಕಂಡುಬರುತ್ತದೆ. ವ್ಯವಸ್ಥೆಯ ಪ್ರತಿನಿಧಿಯಾದ, ವ್ಯವಹಾರದಕ್ಷ ಅಧಿಕಾರಿ ಬೆಣ್ಣೆ

ಭೀಮರಾಯರಾಗಿದ್ದಾರೆ. ಈ ಎಲ್ಲಾ ಪಾತ್ರಗಳೂ ಲೇಖಕರ ಸುತ್ತಲಿನ ಪರಿಸರದಿಂದಲೇ ಎದ್ದುಬಂದಂತಿವೆ. ಅಷ್ಟರಮಟ್ಟಿಗೆ ವಾಸ್ತವವಾಗಿವೆ. ಪುಸ್ತಕಗಳನ್ನು ಹೊತ್ತುಕೊಂಡು ಮನೆಮನೆಗಳಿಗೆ ಹೋಗಿ ಮಾರಾಟ ಮಾಡುವ ಮೂಲಕ ಕನ್ನಡಾಭಿಮಾನ, ಪ್ರೀತಿಯನ್ನು ಹೆಚ್ಚಿಸುವ, ಕನ್ನಡದ ಬಗೆಗಿನ ಆಸಕ್ತಿಯನ್ನು ಜೀವಂತವಾಗಿಡುವ ವಾಮಣ್ಣನ ಪ್ರಯತ್ನಗಳ ಹಿನ್ನೆಲೆಯಲ್ಲಿ ಸ್ವಯಂ ಮುಗಳಿ ಅವರೇ ತೊಡಗಿಸಿಕೊಂಡಿದ್ದಾರೆಂಬಂತೆ ಭಾಸವಾಗುತ್ತದೆ. ಆ ನೆಲೆಯಿಂದ ಈ ಕಾದಂಬರಿಯು ಆದರ್ಶಮಯವಾಗಿದೆ. ಕಾದಂಬರಿಯಲ್ಲಿ ಬರುವ ಇತರೆ ಪಾತ್ರಗಳಾದ ಸುಗುಣಾಬಾಯಿ ಮತ್ತು ಸರಸಳ ಪಾತ್ರಗಳಲ್ಲಿ ಆದರ್ಶೀಕರಣ ತತ್ವಾಂಶಗಳು ಒಡೆದು ಕಾಣುತ್ತವೆ. ವಿಧವೆಯಾದ ಸುಗುಣಾಬಾಯಿ ಮತ್ತು ಬಡತನ, ಅಜ್ಞಾನಗಳಿಂದ ಬಳಲುವ ಸರಸಳಿಗಿಂತ ಸ್ತ್ರೀ ಪಾತ್ರಗಳು ಒಳ್ಳೆಯ ಗಂಡನಿಲ್ಲದೆ ನಿಕೃಷ್ಟ ಸ್ಥಿತಿಯಲ್ಲಿರುವ, ಕನ್ನಡ ನಾಡಿನ ಅಂದಿನ ಸ್ಥಿತಿಯನ್ನು ಸೂಚಿಸುತ್ತವೆ. ಈ ಎರಡೂ ಪಾತ್ರಚಿತ್ರಣದಲ್ಲಿ ಪ್ರಕಟವಾದ ಲೇಖಕರ ಕಾಲ್ಪನಿಕತೆಯು ಅಂದಿನ ಸಮಾಜದ ವಾಸ್ತವಘಟ್ಟದಲ್ಲಿ ಕಂಡುಬರುವ ಚಿತ್ರಣವೆಂದೆನಿಸುತ್ತವೆ.

ಕಾದಂಬರಿಯಲ್ಲಿಯ ಉಳಿದ ಪಾತ್ರಗಳೆಲ್ಲ ಜೀವಂತವಾಗಿವೆ. ವ್ಯವಹಾರ ಚತುರರೂ, ನುರಿತ ಅಧಿಕಾರಿಗಳಾದ ಬೆಣ್ಣೆಭೀಮರಾಯರು, ಅಶಿಕ್ಷಿತ ಗೃಹಿಣಿ ಪದ್ದಕ್ಕ, ವಿಧವೆ ಸುಗುಣಾಬಾಯಿ, ಬಡತನದ ಬವಣೆಯಲ್ಲಿ ಮುಳುಗಿ ಏಳುತ್ತಿರುವ ಸರಸ ಇವರೆಲ್ಲ ವಾಸ್ತವ ಸಮಾಜದಲ್ಲಿ ಕಣ್ಣಮುಂದೆ ಸುಳಿವ ಪಾತ್ರಗಳಾಗಿವೆ. ಈ ವಾಸ್ತವದ ಚಿತ್ರಣಕ್ಕೆ ಲೇಖಕರು ಬಳಸಿದ ಉತ್ತರ ಕರ್ನಾಟಕದ ದೇಸಿ ಸೊಗಡಿನ ಮಾತುಗಾರಿಕೆಯು ಎದ್ದು ಕಾಣುತ್ತದೆ. ಅದರಲ್ಲೂ ಸಂಭಾಷಣೆಗಳಲ್ಲಿ ಬಂದಿರುವ ಮಾತುಗಳಿಗೂ ಸನ್ನಿವೇಶಗಳಿಗೂ ಪಾತ್ರಚಿತ್ರಣಕ್ಕೂ ಸಹಜತೆಯ ಮೆರುಗು ಬಂದಂತಾಗಿದೆ. ಕಾದಂಬರಿಯ ಶೈಲಿಯು ಅಷ್ಟೊಂದು ಕೃತಕತೆ ಇಲ್ಲದಿದ್ದರೂ ಸರಳವಾಗಿದೆ. ಆದರ್ಶಮಯವಾಗಿದೆ. ಈ ಎಲ್ಲ ಗುಣದೋಷಗಳಿದ್ದರೂ ಕಾದಂಬರಿಯು ಒಟ್ಟಿನಲ್ಲಿ ಒಳ್ಳೆಯ ಪರಿಣಾಮಕಾರಿಯಾಗಿದೆ. ನಾಯಕನಿಗೆ ತನ್ನ ಪ್ರಯತ್ನದಲ್ಲಿ ಸೋಲುಂಟಾದರೂ ಕಾದಂಬರಿಯಲ್ಲಿ ಆಶಾವಾದದ ಸೆಲೆ ಸದಾಕಾಲ ಚಿಮ್ಮುತ್ತಿದೆ.

> "ಬರುತಲಿಹನು ಬರುತಲಿಹನು
> ನಿನ್ನಯ ಕಾರಣಪುರುಷನು
> ಕಂಗೆಡದಿರು ಕನ್ನಡವೇ!
> ಇನಿಜೇನಿನ ಹೊಂಗಡವೇ!" (ಪು.೨೬೫)

ಮುಗಳಿ ಅವರ ಕನ್ನಡಪರವಾದ ಕಾಳಜಿಯು ಈ ಕಾದಂಬರಿಯಲ್ಲಿಯೂ ಸಹ ಅಭಿವ್ಯಕ್ತಗೊಂಡಿದೆ. ವಾಮಣ್ಣನ ಪಾತ್ರದ ಮೂಲಕ ಕನ್ನಡದ ಏಳಿಗೆಗಾಗಿ ಸದಾ ಧ್ಯಾನಸ್ಥ ಸ್ಥಿತಿ ಕಾದಂಬರಿಯ ಉದ್ದಗಲಕ್ಕೂ ಕಂಡುಬರುವ ಚಿತ್ರಣವಾಗಿದೆ. ಜೊತೆಗೆ ಕನ್ನಡಿಗರಿಗೆ ಸ್ಫೂರ್ತಿ ತುಂಬುವ ಕಾಯಕದಂತೆ ಈ ಕಾದಂಬರಿಯು ಮೂಡಿಬಂದಿದೆ. 'ಬಾಳುರಿ' ಕನ್ನಡದ ಶ್ರೇಷ್ಠ

ಕಾದಂಬರಿಯೆಂದು ಹೇಳಲಾಗದಿದ್ದರೂ ಓದುಗನ ಹೃದಯಕ್ಕೆ ಹತ್ತಿರವಾಗಬಲ್ಲ ಉತ್ತಮ ಆದರ್ಶವಾದದ ತಳಹದಿಯಲ್ಲಿ ರಚನೆಗೊಂಡ ಕಾದಂಬರಿಯಾಗಿದೆಂದು ಹೇಳುವಂತಿದೆ.

'ಅನ್ನ' ಕಾದಂಬರಿಯು ಬರಗಾಲದ ಅನುಭವವನ್ನು ವಸ್ತುವಾಗಿ ಹೊಂದಿರುವ ಕನ್ನಡದ ಅಪರೂಪದ ಕಾದಂಬರಿಗಳಲ್ಲಿ ಮುಖ್ಯವಾದದ್ದು. ಬರಗಾಲದ ಸಮಯದಲ್ಲಿ ಕಾಮಗಾರಿ ಕೆಲಸಗಳಲ್ಲಿ ನಡೆಯುವ ಮೋಸ, ವಂಚನೆ, ಭ್ರಷ್ಟಾಚಾರ, ಲಂಚಗುಳಿತನ, ಕಾಳಸಂತೆಯ ದುರ್ವ್ಯವಹಾರ ಮುಂತಾದ ವಿಷಯ ವಸ್ತುವಿನ ಜೊತೆಗೆ ಮಾನವೀಯತೆ, ಸಹಾಯಗುಣ, ಆದರ್ಶವಾದದಂತಹ ಅಂಶಗಳನ್ನು ಈ ಕಾದಂಬರಿಯು ಒಳಗೊಂಡಿದೆ.

ಈ ಕಾದಂಬರಿಯು ೧೯೪೪೮ರ ದಶಕದಲ್ಲಿ ಕಂಡುಬರುವುದರಿಂದ ದೇಶಸೇವೆಯ ಮನೋಭಾವವುಳ್ಳ ಪಾತ್ರಚಿತ್ರಣ ಕಂಡುಬರುತ್ತದೆ. ಕಾದಂಬರಿಯಲ್ಲಿ ಕಥಾನಿರೂಪಣೆಯು ವೈವಿಧ್ಯಮಯವಾಗಿ ಮೂಡಿಬಂದಿದೆ. ವೈದ್ಯ ಕೆಲಸದಲ್ಲಿ ತೊಡಗಿಕೊಂಡ ಅಮೃತ ಬಿಜಾಪುರ ನೆರೆಹಾವಳಿಯ ಪರಿಸ್ಥಿತಿಯ ಬಗ್ಗೆ ತಿಳಿಸುವ ವರದಿಗಾರನ ರೀತಿಯಲ್ಲಿ ನಿರೂಪಣ ಮಾದರಿ ಕಂಡುಬರುತ್ತದೆ. ಕಾದಂಬರಿಯೊಳಗಡೆ ಸಂದರ್ಭಕ್ಕನುಗುಣವಾಗಿ ಪತ್ರವ್ಯವಹಾರದ ರೀತಿಯ ನಿರೂಪಣಾಶೈಲಿ ಹೊಸಮಾದರಿಯಂತೆ ಕಂಡುಬರುತ್ತದೆ. ಉದಾಹರಣೆಗೆ ಗೆಳೆಯ ಪ್ರಸಾದನಿಂದ ಅಮೃತನನ್ನು ಹುರಿದುಂಬಿಸುವ ಮಾರ್ಗದರ್ಶನ ಮಾಡುವಂತೆ ಕವನಗಳನುಸಾರ ಕಾದಂಬರಿಯಲ್ಲಿ ಅಲ್ಲಲ್ಲಿ ಮೂಡಿಬಂದಿದೆ.

"ಸಾಲದು ಸಾಲದು ಸುಲಭದ ಕಾಣಿಕೆ
ಸಾಲವು ಬಂದಿದೆ ತತ್ವಪರೀಕ್ಷಣಿಕೆ
ಶತಶತಮಾನದ ಬಿಗುವಿನ ಸಂಕಲೆ
ಗತಿಸುವುದೇ ತುಸುಮಾತ್ರದ ತಿಣುಕಿನಲೆ" (ಪು.೪೭)

ಈ ಮಾದರಿಯ ನಿರೂಪಣೆಯ ಶೈಲಿ ಕಂಡುಬರುತ್ತದೆ. ಅಂದಿನ ಕಾಲದಲ್ಲಿ ಗಾಂಧೀಜಿ ಅವರು ಪ್ರೇರೇಪಿಸಿ ಪ್ರೋತ್ಸಾಹಿಸುತ್ತಿದ್ದ ಸ್ಥಳೀಯ ಗುಡಿಕೈಗಾರಿಕೆಗಳನ್ನು ನುಂಗುವ ರೀತಿಯಲ್ಲಿ ವಿದೇಶಿ ಕಂಪನಿಗಳು ಹುಟ್ಟಿಕೊಂಡಿರುತ್ತವೆ. ಇವುಗಳ ವಿರುದ್ಧ ಸತ್ಯಾಗ್ರಹ, ಪ್ರತಿಭಟನೆಗಳು ನಡೆಯುತ್ತವೆ. "ರಾಕ್ಷಸ! ಹೌದು, ಅದಕ್ಕೆ ನಮಗೆ ಯಂತ್ರ ಬೇಡ ಎನ್ನುವುದು. ಅದು ರಾಕ್ಷಸನಂತೆ ಮನುಷ್ಯನನ್ನು ನುಂಗಲಿಕ್ಕೆ ಬಂದಿದೆ. ಈ ರಾಕ್ಷಸನನ್ನು ನಮ್ಮ ದೇಶದಿಂದ ಹೊರಗಟ್ಟಬೇಕು"(ಪು.೫೬). ಕಾದಂಬರಿಯ ಒಳಗಡೆ ಬರುವ ಚಿಕ್ಕ ಪಾತ್ರಗಳು ವಿಭಿನ್ನ ನೆಲೆಗಳ ಬಗ್ಗೆ ಚಿಂತೆಗೆ ಎಡೆ ಮಾಡುತ್ತವೆ. ನೆರೆಹಾವಳಿಯಲ್ಲಿ ತಮ್ಮ ಮನೆಮಠ, ತಂದೆತಾಯಿ ಸಂಬಂಧಿಕರನ್ನು ಕಳೆದುಕೊಂಡ ನತದೃಷ್ಟೆ, ಅನಾರೋಗ್ಯದಿಂದ ಬಳಲುವ 'ವೀಣಾ'ಳನ್ನು ವಿದೇಶಿ ಸೋಲ್ಜರರು ಅತ್ಯಾಚಾರಕ್ಕೆ ಯತ್ನಿಸುವಂತದ್ದು ತಿಳಿದುಬರುತ್ತದೆ. ಹಾಗೆಯೇ ಅನಾಥೆಯಾದ ವೀಣಾ ಬಿಜಾಪುರದ ಅನ್ನಛತ್ರದಲ್ಲಿ ಸೇರಿಕೊಂಡು ಬದುಕು ಸಾಗಿಸುವ ಅಂದಿನ ಸಮಾಜದ ನೈಜಸ್ಥಿತಿಯನ್ನು ಒಳಗೊಂಡಿದೆ.

ಈ ಕಾದಂಬರಿಯ ಶೀರ್ಷಿಕೆಯನ್ನು ಅನ್ವರ್ಥಗೊಳಿಸುವಂತೆ ಅನ್ನವು ಬಹಳ ವ್ಯಾಪಕವಾದ ರೀತಿಯಲ್ಲಿ ಬಳಕೆಗೊಂಡಿದೆ. ಅನ್ನಕ್ಕೆ ಇರುವ ಹಸಿವನ್ನು ತಣಿಸುವ ನೀರೀಕ್ಷೆಗಳಿಗೆ ಅದೆಷ್ಟು ಆಯಾಮಗಳು? ಒಂದೊಂದು ಪಾತ್ರಗಳು ವಿಭಿನ್ನ ನೆಲೆಯನ್ನು ಸೂಚಿಸುತ್ತವೆ. ತೀವ್ರ ಹಸಿವಿನ ವಿಶಿಷ್ಟ ಆಯಾಮಗಳ ಒಡಲನ್ನು ತಣಿಸುವ ಪ್ರೀತಿಪೂರ್ವಕವಾದ ಅಮೃತ–ವೀಣಾಳ ಭಾವಪ್ರಪಂಚದಲ್ಲಿ ಎಡೆ ಪಡೆಯುವ ಹಸಿವಿನ ಲೋಕವಾಗಿದೆ. ಅವಳದು ಸಮಾನಶೀಲರಿಗಾಗಿ, ಭಾವನೆಗಳ ಸಾಂಗತ್ಯಕ್ಕಾಗಿ ಕಾದಿರುವ ಆಂತರಿಕ ಹಸಿವು ಕಾದಂಬರಿಯಲ್ಲಿ ಸೊಗಸಾಗಿ ಮೂಡಿಬಂದಿದೆ.

ಇಂಥ ಅನೇಕ ಸಂದರ್ಭಗಳು ಒಂದರ ಮಗ್ಗುಲಿಗೆ ಬಂದು ನಿಲ್ಲುತ್ತಾ ಆ ಕಾಲದ ವಾಸ್ತವ ಪ್ರಪಂಚವನ್ನು ಪರಿಚಯಿಸುತ್ತವೆ. ಈ ದುಸ್ಥಿತಿಗೆ ಧ್ವನಿಸುವ ಅಮೃತನ ಸಂವೇದನೆಗಳು, ಮತ್ತೆ ಮತ್ತೆ ಅವನ ಮನಸ್ಸಿನ ದುರ್ಬಲ ಸ್ಥಾನಗಳನ್ನು ಮೀಟುವ ಸ್ವಸ್ಥ ಬದುಕಿನ ಸೆಳೆತಗಳಾಗಿ ಇಲ್ಲಿ ಪ್ರಭಾವಿಯಾಗಿ ಬಂದಿವೆ. ಈ ಅಂಶಗಳು ಕಾದಂಬರಿಕಾರರಾಗಿ ಮುಗಳಿ ಅವರ ಪ್ರತಿಭೆಯು ವಿಕಸನಶೀಲವಾಗಿರುವುದರ ಸೂಚನೆಯನ್ನು ನೀಡುತ್ತದೆ. ಈ ಕಾದಂಬರಿಯಲ್ಲಿ ಮುಗಳಿ ಅವರೊಳಗಿನ ಕವಿಹೃದಯವು ಎಚ್ಚರಗೊಂಡಿರುವುದಕ್ಕೆ ಹೇರಳವಾದ ನಿದರ್ಶನಗಳೇ ಸಾಕ್ಷಿಯಾಗಿವೆ. ಅನ್ನದ ಕೇಂದ್ರವಾಗಿರುವ ಹಸಿವಿನ ಪ್ರಪಂಚದೊಳಗೂ ಅವರು ರಮ್ಯವರ್ತುಲವೊಂದನ್ನು ಗುರ್ತಿಸುತ್ತಾರೆ. ಅಮೃತ ವೀಣಾರ ಸಂಬಂಧ ಹತ್ತಿರವಾಗುತ್ತಾ ನಡೆದುದ್ದನ್ನು ದಾಖಲಿಸುವ ಅವರ ಶೈಲಿ ಕಂಡುಬರುತ್ತದೆ. "ಅಮೃತ ವೀಣೆಯರ ಹೃದಯಗಳು ಕ್ರಮೇಣ ಹತ್ತಿರ ಹತ್ತಿರವಾದವುಗಳು. ಒಳಗೆ ಹುದುಗಿದ ರತಿ ಮೇಲುನೆಲೆಗೆ ಬಾರದಿದ್ದರೂ ತನ್ನ ವಕ್ರವಿಲಾಸವನ್ನು ಅದು ತೊರೆದಿರಲಿಲ್ಲ. ಅಮೃತನಿಗೆ ಇದರ ಶೂಲೆ ಹೆಚ್ಚಾಗಿ ತಲೆದೋರಿತು. ವೀಣೆಯ ಬಗೆಗೆ ತನ್ನ ಸ್ನೇಹದ ಮರುಕ ಎಷ್ಟು ನಿರ್ಮಲವಾದುದಾದರೂ ಅದು ಬೇರೆ ಕೋರಿಕೆಯಲ್ಲಿ ಅರಳು ಲಕ್ಷಣವಿರುವುದೆಂದರಿತನು" (ಪು.೭೨).

ಈ ರೀತಿಯಾದ ಅಮೃತ ವೀಣಾರ ಸಂದರ್ಭಗಳಲ್ಲಿ ಇಂಥ ವಿವರಗಳು ಉದ್ದಕ್ಕೂ ಬಂದು ಭಾವುಕ ಸನ್ನಿವೇಶಗಳನ್ನು ಸೃಷ್ಟಿಸುತ್ತವೆ. ಪಶ್ಚಿಮ ಬಂಗಾಳದಿಂದ ಊರಿಗೆ ಮರಳುವ ಅಮೃತನು ಎದುರಿಸಬೇಕಾಗಿ ಬಂದುದು ಅವನ ಸ್ವಂತ ಕರುಳಬಳ್ಳಿಯನ್ನು, ಸುತ್ತುವರಿದಿದ್ದ ಸಂಕೀರ್ಣತೆಗಳನ್ನು ಬಿಡಿಸಬೇಕಾಗಿ ಬಂದುದು ತನ್ನದೇ ಸಂಸಾರದ ಸದಸ್ಯರ ಅಸ್ತಿತ್ವದ ಪ್ರಶ್ನೆಗಳನ್ನು ಕಾದಂಬರಿ ವ್ಯಂಗ್ಯ ಮಾಡುತ್ತದೆ. ಮುಗಳಿ ಅವರು ಕಾದಂಬರಿಯ ಕೊನೆಯನ್ನು ಅದರ ಪ್ರಾರಂಭಕ್ಕೆ ಜೋಡಿಸುತ್ತಾರೆ. ಸಾಕ್ಷಿ, ಪುರುಷ ತರಲಿರುವ ವರದಿಗಾಗಿ ಕಾಯುತ್ತಾ, ಧ್ಯಾನಸ್ಥಳಾಗಿರುವ ಭಾರತಿಯಲ್ಲಿ ಅಸಹನೆ ತಲ್ಲಣಗಳು ಬೆಳೆಯುತ್ತಿದ್ದಂತೆ ಆತ ಬರುತ್ತಾನೆ. ತಾನು ಕಂಡ ಕರುಣ ಕತೆಯ ಸಾರವನ್ನು ನಿರೂಪಿಸುತ್ತಾನೆ. ಇದಕ್ಕೆ ಪ್ರತಿಕ್ರಿಯೆಯಾಗಿ ಅದೆಷ್ಟೋ ಹೊತ್ತು ತನ್ನಾಳದಲ್ಲಿ ಹುದುಗಿ ಕುಳಿತಿದ್ದ ಭಾರತಿ, "ಅನ್ನ ಬೇಕು, ಅದಿಲ್ಲದೆ ಪ್ರಾಣವಿಲ್ಲ, ಮನವಿಲ್ಲ, ವಿಜ್ಞಾನವಿಲ್ಲ, ಆನಂದವಿಲ್ಲ. ಆದರೆ 'ಅನ್ನ' ನನಗೊಬ್ಬನಿಗೆ ಬೇಕೆನ್ನುವ ಕಾಮ ಅಹಂಕಾರಗಳು ಅಳಿಯಬೇಕು. ಇದಕ್ಕಾಗಿ ಜನಚಿತ್ತಕ್ಕೆ

ದೊಡ್ಡ ಸಂಸ್ಕಾರ ಬೇಕು. ಈ ಹೃದಯಸಂಸ್ಕಾರವನ್ನು ಜನಮನದಲ್ಲಿ ಬೇರೂರಿಸುವ ಪ್ರಭಾವಿಯಾದ ಜ್ವಲಂತವಾದ ದರ್ಶನವನ್ನೂ, ಕೃತಿಯನ್ನೂ ಭಾರತಕ್ಕೆ ನೀಡೋಣ. ಭಾರತದಿಂದ ಜಗತ್ತಿಗೆ ಕಾಣಿಕೆಯಾಗಿ ಅರ್ಪಿಸೋಣ"(ಪು.೨೯೩) ಎನ್ನುವ ಸಂದೇಶವನ್ನು ನೀಡುತ್ತಾಳೆ. ಮುಂದೆ ಮುಂದೆ ನಡೆದು ಭಾರತಿಯ ಕವಿಮನದಲ್ಲಿ, ಜನಜೀವನದಲ್ಲಿ ಒಂದಾಗಿ ನಿಲ್ಲುತ್ತಾಳೆ. ಇದಿಷ್ಟು ಅನ್ನ ಕಾದಂಬರಿಯ ಸ್ಥೂಲವಾದ ಹಂದರವಾಗಿದೆ.

'ಅನ್ನ' ಕಾದಂಬರಿಯು ಹೆಚ್ಚು ಮನ್ನಣೆಯನ್ನು ಗಳಿಸಿದ ಕಾದಂಬರಿಯಾಗಿದೆ. ಅದು ಬರಗಾಲದ ಅನುಭವವನ್ನು ವಸ್ತುವಾಗಿ ಹೊಂದಿರುವ ಕನ್ನಡದ ಅಪರೂಪ ಕಾದಂಬರಿಗಳಲ್ಲಿ ಒಂದಾಗಿದೆ. ವ್ಯಕ್ತಿ, ಸಮಾಜ ಮತ್ತು ಜೀವನದ ಸ್ಥೂಲ ಹಿನ್ನೆಲೆಯಲ್ಲಿ ಬದುಕಿನ ಸಾರ್ಥಕತೆಯನ್ನು ಕಂಡುಕೊಳ್ಳುವ ಪ್ರಯತ್ನ ಈ ಕಾದಂಬರಿಯಲ್ಲಿ ನಡೆದಿದೆ. ಆದರ್ಶವಾದದ ಹಿನ್ನೆಲೆಯಲ್ಲಿ ರಚನೆಗೊಂಡ ಕಾದಂಬರಿ ಇದಾಗಿದ್ದು, ಯಾವುದೇ ವಿಷಯದಲ್ಲಿ ಅತಿರೇಕಕ್ಕೆ ಹೋಗಲು ಸಿದ್ಧವಿಲ್ಲದ ಮುಗಳಿ ಅವರ ಮನೋಧರ್ಮವು ಪ್ರಸ್ತುತ ಕಾದಂಬರಿಯಲ್ಲಿ ಒಡಮೂಡಿದೆ. ಮುಗಳಿ ಅವರ ನಿರೂಪಣೆ ಶೈಲಿಯು ಉತ್ತರ ಕರ್ನಾಟಕದ ದೇಸಿ ಭಾಷೆಯನ್ನು ಒಳಗೊಂಡಂತಿದೆ. ಕಾದಂಬರಿಯು ಅಮೃತ ಎಂಬ ವಿದ್ಯಾರ್ಥಿಯ ಜೀವನವೃತ್ತಾಂತದಿಂದ ಪ್ರಾರಂಭಗೊಳ್ಳುತ್ತದೆ. ಅವನು ಗ್ರ್ಯಾಂಟ್ ಮೆಡಿಕಲ್ ಕಾಲೇಜಿನ ಅಂತಿಮ ವರ್ಷದ ಎಂ.ಬಿ.ಬಿ.ಎಸ್. ಓದುತ್ತಿರುವ ವಿದ್ಯಾರ್ಥಿ. ತಂದೆ ತಾಯಿಗಳಾದ ಶಂಭುರಾಯರು ಮತ್ತು ಪಾರ್ವತಿಬಾಯಿಯವರು ಮಗನ ಓದಿಗಾಗಿ ತಮ್ಮ ಜೀವನವನ್ನೇ ಮುಡುಪಾಗಿಟ್ಟಿರುತ್ತಾರೆ. ಮಗನಾದ ಅಮೃತನು ಮುಂದೊಂದು ದಿನ ಆರ್ಥಿಕವಾಗಿ ಸದೃಢಗೊಂಡು ನಮ್ಮನ್ನು ಸಾಕಿ-ಸಲಹುವನೆಂಬ ಆಶಾಭಾವನೆಯೇ ಅವರ ಹಸಿವಿನ ಇನ್ನೊಂದು ನೋಟವಾಗಿರುತ್ತದೆ. ಆದರೆ ಅಮೃತನು ಪಶ್ಚಿಮ ಬಂಗಾಳದ ನೆರೆಹಾವಳಿ ಕುರಿತಂತೆ ಪತ್ರಿಕೆಯಲ್ಲಿ ಪ್ರಕಟವಾದ ವರದಿ ಮತ್ತು ಲೋಕಸೇವಾನಂದರ ಉಪನ್ಯಾಸಗಳಿಗೆ ಪ್ರಭಾವಿತನಾಗಿ ದೇಶ ಸೇವೆಯಲ್ಲಿ ಸದಾಕಾಲ ದುಡಿಯಬೇಕೆಂಬ ಹಂಬಲ ಅವನನ್ನು ಕಾಡುತ್ತಿರುತ್ತದೆ. ಈ ಪ್ರಭಾವವೇ ಅವನಲ್ಲಿ ಮುಂದೆ ತನ್ನ ಓದನ್ನು ಮೊಟಕುಗೊಳಿಸಿ ದೇಶಸೇವೆಯಲ್ಲಿ ತನ್ನನ್ನು ತಾನು ತೊಡಗಿಸಿಕೊಳ್ಳಲು ಪ್ರೇರೇಪಿಸುತ್ತದೆ. ಪಾತ್ರದ ದೃಷ್ಟಿಯಿಂದ ಇದನ್ನು ಗಮನಿಸುವುದಾದರೆ ಕಾದಂಬರಿಯು ಓದುಗರಿಗೆ ಅಮೃತನು ಹೊರಟ ದಾರಿಯು ಸರಿಯೇ..? ಎಂಬ ಪ್ರಶ್ನೆಯನ್ನು ಮನದಾಳದಲ್ಲಿ ಮೂಡಿಸುತ್ತದೆ. ಇದೇ ಮಾದರಿಯ ಪಾತ್ರಚಿತ್ರಣವನ್ನು ಶ್ರೀರಂಗರ 'ವಿಶ್ವಾಮಿತ್ರ ಸೃಷ್ಟಿ' ಕಾದಂಬರಿಯಲ್ಲಿ ಬರುವ ನಾಣಿಯ ಪಾತ್ರವು ಹೋಲುವಂತಿದೆ.

ಮುಗಳಿ ಅವರು ಅನ್ನ ಕಾದಂಬರಿಯ ಶೀರ್ಷಿಕೆಯನ್ನು ಅನ್ವರ್ಥಗೊಳಿಸುವಂತೆ ಅದರಲ್ಲಿ ಅನ್ನದ ಹಸಿವಿನ ಚಿತ್ರಣವನ್ನು ವ್ಯಾಪಕವಾದ ರೀತಿಯಲ್ಲಿ ಚಿತ್ರಿಸಿರುವುದನ್ನು ಗಮನಿಸಬಹುದಾಗಿದೆ. ತಂದೆ ತಾಯಿಗಳಾದ ಶಂಭುರಾಯರು ಪಾರ್ವತಿಬಾಯಿಯರು ಮಗನಾದ ಅಮೃತನು ಬಂದು ನಮ್ಮ ಕಷ್ಟಗಳಿಗೆ ಭಾಗಿಯಾಗಿ ನಮ್ಮನ್ನು ನೋಡಿಕೊಳ್ಳುತ್ತಾನೆಂದು ಒಂದು ಕಡೆಯ ಹಸಿವಾದರೆ,

ಮತ್ತೊಂದು ಕಡೆ ತಂಗಿಯಾದ ಸುಂದರಾಳ ಮುಂದಿನ ಹೊಸಬದುಕಿಗೆ ಕಾಲಿಡುವ ಮನದಾಳದ ಹಸಿವು ಈ ರೀತಿ ಕಂಡರೆ, ಪ್ರಾಯಕ್ಕೆ ಬಂದ ವೀಣಾಳ ಅಮೃತ ಪ್ರೇಮದ ಮತ್ತೊಂದು ಹಸಿವಾಗಿ, ಅದೇ ರೀತಿ ಪಶ್ಚಿಮ ಬಂಗಾಳದ ವಿದೇಶಿ ಸೈನಿಕರ ಕೆಟ್ಟ ಕಾಮದ ಹಸಿವಾಗಿ ಈ ಕಾದಂಬರಿಯಲ್ಲಿ ಕಂಡುಬರುತ್ತದೆ. ಬಡಜನರು ಕೂಲಿ ಬಯಸಿ ಗುಳೆ ಹೋದ ಸಂದರ್ಭದಲ್ಲಿಯೂ ಸಹ ಮೋಸ, ವಂಚನೆ, ಮಾನಸಿಕ, ದೈಹಿಕ, ಲೈಂಗಿಕ ದೌರ್ಜನ್ಯ, ಲಂಚಗುಳಿತನ ಇನ್ನೊಂದು ಆಯಾಮದಲ್ಲಿ ನಡೆಯುವ ಶೋಷಣೆಗಳನ್ನು ಸಹ ಹಸಿವಿನ ಇನ್ನೊಂದು ಮುಖವಾಗಿದೆ.

ಮುಗಳಿ ಅವರು ಕಾದಂಬರಿಯಲ್ಲಿ ಅಂದಿನ ಕಾಲದಲ್ಲಿನ ಬರಪರಸ್ಥಿತಿಯನ್ನು ವಿವಿಧ ಸಂದರ್ಭಗಳಲ್ಲಿ ಚಿತ್ರಣವನ್ನು ಕಟ್ಟಿಕೊಟ್ಟಿದ್ದಾರೆ. ಬರದ ಪರಿಸ್ಥಿತಿಯು ಜನರನ್ನು ಹೇಗೆ ಕಂಗೆಡಿಸಿತ್ತೆಂದರೆ ತಮ್ಮ ಪ್ರದೇಶವನ್ನು ಬಿಟ್ಟು ಮತ್ತೊಂದು ಪ್ರದೇಶಕ್ಕೆ ಗುಳೆ ಹೋಗುವಂತಹ ಸ್ಥಿತಿಯನ್ನು ತಂದೊಡ್ಡಿತ್ತು. ಗುಳೆ ಹೋದ ಕಡೆಗಳಲ್ಲೂ ಸರಿಯಾಗಿ ಕೆಲಸ ಸಿಗದೆ ರೈಲ್ವೆಸ್ಟೇಷನ್ನಿನಲ್ಲಿಯೆ ಟಿಕೇಟ್ ಇಲದೆ ಪಯಣಿಸುತ್ತಿರುವುದನ್ನು ಗಮನಿಸಿದ ಟಿಕೇಟ್ ಮಾಸ್ತರನು ಆ ಗುಳೆಕಾರರನ್ನು ತರಾಟೆಗೆ ತಗೆದುಕೊಳ್ಳುತ್ತಾನೆ. ಕೈಯಲ್ಲಿ ಕಾಸು ಇಲದೆ ಹಸಿವೆಯಿಂದ ಊರಿಗೆ ಹೋಗುತ್ತಿರುವುದಾಗಿ ತಿಳಿಸುತ್ತಾರೆ ನಮ್ಮ ಊರಿನ ಮನೆಗಳಲ್ಲಿ ತಿನ್ನಲು ಏನೂ ಇಲ್ಲದ ಪರಿಸ್ಥಿತಿ ಇರುವುದರಿಂದ ಅಲ್ಲಿ ಸ್ಥಾಪಿಸಿರುವ ಸರಕಾರದವರ ಅನ್ನಛತ್ರಕ್ಕೆ ಹೊರಟಿರುವುದಾಗಿ ತಿಳಿಸುತ್ತಾರೆ. ಮುಗಳಿ ಅವರು ಬರಗಾಲದಲ್ಲಿ ಗಂಜಿಕೇಂದ್ರ, ಅನ್ನಛತ್ರಗಳು ಸರ್ವೇ ಸಾಮಾನ್ಯರೀತಿಯಲ್ಲಿ ಕಂಡುಬರುವಂತೆ ಒಡಮೂಡಿದೆ. ಅಂದಿನ ಕಾಲದ ಬರಗಾಲದ ಭೀಕರತೆಯನ್ನು ಬಿಂಬಿಸುವ ಮುದುಕಿಯ ಮಾತುಗಳು ಹೀಗಿವೆ. "ಬ್ಯಾಡೋ ಎಪ್ಪಾ ಇಂತಾ ಬರಗಾಲ ಎಂದೆಂದೂ ಬರದ ಬ್ಯಾಡೋ ನಮ್ಮಪ್ಪ ಎಂಟುಮಂದಿಗೆ ಕುಸುಕುನ್ನಿಗೆ ದಿನಾಹೊಟ್ಟೆಗೆ ಹಾಕತೀದಿ ನಿನ್ನ ಹೊಟ್ಟೆ ತಣ್ಣಗಾಗಲಿ" ಎನ್ನುವಂತೆ ಹಾಗೆ ಮುಂದುವರಿದು "ಮನೆಯೊಳಗಿನ ಕಾಳು ತೀರಿದವು ಎಲ್ಲ ವಸ್ತ್ರ, ಒಡವೆ, ಪಾತ್ರೆ, ದನ-ಕರ ಮಾರಿ ಒಂದೆರಡು ತಿಂಗಳು ಬದುಕಿದರು. ಎಲ್ಲಾ ಮುಗಿದು ಹೋಯಿತು. ಊರು ಬಿಟ್ಟು ಮಕ್ಕಳನ್ನು ಕಟ್ಟಿಗೊಂಡು ಹೊರಟರು. ಎಲ್ಲಿಗೆ, ಯಾತಕ್ಕೆ ಎಂಬುದು ಗೊತ್ತಿಲ್ಲ. ದಾರಿಯಲ್ಲಿ ತಿರಕ್‌ಸಾಲಿ, ಹೊನ್ನಿಕುಕ್ಕಿ, ಗೊರಜಿಕೊಪ್ಪಲ ಸಿಕ್ಕಿದ್ದು ತಿಂದರು. ಜೋಳ, ಸೆಜ್ಜೆ ಸಿಗದಾದ ಕಾರಣ ಅನೇಕ ಜನರ ಆಹಾರ ಈ ಬಗೆಯ ತೊಪ್ಪಲವೆ ಆಗಿತ್ತು. ಆದರೂ ಹಾಗೆ ಮಾಡಿ ಕೆಲವು ದಿನ ನೂಕಿದರು" ಎಂಬುದನ್ನು ಅಂದಿನ ಕಾಲಘಟ್ಟದ ಬರದ ಭೀಕರತೆಯನ್ನು ವಿವಿಧ ಮಗ್ಗುಲುಗಳ ಮೂಲಕ ಅನಾವರಣಗೊಂಡಿದೆ.

ಈ ಕಾದಂಬರಿಯಲ್ಲಿ ಮುಗಳಿ ಅವರ ಕವಿ ಹೃದಯ ಭಾವನೆಗಳ ಹೇರಳವಾದ ನಿದರ್ಶನಗಳನ್ನು ನಾವು ಮನಗಾಣಬಹುದಾಗಿದೆ. ಅನ್ನದ ಕೇಂದ್ರವಾಗಿರುವ ಹಸಿವಿನ ಪ್ರಪಂಚದೊಳಗೂ ಅವರು ರಮ್ಯಯುತವಾದ ಅಮೃತ-ವೀಣಾಳ ಪ್ರೀತಿ ಸಂಕೋಲೆಯನ್ನು ಬೆಸೆಯುವ ಅವರ ಶೈಲಿ ಇದನ್ನು ಸ್ಪಷ್ಟಪಡಿಸುತ್ತದೆ. ಅಂತಹ ಒಂದು ಸಂದರ್ಭ ತಿಳಿಯುವುದಾದರೆ "ಅವೆರಡೂ ಹೃದಯಗಳು ಕ್ರಮೇಣ ಹತ್ತಿರ ಹತ್ತಿರವಾದವು. ಒಳಗೆ ಹುದುಗಿದ ರತಿ ಮೇಲು ನೆಲೆಗೆ ಬಾರದಿದ್ದರೂ ತನ್ನ

ವಕ್ರವಿಲಾಸವನ್ನು ಅದು ತೋರದಿರಲಿಲ್ಲ. ಅಮೃತನಿಗೆ ಇದರ ಅರಿವು ಹೆಚ್ಚಾಗಿ ತಲೆದೋರಿತು. ವೀಣಾಳ ಬಗೆಗೆ ತನ್ನ ಸ್ನೇಹದ ಮರುಕ ಎಷ್ಟು ನಿರ್ಮಲವಾದರೂ ಅದು ಬೇರೆ ಕೋರಿಕೆಯಲ್ಲಿ ಅರಳುವ ಲಕ್ಷಣವಿರುವುದೆಂದರಿತನು... ವೀಣೆಯ ತಂತಿ ಮಿಡಿದಾಗ ಆಗಾಗ ಆಗುವ ಸಹಕಂಪನವನ್ನು ಯಾರು ತಡೆಯಬಲ್ಲರು?" "ಕ್ಷಣ ಕ್ಷಣಕ್ಕೆ ಅಗಲುತ್ತಿದ್ದ ಹೃದಯಗಳು ಹೆಚ್ಚು ಹೆಚ್ಚು ಬೆರೆಯುತ್ತಿದ್ದವು" ಇಂತಹ ಪ್ರೀತಿಯುತ ಸಂವೇದನೆಯ ಹಸಿವು ಕಾದಂಬರಿಯ ಸಂದರ್ಭಕ್ಕೆ ಅನುಗುಣವಾಗಿ ಕಂಡುಬರುತ್ತದೆ.

ಮುಂದುವರಿದು ಹೇಳುವುದಾದರೆ ಪಶ್ಚಿಮ ಬಂಗಾಳದಿಂದ ಊರಿಗೆ ಮರಳುವ ಅಮೃತನು ಎದುರಿಸಬೇಕಾಗಿ ಬಂದುದು ಅವನ ಸ್ವಂತ ಮನೆಯ ಪರಿಸ್ಥಿತಿಯನ್ನು. ಅದು ದಿನನಿತ್ಯದ ಜೀವನಕ್ಕೆ ಹೊಂದಿಕೊಂಡು ಕಷ್ಟದಲ್ಲಿಯೇ ಸಾಗುತ್ತಿರುವಾಗ ಮತ್ತೆ ಅಮೃತನು ದೇಶ ಸೇವೆಗೆಂದು ಸನ್ನದ್ಧನಾಗುವಂತೆ ಮಾಡುವುದು. ಹಿರಿಯ ವ್ಯಕ್ತಿ ಜನಾರ್ಧನರಾಯರಿಂದ ಎಂಬುದು ತಿಳಿದುಬರುತ್ತದೆ. ಅದೇ ರೀತಿಯಾಗಿ ದಾತಾರರಂತಹ ಉದಾರ ವ್ಯಕ್ತಿತ್ವ ಉಳ್ಳವರು ಹಲವಾರು ಜನರೊಂದಿಗೆ ಸಂಘಟನೆ, ಪ್ರೇರಣೆ, ಪ್ರೋತ್ಸಾಹ, ಸಾಂತ್ವನ, ವಿಮೋಚನೆ ಮುಂತಾದ ನಾನಾ ಕಾರ್ಯಗಳಲ್ಲಿ ದುಡಿಯಲೆಂದೇ ಪ್ರೇರಕ ಶಕ್ತಿಯಾಗಿ ಪ್ರಬೋಧಾನಂದ, ದಾತಾರರಂತ ಪಾತ್ರಗಳು ಮುಖ್ಯವಾಗಿವೆ. ದೇಶಸೇವೆ ಮಾಡಬೇಕೆಂದು ಸದಾ ಚಡಪಡಿಸುವ ಅಮೃತನನ್ನು ಹತ್ತಿರದಿಂದ ಬಲ್ಲವರಾದ ದಾತಾರರು ಜನರ ಸೇವೆಗಾಗಿ ಮನೆ ಮಠಗಳನ್ನು ಬಿಟ್ಟು ಅಲೆಯಬೇಕಾಗಿಲ್ಲ. ತನ್ನ ಸುತ್ತಮುತ್ತಲಿರುವ ಬಡವರಿಗೆ ಕೈಲಾದ ಸಹಾಯ ಮಾಡಿದರೆ ಸಾಕು. ಅದೇ ನಿಜವಾದ ದೇಶಸೇವೆ ಎಂದು ಅಮೃತನಿಗೆ ಸ್ಪಷ್ಟಪಡಿಸುತ್ತಾರೆ. ಆದರೆ ಅವನು ಆ ವಿಷಯಕ್ಕೆ ಕಿವಿಗೊಡದೆ ಸಮಾಜಮುಖಿಯಾದ ಚಟುವಟಿಕೆಗಳಲ್ಲಿ ಹೆಚ್ಚು ಹೆಚ್ಚು ತೊಡಗಿ ಕೊಂಡವನಾಗಿ, ಅದೇ ರೀತಿ ಸಮಾಜದ ವಿವಿಧ ಮುಖಗಳನ್ನು ಅರಿತವನಾಗುತ್ತಾನೆ. ಬಡವರ ಹೃದಯ ಶ್ರೀಮಂತಿಕೆ ಒಂದೊಂದು ಒಡಲಿನ ಆಳದಲ್ಲೂ ಇರುವ ಉರಿ, ಹಸಿವಿನ ತಲ್ಲಣ ಸಂವಾದಕ್ಕಾಗಿ ಹಪಹಪಿಸುವ ಮನೋಭಾವಗಳನ್ನು ಕುರಿತಂತೆ ಚಿತ್ರಿಸುತ್ತಾರೆ.

ಅಮೃತನ ವೈಯಕ್ತಿಕ ಬದುಕಿನಲ್ಲಿ ಹಣದ ಆಮಿಷಕ್ಕೆ ಒಲ್ಲದ ಹೆಂಡತಿಯನ್ನು ಮದುವೆಯಾಗುವಂತದ್ದು ಕಿರುಸನ್ನಿವೇಶವಾದರೂ, ಆದರೆ ಹಾಗೆ ದೊರೆತ ಹಣದಿಂದ ಬಹುಕಾಲ ಮುಂದೂಡಲ್ಪಟ್ಟ ತಂಗಿ ಸುಂದರಾಳ ಮದುವೆ ಮಾಡಿಸಿ ಆ ಮೂಲಕ ಕೌಟುಂಬಿಕ ಜೀವನದಲ್ಲಿ ತನ್ನ ವರ್ಚಸ್ಸು ಹೆಚ್ಚುವಂತೆ ಮಾಡಿಕೊಂಡದ್ದು ಇದರ ಇನ್ನೊಂದು ಮುಖವನ್ನು ಸೂಚಿಸುತ್ತದೆ. ಇಷ್ಟು ಮಾತ್ರವಲ್ಲದೇ ವೀಣಾಳೊಂದಿಗೆ ಅವನು ಬೆಳಸಿಕೊಂಡ ಪ್ರೀತಿಯು ಬಹುಪಾಲು ಗುಪ್ತವಾಗಿಯೇ ನಡೆದಿದ್ದ ಭಾವನಾತ್ಮಕ ಸಂಬಂಧಗಳೂ ಬೇರೆಯ ನೆಲೆಯನ್ನು ಕಂಡುಕೊಳ್ಳುತ್ತವೆ.

ಅಮೃತನು ಮತ್ತೆ ಮೊಟಕುಗೊಂಡ ತನ್ನ ವಿದ್ಯಾಭ್ಯಾಸವನ್ನು ಮುಂದುವರಿಸುವುದಾಗಿ ಮುಂಬಯಿಗೆ ತೆರಳಿದಾಗಲೂ ತನ್ನ ವೈದ್ಯಕೀಯ ಶಿಕ್ಷಣವನ್ನು ಮುಂದುವರಿಸದೇ ಮತ್ತೆ ಬಂಗಾಳಕ್ಕೆ ತೆರಳುತ್ತಾನೆ. ಅಲ್ಲಿಯೇ ಇದ್ದು ರೋಗಿಗಳ ಆರೈಕೆಯಲ್ಲಿ ಮಗ್ನವಾಗಿದ್ದ ವೇಳೆಯಲ್ಲಿ ಅವನಿಗೆ

ಸಾಂಕ್ರಾಮಿಕ ಮಲೇರಿಯಾ ರೋಗವು ಅಂಟಿಕೊಳ್ಳುತ್ತದೆ. ತನ್ನ ಆರೋಗ್ಯವನ್ನು ನಿರ್ಲಕ್ಷಿಸಿ ಇತರರನ್ನು ಉಪಚರಿಸುತ್ತಿರುವಾಗಲೇ ಹಂತ ಹಂತವಾಗಿ ಕುಸಿಯುತ್ತಿದ್ದ ಅವನ ಆರೋಗ್ಯವು ಕ್ಷೀಣಗೊಂಡು ಸಾವಿನೊಡನೆ ಅಂತ್ಯಗೊಳ್ಳುವ ಮೂಲಕ ಕಾದಂಬರಿ ಮುಕ್ತಾಯಗೊಳ್ಳುತ್ತದೆ. ಈ ಹಂತದವರೆಗೂ ಅಮೃತನ ಪಾತ್ರವು ಕಾದಂಬರಿಯೊಳಗಡೆ ಆದರ್ಶವಾದದ ಹಿನ್ನೆಲೆಯಲ್ಲಿ ಮಿಂದೆದ್ದ ಪಾತ್ರವಾಗಿದೆ. ಆ ಕಾಲದ ಸಾಮಾನ್ಯ ಲಕ್ಷಣಗಳಲ್ಲೊಂದಾದ ಹುತಾತ್ಮತೆಯನ್ನು ಈ ಪಾತ್ರದೊಂದಿಗೆ ಸಮಿಕರಿಸಿದ್ದಾರೆ. ಅದೇ ರೀತಿಯಾಗಿ ಎಚ್.ಎಸ್.ರಾಘವೇಂದ್ರರಾವ್ ಅವರು ರಂ.ಶ್ರೀ.ಮುಗಳಿ ಸಮಗ್ರ ಸಾಹಿತ್ಯ ಕಾದಂಬರಿ ಕತೆಗಳು ಸಂಪಾದಿತ ಕೃತಿಯ ಮುನ್ನುಡಿ ಭಾಗದಲ್ಲಿ ತಿಳಿಸಿರುವ ಹಾಗೆ ಗಮನಿಸುವುದಾದರೆ "ಅನ್ನ ಕಾದಂಬರಿಯಲ್ಲಿ ಬರುವ ಬಹುತೇಕ ಪಾತ್ರಗಳು ನಾಯಕತ್ವ ಗುಣವನ್ನು ನೀಡುವುದಕ್ಕಿಂತ ಹೆಚ್ಚಾಗಿ ನಿಷ್ಠೆಯಿಂದ ದುಡಿದು ಬಲಿದಾನವಾಗುವ ಪಾತ್ರಗಳೇ ಇಲ್ಲಿ ಜಾಸ್ತಿ, ಆದರೆ ನಿರಾಶಾವಾದವು ಮುಗಳಿಯವರಿಗೆ ಇಷ್ಟವಾಗುವ ಗುಣವಲ್ಲ. ಎಂತಹ ದುರಂತದ ಒಡಲಿನಲ್ಲಿಯೂ ಮನುಷ್ಯಚೇತನದಲ್ಲಿ ಅವರಿಗೆ ಇರುವ ನಂಬಿಕೆಯು ಕುಗ್ಗುವುದಿಲ್ಲ. ವಂಚಕರು, ದುಷ್ಟರು, ಅಹಂಕಾರಿಗಳು ಇರಬಹುದು. ಅಂತವರನ್ನು ಮುಗಳಿ ಅವರು ಚಿತ್ರಿಸುತ್ತಾರೆ .ಆದರೆ ಆ ವಾಸ್ತವಪ್ರಜ್ಞೆಯು ಅವರ ಆದರ್ಶಪರತೆ ಮತ್ತು ಜೀವನ ವಿವೇಕಗಳಿಗೆ ಧಕ್ಕೆ ತರುವುದಿಲ್ಲವೆಂದಿದ್ದಾರೆ".

ತಾಳ್ತಜೆ ವಸಂತಕುಮಾರ ಅವರು ತಮ್ಮ 'ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪುರಸ್ಕೃತ ಕನ್ನಡ ಲೇಖಕರು ರಂ.ಶ್ರೀ.ಮುಗಳಿ' ಕೃತಿಯಲ್ಲಿ ತಿಳಿಸುವಂತೆ ವಸ್ತುವಿನ ದೃಷ್ಟಿಯಿಂದ ಅನ್ನ ಕಾದಂಬರಿಯಲ್ಲಿ ಅಂತಹ ಹೊಸತನವಿಲ್ಲ. ಉಳಿದೆರಡು ಕಾದಂಬರಿಗಳಿಗೆ ಹೋಲಿಸಿದರೆ ನಿರೂಪಣೆಯಲ್ಲಿ ಸ್ವಲ್ಪ ಮಟ್ಟಿನ ಬಿಗಿ ಇದರಲ್ಲಿ ಕಂಡುಬರುತ್ತದೆ. ಅತಿಯಾದ ವಿವರಣೆಗಳನ್ನು ಕೈಬಿಟ್ಟಿದ್ದರೆ ಇದು ಇನ್ನಷ್ಟು ಸಮರ್ಪಕವಾಗಬಹುದಾಗಿತ್ತು. ತೀವ್ರವಾದ ಆವೇಶ, ಆಕ್ರೋಶಗಳು ಒಂದು ಬಗೆಯ ಹಿಡಿತಕ್ಕೆ ಒಳಪಟ್ಟು ಮುಗಳಿಯವರಿಂದಲೂ ಸಂಯಮದ ನಿರ್ವಹಣೆಗೆ ಸೂಚನೆ ಕೊಡುತ್ತದೆ. ಮುಗಳಿಯವರು ಬರೆದ ಮೂರು ಸಾಮಾಜಿಕ ಕಾದಂಬರಿಗಳಲ್ಲಿ ಇದು ಮೇಲ್ಮಟ್ಟದ್ದಾಗಿದೆ. ಆದರೆ ಸಂಸಾರವೆನ್ನುವುದು ದೇಶಸೇವಾಸಕ್ತಿಗೆ ಕಾಲ್ತೊಡಕೇ ಎನ್ನುವ ಸಾಂಪ್ರದಾಯಿಕ ದೃಷ್ಟಿಕೋನದಿಂದ ನಿಯಂತ್ರಿತವಾಗಿದೆ. ಒಟ್ಟಿನಲ್ಲಿ ನವೋದಯ ಸತ್ವದ ಮಧ್ಯಮ ತರಗತಿಯ ಕಾದಂಬರಿಯಾಗಿ ಇದನ್ನು ಪರಿಗಣಿಸಬಹುದೆಂಬ ಅಭಿಪ್ರಾಯಕ್ಕೆ ಬರುತ್ತಾರೆ. ಈ ಹೇಳಿಕೆಗಳನ್ನು ಒಪ್ಪಬಹುದಾಗಿದೆ.

ಅನ್ನ ಕಾದಂಬರಿಯು ಉತ್ತಮ ಸಾಮಾಜಿಕ ಮೌಲ್ಯಗಳನ್ನುಳ್ಳ ಕಾದಂಬರಿಯಾಗಿದೆ. ನಿರೂಪಣೆಯಲ್ಲಿ ವೈವಿಧ್ಯಮಯವಾದ ಶೈಲಿ, ದೇಸಿಯತೆಯನ್ನೊಳಗೊಂಡ ವಿಸ್ತೃತವಾದ ಬರವಣಿಗೆ ಕಂಡುಬರುತ್ತದೆ. "ಆದರ್ಶವಾದಿ ತತ್ವದ ಗುಣದೋಷಗಳನ್ನೆಲ್ಲಾ ಪ್ರತಿಬಿಂಬಿಸುವಂತ ಈ ಕಾದಂಬರಿ ಆದರ್ಶವಾದವೇ ಪ್ರೇರಕಶಕ್ತಿಯಾಗಿದೆ."[೧೫] ಎಂದು ಕೀರ್ತಿನಾಥ ಕುರ್ತಕೋಟಿಯವರು ಅಭಿಪ್ರಾಯಪಡುತ್ತಾರೆ. ಹಾಗೆ ಮುಂದುವರಿದು "ಮುಗಳಿಯುವರ ಕಥಾನಾಯಕರೆಲ್ಲ

ಶೋಕಗ್ರಸ್ತರಾಗಿರುವುದರಿಂದ ಅವರ ಜೀವನ ಪ್ರಭಾವವನ್ನು ಬೀರುವುದಿಲ್ಲ"[೧೬] ಎಂದು ವಿಮರ್ಶಕರು ಹೇಳಿರುವ ಮಾತು ಅಷ್ಟೊಂದು ಸಮಂಜಸವೆನಿಸುವುದಿಲ್ಲ.

ಏಕೆಂದರೆ ಮುಗಳಿ ಅವರ ಕಾದಂಬರಿಗಳಲ್ಲಿ ಬರುವ ಪ್ರಧಾನ ಪಾತ್ರಗಳು ಸೋತು ಗೆದ್ದಿರುವಂತ ಪಾತ್ರಗಳೆಂದೆನಿಸುತ್ತವೆ. ಏಕೆಂದರೆ 'ಬಾಳುರಿ' ಕಾದಂಬರಿಯಲ್ಲಿ ಬರುವ ಜಗ್ಗಣ್ಣನ ಪಾತ್ರ ದಿನನಿತ್ಯದ ಜಂಜಡ ಬದುಕಿಗೆ ಒಗ್ಗಿಕೊಂಡಿದ್ದರೂ ಸಹ ಅವನು ಉತ್ತಮ ಜೀವನವನ್ನು ಕಟ್ಟಿಕೊಳ್ಳಲು ದಿನನಿತ್ಯ ಪ್ರಯತ್ನಿಸುತ್ತಾನೆ. ಅದೇ ರೀತಿ 'ಕಾರಣಪುರುಷ' ಕಾದಂಬರಿಯಲ್ಲಿ ಬರುವ 'ವಾಮಣ್ಣ'ನ ಪಾತ್ರವು ನಿರುದ್ಯೋಗ ಸಮಸ್ಯೆಯನ್ನು ಅನುಭವಿಸಿದರೂ ಕೆಲಸವನ್ನು ಹುಡುಕುವ ಉತ್ತಮ ಜೀವನವನ್ನು ಕಟ್ಟಿಕೊಳ್ಳುವ ಪಾತ್ರವಾಗಿ ನೇರವಾಗಿ ಕಂಡುಬರದೆ ಇದ್ದರೂ ಪರೋಕ್ಷವಾಗಿ ಕಂಡುಬರುತ್ತದೆ. ಈ ಮಾತು 'ಅನ್ನ' ಕಾದಂಬರಿಗೂ ಅನ್ವಯಿಸುತ್ತದೆ. ಎಚ್.ಎಸ್. ರಾಘವೇಂದ್ರರಾವ್ ಅವರು ಸಂಪಾದಿಸಿರುವ 'ರಂ.ಶ್ರೀ.ಮುಗಳಿ ಸಮಗ್ರ ಸಾಹಿತ್ಯ ಕಾದಂಬರಿ ಕತೆಗಳು' ಇದರ ಮುನ್ನುಡಿಯಲ್ಲಿ ಹೇಳಿರುವಂತೆ, "ಮುಗಳಿ ಅವರು ಹುಸಿ ಪಾತ್ರಗಳನ್ನೇನೂ ಸೃಷ್ಟಿಸಿಲ್ಲ. ಅವು ಕೂಡಾ ಆ ದೇಶ ಕಾಲ ಸಂದರ್ಭಗಳ ಕೂಸುಗಳೇ ಹೌದು"[೧೭] ಎಂದು ತಿಳಿಸಿರುವುದು ಸಮಂಜಸವೆನಿಸುತ್ತದೆ.

ಮುಗಳಿ ಅವರ ಕಾದಂಬರಿಯ ಸಂಭಾಷಣೆಯು ಉತ್ತರ ಕರ್ನಾಟಕದ ಉಪಭಾಷೆ ಮತ್ತು ಆಡುಮಾತುಗಳನ್ನು ಬಳಸಿದರೆ ಉಳಿದ ಕಡೆಗಳಲ್ಲಿ ಸರಳ ಭಾಷೆ ಬಳಸುತ್ತಾರೆ. ಅವರ ಮೂರು ಕಾದಂಬರಿಗಳ ಭಾಷೆಯು ಸಾಮಾನ್ಯವಾಗಿ ವಾಸ್ತವವಾದಿ ತಳಹದಿಯ ಮೇಲೆ ರಚನೆಗೊಂಡಂತಿವೆ. ಇವರು ರಚಿಸಿರುವ ಮೂರು ಸಾಮಾಜಿಕ ಕಾದಂಬರಿಗಳಲ್ಲಿ 'ಅನ್ನ' ಮೇಲ್ಮಟ್ಟದ್ದಾಗಿದೆ. ಆದರೆ ಸಂಸಾರವೆನ್ನುವುದು ದೇಶಸೇವಾಸಕ್ತಿಗೆ ಕಾಲ್ತೊಡಕೇ ಎನ್ನುವ ಸಾಂಪ್ರದಾಯಿಕ ದೃಷ್ಟಿಕೋನದಿಂದ ನಿಯಂತ್ರಿತವಾಗಿದೆ. ಒಟ್ಟಿನಲ್ಲಿ ನವೋದಯ ಕಾಲಘಟ್ಟದಲ್ಲಿ ಮೂಡಿಬಂದ ಈ ಕಾದಂಬರಿ ಉತ್ಕೃಷ್ಟ ಕೃತಿ ಎಂದೆನಿಸದಿದ್ದರೂ ಬರಗಾಲದ ಅನುಭವವುಳ್ಳ ಅಪರೂಪದ ಸೃಜನಶೀಲ ಕೃತಿಯಾಗಿದೆ.

'ಅಗ್ನಿವರ್ಣ' ರಂ.ಶ್ರೀ.ಮುಗಳಿ ಅವರ ನಾಲ್ಕನೇ ಕಾದಂಬರಿಯಾಗಿದೆ. ಎಪ್ಪತ್ತಾರರ ವಯೋಮಾನದಲ್ಲಿ ಇದ್ದಾಗ ಮುಗಳಿ ಅವರು ಈ ಕಾದಂಬರಿಯನ್ನು ರಚಿಸಿದ್ದಾರೆ. ಪ್ರೌಢಶಾಲೆಯ ವಿದ್ಯಾರ್ಥಿಯಾಗಿದ್ದಾಗಲೇ ಅವರ ಮನೋಭೂಮಿಕೆಯಲ್ಲಿ ರೂಪ ಪಡೆದಿರುವಂತದ್ದು. ಅದು ಸಾಹಿತ್ಯ ಚಿಲುಮೆಯಾಗಿ ಬೆಳೆದ ಕಾದಂಬರಿಯ ವಸ್ತು ಅವರ ಅಂತರಂಗದಲ್ಲೇ ದೊಡ್ಡ ಕೃತಿಯಾಗಿ ಅಗ್ನಿವರ್ಣ ರೂಪಗೊಂಡಿದೆ. ಅಗ್ನಿವರ್ಣ ವಾಲ್ಮೀಕಿ ರಾಮಾಯಣ, ಕಾಳಿದಾಸ, ರಘುವಂಶ, ರಾಮಾಯಣ ಕಾಲದ ಮತ್ತು ರಾಮಾಯಣೋತ್ತರ ಕಾಲದ ಜನಜೀವನಕ್ಕೆ ಸಂಬಂಧಿಸಿದ ಎಸ್.ಎನ್. ವ್ಯಾಸ ಅವರ 'India in the Ramayana age' ಎಂಬ ಗ್ರಂಥಗಳ ಪ್ರಭಾವದಿಂದ ಈ ಗ್ರಂಥ ರಚನೆಯಾಗಿದೆ ಎಂದು ಸ್ವತಃ ಮುಗಳಿ ಅವರೇ ಹೇಳಿಕೊಂಡಿದ್ದಾರೆ.

ಮಹಾಕಾವ್ಯದ ಹತ್ತೊಂಬತ್ತನೆಯ ಸರ್ಗದಲ್ಲಿ ಬರುವ ನಾಲ್ಕು ಪದ್ಯಗಳು ಕಾದಂಬರಿ ಚಿಗುರೊಡೆಯಲು ಕಾರಣವಾಗಿದೆ ಎಂದು ಮುಗಳಿ ಅವರು ಹೇಳಿಕೊಂಡಿದ್ದಾರೆ. ಕಾದಂಬರಿಯಲ್ಲೇ ಅನಾವರಣಗೊಂಡಂತೆ ಮಹಾರಾಜನಾದ ಅಗ್ನಿವರ್ಣನು ಜನಪರವಾದ ಆಡಳಿತ ನಡೆಸದೆ ಆಡಳಿತದ ಹೊಣೆಯನ್ನು ಮಹಾಮಾತ್ಯರು, ಮಂತ್ರಿಗಳಿಗೆ ನೀಡಿ, ಮನುಷ್ಯ ಜೀವನ ಇರುವುದೇ ಸುಖ ಪಡೆಯಲಿಕ್ಕೆ ಎಂದು ನಿಶ್ಚಯಿಸಿ ತನ್ನ ಯೌವ್ವನವನ್ನು ಹೆಣ್ಣಿನ ಸಂಗಕ್ಕೆ ವಶ ಮಾಡಿ ಅರಮನೆಯಲ್ಲಿ ಮೃದಂಗ ವೀಣಾವಾದನಗಳು, ಜಲಕ್ರೀಡೆಗಳು ಎಲ್ಲಾ ರೀತಿಯ ಸುಖದ ಸುಪ್ಪತ್ತಿಗೆಯಲ್ಲಿ ಮುಳುಗುವನು. ಈ ಸುಖಭೋಗದಿಂದ ಒಂದು ಕ್ಷಣವು ಬಿಟ್ಟಿರಲಾರದೆ ಅವನು ಹಗಲಿರುಳು ಅರಮನೆಯೊಳಗೆ ವಿಹರಿಸುತ್ತಾ ಸ್ತ್ರೀಲೋಲನಾಗಿ ಮೋಜುಮಸ್ತಿಯಲ್ಲಿಯೇ ಕಾಲಕಳೆಯುವಂತಹ ರಾಜನಾಗಿರುವುದು ತಿಳಿದುಬರುತ್ತದೆ.

ಪ್ರಜೆಗಳು ತಮ್ಮ ಸಮಸ್ಯೆಗಳನ್ನು ಹೊತ್ತು ಅರಮನೆಗೆ ಬಂದರೂ ಆ ಸಮಸ್ಯೆಗಳನ್ನು ಬಗೆಹರಿಸದೆ ಅವರನ್ನು ಹಾಗೇ ಹಿಂದಿರುಗಿಸುತ್ತಿದ್ದನು. ಮಂತ್ರಿಗಳ ಬಗೆಗಿರುವ ಗೌರವದಿಂದಾಗಿ ಅವರೆಲ್ಲ ಮತ್ತೆ ಬರುವುದಾಗಿ ತಿಳಿಸಿ ಹೊರಟುಹೋಗುತ್ತಿದ್ದರು. ಅಗ್ನಿವರ್ಣ ವಾರದಲ್ಲಿ ಗುರುವಾರ ಮಾತ್ರ ಗವಾಕ್ಷದಲ್ಲಿ ಕೇವಲ ತನ್ನ ಪಾದಚರಣಗಳನ್ನು ಚಾಚಿ ತನ್ನ ಪ್ರಜೆಗಳಿಗೆ ದರ್ಶನ ಕೊಡುತ್ತಿದ್ದನು. ಈ ರೀತಿಯಾಗಿ ನಡೆದುಕೊಳ್ಳುವ ಅಗ್ನಿವರ್ಣನ ವರ್ತನೆಯನ್ನು ಗಮನಿಸಿದ ತಾಯಿ ನಂದಿನಿದೇವಿಯು ಅಗ್ನಿವರ್ಣನಿಗೆ ತಮ್ಮ ಪೂರ್ವಜರ ಪರಿಚಯ ಮಾಡಿಸುತ್ತಾ, "ನಿನ್ನ ಸೂರ್ಯಕುಲದಲ್ಲಿ ಎಂತೆಂಥ ಗುಣಿಗಳು ಆಗಿಹೋಗಿದ್ದಾರೆ ಗೊತ್ತೇ? ಅವರು ರಾಜರಾಗಿ ಹುಟ್ಟಿದರೂ ರಾಜನಂತೆ, ಮನುಷ್ಯರಂತೆ ಬೆಳೆದರು. ರಾಜತ್ವ ಅವರಿಗೆ ಮುಖ್ಯವಾಗಿರಲಿಲ್ಲ. ಮನುಷ್ಯತ್ವವೇ ಅವರಿಗೆ ಮುಖ್ಯವಾಗಿತ್ತು. ಇಂಥವರಲ್ಲಿ ನಿನ್ನ ತಂದೆ ದಿಲೀಪನು ಮೇರುಪರ್ವತದಂತೆ ಎಲ್ಲವನ್ನೂ ಮೀರುವ ಶಕ್ತಿಯುಳ್ಳವನೂ, ತೇಜಸ್ಸುಳ್ಳವನೂ ಉನ್ನತಿಯುಳ್ಳವನೂ ಆಗಿದ್ದ. ಅವನಿಗೆ ಆಕಾರಕ್ಕೆ ಸರಿಯಾದ ಬುದ್ಧಿಯಿತ್ತು. ಬುದ್ಧಿಗೆ ಸರಿಯಾದ ಜ್ಞಾನವಿತ್ತು. ಜ್ಞಾನಕ್ಕೆ ಸರಿಯಾದ ಕ್ರಿಯೆಯಿತ್ತು. ಕ್ರಿಯೆಗೆ ಸರಿಯಾದ ಯಶಸ್ಸಿತ್ತು."(ಪು.೩೩೨) ಎಂದು ಅಗ್ನಿವರ್ಣನಿಗೆ ತಾಯಿ ನೀತಿಬೋಧನೆ ಮಾಡುತ್ತಾಳೆ.

ಅಗ್ನಿವರ್ಣನಿಗೆ ಆ ಮಾತುಗಳು ಸರಿಕಾಣದೆ, "ತಾಯಿ ತಪಗಿಪ ಅವೆಲ್ಲ ಹಳೆಯ ಗೊಡ್ಡುಮಾತು ನಂಬಿಕೆಯಿಲ್ಲ"(ಪು.೩೩೨) ಎನ್ನುವನು. "ಇಂದಿನ ಕಾಲದಲ್ಲಿರುವ ನಾನು ಅವರಂತೆಯೇ ಯಾಕೆ ಕೊನೆಯವರೆಗೆ ನಡೆಯಬೇಕು? ನನ್ನ ಒಲವು ನಿಲುವುಗಳನ್ನು ಬದಿಗಿರಿಸಿ ಬಾಳಬೇಕು? ನಿಮಗೆ ಸ್ಪಷ್ಟವಾಗಿ ಇಂದು ಹೇಳುತ್ತೇನೆ. ನಾನು ಈ ಭೂಮಿಯ ಮೇಲೆ ದೊರೆಯುವ ಎಲ್ಲಾ ಸುಖವನ್ನು ಎಲ್ಲ ಸಾಧನಗಳಿಂದ ಮನದಣಿ ಅನುಭವಿಸಲು ಹೊರಟಿದ್ದೇನೆ. ಹೊಸ ಒಂದು ಬದುಕಿನ ಕಾಣ್ಕೆಯನ್ನು ಕಂಡು ಅದರ ನಾಂದಿಯನ್ನು ಹಾಡಬಯಸಿದ್ದೇನೆ. ಅಂತೇ ಸಕಲೇಂದ್ರಿಯ ಸುಖ, ಅದರಲ್ಲಿಯೂ ನೃತ್ಯ, ಸಂಗೀತ ಇದೇ ಸರ್ವಸ್ವ ನನಗೆ. ಇದರ ಸವಿಯನ್ನು ಸವಿಯುತ್ತಿರುವಾಗ ಯಾರೂ ನನ್ನ ತಡೆಯಲಾರರು"(ಪು.೩೦೨) ಎಂದು ತನ್ನ ಭೋಗಜೀವನವನ್ನು ಕಳೆಯಲು ಮುಂದಾಗುವನು.

ಅಗ್ನಿವರ್ಣ ಕೇವಲ ಸಂಗೀತಮಯ ಸ್ತ್ರೀಲೋಲನಾಗಿರುವುದರಿಂದ ಅಮಾತ್ಯರು, ಮಂತ್ರಿಗಳು ರಾಜ್ಯಾಡಳಿತವನ್ನು ಭ್ರಷ್ಟತೆಯಿಂದ ದುರುಪಯೋಗಪಡಿಸಿಕೊಳ್ಳುತ್ತಾರೆ. ಈ ಸಂದರ್ಭವನ್ನು ಅರಿತು 'ಕುಶಾಗ್ರಮತಿ' ವಂಗದೇಶದವನೆಂದು ಹೇಳಿಕೊಂಡು ಅಗ್ನಿವರ್ಣನ ಅರಮನೆಗೆ ಬರುತ್ತಾನೆ. ನಾನು ಅದೆಷ್ಟೋ ದೇಶವನ್ನು ಅಲೆದಿದ್ದೇನೆ. ಅಲೆಮಾರಿತನ ನನ್ನ ಹುಟ್ಟುಗುಣವನ್ನಾಗಿಸಿಕೊಂಡಿದ್ದೇನೆ. ಕುಶಾಗ್ರನನ್ನು ಅತ್ತೆಯ ಮಗನೆಂದು ಯಾರಿಗೂ ತಿಳಿಸದ 'ಕಾಮಿನಿ'ಯು ಮಾತು ಮುಂದುವರಿಸಿ ಇವರು ಮಹಾ ಪಂಡಿತರು. ಸಾಹಿತ್ಯ, ಸಂಗೀತ, ಚಿತ್ರಕಲೆ, ಶಿಲ್ಪಕಲೆ ಎಲ್ಲದರಲ್ಲಿಯೂ ಅಭಿರುಚಿ ಉಳ್ಳವರು. ರಾಜ್ಯಾಡಳಿತದಲ್ಲಿ ಬರುವ ಜಟಿಲ ಪ್ರಶ್ನೆಗಳನ್ನು ಬಿಡಿಸಬಲ್ಲರು. ನೀವು ಆಜ್ಞೆ ಕೊಟ್ಟರೆ ರಾಜ್ಯದ ಸೂತ್ರ ವಹಿಸಿಕೊಂಡು ಸಮರ್ಥವಾಗಿ ಆಡಳಿತ ನಡೆಸಿ ತೋರಿಸಬಲ್ಲರು ಎಂದ ಕಾಮಿನಿ ಮಾತಿಗೆ ಸಂತೋಷಗೊಂಡು ಇಂಥ ಚಾಣಾಕ್ಷ ಪ್ರತಿಭಾವಂತ ವ್ಯಕ್ತಿಯಿರುವುದು ಅಪರೂಪ. ನಮಗೆ ಇಂಥ ಸ್ನೇಹಿತರ ನೆರವು ಬೇಕೆಂದು ರಾಜ್ಯದಲ್ಲಿ ಪ್ರಮುಖ ಹುದ್ದೆಯನ್ನು ನೀಡಿ ಅರಮನೆಯಲ್ಲಿಯೇ ಇಟ್ಟುಕೊಳ್ಳುವನು. ದಿನಂಪ್ರತಿ ಕುಶಾಗ್ರನು ಅರಮನೆಯ ಹೊರಗೆ ಒಳಗೆ ತನ್ನ ಬುದ್ಧಿವಂತಿಕೆಯಿಂದ ಮೆಚ್ಚುಗೆಯನ್ನು ಗಳಿಸುವನು. ಆದರೆ ಅಗ್ನಿವರ್ಣನಿಗೆ ರಾಜ್ಯದ ಪರಿವೆ ಇಲ್ಲದೆ ಕಾಮ, ಅಂಧಕಾರದಲ್ಲಿಯೇ ಮುಳುಗಿರುವನು. ಇಂಥ ಅರಸನನ್ನು ಮನುಷ್ಯತ್ವದೆಡೆಗೆ ತರುವುದು ಹೇಗೆ? ಎಂಬುದನ್ನು ನಿಶ್ಚಯಿಸಿ ರಾಮಾಯಣದ ಕತೆಯನ್ನು ಹೇಳುವ ಮೂಲಕ ಕಾಮ ಎಂಬುದು ದೊಡ್ಡವರಿಗೂ ಕೂಡ ಬಿಟ್ಟಿರುವುದಿಲ್ಲ ಎಂಬ ನಿದರ್ಶನಕ್ಕೆ ರಾಮಾಯಣದ ಕತೆಯಲ್ಲಿ ಬರುವ 'ಲಕ್ಷ್ಮಣನು ನನ್ನ ಮೇಲಿನ ಅತಿಯಾಸೆಯಿಂದ ಹೋಗಲೊಲ್ಲ' ಎಂದು ಆರೋಪಿಸಿದ ಸೀತೆ ಮಾತನ್ನು ಆ ಸಂದರ್ಭಕ್ಕೆ ದೃಷ್ಟಾಂತ ನೀಡುವ ಮೂಲಕ ರಾಜನ ಬುದ್ಧಿಯನ್ನು ತಿದ್ದಲಾಗುತ್ತದೆ. ಮುಗಳಿ ಅವರು(ರಾವಣನು ಸೀತೆಯನ್ನು ಅಪಹರಿಸುವ ವೃತ್ತಾಂತ ತಿಳಿಸಿದ್ದರೆ ಇನ್ನೂ ಹೆಚ್ಚು ಸಮಂಜಸವಾಗುತ್ತಿತ್ತು.) ಕಾದಂಬರಿಯಲ್ಲಿ ಬರುವ ನಿರ್ಮಲೆ ಪಾತ್ರವು ವೇಶ್ಯೆ ಅಲ್ಲದಿದ್ದರೂ ಸಮಾಜ ಅವಳನ್ನು ದೂಷಿಸಿ ಅವಳಿಗೆ ವೇಶ್ಯೆ ಪಟ್ಟ ಕಟ್ಟುತ್ತದೆ. ಊರಿನ ಜನರು ಅವರ ಮನೆಯವರಿಗೆ ಬಹಿಷ್ಕಾರ ಹಾಕುತ್ತಾರೆ. ಇದು ಸತ್ಯ ಎಂದು ನಂಬಿದ ಗಂಡ 'ಧವಳ'ನು ಅವಳ ನೆನಪಿನಲ್ಲಿಯೇ ಹುಚ್ಚನಾಗುವನು ಈ ರೀತಿಯಾಗಿ ಕಾದಂಬರಿಯಲ್ಲಿ ಉಪಕತೆಯಾಗಿ ಬರುತ್ತದೆ.

ಇತ್ತ ಅನಾರೋಗ್ಯದಿಂದ ಬಳಲುತ್ತಿರುವ ರಾಜ ಅಗ್ನಿವರ್ಣನ ರಾಜ್ಯಕ್ಕೆ ಮಗಧ ರಾಜ್ಯದ ಸೈನಿಕರು ದಂಡೆತ್ತಿ ಬಂದು ಯುದ್ಧ ಮಾಡುತ್ತಾರೆ. ಯುದ್ಧದಲ್ಲಿ ಅಗ್ನಿವರ್ಣನ ಸೈನಿಕರು ವೀರಾವೇಷದಿಂದ ಹೋರಾಡಿ ಮಗಧ ರಾಜ್ಯದ ಸೈನ್ಯವನ್ನು ಹಿಮ್ಮೆಟ್ಟಿಸುತ್ತಾರೆ. ಗೆದ್ದ ಸೈನಿಕರು ಸಂಭ್ರಮ ಆಚರಿಸಿಕೊಳ್ಳುತ್ತಾರೆ. ಇತ್ತ ಕಾಮಿನಿಯನ್ನು ಮೊದಲಿನಿಂದಲೂ ಪ್ರೀತಿಸುತ್ತಿದ್ದ ಅತ್ತೆಯ ಮಗನೆಂದು ಹೇಳಿಕೊಂಡ ಕುಶಾಗ್ರನು ಕಾಮಿನಿಯನ್ನು ತನ್ನವಳನ್ನಾಗಿ ಮಾಡಿಕೊಳ್ಳಲು ಹೋಗಿ ವಿಫಲನಾಗುತ್ತಾನೆ. ಜರ್ಜರಿತಗೊಂಡ ಕಾಮಿನಿ ಸಾವಿನಲ್ಲಿ ಅಂತ್ಯವಾಗುತ್ತಾಳೆ. ಈ ದೃಶ್ಯವನ್ನು ಕ್ಷಯರೋಗದಿಂದ ಬಳಲುತ್ತಿರುವ ಅಗ್ನಿವರ್ಣ ನೋಡಿ ಮತ್ತಷ್ಟು ಹತಾಶನಾಗುತ್ತಾನೆ. ಕುಶಾಗ್ರನನ್ನು ಹಿಡಿದು, ಬಂಧಿಸಿ ಶಿಕ್ಷಿಸುತ್ತಾರೆ. ಕಾದಂಬರಿಯ ಪ್ರಧಾನ ಪಾತ್ರ, ನಾಯಕ ಅಗ್ನಿವರ್ಣ ಮೃತನಾಗುತ್ತಾನೆ.

ಕೊನೆಯಲ್ಲಿ ಮಹಾಮಾತ್ಯರು, ಮಂತ್ರಿಗಳು ಸಮಾಲೋಚನೆ ಮಾಡಿ ತಾಯಿ ನಂದಿನಿದೇವಿಯ ಒಪ್ಪಿಗೆ ಪಡೆದು ಎಲ್ಲರ ಸಮ್ಮುಖದಲ್ಲಿಯೇ ಗರ್ಭಿಣಿಯಾದ 'ಧಾರಿಣಿದೇವಿ'ಗೆ ಪಟ್ಟ ಕಟ್ಟುತ್ತಾರೆ. ಇಲ್ಲಿಗೆ ಕಾದಂಬರಿ ಕೊನೆಗೊಳ್ಳುತ್ತದೆ.

ಶತಮಾನಗಳ ಹಿಂದಿನ ತಲೆಮಾರಿನ ರಾಜನೊಬ್ಬನ ಕಥಾವಸ್ತುವನ್ನುಳ್ಳ ಈ ಕಾದಂಬರಿಯು ಇಂದಿನ ಕಾಲಕ್ಕೂ ಪ್ರಸ್ತುತ ಎಂದೆನಿಸುತ್ತದೆ. ಅಗ್ನಿವರ್ಣ ಅರಮನೆಯಲ್ಲಿ ಮೃದಂಗ, ವೀಣಾವಾದನಗಳು ತುಂಬಿರಲು ಕಾಮಿನಿಯರ ಸಹವಾಸದಲ್ಲಿ ಒಂದಕ್ಕಿಂತ ಹೆಚ್ಚು ಎನ್ನುವಂತೆ ಅವನು ಎಲ್ಲಾ ತರಹದ ಸುಖದ ಸುಪ್ಪತ್ತಿಗೆಯಲ್ಲಿ ಮುಳುಗಿರುತ್ತಿದ್ದನು. ಅಗ್ನಿವರ್ಣ ತನ್ನ ಹಿಂದಿನ ಎಲ್ಲಾ ರಾಜರಿಗಿಂತ ಬೇರೆಯಾಗಿ, ಭಿನ್ನವಾಗಿ ಕಂಡುಬರುವನು.

"ಈ ಕಾದಂಬರಿ ಪೌರಾಣಿಕವೆಂಬಂತೆ ಕಂಡರೂ ವಾಸ್ತವವಾಗಿ ಅದು ಎಲ್ಲಾ ಕಾಲದ ಅವನತಿಶೀಲ ಸಮಾಜಗಳ ಚಿತ್ರಣವಾಗಿದೆ. ಇದು ನಮ್ಮ ಕಾಲದ ಬದುಕಿಗೆ ಸಮಕಾಲೀನ ಮನುಷ್ಯನ ಭಾವನಾತ್ಮಕ ತಲ್ಲಣಗಳಿಗೆ ಒಡ್ಡಿದ ರೂಪವಾಗಿ ಯಶಸ್ವಿಯಾಗಿದೆ. ಆಧುನಿಕ ಭಾರತದ ಹತ್ತು ಹಲವು ಜ್ವಲಂತ ಸಮಸ್ಯೆಗಳನ್ನು ಚರ್ಚಿಸುವುದು ಮತ್ತು ಅವಕ್ಕೆ ಸಾಧುವಾದ ಪರಿಣಾಮಗಳನ್ನು ಸೂಚಿಸುವುದು ಮುಗಳಿ ಅವರ ಪ್ರಧಾನ ಆಸಕ್ತಿಯೆಂದು ತೋರುತ್ತದೆ. ಹಿಂಸೆ-ಪ್ರತಿಹಿಂಸೆ, ಸಂಪ್ರದಾಯ ಶರಣತೆ- ಸುಧಾರಣಶೀಲತೆ, ಗಂಡುಹೆಣ್ಣು ಸಂಬಂಧಗಳ ಸೂಕ್ಷ್ಮಗಳು, ರಾಜಪ್ರಭುತ್ವ ಮತ್ತು ಅದರ ಪರ್ಯಾಯಗಳು, ಹಿರಿಯರು ಹಾಗೂ ಕಿರಿಯರ ನಡುವೆ ಹುಟ್ಟಿಕೊಳ್ಳುವ ಬಿರುಕುಗಳು, ಕಾರಣಮೀಮಾಂಸೆ ಮುಂತಾದ ಹತ್ತು ಹಲವು ಸಂಗತಿಗಳು ಇಲ್ಲಿ ಹಾದುಹೋಗುತ್ತವೆ"[೧೮] ಎಂಬ ಎಚ್.ಎಸ್.ರಾಘವೇಂದ್ರರಾವ್ ಅವರ ಅಭಿಪ್ರಾಯವು ಸಮಂಜಸವೆನಿಸುತ್ತದೆ. ಜೊತೆಗೆ ಅಗ್ನಿವರ್ಣ ಕಾದಂಬರಿಯಲ್ಲಿ ಬರುವ ಪ್ರಧಾನ ಪಾತ್ರವಾದ ಅಗ್ನಿವರ್ಣನು ಒಬ್ಬ ರಾಜನಾಗಿ ನಾನು ಯಾರು? ನನ್ನ ಕರ್ತವ್ಯವೇನು? ಎಂದು ಪ್ರಶ್ನಿಸಿಕೊಳ್ಳದೇ ಇರುವಂತಹ ಸೋಂಬೇರಿ ರಾಜನ ಪಾತ್ರವಾಗಿದೆ. ಏಕೆಂದರೆ ಜನರ ಕಲ್ಯಾಣ, ಜನರ ಶ್ರೇಯೋಭಿವೃದ್ಧಿಗಾಗಿ ಶ್ರಮಿಸುವುದನ್ನು ಬಿಟ್ಟು ಮನುಷ್ಯನಾಗಿರುವುದೇ ಸುಖಪಡಲೆಂದು ತಿಳಿದು ಬರೀ ಹೆಣ್ಣಿನ ದಾಸ್ಯದಲ್ಲಿಯೇ ಕಾಲ ಕಳೆಯುವ ಕಾಮಾಂಧನಾಗಿ ಯಾರ ಮಾತನ್ನು ಕೇಳದೇ ರೋಗಿಷ್ಟನಾಗಿ ಸಾಯುವಂತಹ ದಾರುಣ ಚಿತ್ರಣವನ್ನು ಕಾದಂಬರಿಯು ಒಳಗೊಂಡಿದೆ.

ಮುಗಳಿ ಅವರು ರಚಿಸಿರುವ ನಾಲ್ಕು ಕಾದಂಬರಿಗಳಿಗೆ ಅನ್ವಯವಾಗುವಂತೆ ಪರಿಶೀಲಿಸಿದೆ. ಪ್ರತಿಯೊಬ್ಬ ಕಾದಂಬರಿಕಾರನು ತನ್ನ ಕಾಲದ ಪ್ರಕಾರದ ಚೌಕಟ್ಟಿಗೆ ಹೊಂದಿಕೊಂಡು ಕಾದಂಬರಿ ರಚಿಸುತ್ತಾನೆ. ಅವರ ಪ್ರತಿಭೆ ಮಿತಿಗಳು, ಸಾಧ್ಯತೆಗಳೊಂದಿಗೆ ಬರವಣಿಗೆ ಕ್ರಮ ಮೂಡಿಬರುತ್ತದೆ. ಈ ಮಾದರಿಯಲ್ಲಿ ಮುಗಳಿ ಅವರ ಕಾದಂಬರಿಗಳು ವ್ಯಕ್ತಿ, ಸಮಾಜ ಮತ್ತು ಜೀವನಗಳ ಸ್ಥೂಲ ಹಿನ್ನೆಲೆಯಲ್ಲಿ ಬದುಕಿನ ಸಾರ್ಥಕತೆಯನ್ನು ಪಡೆದುಕೊಳ್ಳುವ ನಿಟ್ಟಿನಲ್ಲಿ ಸಾಗುತ್ತವೆ. 'ಬಾಳುರಿ' ಕಾದಂಬರಿಯಲ್ಲಿ ನಿರುದ್ಯೋಗ, ಬಡತನದ ಸಮಸ್ಯೆಗಳು ಕಂಡುಬಂದರೆ, 'ಕಾರಣಪುರುಷ'

ಕಾದಂಬರಿಯಲ್ಲಿ ಕನ್ನಡಪರ ಕಾಳಜಿ, ಕನ್ನಡಾಭಿಮಾನ ಎದ್ದುಕಾಣುತ್ತದೆ. 'ಅನ್ನ'ದಲ್ಲಿ ನೆರೆಹಾವಳಿ, ಬರಗಾಲದ ಚಿತ್ರಣಗಳು, ಅದೇ ರೀತಿಯಾಗಿ 'ಅಗ್ನಿವರ್ಣ'ದಲ್ಲಿ ಹಿಂಸೆಯ ವಿರುದ್ಧವಾಗಿ ಹೆಣೆದ ಚೌಕಟ್ಟಿನೊಳಗಡೆ ಆದರ್ಶವಾದ ಅಂಶಗಳನ್ನು ಅಪ್ಪಿಕೊಂಡು ಕಾದಂಬರಿಗಳು ವಿಸ್ತೃತಗೊಂಡಿವೆ.

ಇವರ ಮೂರು ಕಾದಂಬರಿಗಳು ಉತ್ತರ ಕರ್ನಾಟಕದ ಕೆಳಮಧ್ಯಮ ವರ್ಗದ ಬ್ರಾಹ್ಮಣ ಕುಟುಂಬಗಳ ಜೀವನ ವೃತ್ತಾಂತವನ್ನು ಕೇಂದ್ರವಾಗಿರಿಸಿಕೊಂಡರೆ, ಬಡತನವೆಂಬುದು ಮೇಲ್ಜಾತಿಯೆಂದು ಕರೆಸಿಕೊಂಡ ಬ್ರಾಹ್ಮಣ ಮನೆತನದಲ್ಲಿಯೂ ತಪ್ಪಿದ್ದಲ್ಲವೆಂಬಂತೆ ಕಾದಂಬರಿಗಳಲ್ಲಿ ಕಂಡುಬರುತ್ತದೆ. ಅದರಲ್ಲೂ ನಿರುದ್ಯೋಗದಂತಹ ಸಮಸ್ಯೆಗಳನ್ನು ಹೆಚ್ಚು ನಿದರ್ಶನ ನೀಡುತ್ತ 'ಅನ್ನ' ಕಾದಂಬರಿಯ ನಾಯಕನಾದ ಅಮೃತನು ತನ್ನ ಎಂ.ಬಿ.ಬಿ.ಎಸ್. ವಿದ್ಯಾಭ್ಯಾಸವನ್ನು ತೊರೆದು ಪಶ್ಚಿಮ ಬಂಗಾಳದಂತಹ ನೆರೆಹಾವಳಿ, ಕ್ಷಾಮಪೀಡಿತ ಪ್ರದೇಶಕ್ಕೆ ಸೇವೆಗೈಯ್ಯಲು ತೆರಳುತ್ತಾನೆ. ಬರಗಾಲದ ಅನುಭವವನ್ನು ವಸ್ತುವಾಗಿ ಹೊಂದಿರುವ ಕನ್ನಡದ ಅಪರೂಪದ ಕಾದಂಬರಿಗಳಲ್ಲಿ 'ಅನ್ನ' ಮುಖ್ಯವಾದದ್ದೆಂದು ಎಚ್.ಎಸ್ ರಾಘವೇಂದ್ರರಾವ್ ಅವರು ಅಭಿಪ್ರಾಯಪಡುತ್ತಾರೆ. ಕಾದಂಬರಿಯಲ್ಲಿ ಬರಗಾಲದಲ್ಲಿ ನಡೆಯುವಂತಹ ಕಾಮಗಾರಿಗಳಲ್ಲಿ ನಡೆಯುವ ಮೋಸಗಾರಿಕೆ, ವಂಚನೆ, ಕಾಳಸಂತೆಯ ದುರ್ವ್ಯವಹಾರ ಮುಂತಾದ ವಿವರಗಳು ಕಂಡುಬರುತ್ತವೆ.

'ಅಗ್ನಿವರ್ಣ' ಕಾದಂಬರಿಯು ಪೌರಾಣಿಕವೆಂಬಂತೆ ಕಂಡುಬಂದರೂ ವಾಸ್ತವವಾಗಿ ಎಲ್ಲ ಕಾಲದ ಅವನತಿಶೀಲ ಸಮಾಜಗಳ ಚಿತ್ರಣವಾಗಿದೆ. ಇದು ನಮ್ಮ ಕಾಲದ ಬದುಕಿಗೆ, ಸಮಕಾಲೀನ ಮನುಷ್ಯನ ಭಾವನಾತ್ಮಕ ತಲ್ಲಣಗಳಿಗೆ ಒಡ್ಡಿದ ರೂಪಕವಾಗಿ ಯಶಸ್ವಿಗೊಂಡಿದೆ. ಆಧುನಿಕ ಭಾರತದ ಹತ್ತು ಹಲವು ಜ್ವಲಂತ ಸಮಸ್ಯೆಗಳನ್ನು ಚರ್ಚಿಸುವುದು ಅವಕ್ಕೆ ಹತ್ತಿರವಾದ ಪರಿಹಾರಗಳನ್ನು ಕಂಡುಕೊಳ್ಳುವ ಮೂಲಕ ಮುಗಳಿ ಅವರು ಆಸಕ್ತಿ ವಹಿಸುತ್ತಾರೆ. ಹಿಂಸೆ, ಪ್ರತಿಹಿಂಸೆ, ಸಂಪ್ರದಾಯಶರಣತೆ, ಸುಧಾರಣಾಶೀಲತೆ, ಗಂಡುಹೆಣ್ಣುಗಳ ನಡುವಿನ ಸೂಕ್ಷ್ಮಗಳು, ರಾಜಪ್ರಭುತ್ವ ಮತ್ತು ಹಿರಿಯರು ಕಿರಿಯರ ನಡುವೆ ಉಂಟಾಗುವಂತಹ ಕಂದಾಚಾರಗಳು ಇತ್ಯಾದಿ ಸಂಗತಿಗಳು ಕಾದಂಬರಿಗಳಲ್ಲಿ ಹಾದುಹೋಗುತ್ತವೆ.

ಮುಗಳಿ ಅವರ ವಿಚಾರಧಾರೆಗಳು ವ್ಯಕ್ತಿ ಮತ್ತು ಸಮುದಾಯ ಎರಡಕ್ಕೂ ಅನ್ವಯವಾಗುವಂತವುಗಳಾಗಿವೆ. ಹಲವಾರು ಪ್ರಗತಿಪರವಾದ ಚಿಂತನೆಗಳನ್ನು ಒಪ್ಪಿಕೊಳ್ಳುವ ಹಾಗೂ ವ್ಯಾಪಾರಿವರ್ಗದವರನ್ನು, ಅಧಿಕಾರಿವರ್ಗದವರನ್ನು ಟೀಕಿಸದೆ ಬಿಟ್ಟವರಲ್ಲ. ಮುಗಳಿ ಅವರ ಕಾದಂಬರಿಗಳನ್ನು ಬೇರೊಂದು ದಿಕ್ಕಿನಿಂದ ನೋಡುವುದಾದರೆ, ಮುಗಳಿ ಅವರ ಸಮಸ್ಯೆಯು ವಾಸ್ತವವಾದಿ ತಳಹದಿಗೆ ಹೆಚ್ಚು ಒತ್ತು ನೀಡಿರುವಂತದ್ದು. ಇವರ ಕಥಾಸಾಹಿತ್ಯವು ಬಹುಮಟ್ಟಿಗೆ ಅವರ ಬಾಲ್ಯ ಮತ್ತು ತಾರುಣ್ಯಗಳ ಸೀಮೆಯನ್ನು ದಾಟಿ ಹೋಗುವುದು ಕಡಿಮೆ ಎಂದೇ ಹೇಳಬೇಕು. ಕಾದಂಬರಿಗಳಲ್ಲಿ ಬರುವ ಬಹುತೇಕ ಪಾತ್ರಗಳು ಉತ್ತಮ ಬದುಕನ್ನು ಕಟ್ಟಿಕೊಳ್ಳುವ ಶ್ರಮಿಕ ಚಿತ್ರಣ ಕಂಡುಬರುತ್ತದೆ. ಆದರೆ ಪ್ರಧಾನ ಪಾತ್ರಗಳು ಯಶಸ್ವೀ ಹಂತವನ್ನು ತಲುಪುವುದು

ವಿರಳ ಎನ್ನಬಹುದು. ವಾಸ್ತವವಾದಿ ತಳಹದಿಯ ಮೇಲೆ ಬರವಣಿಗೆ ಮಾಡಿದ ಮುಗಳಿ ಅವರ ಬರವಣಿಗೆಗಳಲ್ಲಿ ಕನಸುಗಾರಿಕೆ ಮತ್ತು ಆದರ್ಶವನ್ನು ಎತ್ತಿಹಿಡಿಯಲು ಹೋಗಿ ಭಾವುಕ ಮನಸ್ಥಿತಿಗೆ ಹೆಚ್ಚು ಪ್ರಾಧಾನ್ಯ ನೀಡಿದಂತಾಗಿದೆ. ಕೆಲವು ಕಡೆ ಭಾಷೆಯೂ ಕೂಡ ಕಣ್ಣೀರಿನಲ್ಲಿ ಮುಳುಗಿ ತೇಲುತ್ತದೆ. ಉದಾಹರಣೆಗೆ ಮೂರು ಕಾದಂಬರಿಗಳಲ್ಲಿ ಬರುವ ಪ್ರಧಾನ ಪಾತ್ರಗಳಾದ ಜಗ್ಗಣ್ಣ, ವಾಮಣ್ಣ ಮತ್ತು ಅಮೃತರ ಜೀವನದಲ್ಲಿ ಅಳುಮುಂಜಿತನ ಹೆಚ್ಚಾಗಿ ಕಾಣಿಸುತ್ತದೆ. ಇದಕ್ಕೆ ವಿರುದ್ಧವಾಗಿ ಸಂಪ್ರದಾಯದ ಕಟ್ಟು ಕಳಚುವ ನಿಟ್ಟಿನಲ್ಲಿ 'ಅಗ್ನಿವರ್ಣ' ಕಂಡುಬರುತ್ತದೆ. ಕೊನೆಯಲ್ಲಿ ನ್ಯಾಯಯುತವಾದ ಸುಖಜೀವನ ಅಸಾಧ್ಯವೇ ಎಂಬಂತೆ ಪ್ರಶ್ನಿಸುವ, ವಿಮರ್ಶಿಸುವ ಮಾದರಿಗೆ ತಲುಪುತ್ತದೆ. ಒಟ್ಟಿನಲ್ಲಿ ಮುಗಳಿ ಅವರ ಕಾದಂಬರಿಗಳು ಅಂದಿನ ದಿನಮಾನದ ಸಾಮಾಜಿಕ, ಸಾಂಸ್ಕೃತಿಕ ಆಯಾಮುಗಳನ್ನು ವಾಸ್ತವವಾದ, ಆದರ್ಶವಾದದ ತಳಹದಿಯ ಮೇಲೆ ಅನಾವರಣಗೊಂಡಂತವುಗಳಾಗಿವೆ. ಮುಗಳಿ ಅವರ ಕಾದಂಬರಿಗಳಲ್ಲಿ ಪಾತ್ರಚಿತ್ರಣ, ಸಾಂದರ್ಭಿಕ ಕಾಳಜಿಗಳು ಗಂಭೀರವಾಗಿ ಶೋಧಿಸುವ ಗುಣ, ಮತ್ತೆ ಮತ್ತೆ ವಿಮರ್ಶೆಗೊಳ್ಳುವ ಮನೋಧರ್ಮದಲ್ಲಿ ಹಿನ್ನಡೆಯಾಗಿದೆ ಎಂದೆನಿಸುತ್ತದೆ.

೩.೪. ನಾಟಕ

ಆಧುನಿಕ ಕನ್ನಡ ಸಾಹಿತ್ಯದ ಬೆಳವಣಿಗೆಯಲ್ಲಿ ನಾಟಕ ಪ್ರಕಾರವೂ ಸಹ ಗಮನಾರ್ಹವಾಗಿದೆ. ಕನ್ನಡ ರಂಗಭೂಮಿ ಈ ದಿಕ್ಕಿನಲ್ಲಿ ಬದಲಾವಣೆಯನ್ನು ಕಾಣುತ್ತಲೇ ಬಂದಿದೆ. ಇಪ್ಪತ್ತನೇ ಶತಮಾನದ ನಾಟಕಗಳಲ್ಲಿ ಪುರಾಣ, ಪುಣ್ಯಕತೆಗಳೇ ವಸ್ತುವಾಗಿರುತ್ತಿದ್ದವು. ಆದರೆ ಅನಂತರದ ಕಾಲದಲ್ಲಿ ಸಾಮಾಜಿಕ ನಾಟಕಗಳ ಪರಂಪರೆ ಹುಟ್ಟಿಕೊಂಡಿತು. ನಾಟಕ ಕ್ಷೇತ್ರದಲ್ಲಿ ಸಾಮಾಜಿಕತೆಯನ್ನು ವಸ್ತುವಾಗಿ ತಂದವರಲ್ಲಿ ಕೈಲಾಸಂ, ಶ್ರೀರಂಗರ ಹೆಸರುಗಳು ಪ್ರಮುಖವಾಗಿದ್ದರೂ ಇವರಿಗೂ ಮುನ್ನ ಸಾಮಾಜಿಕ ನಾಟಕಗಳನ್ನು ಬೆಳಕಿಗೆ ತಂದಿರುವುದು ಗಮನಿಸಬೇಕಾದ ಅಂಶ. ಕರ್ಕಿ ವೆಂಕಟರಮಣ ಶಾಸ್ತ್ರಿಗಳ 'ಇಗ್ಗಪ್ಪ ಹೆಗ್ಗಡೆಯ ವಿವಾಹ ಪ್ರಹಸನ' ನಾಟಕವನ್ನು ಕನ್ನಡದ ಮೊದಲ ಸಾಮಾಜಿಕ ನಾಟಕವೆಂದು ಗುರುತಿಸಲಾಗಿದೆ. ಸಾಮಾಜಿಕ ಸಮಸ್ಯೆಗಳನ್ನು ಕುರಿತ ನಾಟಕಗಳು ರಚನೆಗೊಳ್ಳಲು ಆರಂಭವಾದುದರಿಂದ ಕನ್ನಡ ರಂಗಭೂಮಿಗೆ ಹೊಸ ಹೊಸ ನಾಟಕಗಳ ಪ್ರವೇಶವಾಯಿತು. ಈ ನಾಟಕಗಳಲ್ಲಿ ಸಾಹಿತ್ಯ, ಸಂಗೀತ, ವೇಷಭೂಷಣ, ನೃತ್ಯ, ಅಭಿನಯ ಮನರಂಜನೆಯ ವಸ್ತುವಾಗಿದ್ದವು. ಪ್ರೇಮ, ಕಾಮ, ವಾತ್ಸಲ್ಯ, ವಿಡಂಬನೆ, ಸಿಟ್ಟು, ಆಕ್ರೋಶ ಇವೆಲ್ಲವೂ ನಾಟಕದ ಕಥಾಹಂದರದಲ್ಲಿ ಸಮ್ಮಿಳಿತಗೊಂಡಿರುತ್ತಿದ್ದವು. ಇಂಥ ನಾಟಕಗಳು ಎಲ್ಲರ ಪ್ರೀತಿಪಾತ್ರವಾಗುತ್ತಿದ್ದವು.

ನಾಟಕದ ವಸ್ತು, ತಂತ್ರ, ಶೈಲಿ, ಪರಿಸರ, ರಂಗಸಜ್ಜಿಕೆ, ತಾಲೀಮುಗಳ ಬಗ್ಗೆ ತುಂಬಾ ಜವಾಬ್ದಾರಿಯುತ ಕೃತಿಗಳನ್ನು ರಚಿಸಿದವರಾದ ಕೈಲಾಸಂ, ಶ್ರೀರಂಗ, ಕುವೆಂಪು, ಪುತಿನ, ಬೇಂದ್ರೆ, ಶಿವರಾಮ ಕಾರಂತ, ಮಾಸ್ತಿ, ಅ.ನ.ಕೃ., ರಂ.ಶ್ರೀ.ಮುಗಳಿ, ಬಿ.ಎಂ.ಶ್ರೀ., ಗೋವಿಂದ ಪೈ ಮೊದಲಾದವರನ್ನು ಗುರುತಿಸಬಹುದಾಗಿದೆ. ಅದೇ ರೀತಿಯಾಗಿ 'ಕನ್ನಡ ನಾಟಕ ಪರಂಪರೆಗೆ

ಮೂಲ ಕಾರಣಕರ್ತರು 'ಕೈಲಾಸಂ' ಎಂಬುದರಲ್ಲಿ ಯಾವ ಅನುಮಾನವೂ ಇಲ್ಲ. ಕೈಲಾಸಂ, ಶ್ರೀರಂಗ, ರಂ.ಶ್ರೀ.ಮುಗಳಿ ಅವರು ವಾಸ್ತವಿಕತೆ-ಸಾಮಾಜಿಕತೆಗಳನ್ನು ನಾಟಕದಲ್ಲಿ ನೆಲೆಗೊಳಿಸಿದವರಾಗಿದ್ದಾರೆ. ಕೈಲಾಸಂ ಸ್ವಲ್ಪ ಭಾವನಿಷ್ಠರಾಗಿದ್ದರೆ, ಶ್ರೀರಂಗರು ಬುದ್ಧಿನಿಷ್ಠರೆಂದ ಹೇಳಬೇಕು. ಅದೇ ರೀತಿಯಾಗಿ ಸಮಕಾಲೀನ ನಾಟಕಕಾರರಲ್ಲಿ ಗಿರೀಶ್ ಕಾರ್ನಾಡ್, ಲಂಕೇಶ್ ಮತ್ತು ಚಂದ್ರಶೇಖರ ಕಂಬಾರ, ಎಚ್.ಎಸ್.ಶಿವಪ್ರಕಾಶರಾದಿಯಾಗಿ ಪುರಾಣ ಇತಿಹಾಸಗಳ ವಸ್ತುವಿನ ಮೂಲಕ ಆಧುನಿಕ ಸಂವೇದನೆಗೆ ಅಭಿವ್ಯಕ್ತಿ ನೀಡುವುದು ಕಾರ್ನಾಡರ ಮುಖ್ಯ ಲಕ್ಷಣ. ಸಾಮಾಜಿಕ ಜೀವನದ ಕೊಳಕುತನ ಮತ್ತು ಮೌಲ್ಯಗಳ ಅವನತಿಯನ್ನು ಖಂಡಿಸುವುದು ಲಂಕೇಶರ ನಾಟಕಗಳ ವೈಶಿಷ್ಟ್ಯ. ಕಂಬಾರರಲ್ಲಿ ಜಾನಪದ ರಂಗಭೂಮಿ ಅಂಶಗಳನ್ನು ಆಧುನಿಕ ದೃಷ್ಟಿಯೊಂದಿಗೆ ಬೆಸೆಯುವ ಪ್ರಯತ್ನಗಳು ನಡೆದಿವೆ ಎಂಬುದು ತಿಳಿದುಬರುತ್ತದೆ. ಅಧ್ಯಯನದ ದೃಷ್ಟಿಯಿಂದ ನಾಟಕಗಳನ್ನು ಏಳು ಪ್ರಕಾರಗಳಲ್ಲಿ ಗುರುತಿಸಲಾಗಿದೆ. ೧. ಸಾಮಾಜಿಕ ನಾಟಕಗಳು, ೨. ಕೌಟುಂಬಿಕ ನಾಟಕಗಳು, ೩. ರಾಜಕೀಯ ನಾಟಕಗಳು, ೪. ಪತ್ತೇದಾರಿ ನಾಟಕಗಳು, ೫. ಐತಿಹಾಸಿಕ ನಾಟಕಗಳು, ೬. ಪೌರಾಣಿಕ ನಾಟಕಗಳು, ೭. ಏಕಾಂಕ ನಾಟಕಗಳು. ಮುಗಳಿ ಅವರು ಒಟ್ಟು ಹನ್ನೆರಡು ನಾಟಕಗಳನ್ನು ರಚಿಸಿದ್ದಾರೆ. ಇವು ಸಾಮಾಜಿಕ, ಐತಿಹಾಸಿಕ, ಧಾರ್ಮಿಕ, ಕೌಟುಂಬಿಕ ವಸ್ತುಗಳನ್ನೊಳಗೊಂಡ ನಾಟಕವಾಗಿವೆ. ಅಂಥ ನಾಟಕ ಕೃತಿಗಳನ್ನು ಈ ಭಾಗದಲ್ಲಿ ವಿವರಿಸಿ ವಿಶ್ಲೇಷಣೆಗೆ ಒಳಪಡಿಸಲಾಗಿದೆ.

'ಪಾವನಪಾವಕ' ಮುಗಳಿ ಅವರ ಹೊಸಪ್ರಯೋಗಕ್ಕೆ ಒಳಪಟ್ಟ ನಾಟಕ ಸಂಕಲನವಾಗಿದೆ. ಕನಸಿನಲ್ಲಿ ಕಂಡ ವಿಷಯ ವಸ್ತುವನ್ನಿಟ್ಟುಕೊಂಡು ಏಕಾಂಕ ಕಿರು ನಾಟಕಗಳನ್ನು ರಚಿಸಿದ್ದಾರೆ. ಅಂತಹವುಗಳಲ್ಲಿ ಪಾವನ ಪಾವಕ, ಪ್ರತಿರೂಪ, ವಿಶ್ವಪುರುಷ, ಮಹಾಜನತುಲೆ ರಚಿಸಿದ್ದಾರೆ. ಹಾಗೆ ಈ ಕೃತಿಯಲ್ಲಿಯೇ 'ಜಡಭರತ' ರಚಿಸಿರುವ 'ಕನಸುಗಳು', ದ.ರಾ.ಬೇಂದ್ರೆ ಅವರ 'ಸ್ವಪ್ನ ವಿಜ್ಞಾನ' ಎಂಬ ಶೀರ್ಷಿಕೆಯಡಿಯಲ್ಲಿ ಕನಸಿನ ಬಗ್ಗೆ ರಚನೆಗೊಂಡ ಲೇಖನಗಳನ್ನು ಸಂಗ್ರಹಿಸಿದ್ದಾರೆ. ಮುಗಳಿ ಅವರು ಸಾಹಿತ್ಯದ ಎಲ್ಲಾ ಪ್ರಕಾರಗಳಲ್ಲಿ ಸಾಹಿತ್ಯ ರಚನೆ ಮಾಡಿದ್ದಾರೆ. ಹಾಗೆಯೇ ವಿವಿಧ ಪ್ರಯೋಗಗಳ ಮೂಲಕ ತಮ್ಮನ್ನು ಒಗ್ಗಿಸಿಕೊಂಡಿರುವುದು ಅವರ ಸಾಹಿತ್ಯ ಕೃತಿಗಳಿಂದ ನಮಗೆ ತಿಳಿದುಬರುತ್ತದೆ. ಅಂತಹ ಪ್ರಯೋಗಗಳಲ್ಲೊಂದಾದ ಕನಸಿನಲ್ಲಿ ಹುಟ್ಟುವ ವಿವಿಧ ರೀತಿಯ ಕಥಾಂಶವನ್ನು ಈ ಕೃತಿಯಿಂದ ಕಂಡುಕೊಳ್ಳಲಾಗಿದೆ. ಇದರ ಆಯ್ದ ಭಾಗವನ್ನು ಗಮನಿಸುವುದಾದರೆ,

"ಮೇಘವಾಣಿ: ಕನಸಿಗನೆ ತರಲೇಳು ಜೀವನದ ಪಾವಕವ!

ಮನದ ಕನವರಿಕೆಯಲಿ ಇನಿದಾಗುವುದನು ಕಾಣೆ.

ತಂದೆ: ಕತ್ತಲೆಯ ಮುನ್ನೋಡಿ ಎತ್ತ ನಡೆದಿರುವೆ? ಕಲ್ಯಾಣ!

ಕಲ್ಯಾಣ: ಎತ್ತಲೋ! ಎಲ್ಲಿಗೋ! ನಡೆದಿರುವೆ ಮಾತ್ರ

ತಾಯಿ: ಹೀಗೇಕೆ ಕಲ್ಯಾಣ? ಯಾವ ಜಾಗೆಗೆ ಹೊರಟೆ?

ತಂದೆ: ಇದನಾರು ಹೇಳಿದರು? ಮರುಳನಲ್ಲವೆ ನೀನು?

ಕಲ್ಯಾಣ: ಹೇಳಿದರು, ಯಾರೋ ಹೇಳಿದರು ಮುಗಿಲಲ್ಲಿ ಕುಳಿತು.

ಕೇಳಿದೆನು ಮರುಳ ನಾ, ಮರಳದೆಲೆ ನಡೆದಿರುವೆನು"(ಪು.೪)

ಈ ರೀತಿಯಾಗಿಯೇ ಸ್ವಪ್ನದಲ್ಲಿ ಸಂಭಾಷಣೆ ನಡೆಯುವ ಕಥಾಂಶವು ನಿರೂಪಿತಗೊಂಡಿದೆ. ಮುಂದೆ ಕಾಡಿನಲ್ಲಿ ವಿಹರಿಸುವ ರಾಜನಂತೆ ಭಾವಿಸಿಕೊಳ್ಳುತ್ತಾ ಕಾಡಿನ ಪ್ರಕೃತಿಯ ಸೌಂದರ್ಯವನ್ನು ಸವಿಯುವುದರಲ್ಲಿಯೇ ಎಚ್ಚರಗೊಂಡು ಕನಸು ಮುಗಿಯುತ್ತದೆ.

'ಪ್ರತಿರೂಪ' ಎರಡನೇ ಕಿರುನಾಟಕದಲ್ಲಿ 'ಬೈರವ'(ರಾಜಕುಮಾರ), 'ಬಿಲ್ಲ'(ಬೈರವನ ಬಾಲ್ಯ ಸ್ನೇಹಿತ), 'ಗೌರಿ'(ಬೈರವನ ತಂಗಿ), ಕೂಸು ಇವಿಷ್ಟು ಪಾತ್ರಮುಖೇನ ಕಟ್ಟಿಕೊಂಡ ಕನಸಿನ ಕತೆಯಾಗಿದೆ. ಈ ಸ್ವಪ್ನ ನಾಟಕದಲ್ಲಿ ಬೈರವ ರಾಜನ ಮಗನು ಬಾಲ್ಯಸ್ನೇಹಿತನಾದ ಬಿಲ್ಲವನೊಡಗೂಡಿ ಕಾಡಿನಲ್ಲಿ ಬೇಟೆಯಾಡುವ, ವಿವಿಧ ರೀತಿಯ ಕಲೆಗಳನ್ನು ಕಲಿಯುವಂತೆ ಸಂಭಾಷಣೆ ಮೂಡಿಬಂದಿದೆ. ಹಾಗೆಯೇ ಕತೆಯು ಮುಂದುವರಿದು, ಕನಸಿನಲ್ಲಿ ಒಂದು ಜಿಂಕೆಗೆ ಬಾಣವನ್ನು ಹೂಡುವ ಸಂದರ್ಭದಲ್ಲಿಯೇ ಜಿಂಕೆಯ ಸ್ಥಾನದಲ್ಲಿ ಬೈರವನ ಪ್ರತಿಮೆ ಕಂಡುಬರುತ್ತದೆ. ಆದರೆ ರಾಜ ಕನಸಿನಲ್ಲಿಯೇ ಕಣ್ಣು ತೆರೆಯಲಾರದೆ ಬಾಣ ಬಿಡುತ್ತಾನೆ. ಆ ಜಿಂಕೆ ಮೃತವಾಗುತ್ತದೆ. ಈ ರೀತಿಯ ಕನಸಿನ ಚಿತ್ರಣವನ್ನು ಬಿತ್ತರಿಸಿದ್ದಾರೆ.

'ವಿಶ್ವಪುರುಷ' ಈ ನಾಟಕದಲ್ಲಿ 'ಯೋಗಿನಾಥ'ನ ಪಾತ್ರವು ಪ್ರಮುಖವಾಗಿದೆ. ಯೋಗಿನಾಥನು ಸೂರ್ಯ ಮುಳುಗುವ ಹೊಂಬಿಸಿಲಿನಲ್ಲಿ ಧ್ಯಾನಕ್ಕೆ ಕುಳಿತುಕೊಳ್ಳುವನು. ಸ್ವಲ್ಪ ಹೊತ್ತಿನ ನಂತರ ಒಬ್ಬ ಮಹಿಳೆಯು ಒಂದು ಸುಂದರವಾದ ಮಗುವನ್ನು, ಇನ್ನೊಂದು ರೋಗಗ್ರಸ್ತವಾದ ಮಗುವನ್ನು ಹೊತ್ತುಕೊಂಡು, ಧ್ಯಾನಕ್ಕೆ ಕುಳಿತ ಯೋಗಿನಾಥನ ಬಳಿ ಬರುವಳು. ಆ ಮಗುವಿನ ಚಿಂತಾಜನಕ ಸ್ಥಿತಿಯನ್ನು ಕಂಡ ಯೋಗಿನಾಥನು ಮನದಲ್ಲಿಯೇ ನೊಂದುಕೊಳ್ಳುವನು. ಆ ಹೆಂಗಸು ಭೋರೆಂದು ಅಳುತ್ತಿರುವಾಗಲೇ ಈ ಕನಸು ಮುಗಿಯುವುದು.

'ಮಹಾಜನತುಲೆ' ಶೀರ್ಷಿಕೆಯಡಿ ರಚನೆಗೊಂಡ ಏಕಾಂಕದ ಕಿರುನಾಟಕಗಳಲ್ಲಿ ಅರುಣ, ಆನಂದ, ವಿರಾಟರು ಬಾಲ್ಯಸ್ನೇಹಿತರೊಡಗೂಡಿ ಪ್ರಕೃತಿಯ ಸೌಂದರ್ಯ ಸವಿಯಲು ಕಾಡಿಗೆ ತೆರಳುವರು. ಹಲವಾರು ದೈವಿಕ ಪ್ರಶ್ನೆಗಳನ್ನು ಒಬ್ಬೊಬ್ಬರು ಒಂದೊಂದು ರೀತಿಯಲ್ಲಿ ಪ್ರಕೃತಿಯ ವಿಸ್ಮಯವನ್ನು ಬಣ್ಣಿಸುತ್ತಾ ತಮ್ಮತಮ್ಮಲ್ಲಿಯೇ ಮಾತನಾಡಿಕೊಳ್ಳುವರು. ಅದು ಈ ರೀತಿ ಮೂಡಿಬಂದಿದೆ.

"ವಿರಾಟ: ಮರುಗದಿರು ನನ್ನರುಣ, ಏನೂ ಕೊಡಲಿಹ ತಾಯಿ ದರುಶನವ

ಮೊದಲಿತ್ತು ಬಯಲೊಳಗೆ ಕರಗಿಹಳು

ಅವಳ ಆಟದ ಒಡವೆ: ಇದು ಎಲ್ಲ ನಾವೆಲ್ಲ!

ಆನಂದ: ಅದು ಸಾಕು ನೋಡಿರಿದೊ ನಿಚ್ಚಳದ ಸಿರಿನೋಟ!

ಎದೆಯೊಲವಳೆದೊಯ್ವ ಅಚ್ಚರಿಯ ಹಿರಿನೋಟ!

ಅರುಣ: ಹೌದು ಹಬ್ಬಿದೆ ಹಳದಿ ಬೆಳಕು-ಬೆಳೆ!

ಸುರಿವಂತೆ ಬಂಗಾರ ಸೆಳಕು ಮಳೆ!

ವಿರಾಟ: ದುಂಡಾಗಿ ನಿಂತಿಹವು ಬಯಲಂಚಿನಲಿ ಮರದ ಸಾಲು

ಚೆಂಡು ಮಲರಿನ ಹಾಗೆ ತೋರುತಿಳೆ ತಾಯ ತುರುಬಿನೊಳು.

ಅರುಣ: ಅಣ್ಣದಿರ! ಈ ಮರಗಳೆಲೆ ನೋಡಿ!

ಬಣ್ಣನೀಲಿಯು ಬೆರೆತ ಸಿರಿಮೋಡಿ!"(ಪು.೩೩)

ಎಂದು ಸಂಭಾಷಣೆಯು ಮುಂದೆ ಸಾಗುವ ರೀತಿಯಲ್ಲಿ ಈ ಸ್ವಪ್ನದ ಕಥಾಹಂದರವು ನೀಳಕತೆಯಂತೆ ಅಥವಾ ಲೇಖನ ಮಾದರಿಯವು ಎಂಬಂತೆ ಓದುಗರಿಗನಿಸುತ್ತದೆ. ಮುಗಳಿ ಅವರ 'ರಸಿಕರಂಗದರ್ಶನ' ಅಭಿನಂದನಾ ಗ್ರಂಥದಲ್ಲಿ ಎಸ್.ಕೆ.ಕುಲಕರ್ಣಿ ಅವರು ರಂ.ಶ್ರೀ.ಮುಗಳಿ ಅವರ ನಾಟಕದ ಕುರಿತು ಬರೆದಿರುವ ಲೇಖನದಲ್ಲಿ "ಪಾವನ ಪಾವಕ ಕನಸುಗಳಿಗೆ ಅರ್ಥ ಹೇಳಿ ಕಲ್ಪನೆಯ ಸಾಮರ್ಥ್ಯದಿಂದ ಕಾವ್ಯ ನಾಟಕಗಳಾಗಿ ರೂಪಗೊಂಡ ರೂಪಕಗಳ ಸಂಗ್ರಹ. ಇವನ್ನು ಕೇವಲ ಓದಿಯೇ ಆನಂದಿಸಬೇಕು. ಗೇಯವಾದ ಗೀತರೂಪಕಗಳೂ ಆಗಿಲ್ಲ ಇವು. ಇವನ್ನು ಪುನರ್ರಚಿಸಿ ಗೀತನಾಟಕಗಳನ್ನಾಗಿ ಪರಿವರ್ತಿಸಿದರೆ ಸ್ತುತ್ಯ ಪ್ರಯತ್ನವಾದೀತು"[೯೯] ಎಂದಿದ್ದಾರೆ. ಈ ಮಾತು ಒಪ್ಪಬಹುದಾಗಿದೆ. ಏಕೆಂದರೆ ಪಾವನ ಪಾವಕದಲ್ಲಿರುವ ಏಕಾಂಕ ನಾಟಕಗಳು ಒಂದು ಸಾರಿ ಓದುವಂತವುಗಳೆಂದರೆ ತಪ್ಪಾಗಲಾರದು.

ಲೇಖಕರು ಜಡಭರತರ 'ಕನಸುಗಳು' ನಾಟಕವನ್ನು ಸಂಗ್ರಹಿಸಿ ಈ ಕೃತಿಯಲ್ಲಿಯೇ ಸಂಪಾದಿಸಿಕೊಟ್ಟಿದ್ದಾರೆ. ಈ ನಾಟಕವು ಸಹ ಸ್ವಪ್ನದಲ್ಲಿ ಮೂಡುವ ಕನಸಿನ ಮಾದರಿಯನ್ನೇ ಅನುಸರಿಸಿದೆ. ಜಡಭರತರು ಮಲಗಿಕೊಂಡಾಗ ಕನಸಿನ ಕಥಾಹಂದರವು ಅವರಿಂದ ಈ ರೀತಿಯಾಗಿ ಅನಾವರಣಗೊಂಡಿದೆ. ಕನಸಿನಲ್ಲಿ ಅಗ್ನಿಯನ್ನು ಹುಡುಕುತ್ತಾ ಸಂಚರಿಸುವ ಲೇಖಕರು ಮೊದಲು ನಿರ್ಜನ ದೇಶವನ್ನು ಸಂಚರಿಸಿ ಮರ್ಕಟ ದೇಶಕ್ಕೆ ತೆರಳಿ ಅಲ್ಲಿಂದ ಮುಂದೆ ದೇವಲೋಕಕ್ಕೆ ಹೋಗುವರು. ಅಲ್ಲಿ ದೇವತೆಗಳು, ಅಪ್ಸರೆಯರು ಸಂಗೀತ ಗಾಯನದಲ್ಲಿ ತಲ್ಲೀನರಾಗಿ ಕುಳಿತಿರುವುದನ್ನು ನೋಡಿ ಅಗ್ನಿದೇವತೆಯನ್ನು ಹುಡುಕುತ್ತಾ ಹೋಗುವರು. ಅಲ್ಲಿಯೂ ಹುಡುಕುವ ವೇಳೆಗಾಗಲೇ ಎಚ್ಚರಗೊಳ್ಳುವರು. ಈ ರೀತಿ ವಿಷಯವಸ್ತುವನ್ನು ಒಳಗೊಂಡಿದೆ. ಲೇಖಕರ ವಿವಿಧ ಕನಸುಗಳಲ್ಲಿ ಒಡಮೂಡಿದಂತಿರುವ ಸ್ವಪ್ನದ ಕಥಾಂಶವನ್ನು ಪ್ರಯೋಗಕ್ಕೆ ಒಡ್ಡುವ ಮೂಲಕ ಈ ರೀತಿಯ ಹೊಸ ಮಾದರಿಯ ಕಿರುನಾಟಕಗಳನ್ನು ಲೇಖಕರು ಕಟ್ಟಿಕೊಟ್ಟಿದ್ದಾರೆ. ಈ ಕೃತಿಯಲ್ಲಿಯೇ 'ಸ್ವಪ್ನವಿಜ್ಞಾನ' ದ.ರಾ.ಬೇಂದ್ರೆ ಅವರು ರಚಿಸಿರುವ ಲೇಖನವು ಸಹ ಒಳಗೊಂಡಿದೆ. ಈ ಲೇಖನವು

ಸಂಶೋಧನಾತ್ಮಕವಾಗಿದ್ದು ಕನಸಿನ ಸುತ್ತಮುತ್ತ ಸಾಹಿತ್ಯಕವಾಗಿ ನಡೆದಿರುವ ಕೆಲಸಗಳ ಬಗ್ಗೆ ಹಾಗೂ ಮುಗಳಿ ಅವರ ಕನಸಿನ ಹೊಸಮಾದರಿಯ ಕನಸಿನ ಮೌಖಿಕ ನಾಟಕಗಳನ್ನು ರಚಿಸಿರುವುದನ್ನು ಕಂಡು ಪ್ರಶಂಶಿಸಿದ್ದಾರೆ. ಹಾಗೆಯೇ ಮುಂದುವರಿದು "ಸ್ವಪ್ನವು ಒಂದು ರೂಪದೃಷ್ಟಿ. ಚರ್ಮಚಕ್ಷು ಗೋಚರವಾದ ಆ ವಸ್ತುಗಳ ರೂಪಕೃತಿಗಳನ್ನು ಬದಲಾಯಿಸುವ ಶಕ್ತಿಯಿದೆ. ಯಾಂತ್ರಿಕ ಶಕ್ತಿಯಿಂದಲೂ ರಾಸಾಯನಿಕ ಶಕ್ತಿಯಿಂದಲೂ ಆ ರೂಪಾಕೃತಿಗಳನ್ನು ಹಿಡಿದಿಡಬಹುದು. ಭಾವಚಿತ್ರಯಂತ್ರದ ಕೆಲಸವೇ ಅದು. ನಮ್ಮ ಚರ್ಮಚಕ್ಷುವೂ, ಮೆದುಳೂ ಅದೇ ಕೆಲಸ ಮಾಡುವುವು"(ಪು.೨೮) ಎಂದು, ಹಾಗೆಯೇ ಮುಂದುವರಿದು, "ಶ್ರೀ ರಂ.ಶ್ರೀ.ಮುಗಳಿ ಅವರು ಈ ಸ್ವಪ್ನಚಿತ್ರಗಳಲ್ಲಿ ತಮ್ಮ ಗೆರೆಗಳನ್ನೆಳೆದು ಅಲ್ಲಲ್ಲಿ ಇನ್ನೊಂದು ಅರ್ಥವ್ಯಕ್ತಿಯನ್ನು ಕಲ್ಪಿಸಿಕೊಟ್ಟಿದ್ದಾರೆ"(ಪು.೮೦) ಎಂದು ಪ್ರಶಂಸಿಸಿದ್ದಾರೆ.

ಈ ಮಾದರಿಯಲ್ಲಿ ಮುಗಳಿ ಅವರು ತಮ್ಮ ಸಾಹಿತ್ಯ ಕೃತಿಯಲ್ಲಿ ಪ್ರಯೋಗಾತ್ಮಕವಾಗಿ ಕಂಡುಕೊಂಡ ಕನಸಿನ ಮಾದರಿಯಲ್ಲಿ ಅನಾವರಣಗೊಂಡ ಕಿರುನಾಟಕ ರಚಿಸಿ ಸಂಪಾದಿಸಿದ ಈ ಕೃತಿಯಲ್ಲಿ ಬಹುತೇಕ ನಾಟಕಗಳು ಕಥಾಂಶವನ್ನು ಸರಿಯಾದ ಕ್ರಮದಲ್ಲಿ ತಿಳಿಸುವುದಿಲ್ಲ. ಆದರೆ ಮುಗಳಿ ಅವರು ಸ್ವಪ್ನದಲ್ಲಿ ಕಂಡಂತೆ ರಚಿಸಿದ ಈ ನಾಟಕಗಳನ್ನು ಪ್ರಯೋಗಕ್ಕೆ ಒಳಪಡಿಸಿದ್ದಾರೆ ಎಂಬ ಕಾರಣಕ್ಕೆ ಒಂದು ಸಾರಿ ಓದಲು ಸಮಂಜಸವಾಗಿವೆ. ಅದೇ ರೀತಿಯಾಗಿ ಮುಗಳಿ ಅವರ ಇನ್ನೊಂದು ಪ್ರಾಯೋಗಿಕ ಮಾದರಿ ತಿಳಿಯುವುದಾದರೆ, ಗೆಳೆಯರ ಗುಂಪಿನ ಸದಸ್ಯರಾದ ದ.ರಾ.ಬೇಂದ್ರೆ, ವಿ.ಕೃ.ಗೋಕಾಕ್, ಸೇತೂರಾಮ್ ಮಾಳಗಿ ಇತರ ಸಹೋದರರೊಂದಿಗೆ 'ಮೌನ ಸಪ್ತಾಹ'ದಂತ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಪ್ರಯೋಗಾತ್ಮಕ ಸಾಹಿತ್ಯ ಕೃಷಿ ಕೈಗೊಂಡಿದ್ದನ್ನು ತಿಳಿಯಬಹುದಾಗಿದೆ.

'ವಿಜಯ ಸಾಮ್ರಾಜ್ಯ' ಮುಗಳಿ ಅವರು ರಚಿಸಿದ ಐತಿಹಾಸಿಕ ನಾಟಕವಾಗಿದೆ. ಈ ನಾಟಕವು ಹನ್ನೆರಡು ವರ್ಷ(೧೩೩೬–೧೩೪೮)ಗಳವರೆಗಿನ ವಿಜಯನಗರ ಸಾಮ್ರಾಜ್ಯದ ಚಾರಿತ್ರಿಕ ವಿದ್ಯಮಾನಗಳನ್ನು ಹಾಗೂ ಹೊಯ್ಸಳ ರಾಜ್ಯದ ಕೊನೆಯ ದೊರೆಯಾದ ೩ನೇ ಬಲ್ಲಾಳನು ವಿಜಯನಗರ ಸ್ಥಾಪನೆಗೆ ಬಹುಮಟ್ಟಿಗೆ ಕಾರಣವೆಂದು ಈ ನಾಟಕದಲ್ಲಿ ಸ್ಮರಿಸುತ್ತಾರೆ. ಮುಗಳಿ ಅವರು ಈ ನಾಟಕವನ್ನು ರಚಿಸಲು ಆಕರವಾಗಿ ಹಲವು ಶಾಸನಗಳನ್ನು ಓದುವ ಮೂಲಕ ತಮ್ಮನ್ನು ತಾವು ಸಂಶೋಧನೆಗೆ ತೊಡಗಿಸಿಕೊಂಡು ಕ್ಷೇತ್ರಕಾರ್ಯದ ವಿವರಗಳನ್ನು ಹಾಗೂ ಹಲವಾರು ಕೃತಿಗಳನ್ನು ಶ್ರದ್ಧೆಯಿಂದ ಓದಿರುವಂತದ್ದು ಅವರ ಮುನ್ನುಡಿಯಿಂದ ತಿಳಿದುಬರುತ್ತದೆ. ಅಂಥ ಕೃತಿಗಳಲ್ಲಿ ಸಾಲೆತೊರೆ ಅವರ The Social and Political Life of Vijayanagar ಹಾಗೂ ವಿಜಯನಗರ ಸ್ಮಾರಕೋತ್ಸವ ಸಂಚಿಕೆಗಳನ್ನು ಸ್ಮರಿಸಿಕೊಂಡಿದ್ದಾರೆ.

ಈ ನಾಟಕದ ಕಥಾವಸ್ತುವು ವಿಜಯನಗರ ಸಾಮ್ರಾಜ್ಯದ ಚಾರಿತ್ರಿಕ ಅಂಶಗಳನ್ನೊಳಗೊಂಡ ಕಾಲ್ಪನಿಕತೆಯೊಳಗಡೆ ಅನಾವರಣಗೊಂಡಿರುವ ಬಗ್ಗೆ ಸ್ವತಃ ಮುಗಳಿ ಅವರೆ ತಿಳಿಸುತ್ತಾರೆ. ಈ

ಮೂರಂಕದ ನಾಟಕವನ್ನು ಜಮಖಂಡಿಯ ನಾಟ್ಯಕಲಾವಿದರು ಹಾಗೂ ರಬಕವಿಯ ಮಿತ್ರರು ಪ್ರದರ್ಶಿತಗೊಂಡ ಈ ನಾಟಕವು ಜನರ ಮೆಚ್ಚುಗೆಗೆ ಪಾತ್ರವಾಗಿರುವುದು ನಮಗೆ ಮುನ್ನುಡಿಯಿಂದ ತಿಳಿದುಬರುತ್ತದೆ. ಈ ನಾಟಕದ ಕತೆಯು ಹಂಪಿಯ ವಿರೂಪಾಕ್ಷದೇವರ ಗುಡಿ, ಆನೆಗುಂದಿ, ಬಲ್ಲಾಳ ಬಿಡಾರ ಇತ್ಯಾದಿ ಸ್ಥಳಗಳಲ್ಲಿ ನಡೆಯುವ ನಾಟಕದ ಕಥಾವಸ್ತುವಾಗಿದೆ. ಮುಖ್ಯವಾಗಿ ಈ ನಾಟಕವು ನಿರೂಪಣೆ ಮಾದರಿಯ ಪಾತ್ರಗಳ ಮುಖೇನ ನಡೆಯುತ್ತದೆ.

ಈ ನಾಟಕದ ಪಾತ್ರಚಿತ್ರಣದಲ್ಲಿ ವಿದ್ಯಾರಣ್ಯರು; ಕರ್ನಾಟಕ ಸಿಂಹಾಸನದ ಪ್ರತಿಷ್ಠಾಪನಾಚಾರ್ಯರು, ೩ನೇ ಬಲ್ಲಾಳ; ಹೊಯ್ಸಳ ದೊರೆ, ಬಲ್ಲಪ್ಪದಣ್ಣನಾಯಕ; ಹೊಯ್ಸಳ ಮಂತ್ರಿ, ಹರಿಹರರಾಯ; ವಿಜಯನಗರದ ಮೊದಲ ಅರಸ, ಬುಕ್ಕರಾಯ; ಅರಸನ ತಮ್ಮ, ಬಹಾವುದ್ದೀನ(ಬ್ರಹ್ಮಾನಂದ); ದಿಲ್ಲಿಯ ಸುಲ್ತಾನರ ಅಳಿಯ(ಬಲ್ಲಾಳನಿಂದ ಆಶ್ರಿತನಾದವ), ಚನ್ನೇಗೌಡ; ಆನೆಗುಂದಿಯ ಸಾಹುಕಾರ, ರುದ್ರಯ್ಯ; ಶೂರವೀರಸೇನಾ ನಾಯಕ, ಹಡಪದ ಗೌಡರಸ; ಮಂಗಳೂರು ಗಡಿಸಂರಕ್ಷಕ, ಚಾಮಯ್ಯನಾಯಕ; ಬಾದಾಮಿ ಗಡಿ ಸಂರಕ್ಷಕ, ರಾಮಗೌಡ; ಮೈಸೂರು ಕಡೆಯ ಸಂರಕ್ಷಕ, ವಿಜಯಾಂಬಿಕೆ; ಹರಿಹರನಹೆಂಡತಿ, ದೇವಾಯಿ; ಬುಕ್ಕರಾಯನ ಹೆಂಡತಿ, ಗಂಗಾದೇವಿ; ಕಂಪಣನ ಹೆಂಡತಿ ಹಾಗೂ ತಳವಾರರು, ಸೈನಿಕರು, ನೀಲದಾಸಿ ಮೊದಲಾದ ಪಾತ್ರಚಿತ್ರಣಗಳು ಈ ನಾಟಕದಲ್ಲಿ ಬರುತ್ತವೆ.

ನಾಟಕದ ಮೊದಲನೇ ಅಂಕದಲ್ಲಿ ಹಂಪೆಯ ವಿರೂಪಾಕ್ಷದೇವರ ಗುಡಿಯ ವಿಶಾಲ ಮಂಟಪದ ಮೇಲೆ ಪೂಜೆ ಕೈಗೊಂಡ ಹರಿಹರ ಬುಕ್ಕರಾಯರು ಹಾಗೂ ಹೊಯ್ಸಳರ ದೊರೆ ಮೂರನೇ ಬಲ್ಲಾಳನು ಬಲ್ಲಪ್ಪದಣ್ಣಾಯಕರೊಡಗೂಡಿ ನಾಟಕ ಪ್ರವೇಶಿಕೆ ಪ್ರಾರಂಭವಾಗುತ್ತದೆ. ಹಾಗೆಯೇ ಮುಂದುವರಿದು ಅಲ್ಲಾವುದ್ದೀನ್ ಖಿಲ್ಜಿಯ ಸೇನಾಪತಿಯಾದ ಮಲ್ಲಿಕಾಪರನು ದೋರಸಮುದ್ರವನ್ನು ಕೊಳ್ಳೆ ಹೊಡೆದ ವಿಚಾರ ಕುರಿತು ಹಾಗೂ ಬಲ್ಲಪ್ಪದಣ್ಣನಾಯಕ(ಹೊಯ್ಸಳ ಮಂತ್ರಿ) ಹರಿಹರನಿಗೆ ಪರಕೀಯರ ಕಪ್ಪಕಾಣಿಕೆ ತೆತ್ತು ಅವರ ದಾಸ್ಯದಲ್ಲಿ ಬದುಕಲಾರೆನೆಂಬ ಆಕ್ರೋಶದ ಮಾತನಾಡಿರುವಂತೆ ಈ ಭಾಗದಲ್ಲಿ ಸಂಭಾಷಣೆ ಮೂಡಿಬಂದಿದೆ.

ಪ್ರವೇಶ–೨ರಲ್ಲಿ ಆನೆಗುಂದಿಯ ಮುಖ್ಯಬೀದಿಯಲ್ಲಿ ಮಲಿಕಸಾಯಬನ ಕಡೆಯವರಾದ ಇಬ್ಬರು ಸೈನಿಕರು ಕರ(ತೆರಿಗೆ) ಕೊಡುವಂತೆ ಒತ್ತಾಯಿಸಿ ಮುದುಕನಾದ ಚನ್ನೇಗೌಡನ ಕೈಗೆ ಹಗ್ಗಕಟ್ಟಿ ಕರೆದುಕೊಂಡು ಹೋಗುವ ಸಂದರ್ಭದಲ್ಲಿ ಈ ರೀತಿಯ ಸಂಭಾಷಣೆ ಮೂಡಿಬಂದಿದೆ.

"೧ನೇ ತಳವಾರ: ಸರಕಾರದ ಕರವನ್ನು ಕೊಟ್ಟುಬಿಡು, ನಿನ್ನನ್ನು ಮನೆಗೆ ಮುಟ್ಟಿಸಿ ಮಂಗಳಾರತಿ ಮಾಡಿ ಹೋಗುತ್ತೇವೆ.

ಚೆನ್ನೇಗೌಡ: ಕರದ ಮಾತೆತ್ತಬೇಡ, ತಮ್ಮ ಆಸ್ತಿಪಾಸ್ತಿಯನ್ನೇ ಹಾಳುಮಾಡುವ ಈ ವಿಪರೀತ ಕರವನ್ನು ಆನೆಗುಂದಿ ಊರೊಳಗಿನ ಒಂದು ಪಿಳ್ಳೆಯೂ ಕೊಡುವುದಿಲ್ಲ. ಊರಿಗೆ ಹಿರಿಯನಾದ ನಾನು ಕೊಡುತ್ತೇನೇ?

೨ನೇ ತಳವಾರ: ಹಾಗಾದರೆ ನಡೆ ಚಾವಡಿಗೆ

ಚನ್ನೇಗೌಡ: ನಡೆಯುವುದಿಲ್ಲ, ನನ್ನನ್ನು ಇಲ್ಲಿಯೇ ಕೊಂದುಹಾಕಿರಿ ಬೇಕಾದರೆ ನಾನು ಸತ್ತಮೇಲೆ ನನ್ನ ಮೈಚೂರುಗಳನ್ನು ಒಯ್ದು ನಿಮ್ಮ ಚಾವಡಿಯ ಮುಂದೆ ತೂರಿರಿ. ಆಗಲೂ ಅವು ಬಾಯಿಯಿಲ್ಲದ ಬಾಯಿಯಿಂದ 'ಕರವನ್ನು ಕೊಡುವುದಿಲ್ಲ' ಎನ್ನುವವು"(ಪು.೯). ಎಂದು ಚನ್ನೇಗೌಡರು ಪ್ರತಿಭಟಿಸುವ ವೇಳೆಯಲ್ಲಿಯೇ ಯುವಕ ರುದ್ರಯ್ಯ ದನಿಗೂಡಿಸುವನು. ಈ ಭಾಗದಲ್ಲಿ ಪರಕೀಯರ ಆಳ್ವಿಕೆಯಿಂದಾಗಿ ಅಪಾರ ಪ್ರಮಾಣದ ತೆರಿಗೆಯನ್ನು ಕಟ್ಟಲಾಗದ ಜನರ ಪರಿಸ್ಥಿತಿಯನ್ನು ಈ ಸಂದರ್ಭದಲ್ಲಿ ಸ್ಥಳೀಯ ಪಾತ್ರಗಳ ಮುಖೇನ ಲೇಖಕರು ಪ್ರಶ್ನಿಸುತ್ತಾರೆ.

ಪ್ರವೇಶಿಕೆ ೩ರಲ್ಲಿ ಬಲ್ಲಪ್ಪನಾಯಕ ಹಾಗೂ ಬಹಾವುದ್ದೀನನ ಮಾತಿನ ಸಂಭಾಷಣೆಯು ಈ ಸಂದರ್ಭದಲ್ಲಿ ಮೂಡಿಬರುವಂತದ್ದಾಗಿದೆ. ಬಹಾವುದ್ದೀನನ ಪಾತ್ರದ ಮೂಲಕ ಸನ್ಯಾಸಿವೇಷಧಾರಿಯಾಗಿ ಕನ್ನಡಪರವಾದ ಮಾನವೀಯ ನೆಲೆಯಲ್ಲಿ ಈ ಪಾತ್ರವು ಹೆಚ್ಚು ಒಡೆದುಕಾಣುವಂತದ್ದಾಗಿದೆ. ಹಾಗೆಯೇ ಮುಂದುವರಿದು ೬ನೇ ಪ್ರವೇಶಿಕೆಯಲ್ಲಿ ಬಹಾವುದ್ದೀನನ, ಬಲ್ಲಪ್ಪನಾಯಕರ ಪಾತ್ರಗಳು ಬರುತ್ತವೆ. ರಾಜ್ಯದ ಹಿತದೃಷ್ಟಿಯನ್ನು ಚರ್ಚಿಸುವಂತೆ ಸಂಭಾಷಣೆಯು ಮೂಡಿಬರುವುದು. ಹಾಗೆಯೇ ಇನ್ನೊಂದು ಭಾಗದಲ್ಲಿ ದಿಲ್ಲಿಯ ದೊರೆ ಮಹಮ್ಮದ್ ಬಿನ್ ತುಘಲಕ್‌ನ ಆಳ್ವಿಕೆಯ ಸಂದರ್ಭದ ಭಾಗವಾಗಿ ದೆಹಲಿಯಿಂದ ದೇವಗಿರಿಗೆ ರಾಜಧಾನಿಯನ್ನು ಬದಲಾಯಿಸುವಾಗ ನಡೆದ ಹಿಂಸೆಯಿಂದ ಆದ ಜನರ ಸಾವುನೋವುಗಳ ಬಗ್ಗೆ ಈ ಸಂದರ್ಭದಲ್ಲಿ ಪ್ರಸ್ತಾಪಿಸಿದಂತಿದೆ.

೨ನೇ ಅಂಕ ಪ್ರವೇಶ ೨ರ ಭಾಗದಲ್ಲಿ ಕಂಪಣ ಹಾಗೂ ಹೆಂಡತಿ ಗಂಗಾದೇವಿಯ ನಡುವೆ ಪ್ರೀತಿ ಸಲ್ಲಾಪದ ಮಾತಿನ ಸಂಭಾಷಣೆ ಮೂಡಿಬಂದಿದೆ. ಮಧುರೆಗೆ ಯುದ್ಧಕ್ಕೆ ಹೊರಡಲು ಸಿದ್ಧನಾದ ವೀರ ಕಂಪಣ ವೀರಾವೇಶದ ಮಾತಿನ ಸಂಭಾಷಣೆಯ ಜೊತೆಗೆ ಗಂಗಾದೇವಿಯ ಮಾತಿನ ಸಲ್ಲಾಪ ಹೆಚ್ಚು ವಿಸ್ತೃತಗೊಂಡಿದೆ. ಹಾಗೆಯೇ ಮುಂದುವರಿದು ಪ್ರವೇಶ ೩ರಲ್ಲಿ ಬಲ್ಲಾಳ ಅರಸನ ಮಾತಿನ ಸಂಭಾಷಣೆಯು ವಿನಯಪೂರ್ವಕವಾಗಿ ಮೂಡಿಬಂದಿದೆ. ಈ ಸನ್ನಿವೇಶವು ಬಹಾವುದ್ದೀನನು ಬಲ್ಲಾಳನಿಗೆ ದೆಹಲಿ ಸರ್ಕಾರದ ಕಾರ್ಯವೈಖರಿಯ ಬಗ್ಗೆ ಹಾಗೂ ಗುಪ್ತಮಾಹಿತಿಗಳನ್ನು ತಿಳಿಸುವ ವಿಷಯ ದಿಲ್ಲಿಯ ಅರಸನಿಗೆ ಗೊತ್ತಾಗುತ್ತದೆ. ಇತ್ತ ಬಹಾವುದ್ದೀನನ ಸಾವು ಸನಿಹದಲ್ಲಿದ್ದರೂ ಅದನ್ನು ಲೆಕ್ಕಿಸದೆ, ಬಲ್ಲಾಳರನ್ನು ನೆನೆಯುತ್ತಾ ಹೊಯ್ಸಳ ಅರಸನ ಏಳಿಗೆಗಾಗಿ ತನ್ನ ಸಾವನ್ನು ತಾನು ಆಹ್ವಾನಿಸಿಕೊಳ್ಳುವ ಪರಿ ಈ ಸಂದರ್ಭದಲ್ಲಿ ತಿಳಿದುಬರುತ್ತದೆ.

ಪ್ರವೇಶ ೪ರಲ್ಲಿ ಯುದ್ಧದ ವೀರಾವೇಶದಲ್ಲಿ ಹೋರಾಡುವ ಕಂಪಣನ ಮಾತಿನ ಸಂಭಾಷಣೆ ಸೊಗಸಾಗಿ ಮೂಡಿಬಂದಿದೆ. ಈ ಸಂದರ್ಭದಲ್ಲಿಯೇ ಘಿಯಾಸುದ್ದೀನನ ಸೈನಿಕರು ದೊರೆ ಬಲ್ಲಾಳರನ್ನು ಬಂಧಿಸಿ ಅಪಹರಿಸಿಕೊಂಡು ಹೋಗುತ್ತಾರೆ. ಈ ವಿಷಯ ತಿಳಿದ ಕಂಪಣನು ಎಲ್ಲ ಸೈನಿಕರೊಂದಿಗೆ ಮಂತ್ರಿ ಬಲ್ಲಪ್ಪದಣ್ಣಾಯಕರೊಡಗೂಡಿ ಯುದ್ಧಕ್ಕೆ ಹೊರಡಲು ಸನ್ನದ್ಧನಾಗುವನು. ಈ ಸಂದರ್ಭದಲ್ಲಿ ಕಂಪಣನ ಹೆಂಡತಿ ಗಂಗಾದೇವಿಯು "ರಾಯ ಈಗ ನಿಮ್ಮನ್ನು ತಡೆದು

ನಿಲ್ಲಿಸುವಂತಹ ಅಳ್ಳೆದೆಯ ಅಬಲೆ ನಾನಲ್ಲ. ತಾಯಿ ಭುವನೇಶ್ವರಿದೇವಿ ನಿಮ್ಮನ್ನು ಕಾಯಲಿ, ಸರಿಯಾದ ದಾರಿಯನ್ನು ತೋರಲಿ ಎಂದು ಬೇಡುವೆನಷ್ಟೆ"(ಪು.೬೬) ಎಂದು ಹೇಳುವ ಗಂಗಾದೇವಿ ಅಂದಿನ ಪುರುಷಪ್ರಧಾನ ವ್ಯವಸ್ಥೆಗೆ ವಿನಯದಿಂದ ತಲೆಬಾಗುವಂತದ್ದನ್ನು ಈ ಭಾಗದಲ್ಲಿ ಗುರುತಿಸಬಹುದಾಗಿದೆ.

ನಾಟಕದ ಪ್ರವೇಶಿಕೆ ಮುಂದುವರಿದು ಬಲ್ಲಾಳರಸನನ್ನು ಕೊಂದಿರುವ ವಿಷಯವು ವಿದ್ಯಾರಣ್ಯರಿಗೂ, ಹರಿಹರ ಬುಕ್ಕರಿಗೂ ತಿಳಿದು ತುಂಬಾ ಆಘಾತಕ್ಕೊಳಗಾಗುತ್ತಾರೆ. ಹಾಗೆಯೇ ಮುಂದಿನ ಕಾರ್ಯವೈಖರಿಗಳ ಬಗ್ಗೆ ವಿಜಯನಗರಕ್ಕೆ ಬಂದೊದಗಿದ ದುಸ್ಥಿತಿಯನ್ನು ಕಂಡು ವಿದ್ಯಾರಣ್ಯ ಗುರುಗಳು ರಾಜ್ಯರಕ್ಷಣೆಗಾಗಿ ಹೇಳಿರುವ ಮಾತಿನ ಸಂಭಾಷಣೆ ಈ ರೀತಿಯಿದೆ.

"ವಿದ್ಯಾರಣ್ಯರು: ನಮ್ಮ ಶೃಂಗೇರಿ ಮಠಕ್ಕೆ ನಮ್ಮ ಆಳುಗಳನ್ನು ಕಳುಹಿಸಿ ಅಲ್ಲಿ ಸಂಗ್ರಹವಾದ ಧನರಾಶಿಯನ್ನು ಕಾಳುಕಡಿಗಳನ್ನು ತರಿಸಿಕೊಡುವೆ. ಸೈನ್ಯವು ಹೃಷ್ಟಪುಷ್ಟವಾಗಲಿ, ಸಾಮ್ರಾಜ್ಯವು ಸುರಕ್ಷಿತವಾಗಿರಲಿ.

ಹರಿಹರ: "ಗುರುಗಳೇ ಎಂಥಾ ತ್ಯಾಗವಿದು! ಆದರೆ ಧರ್ಮದ ಬೊಕ್ಕಸದಿಂದ ನಾನು ಹಣ ಪಡೆದು ರಾಜ್ಯದ ಸೈನಿಕರನ್ನು ಎಣಿಸಬೇಕೆ? ಅದಾಗದು"(ಪು.೩೫).

ಈ ಸಂದರ್ಭದಲ್ಲಿ ಲೇಖಕರು ನಾಡಿಗೆ ದುಸ್ಥಿತಿ ಬಂದಾಗ ಮಠಗಳ ಆಸ್ತಿಯನ್ನು ಸಾರ್ವಜನಿಕ ಏಳಿಗೆಗಾಗಿ ವಿನಿಯೋಗಿಸಿದರೆ ಒಳಿತೆಂಬಂತೆ, ಈ ಸಂದರ್ಭದಲ್ಲಿ ಯೋಚಿಸಿರುವುದು ತಿಳಿದುಬರುತ್ತದೆ. ಅದೇ ರೀತಿಯಾಗಿ ಮುಂದುವರಿದು,

"ವಿದ್ಯಾರಣ್ಯರು: ಮರುಳನಂತೆ ಮಾತಾಡಬೇಡ, ಹರಿಹರ ರಾಜ್ಯದ ಪ್ರಜೆಗಳಿಂದಲೇ ಧರ್ಮದ ಬೊಕ್ಕಸವು ತುಂಬಿಲ್ಲವೇ? ಅದೇನು ಆಕಾಶದಿಂದ ಕಳಚಿ ಬಿದ್ದಿತೇ? ಈಗದು ರಾಜ್ಯದ ಧಾರಣೆಗಾಗಿ ವಿನಿಯೋಗವಾದರೆ ಯಥಾರ್ಥವಾಗಿ ಧರ್ಮದ ಬೊಕ್ಕಸವಾಗುವುದು"(ಪು.೩೫) ಎಂದು ಸಮರ್ಥನಾ ಮನೋಭಾವ ತಾಳುತ್ತಾರೆ. ಧರ್ಮದ ಹಣವನ್ನು ಜನರ ಕಲ್ಯಾಣಕ್ಕಾಗಿ ವಿನಿಯೋಗಿಸಬೇಕೆಂದು ಲೇಖಕರು ವಿದ್ಯಾರಣ್ಯರ ಮೂಲಕ ಹೇಳಿದಂತಿದೆ. ಪ್ರವೇಶ ೨ರ ಕೊನೆಯ ಭಾಗದಲ್ಲಿ ಅರಮನೆಯಲ್ಲಿರುವ ರಾಣಿಯರು ಯುದ್ಧದಲ್ಲಿ ಏನಾಗುವುದೆಂಬ ಭಯದಿಂದ ದುಃಖತಪ್ತರಾದ ಮಾತಿನ ಸಂಭಾಷಣೆ ನಡೆದಿರುವುದು ಈ ರೀತಿಯಿದೆ.

"ಗಂಗಾಂಬಿಕೆ: ತಾಯೀ ನಾನೇನು ಮಾಡಲಿ, ನನ್ನ ಜೀವವು ಒಂದೇ ಸಮನೆ ಚಡಪಡಿಸುತ್ತದೆ.. ನೀ ಯಾಕೆ ಅವರೊಡನೆ ಹೋಗಲಿಲ್ಲ ಎಂದು ಯಾರೋ ತಿವಿತಿವಿದು ನನ್ನನ್ನು ಅಣಕಿಸಿದಂತಾಗುತ್ತದೆ"(ಪು.೭೬) ಎಂದು ಮನಸ್ಸಿನ ದುಗುಡವನ್ನು ಹೊರಹಾಕಿದಂತಿದೆ.

ಪ್ರವೇಶ ೩ರಲ್ಲಿ ವಾರಂಗಲ್ಲಿನ ಯುದ್ಧದಲ್ಲಿ ಜಯಶಾಲಿಯಾಗಿ ವಾದ್ಯಮೇಳಗಳೊಂದಿಗೆ ಜಯಘೋಷ ಹಾಕುತ್ತಾ ಹೋಗುವಂತದ್ದು, ಬಲ್ಲಪ್ಪ, ಕಂಪಣ, ರುದ್ರಯ್ಯರೊಡಗೂಡಿ ಮೆರವಣಿಗೆಯ

ಮೂಲಕ ವಿಜಯನಗರ ಅರಮನೆಗೆ ಬರುವಂತದ್ದು ತಿಳಿದುಬರುತ್ತದೆ. ನಾಟಕದ ಕೊನೆಯ ಭಾಗದಲ್ಲಿ ಶೃಂಗೇರಿ ಮಠಕ್ಕೆ ದಾನ ನೀಡುವ ಪತ್ರವನ್ನು ಹರಿಹರರಾಯನಿಂದ ಲಿಪಿಕಾರನಿಗೆ ಕೊಡುವ ವಿವರದೊಂದಿಗೆ ಹಾಗೂ ಕಂಪಣನಿಗೂ ಗಂಗಾದೇವಿಗೂ ಮದುವೆಯಾಗುವ ವಿವರದೊಂದಿಗೆ ಮತ್ತು ವಿದ್ಯಾರಣ್ಯರ ಮಾತಿನ ಹಾರೈಕೆಯೊಂದಿಗೆ ಈ ನಾಟಕ ತೆರೆಕಾಣುತ್ತದೆ.

ಮುಗಳಿ ಅವರು ಈ ನಾಟಕವನ್ನು ರಚಿಸಲು ತಮ್ಮನ್ನು ತಾವು ಸಂಶೋಧನೆಗೆ ಒಳಪಡಿಸಿಕೊಂಡು ರಚಿಸಿರುವುದು ಮುನ್ನುಡಿಯಿಂದ ತಿಳಿದುಬರುತ್ತದೆ. ಈ ನಾಟಕವನ್ನು ಓದುಗನಿಗೆ ವಿಜಯನಗರ ಸ್ಥಾಪನೆಗೆ ಸಹಾಯಕವಾದ ಮನಸ್ಸುಗಳಾವುವು? ವಿದ್ಯಾರಣ್ಯರ ತಪಸ್ಸಿನ ಪ್ರಭಾವದಿಂದ ರಾಜಕೀಯ ದೂರದೃಷ್ಟಿಯಿದೆಯೇ? "ಎಲ್ಲ ಧರ್ಮಗಳ ಎಲ್ಲ ಪ್ರಜೆಗಳು ಕಲೆಯಬಲ್ಲ ನಲ್ಮೆಯ ನೆಲೆಯಾಗಲಿ ನಿಮ್ಮನಾಡು," ಎಂದು ಹರಿಹರರಾಯನಿಗೆ ಸಂದೇಶ ನೀಡುತ್ತಾರೆ. ತಮ್ಮ ಮುಕ್ತಿಗಾಗಿ ತಾವು ತಪಶ್ಚರ್ಯ ನಡೆಸಲಿಲ್ಲ, ಲೋಕಮಾತೆಯ ಅನುಗ್ರಹ ಪಡೆದು ಕನ್ನಡಿಗರ ರಾಜ್ಯ ಕಟ್ಟುವುದಕ್ಕಾಗಿ ಅದನ್ನು ವಿನಿಯೋಗಿಸಿದ ವಿದ್ಯಾರಣ್ಯರ ಔದಾರ್ಯ ಇಂದಿಗೂ ಮಾರ್ಗದರ್ಶನವಾಗಿದೆ. ಹೊಯ್ಸಳರ ಒಡನಾಡಿಯಾಗಿ ಬೆಳೆದ ಹರಿಹರರಾಯನೆ ಹೊಸ ರಾಜ್ಯ ಕಟ್ಟುವುದಕ್ಕೆ ಯೋಗ್ಯಮನುಷ್ಯನೆಂದು ನಿಶ್ಚಯಿಸುತ್ತಾರೆ. ವಿದ್ಯಾರಣ್ಯರು. ಅವರ ಲೋಕಕಲ್ಯಾಣ ಕಾರ್ಯ ದೊಡ್ಡದು."[೨೦]

ಒಳ್ಳೆಯ ಕಲ್ಪನೆಯಿಂದ ಕೂಡಿದ ಈ ನಾಟಕ ರಂಗರಂಜಕವಾದ ಗುಣದ ಅಭಾವ ಹಾಗೂ ಉದ್ದುದ್ದವಾದ ಸಂಭಾಷಣೆಗಳು, ನಾಟ್ಯಮಯ ಕೊರತೆಯಿಂದಾಗಿ ಲೋಕಕಲ್ಯಾಣದ ಉದಾತ್ತ ಸಂದೇಶವನ್ನು ಕೊಡುವ ಈ ನಾಟಕ ಚಾರಿತ್ರಿಕ ಸತ್ಯವನ್ನು ಹುಡುಕ ಹೊರಡುತ್ತದೆನ್ನುವ ಕಾರಣಕ್ಕಾಗಿ ಮಹತ್ವವನ್ನು ಪಡೆಯುತ್ತದೆ ಎಂದು ವಸಂತ ಕುಮಾರ ತಾಳ್ತಜೆಯವರು ಅಭಿಪ್ರಾಯಪಡುತ್ತಾರೆ. ಈ ಹೇಳಿಕೆಯನ್ನು ಒಪ್ಪಬಹುದಾಗಿದೆ. ಮಿಗಿಲಾಗಿ ಅಂದಿನ ಕಾಲಘಟ್ಟದ ರಾಜಕೀಯ, ಸಾಮಾಜಿಕ, ಆರ್ಥಿಕ ಅಂಶಗಳನ್ನು ತಿಳಿಸುವ ಈ ನಾಟಕವು ಯುದ್ಧದಲ್ಲಿ ಆಗುವಂತಹ ಅನಾಹುತಗಳು, ಸಾವು-ನೋವುಗಳಿಂದುಟಾಗುವ ರಾಣಿಯರ ಮನಸ್ಸಿನ ದುಗುಡಗಳು ಸಾಮಾನ್ಯ ಜನರ ಕರನಿರಾಕರಣೆ ಪದ್ಧತಿಯ ಅಂಶಗಳು ಮತ್ತು ಯುದ್ಧದ ಗೂಢಚಾರದಂತಹ ತಂತ್ರಗಾರಿಕೆ ನೈಪುಣ್ಯತೆಯುಳ್ಳ ಅಂಶಗಳನ್ನು ಚಾರಿತ್ರಿಕ ಹಿನ್ನೆಲೆಯಲ್ಲಿ ಕಟ್ಟಿಕೊಟ್ಟ ಕಾರಣಕ್ಕೆ ಈ ನಾಟಕವು ಮಹತ್ವ ಪಡೆಯುತ್ತದೆ.

'ಮನೋರಾಜ್ಯ'ವು ಮುಗಳಿ ಅವರು ರಚಿಸಿರುವ ಮೂರಂಕದ ಕಿರು ನಾಟಕವಾಗಿದೆ. ಅಂದಿನ ಕಾಲೇಜಿನ ವಿದ್ಯಾರ್ಥಿಗಳು, ಪ್ರಾಧ್ಯಾಪಕರು ಸೇರಿಕೊಂಡು ರಂಗಪ್ರಯೋಗ ಮಾಡಿರುವುದು ತಿಳಿದುಬರುತ್ತದೆ. ಮುಗಳಿ ಅವರು ಅಂದಿನ ಸಮಾಜದಲ್ಲಿ ಕಂಡುಬರುವ ಕೌಟುಂಬಿಕ ವಿಘಟನೆಯ ವಸ್ತುವನ್ನು ಕಥಾಹಂದರವನ್ನಾಗಿ ಮಾಡಿಕೊಂಡು ಈ ನಾಟಕವನ್ನು ರಚಿಸಿದ್ದಾರೆ. ದಿನನಿತ್ಯದ ಕೌಟುಂಬಿಕ ಜೀವನದಲ್ಲಿ ಅಣ್ಣತಮ್ಮಂದಿರ ಸ್ವಭಾವ ಅವರವರ ಮನೋಭಾವದ ಸ್ಥಿತ್ಯಂತರ ಕುರಿತು

ಈ ನಾಟಕ ತನ್ನ ವಿಷಯವನ್ನು ಅಭಿವ್ಯಕ್ತಪಡಿಸುತ್ತದೆ. ಈ ನಾಟಕವು ನಿರಾಶೆಯ ಪರಿಸ್ಥಿತಿಯಲ್ಲಿಯೂ ನಿಜವಾದ ಧ್ಯೇಯವಾದಿಯ ಆಶಾವಾದಕ್ಕೆ ಅವಕಾಶವಿದೆ ಎಂಬುದನ್ನು ಸಾಬೀತುಪಡಿಸುತ್ತದೆ.

ಮುಗಳಿ ಅವರು ರಚಿಸಿರುವ ಮನೋರಾಜ್ಯ ನಾಟಕದ ಪಾತ್ರಚಿತ್ರಣ ಈ ರೀತಿ ಇರುತ್ತದೆ. ಕನಕರಾಯ; ಹೊನ್ನಾಪುರದ ದೇಶಪಾಂಡೆ(ಹಿರಿಯಣ್ಣ), ಕೃಷ್ಣರಾಯ–ಹೊನ್ನಾಪುರದ ದೇಶಪಾಂಡೆ (ನಡುವಿನವ), ಧ್ರುವ– ಹೊನ್ನಾಪುರದ ದೇಶಪಾಂಡೆ(ಕೊನೆಯವ), ಶೇಷಣ್ಣ ಬಂಡೇರಾಯ, ಶಂಕರಗೌಡ– ಕನಕರಾಯನ ಗೆಳೆಯರು, ಹುಚ್ಚರಾಯ ಕೃಷ್ಣರಾಯನ ಹೆಂಡತಿಯ ತಮ್ಮ, ನಾರಾಯಣ– ಧ್ರುವನ ಗೆಳೆಯ, ಛತ್ರೆಪ್ಪ–ಕನಕರಾಯನ ಆಳು ಮನುಷ್ಯ, ಸ್ತ್ರೀ ಪಾತ್ರಗಳಲ್ಲಿ ಚಂಪಾಬಾಯಿ–ಕೃಷ್ಣರಾಯನ ಹೆಂಡತಿ, ಅಬ್ಬವ್ವ–ಕನಕರಾಯನ ಚಿಕ್ಕಮ್ಮ, ತಾರೆ–ಅಬ್ಬವ್ವನ ಸಾಕುಮಗಳು

ನಾಟಕದ ಒಂದನೇ ಅಂಕದ ಪ್ರವೇಶಿಕೆಯು ರಾತ್ರಿ ಎಂಟು ಗಂಟೆಗೆ ಪ್ರಾರಂಭವಾಗುತ್ತದೆ. ದೇಶಪಾಂಡೆ ತಮ್ಮಂದಿರಲ್ಲಿ ನಡುವಿನವನಾದ ಕೃಷ್ಣರಾಯನು ಲಗುಬಗೆಯಿಂದ ಪೆಟ್ಟಿಗೆ ಮುಂದೆ ಕುಳಿತು ಅದನ್ನು ತೆರೆದು, ಅದರಲ್ಲಿಯ ಒಂದು ಪತ್ರವನ್ನು ಲಕ್ಷ್ಯಪೂರ್ವಕವಾಗಿ ತನ್ನಲ್ಲಿಯೇ ಓದಿಕೊಳ್ಳುವನು. ಕೂಡಲೆ ಪೆಟ್ಟಿಗೆಯಿಂದ ತಿಜೋರಿಯ ಕೀಲಿಕೈಯ್ಯನ್ನು ಮೆಲ್ಲಗೆ ಹೊರತೆಗೆದು ಅದನ್ನು ಮುಚ್ಚಿ ಸರಕ್ಕನೆ ಎದ್ದು ನಾಲ್ಕು ಹೆಜ್ಜೆ ನಡೆದು ತಲೆಬಾಗಿಲ ಕಡೆ ನೋಡಿ ಅದಕ್ಕೆ ಚಿಲಕ ಹಾಕಿರುವುದರ ಬಗ್ಗೆ ಇಣುಕಿ ನೋಡಿ ಖಾತ್ರಿಪಡಿಸಿಕೊಳ್ಳುತ್ತಾನೆ. ಅಷ್ಟರಲ್ಲಿ ಅವನ ಹೆಂಡತಿ ಚಂಪಾಬಾಯಿ ಸಂಜೆಯ ಅಡಿಗೆಗೆಂದು ಮಡಿಯುಟ್ಟಿರುವಳು ಗಡಿಬಿಡಿಯಿಂದ ಬಂದು ನಡುಮನೆಯ ಬಾಗಿಲಲ್ಲಿ ನಿಲ್ಲುವ ಸಂದರ್ಭದಿಂದ ಮೊದಲ ಪ್ರವೇಶಿಕೆಯು ಪ್ರಾರಂಭಗೊಂಡು ಚಂಪಾಬಾಯಿ ಕೃಷ್ಣರಾಯರ ಹಾಗೂ ಕನಕರಾಯನ ಮಾತಿನ ಸಂಭಾಷಣೆ ನಡೆಯುವುದು. ಕನಕರಾಯನು ಶ್ರೀಮಂತ ಕುಟುಂಬದವನಾದರೂ ಮಾಡಿಕೊಂಡ ಇಬ್ಬರು ಹೆಂಡತಿಯರು ಸರಿಯಾದ ಸಂಸಾರ ಮಾಡದೆ ಮನೆಬಿಟ್ಟು ಹೋದವರಾಗಿರುತ್ತಾರೆ. ಇದನ್ನು ಅರಿತ ಅವನ ಚಿಕ್ಕಮ್ಮ ದೂರದೂರಿನಲ್ಲಿದ್ದ ಸಾಕು ಹುಡುಗಿಯಾದ ತಾರಾಳನ್ನು ಮದುವೆ ಮಾಡಲು ಹಾಗೂ ತನ್ನಲ್ಲಿದ್ದ ಆಸ್ತಿಪಾಸ್ತಿಯನ್ನು ತಾರಾಳ ಹೆಸರಿಗೆ ಬರೆದು, ಕನಕರಾಯನಿಗೆ ಮದುವೆ ಮಾಡಬೇಕೆಂದು ಯೋಚಿಸುತ್ತಾಳೆ. ಆದರೆ ಕನಕರಾಯನು ತಂದೆ ತಾಯಿ ಇಲ್ಲದ, ದಿಕ್ಕುದೆಸೆಯಿಲ್ಲದ ಹುಡುಗಿಯನ್ನು ಮದುವೆಯಾಗಲು ನಿರಾಕರಿಸುತ್ತಾನೆ. ಇಲ್ಲಿಗೆ ಮೊದಲ ಪ್ರವೇಶಿಕೆ ಮುಗಿಯುತ್ತದೆ.

ಎರಡನೆಯ ಪ್ರವೇಶಿಕೆಯಲ್ಲಿ ಶೇಷಣ್ಣ ಮತ್ತು ಕನಕರಾಯನ ನಡುವಿನ ಸಂಭಾಷಣೆಯು ದೇಸಿಯ ಸೊಗಡನ್ನೊಳಗೊಂಡ ಮಾತಿನ ಹಂದರದಲ್ಲಿರುವುದನ್ನು ನಾವು ಗಮನಿಸಬಹುದಾಗಿದೆ.

"ಶೇಷಣ್ಣ : ರಾಯರ ಬಂಡೇರಾಯನ ಮಾತೇನ ಕೇಳತೀರಿ? ನಿಮ್ಮ ಸಂಸಾರದ ಸುಖ ಕೆಡಸಬೇಕಂತ ಆ ಬ್ರಹ್ಮ ಬೇತು ಮಾಡಿದ್ದುದು, ಅವನ ಮ್ಯಾಲಿನ ಹಿರೇಬ್ರಹ್ಮ ನಾ ಇದ್ದೀನಿ ಅಂತ ತಿಳಕೋರಿ. ನಾ ಹೇಳಿದಂಗ ಕೇಳತೀರೇನು?

ಕನಕರಾಯ– ಕೇಳದೆ ಏನರಿ, ಶೇಷಣ್ಣ ಹೇಳು.

ಶೇಷಣ್ಣ : ನೋಡಿರಿ ರಾಯರ ಈ ಸಾರೆ ಕುಂಡಲಿ ಗಿಂಡಲಿ ಬರಾಬ್ಬರಿ ನೋಡಿ ಆಯುಷ್ಯ ಘಟ್ಟಿದ್ದ ಒಂದು ಭಾರೀ ಮನಿತನದ ಹೆಣ್ಣು ತಂದು ನಿಮ್ಮ ಸಂಸಾರದ ರಥಕ್ಕೆ ಹೂಡೋಣ ತಿಳೀತ, ನಿಮ್ಮ ಮದವಿಗಿದ ಅರೆನಾಕ್‌ಮಕ್ಕಳು ಮನಿ ತುಂಬಾ ಓಡ್ಯಾಡಲಿಕ್ಕೆ ಹತ್ತಿದವಂದರ, ಸ್ವರ್ಗ ಬ್ಯಾರೆ ಅಲ್ಲ ನಿಮ್ಮ ಮನಿ ಬ್ಯಾರೆ ಅಲ್ಲ"(ಪು.೪೦) ಎಂದು ಮದುವೆ ಮಾಡಿಕೊಳ್ಳುವಂತೆ ಶೇಷಣ್ಣ ಪ್ರೇರೇಪಿಸುವನು. ಈ ರೀತಿಯಾಗಿ ಸಾಮಾಜಿಕ ಕಳಕಳಿಯುಳ್ಳ ವಾಸ್ತವ ನೆಲೆಗಟ್ಟಿನಲ್ಲಿ ಮುಗಳಿ ಅವರ ಈ ನಾಟಕವನ್ನು ಅರಿಯಬಹುದಾಗಿದೆ.

ಕನಕರಾಯನ ಚಿಕ್ಕತಮ್ಮನಾದ ಧ್ರುವನು ಕೆಲಸ ಸಿಗದೆ ನಿರುದ್ಯೋಗಿಯಾಗಿ ಮನೆಯವರಿಂದ ಹೀಯಾಳಿಕೆ, ನಿಂದನೆಗೆ ಒಳಗಾಗುವ ಸಂದರ್ಭವನ್ನು ಈ ರೀತಿಯಾಗಿ ಅಭಿವ್ಯಕ್ತಿಸಲಾಗಿದೆ.

"ಧ್ರುವ : ಅದೇನ ಕೇಳತೀ ನಾರಾಯಣ? ನನ್ನ ತಲಿ ಕೆಟ್ಟು ಹೋಗೇದ.

ನಾರಾಯಣ : ಹಾ ನಿನ್ನಂಥ ಶಾಂತ ಮನಸ್ಯಾಂದೂ ತಲಿ ಕೆಟ್ಟೀತ? ಅಂತದೇನಾತಪ?

ಧ್ರುವ : ಆಗಬೇಕಾದ್ದೆಲ್ಲಾ ಆತು, ಮನ್ಯಾಗ ನಾ ಎಲ್ಲರಿಗೂ ಬ್ಯಾಡಾದೆ, ಮಾತುಮಾತಿಗೆ ನೌಕರಿ ಸಿಗದೆ ಮನಿ ಹಿಡಕೊಂಡು ಕೂತ ಬಿಕಾರಿ ಅಂತ ಎಲ್ಲಾರೂ ಹಂಗಿಸುವವರೇ. ನನ್ನ ಶಿಕ್ಷಣಕ್ಕೆ ಹತ್ತು ಸಾವಿರ ಹದಿನೈದು ಸಾವಿರ ಹಾಳಾತಂತ ಈಗ ನಾ ತಿಂಗಳಾ ಹತ್ತು ರೂಪಾಯಿ ಸಹಿತ ತರೋದಿಲ್ಲಂತ (ಪು.೪೬).

ಈ ರೀತಿಯಾಗಿ ಧ್ರುವನು ನಿರುದ್ಯೋಗದ ಸಮಸ್ಯೆಯನ್ನು ಹೆದರಿಸುವ ಸಂದರ್ಭ ಈ ಭಾಗದಲ್ಲಿದೆ. ಮುಗಳಿ ಅವರ ಕತೆ ಕಾದಂಬರಿಗಳಲ್ಲಿ ಹತಾಶವಾದ ನಿರುದ್ಯೋಗದ ಪಾತ್ರಗಳು ಹೆಚ್ಚೆಂದೇ ಹೇಳಬಹುದು. ಏಕೆಂದರೆ 'ಅನ್ನ' ಕಾದಂಬರಿಯಲ್ಲಿ ಅಮೃತ, 'ಬಾಳುರಿ'ಯಲ್ಲಿ ಜಗ್ಗಣ್ಣ, 'ಕಾರಣ ಪುರುಷ'ದಲ್ಲಿ ವಾಮಣ್ಣನ ಪಾತ್ರಗಳು ಬಹಳಷ್ಟು ಸಮಸ್ಯೆಗಳಿಂದ ಬಳಲಿದ ಪಾತ್ರಗಳೇ ಆಗಿವೆ ಇಲ್ಲಿಯೂ ಮನನೊಂದ ಧ್ರುವನು ಹಿರಿಯಣ್ಣನಾದ ಕನಕರಾಯನೊಂದಿಗೆ ಮಾತನಾಡುವ ಸಂದರ್ಭವು ಈ ರೀತಿ ಚಿತ್ರಿತವಾಗಿದೆ.

"ಧ್ರುವ : ನನಗೇನು ಮನೆಯ ಸ್ಥಿತಿಗತಿ ಗೊತ್ತಿಲ್ಲೆಂದು ನೀನು ಸಣ್ಣ ಕೂಸಿಗೆ ಆಡಿದಂತೆ ಆಡುತಿರುವಿ ಅಣ್ಣ.

ಕನಕರಾಯ : ಏನು ಗೊತ್ತದೋ ನಿನಗ ಏನಾಗೆದೆ ಅಂತಾದ್ದು?

ಧ್ರುವ : ಏನಾಗಬೇಕು ಎಲ್ಲಾ ಆಗಿಹೋಗಿದೆ. ದೇಶಪಾಂಡೆ ಅಂಬುವ ಹೆಸರಿನ ದೊಡ್ಡ ಜಂಬವೊಂದನ್ನು ಬಿಟ್ಟು ಮನೆಯಲ್ಲಿಯ ಯಷ್ಟೊತ್ತು ಹಾಳಾಗಲಿಕ್ಕೆ ಕೂತಿರುತ್ತಿ

ಕನಕರಾಯ : ದ್ರುವ್ಯಾ, ಹಿರೇರ ಅಂಜಿಕಿ ಅಂಬೋದ ಎಲ್ಲಾ ಬಿಟ್ಯಲ್ಲೋ! ಯಾರು ನಿನ್ನ ತಲ್ಯಾಗ ತುಂಬ್ಯಾರ ಇದನ್ನಾ?"(ಪು.೫೨)

ಅಣ್ಣ ಕನಕರಾಯ ಮತ್ತು ತಮ್ಮನಾದ ಧ್ರುವನ ನಡುವೆ ಮಾತಿನ ಜಟಾಪಟಿ, ಜಗಳದ ಸಂದರ್ಭವು ಇಲ್ಲಿ ತಿಳಿದುಬರುತ್ತದೆ. ನಿರುದ್ಯೋಗ ಸಮಸ್ಯೆಯಿಂದ ಬಳಲುವ ಶಾಂತ ಸ್ವಭಾವದ ಧ್ರುವನು ಹಿಯಾಳಿಕೆಯ ಮಾತುಗಳಿಗೆ ಮನನೊಂದು ರೇಗಾಡುವಂತದ್ದು ಗೆಳೆಯ ನಾರಾಯಣನಿಗೂ ಆಶ್ಚರ್ಯವೆನಿಸುತ್ತದೆ. ಲೇಖಕರಲ್ಲಿ ಕನ್ನಡ ನಾಡುನುಡಿಯ ಬಗ್ಗೆ ಇರುವ ಪ್ರೀತಿ ಮಮಕಾರವು ನಿರುದ್ಯೋಗಿಯಾದ ಧ್ರುವನ ಪಾತ್ರದ ಮೂಲಕ ಅಭಿವ್ಯಕ್ತಿಗೊಂಡಿರುವುದನ್ನು ನಾವಿಲ್ಲಿ ಕಾಣಬಹುದಾಗಿದೆ. ಅದು ಈ ರೀತಿಯಿದೆ.

"ಧ್ರುವ : ಯಾರು ಕೈಲಾಗದವರು? ಅಪ್ಪುಗೆ ಹಚ್ಚಿಗೊಂಡು ಕೊಡುವವರು ಮಾತ್ರ, ಕೇಳು ತಮ್ಮ ಶಕ್ತಿಯಿದ್ದಷ್ಟು ಯತ್ನದಿಂದ ಬೇರೆಯಾದ ನಾಡನ್ನು ಒಂದುಗೂಡಿಸಬೇಕು. ಕನ್ನಡದ ಪ್ರೀತಿಯನ್ನು, ಜ್ಞಾನವನ್ನು ಹೆಚ್ಚಿಸಬೇಕು. ಕನ್ನಡವೆಂದರೆ ಮಾತನಾಡಲು ನಾಚುವ, ಹೇಸುವ ಆತ್ಮಘಾತಕಿಗಳೂ ಕನ್ನಡವೆಂದರೆ ತುಚ್ಛವೆಂದು ಹೀಯಾಳಿಸುವ ಹೆರವರೂ ಕನ್ನಡನಾಡಿನ ಅನ್ನವನ್ನುಂಡು ಕೊಬ್ಬಿ ಮೆರೆಯುತ್ತಿರುವುದಕ್ಕಿಂತ ಹೆಚ್ಚಿನ ಅಣಕಾಟವೇನು ಕನ್ನಡ ತಾಯಿಗೆ?"(ಪು.೬೯) ಎಂಬ ಮಾತಿನ ಮೂಲಕ ತಮ್ಮ ಅನಿಸಿಕೆಯನ್ನು ಹೊರಹಾಕುವ ಲೇಖಕರು ಕನ್ನಡ ನಾಡಿನ ಬಗೆಗಿರುವ ಮಮಕಾರದ ಮಾತು ಇಲ್ಲಿ ಅಭಿವ್ಯಕ್ತಗೊಂಡಿದೆ. ಧ್ರುವನ ಪಾತ್ರವನ್ನು ಲೇಖಕರು ನಾಟಕೀಯವಾಗಿ ಬಳಸಿಕೊಂಡು ಕನ್ನಡಪರವಾದ ಕಾಳಜಿಯುಳ್ಳ ಮಾತುಗಳನ್ನಾಡಿದ್ದಾರೆ. ಕನ್ನಡ ನಾಡುನುಡಿಗೆ ಒಂದೇ ಸಮನೆ ಆಗುತ್ತಿರುವ ಆಘಾತವನ್ನು ಹತ್ತಿಕ್ಕಲೂ, ತಮ್ಮ ಸಂಸ್ಕೃತಿಯನ್ನು ಉಳಿಸಿ ಬೆಳೆಸಲೂ ನಾವು ಪ್ರಬಲವಾದ ಆಂದೋಲನವನ್ನು ಹೂಡಬೇಕಾಗಿದೆ. ಹಳ್ಳಿ ಹಳ್ಳಿಗೆ ಕನ್ನಡ ಪ್ರಚಾರ ಕೈಗೊಳ್ಳಬೇಕು. ಶಾಲೆ, ವಾಚನಾಲಯ, ಕಾವ್ಯವಾಚನ ಮುಂತಾದ ಚಟುವಟಿಕೆಗಳಿಂದ ಕನ್ನಡಿಗರಿಗೆ ಸತ್ವಜ್ಞಾನವು ಆಗುವಂತೆ ಸತತವಾಗಿ ದುಡಿಯಬೇಕು. ಯಾರೇ ಬರಲಿ ಬರದಿರಲಿ, ನಾನೊಬ್ಬನಾದರೂ ನನ್ನ ಕರ್ತವ್ಯವನ್ನು ಕೊನೆಯವರೆಗೂ ಮಾಡುತ್ತೇನೆಂದು ಧ್ರುವನ ಮಾತಿನ ಮೂಲಕ ತಿಳಿಸುವ ಮುಗಳಿ ಅವರು ಈ ಪಟ್ಟಣದಂತೆ ಅನೇಕ ಕಡೆಗೆ ಕನ್ನಡಿಗರು ಅಲಕ್ಷ್ಯದಿಂದ ಪರಕೀಯರು ಮಾಡುತ್ತಿರುವ ದಾಳಿಯನ್ನು ತಡೆಗಟ್ಟಿ ಕನ್ನಡದ ಬಾವುಟವನ್ನು ಮೇಲೆತ್ತಿ ಹಿಡಿದು ಮೆರೆಸಬೇಕು' ಎಂಬ ಮನದಾಳದ ಇಂಗಿತವನ್ನು ಧ್ರುವನ ಮಾತುಗಳಲ್ಲಿ ಸ್ವಾತಂತ್ರ್ಯ ಕಾಲಘಟ್ಟದಲ್ಲಿ ಕನ್ನಡಪರವಾದ ಕಾಳಜಿ ನಾಡುನುಡಿಯ ಚಿಂತನೆ ಬಗ್ಗೆ ಶ್ರಮಿಸಿರುವುದು ತಿಳಿದುಬರುತ್ತದೆ.

ನಾಟಕದ ಕೊನೆಯ ಭಾಗದಲ್ಲಿ ಅಣ್ಣತಮ್ಮರ ಮನಸ್ತಾಪಗಳು ಹೆಚ್ಚಾಗಿ ಬೇರೆಬೇರೆಯಾಗಿ ಹೊಲಮನೆ ಹಂಚಿಕೊಂಡು ತಮ್ಮಿಚ್ಛೆಯಂತೆ ಬದುಕಲು ಮುಂದಾಗುತ್ತಾರೆ. ಇತ್ತ ಧ್ರುವನು ತನ್ನ ಊರನ್ನು ಬಿಟ್ಟು ದೂರದ ಚಿಕ್ಕಮ್ಮಳಾದ ಅಬ್ಬಕ್ಕಳ ಊರಿಗೆ ಹೋಗಿ ಅಲ್ಲಿಯೇ ಇದ್ದುಕೊಂಡು, ಸಾಕು ಮಗಳಾದ ತಾರಾಳ ಪ್ರೀತಿಗೆ ಪಾತ್ರನಾಗುತ್ತಾನೆ. ಅದೇ ವೇಳೆಗೆ ಇತ್ತ ಕನಕರಾಯನು ಅಬ್ಬಕ್ಕಳ

ಮನೆಗೆ ಬರುತ್ತಾನೆ. ನೀನು ಹಿಂದೆ ಹೇಳಿದಂತೆ ನನ್ನನ್ನು ದತ್ತಕ್ಕೆ ತೆಗೆದುಕೊಂಡು ನಿನ್ನ ಆಸ್ತಿಯನ್ನು ನನಗೆ ಮಾಡುವುದಾಗಿ ತಿಳಿಸಿದ್ದಿ ಎಂದು ತಾರಾಳನ್ನು ಮದುವೆಯಾಗುವುದಾಗಿ ನಯವಿನಯದಿಂದ ತಿಳಿಸುತ್ತಾನೆ. ಆದರೆ ಕನಕರಾಯನ ಕಪಟತನದ ಬುದ್ಧಿ ತಿಳಿದಿದ್ದ ಅಬ್ಬಕ್ಕ ಅವನ ಮಾತನ್ನು ಒಪ್ಪುವುದಿಲ್ಲ. ಇದರಿಂದ ಕೋಪಗೊಂಡ ಕನಕರಾಯ ನಿನ್ನೆಲ್ಲಾ ಆಸ್ತಿಗೆ ನಾನೇ ಜವಾಬ್ದಾರ, ಏಕೆಂದರೆ ಹಿಂದೆ ನೀನೆ ಸಹಿ ಮಾಡಿರುವ (ನಕಲು)ಪ್ರತಿಯನ್ನು ತೋರಿಸುತ್ತಾನೆ. ಅದನ್ನು ನೋಡಿದ ಅಬ್ಬಕ್ಕ ಕುಸಿದುಬೀಳುತ್ತಾಳೆ. ಈ ವಿಷಯವನ್ನು ಧ್ರುವನಿಗೆ ತಿಳಿಸುತ್ತಾಳೆ. ಕೊನೆಯಲ್ಲಿ ಕನಕರಾಯನು ಮಾಡಿರುವುದು ಕಪಟತನವೆಂದು ಎಲ್ಲರಿಗೂ ಗೊತ್ತಾಗುತ್ತದೆ. ಅಬ್ಬಕ್ಕ ಗುಣವಂತನಾದ ದ್ರುವನಿಗೆ ತಾರಾಳನ್ನು ಕೊಟ್ಟು ಮದುವೆ ಮಾಡುವುದಾಗಿ ಮತ್ತು ತನ್ನ ಆಸ್ತಿಯನ್ನು ದ್ರುವನಿಗೆ ಕೊಡುವುದಾಗಿ ತಿಳಿಸಿ, ಎಲ್ಲರ ಸಮ್ಮುಖದಲ್ಲಿ ವಿಜೃಂಭಣೆಯಿಂದ ಧ್ರುವ ತಾರಾಳ ಮದುವೆಯನ್ನು ಮಾಡಿ ಮುಗಿಸುತ್ತಾಳೆ. ಇಲ್ಲಿಗೆ ನಾಟಕ ಮುಗಿಯುತ್ತದೆ.

ಈ ನಾಟಕದ ಆಶಯವು ಕೌಟುಂಬಿಕ ವೃತ್ತಾಂತ ಒಳಗೊಂಡ ವಿಷಯ ವಸ್ತುವಾಗಿದೆ. ಕುಟುಂಬದಲ್ಲಿ ಅಣ್ಣತಮ್ಮಂದಿರ ಸ್ವಭಾವ ಚಿತ್ರಣ ಒಳಗೊಂಡಂತೆ ತಾವು ಮಾಡುವ ವೃತ್ತಿಗಳು ಬೇರೆಯಾದರೆ ಅವರು ಹೇಗೆ ವಿಂಗಡನೆ ಹೊಂದಲು ಮುಂದಾಗುತ್ತಾರೆಂಬುದರ ಬಗ್ಗೆ ಈ ನಾಟಕದಲ್ಲಿ ತಿಳಿಸುತ್ತಾರೆ. ಸಂಯಮ, ತಾಳ್ಮೆ, ಸಹಕಾರದಂತಹ ಸರಿಯಾದ ಮಾರ್ಗವನ್ನು ಅನುಸರಿಸಿದರೆ ಸಮಾಜದಲ್ಲಿ ಒಳ್ಳೆಯ ಆದರ್ಶಪ್ರಜೆಯಾಗಿ ಬಾಳಲು ಸಾಧ್ಯವೆನ್ನುವ ಮಾತನ್ನು ಮುಗಳಿ ಅವರು ಧ್ರುವನ ಪಾತ್ರದ ಮೂಲಕ ಅಭಿವ್ಯಕ್ತಿಸಿದ್ದಾರೆ.

'ಧನಂಜಯ' ಮುಗಳಿ ಅವರು ರಚಿಸಿರುವ ಸಾಮಾಜಿಕ ನಾಟಕವಾಗಿದೆ. ತಂದೆಯ ಪಾತ್ರದಲ್ಲಿ ಕಂದಾಯಾಧಿಕಾರಿಯಾದ ಧನಂಜಯರು ಕಂಡುಬಂದರೆ, ಮಕ್ಕಳ ಪಾತ್ರದಲ್ಲಿ ಸುಧೀರ ನಿರುದ್ಯೋಗಿಯಾಗಿ, ಕಿರಿಯ ಮಗಳಾದ ಶೋಭಾ ಆಧುನಿಕ ಬದುಕಿಗೆ ತೀರಾ ಹತ್ತಿರದ ಪಾತ್ರವೆನಿಸುತ್ತದೆ. ಬಿ.ಎ. ಓದುತ್ತಿರುವ ಅವಳದು ಮೋಜು ಮಸ್ತಿ, ಡೌಲಿನ ರೀತಿಯ ವೈಯ್ಯಾರದ ಬದುಕು. ಎರಡನೇ ಮಗಳಾದ 'ಸರಳಾ'ಳ ಪಾತ್ರವು ಆದರ್ಶಮಯವಾಗಿ ಚಿತ್ರಿತಗೊಂಡಿದೆ. 'ಪರಸು' ಮನೆಯ ನಿಷ್ಠೆಯ ಕೆಲಸದಾಳು. ಘನಶ್ಯಾಮ ಭರಮೇಗೌಡ(ಧನಂಜಯರ ಕೆಲಸದ ನಿಮಿತ್ತ ಒಂದು ಸಾರಿ ಬಂದು ಹೋಗುವ ಪಾತ್ರ), ಪಾರ್ಥಸಾರಥಿ ಧನಂಜಯರ ಆಪ್ತಸ್ನೇಹಿತ, ಇವಿಷ್ಟು ಪಾತ್ರಗಳೊಳಗೆ ಈ ನಾಟಕವು ಮೂಡಿಬಂದಿದೆ.

ಧನಂಜಯ ಅವರ ಕಿರಿಯ ಮಗಳು ಶೋಭಾ ಆಗತಾನೆ ಬಿ.ಎ. ಪರೀಕ್ಷೆಯನ್ನು ಮುಗಿಸಿಕೊಂಡು ಮನೆಗೆ ಬರುವ ಸಂದರ್ಭದಿಂದಲೇ ನಾಟಕ ಪ್ರಾರಂಭವಾಗುತ್ತದೆ. ಅಕ್ಕತಂಗಿಯರ ಕುಶಲೋಪರಿಯ ವಿಚಾರವಾಗಿ ಹಾಗೂ ಆಲಂಕಾರಿಕ ವಸ್ತುಗಳ ಬಗ್ಗೆ ಸಂಭಾಷಣೆ ಈ ಭಾಗದಲ್ಲಿ ನಡೆಯುತ್ತದೆ. ಅದು ಈ ರೀತಿಯಿದೆ.

"ಸರಳಾ : ಕೈಯಾಗ ಇವಿಷ್ಟು ಹಸಿರು ಬಳೀನ ಸಾಲಕ ಒಂದರ ಹಿಂದೊಂದು! ಬಳಿಗಾರ ಅಂಗಡಿಯವ ನಿನಗೇನಾರ ಟ್ರಾವಲಿಂಗ ಏಜಂಟಂತ ಮಾಡಿ ಕಳಿಸ್ಯಾನೋ ಏನೋ!

ಶೋಭಾ : ಹೂಂ ಕಳಿಸ್ಯಾನ! ನೀ ಇಷ್ಟಾ ತಗೋತಿಯೇನು?(ಬಳಿಯ ಮೇಲೆ ಕೈಯಾಡಿಸುತ್ತ ಒಯ್ಯಾರದಿಂದ) ಇದೊಂದು ಹೊಸ ಕಾಲೇಜು ಹುಡುಗಿಯರೊಳಗೆ ಹಿಂಗ್ಯ?(ಕಿವಿಯ ಕಡೆಗೆ ನೋಡಿ) ಮತ್ತ ಇದು ಕಿವ್ಯಾಗ ತೂಗ್ಯಾಡೋ ಕಾಜಿನಹಂಡೆ

ಶೋಭಾ : (ಕಿವಿಗೆ ಕೈಹಚ್ಚಿ) ಇದು ಇಯರ್‍ರಿಂಗದ ಲೇಟೆಷ್ಟ್ ಫ್ಯಾಶನ್ನು!"(ಪು.೪)

ಈ ರೀತಿಯ ಅಕ್ಕ-ತಂಗಿಯರ ಸಂಭಾಷಣೆಯಲ್ಲಿ ಅಂದಿನ ಸ್ತ್ರೀ ವಸ್ತ್ರಾಭರಣಗಳ ಬಗ್ಗೆ ವಿವರಿಸಲಾಗಿದೆ. ಹಾಗೆ ನಾಟಕ ಕಥಾಂಶವು ಮುಂದುವರಿದು ಧನಂಜಯರ ಮನೆಯ ಅಪ್ಪ ಮಕ್ಕಳ ಸಂಭಾಷಣೆಯಲ್ಲಿಯೇ ಒಂದನೇ ಅಂಕಕ್ಕೆ ತೆರೆಬೀಳುತ್ತದೆ.

ಎರಡನೇ ಅಂಕದಲ್ಲಿ ಕಂದಾಯಾಧಿಕಾರಿಯಾದ ಧನಂಜಯರ ಮನೆಗೆ ಬಂದ ಘನಶ್ಯಾಮ, ಭರಮೇಗೌಡರು ಊರಿನಲ್ಲಿ ಬಣವೆಗೆ ಬೆಂಕಿಬಿದ್ದ ವಿಚಾರ ಕುರಿತು ಸಂಭಾಷಣೆ ನಡೆಸುತ್ತಾರೆ. ಇವರು ಧನಂಜಯರಿಗೆ ಲಂಚದ ಆಮಿಷ ತೋರಿಸಿ ಜೈಲಿಗೆ ಕಳಿಸುವಂತೆ ಪಿತೂರಿ ನಡೆಸುತ್ತಾರೆ. ಇತ್ತ ಅದೇ ವೇಳೆಯಲ್ಲಿಯೇ ಮನೆಯಲ್ಲಿ ಬೆಲೆಬಾಳುವ ಚಿನ್ನದ ಸರಿಗೆ ಕಳ್ಳತನವಾಗಿರುವ ವಿಚಾರ ಧನಂಜಯರಿಗೆ ನುಂಗಲಾರದ ತುತ್ತಾಗುತ್ತದೆ. ಆ ಚಿನ್ನದ ಸರಿಗೆಯನ್ನು ಯಾರು ಕಳ್ಳತನ ಮಾಡಿರುವುದು! ಗೊತ್ತಾಗದೆ ಇದ್ದಾಗ ಅನುಮಾನದ ಹುತ್ತ ಮನೆಗೆಲಸ ಮಾಡುವ 'ಪರಸು' ಮೇಲೆ ಬೆಳೆದು ಕಳ್ಳತನದ ಆಪಾದನೆ ಹೊರಿಸಲಾಗುತ್ತದೆ. ದುಃಖತಪ್ತನಾದ ಪರಸು ಚಿನ್ನದ ಸರಿಗೆ ನಾನು ತೆಗೆದುಕೊಂಡಿಲ್ಲವೆಂದು ಧನಂಜಯರಿಗೆ ಪರಿಪರಿಯಾಗಿ ತಿಳಿಸುವ ಸಂದರ್ಭ ಈ ರೀತಿ ಚಿತ್ರಿತವಾಗಿದೆ.

"ಪರಸು : ಈಟು ವರ್ಸ ಈ ಮನ್ಯಾಗ ಇಮಾನೀತಿ ನೌಕರಿ ಮಾಡಿದೆ. ತೆಳಗ ಬಿದ್ದ ಒಂದು ರೊಟ್ಟಿಚೂರು ಸೈತ ತಗೊಂಡಿಲ್ಲರಿ.

ಧನಂಜಯ : ಅಂತ ಹೇಳೇ ಈಗ ದೊಡ್ಡ ಸಾಮಾನು ತಗೊಂಡುಬಿಟ್ಟೆಲ್ಲ! ಹೊರಡು ನೀ ಇಲ್ಲಿಂದ, ನನಗ ನಿನ್ನ ಮುಸಡಿ ತೋರಿಸಬ್ಯಾಡ. ತಾ ಕಳವು ಮಾಡಿದ್ದಲ್ಲದ ಮತ್ತ ಮಂದೀಮ್ಯಾಲೆ ಹಾಕಲಿಕ್ಕೆ ಬರತಾನ, ಊರ ಲಫಂಗ" (ಪು.೪೬) ಎಂದು ಹರಿಹಾಯುವುದುಂಟು. ಮನೆಯ ಒಡೆಯ ಹದಿನಾರು ತೊಲ ಚಿನ್ನದ ಸರಿಗೆ ಕಳೆದುಕೊಂಡು ಸಿಟ್ಟಿನಿಂದ ಪರಸುನನ್ನು ತೀಕ್ಷ್ಣವಾಗಿ ಬೈದದ್ದಕ್ಕೆ ಮನನೊಂದ ಪರಸು ಮನೆಬಿಟ್ಟು ಹೋಗುವ ಸಂದರ್ಭ ಬರುತ್ತದೆ.

ಈ ಮೂರಂಕ ನಾಟಕದ ಕೊನೆಯ ಭಾಗದಲ್ಲಿ ಕಂದಾಯಾಧಿಕಾರಿಯಾದ ಧನಂಜಯರು ಲಂಚಗುಳಿತನ ಆರೋಪಕ್ಕೆ ಒಳಗಾಗುತ್ತಾರೆ. ಜನರಿಂದ ಲಂಚ ಪಡೆಯುತ್ತಿದ್ದ ಈ ಕಂದಾಯಾಧಿಕಾರಿಯನ್ನು ಜೈಲಿಗೆ ಕಳುಹಿಸಬೇಕೆಂಬ ತೆರೆಮರೆಯ ಕಸರತ್ತುಗಳು ಇನ್ನೊಂದೆಡೆ ನಡೆಯುತ್ತವೆ. ಈ ವಿಷಯ ತಿಳಿದ ಧನಂಜಯರು ಜರ್ಜರಿತರಾಗುತ್ತಾರೆ. ಇತ್ತ ಚಾಣಾಕ್ಷನಾದ

ಮಗ ಸುಧೀರನು ದಾವೆ ಹೂಡಲಿದ್ದ ಭರಮೇಗೌಡ, ಘನಶ್ಯಾಮರ ಮನವೊಲಿಸಿ ತಂದೆಗೆ ಮೊದಲು ಕೊಟ್ಟ ಹಣದೊಂದಿಗೆ ಇನ್ನೂ ಐದುನೂರು ರೂಪಾಯಿಗಳನ್ನು ಸೇರಿಸಿ ಅವರು ದಾವೆ ಹೂಡುವ ಮೊದಲೇ ರಾಜಿ ಮಾಡಿಕೊಳ್ಳುತ್ತಾನೆ.

ಇತ್ತ ಧನಂಜಯರು ತಲೆತಗ್ಗಿಸುವ ಕೆಲಸ ನಡೆಯಿತಲ್ಲಾ ಎಂದು ಮನೆಯಲ್ಲಿಯೇ ಊಟ ನೀರು ಬಿಟ್ಟು ಅಸ್ವಸ್ಥರಾಗುತ್ತಾರೆ. ಅಪ್ಪನ ಪರಿಸ್ಥಿತಿಯನ್ನು ಕಂಡು ಮಕ್ಕಳು ದುಃಖಿತರಾಗುತ್ತಾರೆ. ಸ್ವಲ್ಪ ಹೊತ್ತಿನ ನಂತರ ಸುಧೀರನು ಅಪ್ಪನಿಗೆ ರಾಜಿ ಮಾಡಿಕೊಂಡ ಸಿಹಿಸುದ್ದಿಯನ್ನು ತಿಳಿಸುತ್ತಾನೆ. ಅವರೊಂದಿಗೆ ರಾಜಿ ಮಾಡಿಕೊಳ್ಳಲು ಇಷ್ಟೊಂದು ಹಣ ಯಾರು ಕೊಟ್ಟರು? ಎಂದು ತಂದೆ ಕೇಳಿದಾಗ ಮಗನಿಂದ ನಿಜಸತ್ಯ ಹೊರಬೀಳುತ್ತದೆ. ಮನೆಯಲ್ಲಿದ್ದ ಚಿನ್ನದ ಸರಿಗೆಯನ್ನು ನಾನೆ ತೆಗೆದುಕೊಂಡು ಹದಿನೇಳುನೂರು ರೂಪಾಯಿಗಳಿಗೆ ಒತ್ತೆಯಿಟ್ಟು ಅದರಲ್ಲಿ ಎರಡುನೂರು ರೂಪಾಯಿ ಬಟ್ಟೆಗಳನ್ನು ತೆಗೆದುಕೊಂಡು ಉಳಿದ ಹಣವನ್ನು ನನ್ನ ಹತ್ತಿರ ಇಟ್ಟುಕೊಂಡಿರುವುದಾಗಿ ಅದು ಈಗ ಉಪಯೋಗಕ್ಕೆ ಬಂದಿತೆಂದು ತಿಳಿಸುತ್ತಾನೆ.

ಧನಂಜಯ ನಿಟ್ಟುಸಿರು ಬಿಡುತ್ತಾ ಚಿನ್ನದ ಸರಿಗೆ ಸಿಕ್ಕಿತಲ್ಲಾ ಮತ್ತು ಸಮಾಜದೆದುರು ತಲೆತಗ್ಗಿಸುವ ಕೆಲಸದಿಂದ ಮಗ ಸುಧೀರ ಕಾಪಾಡಿದಕ್ಕಾಗಿ ಆನಂದದಿಂದ ಭಾವುಕರಾಗಿ, ಇನ್ನುಮುಂದೆ ಯಾವುದೇ ರೀತಿಯ ಲಂಚಗುಳಿತನ ಮಾಡುವುದಿಲ್ಲವೆಂಬ ಆಶ್ವಾಸನೆ ಕೊಡುತ್ತಾ ಕಳ್ಳತನದ ಆಪಾದನೆಗೆ ಒಳಗಾಗಿದ್ದ ದನಂಜಯ ಅವರು ಪರಸುನನ್ನು ಮನೆಗೆ ಕರೆಯಿಸಿ ನನ್ನನ್ನು ಕ್ಷಮಿಸೆಂದು ಕೇಳಿಕೊಂಡು ಮತ್ತೆ ಮನೆಕೆಲಸಕ್ಕೆ ಸೇರಿಸಿಕೊಳ್ಳುವರು. ನಾಟಕದ ಕೊನೆಯ ಭಾಗದಲ್ಲಿ ಧನಂಜಯರ ಕೌಟುಂಬಿಕ ಸಾಮರಸ್ಯದ ಚಿತ್ರಣ ಮೂಡಿಬಂದು ತೆರೆ ಬೀಳುತ್ತದೆ.

ಈ ನಾಟಕದ ಮುಖ್ಯ ಆಶಯವು ಮಧ್ಯಮವರ್ಗದ ಮನೆತನಗಳಲ್ಲಿ ತಲೆದೋರಿರುವ ನೈತಿಕ ಮತ್ತು ಆರ್ಥಿಕ ಬಿಕ್ಕಟ್ಟುಗಳು, ಮಕ್ಕಳು ಹೊಸಜೀವನ ಶೈಲಿಗೆ ಹೇಗೆ ಹೊಂದಿಕೊಳ್ಳುತ್ತಾರೆಂಬುದು ತಿಳಿದುಬರುತ್ತದೆ. 'ಬೇಲಿಯೇ ಎದ್ದು ಹೊಲ ಮೇದ' ರೀತಿಯಲ್ಲಿ ಕಂದಾಯ ಅಧಿಕಾರಿಯಾದ ಧನಂಜಯರೇ ಲಂಚಗುಳಿತನಕ್ಕೆ ಒಳಗಾಗಿ ತುಂಬಾ ಅಪಮಾನ, ಮುಜುಗರಕ್ಕೆ ಒಳಗಾಗುತ್ತಾರೆ. ನಂತರ ತಮ್ಮ ತಪ್ಪಿನ ಅರಿವಾಗಿ ಇನ್ನು ಮುಂದೆ ಯಾವತ್ತೂ ಲಂಚ ಸ್ವೀಕರಿಸುವುದಿಲ್ಲ ಎಂದು ಪ್ರತಿಜ್ಞೆ ಮಾಡುತ್ತಾರೆ. ಅದೇ ರೀತಿಯಾಗಿ ಧನಂಜಯ ಪಾತ್ರದ ಮೂಲಕ ಅಂದಿನ ಅಧಿಕಾರಿಗಳ ಭ್ರಷ್ಟಾಚಾರ, ಲಂಚಗುಳಿತನ, ಮೋಸ, ಕಪಟತನಗಳಂತಹ ಅಂಶಗಳೊಂದಿಗೆ ಅಂದಿನ ಸಮಾಜದ ಸ್ಥಿತಿಗತಿಗಳನ್ನು ಈ ನಾಟಕದ ಮೂಲಕ ಕಂಡುಕೊಳ್ಳಲಾಗಿದೆ.

'ಅಪೂರ್ವ' ಏಕಾಂಕ ನಾಟಕ ಸಂಕಲನದಲ್ಲಿ ಸೋಗಿನ ಸ್ತರಗಳು, ನಕ್ ನಕ್ ಸತ್ತು, ಪಂಚಶೀಲ ನಾಟಕಗಳನ್ನು ಒಳಗೊಂಡಿದೆ. ಅದರಲ್ಲಿ 'ಸೋಗಿನ ಸ್ತರಗಳು' ಚಿಕ್ಕ ಏಕಾಂಕ ನಾಟಕದಲ್ಲಿ ಮಿರಿಂಜೆ ಎಂಬ ಚಿಕ್ಕ ಸಂಸ್ಥಾನವನ್ನು ಕಲ್ಪಿಸಿಕೊಂಡು ಮಹಾರಾಜ, ಮಹಾರಾಣಿ, ಯುವರಾಜ, ಆಪ್ತಕಾರ್ಯದರ್ಶಿ ಮತ್ತು ಜವಾನ ಇತ್ಯಾದಿ ಪಾತ್ರಗಳ ಮೂಲಕ ಹೆಣೆದ

ನಾಟಕವಾಗಿದೆ. ಹಿಂದಿನ ಚಾರಿತ್ರಿಕ ಇತಿಹಾಸವನ್ನು ತಿಳಿಯುವುದರ ಜೊತೆಜೊತೆಗೆ ಇಂದಿನ ಸಾಮಾಜಿಕ ಸ್ಥಿತಿಗತಿಗಳ ಬಗ್ಗೆಯೂ ಈ ನಾಟಕದಲ್ಲಿ ಮುಗಳಿ ಅವರು ಚರ್ಚಿಸಲು ಮುಂದಾಗಿದ್ದಾರೆನ್ನುವುದು ತಿಳಿದುಬರುತ್ತದೆ.

ಮಿರಿಂಜೆ ಸಂಸ್ಥಾನದ 'ತ್ರಿಭುವನ ಕೀರ್ತಿ' ಮಹಾರಾಜರ ಆಡಳಿತದ ಅವಧಿಯಲ್ಲಿ ನಡೆದಂತೆ ಚಿತ್ರಿಸಿದ್ದಾರೆ. ನಾಟಕದ ಮೊದಲ ಪ್ರವೇಶಿಕೆಯಲ್ಲಿ ಆಪ್ತಕಾರ್ಯದರ್ಶಿ ಮತ್ತು ದಿವಾನರ ನಡುವಿನ ಸಂಭಾಷಣೆ ಬರುತ್ತದೆ. ಮುಗಳಿ ಅವರು ಈ ನಾಟಕದ ಮೂಲಕ ಹೊಸಪ್ರಯೋಗ ಕಂಡುಕೊಂಡಿರುವುದನ್ನು ತಿಳಿಯಲಾಗಿದೆ. ಇಲ್ಲಿ ಪಾತ್ರಗಳು ಮೂಲ ಸನ್ನಿವೇಶವನ್ನು ಕೈಬಿಟ್ಟು ನಡುನಡುವೆ ತಮ್ಮ ಮನೆಯ ಶೋಚನೀಯ ಸ್ಥಿತಿಗತಿಗಳ ಬಗ್ಗೆ ಮಾತನಾಡುವುದನ್ನು ಗಮನಿಸಬಹುದಾಗಿದೆ. ಅಂದಿನ ವೃತ್ತಿರಂಗದ ನಾಟಕದ ಮಾಲೀಕರು ಕಲಾವಿದರಿಗೆ ಸರಿಯಾದ ವೇಳೆಯಲ್ಲಿ ಹಣ ಕೊಡದಿರುವ ಬಗ್ಗೆ ನಾಟಕದ ಪಾತ್ರಗಳು ಸಂದರ್ಭಕ್ಕೆ ತಕ್ಕಂತೆ ತಮ್ಮ ಸಂವೇದನೆ ಹಂಚಿಕೊಂಡಿರುವುದನ್ನು ಗಮನಿಸಬಹುದಾಗಿದೆ. ಮಹಾರಾಣಿ ಎಂಬ ಪ್ರಮುಖ ಪಾತ್ರವು "ನಾ ಸಾಯ್ತೀನಿ, ಕೆಂಡದಂತ ಉರಿ ಬಂದ ಕೂಸಿನ್ನ ಮನ್ಯಾಗ ಬಿಟ್ಟಕ್ಯಾಸ ಬಂದೀನಿ ಔಸದಕ್ಕ ಕಾಸಿಲ್ಲ"!

ಯುವರಾಜ : ಏನಾಯಿತು? ಏನಮ್ಮ ನೀ ಹೇಳುವುದು?

ಮಹಾರಾಣಿ : ನಾ ನಾಟಕದ ಮಹಾರಾಣಿ ಮೂರು ತಿಂಗಳಾತು ಈ ನಾಟಕ ಕಂಪನಿ ಮಾಲಕ ಪಗಾರ ಕೊಟ್ಟಿಲ್ಲ."(ಪು.೧೪) ಎಂಬ ಮಾತಿಗೆ ಪ್ರೇಕ್ಷಕರಿಂದ ಗುಜುಗುಜು ಗದ್ದಲ ಕೇಳಿಬರುತ್ತದೆ.

ನಾಟಕದ ಮೂಲವಸ್ತುವು ಮಹಾರಾಜ-ಮಹಾರಾಣಿ ಮಗ ಯುವರಾಜರ ಸುತ್ತ ಹೆಣೆದಿರುವ ನಾಟಕದ ಕಥಾವಸ್ತುವಾಗಿದೆ. ಮಹಾರಾಜ ಮಹಾರಾಣಿಯರು ಮಗನಿಗೊಂದು ಉತ್ತಮವಾದ ಕನ್ಯೆಯನ್ನು ನೋಡಿ ಮದುವೆ ಮಾಡಬೇಕೆಂಬ ಉದ್ದೇಶ ಹೊಂದಿರುತ್ತಾರೆ. ಆದರೆ ಯುವರಾಜ ಸಾಮ್ರಾಜ್ಯಶಾಹಿ ಆಳ್ವಿಕೆಯನ್ನು ನಿರಾಕರಿಸಿ ಆದರ್ಶ ವ್ಯಕ್ತಿಯಂತೆ ಸಮಾಜದಲ್ಲಿ ಬದುಕಲು ತಮ್ಮ ಅರಮನೆಯ ಜವಾನನ ಮಗಳನ್ನು ಮದುವೆಯಾಗುವುದಾಗಿ ತಿಳಿಸುವ ವೃತ್ತಾಂತವನ್ನು ಒಳಗೊಂಡಿದೆ.

ಮಹಾರಾಣಿಯ ಪಾತ್ರದವಳು ನಾಟಕ ಪ್ರಯೋಗಗೊಂಡ ಸಂದರ್ಭದಲ್ಲಿಯೇ ದುಃಖತಪ್ತಳಾಗಿ ನಾಟಕದ ಮೂಲ ಮಾತನ್ನು ಬಿಟ್ಟು, "ಗಂಡ ಕುಡುದು ಕುಡುದು ಹೊಡೆದು ಬಡೆದು ಹೊರ ಹಾಕಿದ ಮೊಲಿಗೂಸು ಕಟ್ಟಿಕೊಂಡು ಹೊರಬಿದ್ದೆ ನೋಡಾಕ ಬೇಸಿದ್ದೀನಿ ಅಂತ ಈ ಕಂಪನ್ಯಾಗ ಹೊಕ್ಕೆ, ಏನೇನೋ ಪಾರ್ಟ ಮಾಡಿದೆ, ಹೊಟ್ಟೀಕಾಲಾಗ ಮತ್ತ ಮಾರಾಣಿಯೂ ಆದೆ, ಮಾಲಕನ ಕಣ್ಣಿಗೆ ಬಿದ್ದೆಯಪ್ಪಾ ನನ್ನ ಮರ್ಯಾದಿನೂ ಹೋತು. ಇದ್ದೊಂದು ಕೂಸೂ ಹೋತು. ಸಾಕಪ್ಪೋ ಈ ಗೋಳು ಸಾಕು ನಾ ಸಾಯತೀನಿ"(ಪು.೪೦) ಎಂಬ ಮಹಾರಾಣಿಯ ಮಾತಿನ ಉದ್ಗಾರದಿಂದ ನಾಟಕ ಕೊನೆಗೊಳ್ಳುತ್ತದೆ. ಈ ನಾಟಕವು ಕಂಪನಿ ನಾಟಕಗಳ ಜವಾಬ್ದಾರಿ ಹೊತ್ತ ಕೆಲವು ಮಾಲೀಕರು ಕಲಾವಿದರನ್ನು ಹೇಗೆ ನಡೆಸಿಕೊಳ್ಳುತ್ತಾರೆ ಎನ್ನುವುದಕ್ಕೆ 'ಸೋಗಿನ ಸ್ತರಗಳು' ಐತಿಹಾಸಿಕ

ನಾಟಕವೇ ನಿದರ್ಶನವಾಗಿದೆ. ಏಕೆಂದರೆ ಆರ್ಥಿಕ ಶೋಚನೀಯ ಬಡತನದಿಂದ ಬಳಲುತ್ತಿರುವ ಕಲಾವಿದರನ್ನು ಕಂಪನಿ ಮಾಲೀಕರು ನಡೆಸಿಕೊಳ್ಳುತ್ತಿರುವ ರೀತಿ ಭ್ರಷ್ಟಾಚಾರ, ಲೈಂಗಿಕ ಕಿರುಕುಳದಿಂದ ಕೂಡಿದ್ದಾಗಿದೆ. ಈ ನಾಟಕದಲ್ಲಿ ಮಹಾರಾಣಿ ಪಾತ್ರವನ್ನು ಅಭಿನಯಿಸುತ್ತಿರುವ ಆ ಮಹಿಳೆಯು ದೈನಂದಿನ ಬದುಕು ಕೌಟುಂಬಿಕ ವೃತ್ತಾಂತವು ಶೋಚನೀಯವಾಗಿದೆ. ವಿಪರ್ಯಾಸವೆಂದರೆ ನಾಟಕದಲ್ಲಿ ಮಹಾರಾಣಿ ಪಾತ್ರವಾಗಿ ಕಂಗೊಳಿಸುವ ಆ ಪಾತ್ರವು ನಿಜ ಜೀವನದಲ್ಲಿ ತನ್ನ ಮಗುವಿಗೆ ಅನ್ನವು ಸಿಗದೇ ಇರುವ ಪರಿಸ್ಥಿತಿಯು ಇರುತ್ತದೆ. ಈ ರೀತಿ ಅಂದಿನ ಕಲಾವಿದರ ಶೋಚನೀಯ ಸ್ಥಿತಿಗತಿಗಳನ್ನು ಈ ನಾಟಕದ ಮೂಲಕ ಕಂಡುಕೊಳ್ಳಲಾಗಿದೆ.

'ನಕ್ ನಕ್ ಸತ್ರು!' ಇದೊಂದು ಅಸಂಬಂಧ ಕೌಟುಂಬಿಕ ವೃತ್ತಾಂತವುಳ್ಳ ದುರಂತ ನಾಟಕವಾಗಿದೆ. ಲಕ್ಷ್ಮೀಪತಿ–ಲಕ್ಷ್ಮಿ ದಂಪತಿಗಳಿಗೆ ಶಾಂತಿ, ವಿನೋದ, ವಿಕಾಸ, ಶಂಭು ಮಕ್ಕಳೊಡನೆ ಹೆಣೆದ ಕಥಾಹಂದರವನ್ನೊಳಗೊಂಡಿದೆ. ಲಕ್ಷ್ಮೀಪತಿಯ ಪಾತ್ರವು ಶುದ್ಧ ಸೋಂಬೇರಿಯಂತೆ ಚಿತ್ರಿತವಾಗಿದೆ. ಯಾವ ಕೆಲಸವನ್ನೂ ಸರಿಯಾಗಿ ನಿರ್ವಹಿಸದೆ ಮೋಜು ಮಸ್ತಿಯಲ್ಲಿ ಕಾಲ ಕಳೆಯುವ ವ್ಯಕ್ತಿ ಈತ. ಬಾಡಿಗೆ ಮನೆಯ ಮಾಲೀಕರಿಗೆ ಸರಿಯಾಗಿ ಹಣ ಕೊಡದೆ ಇರುವುದರಿಂದ ಮಾಲೀಕರು ಮನೆಬಿಟ್ಟು ಕಳಿಸುತ್ತಾರೆ. ಇದಕ್ಕೆ ದುಃಖಿಸದೆ ಏನಾದರೂ ಒಂದು ಕೆಲಸದಲ್ಲಿ ತೊಡಗಿಕೊಳ್ಳಬೇಕೆಂದು ಯೋಚಿಸದೆ ಊರ ಹೊರಗಿನ ಹಾಳುಬಿದ್ದ ಮನೆಯಲ್ಲಿ ವಾಸ ಮಾಡಲು ಮುಂದಾಗುತ್ತಾರೆ. ಲಕ್ಷ್ಮೀಪತಿಯು ಇದ್ದ ಸ್ಥಿತಿಯನ್ನು ಒಪ್ಪಿಕೊಂಡು ಬದುಕು ನಡೆಸುವ ಸೋಂಬೇರಿ ಮನುಷ್ಯನಂತೆ ಕಂಡುಬರುತ್ತಾನೆ. ಬಡವನೆಂದು ಹೋಟೆಲಿನಲ್ಲಿ ಕೆಲಸ ಕೊಟ್ಟರೆ ಅಲ್ಲಿಯೂ ಸರಿಯಾಗಿ ಕೆಲಸ ಮಾಡದೆ ಹಣ, ರೇಡಿಯೋ ಕಳ್ಳತನ ಮಾಡಿ ಜೈಲುಸೇರಿ ಒಂದು ತಿಂಗಳು ಶಿಕ್ಷೆಯನ್ನು ಅನುಭವಿಸಿದರೂ ಉತ್ತಮ ಜೀವನವನ್ನು ಕಟ್ಟಿಕೊಳ್ಳಲು ಪ್ರಯತ್ನಿಸದೆ, ಇದ್ದ ಸ್ಥಿತಿಗೆ ಹೊಂದಿಕೊಂಡು ಅಸಂಬದ್ಧವಾಗಿ ನಗುತ್ತಾ ಕಾಲ ಕಳೆಯುವಂತೆ ಮತ್ತು ಕೊನೆಯ ಭಾಗದಲ್ಲಿ ಅಸಂಬದ್ಧವಾಗಿ ನಗುನಗುತ್ತಲೇ ವಿಷ ಸೇವಿಸಿ ಸಾವನ್ನು ತಂದುಕೊಳ್ಳುವಂತೆ ಮುಗಳಿ ಅವರು ರಚಿಸಿದ ಈ ನಾಟಕವು ಒಂದು ಸೈದ್ಧಾಂತಿಕ ಚೌಕಟ್ಟಿಗೆ ಒಳಪಡದೆ ಅಸಂಬದ್ಧ ನಾಟಕದ ಚಿತ್ರಣವನ್ನು ಒಳಗೊಂಡಿದೆ.

ಮುಗಳಿ ಅವರು **'ಪಂಚಶೀಲ'** ಏಕಾಂಕ ನಾಟಕದಲ್ಲಿ ಪಂಚಪ್ಪ(ಯಜಮಾನ), ಪಾರ್ವತಿ(ಹೆಂಡತಿ), ಜವಾಹರ(ಮಗ), ರಾಮಪ್ಪ(ಭಿಕ್ಷುಕ), ಚಕ್ರಪಾಣಿ(ನೆರೆಮನೆಯವನು) ಪಾತ್ರಗಳ ಮುಖೇನ ಸಮಾಜದಲ್ಲಿ ಆದರ್ಶ ಮುಖಗಳಂತೆ ತೋರ್ಪಡಿಸುತ್ತಾ ಗೋಮುಖವ್ಯಾಘ್ರಗಳು ತಮ್ಮ ಬದುಕನ್ನು ಕಟ್ಟಿಕೊಳ್ಳಲು ಯಾವರೀತಿ ಸಮಾಜದಲ್ಲಿ ಹವಣಿಸುತ್ತವೆಂಬುದನ್ನು ಚಿತ್ರಿಸಿದ್ದಾರೆ.

ಪಂಚಪ್ಪ ಎಂಬುವವನು ಸಮಾಜದಲ್ಲಿ ಆದರ್ಶಮನುಷ್ಯನಂತೆ ಜನರಿಗೆ ನಂಬಿಸಿ ಅವರಿಗೆ ಪಂಚಶೀಲ ತತ್ವಗಳ ಬಗ್ಗೆ ನೀತಿಪಾಠ ಮಾಡುತ್ತಾ. ೧. "ನಮ್ಮ ಭೂಮಿಮ್ಯಾಲೆ ನಮಗೆಷ್ಟು ಪ್ರೀತಿ ಇರತ್ತದೋ ಇನ್ನೊಬ್ಬರ ಭೂಮಿಮ್ಯಾಲೆ ಪ್ರೀತಿ ವಾತ್ಸಲ್ಯ ಇರಬೇಕು. ೨. ಇನ್ನೊಬ್ಬರ ಭೂಮಿಮ್ಯಾಲೆ

ಆಕ್ರಮಣ ಮಾಡಬಾರದು. ೩. ಇನ್ನೊಬ್ಬರ ವ್ಯವಹಾರದೊಳಗ ನಾವು ಕೈಹಾಕಬಾರದು. ೪. ಸಮಾನತೆಯ ಭೂಮಿಮ್ಯಾಲೆ ಒಬ್ಬರು ಇನ್ನೊಬ್ಬರ ಉಪಯೋಗ ಪಡೆಯಬೇಕು. ೫. ಎಲ್ಲರೂ ಶಾಂತಿಯುತ ಸಹಜೀವನದಿಂದ ಕೂಡಿ ಬಾಳಿ ಆರ್ಥಿಕ ಸಹಕಾರವನ್ನು ನೀಡಬೇಕು"(ಪು.೯೫) ಎಂಬ ತತ್ವಗಳ ಗಾಜಿನ ಫಲಕವನ್ನು ತಮ್ಮ ಮನೆಯ ಮುಂದೆ ಹಾಕಿಸಿಕೊಂಡಿರುತ್ತಾನೆ. ಇದರ ಫಲವಾಗಿ ಎಂ.ಎಲ್.ಎ. ಪಟ್ಟವು ದೊರೆಯುತ್ತದೆ.

ನಾಟಕದ ಮೊದಲಭಾಗದಿಂದಲೆ ಪಂಚಪ್ಪನ ಪಾತ್ರವು ಆದರ್ಶಮಯವಾದ ರೀತಿಯಲ್ಲಿ ತಿಳಿದುಬಂದರೂ ಕೊನೆಯಲ್ಲಿ ಪಂಚಪ್ಪನ ನಿಜರೂಪವು ಗೊತ್ತಾಗುತ್ತದೆ. ಚಕ್ರಪಾಣಿ ಎಂಬುವವನ ಜಾಗವನ್ನು ಆಕ್ರಮಿಸಿ ಮನೆ ಕಟ್ಟಿದ್ದೆಂದು ತಿಳಿದುಬರುತ್ತದೆ. ಇಪ್ಪತ್ತು ವರ್ಷಗಳ ಹಿಂದೆ ಪಂಚಪ್ಪ ಚಲೇಜಾವ್ ಚಳುವಳಿಯ ನೆಪ ಮಾಡಿಕೊಂಡು ಒಬ್ಬ ಶ್ರೀಮಂತನ ಮನೆಯನ್ನು ದರೋಡೆ ಮಾಡಿ ಅವನನ್ನು ಭಿಕ್ಷುಕನನ್ನಾಗಿ ಮಾಡಿರುವ ವಿವರ ತಿಳಿಯುತ್ತದೆ. ಆದರೂ ಪಂಚಪ್ಪ ತಾನು ಹಾಗೆ ಮಾಡಿಲ್ಲವೆಂಬಂತೆ ತೋರ್ಪಡಿಸಿಕೊಳ್ಳುತ್ತಾನೆ. ಸಿಟ್ಟುಗೊಂಡ ರಾಮಪ್ಪ ಎಂಬ ಭಿಕ್ಷುಕ ತನ್ನ ಮನೆಗೆ ಹಾಕಿಸಿದ್ದ ಪಂಚಶೀಲ ಶೀರ್ಷಿಕೆಯುಳ್ಳ ಗಾಜಿನ ಫಲಕವನ್ನು ಎತ್ತಿ ಬಿಸಾಡಲು ಮುಂದಾಗುತ್ತಾನೆ. "ಬ್ಯಾಡ ಒಗಿಬ್ಯಾಡೋ! ಅದು ನನ್ನ ಪ್ರೀತಿಯ ಪಂಚಪ್ರಾಣ ಪಂಚಶೀಲ"(ಪು.೧೫೪) ಎಂದು ತಡೆಯಲು ಮುಂದೆ ಬರುವುದರೊಳಗಾಗಿ ನಾಟಕ ಕೊನೆಗೊಳ್ಳುತ್ತದೆ. ಈ ನಾಟಕದಲ್ಲಿ ಪಂಚಪ್ಪನು ಪಂಚಶೀಲ ತತ್ವಗಳನ್ನು ಸದಾ ಜಪಿಸುತ್ತಾ ಕ್ರಿಯಾಶೀಲ ವ್ಯಕ್ತಿಯಾಗಿರುತ್ತಾನೆ. ಆದರ್ಶವಾದಿಯಂತೆ ಗಾಂಧಿ ತತ್ವಗಳನ್ನು ಬೋಧಿಸುತ್ತಾ ಸಮಾಜದ ಸುಧಾರಣೆ ಮಾಡುವುದಾಗಿ ಹೇಳಿ ಮುಗ್ಧ ಜನರನ್ನು ನಂಬಿಸಿ, ವಂಚಿಸುವ ರೀತಿಯಲ್ಲಿ ನಾಟಕ ಕಂಡುಬರುತ್ತದೆ. ಈ ನಾಟಕವು ಇಂದಿನ ಪ್ರಸ್ತುತ ದಿನಮಾನಕ್ಕೂ ಅನ್ವಯಿಸುವಂತಿದೆ.

'ಪ್ರಳಯದ ಕಸ' ನಾಟಕ ಸಂಕಲನವು ಈ ಸಾವಕೆಡುವ ಗಂಡನೊಯ್ದು ಒಲೆಯೊಳಗಿಕ್ಕು, ವೀರಶ್ರೀ, ಪತಿತೋದ್ಧಾರ, ಮನೆಯ ಮೋಹಿನಿ ಎಂಬ ಏಕಾಂಕ ನಾಟಕಗಳನ್ನೊಳಗೊಂಡಿದೆ. ಅದರಲ್ಲಿ ಪ್ರಳಯದ ಕಸ ಒಂದು. ವಿಕ್ರಾಂತ-ಕೋಮಲಾ ದಂಪತಿಗಳು, ವಿಕ್ರಮ(ಮಗ), ವಿಕ್ರಾಂತ ಎಂಬುವವನು ಉಪನ್ಯಾಸಕನಾಗಿ ಉತ್ತಮ ಉದ್ಯೋಗದಲ್ಲಿದ್ದರೂ ಸರಿಯಾಗಿ ಕೌಟುಂಬಿಕ ಜೀವನವನ್ನು ನಡೆಸದೆ ಕೇವಲ ಸಿಗರೇಟ್, ಪಾನಮತ್ತನಾಗಿ, ಪರಸ್ತ್ರೀಯರ ಸಂಗ ಮಾಡಿಕೊಂಡು ದುಂದುವೆಚ್ಚ ಮಾಡಿ ಇದ್ದ ಹಣವು ಸಾಲದೆ ಸಾಲಗಾರನಾಗಿ ಬದುಕುವ ಕೆಟ್ಟ ಪರಿಸ್ಥಿತಿಯನ್ನು ಮುಗಳಿ ಅವರು ಈ ನಾಟಕದಲ್ಲಿ ಅಭಿವ್ಯಕ್ತಿಸಲು ಮುಂದಾಗಿದ್ದಾರೆ.

'ಈ ಸಾವಕೆಡುವ ಗಂಡನೊಯ್ದು ಒಲೆಯೊಳಗಿಕ್ಕು' ಅಕ್ಕಮಹಾದೇವಿಯ ವಚನದ ಸಾಲನ್ನೇ ಶೀರ್ಷಿಕೆಯನ್ನಾಗಿಟ್ಟುಕೊಂಡು ಮುಕ್ತಾ-ರಶ್ಮಿ ಗೆಳತಿಯರ ಸಂಭಾಷಣೆಯ ರೀತಿಯಲಿ ಈ ನಾಟಕ ಮೂಡಿಬಂದಿದೆ. ಮುಕ್ತಾ ಒಬ್ಬ ಮಹಿಳಾಪರ ಚಿಂತಕಿಯಾಗಿ ಕತೆ, ಕಾದಂಬರಿ, ಕವನ ಬರೆಯಲು ತೊಡಗಿಕೊಂಡ ಒಬ್ಬ ಲೆಕ್ಚರ್ ಆಗಿ ಈ ನಾಟಕದಲ್ಲಿ ಕಂಡುಬರುವ ಪಾತ್ರವಾಗಿದೆ. ಹೆಣ್ಣಿನ

ಮೇಲಾಗುತ್ತಿರುವ ಶೋಷಣೆಗಳ ಬಗ್ಗೆ ಚರ್ಚಿಸುತ್ತಾ ಮಹಿಳಾಪರ ಚಿಂತನೆಗಳನ್ನೊಳಗೊಂಡ ಅಕ್ಕಮಹಾದೇವಿಯ ಕುರಿತಂತೆ ನಾಟಕವನ್ನು ಬರೆದಿರುವುದಾಗಿ ತಿಳಿಸುತ್ತಾರೆ. ಆ ನಾಟಕದಲ್ಲಿ ಕೌಶಿಕ ರಾಜನು ಮಹಾದೇವಿಯನ್ನು ಮೋಹಿಸಿ ಪಡೆಯಲು ಮುಂದಾದ ಸಂದರ್ಭದಲ್ಲಿ ಅಕ್ಕಮಹಾದೇವಿಯು ಅವನನ್ನು ನಿರಾಕರಿಸಿ ಪ್ರತಿಭಟಿಸುವ ರೀತಿಯನ್ನು ಮುಕ್ತಾ ಅವರ ಮಾತಿನಲ್ಲಿ ಈ ರೀತಿ ಅಭಿವ್ಯಕ್ತಿಸಲಾಗಿದೆ.

"ನಾನು ಒಲಿದ ಚೆಲುವ ಗಂಡನು ಯಾರೆಂದು ಹೇಳಲಿಯ? ಸಾವಿಲ್ಲದ, ಕೇಡಿಲ್ಲದ, ರೂಹಿಲ್ಲದ, ಕುರುಹಿಲ್ಲದ ಚೆಲುವಂಗೆ ನಾನು ಒಲಿದೆನು ಅವ್ವ, ಎಡೆ ಇಲ್ಲದ, ಕಡೆಯಿಲ್ಲದ ತೆರಹಿಲ್ಲದ, ಕುರುಹಿಲ್ಲದ ಚೆಲುವಂಗೆ ಆನು ಒಲಿದೆ ಎಲೆ ಅವ್ವಾ, ನೀನು ಕೇಳಾ ತಾಯೆ, ಭವವಿಲ್ಲದ ಭಯವಿಲ್ಲದ ನಿರ್ಭಯ ಚೆಲುವಂಗೆ ಒಲಿದೆ ನಾನು. ಕುಲಸೀಮೆ ಇಲ್ಲದ ನಿಸ್ಸೀಮ ಚೆಲುವಂಗೆ ನಾನೊಲಿದೆ. ಇದು ಕಾರಣ ಚೆನ್ನಮಲ್ಲಿಕಾರ್ಜುನ ಚೆಲುವ ಗಂಡನೆನಗೆ. ಈ ಸಾವ ಕೆಡುವ ಗಂಡರನೊಯ್ದು ಒಲೆಯೊಳಗಿಕ್ಕು!"(ಪು.೭೨) ಎಂದು ಪ್ರತಿಭಟಿಸುವ ಅಕ್ಕಮಹಾದೇವಿಯ ಬಗ್ಗೆ ಪ್ರಸ್ತಾಪಿಸುತ್ತಾ ಆಧುನಿಕ ಪುರುಷ ಸಮಾಜವನ್ನು ವಿರೋಧಿಸಿ ಮಾತನಾಡುವಂತೆ ಮಹಿಳಾಪರ ಚಿಂತನೆಯುಳ್ಳ ಅಂಶಗಳು ಮುಕ್ತಾಳರ ಪಾತ್ರದ ಮೂಲಕ ಅಭಿವ್ಯಕ್ತಗೊಂಡಿದೆ.

'ವೀರಶ್ರೀ' ದೇಶಾಭಿಮಾನವನ್ನು ತೋರ್ಪಡಿಸುವ ಕಿರುನಾಟಕವಾಗಿದೆ. ಮಧ್ಯಮ ವರ್ಗದ ಕುಟುಂಬದ ಸೈನಿಕರ ವೃತ್ತಾಂತ ಕುರಿತು ತಿಳಿಸುವುದೇ ಈ ನಾಟಕದ ಕಥಾವಸ್ತುವಾಗಿದೆ. ಪ್ರತಾಪ-ಪ್ರದೀಪ (ಅಣ್ಣತಮ್ಮಂದಿರು, ಸೈನಿಕರು), ಪ್ರತಾಪನ ಹೆಂಡತಿ ಭವಾನಿ, ತಾಯಿ ದೇವಕಿ(ಯುದ್ಧದಲ್ಲಿ ಗಂಡನನ್ನು ಕಳೆದುಕೊಂಡವಳು), ಈ ಕುಟುಂಬದ ಮೂಲಕ ಮುಗಳಿ ಅವರು ದೇಶಾಭಿಮಾನವನ್ನು ಎತ್ತಿಹಿಡಿಯುವ ಕಾರ್ಯ ಮಾಡಿದ್ದಾರೆ. ಪ್ರತಾಪನು ಮದುವೆ ಮಾಡಿಕೊಂಡು ಎರಡು ವರ್ಷ ಕಳೆಯುವಷ್ಟರಲ್ಲಿಯೇ ಯುದ್ಧದಲ್ಲಿ ವೀರಮರಣವನ್ನಪ್ಪುತ್ತಾನೆ. ಇದು ಮನೆಯವರಲ್ಲಿ ದುಃಖವನ್ನು ತರಿಸುತ್ತದೆ. ಆ ಸಂದರ್ಭದಲ್ಲಿಯೇ ತಮ್ಮನಾದ ಪ್ರದೀಪನಿಗೆ ವೈಮಾನಿಕ ಯುದ್ಧವಿಮಾನದಲ್ಲಿ ಕೆಲಸ ಕೈಗೊಳ್ಳಲು ಬರಬೇಕೆಂಬ ಸುದ್ದಿ ಕೂಡಾ ಬರುತ್ತದೆ. ಹಿಂದೆ ಯುದ್ಧಭೂಮಿಯಲ್ಲಿ ತಂದೆ, ಚಿಕ್ಕಪ್ಪ, ಮಾವರನ್ನು ಕಳೆದುಕೊಂಡ ನೋವಿನ ಜೊತೆಗೆ ಈಗ ಅಣ್ಣನನ್ನು ಕಳೆದುಕೊಂಡ ನೋವನ್ನು ತಡೆದುಕೊಳ್ಳಲಾಗದಿದ್ದರೂ ದೇಶಾಭಿಮಾನಿಯಾದ ಪ್ರದೀಪನು ಯುದ್ಧಕ್ಕೆ ಹೊರಡುವ ಸಂದರ್ಭದಲ್ಲಿ ಮಗುವಿನ ಅಳುಧ್ವನಿ ಕೇಳಿ ಈ ಮಗುವಿಗೆ ವೀರಶ್ರೀ ಎಂದು ಹೆಸರಿಡಬೇಕೆಂದು ಹೇಳಿ ಹೋಗುತ್ತಾನೆ. ಈ ಏಕಾಂಕ ನಾಟಕದಲ್ಲಿ ಸೈನಿಕರ ಸಮಯಪ್ರಜ್ಞೆ, ಸಮಯನಿಷ್ಠೆ, ದೇಶಕ್ಕಾಗಿ ಜೀವದ ಹಂಗನ್ನು ತೊರೆದು ಹೋರಾಡುವ ಮನೋಭಾವವುಳ್ಳ ಸೈನಿಕರ ವೃತ್ತಾಂತವನ್ನು ಒಳಗೊಂಡಿದೆ.

'ಪತಿತೋದ್ಧಾರ' ಕಿರುನಾಟಕದಲ್ಲಿ ಮದ್ದೂರಾಯ-ಚಂಪಾಬಾಯಿ(ದಂಪತಿಗಳು), ಗುರು(ಮಗ), ಯಮುನಾ(ಹರಿಜನ ಹುಡುಗಿ) ಈ ಪಾತ್ರಗಳ ಮೂಲಕ ಅಂದಿನ ಜಾತಿವ್ಯವಸ್ಥೆಯ ಬಗ್ಗೆ ತಿಳಿಸುತ್ತಾರೆ. ಮುದ್ದಾದ ಸಣ್ಣಹುಡುಗಿ ಆಶ್ರಯ ಕೇಳಿಕೊಂಡು ಊರಿನ ಮುಖಂಡನಾದ ಮದ್ದೂರಾಯರ

ಮನೆಗೆ ಬರುವಳು. ಮುದ್ದುಮಗುವನ್ನು ಮನೆಯವರು ಪ್ರೀತಿಯಿಂದ ಮಾತನಾಡಿಸುವರು. ಅವಳ ಜಾತಿ ಹರಿಜನ ಎಂಬ ಕಾರಣಕ್ಕೆ ಅವಳನ್ನು ಮನೆಯಿಂದ ಹೊರಗೆ ಹಾಕುವಂತದ್ದು ತಿಳಿದುಬರುತ್ತದೆ. ಗಾಂಧೀಜಿ ಅವರ ಬಗ್ಗೆ ಆದರ್ಶ ಮಾತನಾಡುವ ಉತ್ತಮ ಕುಲದವರು ಮೇಲಿನ ಮಾತಿನಲ್ಲಿ ಜಾತಿವ್ಯವಸ್ಥೆಯನ್ನು ಧಿಕ್ಕರಿಸಿದರೂ ಒಳಮನಸ್ಸಿನಲ್ಲಿ ಜಾತಿವ್ಯವಸ್ಥೆಯನ್ನು ಒಪ್ಪಿಕೊಳ್ಳುವ ರೀತಿಯಲ್ಲಿ ಮದ್ದೂರಾಯ-ಚಂಪಾಬಾಯಿ ಪಾತ್ರಗಳ ಮೂಲಕ ಕಂಡುಕೊಳ್ಳಲಾಗಿದೆ.

'ಮನೆಯ ಮೋಹಿನಿ' ಕಿರುನಾಟಕದಲ್ಲಿ ಈರ ಸೇವಂತಿ ಕೂಲಿ ಮಾಡುವ ಬಡ ಕುಟುಂಬದವರಾದರೂ ದಿನನಿತ್ಯ ಸಾರಾಯಿ ಕುಡಿಯುವ ಗೀಳು ಹಚ್ಚಿಕೊಂಡಿರುತ್ತಾರೆ. ದಿನನಿತ್ಯ ಮಕ್ಕಳ ಕಣ್ಣುತಪ್ಪಿಸಿ, ಸಾರಾಯಿ ಅಂಗಡಿಗೆ ಹೋಗಿ ಕುಡಿದು ಬರುವ ಕಾಯಕ ಇವರದ್ದಾಗಿರುತ್ತದೆ. ಒಂದು ದಿನ ಎಂದಿನಂತೆ ಸಾರಾಯಿ ಕುಡಿಯಲು ಹೋಗುವಾಗ ಮಕ್ಕಳು ತಾವು ಬರುವುದಾಗಿ ಹಟವಿಡಿದು ಪ್ರತಿಭಟಿಸುತ್ತಾರೆ. ಆಗ ತಂದೆತಾಯಿಗಳಿಗೆ ತಾವು ಮಾಡುವ ತಪ್ಪಿನ ಅರಿವಾಗಿ ಸಾರಾಯಿ ಕುಡಿಯುವುದನ್ನು ಬಿಡುತ್ತಾರೆ. ಮನೆಯಲ್ಲಿರುವ ಮೋಹಿನಿ(ಯಲ್ಲವ್ವ) ದೇವರಿಗೆ ಇನ್ನುಮುಂದೆ ಕುಡಿಯುವುದಿಲ್ಲವೆಂದು ಹರಕೆಯನ್ನು ಹೊತ್ತು ಉತ್ತಮವಾಗಿ ಸಮಾಜದಲ್ಲಿ ಬದುಕಲು ಮುಂದಾಗುವಂತದ್ದೇ ನಾಟಕದ ಕಥಾವಸ್ತುವಾಗಿದೆ.

ಮುಗಳಿ ಅವರಿಗೆ ವಿಮರ್ಶಾ ವಲಯವು ಹೆಚ್ಚು ಮಹತ್ವವನ್ನು ತಂದುಕೊಟ್ಟಿದೆ. ಅದರ ಜೊತೆಯಲ್ಲಿಯೇ ಅವರು ರಚಿಸಿದ ಸಾಹಿತ್ಯ ಪ್ರಕಾರಗಳಾದ ಕಾವ್ಯ, ಕತೆ, ಕಾದಂಬರಿ, ಲಲಿತಪ್ರಬಂಧ, ವಿಮರ್ಶೆಗಳ ಜೊತೆಗೆ ನಾಟಕಗಳನ್ನು ರಚಿಸಿದ್ದಾರೆ. ಅವರ ಮೊದಲ ನಾಟಕ ಅಕ್ಕಮಹಾದೇವಿ. ಕಾವ್ಯಗುಣವುಳ್ಳ ಈ ನಾಟಕವು ರಂಗಪ್ರಯೋಗಕ್ಕಾಗಿ ನಾನು ರೂಪಿಸಿಲ್ಲವೆಂದು ಹೇಳಿಕೊಂಡಿದ್ದಾರೆ. ಅಕ್ಕನ ವಚನಗಳನ್ನು ಬಳಸಿಕೊಂಡು ರಚಿಸಿರುವ ಈ ನಾಟಕ ಸೃಜನಶೀಲವಾಗಿದೆ. ಗಮನಿಸಬೇಕಾದ ಒಂದು ಅಂಶವೆಂದರೆ ಮುಗಳಿ ಅವರು ತಮ್ಮ ಸಾಹಿತ್ಯಕೃತಿಗಳಲ್ಲಿ ಹೆಚ್ಚುಹೆಚ್ಚು ಅಕ್ಕಮಹಾದೇವಿಯ ಪ್ರಸ್ತಾಪ ಮಾಡುವುದನ್ನು ಗಮನಿಸಬಹುದಾಗಿದೆ. ಅದರಂತೆ 'ಈ ಸಾವಕೊಡುವ ಗಂಡನೊಯ್ದು ಒಲೆಯೊಳಗಿಕ್ಕು' ಎಂಬ ಅವರದ್ದೇ ಕಿರುನಾಟಕದಲ್ಲಿ ಮಹಿಳಾಪರ ಚಿಂತನೆಗಳಿವೆ. ಈ ನಾಟಕದಲ್ಲಿ ಅಕ್ಕನ ಕಾವ್ಯ, ಅಕ್ಕನ ಭಕ್ತಿ, ಅಕ್ಕನ ಅನುಭಾವದ ಜೊತೆಗೆ ಮುಗಳಿ ಅವರ ನಾಟಕದ ಕಥಾಹಂದರವು ಕಲ್ಪನೆಯೊಳಗಡೆಯಲ್ಲಿಯೇ ಸಹಜತೆಯನ್ನು ಕಂಡುಕೊಳ್ಳಲಾಗಿದೆ.

'ಪಾವನ ಪಾವಕ'ವು ಮುಗಳಿ ಅವರ ಹೊಸಪ್ರಯೋಗಕ್ಕೆ ಒಳಪಟ್ಟ ನಾಟಕ ಸಂಕಲನವಾಗಿದ್ದು ಅದರಲ್ಲಿ ಪಾವನಪಾವಕ, ಪ್ರತಿರೂಪ, ವಿಶ್ವಪುರುಷ ಎಂಬುದರ ಕುರಿತಂತೆ ಮನುಷ್ಯನ ಸ್ಮೃತಿಪಟಲಗಳಲ್ಲಿ ಕನಸಿನ ಭಾಗವಾಗಿಯೇ ಈ ನಾಟಕಗಳನ್ನು ಹೊಸಪ್ರಯೋಗಕ್ಕೆ ಒಳಪಟ್ಟು ರಚಿಸಿರುವ ಚಿಕ್ಕಚಿಕ್ಕ ನಾಟಕಗಳಾಗಿವೆ. ನಾಮಧಾರಿಯು ಸಮಕಾಲೀನ ಸಮಾಜದ ಜನರ ಅಭಿರುಚಿಗೆ ತಕ್ಕ ರೀತಿಯಲ್ಲಿ ನಾಟಕವು ಅನಾವರಣಗೊಂಡಿದೆ. ಹಾಸ್ಯದಿಂದ ಕೂಡಿದ ಈ ನಾಟಕವು ಯಶಸ್ವಿ ಪ್ರಯೋಗ ಕಂಡ ನಾಟಕ. ಕೆಂಚನಗೌಡನ ಪಾತ್ರವು ಹೊಲಮನೆ ಕಳೆದುಹೋದರೂ ಚಿಂತೆಯಿಲ್ಲ ರಾವ್

ಸಾಹೇಬ್‌ನಾಗಬೇಕೆಂಬ ಮಹಾದಾಸೆಯಾಗಿರುತ್ತದೆ. ಅನಕ್ಷರಸ್ಥನಾದ ಅವನ ಪಾತ್ರ ದಡ್ಡನಂತೆ ಚಿತ್ರಿತವಾಗಿದೆ. ವಿಜಯ ಸಾಮ್ರಾಜ್ಯವು ಐತಿಹಾಸಿಕ ನಾಟಕವಾಗಿದ್ದು(೧೩೩೬ ರಿಂದ ೧೩೪೮)ರವರೆಗಿನ ಹನ್ನೆರಡು ವರ್ಷಗಳ ವಿಜಯನಗರ ಸಾಮ್ರಾಜ್ಯದ ಚಾರಿತ್ರಿಕ ವಿದ್ಯಮಾನಗಳನ್ನಾ ಧರಿಸಿ ಹೊಯ್ಸಳ ರಾಜ್ಯದ ಕೊನೆಯ ರಾಜನಾದ ೩ನೇ ಬಲ್ಲಾಳನು ವಿಜಯನಗರ ಸ್ಥಾಪನೆಗೆ ಬಹುಮಟ್ಟಿಗೆ ಕಾರಣವೆಂದು ಈ ನಾಟಕದಲ್ಲಿ ಹೇಳಿಕೊಳ್ಳುತ್ತಾರೆ. ಹಾಗೆಯೇ ಮುಗಳಿ ಅವರು ತಮ್ಮನ್ನು ತಾವು ಸಂಶೋಧನೆಗೆ ಒಳಪಡಿಸಿಕೊಂಡು ಈ ನಾಟಕವನ್ನು ರಚಿಸಿರುವುದಾಗಿ ಹೇಳಿಕೊಂಡಿದ್ದಾರೆ. ನಾಟಕದಲ್ಲಿ ಯುದ್ಧದ ತಂತ್ರಗಾರಿಕೆ, ಗೂಢಚರ್ಯದ ವ್ಯವಸ್ಥೆಯಿಂದ ರಾಜ್ಯದಲ್ಲಿ ಶಾಂತಿ ನೆಲೆಸಲು ಈ ಧರ್ಮಗಳ ಎಲ್ಲಾ ಪ್ರಜೆಗಳನ್ನು ಸಮಾನದೃಷ್ಟಿಯಿಂದ ನೋಡುವಂತದ್ದು ಒಂದೆಡೆ ಕಂಡುಬಂದರೆ ಇನ್ನೊಂದು ಭಾಗದಲ್ಲಿ ಮಲಿಕಸಾಬನ ಸೈನಿಕರು ತೆರಿಗೆಯನ್ನು ಕೇಳಲು ಬಂದ ಸಂದರ್ಭದಲ್ಲಿ ಚನ್ನೇಗೌಡ ಎಂಬ ವೃದ್ಧ ತೆರಿಗೆಯನ್ನು ಕೊಡುವುದಿಲ್ಲವೆಂದು ಪ್ರತಿಭಟಿಸುವುದು ಕರನಿರಾಕರಣೆಯ ಪದ್ಧತಿಯನ್ನು ಎತ್ತಿಹಿಡಿದಂತಿದೆ. ಹಾಗೆಯೇ ಯುದ್ಧ ಸಂದರ್ಭದಲ್ಲಿ ಅರಮನೆಯಲ್ಲಿರುವ ಮಹಾರಾಣಿ ದುಃಖತಪ್ತ ಮನೋಘೋರಣೆಯನ್ನು ಅಭಿವ್ಯಕ್ತಪಡಿಸುತ್ತದೆ.

ಮನೋರಾಜ್ಯವು ಕೌಟುಂಬಿಕ ವೃತ್ತಾಂತ, ಅಣ್ಣತಮ್ಮಂದಿರ ಸ್ವಭಾವ ಚಿತ್ರಣ ಒಳಗೊಂಡ ನಾಟಕವಾಗಿದೆ. ಧ್ರುವನ ಪಾತ್ರವು ಆದರ್ಶಮಯವಾಗಿ ಸಮಾಜಮುಖಿ ಚಿಂತನೆಗಳ ಸಂಯಮ, ತಾಳ್ಮೆ, ಸಹಕಾರದಿಂದ ವರ್ತಿಸುವ ಪಾತ್ರವಾಗಿ ಕಂಡುಬಂದರೆ, ಅಣ್ಣನಾದ ಕನಕರಾಯನ ಪಾತ್ರವು ಅದರ ವಿರುದ್ಧವಾಗಿ ವರ್ತಿಸುವ ಪಾತ್ರವಾಗಿದೆ. ದುಂದುಗಾರಿಕೆ, ಮೋಸ, ವಂಚನೆ, ಕಪಟತನದಿಂದ ಕೂಡಿರುವುದರ ಜೊತೆಗೆ ಸೋಲರಿಯದ ಪಾತ್ರವಾಗಿ ಕಂಡುಬರುತ್ತದೆ. ಕೊನೆಯ ಭಾಗದಲ್ಲಿ ಅಬ್ಬಕ್ಕಳ ಮಗಳಾದ ತಾರಾಳನ್ನು ಮದುವೆಯಾಗಿ ಅವಳ ಆಸ್ತಿಯನ್ನು ಪಡೆಯಬೇಕೆಂಬ ನಯವಂಚನೆ ಅವರಿಗೆ ಗೊತ್ತಾಗುವ ಮೂಲಕ ಕನಕರಾಯನ ಪಾತ್ರವು ಸೋಲನ್ನು ಒಪ್ಪಿಕೊಳ್ಳಬೇಕಾದ ಪಾತ್ರವಾಗಿ ಕಂಡುಬಂದರೆ, ಧ್ರುವನ ಪಾತ್ರವು ಆದರ್ಶಮಯವಾಗಿದೆ. 'ಧನಂಜಯ' ಮಧ್ಯಮ, ಕೌಟುಂಬಿಕ ವೃತ್ತಾಂತವುಳ್ಳ ಈ ನಾಟಕವು ಮಕ್ಕಳು ಹೊಸಜೀವನ ಶೈಲಿಗೆ ಹೊಂದಿಕೊಳ್ಳುವ ಕುರಿತಂತೆ ತಿಳಿದುಬಂದರೆ, ಧನಂಜಯನ ನೈತಿಕ ಮತ್ತು ಆರ್ಥಿಕ ಬಿಕ್ಕಟ್ಟುಗಳಿಗೆ ಸಂಬಂಧಿಸಿದಂತೆ ಲಂಚಗುಳಿತನ ಆರೋಪಕ್ಕೆ ಒಳಗಾಗಬೇಕಾಗುತ್ತದೆ. ಈ ಸಂದರ್ಭ ಅರಿತ ಮಗನಾದ ಸುಧೀರನು ದಾವೆ ಹೂಡುವವರೊಂದಿಗೆ ರಾಜಿಮಾಡಿಕೊಂಡು ಬರುತ್ತಾನೆ. ಸಮಾಜದಲ್ಲಿ ತಲೆತಗ್ಗಿಸುವ ಕೆಲಸವಾಯಿತೆಂದು ಧನಂಜಯನು ಯೋಚಿಸುತ್ತಿರುವಾಗಲೇ ಸುಧೀರನು ನಡೆದ ವೃತ್ತಾಂತ ತಿಳಿಸುತ್ತಾನೆ. ಇನ್ನುಮುಂದೆ ಯಾವುದೇ ಕಾರಣಕ್ಕೂ ಲಂಚ ಸ್ವೀಕರಿಸುವುದಿಲ್ಲ ಎಂದು ತೀರ್ಮಾನಿಸಿರುವುದೇ ಈ ನಾಟಕದ ಕಥಾವಸ್ತುವಾಗಿದೆ.

'ಅಪೂರ್ವ' ನಾಟಕ ಸಂಕಲನದಲ್ಲಿ 'ಸೋಗಿನ ಸ್ತರಗಳು' ಅಂದಿನ ಕಂಪನಿ ನಾಟಕದ ಮಾಲೀಕರು ಕಲಾವಿದರನ್ನು ಹೇಗೆ ನಡೆಸಿಕೊಳ್ಳುತ್ತಿದ್ದರೆನ್ನುವ ವಿಷಯ ಕುರಿತಂತೆ, ಕಲಾವಿದರ

ಆರ್ಥಿಕ ಪರಿಸ್ಥಿತಿಗಳ ಬಗ್ಗೆ, ಮೂಲ ನಾಟಕದ ಸಂಭಾಷಣೆಯಲ್ಲಿ ತಮ್ಮ ದೈನಂದಿನ ಬದುಕಿನ ವೃತ್ತಾಂತ ತಿಳಿಸುವಂತದ್ದಾಗಿದೆ. 'ನಕ್ ನಕ್ ಸತ್ರು' ಅಸಂಬಂಧ ದುರಂತ ಕಿರುನಾಟಕ. 'ಪಂಚಶೀಲ' ತತ್ವಗಳ ಹೆಸರಿನಲ್ಲಿ ಸಾಮಾನ್ಯ ಜನರಿಗೆ ಗೊತ್ತಾಗದ ರೀತಿಯಲ್ಲಿ ಮೋಸ ಮಾಡಿ ಬದುಕುವ ಖಯಾಲಿ ಹೊಂದಿದ ಮನುಷ್ಯನ ನಯವಂಚಕತನದ ಬಗ್ಗೆ ಅಭಿವ್ಯಕ್ತಗೊಂಡ ನಾಟಕವಾಗಿದೆ. 'ಪ್ರಳಯಕಸ' ನಾಟಕ ಸಂಕಲನದಲ್ಲಿ 'ಪ್ರಳಯಕಸ' ವಿಕ್ರಾಂತ–ಕೋಮಲ ದಂಪತಿಗಳ ಜೀವನವೃತ್ತಾಂತ ಕುರಿತು ರಚನೆಗೊಂಡ ಕಿರುನಾಟಕದಲ್ಲಿ ಲೆಕ್ಚರನಾದ ವಿಕ್ರಾಂತನು ದುಂದುಗಾರಿಕೆ, ಸಿಗರೇಟ್ ಸೇದುವುದು, ವೇಶ್ಯೆಯರ ಸಹವಾಸ ಮಾಡಿ ತನ್ನನ್ನು ತಾನು ಹಾಳುಮಾಡಿಕೊಂಡ ಚಿತ್ರಣ ಕಂಡುಬರುತ್ತದೆ. 'ವೀರಶ್ರೀ' ದೇಶಾಭಿಮಾನ ಸೈನಿಕ ವೃತ್ತಾಂತವುಳ್ಳ ಕೌಟುಂಬಿಕ ಜೀವನದ ಕುರಿತು ಅನಾವರಣಗೊಂಡಿದೆ. 'ಪತಿತೋದ್ಧಾರ' ಆಧುನಿಕ ಕಾಲಾವಧಿಯಲ್ಲಿಯೂ ಜಾತಿವ್ಯವಸ್ಥೆಯು ಇನ್ನೂ ತನ್ನ ಪ್ರಾಬಲ್ಯ ಮೆರೆದಿದೆ ಎಂಬುದರ ಬಗ್ಗೆ ತಿಳಿಸಿದಂತಿದೆ. 'ಮನೆಯ ಮೋಹಿನಿ ಸಾರಾಯಿ ವ್ಯಸನಿಗಳಾದ ಈರ ಮತ್ತು ಸೇವಂತಿ ಎಂಬ ದಂಪತಿಗಳು ಮಕ್ಕಳ ಪ್ರತಿಭಟನೆಯಿಂದಾಗಿ ಮನಪರಿವರ್ತನೆಗೊಂಡು ಉತ್ತಮ ಜೀವನ ಕಟ್ಟಿಕೊಳ್ಳುವ ವೃತ್ತಾಂತವನ್ನು ಒಳಗೊಂಡಂತೆ ನಾಟಕದ ಕಥಾವಸ್ತುವು ಮೂಡಿಬಂದಿದೆ.

ಒಟ್ಟು ಮುಗಳಿ ಅವರ ನಾಟಕದ ಕಥಾವಸ್ತುವು ಆದರ್ಶವಾದ, ಸಮಾಜವಾದ, ವಾಸ್ತವವಾದದ ಹಿನ್ನೆಲೆಯಲ್ಲಿ ರಚನೆಗೊಂಡಿದೆ. ಅದರ ಜೊತೆಗೆ ಹಸಿವು, ಬಡತನ, ಅನಕ್ಷರತೆ, ನಿರುದ್ಯೋಗ, ಬಾಲ್ಯವಿವಾಹ, ವೇಶ್ಯಾವಾಟಿಕೆ, ಜಮೀನ್ದಾರಿ ಪದ್ಧತಿಯ ದಬ್ಬಾಳಿಕೆ, ಅಸಮಾನತೆ, ಶೋಷಣೆ, ಲೈಂಗಿಕ ಕಿರುಕುಳದಂತಹ ಅಂಶಗಳು ಕಂಡುಬರುತ್ತವೆ.

೫.೨. ಲಲಿತ ಮತ್ತು ವೈಚಾರಿಕ ಪ್ರಬಂಧಗಳು

ಹೊಸಗನ್ನಡ ಸಾಹಿತ್ಯ ಪ್ರಕಾರಗಳಾದ ಕಾವ್ಯ, ಕತೆ, ಕಾದಂಬರಿ, ನಾಟಕ, ಆತ್ಮಕಥನ, ಜೀವನಚರಿತ್ರೆ ಮುಂತಾದ ಸಾಹಿತ್ಯ ಪ್ರಕಾರಗಳ ಜೊತೆಯಲ್ಲಿಯೇ ಲಲಿತಪ್ರಬಂಧ ಸಾಹಿತ್ಯವು ಒಂದು ಪ್ರಕಾರವಾಗಿ ರೂಪು ಪಡೆಯಿತು. ನವೋದಯ ಕಾಲಘಟ್ಟದ ಲಲಿತಪ್ರಬಂಧ ಸಾಹಿತ್ಯವು ಪಾಶ್ಚಾತ್ಯರ ಪ್ರೇರಣೆ, ಪ್ರಭಾವದಿಂದಾಗಿ ಮುಂಚೂಣಿಗೆ ಬಂದಿರುವುದನ್ನು ಗಮನಿಸಬಹುದಾಗಿದೆ. ಕನ್ನಡದ ಮೊದಲ ಪ್ರಬಂಧಕಾರರಾಗಿ ಮುದ್ದಣ ಮತ್ತು ಪಂಜೆ ಮಂಗೇಶರಾಯರು ಕಂಡುಬರುತ್ತಾರೆ. ಮುದ್ದಣನು 'ಜೋಗುಳ' ಪ್ರಬಂಧ ಬರೆಯುವ ಮೂಲಕ ಹಾಗೂ ಪಂಜೆ ಮಂಗೇಶರಾಯರು 'ಹಲ್ಲಿ' ಪ್ರಬಂಧ ರಚಿಸುವ ಮೂಲಕ ಕನ್ನಡದ ಮೊದಲ ಪ್ರಬಂಧಕಾರರ ಹೆಸರಿಗೆ ಸೇರುತ್ತಾರೆ. ಮೊದಮೊದಲು ಅಲ್ಲೊಂದು ಇಲ್ಲೊಂದು ಎಂಬಂತೆ ಬಿಡಿಬರಹಗಳಾಗಿ ಕಾಣಿಸಿಕೊಂಡ ಪ್ರಬಂಧ ಪರಂಪರೆ ಮುಂದೆ ೧೯೨೧ರಲ್ಲಿ ಆರ್. ಶ್ರೀನಿವಾಸರ ವಿವೇಕಮಂಜರಿ, ಬಿ. ವೆಂಕಟಾಚಾರ್ಯರ 'ದಾಡಿಯ ಹೇಳಿಕೆ', 'ಚಿತ್ರವಿಚಿತ್ರಾವಳಿ' ಎಂಬ ಪ್ರಬಂಧಗಳ ಪ್ರಕಟಣೆಯ ನಂತರ ಹೆಚ್ಚು ಮಾನ್ಯತೆಯನ್ನು ಪಡೆಯುತ್ತಾ ಬಂದಿತು. ಮುಂದುವರಿದು ವಿ.ಸೀ., ಎ.ಎನ್. ಮೂರ್ತಿರಾವ್

ಮತ್ತು ಅವರ ಸಮಕಾಲೀನರ ಬರಹಗಳಿಂದ ಶ್ರೀಮಂತಿಕೆ ಪಡೆಯಿತು. ೧೯೨೧ರಿಂದ ೧೯೫೦ರವರೆಗೆ ಧಾರವಾಡದ ಗೆಳೆಯರ ಗುಂಪಿನವರು ದ.ರಾ.ಬೇಂದ್ರೆ, ವಿ.ಕೃ.ಗೋಕಾಕ್, ರಂ.ಶ್ರೀ.ಮುಗಳಿ, ಸಿಂಪಿ ಲಿಂಗಣ್ಣ, ಕುವೆಂಪು, ಕಾರಂತ, ಪು.ತಿ.ನ., ಎಂ.ವಿ.ಕಾಮತ್, ಎ.ಎನ್.ಮೂರ್ತಿರಾವ್, ಎನ್ಕೆ, ಸುನಂದಾ ಬೆಳಗಾಂವಕರ್ ಇತ್ಯಾದಿ ಮಹನೀಯರು ಕನ್ನಡ ಪ್ರಬಂಧ ಸಾಹಿತ್ಯವನ್ನು ಮೊದಲ ಹಂತದಲ್ಲಿ ಪೋಷಿಸಿ ಬೆಳೆಸಿದವರಾಗಿದ್ದಾರೆ.

ನವೋದಯ ಕನ್ನಡ ಸಾಹಿತ್ಯಕ್ಕೆ ಉತ್ತರ ಕರ್ನಾಟಕದ ಕೊಡುಗೆ ಅಪಾರವೆಂದೇ ಹೇಳಬೇಕು. ಅದರಲ್ಲಿಯೂ ಧಾರವಾಡದಂತ ಪ್ರದೇಶದ ಕೊಡುಗೆ ಅಪಾರ. ಏಕೆಂದರೆ ಧಾರವಾಡ ಗೆಳೆಯರ ಗುಂಪಿನಿಂದ ಪ್ರಕಟವಾದ ಹರಟೆಗಳು(೧೯೩೧) ಎಂಬ ಸಂಗ್ರಹ ಲಲಿತಪ್ರಬಂಧಕ್ಕೆ ಹೊಸ ಆಯಾಮವನ್ನೇ ಸೃಷ್ಟಿಸಿತು. ಹಾಗೆ ೧೯೩೯ರಲ್ಲಿ ಇಪ್ಪತ್ತಾರು ಪ್ರಬಂಧಗಳ 'ಸುಳಿವು-ಹೊಳಹು' ಎಂಬ ಸಂಕಲನ ಪ್ರಕಟಿಸಿರುವುದು ಗಮನಾರ್ಹವಾಗಿದೆ.

ಕನ್ನಡ ಲಲಿತ ಪ್ರಬಂಧಗಳನ್ನು ೧. ಹಾಸ್ಯಪ್ರಧಾನವಾದವುಗಳು, ೨. ಚಿಂತನಾ ಪ್ರಧಾನವಾದವುಗಳು ಎಂಬುದಾಗಿ ಎರಡು ವಿಧಗಳಲ್ಲಿ ವಿಂಗಡಿಸಬಹುದಾಗಿದೆ. ಹಾಸ್ಯಪ್ರಧಾನವಾದ ಲಲಿತಪ್ರಬಂಧಗಳನ್ನು ರಚಿಸಿದ ಮಹನೀಯರುಗಳಾದ ಗೊರೂರು ರಾಮಸ್ವಾಮಿ ಅಯ್ಯಂಗಾರರ ಗರುಡಗಂಬದ ದಾಸಯ್ಯ, ನಮ್ಮ ಊರಿನ ರಸಿಕರು ಮೊದಲಾದ ಕೃತಿಗಳು ವಿಡಂಬನೆ, ಕಟಕಿ ಹಾಗೂ ವ್ಯಂಗ್ಯಗಳಿಲ್ಲದ ಶುದ್ಧಹಾಸ್ಯ ಬರಹಗಳಾಗಿವೆ. ನಾ.ಕಸ್ತೂರಿ ಅವರ 'ಉಪಾಯ ವೇದಾಂತ,' 'ಅಲ್ಲೋಲ', 'ಕಲ್ಲೋಲ', 'ಡೊಂಕುಬಾಲ', ಬೀಚಿ ಅವರ 'ತಿಮ್ಮನ ತಲೆ', ನಾಡಿಗೇರ ಕೃಷ್ಣರಾಯರ 'ಮೆಲ್ಲೋಗರ', ಎನ್ಕೆ ಅವರ 'ಮುಂಗಾಲು ಪುಟಿಗೆ', ಜಿ.ಪಿ. ರಾಜರತ್ನಂ ಅವರ 'ರಾಘವಾಂಕನ ಹಲ್ಲು', ಅರಾಸೇ ಅವರ 'ಸವಿನಗು' ಇನ್ನೂ ಮುಂತಾದ ಮಹನೀಯರು ಹಾಸ್ಯ ಕುರಿತು ಲಲಿತಪ್ರಬಂಧ ರಚಿಸಿರುವುದು ತಿಳಿದುಬರುತ್ತದೆ.

ಅದೇ ರೀತಿ ಚಿಂತನಶೀಲ ಪ್ರಬಂಧಗಳಲ್ಲಿ ವಿಮರ್ಶಾತ್ಮಕ ಪ್ರಬಂಧಗಳ ಪಾಲೇ ದೊಡ್ಡದೆಂದು ಹೇಳಬೇಕು. ದೇವರು, ಧರ್ಮ, ಮಾನವ, ಸಮಾಜ, ಪ್ರಕೃತಿ ಕುರಿತು ಚಿಂತನಾಪರವಾದ ಪ್ರಬಂಧಗಳನ್ನು ರಚಿಸಿದ ಮಹನೀಯರುಗಳಲ್ಲಿ ದ.ರಾ.ಬೇಂದ್ರೆ, ವಿ.ಕೃ.ಗೋಕಾಕ್, ರಂ.ಶ್ರೀ.ಮುಗಳಿ, ಕುವೆಂಪು, ಡಿ.ವಿ.ಜಿ., ಸ.ಸ.ಮಾಳವಾಡ, ಪು.ತಿ.ನ. ಮೊದಲಾದ ಮಹನೀಯರು ತಾವು ವಿವಿಧ ಸಭೆ, ಸಮಾರಂಭಗಳಲ್ಲಿ ಮಾಡಿದ ವಿಚಾರಪರವಾದ ಭಾಷಣಗಳು ಸಾಹಿತ್ಯ ಲಹರಿಯನ್ನು ಒಳಗೊಂಡ ಲೇಖನ ರೂಪದಲ್ಲಿ ಅಥವಾ ಲಲಿತಪ್ರಬಂಧ ರೂಪದಲ್ಲಿ ಸಂಕಲಿತಗೊಂಡಿವೆ. ಅಂಥ ಮಹನೀಯರುಗಳಲ್ಲಿ ರಂ.ಶ್ರೀ.ಮುಗಳಿ ಕೂಡ ಒಬ್ಬರು. ಅವರು ಒಟ್ಟು ಎಂಟು ಪ್ರಬಂಧಸಂಕಲನಗಳನ್ನು ರಚಿಸಿದ್ದಾರೆ. ಅವುಗಳಲ್ಲಿ ಮಾತೆಂಬುದು ಜ್ಯೋತಿರ್ಲಿಂಗ, ಕನ್ನಡದ ಕರೆ, ಶಿಕ್ಷಣದ ಮುನ್ನಡೆ, ಕನ್ನಡ ನುಡಿ, ತನ್ನ ಕಾಲ ಮೇಲೆ ನಿಲ್ಲಬಲ್ಲುದೇ, ಕನ್ನಡನಾಡಿನಲ್ಲಿ ಪರೋಪಕಾರ, ಕಟುಸತ್ಯ,

ಪಾಥೇಯ, ನವೀನ ಪ್ರಜ್ಞೆಯ ಸೂತ್ರಗಳು ರಚಿಸುವ ಮೂಲಕ ಕನ್ನಡ ಸಾಹಿತ್ಯಕ್ಕೆ ತನ್ನದೇ ಆದ ಕೊಡುಗೆ ನೀಡಿದ್ದಾರೆ. ಅಂತಹ ಪ್ರಬಂಧಗಳನ್ನು ಈ ಕೆಳಗಿನಂತೆ ಪರಾಮರ್ಶಿಸಿ ವಿಶ್ಲೇಷಿಸಲಾಗಿದೆ.

'ಮಾತೆಂಬುದು ಜ್ಯೋತಿರ್ಲಿಂಗ' ಮುಗಳಿ ಅವರ ಮೊದಲ ವೈಚಾರಿಕ ಪ್ರಬಂಧವಾಗಿದೆ. ಮನುಷ್ಯನ ಮಾತಿನ ಸಂವೇದನೆಯನ್ನು ಅವಲೋಕಿಸಿ ಕಂಡುಕೊಂಡ ಒಳಸುಳಿವುಗಳ ಬಗ್ಗೆ ಈ ಪ್ರಬಂಧ ತಿಳಿಸುತ್ತದೆ. ಬರಹವು ವಿಮರ್ಶೆಯ ಮಾದರಿಯನ್ನು ಅನುಸರಿಸಿ ಒಂದು ಉತ್ತಮ ಪ್ರಬಂಧವಾಗಿ ಹೊರಹೊಮ್ಮಿದೆ. "ಮಾತು ಇದು ಮೂಲದಲ್ಲಿ ದ್ರಾವಿಡ ಶಬ್ದ ಮಾಟ್, ಮಳು ಇದರಲ್ಲಿ ಇದರ ಮೂಲ ಪ್ರಕೃತಿಯಿದೆ. ತಮಿಳಿನಲ್ಲಿ ಇದು ಮಾಟುಮ್, ಮಾಟ್ರಮ್ ತೆಲುಗಿನಲ್ಲಿ ಮಾಟ ಎಂದಾಗಿದ್ದು, ಕನ್ನಡದಲ್ಲಿ ಮಾತು ಆಗಿದೆ. ಈ ಮಾತಿನ ಮೂಲದಲ್ಲಿಯೇ ಎಲ್ಲಾ ರಹಸ್ಯವಿದೆ. ಮಾತು ಮೂಲತಃ ಮಾರು ಎಂದರೆ ಉತ್ತರ ರೂಪವಾದದ್ದು. ಧ್ವನಿಗೆ ಪ್ರತಿಧ್ವನಿ, ಕ್ರಿಯೆಗೆ ಪ್ರತಿಕ್ರಿಯೆ ಇದ್ದಂತೆ ಯಾವುದಕ್ಕೂ ಮಾತೆಂಬುದು ಉತ್ತರ. ಅದೇ ನುಡಿಯೆಂಬುದು ತಾನಾಗಿ ಮೊದಲು ನುಡಿದದ್ದು ಮೂಲತಃ ನುಡಿ ಬೇರೆ ಮಾತು ಬೇರೆ ತರುವಾಯದ ರೂಡಿಯಲ್ಲಿ ಅವು ಹತ್ತಿರ ಬಂದವು. ಒಂದೇ ಎಂಬಂತಾದವು. ಮಾತಿಗೆ ಮಾತು ಬೆಳೆಯಿತು ಎಂಬ ದೇಸಿಯಲ್ಲಿ ಮೂಲಾರ್ಥದ ಸೂಚನೆ ಇದ್ದಂತಿದೆ. ವಚನ, ಭಾಷೆ, ಪ್ರತಿಜ್ಞೆ ಎಂಬ ಅರ್ಥದಲ್ಲಿ ಮಾತಿಗೆ ಒಳ್ಳೆಯ ಅರ್ಥ ಬಂದಿತು. ಮುಂದೆ ಆಧ್ಯಾತ್ಮಿಕ ಸ್ವರೂಪ ಪಡೆದು ಅಲ್ಲಮನ ವಚನಗಳಲ್ಲಿ ಮಾತೆಂಬುದು ಜ್ಯೋತಿರ್ಲಿಂಗವಾಗಿ ಕಾಣಿಸಿಕೊಂಡಿತು"(ಪು.೨೩). ಈ ರೀತಿಯಾಗಿ ಕನ್ನಡ ಸಾಹಿತ್ಯದಲ್ಲಿ ಮಾತಿನ ಮಹತ್ವವನ್ನು ಕಂಡುಕೊಳ್ಳಲಾಗಿದೆ.

ಆಧುನಿಕ ಪ್ರಪಂಚ ಬೆಳೆದಂತೆ ಮಾತಿನ ಭರಾಟೆಯು ಅದರೊಂದಿಗೆ ಸಾಗುವಂತದ್ದಾಗಿದೆ. ಒಂದು ಜನಾಂಗ, ಒಂದು ಸಮುದಾಯ ಎಷ್ಟು ಮುಂದುವರಿದಿದೆ ಎನ್ನುವುದನ್ನು ತಿಳಿಯಲು ಅವರವರ ಮಾತೇ ನಿದರ್ಶನವನ್ನು ನೀಡುವಂತದ್ದಾಗಿದೆ. ಈ ರೀತಿ ಮಾತು ತನ್ನ ಪ್ರಗತಿಯನ್ನು ತೋರಿಸುತ್ತಾ ಅದರ ಗುರಿ ಸಾಧಿಸಿಕೊಳ್ಳುವಂತದ್ದಾಗಿದೆ. ಮಾತಿನ ಬೆಲೆಯನ್ನು ಕನ್ನಡಿಗರು ಸರಿಯಾಗಿ ಅರಿತವರಾಗಿದ್ದರು ಎಂಬುದಕ್ಕೆ ಶ್ರೀವಿಜಯನ ಕವಿರಾಜ ಮಾರ್ಗದಲ್ಲಿ 'ನೆರೆ-ತೆರೆಯಲರಿವವನು ಮಾತವರಿವನೆಂದು' ಬಣ್ಣಿಸಿದ ಕನ್ನಡ ಸಾಮಾನ್ಯ ಜನರು ಕಾವ್ಯವನ್ನು ರಚಿಸಬಲ್ಲವರಾಗಿದ್ದರು. ಮಾತಿನ ಜಾಣ್ಮೆಯುಳ್ಳವರಾಗಿದ್ದರು. 'ಮಾತಿನಲ್ಲಿ ಸೋತವನೆ ಜಾಣ, ಲೋಕಕ್ಕೆ ಮಾತೆ ಮಾಣಿಕ್ಯವು, ಮಾತು ಬಲ್ಲಾತಂಗೆ ಯಾತವನು ಸುರಿದಂತೆ, ರಸಿಕನಾಡಿದ ಮಾತು ಶಶಿಯುದಿಸಿ ಬಂದಂತೆ, ಮಾತಾಡಿದಂತೆ ನಡೆದಾತ ಜಗವನು ಕೂತಲ್ಲಿ ಆಳ್ವ' ಎಂದು ಮಾತಿನ ವ್ಯಾಖ್ಯಾನವನ್ನು ತಿಳಿಸುವ ಮೂಲಕ ಮಾತಿನ ಮಹತ್ವವನ್ನು ಕಂಡುಕೊಳ್ಳಲಾಗಿದೆ.

ಮಾತಿನ ವಿಕಾಸದಲ್ಲಿ ಮೂರು ಮೆಟ್ಟಿಲುಗಳು ಎದ್ದು ಕಾಣುತ್ತವೆ. ಅವು ಅದರ ವಿಕಾಸವನ್ನು ಸೂಚಿಸುತ್ತಾ ಅದಕ್ಕೆ ಪ್ರೇರಕವಾದ ಆಂತರಿಕ ಶಕ್ತಿಗಳ ಅಭಿವ್ಯಕ್ತಿಗಳಾಗಿರುತ್ತವೆ. ಮೊದಲ ಮೆಟ್ಟಿಲಾದ

'ಪ್ರಾಣ'ದಲ್ಲಿ ಮಾತು ಒಂದು ಕುರುಹು, ಒಂದು ಸಂಕೇತ, ಒಂದು ಸಾಧನವಾಗಿರುತ್ತದೆ. ಲೌಕಿಕ ವ್ಯವಹಾರದ ದಿನಬಳಕೆಯ ಮಾತೆಲ್ಲ ಹೀಗೆ ಅದು ಮನುಷ್ಯನ ಪ್ರಾಮಾಣಿಕ ಜೀವನದ ಸಹಜ ಪ್ರೇರಣೆಗಳ ಅಭಿವ್ಯಕ್ತಿಗೆ ಸಾಧನವಾಗಿರುತ್ತದೆ ಎಂದು ತಿಳಿಸಿದ್ದಾರೆ. ಎರಡನೇ ಮೆಟ್ಟಿಲಾದ 'ಮನ' ಇದರಲ್ಲಿ ಸ್ವ ಅನುಭವ, ರಸಾನುಭವ, ಸುವಿಚಾರ, ವಿವೇಕಿಗಳ, ಚಿಂತಕರ ಕನ್ನಡಿಯಾಗಿರುತ್ತದೆ. ವಿಚಾರವಂತರು, ಕವಿಗಳು ಈ ಮೆಟ್ಟಿಲಲ್ಲಿರುತ್ತಾರೆ. ಮೂರನೇ ಮೆಟ್ಟಿಲಾದ 'ಆತ್ಮ' ಮಾತು ಈ ಭಾಗದಲ್ಲಿ ಲೌಕಿಕತೆಯನ್ನು ಬಿಟ್ಟು ಅಲೌಖಿಕವಾದ ಅನುಭವ ಪರತತ್ವ ತೆರೆದ ಪ್ರಜ್ಞೆ, ದೈವಿಕ ಸತ್ಯದೆಡೆಗೆ ಹೋಗುವಂತಹ ಮಾರ್ಗವಾಗಿರುತ್ತದೆ. ಈ ಮಾರ್ಗದಲ್ಲಿ ಅನುಭಾವಿಗಳು, ಋಷಿಗಳು ಕಂಡುಬರುತ್ತಾರೆ.

ಮಾತಿನಲ್ಲಿ, ಹಿಡಿತದಲ್ಲಿ ತಪಸ್ಸಿನ ಸಿದ್ಧಿ ಸಾಧಿಸಬೇಕಾದರೆ ಸೌಮ್ಯತ್ವ ಮೌನದಿಂದ ಆತ್ಮಶುದ್ಧಿಗೊಳಿಸಿಕೊಳ್ಳಬೇಕು. ಮನಸ್ಸು ಎಂಬುದು ಹಸಿರುಮನೆ ಇದ್ದ ಹಾಗೆ. ಬಾಯಿ ರಂಗಸ್ಥಲವಿದ್ದಂತೆ, ಒಳಗೆ ಕಟ್ಟಿಕೊಂಡ ವೇಷ, ಪಳಗಿಸಿಕೊಂಡ ಅಭಿನಯ ಹೊರಗೆ ಬಂದಾಗ ಸೊಗಸುತ್ತದೆ. ಮನಸ್ಸಿಗೆ ವ್ಯವಸ್ಥೆ, ಸಂಸ್ಕರಣ, ನಿಗ್ರಹಗಳು ಬಂದರೇನೆ ಮಾತು ಹದವರಿತು ಬರುತ್ತದೆ. ಮೌನಕ್ಕೂ ತನ್ನದೇ ಆದ ಶಕ್ತಿಯಿದೆ ಎಂದು ಅಭಿಪ್ರಾಯಪಡುತ್ತಾರೆ. ಮಾತಿನ ಬಗ್ಗೆ ವೇದೋಪನಿಷತ್ತುಗಳಲ್ಲಿಯೂ, ವಚನ ವಾಙ್ಮಯಗಳಲ್ಲಿಯೂ, ದಾಸರ ಕೀರ್ತನೆಗಳಲ್ಲಿಯೂ ಇದಕ್ಕೆ ದೃಷ್ಟಾಂತಗಳಿವೆ. "ಮಾತೆಂಬುದು ಜ್ಯೋತಿರ್ಲಿಂಗ, ಸ್ವರವೆಂಬುದು ಪರತತ್ವ ತಾಳೋಷ್ಟ ಸಂಪುಟವೆಂಬುದು ನಾದಬಿಂದು ಕಳಾತೀತ, ಗುಹೇಶ್ವರ ಶರಣರು ನುಡಿದು ಸೂತಕಿಗಳಲ್ಲಾ ಕೇಳಾ ಮರುಳೆ"(ಪು.೨೪) ಎಂಬ ಅಲ್ಲಮಪ್ರಭುವಿನ ವಚನವನ್ನು ತಿಳಿಸುತ್ತಾ ಮಾತಿನ ಸಂವೇದನೆ ಕುರಿತು ಮುಗಳಿ ಅವರು ಮಾತೆಂಬುದು ಜ್ಯೋತಿರ್ಲಿಂಗ ಆದರ್ಶವುಳ್ಳ ಉಕ್ತಿಯನ್ನು ಬಳಸಿ ರಚಿಸಿದ ಯಶಸ್ವಿ ಪ್ರಬಂಧವಾಗಿದೆ.

'ಮಹತ್ವದ ಲೇಖಕ ಎಂದರೆ ಯಾರು?' ಎಂಬ ಶೀರ್ಷಿಕೆಯಡಿಯಲ್ಲಿ ಮುಗಳಿ ಅವರು ಈ ಪ್ರಬಂಧವನ್ನು ರಚಿಸಿದ್ದಾರೆ. ಸಾಹಿತ್ಯ ವಲಯದಲ್ಲಿ ದೊಡ್ಡ ಲೇಖಕ, ಶ್ರೇಷ್ಠ ಕವಿ ಎಂಬ ರೂಢಿಯ ಅರ್ಥದಲ್ಲಿರುವ ಮಹತ್ವದ ಲೇಖಕರು ಯಾರು? ಅವರ ಲಕ್ಷಣವೇನು? ಅವರನ್ನು ಗುರುತಿಸುವುದು ಹೇಗೆ? ಎಂಬ ಪ್ರಶ್ನೆಗಳನ್ನು ರಚಿಸಿಕೊಂಡು ಉತ್ತರ ಹುಡುಕಲು ಮುಂದಾದಂತೆ ಬರವಣಿಗೆ ಮೂಡಿಬಂದಿದೆ. ಮುಗಳಿ ಅವರು ಇಂದಿನ ಲೇಖಕ, ಬರಹಗಾರರಿಗೆ ಒಂದು ಕಿವಿಮಾತನ್ನು ಹೇಳಿದಂತಿದೆ. ಹೊಸದಾಗಿ ಬರವಣಿಗೆ ಮಾಡುವವರಿಗೆ ಒಂದು ಪೂರ್ವಸಿದ್ಧತೆ ಬೇಕು. ಮಹತ್ವದ ಲೇಖಕನಾಗಬೇಕೆನ್ನುವ ವ್ಯಕ್ತಿಯು ತನ್ನ ಹೊಣೆಗಾರಿಕೆಯನ್ನು ಅರಿತುಕೊಂಡು ಮಾಡಿಕೊಳ್ಳಬೇಕಾದ ಪೂರ್ವಸಿದ್ಧತೆಯು ಉತ್ತಮವಾದ ಚಟುವಟಿಕೆಗಳಿಂದ ಕೂಡಿರಬೇಕು. ಎಲ್ಲಾ ರೀತಿಯಿಂದಲೂ ಕೃತಿಗಳನ್ನು ಓದಿ ಮನನ ಮಾಡಿಕೊಳ್ಳಬೇಕು. ಕಾವ್ಯ, ಕತೆ, ನಾಟಕ, ಕಾದಂಬರಿ ಸೃಜನಾತ್ಮಕ ಕೃತಿಗಳನ್ನು ರಚಿಸಲು ಪ್ರತಿಭೆ ಮುಖ್ಯವೆಂದು ತಿಳಿಸುತ್ತಾರೆ. ಪ್ರತಿಭೆಯು ಯಾರಲ್ಲಿ, ಯಾವ ರೀತಿಯಲ್ಲಿ, ಯಾವ ಸನ್ನಿವೇಶದಲ್ಲಿ ಪ್ರಕಟವಾಗುತ್ತದೆ, ಹೇಗೆ ವಿಕಸನಗೊಳ್ಳುತ್ತದೆಂದು ಕರಾರುವಕ್ಕಾಗಿ

ಹೇಳಲಾಗದು. ಆದ್ದರಿಂದ ನಾವು ಮಾಡುವ ಕೆಲಸ ಓದು ಮತ್ತು ಬರಹ ನಿರಂತರವಾಗಿ ನಡೆಯಬೇಕೆಂದಿದ್ದಾರೆ.

ಒಬ್ಬ ಉತ್ತಮ ಸೃಜನಶೀಲ ಬರಹಗಾರನಾಗಲು ಅನುಭವ, ಆಲೋಚನೆ, ಅಭಿವ್ಯಕ್ತಿ ಈ ಮೂರು ಮುಖ್ಯ ಅಂಶಗಳು ಮುಖ್ಯವೆಂದು ತಿಳಿಸುತ್ತಾರೆ. ಅನುಭವವು ಸಾಮಾನ್ಯವಾಗಿ ಅವನ ಸುತ್ತಮುತ್ತಲಿನ ಪರಿಸರ, ಓದು-ಬರಹದ ಮೂಲಕ ಬರುವಂತದ್ದಾಗಿದೆ. ಆಲೋಚನೆಯ ಸಾಹಿತ್ಯ ಕೃತಿಗಳನ್ನು ಹೆಚ್ಚು ಓದಬೇಕು. ಯಾವುದೇ ಕೃತಿರಚನೆಯಲ್ಲಿ ಆತುರವಾಗಿ ಬದಲಾವಣೆ ಮಾಡಲು ಮುಂದಾಗಬಾರದು. ಬರವಣಿಗೆ ಮಾಡುವ ಮುನ್ನ ಆ ವಿಷಯಕ್ಕೆ ಸಂಬಂಧಿಸಿದಂತೆ ಮಾಹಿತಿಯನ್ನು ಸಂಗ್ರಹಿಸಿ ಅರಿತವರಿಂದ ಜ್ಞಾನ ಪಡೆದುಕೊಳ್ಳಬೇಕೆಂದು ತಿಳಿಸುತ್ತಾರೆ. ಬರಹಗಾರನಾದವನು ತನ್ನ ಸಾಹಿತ್ಯ ಕೃತಿಯಲ್ಲಿ ಅನುಭವ, ಆಲೋಚನೆಗಳಿಗೆ ಕೊಡುವ ವಿಶಿಷ್ಟರೂಪ, ಅದನ್ನು ನಿರೂಪಿಸುವ ಶೈಲಿಯಿಂದ ಅಭಿವ್ಯಕ್ತಿಕ್ರಮ ರೂಪುಗೊಳ್ಳುತ್ತದೆ. ಅಂತಹ ಬರಹವು ಮಹತ್ವವನ್ನು ಪಡೆಯುತ್ತದೆ.

'ಅಭಿರುಚಿ' ಪ್ರಬಂಧದಲ್ಲಿ ಮುಗಳಿ ಅವರು ಅಭಿರುಚಿಯೆಂಬುದು ಒಬ್ಬೊಬ್ಬರಲ್ಲಿ ಒಂದೊಂದು ರೀತಿಯಲ್ಲಿ ಇರುವುದನ್ನು ಗಮನಿಸಬಹುದಾಗಿದೆ ಎಂದಿದ್ದಾರೆ. ಅಭಿರುಚಿ ವಿಚಾರದಲ್ಲಿ ಇದು ಬೇಕು ಇದು ಬೇಡ ಎನ್ನುವ ಮಾತಿನಿಂದ 'ಲೋಕೋ ಭಿನ್ನರುಚಿ' ಎಂಬ ಗಾದೆ ಮಾತು ಇದರ ದ್ಯೋತಕವಾಗಿದೆ. ವಿಭಿನ್ನ ಅಭಿರುಚಿ ಹೊಂದಿದ ಜನರು ಸಂಸ್ಕೃತಿಯನ್ನು ಅನಾವರಣಗೊಳಿಸುತ್ತಾ ಹೋಗುತ್ತಾರೆ. ಪ್ರತಿಯೊಬ್ಬರು ನಿಮ್ಮಲ್ಲಿರುವ ಸಹಜ ಅಭಿರುಚಿಯನ್ನು ನೀವು ಅರಿತುಕೊಳ್ಳಬೇಕು. ಅದನ್ನು ಸದಭಿರುಚಿಯಾಗಿ ರೂಪಿಸಿಕೊಳ್ಳಬೇಕು. ನಿಮ್ಮ ಸುತ್ತಮುತ್ತಲಿನ ಪರಿಸರದಲ್ಲಿ ಅದಕ್ಕೆ ಯೋಗ್ಯವಾದದ್ದನ್ನು ಮಾತ್ರ ಸ್ವೀಕರಿಸಬೇಕು. ಯೋಗ್ಯವಲ್ಲದ್ದನ್ನು ಸ್ವೀಕರಿಸಬೇಕಾಗಿ ಬಂದರೂ ಅದಕ್ಕೆ ಸ್ಪಂದಿಸುವ ನಿಮ್ಮ ರೀತಿ ಉನ್ನತವೂ, ಬಲಿಷ್ಠವೂ ಆಗಬೇಕೆಂದು ತಿಳಿಸುವ ಮುಗಳಿ ಅವರು ನಿಮ್ಮ ವಿದ್ಯಾಭ್ಯಾಸದ ಕಡೆಗೆ ಹೆಚ್ಚಿನ ಅಭಿರುಚಿಯನ್ನು ಬೆಳೆಸಿಕೊಳ್ಳಬೇಕು. ನಿಮ್ಮ ಬಿಡುವಿನ ವೇಳೆಯಲ್ಲಿ ಯಾವುದಾದರೂ ಕಲೆ, ಸಾಹಿತ್ಯ, ಸಂಗೀತದಂತಹ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವಂತೆ ಅಭಿರುಚಿ ಹೊಂದಬೇಕೆಂದು ಬೋಧನೆ ಮಾಡುವ ರೀತಿಯಲ್ಲಿ ಪ್ರಬಂಧ ಮೂಡಿಬಂದಿದೆ.

'ಕನ್ನಡದ ಕರೆ': ಮುಗಳಿ ಅವರ ಬಹುತೇಕ ಲಲಿತಪ್ರಬಂಧಗಳು ಕನ್ನಡ ನಾಡಿನ ಏಳಿಗೆ, ಕಳಕಳಿ, ಮಮಕಾರ, ಕನ್ನಡಿಗರನ್ನು ಒಗ್ಗೂಡಿಸುವಂತಹ ಧಾಟಿಯಲ್ಲಿರುವಂತಹವುಗಳಾಗಿವೆ. "ಕನ್ನಡಕ್ಕೆ ಕನ್ನಡಿಗರನ್ನು ಒಂದುಗೂಡಿಸುವ ಶಕ್ತಿ ಇಂದು ನಿನ್ನೆಯದಲ್ಲ. ಸಾವಿರಾರು ವರ್ಷಗಳಿಂದ ಬೆಳೆದುಬಂದಿರುವ ಜಾಗೃತಿ. ಕನ್ನಡವೆಂದರೆ ಬರಿ ನುಡಿಯಲ್ಲ, ಬರಿ ನಾಡಲ್ಲ ಕನ್ನಡವೆಂಬುದು ಕನ್ನಡ ನುಡಿಯನ್ನಾಡುವ ಜನರು ತಮ್ಮ ಇತಿಹಾಸ, ತಮ್ಮ ಸಾಹಿತ್ಯ, ತಮ್ಮ ಸಂಸ್ಕೃತಿಗಳಿಗನುಗುಣವಾಗಿ ನಮ್ಮನ್ನು ನಾವು ರೂಪಿಸಿಕೊಳ್ಳಬೇಕೆಂದು ಕರೆ ನೀಡಿದಂತಿದೆ. ಹಾಗೆಯೇ ಕನ್ನಡ ತಾಯಿಯೆಂದರೆ ಬರಿ ರೂಪವಲ್ಲ, ಕಲ್ಪನೆಯ ಬಿಸಿಲುಗುದುರೆಯಲ್ಲ, ಭಾವನೆಯ ಹುಚ್ಚು ಹೊಳೆಯಲ್ಲ, ಕನ್ನಡ ತಾಯಿಯೆಂದರೆ ಸುವರ್ಣಚಿತ್ರವನ್ನು ತನ್ನ ಧ್ವಜವಾಗಿ ಮಾಡಿಕೊಂಡು ಮೆರೆಯುವ ಕನ್ನಡಿಗರ

ಅಭಿಮಾನ ದೇವತೆ. ನೇರವಾದ ಮಾತಿನಲ್ಲಿ ಹೇಳುವುದಾದರೆ, ಕನ್ನಡ ತಾಯಿಯೆಂದರೆ ಕನ್ನಡಿಗರ ಇತಿಹಾಸ, ಸಾಹಿತ್ಯ, ಸಂಸ್ಕೃತಿಯಲ್ಲಿ ಹಿರಿದಾದ ಹೆಮ್ಮೆಪಡಬಹುದಾದ ಸದ್ಗುಣಗಳ ಸಾರಸರ್ವಸ್ವ"(ಪು.೧) ಎಂದಿದ್ದಾರೆ.

ಕನ್ನಡಿಗನಾದವನು ವಿಚಾರವಂತನು ಗುಣವಂತನಾಗಿ ಸಾಧ್ಯವಾದಷ್ಟು ಓದಿಕೊಳ್ಳಬೇಕು. ಓದಿದ್ದನ್ನು ಮನನ ಮಾಡಿಕೊಳ್ಳಬೇಕು. ಹತ್ತು ಬಗೆಯ ವಿಚಾರಗಳನ್ನು ಹಲವು ದೃಷ್ಟಿಕೋನಗಳಿಂದ ಅರಿತುಕೊಳ್ಳಬೇಕು. ಅವುಗಳ ಮಹತ್ವವನ್ನು ತಿಳಿಯಬೇಕು. ಹೊಸ ಅನುಭವ, ವಿಚಾರಗಳಿಂದ ಬದಲಾಗುವಷ್ಟು ಸೃಜನಶೀಲವಾಗಬೇಕು. ಒಂದು ವೇಳೆ ವಿಚಾರಶೀಲನು, ವಿದ್ಯಾವಂತನು ಆಗಲಿ ಬಿಡಲಿ ವಿವೇಕಿಯಾಗಿರಬೇಕು. ಬುದ್ಧಿವಂತನಾಗಬೇಕು. ತರ್ಕಶಕ್ತಿಯನ್ನು ಬೆಳೆಸಿಕೊಳ್ಳಬೇಕು. ಶ್ರದ್ಧೆಯನ್ನು ಬೆಳೆಸಿಕೊಳ್ಳಬೇಕು. ಆದರೆ ಮೂಢ ಸಂಪ್ರದಾಯಗಳಿಗೆ ಒಳಗಾಗಬಾರದೆಂದು ತಿಳಿಸುತ್ತಾರೆ.

'ಕನ್ನಡ ದರ್ಶನದಿಂದಲೇ ಕನ್ನಡಿಗರ ಭಾವೈಕ್ಯ' ಲೇಖನವು ೧೯೬೭ರಲ್ಲಿ ಸಿದ್ಧಗಂಗಾ ಮಠದಲ್ಲಿ ನಡೆದ ಸಾಹಿತ್ಯ ಸಮ್ಮೇಳನದ ಮುಗಳಿ ಅವರ ಅಧ್ಯಕ್ಷ ಭಾಷಣವಾಗಿದೆ. ಮೊದಲ ಭಾಗದಲ್ಲಿ ಭಾರತೀಯರ ಐಕ್ಯತೆ, ಒಗ್ಗೂಡುವಿಕೆಯ ಕುರಿತಂತೆ ಮಾತನಾಡಿದ್ದಾರೆ. ಭಾರತೀಯರೆಲ್ಲ ಒಂದುಗೂಡಬೇಕು. ಭಾಷೆ, ಸಾಹಿತ್ಯ, ಸಂಸ್ಕೃತಿ ಮೂಲಕ ಐಕ್ಯತೆಯನ್ನು ಸಾಧಿಸಬೇಕು. "ನಾವು ಪರತಂತ್ರರಾಗಿದ್ದಾಗ ತೋರಿದ ಸ್ವಾತಂತ್ರ್ಯಪ್ರೇಮ ಮತ್ತು ಐಕ್ಯಭಾವ ನಾವು ಸ್ವತಂತ್ರರಾದ ಮೇಲೆ ಎಲ್ಲಿ ಹೋದವು? ಪರತಂತ್ರ ಸ್ಥಿತಿಯಲ್ಲಿ ನಾವು ನಿಜವಾಗಿಯೂ ಸ್ವತಂತ್ರರಾಗಿದ್ದೆವು. ಸ್ವತಂತ್ರರಾದ ಕೂಡಲೆ ಪರತಂತ್ರ ಸ್ಥಿತಿಗೆ ಇಳಿದೆವು ಎಂದು ಅನ್ನುವಂತಾಯಿತೆ. ಸ್ವಾತಂತ್ರ್ಯ ಬಂದೊಡನೆ ಸ್ವರ್ಗವೇ ಕಣ್ಣು ತೆರೆದಂತೆ ಆಗಿ ನಾವು ಸುಖ ಸಂತೋಷಗಳ ಬೆನ್ನುಹತ್ತಿದೆವು. ಪ್ರಜಾಪ್ರಭುತ್ವದಿಂದಾಗಿ ಅಧಿಕಾರದಾಸೆ, ಸಂಕುಚಿತಭಾವ, ಆಲಸ್ಯಗಳಿಗೆ ನಾವು ಬಲಿಯಾಗಿದ್ದೇವೆ"(ಪು.೨೮) ಎಂದು ತಿಳಿಸುತ್ತಾರೆ. ಅದರ ಜೊತೆಗೆ ಕನ್ನಡ ಭಾಷೆಯೊಡನೆ ಇತರ ಭಾಷೆಗಳನ್ನು ಪ್ರೀತಿ, ಗೌರವದಿಂದ ಕಾಣಬೇಕು. ಸಾಹಿತ್ಯವನ್ನು ರಚಿಸುವರು ಯಾವುದೋ ಸ್ಪರ್ಧೆಗಾಗಿ ಇಲ್ಲವೆ ತುರ್ತು ಪರಿಸ್ಥಿತಿಯ ಅವಸರಕ್ಕಾಗಿ ಪ್ರಚಾರದ ಧಾಟಿಯಲ್ಲಿ ಕವನ, ಕತೆ, ನಾಟಕಗಳನ್ನು ಎಷ್ಟು ಬರೆದರೂ ಅವುಗಳೆಲ್ಲವೂ ನೀರಿನ ಮೇಲೆ ಬರೆದಂತಹವುಗಳಾಗುವವು. ಆದ್ದರಿಂದ ರಾಷ್ಟ್ರಪ್ರೇಮ ವಿಶಾಲವಾದ ಆಳವಾದ ವಿಚಾರಗಳು, ಭಾರತೀಯ ಸಂಸ್ಕೃತಿ ಅರಿತು ಕೃತಿಗಳನ್ನು ರಚಿಸಲು ಮುಂದಾಗಬೇಕೆಂದು ಕರೆ ನೀಡಿದ್ದಾರೆ. ಪ್ರತಿಯೊಬ್ಬ ಭಾರತೀಯನು ಸಹಿಷ್ಣುತಾಭಾವದಿಂದ ಕೂಡಿರಬೇಕು. ಭಿನ್ನ ಭಿನ್ನ ಧರ್ಮ, ಮತ, ಪಂಥ, ಭಾಷೆ, ವಿವಿಧ ರೀತಿಯ ಸಾಹಿತ್ಯ, ವಿವಿಧ ಪರಂಪರೆ ಇವುಗಳಿಂದ ಕೂಡಿದ ಭಾರತೀಯ ಸಂಸ್ಕೃತಿಯಲ್ಲಿ ಬೆರೆತು ಹೋಗುವಂತದ್ದಾಗಬೇಕೆಂದು ಕರೆ ನೀಡಿದ್ದಾರೆ.

ಭಾಷೆಯ ಸಮಸ್ಯೆ ಕುರಿತು ತಿಳಿಸುವ ಮುಗಳಿ ಅವರು "ಹಿಂದಿ ಭಾಷೆಯನ್ನು ರಾಷ್ಟ್ರಭಾಷೆಯೆಂದು ಮಾಡಲಾಗಿದೆ. ಇದರಿಂದ ಮತಭೇದ ಉಂಟಾಗಿ ಭಾವನೆಗಳಿಗೆ ಧಕ್ಕೆಯುಂಟಾಗಿದೆ. ಅದರ ಬಗ್ಗೆ ಹೇಳುವುದಾದರೆ ಹಿಂದಿಯ ಬಗ್ಗೆ ಉತ್ತರದವರು ದುಡುಕು ಅದರಿಂದ ದಕ್ಷಿಣದವರಿಗೆ ಆದ

ಮಿಡುಕು, ಇದರಿಂದ ಭಾರತದ ಒಡಕು ಎಂದು ಕಾಣುವಂತದ್ದಾಗಿದೆ. ಅದೇರೀತಿ ಅಂತಾರಾಷ್ಟ್ರೀಯ ಸೌಕರ್ಯದ ದೃಷ್ಟಿಯಿಂದಾಗಿ ಇಂಗ್ಲಿಷ್ ಭಾಷೆಯನ್ನಾಗಿ ರೂಪಿಸುವ ಮನಸ್ಥಿತಿಗಳಿವೆ" ಎಂಬುದನ್ನು ತಿಳಿಸಿದ್ದಾರೆ. ಕನ್ನಡ ಸಾಹಿತ್ಯದ ಪ್ರೇರಣೆಗಳ ಬಗ್ಗೆ ತಿಳಿಸುವ ಮುಗಳಿ ಅವರು, ಹೊಸ ಸಾಹಿತ್ಯಕ್ಕೆ ಇಪ್ಪತ್ತನೇ ಶತಮಾನದ ನಾಗರಿಕತೆಗಳಲ್ಲಿ ತೋರಿದ ಎಲ್ಲಾ ಪ್ರೇರಣೆಗಳು ಬಂದಿವೆ. ಆಧುನಿಕ ಜಗತ್ತಿನ ಯಾವ ಭಾಗವೂ ಇದರಿಂದ ಹೊರತಾಗಿಲ್ಲ. ಹಳೆ ಸಾಹಿತ್ಯದಲ್ಲಿ ನೀತಿ, ಧರ್ಮ, ಮತ ಇವು ಪ್ರೇರಣೆಯಾಗಿದ್ದರೆ ಇಂದು ಸಮಾನತೆಯೆಂಬ ಮೂಲ ಸಂಸ್ಕೃತಿಗೆ ಆ ಪ್ರೇರಣೆ ದೊರೆತಂತಾಗಿದೆ. ಕಾವ್ಯ, ಸಣ್ಣಕತೆ, ಕಾದಂಬರಿ, ನಾಟಕ, ಪ್ರಬಂಧ, ವಿಮರ್ಶೆ, ಚರಿತ್ರೆ ಈ ಮೊದಲಾದ ರೂಪಗಳಲ್ಲಿ ಹೊಸಗನ್ನಡವು ಮೇಲ್ಮಟ್ಟವನ್ನು ಸಾಧಿಸಿದೆ. ಅದರಲ್ಲೂ ಕತೆ–ಕಾದಂಬರಿ ವಲಯದಲ್ಲಿ ತಂತ್ರ, ವೈವಿಧ್ಯತೆಯಲ್ಲಿ ಹೊಸ ಪ್ರಯೋಗವನ್ನೇ ಕಂಡುಕೊಂಡಂತಾಗಿದೆ.

ಮುಗಳಿ ಅವರು ಯುವ ಬರಹಗಾರರಿಗೆ ನೀಡಿದ ಕೆಲವು ಸಲಹೆ ಸೂಚನೆಗಳು ಈ ರೀತಿ ಇವೆ. "ಇಂದಿನದು ಅವಸರ ಯುಗವೆಂದು ಅವಸರದ ಬರವಣಿಗೆಗೆ ಯಾರೂ ಕೈಹಾಕಬಾರದು. ಬರವಣಿಗೆ ಮಾಡುವ ಮೊದಲು ಪೂರ್ವಸಿದ್ಧತೆಯನ್ನು ಮಾಡಿಕೊಳ್ಳಬೇಕು. ಲೇಖಕನ ವ್ಯಕ್ತಿತ್ವದ ಅಚ್ಚು ಅವನ ಲೇಖನಗಳ ತಿಳಿದೋ ತಿಳಿಯದೆಯೋ ಮೂಡುತ್ತಿರುತ್ತದೆ. ಈ ವ್ಯಕ್ತಿತ್ವವು ಸರ್ವಾಂಗೀಣ ವ್ಯಕ್ತಿತ್ವದಿಂದಲೇ ಸಾಧ್ಯ. ಇದಕ್ಕಾಗಿ ಧೀರ್ಘ ಕಾಲದ ಪರಿಶ್ರಮ ಅಗತ್ಯ. ಪರಿಶ್ರಮವು ವ್ಯಾಸಂಗ, ವಿಚಾರ ಮಂಥನ, ಮನಗಳ ರೂಪದಲ್ಲಿರುವಂತೆ ತೆರೆದ ಕಣ್ಣಿನಿಂದ ಹತ್ತಿರ ಹೋಗಿ ದೂರನಿಂತು ಜೀವನವನ್ನು ನೋಡುವುದರಲ್ಲಿರುತ್ತದೆ" ಎಂದಿರುವ ಮುಗಳಿ ಅವರು ಲೇಖಕನಾದವನಿಗೆ ಅನುಭವ ಮತ್ತು ವಿಚಾರಗಳ ಸಂಪತ್ತಿನೊಂದಿಗೆ ಭಾಷಾಸಂಪತ್ತು ಬೇಕೆಂದು ತಿಳಿಸುತ್ತಾರೆ. ಈ ರೀತಿಯಾಗಿ ಅಧ್ಯಕ್ಷರ ಭಾಷಣವು ಕನ್ನಡ ನಾಡಿನ ಏಳಿಗೆಗಾಗಿ, ಕನ್ನಡ ಸಂಸ್ಕೃತಿ ಉಳಿವು, ಬೆಳವಣಿಗೆಗಾಗಿ ಧ್ಯಾನಿಸುವಂತದ್ದಾಗಿದೆ.

ಅದೇ ರೀತಿ ೧೯೮೨ರಲ್ಲಿ ಮೈಸೂರು ದಸರಾ ಕವಿಸಮ್ಮೇಳನದ ಅಧ್ಯಕ್ಷೀಯ ಭಾಷಣದಲ್ಲಿ ಮುಗಳಿ ಅವರು ಈ ರೀತಿ ತಿಳಿಸಿದ್ದಾರೆ. ಕನ್ನಡ ಸಾಹಿತ್ಯದ ಏಳಿಗೆಯನ್ನು ಕುರಿತು ಮಾತನಾಡುವ ಮುಗಳಿ ಅವರು 'ಪಂಪ, ರನ್ನ, ಹರಿಹರ, ಬಸವಣ್ಣ, ರತ್ನಾಕರ, ಕುಮಾರವ್ಯಾಸ ಕೃತಿಗಳ ಪರಿಚಯವನ್ನು ಕನ್ನಡಿಗರಿಗೆ ಮಕ್ಕಳಿಗೆ ಮಾಡಿಕೊಡಬೇಕು. ಇದು ಯಾವುದೇ ಮತಧರ್ಮದ ವಿಚಾರವಲ್ಲ. ಕನ್ನಡಿಗರ ಸಂಸ್ಕೃತಿಯ ಬಗ್ಗೆ ಅರಿಯಬೇಕಾದರೆ ಇವುಗಳ ಪರಿಚಯವಾಗಬೇಕೆಂದು' ತಿಳಿಸುವ ಮುಗಳಿ ಅವರು ವಿಚಾರಗೋಷ್ಠಿಗಳಿಂದ ಹೆಚ್ಚಿನ ಸ್ಫೂರ್ತಿ ಸಿಗಬೇಕಾದಲ್ಲಿ 'ಬಸವಣ್ಣನವರ ವಚನ ನನ್ನದು, ಪಂಪನ ಮಾತು ನನ್ನದು, ಹರಿಹರ ಕುಮಾರವ್ಯಾಸರದೂ ನನ್ನವು ಎನ್ನುವಂತ ಭಾವ ಮೂಡಿ ನನ್ನದು ಎಂಬ ಹೆಮ್ಮೆ ಕೇವಲ ಭಾವನಾತ್ಮಕವಾಗಿರಬಾರದು ಅವುಗಳನ್ನು ಓದಿ ಅರ್ಥೈಸಿಕೊಳ್ಳಬೇಕು' ಎನ್ನುತ್ತಾರೆ.

ಮಹಾದೇವಿಯಕ್ಕನ "ಬೆಟ್ಟದ ಮೇಲೊಂದು ಮನೆಯ ಮಾಡಿ ವಚನ ಬಹುಜನರಿಗೆ ತಿಳಿದಿದೆ. ಆದರೆ ಇಂಥ ಮಾತುಗಳು ಜೀವನದಲ್ಲಿ ಅನುಭವಕ್ಕೆ ಬರುವಂತಾಗಬೇಕು. ಮಹಾದೇವಿಯಂತ ಹಿರಿಯ ಶರಣೆಯನ್ನು ಕಂಡ ಈ ನಾಡಿನಲ್ಲಿ ನಮ್ಮ ಸ್ತ್ರೀಯರು ಲೇಖನಿಯ ದೃಷ್ಟಿಯಿಂದ ಹಿಂದೆ ಸರಿದಿದ್ದಾರೆ. ಅವರಿನ್ನೂ ಯಾವುದೇ ಪುರುಷರಿಗೆ ಸರಿಯಾಗಿ ನಿಲ್ಲುವ ಸಾಮರ್ಥ್ಯ ಪಡೆದಿಲ್ಲ. ಏಳೆಂಟುನೂರು ವರ್ಷಗಳ ಹಿಂದೆ ಮಹಾದೇವಿಯಕ್ಕ ಎಂಥಾ ಮಾತು ಹೇಳಿದಳೋ ಆ ಧೈರ್ಯವನ್ನು ನಾವು ಇಂದು ನಮ್ಮ ಜೀವನದಲ್ಲಿ ತಂದುಕೊಳ್ಳದೆ, ಕಾಣದೆ ಹೋದರೆ ನಮ್ಮ ಮಹಿಳೆಯರು ನಮ್ಮ ಹೃದಯದ ಪೋಷಕರಾಗಬೇಕಿಲ್ಲ. ನಮ್ಮ ಶಕ್ತಿಯನ್ನು ದೊಡ್ಡ ಪ್ರಮಾಣದಲ್ಲಿ ತೋರಿಸಬೇಕು"(ಪು.೫೯) ಎಂದು ಮಹಿಳಾಪರ ಚಿಂತಕರಿಗೆ ಪ್ರೇರಣೆಯ ಮಾತುಗಳನ್ನಾಡಿದ್ದಾರೆ.

'ಕನ್ನಡ ನಾಡಿನಲ್ಲಿ ಪರೋಪಕಾರ' ಮುಗಳಿ ಅವರ ಪ್ರಬಂಧ ಕೃತಿಯ ಮುನ್ನುಡಿಯಲ್ಲಿ ಹೇಳಿಕೊಂಡಂತೆ, "ಚಿಕ್ಕ ವಯಸ್ಸಿನ ಬಾಲಕ ಬಾಲಕಿಯರನ್ನು ಉದ್ದೇಶಿಸಿ ಬರೆಯಬೇಕೆಂದೂ, ಇದರ ಭಾಷೆ ಸರಳವೂ ಸುಲಲಿತವೂ ಆಗಿರಬೇಕೆಂದು ನನಗೆ ಸೂಚಿಸಲಾಗಿತ್ತು. ಆದ್ದರಿಂದ ಆ ಮಾರ್ಗವನ್ನು ಅನುಸರಿಸಲಾಗಿದೆ"(ಮುನ್ನುಡಿ). ಈ ಪ್ರಬಂಧವು ಕವಿರಾಜಮಾರ್ಗದಲ್ಲಿ ಬರುವ ಮೊದಲ ರಾಷ್ಟ್ರಕೂಟ ದೊರೆ ನೃಪತುಂಗನಿಂದ ಆರಂಭಗೊಂಡು ಶಾತವಾಹನ, ಕದಂಬ, ಗಂಗ, ಹೊಯ್ಸಳ, ಚಾಳುಕ್ಯ, ರಾಷ್ಟ್ರಕೂಟ, ವಿಜಯನಗರ, ಮೈಸೂರು ಮುಂತಾದ ಅರಸು ಮನೆತನಗಳಲ್ಲಿ ಭಿನ್ನಮತದ ವಿದ್ವಾಂಸರಿಗೂ ಕವಿಗಳಿಗೂ ಆಶ್ರಯ ಕೊಟ್ಟು ಪ್ರೋತ್ಸಾಹಿಸಿರುವುದರ ಕುರಿತು ತಿಳಿಸುತ್ತಾರೆ. ಅದೇ ರೀತಿ ವಿಕ್ರಮಾರ್ಜುನ ವಿಜಯ ಅಥವಾ ಪಂಪಭಾರತದಲ್ಲಿ ಬರುವ ಬನವಾಸಿ ಪದ್ಯ ವರ್ಣನೆಯಲ್ಲಿ ತ್ಯಾಗ, ಭೋಗ, ಅಕ್ಕರೆ, ಗೇಯ, ಗೋಷ್ಠಿ ಬಗ್ಗೆ ತಿಳಿಸುವ ಪದ್ಯಗುಣದಲ್ಲಿ ತ್ಯಾಗ ಮೊದಲನೆಯದು, ಆಮೇಲಿನದು ಭೋಗ ಅಂದರೆ ತ್ಯಾಗವನ್ನು ಮನುಷ್ಯ ಮೊದಲು ಕಲಿಯಬೇಕು ಆಮೇಲೆ ಭೋಗವನ್ನು ಅನುಭವಿಸಬೇಕೆಂದಿದ್ದಾರೆ.

೧೨ನೇ ಶತಮಾನದ ವಚನ ಚಳುವಳಿಯಿಂದಾಗಿ ಸಮಾಜಪರವಾದ ದಯೆ, ಸೌಜನ್ಯ, ದಾನ ಗುಣಗಳು ಎತ್ತಿಹಿಡಿಯಲ್ಪಟ್ಟವು. ದಯವಿಲ್ಲದ ಧರ್ಮವಾವುದಯ್ಯ? ದಯವೇ ಧರ್ಮದ ಮೂಲವಯ್ಯ ಎಂಬ ವಚನೋಕ್ತಿ ಸಾರದೊಂದಿಗೆ ಪರೋಪಕಾರ ಗುಣದ ಬಗ್ಗೆ ತಿಳಿಸುತ್ತಾರೆ. "ಕಾಗೆಯೊಂದಗುಳ ಕಂಡರೆ ಕರೆಯದೆ ತನ್ನ ಬಳಗವನು? ಕೋಳಿಯೊಂದು ಕುಟುಕ ಕಂಡರೆ ಕರೆಯದೆ ತನ್ನ ಕುಲವೆಲ್ಲವ? ಶಿವಭಕ್ತನಾಗಿ ಭಕ್ತಿ ಪಕ್ಷವಿಲ್ಲದಿದ್ದರೆ ಕಾಗೆ ಕೋಳಿಯಿಂದ ಕರಕಷ್ಟ ಕೂಡಲಸಂಗಮದೇವಾ"(ಪು.೧೨). ದಾನವನ್ನು ಮಾಡಿದರೆ ಮನಸ್ಸು ಸಂತೋಷಗೊಳ್ಳುತ್ತದೆ. ಇದರಿಂದ ಸ್ವಾವಲಂಬನೆಯ ಜೀವನ ನಡೆಸಲು ಸಹಕಾರಿಯಾಗುತ್ತದೆ ಎಂಬುದನ್ನು ಪ್ರಸ್ತಾಪಿಸುತ್ತಾರೆ.

"ಕೊಟ್ಟಿದ್ದು ತನಗೆ । ಬಚ್ಚಿಟ್ಟಿದ್ದು ಪರರಿಗೆ
ಕೊಟ್ಟಿದ್ದು ಕೆಟ್ಟಿತೆನಬೇಡ । ಮುಂದಕ್ಕೆ
ಕಟ್ಟಿಹುದು ಬುತ್ತಿ ಸರ್ವಜ್ಞ"(ಪು.೧೩)

ಮನುಷ್ಯನು ಕೊಟ್ಟಿದ್ದು ಮತ್ತೆ ಬೇರೊಂದು ರೂಪದಲ್ಲಿ ಇಮ್ಮಡಿಯಾಗಿ ಬರುತ್ತದೆ. ಆದರೆ ಬಚ್ಚಿಟ್ಟದ್ದು ಪರರಿಗೆ ಅಂದರೆ ಕಳ್ಳ ಕಾಕರ ಪಾಲಿಗೆ ಹೋಗುತ್ತದೆ. ಆದ್ದರಿಂದ ಇರುವುದರಲ್ಲಿಯೇ ಪರರಿಗೆ ಉಪಕಾರ ಮಾಡಬೇಕೆಂದು ತಿಳಿಸುತ್ತಾರೆ. "ಚಾಳುಕ್ಯರಾಜ ವಿಕ್ರಮಾದಿತ್ಯನ ದಂಡನಾಯಕನಾದ ಸರ್ವದೇವನು ಸರ್ವಗುಣ ಸಂಪನ್ನನಾಗಿದ್ದನು. ಅವನು ಯುದ್ಧದಲ್ಲಿ ಹಿಮ್ಮೆಟ್ಟಿದಂದು ಪರವನಿತೆಗೆ ಮನಸೋತಂದು, ಶರಣುಹೊಕ್ಕವರನ್ನು ಕಾಯದಂದು ಭೂಮಿ ನಡುಗುವುದು. ದಿಗ್ಗಜವು ಬೆದರುವುದು, ಬ್ರಹ್ಮನು ಬೆಚ್ಚುವನು. ಸಮುದ್ರವು ತನ್ನ ಮೇರೆಯನ್ನು ದಾಟುವುದು. ಈ ರೀತಿಯಲ್ಲಿ ಅವನ ಶೌರ್ಯ, ಶೌಚ, ದಾನ ಮತ್ತು ಕ್ಷಮೆ ಈ ಗುಣಗಳನ್ನು"(ಪು.೨೨) ವ್ಯಕ್ತಿಗತವಾಗಿ ಬಣ್ಣಿಸಿದ್ದಾರೆ.

ವಿಷ್ಣುವರ್ಧನನ ಪಟ್ಟದ ರಾಣಿಯಾದ ಶಾಂತಲಾದೇವಿಯು ಶಾಂತಿ ಗ್ರಾಮದ ಧರ್ಮೇಶ್ವರ ದೇವರಿಗೆ ಭೂಮಿಯನ್ನು ದಾನ ಬಿಟ್ಟಿದ್ದಳು. ದಾನಗುಣದಲ್ಲಿ ಹೆಸರುವಾಸಿಯಾದ ಅವಳು ಕಲಾವಿದೆ, ನರ್ತಕಿ ಯುದ್ಧದಲ್ಲಿ ಪರಿಣತಳಾಗಿದ್ದಳೆಂಬ ವಿವರ ತಿಳಿಸುತ್ತಾರೆ. ಹಾಗೆಯೇ ಶಾಂತಲೆಯ ಮೊಮ್ಮಗಳಾದ ಚಿಕ್ಕಶಾಂತಲೆಯು ಕೂಡ ಜೈನಳಾದರೂ ಸಹ ಅವಳ ನೆನಪಿಗಾಗಿ ಎಲೆಗುಂದದಲ್ಲಿ ಎರಡು ಶಿವಾಲಯ ಕಟ್ಟಿಸಿದ ವಿವರ ತಿಳಿಸುತ್ತಾರೆ. ಇವಳ ಮನಸ್ಸು ನಿರ್ಮಲ, ಇವಳ ನಡತೆ ನಿರ್ಮಲ ಎಂದು ಕವಿ ಬಣ್ಣಿಸಿರುವುದನ್ನು ಈ ಭಾಗದಲ್ಲಿ ದಾಖಲಿಸಿ ಚರ್ಚಿಸಿದ್ದಾರೆ. ರಾಜಲಕ್ಷ್ಮೀ ದೇವನ ಮಡದಿ ಹಾಗೂ ಚಂದ್ರಿಕಾದೇವಿಯು ದಾನಗುಣದವಳು ಎಂಬುದಾಗಿ ತಿಳಿಸುತ್ತಾರೆ. ಸಾಳುವೇಂದ್ರ ದೊರೆಯು ಮೆಚ್ಚಿಕೊಟ್ಟ ಒಗೆಯಕೆರೆ ಎಂಬ ಮಾನ್ಯಗ್ರಾಮವನ್ನು ಕೊಟ್ಟಿರುವ ವಿವರ ಅದರಲ್ಲಿ ಪಾರ್ಶ್ವನಾಥ ದೇವಾಲಯ ಕಟ್ಟಿಸಿ ಅದಕ್ಕೆ ಆ ಭೂಮಿಯನ್ನು ದಾನ ಮಾಡಿರುವ ವಿವರ ಒಳಗೊಂಡಿದೆ.

ದೇವಸ್ಥಾನ ಕಟ್ಟಲು, ಜೀರ್ಣೋದ್ಧಾರ ಮಾಡಲು ಭೂಮಿಯನ್ನು ದಾನವಾಗಿ ಬಿಟ್ಟಿರುವ ವಿವರವನ್ನು ಈ ಭಾಗದಲ್ಲಿ ತಿಳಿಸುತ್ತಾರೆ. ಬಳ್ಳಿಗಾವಿಯ ದೊಡ್ಡವ್ಯಾಪಾರಿಯ ಸೋವಿಸೆಟ್ಟಿ ಸೋಮೇಶ್ವರ ದೇವರ ಪ್ರತಿಷ್ಠಾಪಿಸಿ ಭೂಮಿ, ತೋಟ, ಅಂಗಡಿಗಳನ್ನು ದಾನ ಬಿಟ್ಟ ವಿವರಗಳನ್ನು ತಿಳಿಸುತ್ತಾರೆ. ಅದೇ ರೀತಿ ಹೊಯ್ಸಳರ ಎರಡನೆಯ ನರಸಿಂಹನ ಕಾಲದಲ್ಲಿ ಅವನ ದಂಡನಾಯಕನಾದ ಪೋಲಾಳ್ವನು ಹರಿಹರದಲ್ಲಿ ಹರಿಹರೇಶ್ವರ ದೇವಾಲಯವನ್ನು ಅದಕ್ಕೆ ಗ್ರಾಮವನ್ನು ಬಿಟ್ಟಿರುವ ವಿವರ ತಿಳಿಸುತ್ತಾರೆ. ಪಶ್ಚಿಮ ಚಾಳುಕ್ಯರ ಕಾಲದಲ್ಲಿ ಅಕ್ಕಮಹಾದೇವಿಯು ಜಿನ, ಬುದ್ಧ, ವಿಷ್ಣು, ರುದ್ರ ಎಲ್ಲ ದೇವರುಗಳನ್ನು ಆರಾಧಿಸುವಂತೆ ಸಹಿಷ್ಣುತಾ ಭಾವನೆಯನ್ನು ಹೊಂದಿದವಳಾಗಿದ್ದಳು ಎಂಬಂತೆ ತಿಳಿಸುತ್ತಾರೆ. ಅಂದಿನ ಕಾಲದ ವಿದ್ಯಾಕೇಂದ್ರಗಳಾದ ದೇವಸ್ಥಾನ, ಮಠ, ಅಗ್ರಹಾರಗಳು ಪ್ರಮುಖವಾಗಿ ಕಂಡುಬರುತ್ತಿದ್ದವು. ರಾಜರು ಕೊಟ್ಟ ದಾನದಿಂದಾಗಿ ಅಲ್ಲಿ ವಿದ್ಯೆ ಕಲಿಯಲು ಸಹಕಾರವಾಗುತ್ತಿತ್ತೆಂದು ಕ್ರಿ.ಶ. ಐದನೇ ಶತಮಾನದಿಂದಲೇ ಕರ್ನಾಟಕದಲ್ಲಿ ಅಗ್ರಹಾರಗಳಿದ್ದವೆಂದು ತಿಳಿಸುತ್ತಾರೆ. ಒಂದು ಊರನ್ನು ಅಗ್ರಹಾರವನ್ನಾಗಿ ಮಾಡಿ ಬ್ರಾಹ್ಮಣ ವಿದ್ವಾಂಸರಿಗೆ ದಾನವಾಗಿ

ಕೊಟ್ಟರೆ ಪುಣ್ಯ ಬರುವುದೆಂದು ರಾಜರ ನಂಬಿಕೆಯಾಗಿತ್ತು. ಕದಂಬರಾಜ ವೀರಸೋಮ ಭೂಮಿಪತಿ ಮೂರು ಹಳ್ಳಿಗಳಿಂದ ಕೂಡಿದ ಕೆಲ್ಲಿಗುಂಡ ಎಂಬ ಗ್ರಾಮದ ಪೂರ್ತಿ ಒಡೆತನವನ್ನು ಎಪ್ಪತ್ತಾರು ಬ್ರಾಹ್ಮಣರಿಗೆ ಬಿಟ್ಟುಕೊಟ್ಟನು. ವಿಷ್ಣುವರ್ಧನ ಹೊಯ್ಸಳನು ತನ್ನ ತಮ್ಮ ಉದಯಾದಿತ್ಯದೇವನ ವಿದ್ಯಾಭ್ಯಾಸಕ್ಕಾಗಿ ಕೆಲವತ್ತಿ ಎಂಬ ಊರನ್ನು ಅಗ್ರಹಾರವಾಗಿ ಮಾಡಿ ಅದನ್ನು ಬ್ರಾಹ್ಮಣರಿಗೆ ದಾನ ಕೊಟ್ಟ ವಿವರವು ದೊರೆಯುತ್ತದೆ.

ಅದೇ ರೀತಿ ಕೆರೆಕಟ್ಟೆ ಕಟ್ಟಿಸುವಾಗ ಅಂದಿನ ರಾಜರು, ಶ್ರೀಸಾಮಾನ್ಯರು ಯಾವ ರೀತಿ ಈ ಕಾರ್ಯದಲ್ಲಿ ತೊಡಗಿದ್ದಾರೆಂಬುದರ ಕುರಿತು ಇಲ್ಲಿ ತಿಳಿಸಿದ್ದಾರೆ. ಈ ರೀತಿ ನಡೆದುಕೊಳ್ಳಲು "ಎಲ್ಲದಕ್ಕೂ ಧರ್ಮವೇ ಸ್ಫೂರ್ತಿ ಕೊಡುತ್ತಿತ್ತು. ಪುಣ್ಯವೇ ಅವರ ಫಲವಾಗಿತ್ತು. ಚಟ್ಟಲದೇವಿ ತಿಳಿಸಿದಂತೆ ಧರ್ಮವನ್ನು ಮೊದಲು ಚಿಂತಿಸಬೇಕು. ಯೋಚಿಸಿ ಕೆರೆ, ಬಾವಿ, ಅರವಟಿಗೆ, ಬಸದಿ, ದೇಗುಲ, ತೀರ್ಥಛತ್ರ ಕಟ್ಟಿಸಬೇಕೆಂಬ ಹೇಳಿಕೆಯನ್ನು ತಿಳಿಸುತ್ತಾರೆ"(ಪು.೪೩). ಅಗ್ಗಿಷ್ಟಿಗೆ ಪ್ರತಿನಿತ್ಯ ಒಲೆ ಉರಿಸಲು ಬೇಕಾಗುವ ಬೆಂಕಿ ಹಿಂದೆ ಅಗ್ಗಿಷ್ಟಿಗೆಯ ಕಾರ್ಯವಾಗಿತ್ತು. ದೇವಸ್ಥಾನಗಳು ವೈದಿಕರ ಮನೆಗಳಲ್ಲಿ ಬೆಂಕಿ ಆರದೆ ಯಾವಾಗಲೂ ಉರಿಯುವಂತೆ ನೋಡಿಕೊಳ್ಳುತ್ತಿದ್ದುದಾಗಿ ಈ ಬೆಂಕಿಯನ್ನು ಮನೆಯಿಂದ ಮನೆಗೆ ಹೊತ್ತಿಸಿಕೊಂಡು ಹೋಗಿ ಅಡುಗೆ ಮಾಡಲು ಬಳಸುತ್ತಿದ್ದ ವಿವರ ತಿಳಿಸುತ್ತಾರೆ. ಅಗ್ಗಿಷ್ಟಿಗೆ ಧರ್ಮಕ್ಕೆಂದು ಬಿಟ್ಟ ಗದ್ದೆಗಳ ಉಲ್ಲೇಖ ಶಾಸನಗಳಲ್ಲಿವೆ. ಮುದ್ದಲದೇವಿ ಎಂಬಾಕೆ ಶಿವಪುರವೆಂಬ ಅಗ್ರಹಾರದ ಮಹಾಜನಗಳಿಗೆ ಆರು ಗದ್ಯಾಣಗಳನ್ನು ಕೊಟ್ಟು ಅದರ ಬಡ್ಡಿಯಲ್ಲಿ ಅಗ್ಗಿಷ್ಟಿಗೆಯನ್ನು ನಡೆಸುವಂತೆ ದಾನ ಕೊಟ್ಟ ವಿವರವು ದೊರೆಯುತ್ತದೆ.

ಛತ್ರ, ಅರವಟ್ಟಿಗೆಗಳ ಕುರಿತು ತಿಳಿಸುವ ಮುಗಳಿ ಅವರು ಪ್ರವಾಸಿಗರಿಗೆ ದಾರಿಯಲ್ಲಿ ಹೋಗುವಾಗ ನೀರು, ಉಪಾಹಾರ ಸ್ವಲ್ಪಕಾಲ ವಿಶ್ರಾಂತಿ ಪಡೆಯಲು ಇವು ಅಂದಿನ ಕಾಲದಲ್ಲಿ ಹೆಚ್ಚು ಪ್ರಸ್ತುತವಾಗಿದ್ದವೆಂದು ತಿಳಿಸುತ್ತಾರೆ. ಇವು ಯಾತ್ರಾಸ್ಥಳಗಳಲ್ಲಿ, ದೊಡ್ಡ ಊರುಗಲ್ಲಿ ಇರುತ್ತಿದ್ದವು. ಇವುಗಳಿಗೂ ಸಹ ದಾನ ಮಾಡುತ್ತಿದ್ದರು. ಜಕ್ಕಿಯಬ್ಬೆ ಎಂಬುವವಳು ದಾನದೊಳಗೆ ಅನ್ನದಾನವೇ ಶ್ರೇಷ್ಠವೆಂದು ತಿಳಿದು ಛತ್ರವನ್ನು ಕಟ್ಟಿಸಿ ಭೂಮಿದಾನ ಮಾಡಿದ ವಿವರ ಜೊತೆಗೆ ಆದಿಗೌಡ ಎಂಬುವನು ಈ ಕೆಲಸದಲ್ಲಿ ತನ್ನನ್ನು ತಾನು ನಿಸ್ವಾರ್ಥವಾಗಿ ತೊಡಗಿಸಿಕೊಂಡಿದ್ದನೆಂಬುದನ್ನು ತಿಳಿಸುತ್ತಾರೆ. ಅಂದಿನ ಕಾಲದ ಉದಾರ ಮನಸ್ಸಿನ 'ಭಂಡಿನಾಬಿ' ತನ್ನ ದಾನವನ್ನು ಕೈ ಅಳತೆಯಿಂದ ಕೊಡದೆ ಬಂಡಿಯಿಂದ ಅಳೆದು ಕೊಡುತ್ತಿದ್ದನಂತೆ. ಅದಕ್ಕೆ ಈ ಹೆಸರು ಬಂದಿತೆಂದು ತಿಳಿಸುತ್ತಾರೆ. ಕನ್ನಡ ನಾಡಿನ ಮನುಜರು ಎಷ್ಟೊಂದು ಪರೋಪಕಾರದ ಮನುಷ್ಯರಿದ್ದರೆಂಬುದಕ್ಕೆ ಶಾಸನ, ತಾಳೆಗರಿ, ಹಳೆಯ ಗ್ರಂಥಗಳ ಸಹಾಯದಿಂದ ಕಂಡುಕೊಳ್ಳಬಹುದಾಗಿದೆ.

ಅಂತಹವುಗಳಲ್ಲಿ 'ಕಟುಸತ್ಯ'ವೂ ಒಂದು. ಈ ಪ್ರಬಂಧವು ಸರಳವಾದ ನಿರೂಪಣಾಶೈಲಿ, ಉಪದೇಶಾತ್ಮಕ ನಿಲುವು, ತಾತ್ವಿಕ ಜಿಜ್ಞಾಸೆ, ವ್ಯಾಖ್ಯಾನಗಳೇ ಹೆಚ್ಚೆಂದು ಹೇಳಬೇಕು. ಸತ್ಯದ ಬಗೆಗೆ ನಮ್ಮ ನಿಲುವು ಹೇಗಿರಬೇಕು ಎಂಬುದರ ಬಗೆಗೆ ತಿಳಿಸುವ ಅವರು, ಸತ್ಯವನ್ನು ಕಾಣುವುದಕ್ಕೆ

ನಮ್ಮ ರಾಗದ್ವೇಷಗಳು, ಪೂರ್ವಗ್ರಹಗಳ, ಅಸೂಯೆಗಳು ಅಡ್ಡಿ ಆತಂಕಗಳಾಗುತ್ತವೆ. ನಮಗಿಂತ ಯಾರೋ ಹೆಚ್ಚು ಕೀರ್ತಿ ಗಳಿಸಿದರೆ, ಅವರನ್ನು ನೋಡಿ ನಮ್ಮೊಳಗೆ ಅಸೂಯೆ ಪಡುತ್ತೇವೆ. ಇದರಿಂದ ನಮಗೆ ಹೊಟ್ಟೆ ಉರಿಯುತ್ತಲೇ ಇರುತ್ತದೆ. ಆ ಉರಿಯ ಬೆಳಕಿನಲ್ಲಿಯೇ ನಾವು ಅವರ ಬಗ್ಗೆ ಸತ್ಯವನ್ನು ಕಾಣುತ್ತೇವೆ. ಈ ರೀತಿ ಮನಸ್ಸಿನ ತಳಮಳಗಳನ್ನು ಹೊರತಳ್ಳುವಂತಹ ಒಳಸುಳಿವುಗಳ ಸತ್ಯದ ಗುಟ್ಟನ್ನು ಜಾಣ್ಮೆಯಿಂದ ಕಂಡುಕೊಳ್ಳಲಾಗಿದೆ. ಸತ್ಯವು ಹೇಗಿರಬೇಕು, ಅದನ್ನು ಹೇಗೆ ಪ್ರಸ್ತಾಪಿಸಬೇಕು ಎಂಬುದನ್ನು ತಿಳಿಸುವ ಅವರು ಸತ್ಯವನ್ನು ಹೇಳುವಾಗ ಪ್ರಿಯವಾಗಿ ಹೇಳಬೇಕು ಎಂಬುದು ಹಿಂದಿನಿಂದ ಬಂದ ಮಾತಾಗಿದೆ. ಕಟುಸತ್ಯವೆಂದರೆ ಪ್ರಿಯವಾದ ಸತ್ಯ ಅದನ್ನು ಪ್ರಿಯವಾಗಿ ಹೇಳುವುದು ಹೇಗೆ? ಈ ಪ್ರಶ್ನೆ ಸಹಜವಾದರೂ ತಿಳಿವಳಿಕೆ ಸರಿಯಾದದ್ದಲ್ಲವೆಂಬ ನಿರ್ಣಯಕ್ಕೆ ಅವರೇ ಬರುತ್ತಾರೆ. ಕಟುಸತ್ಯವನ್ನು ಪ್ರಿಯವಾಗಿ ಅಂದರೆ ನಯವಾಗಿ, ಮಧುರವಾಗಿ ಹೇಳುವುದೇ ಸುಸಂಸ್ಕೃತ ಸಾಮಾನ್ಯ ರೀತಿಯಾಗಿರಬೇಕು. ಪ್ರಿಯವಾಗಿ ಹೇಳುವ ಸಲುವಾಗಿ ಸತ್ಯವನ್ನು ಬಲಿ ಕೊಡಬಾರದು ಎಂಬ ಪ್ರಜ್ಞಾಪೂರ್ವಕವಾದ ಮಾತು ಈ ಪ್ರಬಂಧದಿಂದ ಮೂಡಿಬಂದಿದೆ.

ಮುಗಳಿ ಅವರ 'ಆಸ್ತೇಯ' ಪ್ರಬಂಧ ಲೇಖನದಲ್ಲಿ ತಿಳಿಸುವ ಅವರು ಸ್ವಾತಂತ್ರ್ಯ ಹೋರಾಟಗಾರ 'ನಾನಾ' ಎಂಬ ವೃದ್ಧರಿಗೆ ಮಾಸಾಶನ ಪಡೆಯುವ ಸಂದರ್ಭದಲ್ಲಿ ಅವರಿಗಾದ ನೋವು ಹತಾಶೆಯ ಕುರಿತು ಈ ಪ್ರಬಂಧದಲ್ಲಿ ಒಡಮೂಡಿದೆ. ಅಂದಿನ ಸ್ವಾತಂತ್ರ್ಯ ಕಾಲಘಟ್ಟದಲ್ಲಿ ಗಾಂಧೀಜಿ ಅವರ ಆದರ್ಶಗಳಿಗೆ ಯಾವ ರೀತಿಯಾದ ಬೆಂಬಲ ಇರುತ್ತಿತ್ತು. ಆದರೆ ಇಂದಿನ ಕಾಲದಲ್ಲಿ ಅದರ ಪರಿಸ್ಥಿತಿ ಹೇಗಿದೆ, ಎಂಬುದನ್ನು ಸ್ವಾತಂತ್ರ್ಯ ಹೋರಾಟಗಾರರಾದ 'ನಾನಾ' ಅವರಿಂದ ಅರಿತಂತೆ ಬರವಣಿಗೆಯ ಶೈಲಿ ಮೂಡಿಬಂದಿದೆ. ನಾನಾ ಅವರಿಗೆ ಕಂಡ ಶೋಷಣೆ, ಲಂಚಗುಳಿತನ, ಭ್ರಷ್ಟಾಚಾರದ ಬಗ್ಗೆ ತಿಳಿಸುತ್ತಾರೆ. ಈ ವ್ಯವಸ್ಥೆಯ ಬಗ್ಗೆ "ಸ್ವತಃ ಗಾಂಧೀಜಿಯವರು ಬಂದು ಹೇಳಿದರೂ ಖೋಟಾ ಗಾಂಧಿ ಭಕ್ತರು, ಸ್ವಾತಂತ್ರ್ಯ ಹೋರಾಟಗಾರರು ಹುಟ್ಟಿಕೊಂಡಿದ್ದಾರೆ. ಪುರಾವೆಗಳಿಲ್ಲದೆ ಯಾರನ್ನೂ ನಂಬುವಂತಿಲ್ಲ"(ಪು.೪೪) ಇಂದಿನ ದಿನಮಾನಗಳಲ್ಲಿ ಗಾಂಧಿತತ್ವಗಳನ್ನು ಬೋಧಿಸುತ್ತಾ ಬಡಜನರಿಗೆ ಸಹಾಯ ಮಾಡುವ ನೆಪದಲ್ಲಿ ಮೋಸ ಮಾಡುವಂತಹ ಕಪಟ ಬುದ್ಧಿವಂತ ಜನರನ್ನು ನಂಬುವುದು ಕಷ್ಟವಾಗಿದೆ ಎನ್ನುವ ಮನೋಭಾವವನ್ನು ಒಳಗೊಂಡಿದೆ.

'ಪರೋಪ-ಕಾರ' ಪ್ರಬಂಧ ಮುಗಳಿ ಅವರ ನಯವಿನಯತೆಯನ್ನು ದುರುಪಯೋಗಪಡಿಸಿಕೊಂಡು ವಂಚಿಸಿದ ಪ್ರಕರಣಗಳ ವೃತ್ತಾಂತವನ್ನು ಒಳಗೊಂಡಿದೆ. ೧. ರೈಲ್ವೆ ನಿಲ್ದಾಣದಲ್ಲಿ ಹಣದ ಚೀಲವನ್ನು ಕಳೆದುಕೊಂಡು ಸಂಕಷ್ಟದಲ್ಲಿ ಸಿಲುಕಿದ್ದೇವೆ. ನೀವು ಹಣ ಕೊಟ್ಟರೆ ನಾವು ಇಂದು ಊರು ಸೇರಿ ಮರುದಿನವೇ ನಿಮಗೆ ಹಣವನ್ನು ಪೋಸ್ಟ್ ಮಾಡುವುದಾಗಿ ತಿಳಿಸಿ ನಯವಿನಯದಿಂದ ವಂಚಿಸಿದ ಪ್ರಕರಣ, ೨. ಪಡೆದ ಹಣವನ್ನು ವಿದ್ಯಾರ್ಥಿಗಳು ಹಿಂತಿರುಗಿಸದೆ ಇರುವಂತದ್ದು, ೩. ನೀವು ಈ ಕಾಲೇಜಿಗೆ ನೌಕರಿಗೆ ಸೇರುವ ಮುನ್ನ ಈ ಕಾಲೇಜಿನ ಅಧ್ಯಕ್ಷನಾಗಿದ್ದೆನೆಂದು

ಹೇಳಿಕೊಂಡು ನಯವಿನಯದಿಂದ ಹಣ ಪಡೆದು ಅದನ್ನು ಮರಳಿಸದೆ ವಂಚಿಸಿದ ವೃತ್ತಾಂತಗಳ ಕುರಿತು ತಿಳಿಸುವ ವಿಷಯ ವಸ್ತುವನ್ನೊಳಗೊಂಡಿದೆ.

'ಪಾಥೇಯ' ಮುಗಳಿ ಅವರು ರಚಿಸಿರುವ ಪ್ರಬಂಧಗುಚ್ಛಗಳಲ್ಲಿ ಇದು ಒಂದು. ವಿದ್ಯಾರ್ಥಿಗಳನ್ನು ಕೇಂದ್ರವಾಗಿಟ್ಟುಕೊಂಡು ಈ ಪ್ರಬಂಧಗಳನ್ನು ಅವರಿಗೋಸ್ಕರವಾಗಿಯೇ ರಚಿಸಿರುವುದಾಗಿ ಮುನ್ನುಡಿಯಲ್ಲಿ ಹೇಳಿಕೊಂಡಿದ್ದಾರೆ. "ನಾನು ನನ್ನ ಅನುಭವದಿಂದ ತಿಳಿದುಕೊಂಡಿರುವ ನಾಲ್ಕು ಮಾತುಗಳನ್ನು ನನ್ನ ನಾಡಿನ ಯುವಕ ಯುವತಿಯರಿಗೆ ಸುವಿಚಾರದ ದಾರಿಬುತ್ತಿಯಾಗಿ ಬರೆದ ಪ್ರಬಂಧವನ್ನು ನೀಡುತ್ತಿದ್ದೇನೆ. ಇದರಲ್ಲಿ ಹೇಳಬೇಕಾದದ್ದೆಲ್ಲವೂ ಇದೆ ಎಂದು ಹೇಳಲಾರೆ. ಆದರೆ ನನಗೆ ಬಹುಮುಖ್ಯವೆಂದು ತೋರಿದ್ದೆಲ್ಲವೂ ಇದೆ ಎಂದು ಹೇಳಲಾರೆ. ಮೂಲತಃ ತನ್ನ ಬಾಳುವೆಯ ಒಂದು ಸಮಸ್ಯಾತ್ಮಕ ಸನ್ನಿವೇಶದಲ್ಲಿರುವ ವಿದ್ಯಾರ್ಥಿಗಳಿಗೋಸ್ಕರ ಬರೆದೆ. ಬರೆದ ಮೇಲೆ ಇದು ಆಸಕ್ತಿಯುಳ್ಳ ಎಲ್ಲಾ ಸಮುದಾಯ ಜನಾಂಗಕ್ಕೆ ಮಾರ್ಗದರ್ಶನವಾಗಲೆಂಬ ಸದುದ್ದೇಶದಿಂದ ಪರಿಚಯಿಸುತ್ತಿದ್ದೇನೆಂದು"(ಮುನ್ನುಡಿ) ಹೇಳಿಕೊಂಡಿದ್ದಾರೆ.

ಈ ಪ್ರಬಂಧದಲ್ಲಿ ನಿರೂಪಣಾ ಮಾದರಿಯು ಸ್ವತಃ ಲೇಖಕರೇ ವಿದ್ಯಾರ್ಥಿಗಳನ್ನು ಕೇಂದ್ರೀಕರಿಸಿ ಬೋಧಿಸುವಂತ ವ್ಯಕ್ತಿಚಿತ್ರಣ ಮೂಡಿಬರುವಂತೆ ಭಾಸವಾಗುತ್ತದೆ. ಪ್ರಬಂಧದಲ್ಲಿರುವ ಎಲ್ಲಾ ಲೇಖನಗಳು ವಿದ್ಯಾರ್ಥಿಗಳ ಶ್ರೇಯೋಭಿವೃದ್ಧಿಗೋಸ್ಕರವಾಗಿ ರಚಿಸಿದ ಪ್ರಬಂಧಗಳಾಗಿವೆ. ವಿದ್ಯಾರ್ಥಿಗಳು ಓದಿನಡೆಗೆ ಆಸಕ್ತಿ ಕೇಂದ್ರೀಕರಿಸುವಂತೆ ಮತ್ತು ತಮ್ಮನ್ನು ತಾವು ಯಾವುದೇ ಕೆಲಸ ಕಾರ್ಯಗಳಲ್ಲಾಗಲೀ ತುಂಬಾ ಶ್ರದ್ಧೆ ಭಕ್ತಿಯಿಂದ ತೊಡಗಿಸಿಕೊಳ್ಳುವಂತೆ ಪ್ರೇರಣಾತ್ಮಕವಾದ ಅಂಶಗಳು ಈ ಪ್ರಬಂಧಗಳಿಂದ ತಿಳಿದುಬರುತ್ತವೆ. ಅಂತವುಗಳಲ್ಲಿ 'ಬಾಳಿನ ಬುಗುರಿ' ಒಂದು. ಈ ಪ್ರಬಂಧದಲ್ಲಿಯು ವಿದ್ಯಾರ್ಥಿಗಳನ್ನು ಕೇಂದ್ರೀಕರಿಸುವಂತೆ ಕರೆ ನೀಡಿ, ಯುವಕ ಮತ್ತು ಯುವತಿಯರು ತಮಗೆ ಸಾಧ್ಯವಿದ್ದ ಪದವಿಯನ್ನು ಪಡೆದ ಮೇಲೆ ತಮ್ಮ ಉಪಜೀವನಕ್ಕೆ ಏನು ಮಾಡಬೇಕೆಂದು ಯೋಚಿಸದೆ ತಮ್ಮ ದಾರಿಯನ್ನು ತಾವೇ ಕಂಡುಕೊಳ್ಳಬೇಕು. ಅಂದರೆ ತಾವೇ ನಡೆಸಲು ಹವಣಿಸಬೇಕು. ಸರಿಯಾದ ದಾರಿಯನ್ನು ಹಿಡಿದು, ಅರಿತು ನಡೆಯಬೇಕೆಂದು ಮಾರ್ಗದರ್ಶಿಯಂತೆ ಬೋಧಿಸಿದಂತಿದೆ.

"ಬಾಳಿನ ಗುರಿ ಯಾವ ಕಾಲದಲ್ಲಿಯೇ ಆಗಲಿ ಸಾಮಾನ್ಯವಾಗಿ ಏನಿರಬೇಕು ಅಂದರೆ ಮನುಷ್ಯನು ತನ್ನ ಶಕ್ತಿ ಆ ಶಕ್ತಿಗಳನ್ನು ಅರಿತುಕೊಂಡು ತನ್ನ ಪರಿಸರಕ್ಕೆ ಹೊಂದಿಕೊಂಡು ತನ್ನ ಶಕ್ತಿಗಳನ್ನು ಬೆಳೆಸಿಕೊಳ್ಳಬೇಕು. ಕ್ಷಣಿಕದ ಆಸೆಗಳನ್ನು ಕಡಿಮೆ ಮಾಡಿಕೊಳ್ಳಬೇಕು. ಹೀಗೆ ಬರುಬರುತ್ತಾ ಸುಸಂಸ್ಕೃತರಾಗಿ ತಮ್ಮ ವ್ಯಕ್ತಿತ್ವವನ್ನು ರೂಪಿಸಿಕೊಳ್ಳಬೇಕು. ಹೆಣ್ಣಿರಲಿ ಗಂಡಿರಲಿ ಒಂದು ವಿಶಿಷ್ಟ ಸ್ವಭಾವ, ಯೋಗ್ಯತೆ ಪಡೆದುಕೊಳ್ಳಬೇಕು. ಕಾಯಕದಲ್ಲಿ ನಿರಂತರವಾಗಿ ತಮ್ಮನ್ನು ತಾವು ತೊಡಗಿಸಿಕೊಳ್ಳಬೇಕು. ಇದ್ದಂತೆ ಇರುವ ಮನುಷ್ಯರೆಲ್ಲರೂ ಹಾಗೆಯೇ ವ್ಯಕ್ತಿಗಳಾಗಲಾರರು. ಯಾಕೆಂದರೆ ಅವರ ಶಕ್ತಿಗಳು ಅವರಲ್ಲಿ ಸುಪ್ತವಾಗಿ ಉಳಿದು ವ್ಯಕ್ತವಾಗುವುದಿಲ್ಲ. ಸುಸಂಗತ ರೂಪ ಪಡೆಯುವುದಿಲ್ಲ. ಮೊಗ್ಗಾಗಿರುವ ಸ್ಥಿತಿ ಬೇರೆ, ಅರಳಿರುವ ಸ್ಥಿತಿ ಬೇರೆ"(ಪು.೩). ಮಕ್ಕಳ ಆತ್ಮಸ್ಥೈರ್ಯ ಹೆಚ್ಚಿಸುವಂತಹ,

ದೈನಂದಿನ ಬದುಕಿಗೆ ಹೊಂದಿಕೊಂಡು ಸರಿತಪ್ಪು ಅರಿತು ಜೀವನ ಸಾಗಿಸಲು ಮಾರ್ಗದರ್ಶಕ ರೀತಿಯಲ್ಲಿ ಪ್ರಬಂಧ ರಚನೆಗೊಂಡಿದೆ.

'ಅದೃಷ್ಟ' ಪ್ರಬಂಧದಲ್ಲಿ ತಿಳಿಸುವ ಮುಗಳಿ ಅವರು ವಿದ್ಯಾರ್ಥಿಗಳ ಕಾಳಜಿಯುತವಾದ ಅಂಶಗಳು ಈ ಪ್ರಬಂಧದಲ್ಲಿಯೂ ಬಿತ್ತರಗೊಂಡಿವೆ "ಅದೃಷ್ಟ ಎಂದರೇನು? ಅದೃಷ್ಟವೆಂದರೆ ಅ+ದೃಷ್ಟ ಅಂದರೆ ಕಾಣದೆ ಇದ್ದುದು ಎಂದರ್ಥ. ನಿಮ್ಮಲ್ಲಿ ಕೆಲವರಿಗೆ ಅನ್ನಿಸಬಹುದು. ಈ ಅದೃಷ್ಟವೆಂಬುದು ಕೇವಲ ಕಲ್ಪನೆ. ಮನುಷ್ಯ ತನ್ನ ಸೋಮಾರಿತನವನ್ನು ಸಮರ್ಥಿಸಿಕೊಳ್ಳಲು ಹುಟ್ಟಿಸಿಕೊಂಡ ಭ್ರಮೆ. ಮನುಷ್ಯ ತಾನು ಏನು ಸಾಧಿಸಬೇಕೆಂದು ಅರಿತಿರುವನೋ ಅದನ್ನು ತನ್ನ ಪ್ರಯತ್ನ, ಬುದ್ಧಿಬಲದಿಂದ ಸಾಧಿಸಿ ತೋರಿಸುವನು. ಅದನ್ನೇ ಅದೃಷ್ಟ ಕೈಗೂಡಿತೆಂದು ಹೇಳುವುದುಂಟು. ಅದು ಸಾಧನೆಯ ಪೂರ್ವದಲ್ಲಿ ಅದೃಷ್ಟವಾಗಿರಬಹುದು. ಆದರೆ ಆಮೇಲೆ ದೃಷ್ಟವಾಗುತ್ತದೆಂಬುದು ಸ್ಪಷ್ಟ."(ಪು.೩೪) ವಿದ್ಯಾರ್ಥಿಗಳಿಗೆ ಪ್ರೋತ್ಸಾಹ, ಪ್ರೇರಣೆಯ ಮಾತನ್ನು ತಿಳಿಸುವ ಮುಗಳಿ ಅವರು ಅದೃಷ್ಟವನ್ನು ನಂಬಿ ಕೈಕಟ್ಟಿ ಕೂಡದೆ ನಿಮ್ಮನ್ನು ನೀವು ದೈನಂದಿನ ಓದು, ಬರೆಹ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡರೆ ನಿಮಗೆ ಯಶಸ್ಸು ದೊರೆಯುತ್ತದೆ.

'ಪ್ರೀತಿ ಕಾಯಕ' ಚಿಕ್ಕ ಚಿಕ್ಕ ಪ್ರಬಂಧಗಳಲ್ಲಿಯೂ ಮುಗಳಿ ಅವರು ದೈನಂದಿನ ಬದುಕಿನಲ್ಲಿ ನಾವು ಆದರ್ಶ ಗುಣಗಳಿಂದ ಯಾವ ರೀತಿಯಾಗಿ ಹೊಂದಿಕೊಂಡು ಬದುಕಬೇಕು. ಪ್ರೀತಿಯು ಅನೇಕ ಮುಖಗಳಲ್ಲಿ ಎಲ್ಲರೂ ಬದುಕುವ ವಾತ್ಸಲ್ಯಯುತ ಬದುಕು. ತಂದೆ ತಾಯಿ ಬಂಧು ಬಳಗದಿಂದ ಹಂಚಿಕೊಳ್ಳುವ ಸಾಮರಸ್ಯದ ಬದುಕು ಪ್ರೀತಿಯ ದ್ಯೋತಕವಾಗಿದೆ. ಅದೇ ರೀತಿ ಪ್ರೀತಿಯ ಇನ್ನೊಂದು ಮುಖವಾದ ಪ್ರಣಯದ ಬಗ್ಗೆ ತಿಳಿಸುವ ಮುಗಳಿ ಅವರು ಹೆಣ್ಣು ಗಂಡಿನ ಆಕರ್ಷಣೆಯಿಂದ ಮೊದಲಾಗಿ ಅನಂತ, ಅಗಾಧ ಅನುಭವಗಳ ಆಕರವಾಗಿ ಪ್ರೀತಿಯ ವಿಶಾಲ ಅರ್ಥವುಳ್ಳ ಶಬ್ದವು ಪ್ರಣಯವೆಂಬ ಸೀಮಿತ ಅರ್ಥ ಪಡೆದುಕೊಳ್ಳುತ್ತಿರುವುದರ ಬಗೆಗೆ ಬೇಸರ ವ್ಯಕ್ತಪಡಿಸುತ್ತಾರೆ. ಪವಿತ್ರವಾದ ಈ ಪ್ರೇಮವು ಎಷ್ಟು ಕೆಳಮಟ್ಟಕ್ಕೆ ಹೋಗಿದೆಂಬುದರ ಕುರಿತು ಆಂಗ್ಲಕವಿ ಶೆಲ್ಲಿ ಹೇಳಿರುವ ಹೇಳಿಕೆಯನ್ನು ಈ ರೀತಿ ಪ್ರಸ್ತಾಪಿಸುತ್ತಾರೆ. ಬಹಳಷ್ಟು ಅಪವಿತ್ರವಾಗಿ ಹೋಗಿರುವ ಈ ಶಬ್ದವನ್ನು ನಾನು ಹೆಚ್ಚು ಕೆಡಿಸಲಾರೆ ಎಂಬ ಮಾರ್ಮಿಕವಾದ ಈ ಮಾತು ಪ್ರೀತಿ ಎಂಬ ಪದವು ಪ್ರಣಯ ಕಾಮ ವಿಭತ್ಸೆಗೆ ಸಿಕ್ಕು ಅದರ ಅರ್ಥವನ್ನು ಕೆಡಿಸಿಕೊಂಡಿರುವುದರ ಬಗ್ಗೆ ಬೇಸರ ವ್ಯಕ್ತಪಡಿಸುತ್ತಾರೆ.

'ಕಾಯಕ'ದ ಬಗ್ಗೆ ತಿಳಿಸುವ ಮುಗಳಿ ಅವರು ಕಾಯಕವೆಂದರೆ ಹೊಟ್ಟೆಪಾಡಿಗಾಗಿ ನೀವು ಮಾಡುವ ಉದ್ಯೋಗವಾದರೂ ಸಹ ಹಗಲಿರುಳು ಶ್ರಮಿಸಬೇಕು, ಯಾವುದೇ ಕೆಲಸವಾಗಲಿ ನಿಷ್ಠೆ, ಶ್ರದ್ಧೆ, ಭಕ್ತಿಯಿಂದ ಶ್ರಮಿಸಬೇಕೆಂದು ತಿಳಿಸುತ್ತಾರೆ. ಉದ್ಯೋಗವೆಂದರೆ ನೌಕರಿ ಎಂಬ ಸಮೀಕರಣದಿಂದಲೂ ನೀವು ತೊಳಲಾಡಬಾರದು. ಸ್ವಂತ ಕಾಲ ಮೇಲೆ ನಿಂತು ಸ್ವತಃ ಪ್ರವೃತ್ತಿಗೆ

ಒಪ್ಪುವ ಉದ್ಯೋಗವನ್ನು ಮಾಡಬೇಕೆಂದು ತಿಳಿಸುವ ಈ ಮಾತು ಪ್ರಸ್ತುತ ದಿನಮಾನಕ್ಕೂ ಹತ್ತಿರವಾಗುತ್ತದೆ.

'ನಾಡು ನುಡಿ' ಚಿಂತನೆಯ ಕುರಿತು ಈ ಪ್ರಬಂಧದಲ್ಲಿ ಚರ್ಚಿಸುವ ಮುಗಳಿ ಅವರು ತಮ್ಮಲ್ಲಿ ನಾಡು ನುಡಿಯ ಕುರಿತು ಪೂರಕವಾದ ಪೋಷಕವಾದ ಘಟಕಗಳಾಗಿರಬೇಕು. ನಿಮ್ಮ ಸಾಧನೆಯ ಕರ್ತವ್ಯವೇನೆಂಬುದನ್ನು ಅರಿತು ನಾಡುನುಡಿಯ ಬಗ್ಗೆ ಅಭಿಮಾನ ಹೊಂದಿರುವರಾಗಿರಬೇಕು. ನೀವು ಯಾವುದೇ ಜಾತಿ–ಧರ್ಮದವರಾಗಿರಲಿ ನಿಮ್ಮ ಯೋಚನೆಗಳು ವಿಶ್ವಪಥದತ್ತ ಸಾಗಬೇಕೆಂದು ಕರೆ ನೀಡಿದ್ದಾರೆ. ಕನ್ನಡ ಭಾಷೆ ತನ್ನದೇ ಆದ ಅನನ್ಯತೆ ಹೊಂದಿದೆ. ಕರ್ನಾಟಕದಲ್ಲಿ ಹುಟ್ಟಿ ಬೆಳೆಯುತ್ತಿರುವ ನೀವು ಕನ್ನಡದಲ್ಲಿ ಶಿಕ್ಷಣ ಪಡೆದು ಅದರ ಸಾಹಿತ್ಯ ಸಂಸ್ಕೃತಿಯನ್ನು ಅರಿತುಕೊಂಡು ಅದರಲ್ಲಿಯೇ ಎಲ್ಲಾ ವ್ಯವಹಾರಗಳನ್ನು ನಡೆಸುವ ಶಕ್ತಿಯನ್ನು ಸಂಪಾದಿಸಬೇಕು. ಜನಜೀವನದಲ್ಲಿ ಮತ್ತು ಆಡಳಿತದಲ್ಲಿ ಅದು ಸಮರ್ಥವಾಗಿ ಬಳಕೆಯಾಗುವಂತೆ ಶ್ರಮಿಸಬೇಕು. ನಿಮ್ಮ ತಾಯ್ನುಡಿಯಂತೆ ಬೇರೆ ಪ್ರದೇಶದ ತಾಯ್ನುಡಿಯನ್ನು ಅಷ್ಟೇ ಪ್ರೀತಿ, ಗೌರವದಿಂದ ಕಾಣಬೇಕು" ಎಂಬ ನಾಡುನುಡಿಯ, ದೇಶಾಭಿಮಾನದ ಚಿಂತನೆಗಳಿಗೆ ಒಳಗಾಗುವಂತೆ ಒಬ್ಬ ನಿಷ್ಠೆಯ ಗಡಿನಾಡಿನ ಕನ್ನಡಿಗನಾಗಿ ಶ್ರಮಿಸಿದ್ದಾರೆ. ಈ ರೀತಿಯ ಕನ್ನಡಪರ ಕಾಳಜಿಯುತ ಅಂಶಗಳು ಕನ್ನಡ ಕರೆ, ಕನ್ನಡನಾಡಿನಲ್ಲಿ ಪರೋಪಕಾರದಲ್ಲಿಯೂ ಕಂಡುಬರುತ್ತವೆ.

'ನವೀನ ಪ್ರಜ್ಞೆಯ ಸೂತ್ರಗಳು' ಇದು ಮುಗಳಿ ಅವರ ಕೊನೆಯ ಪ್ರಬಂಧವಾಗಿದೆ. ಮುಗಳಿ ಅವರು ಈ ಪ್ರಬಂಧದಲ್ಲಿಯೂ ಸಹ ಯುವಸಮುದಾಯದವರನ್ನು ಪ್ರಮುಖವಾಗಿ ಗಮನದಲ್ಲಿಟ್ಟುಕೊಂಡು ರಚಿಸಿದಂತಿದೆ. ಮುನ್ನುಡಿಯಲ್ಲಿ ತಿಳಿಸಿರುವಂತೆ ಪ್ರಜ್ಞೆ ಎಂದರೇನು? ನವೀನ ಪ್ರಜ್ಞೆ ಯಾವುದು ಎಂಬ ವಿಷಯ ಕುರಿತು ತಮ್ಮಲ್ಲಿಯೇ ಪ್ರಶ್ನೆ ಹಾಕಿಕೊಂಡು ಉತ್ತರಿಸಲು ಮುಂದಾದಂತೆ ನಿರೂಪಣಾ ಶೈಲಿಯು ಮೂಡಿಬಂದಿದೆ. ಪ್ರಜ್ಞೆ ಎಂದು ಸಂಸ್ಕೃತ ವಾಙ್ಮಯದಲ್ಲಿ ಬಹಳ ಪ್ರಾಚೀನ ಪದ. ಅದಕ್ಕೆ ಬುದ್ಧಿಮತ್ತೆ, ವಿವೇಕ, ಸೂಕ್ಷ್ಮ ಪರಿಜ್ಞಾನ ಈ ಅರ್ಥಗಳು ರೂಪವಾಗಿರುತ್ತವೆ. ಇಂದಿನ ವಿಚಾರ ವಿಮರ್ಶೆಯ ಕ್ಷೇತ್ರದಲ್ಲಿ ಅರಿವು, ಎಚ್ಚರ, ಸದ್ಬಳಕೆ ಕಂಡುಬರುತ್ತದೆ. ನವೀನ ಪ್ರಜ್ಞೆ ಎಂಬ ಪದವು ಸಾರ್ಥಕವಾಗಬೇಕೆಂದರೆ ಹೊಸ ಜೀವನದ ಮತ್ತು ವಿಚಾರ ಪ್ರವಾಹಗಳ ಪರಿಚಯ ಪರಿಜ್ಞಾನಗಳು ಮಾತ್ರವಲ್ಲ ಅವೆಲ್ಲವನ್ನು ಹಳೆಯ ವಿಚಾರಧಾರೆ ಮತ್ತು ಪರಂಪರೆಗಳೊಡನೆ ಮಂಥನಕ್ಕೆ ಒಳಗುಮಾಡಿ ಪ್ರತಿಯೊಬ್ಬ ವ್ಯಕ್ತಿ ಪಡೆಯುವ ತಿಳಿವಳಿಕೆ, ವಿವೇಕ ಎಂಬುದರಲ್ಲಿ ಮೂಡಿಬರಬೇಕೆಂದು ಮುನ್ನುಡಿಯಲ್ಲಿ ಹೇಳಿಕೊಂಡಿದ್ದಾರೆ.

ಮುಗಳಿ ಅವರು ನವೀನ ಪ್ರಜ್ಞೆಯ ಸೂತ್ರಗಳಲ್ಲಿ ಹತ್ತು ಹಲವು ಅಂಶಗಳ ತಮ್ಮ ವಿಚಾರವನ್ನು ಹಂಚಿಕೊಂಡಿದ್ದಾರೆ. ಮೊದಲಿಗೆ ಯುವಕರನ್ನು ಕುರಿತು ಶಿಕ್ಷಣ ಪಡೆದ ನಿಲುವುಗಳು ಆತ್ಮಸ್ಥೈರ್ಯ ಮೂಡಿಸಿಕೊಳ್ಳಬೇಕು. ಪದವಿ ದೊರೆಯಲಿ ಬಿಡಲಿ, ನೌಕರಿ ಸಿಗಲಿ ಸಿಗದಿರಲಿ ಅದಕ್ಕೆ ಅಂಜದೆ ಯಾವುದಾದರೊಂದು ಉದ್ಯೋಗವನ್ನು ಮಾಡುತ್ತಾ ತನ್ನ ಜವಾಬ್ದಾರಿಯನ್ನು

ಹೊತ್ತುಕೊಳ್ಳಬೇಕು. ಸ್ವಾತಂತ್ರ್ಯ ಭಾರತದ ಸತ್ಪ್ರಜೆಯಾಗಿ ತಮ್ಮ ಕರ್ತವ್ಯಗಳೇನೆಂಬುದನ್ನು ಅರಿಯಲು ಮತ್ತು ಹೊಸ ಹೊಣೆಗಾರಿಕೆಯನ್ನು ಹೊತ್ತುಕೊಳ್ಳಲು ನಾವು ಸದಾ ಸಿದ್ಧರಾಗಬೇಕು. ವಿದ್ಯಾಭ್ಯಾಸ ಸಾರ್ವತ್ರಿಕ ಪ್ರಸಾರ, ವಿಚಾರವಂತಿಕೆಯ ಸರ್ವ ಪ್ರಯತ್ನ, ಚುನಾವಣೆಯ ಮೂಲಕ ಪ್ರಜಾಪ್ರತಿನಿಧಿಗಳನ್ನು ಆರಿಸಿ ಕಳುಹಿಸುವ ಬಗ್ಗೆ ಅರಿವು ಮತ್ತು ಎಚ್ಚರಿಕೆಯನ್ನು ಹೊಂದಿರಬೇಕು. ಫಲಿತಾಂಶದಲ್ಲಿ ಯಾವ ಪಕ್ಷವೆ ವಿಜಯಶಾಲಿಯಾಗಲಿ ಅದನ್ನು ಬೆಂಬಲಿಸಿ ಪ್ರೋತ್ಸಾಹಿಸಬೇಕು. ಪ್ರಜಾಪ್ರಭುತ್ವದಲ್ಲಿ ಸಾರ್ವಜನಿಕ ಸಂಸ್ಥೆಗಳ ಮತ್ತು ಸರಕಾರದ ಧ್ಯೇಯ, ಧೋರಣೆಗಳ ಬಗ್ಗೆ ಕಾರ್ಯಪದ್ಧತಿಯ ಬಗ್ಗೆ ವಿಮರ್ಶೆ ಮಾಡುವ ಮತ್ತು ಸಲಹೆ ನೀಡುವ ಹಕ್ಕು ಪ್ರತಿಯೊಬ್ಬ ಪ್ರಜೆಗೂ ಇರಬೇಕು. ಸಾರ್ವಜನಿಕ ಸಂಸ್ಥೆ ಅಥವಾ ಸೊತ್ತು ಇವುಗಳ ವಿವಾದಕ್ಕೆ ಅಥವಾ ವ್ಯಕ್ತಿನಿಂದನೆಗೆ ತೊಡಗದೆ ವೈಯಕ್ತಿಕ ಅಥವಾ ಸಾಮೂಹಿಕ ಪ್ರತಿಭಟನೆಗಳನ್ನು ಸಂಘಟಿಸುವ ರೀತಿಯಲ್ಲಿ ದೃಢವಾದ ನಿಲುವು ಹೊಂದಿರಬೇಕು ಮತ್ತು ಮಾರಣಾಂತಿಕ ಹಲ್ಲೆ ಗಲಾಟೆ ಮೂಲಕ ಸುತ್ತುಗಟ್ಟುವುದು, ಕಲ್ಲು ತೂರುವುದು, ಭಯೋತ್ಪಾದನೆಯಂತಹ ಒತ್ತಾಯಗಳಿಂದ ದೂರವಿರುವಂತೆ ಮುಗಳಿ ಅವರು ಯುವಸಮೂಹಕ್ಕೆ ಮಾರ್ಗದರ್ಶಿಸಿದ್ದಾರೆ.

ಮುಗಳಿ ಅವರ ಬಹುತೇಕ ಪ್ರಬಂಧಗಳು ಯುವಸಮುದಾಯದ ಏಳಿಗೆಗಾಗಿಯೇ ರಚಿಸಿರುವಂತೆ ಪ್ರಮುಖವಾಗಿ ತಿಳಿದುಬಂದರೂ ಅವು ಪ್ರೋತ್ಸಾಹಿಸುವ, ಪ್ರೇರೇಪಿಸುವ, ಸುಪ್ತಶಕ್ತಿಯನ್ನು ಹೊರಗೆಳೆಯುವ, ಸಂಯಮದಿಂದ ಸಮಾಜದಲ್ಲಿ ಬದುಕುವಂತೆ ಪ್ರಬಂಧದ ಬರವಣಿಗೆ ಮೂಡಿಬಂದಿದೆ.

'ಭಾರತೀಯ ಮಹಿಳೆ' ಎಂಬ ಪ್ರಬಂಧದಲ್ಲಿ ಮುಗಳಿ ಅವರು ವಿವೇಚಿಸುವಂತೆ "ಭಾರತದ ಸಮಾಜವ್ಯವಸ್ಥೆ ಮೊದಮೊದಲು ಸ್ತ್ರೀ ಪುರುಷರ ಪ್ರಕೃತಿಭೇದಗಳನ್ನು ಅಲ್ಲಗಳೆಯದೆಯೂ ಸಮಾನ ಸ್ಥಾನಮಾನಗಳನ್ನು ನೀಡಿತು. ಬರುಬರುತ್ತಾ ಭೇದವೆ ಮುಖ್ಯವಾಗಿ ಪುರುಷನನ್ನು ಮೇಲಕ್ಕೇರಿಸಿತು. ಮಹಿಳೆಯನ್ನು ಕೆಳಕ್ಕಿಳಿಸಿತು"(ಪು.೪೭) ಎಂಬುದರ ಕುರಿತು ಪುರುಷಪ್ರಧಾನ ವ್ಯವಸ್ಥೆಯ ಬಗೆಗೆ ಚರ್ಚಿಸುತ್ತಾ ಪುರುಷರಿಗೆ ಸಿಗುವ ಸವಲತ್ತುಗಳು ಮಹಿಳೆಗೂ ಸಿಗುವಂತಾಗಬೇಕು ಅವರಿಗೂ ಸಮಾನತೆ ದೊರೆಯಬೇಕೆಂದಿದ್ದಾರೆ. ಯುವಸಮೂಹವು ಶಾಂತಿ ಸಂಯಮದಿಂದ ವರ್ತಿಸಬೇಕು. ಹಲವು ಸಂದರ್ಭಗಳಲ್ಲಿ ಕಷ್ಟಕರವಾದ ಸನ್ನಿವೇಶಗಳು ಎದುರಾದರೂ ಅಂಜದೆ ಅಳುಕದೆ ಮನಸ್ಸನ್ನು ನಿಯಂತ್ರಣದಲ್ಲಿಟ್ಟುಕೊಂಡು ದಿನನಿತ್ಯದ ನಿಮ್ಮ ನಿಮ್ಮ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಬೇಕು. ಸಂಯಮ ಕುರಿತು ಸಮಾಜಸುಧಾರಕರ ನೀತಿಪರವಾದ ಬೋಧನೆಯುಳ್ಳ ಮಾತುಗಳನ್ನು ಈ ಭಾಗದಲ್ಲಿ ತಿಳಿಸುತ್ತಾರೆ. ಇನ್ನೂ ಇತರ ಲೇಖನಗಳಾದ ಧ್ಯೇಯಸಾಹಸ, ಬುದ್ಧನ ಬೋಧನೆ, ಯಾವುದು ಸತ್ಯ?, ಕುಟುಂಬದ ವಾತ್ಸಲ್ಯತೆ, ಒಳ್ಳೇದು ಕನ್ನಡನಾಡಿನ ಪರಂಪರೆ ಇತ್ಯಾದಿ ಕಿರುಲೇಖನಗಳನ್ನೊಳಗೊಂಡಿದೆ.

ಮುಗಳಿ ಅವರ ಒಟ್ಟು ಪ್ರಬಂಧಗಳನ್ನು ಅವಲೋಕಿಸಿದಾಗ ತಿಳಿದುಬರುವ ವಿಷಯ ಈ ರೀತಿ ಇದೆ. ವಿವಿಧ ನಿರೂಪಣಾ ಶೈಲಿ, ವಿಷಯವಸ್ತುವನ್ನು ಅರ್ಥೈಸುವ ರೀತಿ ವಿಶಿಷ್ಟತೆಯಿಂದ

ಕೂಡಿದೆ. ಭಾಷೆಯಿಂದ ಗಂಭೀರವಾದ ವಿಚಾರವನ್ನು ಸೂಕ್ಷ್ಮ ಒಳನೋಟಗಳಿಂದ ಮನವರಿಕೆ ಮಾಡಿಕೊಡುತ್ತವೆ. ಅವರ ಪ್ರಬಂಧಗಳು ಹಿಂದಿನ ಪ್ರಬಂಧಕಾರರಿಗಿಂತ ವಿಭಿನ್ನವಾದವೆನಿಸಿಕೊಳ್ಳುತ್ತವೆ. ನವೋದಯ ನವ್ಯದ ಸಕಲ ಸಿದ್ಧಿಗಳನ್ನು ಬಲ್ಲ ಇವರು ಆ ಕಾಲದ ಪ್ರಬಂಧಕ್ಕೆ ಬೇಕಾದ ಸರಳ ಸಜ್ಜನಿಕೆ, ಅನುಕಂಪದೃಷ್ಟಿ, ಆಳವಾದ ವ್ಯಾಸಂಗ, ವೈವಿಧ್ಯಮಯವಾದ ಆಸಕ್ತಿ, ಕಾವ್ಯಮನೋಧರ್ಮ, ಕಥನ ಕೌಶಲ, ನಾಟಕೀಯತೆ, ತಿಳಿಹಾಸ್ಯ ಹಾಗೂ ಕಾಯಕ, ಪ್ರೀತಿ, ದಯೆ, ಕರುಣೆ, ಸಂಯಮ, ಸಮಯಪ್ರಜ್ಞೆ, ಪ್ರೇರಣೆ, ಪ್ರೋತ್ಸಾಹಗಳಂತಹ ಅಂಶಗಳನ್ನು ಒಳಗೊಂಡಿದೆ.

ಮುಗಳಿ ಅವರ ಪ್ರಬಂಧಗಳಲ್ಲಿ ಸಮಾಜದ ವಿವಿಧ ಆಯಾಮದ ಅಂತಃಸತ್ವದ ವಿಚಾರವನ್ನು ಮನೋಜ್ಞವಾಗಿ ತಿಳಿಸುವ ಶೈಲಿ ಇವರದು. ಒಂದು ಸಣ್ಣ ಕ್ಷುಲ್ಲಕವೆನಿಸಬಹುದಾದ ವಸ್ತುವಿನ ಮೇಲೂ ಅವರ ಪ್ರಬಂಧರಚನೆ ಕಂಡುಬರುತ್ತದೆ. ಮುಗಳಿ ಅವರ ಪ್ರಬಂಧಗಳು ವಸ್ತುವಿಶಿಷ್ಟತೆಯಿಂದ ಕೂಡಿವೆ. ನಿರೂಪಣಾ ಶೈಲಿ ಸರಳವಾಗಿ, ಆಹ್ಲಾದಕರವಾಗಿ ಓದುಗರ ಭಾವನೆ, ಆತ್ಮೀಯತೆಗಳನ್ನು ಹಿಡಿದಿಡುತ್ತದೆ. ವೈಚಾರಿಕ ಅಂಶಗಳ ಪರಾಮರ್ಶೆಯನ್ನು ವೈಜ್ಞಾನಿಕ ತಳಹದಿಯ ಮೇಲೆ ಮಾಡಿ ಅವುಗಳ ಜೀವನದ ನಿರಂತರತೆಯನ್ನು ಕಾಯ್ದುಕೊಂಡು ಹೋಗುವ ರೀತಿಯಲ್ಲಿ ಅವರ ಪ್ರಬಂಧಶೈಲಿ ಇರುವುದನ್ನು ಗಮನಿಸಬಹುದು. ಇವು ಸಮಕಾಲೀನ ಪರಿಸ್ಥಿತಿಗಳಿಗೆ ಸ್ಪಂದಿಸುವ ಪ್ರತಿಕ್ರಿಯೆಗಳಾಗಿವೆ. ಅವರ ಆನ್ವಯಿಕ ಪ್ರಾಯೋಗಿಕತೆಯನ್ನು ಒಳಗೊಂಡು ಅವುಗಳ ಹಿಂದಿನ ಸಂವೇದನೆ, ಅನನ್ಯತೆಯ ಹುಡುಕಾಟ ಹಾಗೂ ಕನ್ನಡದ ಏಳಿಗೆಗಾಗಿ ಸದಾ ಧ್ವನಿಸುವಂತ ಇಚ್ಛಾಶಕ್ತಿ ಹೊಂದಿರುವ ಪ್ರಬಂಧಗಳಾಗಿವೆ. ಹಾಗೆಯೇ ಸಂಸ್ಕೃತಿಯ ವಿವಿಧ ಆಯಾಮಗಳನ್ನು ತಳಸ್ಪರ್ಶಿಯಾಗಿ ಹುಡುಕುವ ಅವರ ಬರವಣಿಗೆಯಲ್ಲಿ ಕಂಡುಬರುತ್ತದೆ.

"ಮುಗಳಿ ಅವರ ಪ್ರಬಂಧಗಳಲ್ಲಿ ಹಗುರತನ ಕಾಣುವುದು ವಿರಳ. ಅದು ಅಭ್ಯಾಸದ ಜಡತ್ವವನ್ನು ಬಿಟ್ಟು ಹೊರಬರಲು ಯತ್ನಿಸಿದರೂ ಸಾದ್ಯವಾಗದೆ ಹೋಗುತ್ತದೆ. ಆದರೆ ಕಲ್ಪಕತೆ, ತಾತ್ವಿಕತೆಗಳ ಸಮಬೆರಕೆಯಿಂದ ಪ್ರಬಂಧಗಳು ಸರಸಮಯವಾಗಿವೆ ಎಂದು ಹೇಳಬೇಕು. ಹರಟೆಗಾರನ ತಲೆಹರಟೆ ಇಲ್ಲಿ ಕಾಣದು. ಆ ಹುಚ್ಚುಹೊಳೆಯಲ್ಲಿ ಮುಗಳಿ ಅವರು ಇಳಿದಿದ್ದರೂ ಅದರ ಹರಿದಾಟವನ್ನು ಮಾತ್ರ ಕಂಡುಕೊಳ್ಳಬಲ್ಲರು. ಮಾತು ಮಾತು ಮಥಿಸಿ ಬಂದಂತೆ ಅವರ ಹರಟೆಗಳಲ್ಲಿ ವಿಚಾರದ ಸುಳಿವುಗಳು ಸೂಕ್ಷ್ಮವಾಗಿ ಮೂಡುತ್ತವೆ"(ಪು.೧೨) ಎಂದು ಬಿ.ಆರ್ ವಾಡಪ್ಪಿ ಅಭಿಪ್ರಾಯಪಡುತ್ತಾರೆ.

ಒಟ್ಟಿನಲ್ಲಿ ಮುಗಳಿ ಅವರ ಪ್ರಬಂಧಗಳನ್ನು ಅವಲೋಕಿಸಿದಾಗ ಕನ್ನಡ ಪ್ರಬಂಧ ಸಾಹಿತ್ಯಕ್ಕೆ ಅವರ ಕೊಡುಗೆ ಹೆಚ್ಚೆಂದು ಹೇಳಲಾಗದಿದ್ದರೂ ಕಡಿಮೆಯೆಂದು ಹೇಳಲು ಸಾಧ್ಯವಿಲ್ಲ ಎನ್ನುವಂತಿದೆ.

೫.೪. ಆತ್ಮಚರಿತ್ರೆ

ಮುಗಳಿ ಅವರು ತಮ್ಮ ಆತ್ಮಚರಿತ್ರೆಯ ಮೊದಲ ಹಂತದಲ್ಲಿ ಬಾಲ್ಯಜೀವನದ ವೃತ್ತಾಂತದ ಕುರಿತು ತಿಳಿಸುತ್ತಾರೆ. ಹದಿನಾಲ್ಕು ವರ್ಷದವನಿರುವಾಗಲೇ ಹೈಸ್ಕೂಲ್ ವಿದ್ಯಾರ್ಥಿಗಳೊಂದಿಗೆ

ಅಸಹಕಾರ ಚಳುವಳಿಯಲ್ಲಿ ಭಾಗವಹಿಸಿದ ವಿವರ ತಿಳಿಯುತ್ತದೆ. ಶಾಲೆಯನ್ನು ಬಿಟ್ಟು ಹಳ್ಳಿ ಹಳ್ಳಿಗಳಿಗೆ ಪ್ರಚಾರಕರ ಜನರೊಂದಿಗೆ ಹೋಗುತ್ತಿದ್ದಾಗಿಯೂ, ಮನೆಯವರ ಒತ್ತಾಸೆ ಮೇರೆಗೆ ಮನಪರಿವರ್ತನೆಗೊಂಡು ಒಂದು ವರ್ಷದ ನಂತರ ಸ್ಕೂಲಿಗೆ ಸೇರಿಕೊಂಡ ವಿವರವನ್ನು ತಿಳಿಸುತ್ತಾರೆ. ಹಾಗೆಯೇ ಬಾಲ್ಯದಿಂದಲೇ ದೇಶಾಭಿಮಾನದ ಒಲವು, ಪ್ರೀತಿ ಮಮಕಾರ ಇರುವ ಬಗ್ಗೆ ತಿಳಿಸುತ್ತಾರೆ. ಕರ್ನಾಟಕದ ಗಡಿಯಂಚಿನಲ್ಲಿರುವ ಮಹಾರಾಷ್ಟ್ರದ ವಿಲ್ಲಿಂಗ್ಡನ್ ಕಾಲೇಜಿನಲ್ಲಿ ವೃತ್ತಿಜೀವನವನ್ನು ಆರಂಭಿಸಿದರು. ಆ ಕಾಲೇಜಿನ ಎಲ್ಲಾ ಒಡೆತನವನ್ನು ವಸತಿನಿಲಯದ ಜವಾಬ್ದಾರಿಯನ್ನು ಹೊತ್ತು ಪ್ರಾಧ್ಯಾಪಕ ವೃತ್ತಿಯನ್ನು ಕೈಗೊಂಡರು. ಇವರ ಬೆಳವಣಿಗೆಯನ್ನು ಕಂಡು ಅಲ್ಲಿಯ ಸಿಬ್ಬಂದಿಗಳಿಗೆ ಅಸಹನೆ ಮೂಡಿ ಮುಗಳಿ ಅವರಿಗೆ ಯಾವುದೇ ದೊಡ್ಡ ಸ್ಥಾನಮಾನವನ್ನು ಕೊಡಬಾರದೆಂದು ಅವರನ್ನು ಮೂಲೆಗುಂಪಾಗಿ ಮಾಡಬೇಕೆಂದು ತೀರ್ಮಾನಿಸಿದ ಮನಸ್ಥಿತಿಗಳು ಇದ್ದವೆಂದು ಹೆಸರು ತಿಳಿಸದೆ ಹೇಳಿದ್ದಾರೆ.

ಅದು ಪ್ರಾಧ್ಯಾಪಕರ ವೃತ್ತಿ ಕೈಗೊಂಡ ದಿನಗಳಲ್ಲಿಯೇ ಅಂದಿನ ಸೈನಿಕರ ಕುಟುಂಬಗಳಿಗೆ ಆರ್ಥಿಕವಾಗಿ ಸಹಾಯ ಮಾಡಲು ಸಾರ್ವಜನಿಕರಿಂದ ಹಣ ಸಂಗ್ರಹಿಸಿ ಅವರಿಗೆ ನೀಡಿದ ವಿವರದ ಜೊತೆಗೆ ನಾಲ್ಕನೇ ದರ್ಜೆಯ ನೌಕರರ ಸಂಬಳ ಸಾಲದೆ ತಿಂಗಳ ಜೀವನ ನಡೆಸುವುದು ಕಷ್ಟದ ದಿನಗಳಲ್ಲಿ 'ಬಚತ್' ಯೋಜನೆ ರೂಪಿಸಿಕೊಂಡು ಪ್ರತಿ ನೌಕರರು ತಿಂಗಳಿಗೆ ಒಂದು ರೂಪಾಯಿಯಂತೆ ಹಣ ಸಂಗ್ರಹಿಸಿ ಐದಾರು ತಿಂಗಳ ನಂತರ ಆರ್ಥಿಕವಾಗಿ ತೊಂದರೆಗೆ ಒಳಗಾದವರಿಗೆ ಸಾಲದ ರೀತಿಯಲ್ಲಿ ಹಣವನ್ನು ಕೊಡಲಾಗುತ್ತಿದ್ದ ವಿವರವನ್ನು ನೀಡುತ್ತಾರೆ. "ದುಡಿಮೆಯಿಂದಲೇ ದುಡ್ಡು ಉಳಿತಾಯದಿಂದಲೇ ಸ್ವಾಸ್ಥ್ಯ"(ಪು.೩೮) ಈ ತತ್ವವನ್ನು ಜನಮನದ ಮೇಲೆ ಬಿಂಬಿಸಬೇಕೆಂದು ತಿಳಿಸುತ್ತಾರೆ. ಬಡತನ ನಿರ್ಮೂಲನಕ್ಕೆ ಆರ್ಥಿಕ ಪ್ರಯತ್ನಗಳೊಂದಿಗೆ ಯೋಗ್ಯ ಶಿಕ್ಷಣ ಮತ್ತು ಸಾಹಿತ್ಯ ಸಂಸ್ಕೃತಿಗಳ ಪ್ರಭಾವದಿಂದ ಮಾನಸಿಕ ಬಡತನ ಹೋಗಲಾಡಿಸುವ ಪ್ರಯತ್ನಗಳಾಗಬೇಕು. ದುರ್ಬಲರನ್ನು ಮೇಲಕ್ಕೆತ್ತಬೇಕೆಂದಿದ್ದಾರೆ.

ಮುಗಳಿ ಅವರು ತಮ್ಮ ಬಿಡುವಿನ ವೇಳೆಯಲ್ಲಿ ಕಾವ್ಯ, ಕತೆ, ನಾಟಕ ರಚನೆಯಲ್ಲಿ ಸಂಗೀತದಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡು ತಾವೇ ಸ್ವತಃ ಶಾಸ್ತ್ರವಲ್ಲದ ತಾಳ, ಮೇಳ, ಕಸರತ್ತಿನ ಅಬ್ಬರವಿಲ್ಲದ ಮಧುರಕಂಠದಿಂದ ಹಾಡುವ ಅಭ್ಯಾಸ ಇಟ್ಟುಕೊಂಡಿರುವ ವಿವರ ತಿಳಿಸುತ್ತಾರೆ. ತಾವು ಭಾಷಣ ಮಾಡುವಂತಹ ಸಂದರ್ಭದಲ್ಲಿ ನಡುನಡುವೆ ಜಾನಪದ, ಭಾವಗೀತೆಗಳನ್ನು ಹಾಡುತ್ತಿದ್ದುದಾಗಿ ತಿಳಿಸುತ್ತಾರೆ. ಹಾಗೆ ಮುಂದುವರಿದು ತಾವು ರಚಿಸಿದ ಕಾವ್ಯಗಳ ವಿವರ ತಿಳಿಸುತ್ತಾರೆ. ಅವರು ರಚಿಸಿದ ಸಾಹಿತ್ಯದಲ್ಲಿ ಕಂಡುಬರುವ ಪ್ರಕೃತಿಸೌಂದರ್ಯ, ಅವುಗಳಲ್ಲಿಯೂ ಹೂಗಳ ಚೆಲುವು, ಬೆಳದಿಂಗಳ ಮಾಯೆ, ಋತುಗಳ ರೀತಿ, ಪ್ರೀತಿ, ಗೆಳೆತನ, ದೇಶಭಕ್ತಿ ತನ್ನಲ್ಲಿ ಪರಿವರ್ತನೆ ಆಗಬೇಕೆಂಬ ಆತುರ, ನಿರಾಶಾದಾಯಕ ಸನ್ನಿವೇಶದಲ್ಲಿಯೂ ಅದಮ್ಯ ಆಶಾವಾದ ಕನ್ನಡ ನಾಡುನುಡಿಗಳ ಹೆಮ್ಮೆ, ಭಾರತೀಯ ಏಕಾತ್ಮಕತೆ, ಮಾನವೀಯ ಕರುಣೆ ಇತ್ಯಾದಿ ಅಂಶಗಳ ಕುರಿತು ರಚಿಸಿದ್ದೆನೆಂದು ಮುಗಳಿ ಅವರು ಹೇಳಿಕೊಳ್ಳುತ್ತಾರೆ.

ಸಾಹಿತ್ಯ ಚರಿತ್ರೆ ಕುರಿತಂತೆ "ನಾನು ಸಾಹಿತ್ಯ ಚರಿತ್ರೆಯನ್ನು ಬರೆಯಬೇಕೆಂದು ಹೋದವನಲ್ಲ. ಕನ್ನಡ ವಿದ್ಯಾರ್ಥಿಗಳಿಗೆ ಬೋಧನೆಯಲ್ಲಿ ತೊಡಗಿದಾಗ ಪ್ರಾಚೀನ ಕವಿಕೃತಿಗಳ ಪರಿಚಯ ಮತ್ತು ವಿಮರ್ಶೆ ಮಾಡುತ್ತಿರುವಾಗ ವಿದ್ಯಾರ್ಥಿಗಳಿಗೆ ಬೋಧಿಸಲು ಆರ್.ನರಸಿಂಹಾಚಾರರ ಕವಿಚರಿತೆ ಸಂಪುಟಗಳು ಮತ್ತು ಬಿ.ಎಲ್.ರೈಸ್ ಅವರ ಪುಸ್ತಕಗಳಲ್ಲಿ ಆಧುನಿಕ ದೃಷ್ಟಿಕೋನಗಳಿಂದ ಸಂಶೋಧನೆಗಳು ನಡೆದಿರಲಿಲ್ಲ." ವಿದ್ಯಾರ್ಥಿಗಳಿಗೆ ಬೋಧನೆಯಲ್ಲಿ ತೊಡಗಿಕೊಂಡಾಗ ಸ್ವತಃ ಮುಗಳಿಯವರೇ ಟಿಪ್ಪಣಿ ಮಾಡಿಕೊಂಡು ಸಾಹಿತ್ಯ ಚರಿತ್ರೆಯ ರೂಪದಲ್ಲಿ ಬೋಧಿಸುತ್ತಿದ್ದುದನ್ನು ತಿಳಿಸುತ್ತಾ ಯಾರೂ ಈ ವಿಷಯ ಕುರಿತು ಬರೆಯದೆ ಇರುವುದನ್ನು ಗಮನಿಸಿ ಪ್ರಾರಂಭದಿಂದ ಆಧುನಿಕ ಕಾಲದವರೆಗಿನ ಸಾಹಿತ್ಯ ಚರಿತ್ರೆ ರಚಿಸಲು ಮುಂದಾದ ವಿವರವು ಈ ಭಾಗದಲ್ಲಿ ತಿಳಿದುಬರುತ್ತದೆ.

ಸಾಹಿತ್ಯ ಚರಿತ್ರೆ ರಚಿಸಲು ಸಂಬಂಧಪಟ್ಟ ಲೇಖನ, ಟಿಪ್ಪಣಿಗಳನ್ನು ತಯಾರಿಸಿಕೊಂಡು ಕವಿಗಳು, ವಚನಕಾರರು, ದಾಸರು ಇವರ ವಿಷಯದಲ್ಲಿ ಹೆಚ್ಚು ಗಮನ ಕೊಡಬೇಕೆಂದು ನಿರ್ಧರಿಸಿಕೊಂಡಿರುವುದು ತಿಳಿದುಬರುತ್ತದೆ. ಬಿಡುವಿನ ವೇಳೆಯಲ್ಲಿ ಸಾಹಿತ್ಯ ಚರಿತ್ರೆಯನ್ನು ರಚಿಸಲು ಆರ್.ನರಸಿಂಹಾಚಾರರ ಮನೆಯಲ್ಲಿದ್ದುಕೊಂಡು ಹಲವು ಹಸ್ತಪ್ರತಿಗಳನ್ನು ಓದಿ ಚರ್ಚಿಸಿ ಅವಶ್ಯವಾದ ಟಿಪ್ಪಣಿಗಳನ್ನು ಮಾಡಿಕೊಂಡು ಕವಿಗಳ ಕಾಲ ವಿಚಾರದಲ್ಲಿ ಕವಿಚರಿತ್ರೆಯ ವಿಚಾರಗಳಲ್ಲಿ ಮಾಹಿತಿಯನ್ನು ಪಡೆದು ಶಾಸನ, ಹಳೆಯ ಕೃತಿಗಳನ್ನು ಓದಿಕೊಂಡು ಸಾಹಿತ್ಯ ಚರಿತ್ರೆ ರಚನೆಗೆ ತೊಡಗಿರುವ ವಿವರಗಳು ದೊರೆಯುತ್ತವೆ.

ಗಡಿನಾಡ ಭಾಗದಲ್ಲಿ ಮರಾಠಿ ಭಾಷೆಯ ಪ್ರಾಬಲ್ಯದಿಂದಾಗಿ ಕನ್ನಡ ಭಾಷೆಯ ಪರಿಸ್ಥಿತಿಯನ್ನು ಕಂಡ ಮುಗಳಿ ಅವರು ಕನ್ನಡ ಭಾಷೆಯ ಉಳಿವು ಬೆಳವಣಿಗೆಗಾಗಿ ತಮ್ಮ ಕೈಲಾದ ಪ್ರಯತ್ನ ಮಾಡಿರುವುದರ ಬಗ್ಗೆ ತಿಳಿಸುತ್ತಾರೆ. ಕನ್ನಡ ನಾಡಿನಲ್ಲಿ ಸಾಹಿತ್ಯ ಅಭಿರುಚಿಯನ್ನು ಬೆಳೆಸುವ ನಿಟ್ಟಿನಲ್ಲಿ ಲೇಖಕರು, ಪ್ರಕಾಶಕರಿಂದ ಪುಸ್ತಕಗಳನ್ನು ತರಿಸಿಕೊಂಡು 'ಮನೆಮನೆಗೆ ಸರಸ್ವತಿ' ಎಂಬ ಆಂದೋಲನದ ಮೂಲಕ ಪುಸ್ತಕಗಳನ್ನು ಮನೆಮನೆಗೆ ಹೊತ್ತೊಯ್ದು ಕನ್ನಡ ಕೃತಿಗಳನ್ನು ಓದಲು ಪ್ರೋತ್ಸಾಹಿಸುತ್ತಿದ್ದ ವಿವರಗಳು ತಿಳಿಯುತ್ತವೆ.

ಮುಗಳಿ ಅವರು ತಾವು ಕೈಗೊಂಡ ವಿದೇಶಿ ಪ್ರವಾಸ ಕುರಿತು ತಿಳಿಸುವಂತೆ ಪ್ರವಾಸದ ಮೊದಲ ಹಂತದಲ್ಲಿ ಸ್ವಲ್ಪ ಅಡೆತಡೆಗಳಿಂದ ಕೂಡಿದ್ದರೂ ತದನಂತರ ಸರಿಯಾಗಿ ಯಶಸ್ವಿ ವಿದೇಶಿ ಪ್ರವಾಸ ಮುಗಿಸಿಕೊಂಡು ಬಂದಿರುವುದಾಗಿ ತಿಳಿಸುತ್ತಾರೆ. ಸ್ವಿಜರ್ಲ್ಯಾಂಡಿನ ಫ್ರಿಬು ವಿಶ್ವವಿದ್ಯಾಲಯದಲ್ಲಿ ಏಳು ದಿನದ ಕಾರ್ಯಕ್ರಮದಲ್ಲಿ ಭಾಗವಹಿಸಿ ರಮ್ಯಸ್ಥಳಗಳನ್ನು ನೋಡಿಕೊಂಡು, ಫ್ರಾನ್ಸ್‌ನ ರಾಜಧಾನಿಯಾದ ಪ್ಯಾರಿಸ್‌ಗೆ ಪ್ರಯಾಣ ಬೆಳೆಸಿ ಅಲಿಂದ ಫ್ರಾನ್ಸ್, ಬೆಲ್ಜಿಯಂ ಮತ್ತು ಹಾಲೆಂಡ್ ಈ ಮೂರು ದೇಶ ಪ್ರವಾಸ ಕೈಗೊಂಡು ಇಂಗ್ಲೆಂಡ್‌ಗೆ ಹೋಗಿ ಗೆಳೆಯನ ಮನೆಯಲ್ಲಿ ಎರಡು ವಾರ ಕಳೆದು ಪ್ರೇಕ್ಷಣೀಯ ಸ್ಥಳಗಳಿಗೆ ಭೇಟಿ ಕೊಟ್ಟು ಆಕ್ಸ್‌ಫರ್ಡ್ ಮತ್ತು ಕೇಂಬ್ರಿಡ್ಜ್ ವಿಶ್ವವಿದ್ಯಾಲಯಗಳನ್ನು ವೀಕ್ಷಿಸಿದ್ದಾಗಿ ಹೇಳಿಕೊಂಡಿದ್ದಾರೆ. ಹಾಗೆಯೇ ಶೇಕ್ಸ್‌ಪಿಯರ್‌ನ ಜನ್ಮಸ್ಥಳವಾದ ಸ್ಟ್ರ್ಯಾಫೋರ್ಡಿಗೆ

ಭೇಟಿ ನೀಡಿದ್ದಾಗಿ, ಶೇಕ್ಸ್‌ಪಿಯರ್‌ನ ಒಂದು ನಾಟಕ ವೀಕ್ಷಿಸಿದ್ದಾಗಿ ತಿಳಿಸುತ್ತಾರೆ(ನನ್ನ ವಿದೇಶಿ ಪ್ರವಾಸದ ಹಣದ ಖರ್ಚನ್ನು ಸ್ವಿಜರ್‌ಲ್ಯಾಂಡ್ ಸರಕಾರ ವಹಿಸಿಕೊಂಡಿರುವುದಾಗಿ ತಿಳಿಸುತ್ತಾರೆ).

ಮುಗಳಿ ಅವರು ೧೫೮ನೇ ಪುಟದಿಂದ ವಿಚಾರ ಸಾಹಿತ್ಯದಂತೆ ವಿಷಯವು ಒಳಗೊಂಡಿದೆ. ಹಸಿವು, ಬಡತನ, ಸಂಪ್ರದಾಯಗಳ ಕುರಿತಂತೆ ನಿರೂಪಣೆಗೊಂಡಿದೆ. ಹಾಗೆಯೇ ಅವರ ಜೀವನ ವ್ಯಕ್ತಿತ್ವ ಸಾಹಿತ್ಯ ಕೃತಿಗಳ ಬಗ್ಗೆ ಬೇರೆ ವಿಮರ್ಶಕರು ಸಹ ಓದಿ ವಿಮರ್ಶಿಸಲಿಲ್ಲ ಎಂಬುದನ್ನು ಮುಗಳಿ ಅವರು ಹೇಳಿಕೊಂಡಿದ್ದಾರೆ. ಮುಂದಿನ ಭಾಗದಲ್ಲೂ ಕೂಡ ಅವರ ಕಾವ್ಯ, ಕತೆ, ಕಾದಂಬರಿ ಕುರಿತು ವೃತ್ತಾಂತವೇ ತಿಳಿದುಬರುತ್ತದೆ.

ಒಬ್ಬ ವ್ಯಕ್ತಿಗೆ ಸಾಧ್ಯವಾದ ವೇಳೆಯಲ್ಲಿ ಮಾಡಬಹುದಾದ ಕೆಲಸವನ್ನು ಮುಗಳಿ ಅವರು ಮಾಡಿದ್ದಾರೆ. ಅವರ ಈ ಕೃತಿಯಲ್ಲಿ ತಮ್ಮ ವಿಷಯವನ್ನು ಪ್ರಸ್ತಾಪಿಸುವುದಾಗಲಿ, ತಿಳಿಸುವುದಾಗಲೀ ಎಲ್ಲಿಯೂ ಕಂಡುಬರುವುದಿಲ್ಲ. ಅವರ ಆತ್ಮಕತೆಯ ನಿರೂಪಣಾ ಶೈಲಿಯು ಉತ್ತಮವಾಗಿದೆ. ಯಾರೋ ಒಬ್ಬ ಲೇಖಕ/ನಿರೂಪಕ ಹೇಳಿಕೊಂಡ ಮಾದರಿಯಲ್ಲಿ ಮೂಡಿಬಂದಿದೆ. ಈ ಆತ್ಮಕಥನದಲ್ಲಿ ಸಂದರ್ಭೋಚಿತವಾಗಿ ಜೀವನದರ್ಶನ, ಕನ್ನಡ ನಾಡುನುಡಿ, ಸಾಹಿತ್ಯ ವಿಮರ್ಶೆ ಬಗ್ಗೆ ಪ್ರಸ್ತಾಪಗಳು ಬಂದಿರುವುದನ್ನು ಗಮನಿಸಬಹುದಾಗಿದೆ. ಸಾಂಗ್ಲಿಯ ವಿಲ್ಲಿಂಗ್ಡನ್ ಕಾಲೇಜಿನಿಂದ ವೃತ್ತಿ ಜೀವನ ಮುಗಿಸಿ ಉಳಿದ ಕಾಲಾವಧಿಯನ್ನು ಬೆಂಗಳೂರು ಜ್ಞಾನಭಾರತಿ ವಿಶ್ವವಿದ್ಯಾಲಯದ ಪ್ರಾರಂಭದ ಮೊದಲ ಹಂತದ ಕನ್ನಡ ವಿಭಾಗದ ಮುಖ್ಯಸ್ಥರಾಗಿ ಕಾರ್ಯ ನಿರ್ವಹಿಸುವವರೆಗೆ ಅವರ ಆತ್ಮಕತೆ ಮೂಡಿಬಂದಿದೆ. ಒಟ್ಟಿನಲ್ಲಿ ಮುಗಳಿ ಅವರು ತಮ್ಮ ಶೈಕ್ಷಣಿಕ ಚಟುವಟಿಕೆಗಳನ್ನು ಕುರಿತು ಸುತ್ತಮುತ್ತ ನಡೆದ ಘಟನೆಗಳನ್ನೇ ಈ ಕೃತಿ ಹೇಳಿದಂತಿದೆ. ಜೊತೆಗೆ ಪಿ. ಲಂಕೇಶರ ಹುಳಿಮಾವಿನಮರ, ಶಿವರಾಮ ಕಾರಂತರ ಹುಚ್ಚುಮನಸ್ಸಿನ ಹತ್ತು ಮುಖಗಳು ಆತ್ಮಚರಿತ್ರೆಗಳಂತೆ ಅಷ್ಟೊಂದು ಖಾಸಗಿ ವೃತ್ತಾಂತವನ್ನು ಹೇಳಿಕೊಂಡಿರುವುದು ತಿಳಿದುಬರುವುದಿಲ್ಲ. ಒಟ್ಟಿನಲ್ಲಿ ಮುಗಳಿ ಅವರ ಆತ್ಮಚರಿತ್ರೆಯು ಈ ವಿಷಯದಲ್ಲಿ ಮೌನ ತಾಳಿದೆ ಎಂದು ಓದುಗರಿಗೆ ಅನಿಸುತ್ತದೆ.

ಕೊನೆಟಿಪ್ಪಣಿಗಳು

೧. ದೊಡ್ಡರಂಗೇಗೌಡ, ಕನ್ನಡ ನವೋದಯ ಕಾವ್ಯ: ಒಂದು ಪುನರ್‌ಮೌಲ್ಯಮಾಪನ, ಸುಮುಖ ಪ್ರಕಾಶನ, ಬೆಂಗಳೂರು, ೨೦೦೪, ಪುಟ ೧೨೧

೨. ಅದೇ, ಪುಟ ೧೨೬-೧೨೭

೩. ಗುರುಲಿಂಗ ಕಾಪಸೆ ಮತ್ತು ಹೆಗಡೆ ಜಿ.ಎಸ್.(ಸಂ), ಕಣವಿ ಅವರ ಕವಿತೆ: ಹೊಸ ಓದು ವಿವಿಧ ವಿಮರ್ಶಕರಿಂದ, ಸುಮುಖ ಪ್ರಕಾಶನ, ಬೆಂಗಳೂರು, ೨೦೦೮, ಪುಟ ೫೧೮

೪. ಬಸವರಾಜ ಕಟ್ಟೀಮನಿ ಮತ್ತು ಮಾಧವ ಮಹಿಷಿ(ಸಂ), ರಸಿಗರಂಗದರ್ಶನ ಗೌರೀಶ್ ಕಾಯ್ಕಿಣಿ(ಲೇಖನ) ಉಷಾ ಸಾಹಿತ್ಯ ಮಾಲೆ, ಮೈಸೂರು, ೧೯೬೬, ಪುಟ ೧೨೦

೫. ಗುರುಲಿಂಗ ಕಾಪಸೆ ಮತ್ತು ಹೆಗಡೆ ಜಿ.ಎಸ್.(ಸಂ), ಕಣವಿ ಅವರ ಕವಿತೆ: ಹೊಸ ಓದು ವಿವಿಧ ವಿಮರ್ಶಕರಿಂದ, ಸುಮುಖ ಪ್ರಕಾಶನ, ಬೆಂಗಳೂರು, ೧೯೬೬, ಪುಟ ೧೫೪

೬ ವಾಮನ ಬೇಂದ್ರೆ(ಸಂ), ಔದುಂಬರ ಗಾಥೆ(ಅಂಬಿಕಾತನಯದತ್ತರ ಸಮಗ್ರ ಕಾವ್ಯ ಸಂ-೬), ವರಕವಿ ಸಂಶೋಧನಾ ಸಂಸ್ಥೆ, ಹುಬ್ಬಳ್ಳಿ, ೨೦೦೩, ಪುಟ ೬೩

೭ ಗುರುಲಿಂಗ ಕಾಪಸೆ ಮತ್ತು ಹೆಗಡೆ ಜಿ.ಎಸ್.(ಸಂ), ಕಣವಿ ಅವರ ಕವಿತೆ: ಹೊಸ ಓದು ವಿವಿಧ ವಿಮರ್ಶಕರಿಂದ, ಸುಮುಖ ಪ್ರಕಾಶನ, ಬೆಂಗಳೂರು, ೨೦೦೮, ಪುಟ ೫೪೯

೮. ದ.ರಾ. ಬೇಂದ್ರೆ, ಬೆಳಗು, ವರಕವಿ ಸಂಶೋಧನಾ ಸಂಸ್ಥೆ, ಹುಬ್ಬಳ್ಳಿ, ೨೦೦೩, ಪುಟ ೬೬

೯. ಗುರುಲಿಂಗ ಕಾಪಸೆ ಮತ್ತು ಹೆಗಡೆ ಜಿ.ಎಸ್.(ಸಂ), ಕಣವಿ ಅವರ ಕವಿತೆ: ಹೊಸ ಓದು ವಿವಿಧ ವಿಮರ್ಶಕರಿಂದ, ಸುಮುಖ ಪ್ರಕಾಶನ, ಬೆಂಗಳೂರು, ೨೦೦೮, ಪುಟ ೨೭೦

೧೦. ಅದೇ, ಪುಟ ೫೨೬

೧೧. ದ.ರಾ. ಬೇಂದ್ರೆ, ನಾದಲೀಲೆ, ಶ್ರೀಮಾತಾ ಪ್ರಕಾಶನ, ಹುಬ್ಬಳ್ಳಿ, ೨೦೧೩, ಪುಟ ೬೭

೧೨. ತಾಳ್ತಜೆ ವಸಂತಕುಮಾರ, ಕೇಂದ್ರ ಸಾಹಿತ್ಯ ಪ್ರಶಸ್ತಿ ಪುರಸ್ಕೃತ ಲೇಖಕರು ರಂ.ಶ್ರೀ. ಮುಗಳಿ, ನವಕರ್ನಾಟಕ ಪ್ರಕಾಶನ, ಬೆಂಗಳೂರು, ೨೦೧೧, ಪುಟ ೪೦

೧೩. ರಾಘವೇಂದ್ರರಾವ್ ಎಚ್.ಎಸ್.(ಸಂ), ರಂ.ಶ್ರೀ.ಮುಗಳಿ ಸಮಗ್ರ ಸಾಹಿತ್ಯ ಸಂಪುಟ ೧: ಭಾಗ ೧ ಕಾದಂಬರಿ, ಕತೆಗಳು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ೨೦೧೩, ಪುಟ XIV

೧೪. ಆಮೂರ ಜಿ.ಎಸ್., ಕನ್ನಡ ಕಥನ ಸಾಹಿತ್ಯ: ಕಾದಂಬರಿ, ಸಪ್ನ ಬುಕ್ ಹೌಸ್, ಬೆಂಗಳೂರು, ೨೦೦೬, ಪುಟ ೧೨-೧೩

೧೫. ಕೀರ್ತಿನಾಥ ಕುರ್ತಕೋಟಿ, ಯುಗಧರ್ಮ ಹಾಗೂ ಸಾಹಿತ್ಯ ದರ್ಶನ, ಮನೋಹರ ಗ್ರಂಥಮಾಲೆ, ಧಾರವಾಡ, ೨೦೦೨, ಪುಟ ೨೦೦

೧೬. ಅದೇ, ಪುಟ ೨೦೦

೧೭. ರಾಘವೇಂದ್ರರಾವ್ ಎಚ್.ಎಸ್.(ಸಂ), ರಂ.ಶ್ರೀ.ಮುಗಳಿ ಸಮಗ್ರ ಸಾಹಿತ್ಯ ಸಂಪುಟ ೧: ಭಾಗ ೨ ಕಾದಂಬರಿ, ಕತೆಗಳು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ೨೦೧೩ ಪುಟ X

೧೮. ರಾಘವೇಂದ್ರರಾವ್ ಹೆಚ್.ಎಸ್.(ಸಂ), ರಂ.ಶ್ರೀ.ಮುಗಳಿ ಸಮಗ್ರ ಸಾಹಿತ್ಯ ಸಂಪುಟ ೧: ಭಾಗ ೨ ಕಾದಂಬರಿ, ಕತೆಗಳು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ೨೦೧೩ ಪುಟ XI

೧೯. ಬಸವರಾಜ ಕಟ್ಟೀಮನಿ ಮತ್ತು ಮಾಧವ ಮಹಿಷಿ(ಸಂ), ರಸಿಕರಂಗದರ್ಶನ, ಎನ್.ಕೆ. ಕುಲಕರ್ಣಿ(ಲೇಖನ), ಉಷಾ ಸಾಹಿತ್ಯ ಮಾಲೆ, ಮೈಸೂರು, ೧೯೬೬, ಪುಟ ೧೬೮.

೨೦. ಬಸವರಾಜ ಕಟ್ಟೀಮನಿ ಮತ್ತು ಮಾಧವ ಮಹಿಷಿ(ಸಂ), ರಸಿಕರಂಗದರ್ಶನ, ಗೌರೀಶ ಕಾಯ್ಕಿಣಿ(ಲೇಖನ), ಉಷಾ ಸಾಹಿತ್ಯ ಮಾಲೆ, ಮೈಸೂರು, ೧೯೬೬, ಪುಟ ೧೬೮

೨೧. ತಾಳ್ತಜೆ ವಸಂತಕುಮಾರ, ಕೇಂದ್ರ ಸಾಹಿತ್ಯ ಪ್ರಶಸ್ತಿ ಪುರಸ್ಕೃತ ಲೇಖಕರು ರಂ.ಶ್ರೀ.ಮುಗಳಿ ನವಕರ್ನಾಟಕ ಪ್ರಕಾಶನ, ಬೆಂಗಳೂರು, ೨೦೧೧, ಪುಟ ೬೩.

ಅಧ್ಯಾಯ ನಾಲ್ಕು

ರಂ.ಶ್ರೀ.ಮುಗಳಿ ಅವರ ಸೃಜನೇತರ ಸಾಹಿತ್ಯ(ಭಾಗ-೧)

ರಂ.ಶ್ರೀ.ಮುಗಳಿ ಅವರ ಸೃಜನೇತರ ಸಾಹಿತ್ಯ(ಭಾಗ-೧)

೪.೧. ಕನ್ನಡ ಸಾಹಿತ್ಯ ಚರಿತ್ರೆ

೪.೨. ಪ್ರಾಚೀನ ಕನ್ನಡ ಸಾಹಿತ್ಯ ರೂಪಗಳು

೪.೩. ಕನ್ನಡ ಸಾಹಿತ್ಯ ಇತಿಹಾಸ

೪.೪. ಕರ್ನಾಟಕದ ಸಾಂಸ್ಕೃತಿಕ ಪರಂಪರೆ

ಅಧ್ಯಾಯ ನಾಲ್ಕು

ರಂ.ಶ್ರೀ.ಮುಗಳಿ ಅವರ ಸೃಜನೇತರ ಸಾಹಿತ್ಯ(ಭಾಗ-೧)

೪.೧. ಕನ್ನಡ ಸಾಹಿತ್ಯ ಚರಿತ್ರೆ

ಸಾಹಿತ್ಯ ರಚನೆ ಎಂಬ ಕ್ರಿಯೆ ವಸಾಹತುಶಾಹಿ ಕಾಲಘಟ್ಟದಿಂದ ಆಂಭವಾಯಿತು. ಅದು ಅಲ್ಲಿಗೆ ನಿಲ್ಲದೇ ಆಧುನಿಕ ಸಂದರ್ಭದಲ್ಲಿ ಬೇರೆ ಬೇರೆ ಅಗತ್ಯತೆಗಳಿಗೆ ಅನುಗುಣವಾಗಿ ಸಾಹಿತ್ಯ ಚರಿತ್ರೆಯನ್ನು ಮತ್ತೆ ಮತ್ತೆ ಪುನಾರಚಿಸುವ ಪ್ರಯತ್ನಗಳು ನಡೆದಿವೆ. ಶೋಧನೆಯ ಹೊಸ ಹೊಸ ಸಾಧ್ಯತೆಗಳು ಎಲ್ಲಾ ಜ್ಞಾನಶಾಸ್ತ್ರಗಳಿಗೆ ಇರುವಂತೆ ಸಾಹಿತ್ಯ ಚರಿತ್ರೆಗೂ ಇರುವುದರಿಂದ ಬೇರೆ ಬೇರೆ ಕಾಲಘಟ್ಟದಲ್ಲಿ ನಡೆದ ಹೊಸ ಹೊಸ ಶೋಧಗಳು ನಮ್ಮ ಹಳೆಯ ತಿಳುವಳಿಕೆಗಳನ್ನು ಪರಾಮರ್ಶಿಸಿ ಸರಿ-ತಪ್ಪುಗಳನ್ನು ಅರಿತುಕೊಳ್ಳುವಂತೆ ಮಾಡಿವೆ. ಈ ಹಿನ್ನೆಲೆಯಿಂದ ನೋಡಿದಾಗ ಕನ್ನಡದಲ್ಲಿ ಅನೇಕ ಶೈಕ್ಷಣಿಕ ಅವಶ್ಯಕತೆಗಳಿಗೂ ಸೇರಿದಂತೆ ಸಾಹಿತ್ಯ ಚರಿತ್ರೆಯನ್ನು ಮತ್ತೆ ಮತ್ತೆ ಸಣ್ಣ ಮತ್ತು ಬೃಹತ್ ಪ್ರಮಾಣದಲ್ಲಿ ಕಟ್ಟಲಾಗಿದೆ ಮತ್ತು ಕಟ್ಟಲಾಗುತ್ತಿವೆ. ಈ ಎಲ್ಲಾ ಸಾಹಿತ್ಯ ಚರಿತ್ರೆಗಳಿಗೆ ಭಿನ್ನವಾದ ಉದ್ದೇಶಗಳು ಇವೆ ಎಂಬುದನ್ನು ಕಂಡುಕೊಳ್ಳಲಾಗಿದೆ.

ಸಾಹಿತ್ಯ ಚರಿತ್ರೆ ಸಾಹಿತ್ಯ ಕೃತಿಯನ್ನು ಕವಿಗಳನ್ನು ಮತ್ತು ಒಂದು ಸೂತ್ರವೊಂದರಲ್ಲಿ ಪೋಣಿಸುವ ಕೆಲಸವನ್ನು ಮಾಡುತ್ತಿದೆ. ಸಾಹಿತ್ಯವನ್ನು ಕಾಲಬದ್ಧವಾದ ಸಾಹಿತ್ಯದ ನೆಲೆಯಲ್ಲಿ ಸಂಯೋಜಿತಗೊಳಿಸುತ್ತದೆ. ಈ ಸಂಯೋಜನೆಯೇ ಸಾಹಿತ್ಯಕ್ಕೆ ಒಂದು ಅರ್ಥವನ್ನು ಮತ್ತು ಸ್ಥಾನಮಾನವನ್ನು ತಂದುಕೊಡುತ್ತದೆ. ಹೀಗೆ ಪ್ರಾಪ್ತವಾಗುವ ಸ್ಥಾನಮಾನವೇ ಓದುಗನಲ್ಲಿ ಕೃತಿಯೊಂದರ ಓದಿನ ಸಾಧ್ಯತೆಯನ್ನು ಉಂಟುಮಾಡುತ್ತದೆ. ಹೀಗೆ ಕಟ್ಟಲ್ಪಡುವ ಸಾಹಿತ್ಯ ಚರಿತ್ರೆ ಸಾಹಿತ್ಯದ ಮೂಲ ಭಾಷೆಯೇ ಜನಮುಖಿಯಾಗಿ ಕಟ್ಟುವ ಚರಿತ್ರೆಗಿಂತ ಇದು ಬೇರೆಯಾಗಿರುತ್ತದೆ. ಒಂದು ನಾಡಿನ ಜನಸಮುದಾಯ ಕೆಲವು ಕೃತಿಗಳೊಂದಿಗೆ ಮತ್ತು ಲೇಖಕರೊಂದಿಗೆ ಮೂರ್ತರೂಪದ ಚರಿತ್ರೆಯನ್ನು ಕಟ್ಟಿದೆ. ಅವರ ಪಠ್ಯಗಳ ಜೊತೆ ಒಂದು ಬಗೆಯ ಅನುಸಂಧಾನವನ್ನು ಮಾಡುತ್ತಿರುತ್ತದೆ. ಕುಮಾರವ್ಯಾಸನ ಜೊತೆ ಮತ್ತು ಲಕ್ಷ್ಮೀಶನ ಜೊತೆ ಒಂದು ಚರಿತ್ರೆಯನ್ನು ಹಾಗೂ ಯಕ್ಷಗಾನ, ತಾಳಮದ್ದಳೆ, ಕಾವ್ಯವಾಚನದ ಮೂಲಕ ಜನ ಕಟ್ಟಿಕೊಂಡಿದ್ದಾರೆ. ಅಂದರೆ ಒಂದು ಕಾಲದ ಕೃತಿ, ಲೇಖಕರ ಜೊತೆ ಸಮುದಾಯ ಪ್ರಾಯೋಗಿಕವಾಗಿ ಬದುಕುತ್ತಿರುತ್ತದೆ. ಈ ಬದುಕೇ ಒಂದು

ಬಗೆಯ ಚರಿತ್ರೆ ಕಟ್ಟುವ ಕ್ರಿಯೆಯಾಗಿರುತ್ತದೆ. ಇದನ್ನು ಸಾಹಿತ್ಯ ಚರಿತ್ರೆ ಗ್ರಹಿಸಿಕೊಂಡಾಗ ಸಾಹಿತ್ಯ ಕೃತಿಗಳ ಕುರಿತು ಒಂದು ವಸ್ತುನಿಷ್ಠ ನಿಲುವನ್ನು ಹೊಂದಲು ಸಾಧ್ಯವಾಗುತ್ತದೆ.

ಕನ್ನಡ ಸಾಹಿತ್ಯಕ್ಕೆ ಸಾವಿರ ವರ್ಷಗಳಿಗೂ ಮೀರಿದ ಇತಿಹಾಸವಿದೆ. ಕಾಲದಿಂದ ಕಾಲಕ್ಕೆ ಜನ್ಮ ತಾಳಿದ ಕವಿಗಳು, ಅವರ ದೇಶ ಕಾಲದ ವೈಯಕ್ತಿಕ ಚರಿತ್ರೆ, ಅವರು ರಚಿಸಿದ ಗ್ರಂಥಗಳ ಸ್ವರೂಪ, ಆ ಗ್ರಂಥಗಳ ವಸ್ತು ಮತ್ತು ಮಹತ್ವ, ಸಮಗ್ರ ಸಾಹಿತ್ಯ ಭಂಡಾರದೊಳಗೆ ಅವುಗಳ ಸ್ಥಾನ ಈ ಮೊದಲಾದ ವಿಷಯಗಳನ್ನು ಅಂದಂದಿನ ಸಾಮಾಜಿಕ, ಸಾಂಸ್ಕೃತಿಕ ಪರಿಸರದ ಹಿನ್ನೆಲೆಯಲ್ಲಿ ವಿವೇಚಿಸುವ ಶಾಸ್ತ್ರವೇ ಸಾಹಿತ್ಯ ಚರಿತ್ರೆಯಾಗಿದೆ.

ಈ ರೀತಿಯಾದ ಕನ್ನಡ ಸಾಹಿತ್ಯ ಚರಿತ್ರೆಯ ಅಧ್ಯಯನ ಬರವಣಿಗೆ ಸುಮಾರು ಒಂದನೂರು ವರ್ಷಗಳ ಮಿಗಿಲಾಗಿ ಇತಿಹಾಸ ಹೊಂದಿದೆ. ಕನ್ನಡದಲ್ಲಿ ಈ ಮಾದರಿಯ ಅಧ್ಯಯನ ಮೊದಲು ಪ್ರಾರಂಭಿಸಿದ ಕೀರ್ತಿ ಕಿಟೆಲ್ಲರಿಗೆ ಸಲ್ಲುತ್ತದೆ. ಕಿಟೆಲ್ಲರು ಸಂಪಾದಿಸಿದ ನಾಗವರ್ಮನ ಛಂದೋಂಬುಧಿಗೆ ಬರೆದ 'An essay on Canarese Literature' ಎಂಬ ೬೦ ಪುಟದ ಪ್ರಸ್ತಾವನಾ ರೂಪದ ದೀರ್ಘ ಲೇಖನವೇ(೧೮೭೪) ಮೊಟ್ಟಮೊದಲನೆಯ ಕನ್ನಡ ಸಾಹಿತ್ಯ ಚರಿತ್ರೆಯೆಂದು ಭಾವಿಸಲಾಗಿದೆ. ಇದಕ್ಕೂ ಮೊದಲು ವೆಯ್‌ಗ್ಲೆ ಎಂಬ ವಿದ್ವಾಂಸ ೧೮೪೫ರ ಸುಮಾರಿಗೆ ಜರ್ಮನ್ ಭಾಷೆಯಲ್ಲಿ ಒಂದು ಲೇಖನ ಬರೆದು ಕನ್ನಡ ಕೃತಿಗಳನ್ನು ಪರಿಚಯಿಸಿದ್ದಾನೆ. ಅದು ಅಸಮಗ್ರ ಮತ್ತು ಪರಿಚಯಾತ್ಮಕವಾಗಿರುವುದರಿಂದ ಇದನ್ನು ಸಾಹಿತ್ಯ ಚರಿತ್ರೆ ಎಂದು ಪಂಡಿತರು ಒಪ್ಪಿಲ್ಲ. ಕಿಟೆಲ್ಲರು ೧೮೭೪ಕ್ಕಿಂತ ಮೊದಲು 'Old Kanarese Literature' ಎಂಬ ಲೇಖನದ ಮೂಲಕ ಕನ್ನಡ ಸಾಹಿತ್ಯ ಚರಿತ್ರೆಗೆ ಮುನ್ನುಡಿ ಬರೆದರು. ಅದರ ವಿಸ್ತೃತ ರೂಪವೇ ಮುಂದಿನ ಛಂದೋಂಬುಧಿಯ ಪ್ರಸ್ತಾವನಾ ರೂಪದ ಲೇಖನವಾಗಿದೆ. ಈ ಲೇಖನ ಬರೆಯುವ ಸಂದರ್ಭದಲ್ಲಿ ಕಿಟೆಲ್ಲರಿಗೆ ಸಮಗ್ರ ಆಧಾರ ಸಾಮಗ್ರಿಗಳು ದೊರೆಯದ ಕಾರಣ, ಅಂದು ಕೈಗೆ ದೊರೆತ ಸಾಮಗ್ರಿಯನ್ನೇ ವ್ಯವಸ್ಥಿತವಾಗಿ ಜೋಡಿಸಿರುವುದು ತಿಳಿದುಬರುತ್ತದೆ. ಕನ್ನಡ ಸಾಹಿತ್ಯವನ್ನು ಜೈನ, ವೀರಶೈವ ಮತ್ತು ವೈಷ್ಣವ ಎಂದು ಮತಧರ್ಮದ ಆಧಾರದ ಮೇಲೆ ವಿಭಾಗಿಸಿದ್ದಾರೆ.

ಬಿ.ಎಲ್. ರೈಸ್ ಕನ್ನಡ ಸಾಹಿತ್ಯ ಚರಿತ್ರೆಯ ಆರಂಭಕಾಲದ ಬರಹಗಾರರಲ್ಲಿ ಒಬ್ಬರು. ಅವರೇ ಸಂಪಾದಿಸಿ ಪ್ರಕಟಿಸಿದ 'ಮೈಸೂರು ಗೆಜೆಟಿಯರ್'ನ ಮೊದಲ ಸಂಪುಟದಲ್ಲಿ (೧೮೭೬) 'ಕರ್ನಾಟಕದ ಭಾಷಾಭೂಷಣ'(೧೮೮೪) ಮತ್ತು 'ಕರ್ನಾಟಕ ಶಬ್ದಾನುಶಾಸನಂ'(೧೮೯೦) ಗ್ರಂಥಗಳ ಪೀಠಿಕಾ ಭಾಗದಲ್ಲಿ 'Mysore and Coorg from the Inscriptions'(೧೯೦೯)"[೧] ಗ್ರಂಥದಲ್ಲಿ ಕನ್ನಡ ಸಾಹಿತ್ಯ ಚರಿತ್ರೆಗೆ ಸಂಬಂಧಿಸಿದಂತೆ ವಿಮರ್ಶಿಸಿರುವುದು ತಿಳಿದುಬರುತ್ತದೆ. ಕಿಟೆಲ್ಲರ ಬರಹಗಳಿಂದಲೂ ಮತ್ತು ಸಮಕಾಲೀನ ಶೋಧಗಳಿಂದಲೂ ಅವರು ಲಾಭ ಪಡೆದಿರುವುದು ತಿಳಿದುಬರುತ್ತದೆ.

೧೯೦೧-೧೯೫೦ ದ್ವಿತೀಯ ಹಂತದಲ್ಲಿ ಕಂಡುಬರುವ ಆರ್.ನರಸಿಂಹಾಚಾರ್ ರಚಿಸಿರುವ 'ಕನ್ನಡ ಕವಿಚರಿತ್ರೆ'ಯ ಸಂಪುಟಗಳು(೧೯೦೭) ಪ್ರಥಮ ೧೪ನೇ ಶತಮಾನದ ಕೊನೆಯವರೆಗೆ(೧೯೧೯), ದ್ವಿತೀಯ ೧೭ನೇ ಶತಮಾನದ ಕೊನೆಯವರೆಗೆ(೧೯೨೯), ತೃತೀಯ ೧೯ನೇ ಶತಮಾನದ ಕೊನೆಯವರೆಗೆ ಒಟ್ಟು ಸಾವಿರಕ್ಕೂ ಹೆಚ್ಚು ಕನ್ನಡ ಕವಿಗಳನ್ನು ಪರಿಚಯಿಸಿದ ಕೀರ್ತಿ ಈ ಸಂಪುಟಗಳಿಗೆ ಸಲ್ಲುತ್ತದೆ. ಈ ಸಂಪುಟಗಳ ರಚನೆಯಲ್ಲಿ ಸಹಾಯಕ ಸಂಪಾದಕರಾಗಿ(ಮೊದಲ ಸಂ.) ಎಸ್.ಜಿ. ನರಸಿಂಹಾಚಾರ್ಯರು ಕಾರ್ಯ ನಿರ್ವಹಿಸಿದ್ದಾರೆ. ಸುಮಾರು ನಾಲ್ಕು ದಶಕಗಳ ಶ್ರಮದ ಫಲ ಈ ಸಂಪುಟಗಳದ್ದಾಗಿದೆ. ಅದೇ ರೀತಿಯಾಗಿ ಎ. ವೆಂಕಟಸುಬ್ಬಯ್ಯನವರ 'ಕೆಲವು ಕನ್ನಡ ಕವಿಗಳ ಜೀವನ ವಿಚಾರ'(೧೯೨೭) ಕುರಿತು 'ಕವಿಚರಿತೆ'ಯ ಸಂಪುಟಗಳನ್ನು ವಿಮರ್ಶಿಸುತ್ತಾ ಹಲವು ಕವಿಗಳ ಕಾಲ, ಜೀವನ ಕುರಿತು ಬರೆದಿರುವ ಬರಹಗಳಾಗಿವೆ. ಈ ಕಾಲಾವಧಿಯ ಇತರ ಸಾಹಿತ್ಯ ಚರಿತ್ರೆಕಾರರಾದ ಎಂ.ಜಿ. ವೆಂಕಟೇಶಯ್ಯಂಗಾರರ 'ಕನ್ನಡ ಸಾಹಿತ್ಯ ಚರಿತ್ರೆಯ ಟಿಪ್ಪಣಿ'(೧೯೩೮), ಎನ್.ಕೆ.ಕುಲಕರ್ಣಿ ಅವರ 'ಕನ್ನಡ ಸಾಹಿತ್ಯ ವಾಹಿನಿ'(೧೯೩೯), ಕೆ.ವೆಂಕಟರಾಮಪ್ಪನವರ 'ಕನ್ನಡ ಸಾಹಿತ್ಯ'(೧೯೩೯), ಬಿ.ಎಂ. ಶ್ರೀಕಂಠಯ್ಯನವರ 'ಕನ್ನಡ ಕೈಪಿಡಿ' ದ್ವಿತೀಯ ಸಂಪುಟವಾಗಿ(೧೯೪೭)ರಲ್ಲಿ ರಚಿಸಿದ್ದಾರೆ.

೧೯೫೧-೧೯೭೪ ತೃತೀಯ ಹಂತದಲ್ಲಿ ರಂ.ಶ್ರೀ.ಮುಗಳಿ ಅವರ 'ಕನ್ನಡ ಸಾಹಿತ್ಯ ಚರಿತ್ರೆ'(೧೯೫೩)ಯು ಬಹುಮುಖ್ಯವಾದ ಸಂಶೋಧನಾ ಕೃತಿಯಾಗಿ ರಚನೆಯಾಗಿತು. ಈ ಕಾಲಾವಧಿಯಲ್ಲಿಯೇ ಸಾಹಿತ್ಯ ಚರಿತ್ರೆಯನ್ನು ಕುರಿತು ಹೆಚ್ಚು ಬಿಡಿ ಲೇಖನಗಳನ್ನು ರಚಿಸಿದವರ ಹೆಸರುಗಳು ಈ ರೀತಿ ಇದೆ. "ಎ.ವೆಂಕಟಸುಬ್ಬಯ್ಯ, ಗೋವಿಂದ ಪೈ, ದ.ರಾ.ಬೇಂದ್ರೆ, ಫ.ಗು.ಹಳಕಟ್ಟಿ, ಆ.ನೇ.ಉಪಾಧ್ಯೆ, ಮಧುರಚೆನ್ನ, ಮುಳಿಯ ತಿಮ್ಮಪ್ಪ, ರಾ.ಸ್ವಪಂಚಮುಖಿ, ಬೇಲೂರು ಕೇಶವದಾಸರು, ಬಿ.ಶಿವಮೂರ್ತಿಶಾಸ್ತ್ರಿ, ಶಿ.ಶಿ.ಬಸವನಾಳ, ಟಿ.ಎಸ್.ವೆಂಕಣ್ಣಯ್ಯ, ಎ.ಆರ್.ಕೃಷ್ಣಶಾಸ್ತ್ರಿ, ಕುವೆಂಪು, ಮಾಸ್ತಿ, ಎಂ.ವೆಂಕಟರಾವ್, ಎಚ್.ಶೇಷಯ್ಯಂಗಾರ್, ಡಿ.ಎಲ್.ನರಸಿಂಹಾಚಾರ್, ಕೆ.ಜಿ.ಕುಂದಣಗಾರ, ಆರ್.ಸಿ.ಹಿರೇಮಠ, ಎಂ.ಎ.ದೊರೆಸ್ವಾಮಿ ಅಯ್ಯಂಗಾರ್, ಸ.ಸ.ಮಾಳವಾಡ, ರಾಮಾನುಜ ಅಯ್ಯಂಗಾರ್, ತೀ.ನಂ.ಶ್ರೀಕಂಠಯ್ಯ, ನಾ.ಶ್ರೀ.ರಾಜಪುರೋಹಿತ, ಕೆ.ವಿ.ರಾಘವಾಚಾರ್, ಡಿ.ಕೆ.ಭೀಮಸೇನರಾವ್, ಎಂ.ಆರ್.ಶ್ರೀನಿವಾಸಮೂರ್ತಿ, ಎಚ್.ದೇವೀರಪ್ಪ, ಎಲ್.ಗುಂಡಪ್ಪ, ಸಂ.ಶಿ.ಭೂಸನೂರಮಠ, ಎಸ್.ವಿ.ರಂಗಣ್ಣ, ಚೆನ್ನಪ್ಪ ಉತ್ತಂಗಿ, ಶಂಬಾ ಜೋಶಿ, ಮ.ಪ್ರ.ಪೂಜಾರ, ಬಿ.ಎಂ.ಶ್ರೀಕಂಠಯ್ಯ, ವೆಂ.ಬಿ.ಲೋಕಾಪುರ, ಚೆನ್ನಕೇಶವಯ್ಯಂಗಾರ್, ತ.ಸು.ಶಾಮರಾಯ"[೨] ಮೊದಲಾದವರು.

ಇದರ ಮುಂದುವರಿಕೆಯಾಗಿ ಎಂ.ಮರಿಯಪ್ಪ ಭಟ್ಟರ 'ಸಂಕ್ಷಿಪ್ತ ಕನ್ನಡ ಸಾಹಿತ್ಯ ಚರಿತ್ರೆ'(೧೯೬೦) ಕೃತಿಯು ಪೂರ್ವದ ಹಳಗನ್ನಡ-ಹಳಗನ್ನಡ ಗದ್ಯ ಸಾಹಿತ್ಯ, ಚಂಪೂ ಕಾವ್ಯಗಳು, ಶಾಸನ ಸಾಹಿತ್ಯ, ಶತಕ ಸಾಹಿತ್ಯ, ಲಕ್ಷಣ ಸಾಹಿತ್ಯ, ಶಾಸ್ತ್ರೀಯ ಸಾಹಿತ್ಯ, ನಡುಗನ್ನಡ ಸಾಹಿತ್ಯ, ಜಾನಪದ ವಾಙ್ಮಯ, ಹೊಸಗನ್ನಡ ಸಾಹಿತ್ಯ ಎಂಬ ಶೀರ್ಷಿಕೆಗಳಲ್ಲಿ ೨೫೦ ಪುಟಗಳ ವ್ಯಾಪ್ತಿಯಲ್ಲಿ ಒಟ್ಟು

ಸಾಹಿತ್ಯ ಚರಿತ್ರೆಯ ಸ್ಥೂಲ ಸಮೀಕ್ಷೆಯೊಳಗೊಂಡಿದೆ. ಅದೇ ರೀತಿಯಾಗಿ ರಂ.ಶ್ರೀ.ಮುಗಳಿ ಅವರೇ ಸಾಹಿತ್ಯ ಚರಿತ್ರೆಯ ಕುರಿತು ಮತ್ತೊಂದು ಕೃತಿ 'ಕನ್ನಡ ಸಾಹಿತ್ಯ ಇತಿಹಾಸ'(೧೯೬೩) ಎಂಬ ಹೆಸರಿನಲ್ಲಿ ಕೇಂದ್ರ ಸಾಹಿತ್ಯ ಅಕಾಡೆಮಿಯ ಯೋಜನೆಗೆ ಒಳಪಟ್ಟು ಸಮಗ್ರ ಸಾಹಿತ್ಯ ಚರಿತ್ರೆಯನ್ನು ರಚಿಸಿದ್ದಾರೆ. ಈ ಕೃತಿಯು "ಇತರ ಭಾಷೆಗಳಲ್ಲಿ ಭಾಷಾಂತರವಾದ ಮೇಲೆ ಕನ್ನಡವರಿಯದ ಇತರ ಭಾಷಿಕರಿಗೂ ಅದರಲ್ಲಿಯೂ ಸಾಮಾನ್ಯ ವಾಚಕರಿಗಾಗಿ ಇದನ್ನು ಬರೆದಿದೆ"[೩] ಎಂದು ಮುನ್ನುಡಿಯಲ್ಲಿ ಹೇಳಿಕೊಂಡಿದ್ದಾರೆ. ೧. ಪ್ರಾಚೀನ ಕಾಲ: ಒಂದು, ೨. ಪ್ರಾಚೀನ ಕಾಲ: ಎರಡು, ೩. ಮಧ್ಯಕಾಲ: ಒಂದು, ೪. ಮಧ್ಯಕಾಲ: ಎರಡು, ೫. ಮಧ್ಯಕಾಲ: ಮೂರು, ೬. ಅರ್ವಾಚೀನ ಕಾಲ ಎಂಬಂತೆ ನೂತನ ಕ್ರಮವೊಂದನ್ನು ೨೮ ಶೀರ್ಷಿಕೆಯಲ್ಲಿ ವಿಸ್ತರಿಸಿದ್ದಾರೆ(ಅಧ್ಯಾಯ ೪.೩ರಲ್ಲಿ ಈ ಕೃತಿಯ ಬಗ್ಗೆ ಚರ್ಚಿಸಲಾಗಿದೆ.).

ತ.ಸು.ಶಾಮರಾಯರ 'ಜನಪ್ರಿಯ ಕನ್ನಡ ಸಾಹಿತ್ಯ ಚರಿತ್ರೆ'(೧೯೬೪)ಯಲ್ಲಿ ಹಳಗನ್ನಡ, ನಡುಗನ್ನಡ ಸಾಹಿತ್ಯೇತಿಹಾಸವನ್ನು ಪಂಪಪೂರ್ವಯುಗ ಅಥವಾ ಪ್ರಮುಖ ಯುಗಗಳಾಗಿ ರೂಪಿಸಿಕೊಂಡು ವಿಮರ್ಶಿಸಿದ್ದಾರೆ. ಅದೇ ರೀತಿಯಾಗಿ ಎನ್. ಅನಂತರಂಗಾಚಾರ್ ಅವರು ಸಾಹಿತ್ಯ ಚರಿತ್ರೆಯನ್ನು ಆನರ್ಸ್ ತರಗತಿಗಳಿಗೆ ಪಾಠ ಬೋಧಿಸುವಾಗ ತಯಾರಿಸಿಕೊಂಡ ಟಿಪ್ಪಣಿಗಳಿಂದ ಪ್ರೇರಣೆಪಡೆದು 'ಸಾಹಿತ್ಯ ಭಾರತಿ'(೧೯೭೦) ಕೃತಿಯನ್ನು ರಚಿಸಿದ್ದಾರೆ. ಇದರಂತೆ ಮುಗಳಿ ಅವರಿಗೂ ಸಾಂಗ್ಲಿಯ ವಿಲ್ಲಿಂಗ್ಡನ್ ಕಾಲೇಜಿನಲ್ಲಿ ವಿದ್ಯಾರ್ಥಿಗಳಿಗೆ ಪಾಠ ಬೋಧನೆಯಲ್ಲಿ ತೊಡಗಿಕೊಂಡ ಸಂದರ್ಭದಲ್ಲಿ ಪಠ್ಯಗಳ ಕೊರತೆಯಿಂದಾಗಿ ಅವರು ತಯಾರಿಸಿಕೊಂಡ ಟಿಪ್ಪಣಿಗಳೇ ಅವರಿಗೆ ಸಾಹಿತ್ಯ ಚರಿತ್ರೆಯನ್ನು ಕಟ್ಟಲು ಪ್ರೇರಣೆಯಾಗಿತ್ತೆಂದು ಅವರ ಆತ್ಮಚರಿತ್ರೆ 'ಜೀವನ ರಸಿಕ'ದಿಂದ ತಿಳಿದುಬರುತ್ತದೆ. ಕೆ. ವೆಂಕಟರಾಮಪ್ಪನವರು ಸಹ ಅವರ 'ಕನ್ನಡ ಸಾಹಿತ್ಯ ಚರಿತ್ರೆ'(೧೯೭೪) ರಚನಾ ಕಾಲದಲ್ಲಿ ವಿದ್ಯಾರ್ಥಿಗಳಿಗೆ ಬೋಧಿಸಲು ತಯಾರಿಸಿಕೊಂಡ ಟಿಪ್ಪಣಿಗಳೇ ಆಗಿದೆ. ಈ ಕೃತಿಯು ಒಂದೊಂದು ಶತಮಾನಕ್ಕೊಂದು ಅಧ್ಯಯನವನ್ನು ಬರೆಯುತ್ತಾ ೯ನೇ ಶತಮಾನದಿಂದ ೧೯ನೇ ಶತಮಾನದವರೆಗೆ ಮಾರ್ಗಕ್ರಮ ಮಾಡಿದ್ದಾರೆ. ಸಾಹಿತ್ಯ ಚರಿತ್ರೆಯ ಕವಿ ಕೃತಿಗಳಿಂದ ಉದಾರಹಣೆಗಳನ್ನು ಮಿತವಾಗಿ ಬಳಸಿಕೊಂಡು ವ್ಯಾಖ್ಯಾನಿಸಿರುವುದಕ್ಕೆ ಹೆಚ್ಚಿನ ಪ್ರಾಶಸ್ತ್ಯ ನೀಡಿರುವುದು ಈ ಕೃತಿಯ ವೈಶಿಷ್ಟ್ಯವಾಗಿದೆ.

ಡಿ.ಎಲ್.ನರಸಿಂಹಾಚಾರ್ 'ಕನ್ನಡ ಸಾಹಿತ್ಯ ಇತಿಹಾಸ'(೧೯೮೧) ಕೃತಿಯೂ ಸಹ ತರಗತಿಯಲ್ಲಿ ವಿದ್ಯಾರ್ಥಿಗಳಿಗೆ ಬೋಧಿಸಿದ ಟಿಪ್ಪಣಿಯ ಸಾರವೆಂಬುದು ತಿಳಿದುಬರುತ್ತದೆ. "ತರಗತಿಯ ಪಾಠದ ಟಿಪ್ಪಣಿಗಳೇ ಅಧಿಕೃತ ಗ್ರಂಥಗಳಾಗುವ ಮಹತ್ವಪೂರ್ಣ ಘಟನೆ ಜಗತ್ತಿನ ಸಾಹಿತ್ಯ ಇತಿಹಾಸದಲ್ಲಿ ಬಹು ವಿರಳ ಎಂಬ ಮಹತ್ವಾಕಾಂಕ್ಷೆಯ ಹಿನ್ನೆಲೆಯಲ್ಲಿ ಆ ಪುಸ್ತಕ ಪ್ರಕಟವಾಯಿತು"[೪] ಎಂದು ಹೇಳಿದ್ದಾರೆ.

ಸಾಹಿತ್ಯ ಚರಿತ್ರೆಯ ನಾಲ್ಕನೇ ಹಂತವು ಮಹತ್ವಯುತವಾದದ್ದು. ಏಕೆಂದರೆ ಬೆಂಗಳೂರು ಮತ್ತು ಮೈಸೂರು ವಿಶ್ವವಿದ್ಯಾಲಯಗಳು ನಡೆಸಿದ ಕಾರ್ಯ ಬಹುಮುಖ್ಯವಾದುದಾಗಿದೆ. ಬೆಂಗಳೂರು

ವಿಶ್ವವಿದ್ಯಾಲಯವು 'ಸಾಮಾನ್ಯನಿಗೆ ಸಾಹಿತ್ಯ ಚರಿತ್ರೆ'(೧೯೭೫) ಜಿ.ಎಸ್.ಶಿವರುದ್ರಪ್ಪನವರ ಪ್ರಧಾನ ಸಂಪಾದಕತ್ವದಲ್ಲಿ ಒಂದೇ ವರ್ಷದಲ್ಲಿ ಹತ್ತು ಸಂಪುಟಗಳು ಬೆಳಕು ಕಂಡವು. ಅವು ಈ ರೀತಿ ಇವೆ. ೧. ಜಿ.ಎಸ್.ಶಿವರುದ್ರಪ್ಪನವರ–ಕನ್ನಡ ಸಾಹಿತ್ಯ ಸಮೀಕ್ಷೆ, ೨. ಹು.ಕಾ.ಜಯದೇವ–ಶಾಸನ ಮತ್ತು ಗದ್ಯ, ೩. ಎಂ.ವಿ.ಸೀತಾರಾಮಯ್ಯ–ಶಾಸನಶಾಸ್ತ್ರ, ೪. ಪಿ.ವಿ.ನಾರಾಯಣ–ಚಂಪೂ ಕವಿಗಳು, ೫. ಎಂ.ಚಿದಾನಂದಮೂರ್ತಿ–ವಚನ ಸಾಹಿತ್ಯ, ೬. ಕೆ.ಮರುಳಸಿದ್ಧಪ್ಪ–ಷಟ್ಪದಿ ಸಾಹಿತ್ಯ, ೭. ಕಾಳೇಗೌಡ ನಾಗವಾರ–ತ್ರಿಪದಿ ರಗಳೆ ಮತ್ತು ಜನಪದ ಸಾಹಿತ್ಯ, ೮. ಎಚ್.ಎಸ್.ವೆಂಕಟೇಶಮೂರ್ತಿ–ಕೀರ್ತನೆಗಳು, ೯. ಹಂ.ಪ.ನಾಗರಾಜಯ್ಯ–ಸಾಂಗತ್ಯ ಕವಿಗಳು, ೧೦. ಎಲ್.ಎಸ್.ಶೇಷಗಿರಿರಾವ್–ಹೊಸಗನ್ನಡ ಸಾಹಿತ್ಯ ಕೃತಿಗಳನ್ನು ಇಡಿಯಾಗಿ ಒಬ್ಬೊಬ್ಬರು ರಚಿಸಿದ್ದಾರೆ. ಸಾಮಾನ್ಯ ಸಾಹಿತ್ಯ ಚರಿತ್ರೆಯಲ್ಲಿ ಸಾಮಾನ್ಯರೆಂದರೆ ಯಾರು ಎಂಬ ಪ್ರಶ್ನೆಗೆ "ವಿದ್ವಾಂಸರಲ್ಲದ ಆದರೆ ಕನ್ನಡ ಸಾಹಿತ್ಯ ಹಾಗೂ ಸಂಸ್ಕೃತಿಯ ಬಗ್ಗೆ ತಕ್ಕಮಟ್ಟಿಗೆ ಆಸಕ್ತಿ ಅಭಿರುಚಿಯುಳ್ಳ ಬಗೆಯ ಓದುಗರು ಎಂದರ್ಥ"[೫] ಎಂದು ಸ್ಪಷ್ಟಪಡಿಸಿದ್ದಾರೆ. ಈ ರೀತಿಯಾಗಿ ಸರಳವಾದ ರಸಾತ್ಮಕವಾದ ನಿರೂಪಣೆಯನ್ನು ಒಳಗೊಂಡಿವೆ.

ಬೆಂಗಳೂರು ವಿಶ್ವವಿದ್ಯಾಲಯವು 'ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ'(೧೯೭೪–೧೯೯೧) ೬ ಸಂಪುಟಗಳಲ್ಲಿ ಸಾಹಿತ್ಯ ಚರಿತ್ರೆಯನ್ನು ರಚಿಸಲು ಮತ್ತೊಂದು ಯೋಜನೆಯನ್ನು ರೂಪಿಸಿಕೊಂಡು ಜಿ.ಎಸ್.ಶಿವರುದ್ರಪ್ಪನವರ ಪ್ರಧಾನ ಸಂಪಾದಕತ್ವದಲ್ಲಿ ಹಾಗೆಯೇ ಈ ಯೋಜನೆಯ ಕಾರ್ಯದರ್ಶಿಗಳಾಗಿ ರಂ.ಶ್ರೀ.ಮುಗಳಿ ಅವರ ಪಾತ್ರವಿರುವುದು ತಿಳಿದುಬರುತ್ತದೆ. "ಒಂದು ಸಾವಿರಕ್ಕೂ ಮೀರಿದ ಸಾಹಿತ್ಯ ಪರಂಪರೆಯುಳ್ಳ ಕನ್ನಡ ಸಾಹಿತ್ಯ ಚರಿತ್ರೆಯನ್ನು ಅವಲೋಕಿಸುವ ಪುನಾರಚಿಸುವ ಹಲವು ಪ್ರಾಮಾಣಿಕ ಪ್ರಯತ್ನಗಳು ಕಳೆದ ಅರ್ಧ ಶತಮಾನದ ಅವಧಿಯಲ್ಲಿ ನಡೆದಿದ್ದರೂ ಕನ್ನಡ ಸಾಹಿತ್ಯವನ್ನು ಅದರ ಐತಿಹಾಸಿಕ, ಸಾಂಸ್ಕೃತಿಕ ಸಂದರ್ಭಗಳ ಹಿನ್ನೆಲೆಯಲ್ಲಿರಿಸಿ ಕೂಲಂಕಷವಾಗಿ ಪರಿಶೀಲಿಸುವ ಮತ್ತು ವಿಮರ್ಶಿಸುವ ವಿಸ್ತಾರವಾದ ಪ್ರಯತ್ನಗಳು ನಡೆದಿಲ್ಲವೆಂದೇ ಹೇಳಬೇಕು. ಕನ್ನಡ ಸಾಹಿತ್ಯ ಆರಂಭದಿಂದ ಆಧುನಿಕ ಕಾಲದವರೆಗೆ ಹಲವು ಕಾಲಮಾನಗಳನ್ನು ಮಾಡಿಕೊಂಡು, ಪ್ರತಿಯೊಂದು ಕಾಲಮಾನದ ಸಾಹಿತ್ಯಾಭಿವ್ಯಕ್ತಿಯನ್ನು ಅಂದಂದಿನ ಇತಿಹಾಸ, ಭಾಷಾ ಸ್ವರೂಪ, ಸಂಸ್ಕೃತಿ, ಧರ್ಮ ಇವುಗಳ ಹಿನ್ನೆಲೆಯಿಂದ ಸಮಗ್ರವಾಗಿ ಪರಿಶೀಲಿಸುವುದಲ್ಲದೆ, ಈ ಸಾಹಿತ್ಯ ಚರಿತ್ರೆ ಪ್ರಮಾಣಭೂತವೂ ಪುನರ್‌ಮೌಲ್ಯಮಾಪನ ದೃಷ್ಟಿಯುಳ್ಳದ್ದೂ ಆಗಿರಬೇಕೆಂದು ಈ ಯೋಜನೆಯ ಉದ್ದೇಶವಾಗಿದೆ"[೬] ಈ ಯೋಜನೆಯ ರೂಪರೇಷೆಯನ್ನು ಸ್ಪಷ್ಟಪಡಿಸುತ್ತಾರೆ.

ಈ ಅವಧಿಯಲ್ಲಿಯೇ ಮೈಸೂರು ವಿಶ್ವವಿದ್ಯಾನಿಲಯವು ಹಾ.ಮಾ.ನಾಯಕರ ಸಂಪಾದಕತ್ವದಲ್ಲಿ ಕನ್ನಡ ಅಧ್ಯಯನ ಸಂಸ್ಥೆಯ ಕನ್ನಡ ಸಾಹಿತ್ಯ ಚರಿತ್ರೆ ೧೦ ಸಂಪುಟದಲ್ಲಿ ರಚಿಸುವುದಾಗಿ ರೂಪರೇಷೆಗಳನ್ನು ಹಾಕಿಕೊಂಡು ಕಾರ್ಯ ನಿರ್ವಹಿಸಿದ ಪ್ರಯುಕ್ತ ಐದು ಸಂಪುಟಗಳು ರಚನೆಗೊಂಡು ಉಳಿದ ಐದು ಸಂಪುಟಗಳು ರಚನೆಗೊಳ್ಳದೆ ನಿಲುಗಡೆಗೊಂಡಿವೆ. ಆ ಯೋಜನೆಗಳ ರೂಪರೇಷೆಗಳ

ಬಗ್ಗೆ ಹಾ.ಮಾ.ನಾಯಕರು ಈ ರೀತಿಯಾಗಿ ತಿಳಿಸುತ್ತಾರೆ. "ಇದುವರೆಗೆ ಗಮನಿಸಲಾಗಿರುವ ಪ್ರತಿಯೊಬ್ಬ ಕವಿಯ ಕಾಲ ದೇಶ ಜೀವನ ಸಾಧನೆ ಮೊದಲಾದ ವಿಷಯಗಳನ್ನು ಚರ್ಚಿಸುವುದು ಸಮಯೋಚಿತ ಉದ್ಧರಣಗಳೊಡನೆ ಪ್ರತಿಯೊಂದು ಕೃತಿಯನ್ನು ಪರಿಚಯ ಮಾಡಿಕೊಡುವುದು; ಕವಿಕೃತಿಗಳ ವಿಷಯದಲ್ಲಿ ಇದುವರೆಗೆ ನಡೆದಿರುವ ಚರ್ಚೆ ಎಲ್ಲವನ್ನು ಇರಬಹುದಾದ ಹೊಸ ಸಂಶೋಧನೆಗಳೊಡನೆ ಸಂಕ್ಷಿಪ್ತವಾಗಿ ನಿರೂಪಿಸುವುದು, ಸಾಧ್ಯವಾದ ಮಟ್ಟಿಗೂ ವಿಮರ್ಶಾತ್ಮಕವಾಗಿ ಕೃತಿಗಳ ಮೌಲ್ಯಮಾಪನವನ್ನು ನಿರ್ಧರಿಸುವುದು–ಈ ಸಾಹಿತ್ಯ ಚರಿತ್ರೆಯ ಮುಖ್ಯ ಉದ್ದೇಶವಾಗಿದೆ."೭

ಸಿ. ವೀರಣ್ಣನವರು 'ಕನ್ನಡ ಸಾಹಿತ್ಯ: ಚಾರಿತ್ರಿಕ ಬೆಳವಣಿಗೆ' ಕುರಿತಂತೆ ಐದು ಸಂಪುಟಗಳನ್ನು ಒಬ್ಬರೇ ರಚಿಸಲು ಮುಂದಾಗಿರುವಂತದ್ದು ತಿಳಿದುಬರುತ್ತದೆ. ಆ ಯೋಜನೆ ವಿವರ ಈ ರೀತಿ ಇದೆ. (ಸಂ.೧) ಪ್ರಾಚೀನ ಸಾಹಿತ್ಯ: ರಾಜಸತ್ತೆಯ ವೈಭವಕಾಲ ಆರಂಭದಿಂದ ಕ್ರಿ.ಶ ೧೦೦೦ ೨. ಮಧ್ಯಕಾಲೀನ ಸಾಹಿತ್ಯ: ರಾಜಸತ್ತೆಯ ವಿಘಟನಕಾಲ(೧೧೦೦–೧೫೦೦), ೩. ಹೊಸಗನ್ನಡ ಸಾಹಿತ್ಯ: ರಾಜಸತ್ತೆಯು ನಿಸ್ತೇಜಕಾಲ(೧೫೦೦–೧೮೦೦), ೪. ಆಧುನಿಕ ಸಾಹಿತ್ಯ ವಸಾಹತುಶಾಹಿಕಾಲ(೧೮೫೦–೧೯೫೦), ೫. ಆಧುನಿಕ ಸಾಹಿತ್ಯ: ಬಂಡವಾಳಶಾಹಿ ಕಾಲ–೧೯೫೦ರಿಂದೀಚೆಗೆ. ವೀರಣ್ಣನವರು ೧೯೮೬ರಲ್ಲಿ ಪ್ರಾಚೀನ ಸಾಹಿತ್ಯ: 'ರಾಜಸತ್ತೆಯ ವೈಭವಕಾಲ' ಎಂಬ ಪ್ರಥಮ ಸಂಪುಟವನ್ನು ಹೊರತಂದರಾದರೂ ಮುಂದಿನ ಸಂಪುಟಗಳು ಚಾಲನೆಗೊಳ್ಳದೆ ಅಲ್ಲಿಯೇ ನಿಂತುಕೊಂಡುಬಿಟ್ಟವು. ವೀರಣ್ಣನವರು ಕನ್ನಡ ಮಾರ್ಕ್ಸ್‌ವಾದಿ ಬರಹಗಾರರಲ್ಲಿ ಪ್ರಮುಖರೆಂದು ಕೀರ್ತಿಗೆ ಭಾಜನರಾದವರು. ಇವರ ಮೊದಲ ಸಂಪುಟವು ಆ ದೃಷ್ಟಿಕೋನದಲ್ಲಿಯೇ ಸಾಹಿತ್ಯ ಬೆಳವಣಿಗೆಯನ್ನು ವಿವೇಚಿಸುವ ಮಾರ್ಗದಲ್ಲಿ ಸಾಗಿರುವುದು ತಿಳಿದುಬರುತ್ತದೆ.

ಸಮಗ್ರ ಹೊಸಗನ್ನಡ ಸಾಹಿತ್ಯ ಚರಿತ್ರೆ ರಚಿಸಲು ತೊಡಗಿಕೊಂಡ ವಿದ್ವಾಂಸರು ಯಶಸ್ಸು ಗಳಿಸಿರುವುದು ಸುಲಭದ ಮಾತಲ್ಲ. ಏಕೆಂದರೆ ಈ ಕಾಲದಲ್ಲಿಯೇ ಕೃತಿಕಾರರ ಸಂಖ್ಯೆ ಅಪಾರವಾಗಿ ಬೆಳೆದಿರುವಂತಹದ್ದನ್ನು ಗಮನಿಸಬಹುದು. "೧೮೫೦ರವರೆಗೆ ಎಷ್ಟು ಮಂದಿ ಲೇಖಕರಾಗಿ ಹೋದರೂ ಸುಮಾರು ಅಷ್ಟೇ ಲೇಖಕರು ಈ ಹೊಸ ಅವಧಿಯೊಂದರಲ್ಲೇ ಕಾಣಿಸಿಕೊಂಡಿದ್ದಾರೆ. ಎಲ್ಲರನ್ನೂ ಏಕಸೂತ್ರದಲ್ಲಿ ಹಿಡಿದಿಡುವುದು ಕಷ್ಟಕರವಾಗಿದೆ. ನವೋದಯ, ಪ್ರಗತಿಶೀಲ, ನವ್ಯ, ದಲಿತ–ಬಂಡಾಯ ಮೊದಲಾದ ವಿವಿಧ ಪ್ರಕಾರಗಳು ಹುಟ್ಟಿ ಬೆಳೆದಿವೆ. ಜನಸಂಖ್ಯೆಯ ಸ್ಫೋಟದಂತೆಯೇ ಕೃತಿಗಳ ಸ್ಫೋಟವು ಉಂಟಾಗಿದೆ"೮

ಶ್ರೀನಿವಾಸ ಹಾವನೂರರ 'ಹೊಸಗನ್ನಡ ಅರುಣೋದಯ'(೧೯೭೪) ೧೮೦೦ ರಿಂದ ೧೯೦೦ ರವರೆಗಿನ ಒಂದು ಶತಮಾನದ ಸಾಹಿತ್ಯವನ್ನು ಸಮೀಕ್ಷಿಸಿದ್ದಾರೆ. ೬೧೯ ಪುಟಗಳನ್ನೊಳಗೊಂಡ ಈ ಕೃತಿಯು ಪೂರ್ವಾರ್ಧ, ಉತ್ತರಾರ್ಧ ಎಂಬೆರಡು ಪ್ರಧಾನ ವಿಭಾಗಗಳನ್ನು ಮಾಡಿಕೊಂಡಿದ್ದು ಒಂದೊಂದರಲ್ಲಿ ಒಂಬತ್ತು ಅಧ್ಯಾಯಗಳನ್ನೊಳಗೊಂಡಿದೆ. ಪೂರ್ವಾರ್ಧ ಅಧ್ಯಾಯಗಳನ್ನು ಕ್ರಮವಾಗಿ ಅರುಣೋದಯದ ಅಧ್ಯಾಯಗಳ ಹಿನ್ನೆಲೆ, ಮುದ್ರಣ ಮತ್ತು ಗ್ರಂಥೋದ್ಯಮ, ಶಿಕ್ಷಣರಂಗ ಮತ್ತು

ಸಾಹಿತ್ಯ ವಿಕಾಸ, ಮಿಶನರಿಗಳ ಸಾಹಿತ್ಯಕಾರ್ಯ, ಬ್ರಿಟಿಷ್ ಅಧಿಕಾರಿಗಳ ಕನ್ನಡ ಕಾರ್ಯ, ಮುಮ್ಮಡಿ ಕೃಷ್ಣರಾಜ, ಧಾರ್ಮಿಕ ವಾಙ್ಮಯಕಾರರು, ಯಕ್ಷಗಾನ ಕವಿಗಳು ಅರುಣೋದಯದ ಆರಂಭಕಾರರು ಎಂದು ಕರೆದಿದ್ದಾರೆ. ಉತ್ತರಾರ್ಧದ ಅಧ್ಯಾಯಗಳನ್ನು ಸಿದ್ಧತೆ, ಭಾಷಾಭ್ಯಾಸ, ಹೊಸಕವಿತೆ, ನಾಟಕಗಳು, ಕ್ರೈಸ್ತ ಸಾಹಿತ್ಯ, ವಿವಿಧ ಗದ್ಯಬರಹ, ಪತ್ರಿಕಾ ಪ್ರಪಂಚ, ಕಥಾ ಪ್ರಪಂಚ ಸಮಾರೋಪವೆಂದು ವಿಭಾಗಿಸಿಕೊಂಡು ಅಧ್ಯಯನ ಮಾಡಲಾಗಿದೆ.

ರಾ.ಯ.ಧಾರವಾಡಕರರು 'ಹೊಸಗನ್ನಡ ಸಾಹಿತ್ಯದ ಉದಯಕಾಲ'(೧೯೭೫) ಸುಮಾರು ೧೮೬೦ರಿಂದ ೨೦ನೇ ಶತಮಾನದ ಆದಿಭಾಗದವರೆಗೆ ಕವಿಗಳ ಕಾಲ, ದೇಶ, ವ್ಯಕ್ತಿಜೀವನದ ವಿವರ ಅದರೊಳಗಿನ ಮಹತ್ವದ ಎಲ್ಲಾ ವಿವರಗಳನ್ನು ಶೋಧಿಸಿ ಸಂಗ್ರಹಿಸಿದ್ದಾರೆ. ಅದೇ ರೀತಿ ಸಿ.ಎನ್. ಜಯರಾಂ ಹತ್ತೊಂಬತ್ತನೇ ಶತಮಾನದ ಕನ್ನಡ ಸಾಹಿತ್ಯ ಚರಿತ್ರೆ'(೧೯೮೭) ಕೃತಿಯಲ್ಲಿ ಆ ಕಾಲಾವಧಿ ಸಾಹಿತ್ಯ ಧೋರಣೆಗಳು ಪ್ರಧಾನ ಕವಿಗಳ ಸಾಧನೆ ಸಿದ್ಧಿಗಳು ಒಡಮೂಡುವಂತೆ ತಮ್ಮ ವಿಚಾರಗಳನ್ನು ಕ್ರೋಡೀಕರಿಸಿದ್ದಾರೆ. ಆ ಕಾಲದ ಕಾದಂಬರಿ, ಶಾಸ್ತ್ರಸಾಹಿತ್ಯ, ಗದ್ಯಾನುವಾದ ಲಾವಣಿ ಮತ್ತು ಯಕ್ಷಗಾನ ರಚನೆಗಳ ಮೇಲೆಯೂ ಬೆಳಕು ಚೆಲ್ಲಿರುವುದು ತಿಳಿದುಬರುತ್ತದೆ.

ಇಪ್ಪತ್ತನೇ ಶತಮಾನದ ಆದಿಭಾಗದಲ್ಲಿ ರಂ.ಶ್ರೀ.ಮುಗಳಿ ಮತ್ತು ಎನ್. ಅನಂತರಂಗಾಚಾರ್ ಅವರು ತಮ್ಮ ಕೃತಿಗಳಲ್ಲಿ ಹೊಸಗನ್ನಡ ಸಾಹಿತ್ಯ ಚರಿತ್ರೆಯನ್ನು ಸಂಕ್ಷಿಪ್ತವಾಗಿ ವಿವರಿಸಿದ್ದಾರೆ. ಈ ಕ್ಷೇತ್ರದಲ್ಲಿ ಮತ್ತೊಬ್ಬರು ಶ್ರಮ ವಹಿಸಿ ದುಡಿದಿರುವವರೆಂದರೆ ಕೀರ್ತಿನಾಥ ಕುರ್ತಕೋಟಿ ಅವರು. ಅವರ 'ಯುಗಧರ್ಮ ಹಾಗೂ ಸಾಹಿತ್ಯದರ್ಶನ'(೧೯೬೨) ಕೃತಿಯಲ್ಲಿ ಹೊಸಗನ್ನಡ ಸಾಹಿತ್ಯಕ್ಕೆ ಸಂಬಂಧಿಸಿದಂತೆ ಕಾವ್ಯ, ನಾಟಕ, ಸಣ್ಣಕಥೆ, ಕಾದಂಬರಿ, ಸಾಹಿತ್ಯ ವಿಮರ್ಶೆಯೊಳಗೊಂಡಂತೆ ಬಿಡಿ ಬಿಡಿಯಾದ ಪ್ರಬಂಧಗಳನ್ನು ಒಟ್ಟುಗೂಡಿಸಲಾಗಿದೆ. ಪಂಪಯುಗದಿಂದ ತೊಡಗಿ, ಆಧುನಿಕ ಯುಗದವರೆಗೂ ಕನ್ನಡ ಸಾಹಿತ್ಯ ನಿರ್ಮಾಣಕ್ಕೊದಗಿದ ಪ್ರೇರಣೆಗಳನ್ನು ತಿಳಿಸಲಾಗಿದೆ.

ಅದೇ ರೀತಿಯಾಗಿ ಎಲ್. ಎಸ್. ಶೇಷಗಿರಿರಾವ್ ಅವರು 'ಹೊಸಗನ್ನಡ ಸಾಹಿತ್ಯ'(೧೯೭೫) ಕೃತಿಯಲ್ಲಿ ಆರು ಅಧ್ಯಾಯಗಳಲ್ಲಿ ಕ್ರಮವಾಗಿ ೧. ಹೊಸಗನ್ನಡ ಸಾಹಿತ್ಯದ ಆರಂಭಕಾಲ, ೨. ಹೊಸಗನ್ನಡ ಸಾಹಿತ್ಯದ ಪ್ರೇರಣೆಗಳು, ೩. ಹೊಸಗನ್ನಡ ಸಾಹಿತ್ಯದ ಘಟ್ಟಗಳು, ೪. ಹೊಸಗನ್ನಡ ಸಾಹಿತ್ಯದ ರೂಪಗಳು, ೫. ಪ್ರಮುಖ ಕೃತಿಕಾರರು, ೬. ಹೊಸಗನ್ನಡ ಸಾಹಿತ್ಯದ ಒಂದು ಸಮೀಕ್ಷೆ ಎಂಬ ಶೀರ್ಷಿಕೆಗಳಲ್ಲಿ ಸಾಮಾನ್ಯನಿಗೆಂದು ಹೊಸಗನ್ನಡ ಸಾಹಿತ್ಯ ಚರಿತ್ರೆಯನ್ನು ರಚಿಸಿ ಕೊಟ್ಟಿದ್ದಾರೆ. ಈ ರೀತಿಯಾಗಿ ಕನ್ನಡ ಸಾಹಿತ್ಯ ಚರಿತ್ರೆಯನ್ನು ರಚಿಸಿದ ಎಲ್ಲ ಮಹನೀಯರ ಹೆಸರುಗಳನ್ನು ತಿಳಿಸುವುದು ಮತ್ತು ಚರ್ಚಿಸುವುದು ಕಷ್ಟಕರವಾದದ್ದು. ಆದ್ದರಿಂದ ನಂತರದ ಭಾಗದಲ್ಲಿ ರಂ.ಶ್ರೀ.ಮುಗಳಿ ಅವರ ಕನ್ನಡ ಸಾಹಿತ್ಯ ಚರಿತ್ರೆಯನ್ನು ಪರಾಮರ್ಶಿಸಲಾಗಿದೆ.

ಮುಗಳಿ ಅವರು ತಮ್ಮ 'ಸಾಹಿತ್ಯ ಚರಿತ್ರೆ' ಕೃತಿಯನ್ನು ಐದು ಮುಖ್ಯ ವಿಭಾಗಗಳನ್ನಾಗಿ ವಿಂಗಡಿಸಿಕೊಂಡಿದ್ದಾರೆ. ಸಾಹಿತ್ಯ ಚರಿತ್ರೆಯ ಪೂರ್ವಪೀಠಿಕೆ, ಪಂಪಪೂರ್ವಯುಗ, ಪಂಪಯುಗ,

ಬಸವಯುಗ ಮತ್ತು ಕುಮಾರವ್ಯಾಸಯುಗಗಳೆಂದು ವಿಭಾಗಿಸಿದ್ದಾರೆ. ಪ್ರತಿ ವಿಭಾಗವನ್ನು ಪ್ರಕರಣಗಳಾಗಿ ಮರುವಿಂಗಡಿಸಲಾಗಿದೆ. ಸಾಹಿತ್ಯ ಚರಿತ್ರೆಯ ಪೂರ್ವಪೀಠಿಕೆ ವಿಭಾಗವು ಸಾಹಿತ್ಯೋದಯದ ಸಂದರ್ಭದಿಂದ ತೊಡಗಿ ಸಾಹಿತ್ಯ ಚರಿತ್ರೆಯ ವಿಭಾಗಕ್ರಮಗಳ ವಿಶ್ಲೇಷಣೆಯೊಂದಿಗೆ ಸಾಹಿತ್ಯದ ಹಿನ್ನೆಲೆ, ಕಾರಣಗಳು, ಪ್ರೇರಣೆಗಳನ್ನು ನಿರೂಪಿಸುತ್ತಾ ಕನ್ನಡ ಸಾಹಿತ್ಯದ ಉದಯಕ್ಕೆ ಕಾರಣವಾದ ಅಂಶಗಳೊಂದಿಗೆ, ಪ್ರಾಚೀನ ಅವಶೇಷಗಳು, ಶಾಸನಗಳು, ಕನ್ನಡ ಮೊದಲಾದ ಉಪಲಬ್ಧ ಗ್ರಂಥವಾದ ಕವಿರಾಜಮಾರ್ಗದಲ್ಲಿ ದೊರೆಯುವ ಆಧಾರಗಳೊಂದಿಗೆ ಮತ್ತು ಇತರ ಸಾಹಿತ್ಯ ಆಧಾರಗಳ ನೆರವಿನಿಂದ ಹಾಗೂ ಪೂರ್ವ ವಿದ್ವಾಂಸರ ಹೇಳಿಕೆಗಳನ್ನು ಪರಾಮರ್ಶಿಸಿಕೊಂಡು ಸಾಹಿತ್ಯ ಚರಿತ್ರೆಯನ್ನು ಕಟ್ಟಲು ಮುಂದಾಗುತ್ತಾರೆ.

ಅವರ ಸಾಹಿತ್ಯ ಚರಿತ್ರೆಯ ಎರಡನೆಯ ವಿಭಾಗದಲ್ಲಿ ಪಂಪಪೂರ್ವಯುಗದ ಕವಿಗಳು, ಕವಿರಾಜಮಾರ್ಗ ಮತ್ತು ವಡ್ಡಾರಾಧನೆ ಕೃತಿಗಳನ್ನು ಪರಾಮರ್ಶಿಸಿದ್ದಾರೆ. ಮುಂದೆ ಅಸಗ, ಗುಣನಂದಿ, ೧ನೇ ಗುಣವರ್ಮ ಮುಂತಾದ ಕವಿಗಳ ಚರಿತ್ರೆಯ ಮೇಲೆ ಗಮನಿಸಿದ ಅವರು ಅವುಗಳಿಗೆ ಸಂಬಂಧಿಸಿದಂತೆ ಮಾಹಿತಿ ತೀವ್ರವಾದ ಆಕರಗಳ ಕೊರತೆಯಿಂದಾಗಿ ನಿರ್ದಿಷ್ಟ ಗುರಿ ತಲುಪಲು ಅಸಾಧ್ಯವೆಂದೂ ತಿಳಿದು ಈ ಬಗೆಗಿನ ಎಲ್ಲ ತೀರ್ಮಾನಗಳಿಗೂ ಊಹೆಯ ಕುದುರೆಯನ್ನು ಓಡಿಸಿ ಪರಾಮರ್ಶಿಸಿದ್ದಾರೆ.

ಮೂರನೇ ವಿಭಾಗಕ್ರಮದಲ್ಲಿ ಆದಿಕವಿ ಪಂಪನಿಂದ ತೊಡಗಿ ನಾಗಚಂದ್ರ ಹಾಗೂ ಅವನ ಸಮಕಾಲೀನ ಕವಿ ಹಾಗೂ ಕಾವ್ಯಗಳ ವಿವರಗಳನ್ನು ಚರ್ಚಿಸಿರುವುದು ತಿಳಿದುಬರುತ್ತದೆ. ಪಂಪಯುಗದ ರೂಪರೇಷೆಗಳಲ್ಲಿ ಮುಗಳಿ ಅವರು ಈ ಕಾಲಖಂಡದ ಪ್ರಮುಖ ರಾಜಕೀಯ ಹಾಗೂ ಸಾಂಸ್ಕೃತಿಕ ಲಕ್ಷಣಗಳನ್ನು ನಿರೂಪಿಸುತ್ತಾರೆ. "೧೦ನೇ ಶತಮಾನದಿಂದ ೧೨ನೇ ಶತಮಾನದ ಮಧ್ಯದವರೆಗಿನ ಕಾಲವು ರಾಜಕೀಯ ಮುಂತಾದ ದೃಷ್ಟಿಯಿಂದ ಉಜ್ವಲವಾದರೂ ಅಸ್ಥಿರವಾದುದು. ವೀರಸತ್ವವು ಕನ್ನಡ ನಾಡನ್ನು ಆಕ್ರಮಣದಿಂದ ಕಾಯ್ದುಕೊಂಡು ಬಂದು ಮತಧರ್ಮಗಳಿಗೆ ಉದಾರ ಆಶ್ರಯ ನೀಡಿದ್ದು ಕಂಡುಬಂದಿದೆ. ಧಾರ್ಮಿಕ ದೃಷ್ಟಿಯಿಂದ ಮತೀಯ ಅಸೂಯೆ, ಪರಸ್ಪರ ದೂಷಣ ಪಂಡಿತರಲ್ಲಿಯೂ ಗ್ರಂಥಕಾರರಲ್ಲಿಯೂ ಮಿಗಿಲಾಗುತ್ತಾ ನಡೆಯಿತು. ವಿಕೇಂದ್ರೀಕೃತವಾದ ಅಂದಿನ ಜನಜೀವನವು ಒಟ್ಟಿನಲ್ಲಿ ಸ್ಪಷ್ಟವಾಗಿ ಸಾಂಪ್ರದಾಯಿಕವಾಗಿ ನಡೆಯುತ್ತಾ ಬಂದಿರಬೇಕು."[೯]

ಅಂದಿನ ಸಮಾಜದ ಸಮಗ್ರ ಚಿತ್ರಣವನ್ನು ಹೀಗೆ ಕಟ್ಟಿಕೊಡುತ್ತಾ ಆದ ಪ್ರತಿಫಲವನ್ನು ಆ ಕಾಲದ ಸಾಹಿತ್ಯದಲ್ಲಿ ಕಾಣುತ್ತಾರೆ. ಈ ಯುಗದ ಮುಖ್ಯ ಕವಿಗಳು ಜೈನರೆಂದು ಕಾವ್ಯಮಾರ್ಗದಲ್ಲಿ ತೌಲನಿಕ ಹಾಗೂ ಆಗಮಿಕ ಎನ್ನುವ ಎರಡು ಕವಲುಗಳು ಸ್ಪಷ್ಟವಾದವೆಂದು 'ಚಂಪೂ' ಕಾವ್ಯಸ್ವರೂಪವೂ ತನ್ನ ಮೇಲ್ಮೈ ಸಾಧಿಸಿದ ಸ್ವರೂಪ ಹೊಂದಿತ್ತೆಂದು ವಿಮರ್ಶಿಸುತ್ತಾರೆ. ಮುಂದಿನ ಪ್ರಕರಣದಲ್ಲಿ ರತ್ನತ್ರಯರಾದ ಪಂಪ, ಪೊನ್ನ, ರನ್ನರ ಕಾವ್ಯಗಳನ್ನು ಪರಿಚಯಿಸುತ್ತಾ ಅವುಗಳ ವಸ್ತು ಸಾಮಗ್ರಿ ಕವಿಗಳು ತಾವು ಕಂಡುಕೊಂಡ ಶೈಲಿಯಲ್ಲಿ ಸ್ಪಷ್ಟಪಡಿಸುತ್ತಾರೆ. ಉದಾರಹಣೆಗೆ

ಕನ್ನಡ ದೇಸಿಯನ್ನು ಮಾರ್ಗ ಸಾಹಿತ್ಯದೊಡನೆ ಹೋಲಿಸಿದ ಪಂಪನ ಕ್ರಮ 'ಮತಧರ್ಮ ಮತ್ತು ಪಂಡಿತ ಕಾವ್ಯ' ಧರ್ಮಗಳ ಸಂಯೋಜನೆಯಲ್ಲಿ ಯಶಸ್ವಿಗೊಂಡ ಪೊನ್ನನ ವಿಧಾನ ಶಕ್ತಿಗೆ ಎರಡನೆಯದಾದ ನಾಟಕೀಯತೆಯನ್ನು ತನ್ನ ಸಾಮರ್ಥ್ಯ ಮೂಲವಾಗಿ ಕಂಡುಕೊಂಡ ರನ್ನನ ದಾರಿಯನ್ನು ಪ್ರತ್ಯೇಕವಾಗಿ ಗುರುತಿಸುತ್ತಾರೆ. ಪ್ರತಿ ಕವಿಯ ವೈಶಿಷ್ಟ್ಯವನ್ನು ಅರಿತು ವಿಮರ್ಶಿಸುವುದು ಅವರ ಜಾಣ್ಮೆಯಾಗಿದೆ.

ಚಾವುಂಡರಾಯ ೧ನೇ ನಾಗವರ್ಮ, ದುರ್ಗಸಿಂಹ, ಚಂದ್ರರಾಜ ಮುಂತಾದ ಈ ಯುಗದ ಇತರ ಪ್ರಮುಖ ಕವಿಗಳ ಬಗೆಗೆ ಸ್ಥೂಲವಾದ ವಿವರಗಳನ್ನು ಮುಗಳಿ ಅವರು ನೀಡುತ್ತಾರೆ. ೧೧ನೇ ಶತಮಾನ ಸಾಹಿತ್ಯದ ದೃಷ್ಟಿಯಿಂದ ೧೦ನೇ ಶತಮಾನದಷ್ಟು ಉಜ್ವಲವಾದುದಲ್ಲದಿದ್ದರೂ, ಮಧ್ಯಮಗುಣದ ಕಾಲವದು ಎಂಬ ಅಭಿಪ್ರಾಯಕ್ಕೆ ಬರುತ್ತಾರೆ. ಈ ವಿಭಾಗದ ಕೊನೆಯ ಪ್ರಕರಣದಲ್ಲಿ (ಪ್ರಕರಣ ೧೨) ನಾಗಚಂದ್ರ ಹಾಗೂ ಅವನ ಸಮಕಾಲೀನರಾದ ನಯಸೇನ, ಬ್ರಹ್ಮಶಿವ, ಕರ್ಣಪಾರ್ಯ, ೨ನೇ ನಾಗವರ್ಮ ಮುಂತಾದವರ ಕಾವ್ಯಗಳನ್ನು ಸಮೀಕ್ಷಿಸುತ್ತಾ ಮುಕ್ತಾಯ ಕಾಣಿಸುತ್ತಾರೆ. "೧೨ನೇ ಶತಮಾನದ ಮಧ್ಯಭಾಗಕ್ಕಾಗುವ ಚಂಪೂ ಪದ್ಧತಿಯು ಕನ್ನಡಕ್ಕೆ ವಿಶಿಷ್ಟವಾದ ಶಾಂತರಸ ಪ್ರತಿಪಾದನೆಯನ್ನು ಕೈಗೂಡಿತ್ತೆಂದು ಉಲ್ಲೇಖಿಸುತ್ತಾ 'ಕನ್ನಡ ಸಾಹಿತ್ಯ'ವು ಸರಳ ಲಾಲಿತ್ಯಕ್ಕೆ ಇಳಿದು, ಕೃತಿ ರಚನೆಯು ಹೆಚ್ಚು ಜನಸಂಮುಖವಾಗತೊಡಗಿತು. ಬರಲಿರುವ ಯುಗದಲ್ಲಿ ತೋರುವ ಸ್ವಾತಂತ್ರ್ಯ ನವೀನ ಪ್ರಯೋಗ ಬುದ್ಧಿ ಕ್ರಾಂತದೃಷ್ಟಿಗಳ ಬೀಜವನ್ನು ಈ ಯುಗದಲ್ಲಿ ಕಾಣಬಹುದು."[೧೦]

ಮೂರನೇ ವಿಭಾಗ ಕ್ರಮವಾದ ಬಸವಯುಗವಾಗಿದೆ. ೧೨ನೇ ಶತಮಾನದ ಮಧ್ಯಭಾಗದಿಂದ ತೊಡಗಿ ೧೫ನೇ ಶತಮಾನದವರೆಗಿನ ಕಾಲಖಂಡವನ್ನು ಚರ್ಚಿಸುವುದರ ಜೊತೆಗೆ ಕನ್ನಡ ನಾಡಿನ ಸ್ಥಿತ್ಯಂತರಗಳ ಬಗ್ಗೆ ಪ್ರತಿರೋಧ ಸಂಘರ್ಷ, ಪ್ರತಿಕ್ರಿಯೆ, ಸಾಮರಸ್ಯ-ನಿರಾಕರಣೆಗಳು ಇಲ್ಲಿಯ ಸಾಮಾಜಿಕ-ಸಾಂಸ್ಕೃತಿಕ ಬದುಕಿನ ಲಕ್ಷಣಗಳ ಬಗ್ಗೆ ಪರಿಚಯಿಸುತ್ತಾರೆ. ಅದೇ ರೀತಿ ರಾಜಕೀಯವಾಗಿಯೂ ಈ ಕಾಲ ಅನೇಕ ಏರುಪೇರುಗಳಿಗೆ ಸಾಕ್ಷಿಯಾಯಿತು. ಧಾರ್ಮಿಕವಾಗಿಯೂ ಪರಿಸ್ಥಿತಿ ಹೆಚ್ಚು ಸಂಕೀರ್ಣವಾಗತೊಡಗಿತು. ಈ ಸಂಕ್ರಮಣ ಸ್ಥಿತಿಯ ಪರಿಚಯವಾಗಿ ಈ ಯುಗದ ಕಲೆ-ವಾಙ್ಮಯಗಳೆರಡೂ ವಿಭಿನ್ನ ನೆಲೆಗಳ ಹುಡುಕಾಟದಲ್ಲಿ ಪ್ರವೃತ್ತವಾದವು. ಮಾರ್ಗಕಾವ್ಯದ ದಟ್ಟ ಪ್ರಭಾವದಿಂದ ಬಿಡಿಸಿಕೊಂಡ ಅಭಿವ್ಯಕ್ತಿ ಕ್ರಮ ದೇಸಿಯ ಸಾಧ್ಯತೆಗಳ ಅನ್ವೇಷಣೆಗೆ ಮೊದಲು ಮಾಡಿತು. ಈ ಕಾರಣದಿಂದಾಗಿ ಈ ಯುಗಕ್ಕೆ 'ಸ್ವಾತಂತ್ರ್ಯಯುಗ' ಎನ್ನುವ ಪ್ರಜ್ಞೆಯೂ ರೂಢಿ ಬಂತು. ಅದೇ ರೀತಿಯಾಗಿ ವಚನ, ರಗಳೆ, ತ್ರಿಪದಿ, ಷಟ್ಪದಿ ಮುಂತಾದ ಅಚ್ಚಗನ್ನಡ ಛಂದೋರೂಪಗಳ ಬಳಕೆ, ಕಾಲಜ್ಞಾನ ಅಥವಾ ನಾಮಾವಳಿ ಮಾದರಿಯ ಸಾಹಿತ್ಯ ನಿರ್ಮಿತಿಯತ್ತ ಒಲವು, ಭಾಷೆಯ ಪ್ರಯೋಗಗಳಲ್ಲಿ ನಾವೀನ್ಯ, ಭಕ್ತಿರಸದ ಉತ್ಕಟತೆ ಮುಂತಾದವುಗಳನ್ನು ಈ ಯುಗದ ಪ್ರಧಾನ ಲಕ್ಷಣಗಳಾಗಿ ಗುರುತಿಸುತ್ತಾರೆ. ವಚನ ಸಾಹಿತ್ಯದ ಉಗಮ ಮತ್ತು ವಿಕಾಸ, ವಚನ ಪರಂಪರೆಯ ಪ್ರಮುಖ ವಚನಕಾರರು, ಅದಕ್ಕೆ ಪ್ರೇರಣೆಯನ್ನಿತ್ತ ಸಾಮಾಜಿಕ ಚಳುವಳಿಯ ಸ್ವರೂಪ, ಒಟ್ಟಾರೆಯಾಗಿ

ಕನ್ನಡ ಸಾಹಿತ್ಯ ಪ್ರಪಂಚಕ್ಕೆ ವಚನಕಾರರ ಕೊಡುಗೆಗಳನ್ನು ಈ ವಿಭಾಗವು ವಿಶ್ಲೇಷಿಸುತ್ತಾ ಹೋಗುತ್ತದೆ. ವಚನಕಾರರಾದ ಅಲ್ಲಮಪ್ರಭು, ಬಸವಣ್ಣ, ಅಕ್ಕಮಹಾದೇವಿ, ಸಿದ್ಧರಾಮ ಮುಂತಾದವರ ವಚನಗಳ ವ್ಯಾಪ್ತಿ, ಸ್ವರೂಪ ಕಲಾತ್ಮಕ ಗುಣ ಸಾಹಿತ್ಯಾಂಶಗಳನ್ನು ಗುರುತಿಸಲಾಗಿದೆ.

ಅದೇ ರೀತಿ ವಚನ ಸಾಹಿತ್ಯದ ಮುಂದುವರಿಕೆಯಾಗಿ ಹರಿಹರ, ರಾಘವಾಂಕ, ಪದ್ಮರಸರು ಕಾವ್ಯಕೃತಿಗಳನ್ನು ಚರ್ಚೆಗೊಳಪಡಿಸುತ್ತಾ ಅದೇ ಕಾಲಕ್ಕೆ ಸೇರುವ ನೇಮಿಚಂದ್ರ, ರುದ್ರಭಟ್ಟ, ಜನ್ನ ಮುಂತಾದವರನ್ನು ಮುಗಳಿ ಅವರು ಉಲ್ಲೇಖಿಸುತ್ತಾರೆ. 'ಯಶೋಧರ ಚರಿತೆ' ವಸ್ತುವಿನ ಆಯ್ಕೆ ನಿರ್ವಹಣಾ ಕ್ರಮಗಳಲ್ಲಿ ಜನ್ನನು ತೋರಿಸುವ ಕ್ರಾಂತಿಕಾರಕತ್ವವನ್ನು ಮುಕ್ತವಾಗಿ ಅನುಮೋದಿಸುವ ಅವರ ಹೊಸತನವನ್ನು ಸ್ವಾಗತಿಸುವ ನಿಲುವಿಗೂ ನಿರ್ದೇಶನವಾಗುತ್ತಾರೆ. ಬಸವಯುಗದ ಇತರ ಕವಿಗಳಾದ ಆಂಡಯ್ಯ, ಚಾವುಂಡ, ಭೀಮಕವಿ, ಪದ್ಮಣಾಂಕ ಕವಿಗಳ ಕುರಿತು ಚರ್ಚಿಸುತ್ತಾ ಸಾಹಿತ್ಯ ಚಳುವಳಿಯ ಉತ್ಕರ್ಷ, ಅವನತಿಗಳನ್ನು ಸಹಜ ಪ್ರಕ್ರಿಯೆಗಳೆನ್ನುವ ದೃಷ್ಟಿಯನ್ನು ಅವರು ಇಟ್ಟುಕೊಳ್ಳುತ್ತಾರೆ. ಇಂಥ ಸ್ಥಿತ್ಯಂತರಗಳಿಗೆ ಸಾಹಿತ್ಯೇತರ ಕಾರಣಗಳೂ ಇವೆಯೆನ್ನುವುದನ್ನು ಪ್ರಬಲವಾಗಿ ಪ್ರತಿಪಾದಿಸುವ ಮೂಲಕ ತಮ್ಮ ಪೂರ್ಣ ದೃಷ್ಟಿಯನ್ನು ಸ್ಪಷ್ಟಪಡಿಸುತ್ತಾರೆ.

ಕುಮಾರವ್ಯಾಸಯುಗ ೧೫ನೇ ಶತಮಾನದಿಂದ ಆಧುನಿಕ ಕಾಲದವರೆಗಿನ ವ್ಯಾಪ್ತಿಯನ್ನು ಇದು ಹೊಂದಿದೆ. ಸಾಹಿತ್ಯಕವಾಗಿ ಇದು ಅತ್ಯಂತ ಸಂಕೀರ್ಣ ಮತ್ತು ಸಮ್ಮಿಶ್ರ ಪ್ರಕಾರದ್ದಾಗುತ್ತದೆ. "ವಾಸ್ತವವಾಗಿ ಇದನ್ನು ಎರಡು ಕಾಲಖಂಡಗಳಲ್ಲಿ ವಿಭಜಿಸುವ ಸಾಧ್ಯವಿದೆ. ಆದರೆ ಒಟ್ಟಿನಲ್ಲಿ ಇದು ಪ್ರಧಾನವಾಗಿ ದೇಸಿ ನಿಷ್ಠವಾದ ಇಲ್ಲವೇ ದೇಸಿ ಪ್ರಚುರವಾದ ಯುಗವಾಗಿದ್ದ ಕಾರಣ ಇದನ್ನು ಒಂದು ಯುಗವೆಂದು ಇಲ್ಲಿ ಕಲ್ಪಿಸಲಾಗಿದೆ"[೧೧] ಎಂಬ ವಿಭಾಗಕ್ರಮದ ತಾರ್ಕಿಕತೆಯನ್ನು ಮುಗಳಿ ಅವರು ಸಮರ್ಥಿಸುತ್ತಾರೆ. ಹಾಗೆಯೇ ಮುಂದುವರಿದು ಸಾಹಿತ್ಯ ಪ್ರಕಾರಗಳ ದೃಷ್ಟಿಯಿಂದ ಷಟ್ಪದಿ, ಸಾಂಗತ್ಯ, ತ್ರಿಪದಿ, ಕೀರ್ತನೆ ಇವು ಈ ಯುಗದಲ್ಲಿ ಜನಪ್ರಿಯತೆಯನ್ನು ಪಡೆದವು. ಚಂಪೂ ರೂಪವು ಮತ್ತೆ ಪ್ರಾಚುರ್ಯಕ್ಕೆ ಬಂದುದು ಈ ಯುಗದ ವೈಶಿಷ್ಟಗಳಲ್ಲಿ ಒಂದಾಗಿದೆ. ಈ ಯುಗದ ೫೯ ಪ್ರಮುಖ ಗ್ರಂಥಕಾರರನ್ನು ಮುಗಳಿ ಅವರು ಹೆಸರಿಸಿದ್ದಾರೆ. ಅದೇ ರೀತಿಯಾಗಿ ಭಾಗವತದ ವಾಙ್ಮಯದ ಬೆಳವಣಿಗೆಗೆ ದಾಸವಾಙ್ಮಯದ ಉಗಮ ಮತ್ತು ಅಭಿವೃದ್ಧಿ, ಮಧ್ವತತ್ವ, ಶ್ರೀವೈಷ್ಣವ ಸಂಪ್ರದಾಯ, ವೀರಶೈವ ವಾಙ್ಮಯದ ಪುನರುತ್ಥಾನ, ಈ ಯುಗದ ಪ್ರಧಾನ ಸಾಹಿತ್ಯ ರೂಪವಾಗಿ ಷಟ್ಪದಿಯ ನೆಲೆ, ತಾತ್ಕಾಲಿಕ ಇತಿಹಾಸಕ್ಕೆ ಕಾವ್ಯವಸ್ತುವಾಗಿ ಮನ್ನಣೆ, ಗದ್ಯರೂಪದ ಹೆಚ್ಚಿನ ಒಲವುಗಳು ಸ್ಥೂಲವಾಗಿ ಈ ಯುಗದ ಪ್ರಮುಖ ವೈಲಕ್ಷಣ್ಯವಾಗಿದೆ.

ಹಾಗೆಯೇ ಮುಂದುವರಿದು ಕುಮಾರವ್ಯಾಸ ಭಾರತದ ಬಗ್ಗೆ ಚರ್ಚಿಸುತ್ತಾ ನಂತರ ಭಾಗವತ ಕವಿಗಳ ಮಾಲಿಕೆಯಲ್ಲಿ ಅವರು ಕುಮಾರ ವಾಲ್ಮೀಕಿ, ಲಕ್ಷ್ಮೀಶ, ಗೋಪಕವಿ ಹಾಗೂ ನಾಗರಸನನ್ನು ಪರಿಚಯಿಸುತ್ತಾರೆ. ಅವರವರ ವ್ಯಕ್ತಿಗತ ಮಿತಿ ಸಾಧ್ಯತೆಗಳನ್ನು ನಮೂದಿಸುತ್ತಾರೆ. ಲಕ್ಷ್ಮೀಶನ ಜೈಮಿನಿ ಭಾರತಕ್ಕೆ ಮಹಾಕೃತಿಯಾಗುವ ಯೋಗ್ಯತೆಯಿಲ್ಲ; ಅವನ ಗಂಭೀರ ಮಿತಿಗಳ ಮೂಲಕ ಅತಿಯಾದ

ಬದ್ಧತೆಯೇ ಕಾರಣವಾಗಿದೆ ಎನ್ನುವ ಕೆಲವು ಮಹತ್ವದ ಪರಿಶೀಲನೆಯನ್ನು ಮುಂದಿಡುತ್ತಾರೆ. ಹಾಗೆಯೇ ಪ್ರಕರಣ ೨೫ರಲ್ಲಿ ಮುಗಳಿ ಅವರು ದಾಸವಾಙ್ಮಯ ಕುರಿತು ವಿಮರ್ಶಿಸುತ್ತಾರೆ. ಅದರ ಉನ್ನತಿ ಅವನತಿ ಕುರಿತು ಕಾರಣವನ್ನು ಹುಡುಕುತ್ತಾರೆ. ದಾಸ ಪರಂಪರೆಯ ಅಧ್ಯಯನವನ್ನು ಶ್ರೀಪಾದರಾಯರಿಂದ ಮೊದಲುಗೊಂಡು, ವ್ಯಾಸರಾಯ, ಪುರಂದರದಾಸ, ಜಗನ್ನಾಥದಾಸರವರೆಗೆ ಬೆಳೆಸುತ್ತಾರೆ. ಅವರ “ಕನ್ನಡ ಸಾಹಿತ್ಯ ತವನಿಧಿಯಲ್ಲಿ ಜೀವ, ಪ್ರೀತಿ, ಜೀವಸಮ್ಮುಖತೆ ಜನಪರ ನಿಲುವುಗಳನ್ನು ದಾಸ ಸಾಹಿತ್ಯದ ಉದಾತ್ತ ಅಂಶಗಳಾಗಿ ಗುರುತಿಸುತ್ತಾರೆ. ‘ಭಾಷೆಯ ಬಗೆಗಿನ ಎಲ್ಲ ನಿರ್ಬಂಧಗಳನ್ನು ಮೀರಿ ಜನಭಾಷೆಯ ಅಶುದ್ಧರೂಪಗಳನ್ನು ಅದು ಬೇಕಾದಂತೆ ಎತ್ತಿ ಬಳಸಿತು’ ಎಂದು ಪ್ರತ್ಯೇಕತೆಯನ್ನು ನಿರ್ಧರಿಸುತ್ತಾರೆ.”[೧೨] ಈ ರೀತಿಯ ಅಂಶಗಳು ಕೃತಿಯುದ್ದಕ್ಕೂ ತಿಳಿಯುತ್ತವೆ.

ಸಾಹಿತ್ಯ ಚರಿತ್ರೆಯ ಮುಂದುವರಿಕೆಯಾಗಿ ಮುಗಳಿ ಅವರು ಮೈಸೂರು ಒಡೆಯರ ಕಾಲದ ಸಾಹಿತ್ಯವನ್ನು ಸಮೀಕ್ಷಿಸುತ್ತಾರೆ. ಆ ಕಾಲದ ಮುಖ್ಯ ಲಕ್ಷಣಗಳಲ್ಲಿ ಒಂದಾಗಿ ಚಾರಿತ್ರಿಕ ಕಾವ್ಯವು ಸ್ಪಷ್ಟವಾದ ರೂಪವನ್ನು ಪಡೆಯಿತೆನ್ನುತ್ತಾರೆ. ನಂಜುಂಡ ಕವಿ, ಅದ್ರೀಶ ಕವಿಯ ಬಗ್ಗೆ ಚರ್ಚಿಸಿ ವಿವರಿಸಿದ್ದಾರೆ. ಹಾಗೆಯೇ ತಿರುಮಲಾರ್ಯ, ಹೊನ್ನಮ್ಮ, ಹೆಳವನಕಟ್ಟೆ ಗಿರಿಯಮ್ಮ, ಮಹಲಿಂಗರಂಗ ಮುಂತಾದ ಕವಿಗಳು ವೈದಿಕ ಪರಂಪರೆಯನ್ನು ಮುಂದುವರಿಸಿದ ಬಗೆಯನ್ನು ವಿಶದೀಕರಿಸುವ ಮುಗಳಿ ಅವರು ದಾಸಸಾಹಿತ್ಯದ ಮಧ್ಯ ಐಕ್ಯವಿದೆ ಎಂದು ಸೂಚಿಸುತ್ತಾರೆ. ಹಾಗೆಯೇ ಮುಂದುವರಿದು ಈ ಯುಗದ ವಚನಸೃಷ್ಟಿ ಹಾಗೂ ಸಂಕಲನ ಕಾರ್ಯಗಳ ಬಗೆಗೆ, ಮುಖ್ಯ ವಚನ ಸಂಕಲನಕಾರರಾದ ಬಸವಣ್ಣ ಮುಂತಾದವರ ಬಗೆಗೆ, ಸ್ವತಂತ್ರ ಸಿದ್ಧಲಿಂಗೇಶ್ವರರಂಥ ವಚನಕಾರರ ಬಗೆಗೆ ಇಲ್ಲಿ ವಿವರಗಳು ದೊರೆಯುತ್ತವೆ. ಇದೇ ಪ್ರಕಾರದ ಬಗೆಗಿನ ಚರ್ಚೆಯನ್ನು ವಿಸ್ತರಿಸುತ್ತಾ ನಿಜಗುಣ ಶಿವಯೋಗಿ, ಮುಪ್ಪಿನ ಷಡಕ್ಷರಿ, ಸರ್ಪಭೂಷಣ ಲಕ್ಕಣ್ಣ, ಗುಬ್ಬಿಯ ಮಲ್ಲಣಾರ್ಯ ಮುಂತಾದ ಅಲಕ್ಷಿತ ವೀರಶೈವ ಕವಿಗಳ ಕೃತಿಗಳ ಬಗೆಗಿನ ವಿವರಗಳನ್ನು ಒಳಗೊಂಡಿದೆ.

ಈ ಯುಗದ ಪ್ರಮುಖ ಕೃತಿಯೆಂದು ಮುಗಳಿ ಅವರು ಚಾಮರಸನ ಪ್ರಭುಲಿಂಗಲೀಲೆಯನ್ನು ಗುರುತಿಸುತ್ತಾರೆ. ಇದೇ ಮಾದರಿಯಲ್ಲಿ ಚೆನ್ನಬಸವ ಪುರಾಣದ ಕರ್ತೃವಾದ ‘ವಿರೂಪಾಕ್ಷಪಂಡಿತ’ನ ಚರಿತ್ರೆಯನ್ನು ಸಂಗ್ರಹಿಸುತ್ತಾರೆ. ಇದರ ಬಳಿಕ ವೀರಶೈವ ಸಾಹಿತ್ಯದ ಪ್ರಕಾರಗಳಲ್ಲಿ ಒಂದಾದ ಶತಕ ಸಾಹಿತ್ಯವನ್ನು ಮುಗಳಿ ಅವರು ಸಮೀಕ್ಷೆಗೆ ಆಯ್ದುಕೊಳ್ಳುತ್ತಾರೆ. ಮಗ್ಗೆಯ ಮಾಯಿದೇವನನ್ನು ಇದರ ಅಗ್ರಮಾನ್ಯನೆನ್ನುತ್ತಾರೆ. ಜೀವನಾದರ್ಶಗಳ ಹತ್ತಿರವಾಗುವ ವಚನಗಳನ್ನು ನೀಡಿದ ಸರ್ವಜ್ಞ, ಚಂಪೂ ಪ್ರಕಾರವನ್ನು ಮತ್ತೆ ಅಭಿವ್ಯಕ್ತಿ ಮಾಧ್ಯಮವಾಗಿ ಕಂಡುಕೊಂಡ ಷಡಕ್ಷರದೇವರ ಬಗೆಗಿನ ಜಿಜ್ಞಾಸೆಯನ್ನು ಚರ್ಚಿಸಿದ್ದಾರೆ. ೧೫ನೇ ಶತಮಾನದ ಮೊದಲಲ್ಲಿದ್ದ ಭಾಸ್ಕರ ಕವಿಯು ಮೊದಲಿಗನಾಗಿದ್ದಾನೆ. ಅವನ ‘ಜೀವಂಧರ ಚರಿತೆ’ಯು ಭಾಮಿನಿ ಷಟ್ಪದಿಯಲ್ಲಿದೆ. ೩ನೇ ಮಂಗರಸನು ಈ ಯುಗದಲ್ಲಿ ಸಮೃದ್ಧ ಸಾಹಿತ್ಯವನ್ನು ನಿರ್ಮಿಸಿದ ಜೈನರಾಜಕವಿ. ಹೀಗೆಯೇ ರತ್ನಾಕರವರ್ಣಿಯೂ ಈ ಯುಗದ ಹಿರಿಯ ಕವಿಗಳಲ್ಲಿ ಒಬ್ಬನಾಗಿರುವನು.

ಮುಗಳಿ ಅವರು ಕುಮಾರವ್ಯಾಸಯುಗದ ಕೊನೆ ಕೊನೆಯ ಗ್ರಂಥಕಾರರಾದ ದೇವಚಂದ್ರ, ದೊಡ್ಡಯ್ಯ ಮುಂತಾದ ಕವಿಗಳ ಸವಿವರಣೆಗಳೊಂದಿಗೆ ಚರ್ಚಿಸುತ್ತಾ ಮುದ್ದಣ್ಣನವರೆಗೆ ತಂದು ನಿಲ್ಲಿಸುತ್ತಾರೆ. ಈ ರೀತಿಯಾದ ವಿಸ್ತೃತವಾದ ಚರ್ಚೆ, ವಿವೇಚನೆ ವಿಶ್ಲೇಷಣೆ, ಜಿಜ್ಞಾಸೆಗಳ ಫಲಿತಾಂಶವನ್ನು ಅವರು ಸಮಾರೋಪದಲ್ಲಿ ತಿಳಿಸುತ್ತಾ, "ಕನ್ನಡ ಸಾಹಿತ್ಯದ ಬಗೆಗೆ(ಅದು) ವಿಷಯದಲ್ಲಿ ನಿರೂಪಣೆಯಲ್ಲಿ ಎಷ್ಟು ವೈವಿಧ್ಯಯುತವಾದರೂ ಮರ್ಯಾದಿತವಾಗಿದೆ. ಸಮಯ ಶರಣವಾಗಿದೆ ಎಂಬುದೂ ನಿಜವಾದರೂ ಅಂದಂದಿನ ಆವರಣದಲ್ಲಿ ಅದು ಪಡೆದ ಶಕ್ತಿಯನ್ನು ಬೀರಿದ ಪ್ರಭಾವವನ್ನು ಅರಿತು ಮೆಚ್ಚಬೇಕು. ಹೊಸಕನ್ನಡ ಸಾಹಿತ್ಯವು ಸ್ವತಂತ್ರವಾಗಿ ಮತ್ತು ಸಾಮಾಜಿಕವಾಗಿ ಬೆಳೆಯುತ್ತಲಿದ್ದು ಹೊಸ ಶಕ್ತಿಯ ಕೇಂದ್ರವಾಗುತ್ತಲಿದೆ. ಅದನ್ನು ಬೆಳೆಸುವಾಗ ಹಳೆಯ ಸಾಹಿತ್ಯದಿಂದ ದೊರೆಯುವ ಸ್ಫುರಣವನ್ನು ಪಡೆಯುವುದು ಅವಶ್ಯವಾಗಿದೆ"[೧೩] ಎಂಬ ನಿಲುವಿಗೆ ಬರುತ್ತಾರೆ.

ಒಟ್ಟಿನಲ್ಲಿ ಮುಗಳಿ ಅವರ ಸಾಹಿತ್ಯ ಚರಿತ್ರೆಯೊಂದಿಗೆ ತ.ಸು. ಶಾಮರಾಯರ ಕನ್ನಡ ಸಾಹಿತ್ಯ ಚರಿತ್ರೆ, ಸಿ. ವೀರಣ್ಣನವರ ಕನ್ನಡ ಸಾಹಿತ್ಯ: ಚಾರಿತ್ರಿಕ ಬೆಳವಣಿಗೆ, ಕೀರ್ತಿನಾಥ ಕುರ್ತಕೋಟಿ ಅವರ ಯುಗಧರ್ಮ ಹಾಗೂ ಸಾಹಿತ್ಯ ದರ್ಶನ ಮತ್ತು ಎಲ್. ಎಸ್. ಶೇಷಗಿರಿರಾವ್ ಅವರ ಹೊಸಗನ್ನಡ ಸಾಹಿತ್ಯ ಚರಿತ್ರೆಗಳೊಂದಿಗೆ ತೌಲನಿಕವಾಗಿ ಸಮೀಕ್ಷಿಸುವುದು ಅವಶ್ಯವೆನಿಸುತ್ತದೆ. ಮುಗಳಿ ಅವರು ಕನ್ನಡ ಸಾಹಿತ್ಯ ಚರಿತ್ರೆಯನ್ನು ಪಂಪಪೂರ್ವಯುಗ(ಆರಂಭದಿಂದ ೧೦ನೇ ಶತಮಾನ), ಪಂಪಯುಗ(೧೦ ರಿಂದ ೧೧ನೇ ಶತಮಾನ), ಬಸವಯುಗ(೧೧ರಿಂದ ೧೫ನೇ ಶತಮಾನ), ಕುಮಾರವ್ಯಾಸಯುಗ(೧೫ರಿಂದ ೧೯ನೇ ಶತಮಾನ)ವೆಂದು ಕವಿಗಳನ್ನಾದರಿಸಿ ವಿಭಾಗಕ್ರಮ ರೂಪಿಸಿಕೊಂಡು ಚಾರಿತ್ರಿಕ ಹಿನ್ನೆಲೆಯೊಳಗಡೆ ಸಂಶೋಧನಾತ್ಮಕವಾಗಿ ವಿಮರ್ಶೆಗೊಳಪಡಿಸಿದ ಕೃತಿಯಾಗಿದೆ. ಅದೇ ರೀತಿ ತ.ಸು. ಶಾಮರಾಯರು ಮುಗಳಿ ಅವರು ರೂಪಿಸಿದ ಕಾಲವಿಂಗಡಣೆಯಲ್ಲಿ ಬಂದಿರುವ ಬಸವಯುಗ ಹೊರತಾಗಿ ಹರಿಹರಯುಗವೆಂದು ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಗುರುತಿಸುತ್ತಾರೆ. ಅದು ಈ ರೀತಿ ಇದೆ. ಪಂಪಪೂರ್ವಯುಗ(ಆರಂಭದಿಂದ ೧೦ನೇ ಶತಮಾನ), ಪಂಪಯುಗ(೧೦ರಿಂದ ೧೨ನೇ ಶತಮಾನ), ಹರಿಹರಯುಗ(೧೨ರಿಂದ ೧೪ನೇ ಶತಮಾನ), ಕುಮಾರವ್ಯಾಸಯುಗ(೧೫ರಿಂದ ಈಚೆಗೆ) ಎಂದು ಕಾಲ ವಿಂಗಡಿಸಿಕೊಂಡು ತಮ್ಮ ಕೃತಿಯಲ್ಲಿ ಸರಿಸುಮಾರು ೧೩೨ ಕವಿ ಕೃತಿಗಳ ಸಂಕ್ಷಿಪ್ತ ಮಾಹಿತಿಯೊಳಗೊಂಡ ಕೃತಿಯಾಗಿದೆ.

ಸಿ.ವೀರಣ್ಣನವರ ಕನ್ನಡ ಸಾಹಿತ್ಯ: ಚಾರಿತ್ರಿಕ ಬೆಳವಣಿಗೆ ಕೃತಿಯು ಮಾರ್ಕ್ಸ್‌ವಾದಿ ವಿಮರ್ಶಾ ಮಾದರಿಯನ್ನು ಅನುಸರಿಸಿದ ಕೃತಿಯಾಗಿ ಹೊರಹೊಮ್ಮಿದೆ. ಈ ಕೃತಿಯಲ್ಲಿ ತಿಳಿಸುವ ಹಾಗೆ ರಾಜಕೀಯ ಪರಿಕಲ್ಪನೆ ಎಂಬುದು ಸಾಹಿತ್ಯದ ವಸ್ತುವಷ್ಟೇ ಆಗಿರದೆ ಕಲಾಕೃತಿಯೊಂದರ ಆಕೃತಿಯನ್ನು ನಿರ್ಧರಿಸುವ ಆಂತರಿಕ ತರ್ಕದೊಂದಿಗೆ ಒಳಸಂಬಂಧ ಹೊಂದಿರುವುದಾಗಿ, ಕಲಾಕೃತಿಯನ್ನು ಮೌಲ್ಯಮಾಪನ ಮಾಡುವ ಏಕೈಕ ಸೂತ್ರವಾಗಿರುವ ಕಲಾತ್ಮಕ ಪಾತ್ರವು ರಾಜಕೀಯವನ್ನು

ಒಳಗೊಂಡಿರಬೇಕು. ಕಲಾತ್ಮಕ ಗುಣ ಸ್ವತಃ ರಾಜಕೀಯ ಗುಣವಾಗಿ ಪರಿಗಣಿಸಲ್ಪಡುವ ನೆಲೆಗೆ ನಮ್ಮನ್ನು ಕೊಂಡೊಯ್ಯುತ್ತದೆ ಎಂಬ ವಿಷಯ ಇವರ ಕೃತಿಯಲ್ಲಿ ವ್ಯಕ್ತಗೊಂಡಿದೆ. ಸಿ.ವೀರಣ್ಣನವರು ತಮ್ಮ ಕೃತಿಯಲ್ಲಿ ನಾಗಚಂದ್ರನ ಬಗೆಗೆ ಬರೆದಿರುವ ವಿಚಾರಗಳಿಗೆ ಇನ್ನೂ ಸ್ಪಷ್ಟತೆ ಅಗತ್ಯವಿತ್ತೆಂದು ಅನಿಸುತ್ತದೆ. ಹಾಗೆಯೇ ದೊರೆತಿರುವ ಜೈನಕಾವ್ಯಗಳ ಪರಂಪರೆಗೆ ಪಂಪ ಅಳತೆಗೋಲಾಗಿ ಒಂದು ಕೊನೆಯಲ್ಲಿ, ಮತ್ತೊಂದು ತುದಿಯಲ್ಲಿ ನಾಗಚಂದ್ರನಿದ್ದಾನೆ ಎಂಬಂತೆ ತೋರುತ್ತದೆ. ಮುಗಳಿ ಅವರು ತಮ್ಮ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ವಡ್ಡಾರಾಧನೆ ಬಗ್ಗೆ ಕನ್ನಡ ಭಾಷೆ ಮತ್ತು ಸಾಹಿತ್ಯ ದೃಷ್ಟಿಯಿಂದ ಯಾವ ಸ್ಥಾನವನ್ನು ಅಲಂಕರಿಸಿದೆ ಎಂಬುದನ್ನು ತನ್ನ ಪುಟಮಿತಿಯಲ್ಲಿಯೇ ತಿಳಿಸುತ್ತಾರೆ. ಈ ವಿಷಯದಲ್ಲಿ ಸಿ.ವೀರಣ್ಣನವರು ತಮ್ಮ ಕೃತಿಯಲ್ಲಿ ತಟಸ್ಥ ನಿಲುವು ತಾಳಿದಂತಿದೆ.

ಮುಗಳಿ ಅವರ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಮಾಡಿರುವ ವಿಮರ್ಶಾಕ್ರಮವು ಓದುಗರನ್ನು ಬೆರಗುಗೊಳಿಸುವಂತದ್ದಾಗಿದೆ. ಏಕೆಂದರೆ ಆ ಕೃತಿಯಲ್ಲಿ ಮೂರು ಅಂಶಗಳಿಗೆ ಮುಖ್ಯ ಸ್ಥಾನವನ್ನು ಕೊಡಲಾಗಿದೆ. ೧. ವಿಷಯ ಸಂಗ್ರಹಣೆ, ೨. ವಿಷಯ ವಿಶ್ಲೇಷಣೆ, ೩. ವಿಷಯ ಮೌಲ್ಯಮಾಪನ ಈ ಅಂಶಗಳಿಗೆ ಮಹತ್ವ ಕೊಡಲಾಗಿದೆ. ಅಂಥ ಒಂದು ಸಂದರ್ಭವು ಈ ರೀತಿ ಇದೆ. ಗುಣವರ್ಮ ಎಂಬ ಹೆಸರಿನ ಕವಿಗಳು ಇಬ್ಬರಿದ್ದರೆಂದು ತಿಳಿಯಲು ಸ್ಪಷ್ಟವಾದ ಆಧಾರಗಳಿವೆ. ೧೩ನೇ ಶತಮಾನದ ಪೂರ್ವಾರ್ಧದವನಾದ ೨ನೇ ಗುಣವರ್ಮನು 'ಪುಷ್ಪದಂತಪುರಾಣ'ವನ್ನು ಬರೆದಿದ್ದಾನೆ. ಸು.೯೦೦ ರಲ್ಲಿದ್ದ ೧ನೇ ಗುಣವರ್ಮನು ಶೂದ್ರಕ, ಹರಿವಂಶ ಎಂಬ ಗ್ರಂಥವನ್ನು ಬರೆದ ಹಾಗೆ ತಿಳಿಯುತ್ತದೆ. ಈ ಗುಣವರ್ಮನ ಉಲ್ಲೇಖ ಮಾಡಿದವರಲ್ಲಿ ೧೧೧೨ರ ನಯಸೇನನು ಹಳಬನು. ತನ್ನ 'ಧರ್ಮಾಮೃತ'ದಲ್ಲಿ ಅವನು ಅಸಗ, ಪೊನ್ನ ಮೊದಲಾದವರ ಗುಣದೊಡನೆ 'ಗುಣವರ್ಮನ ಜಾಣ್' ತನ್ನ ಕೃತಿಯಲ್ಲಿ ನೆಲಸಲಿ ಎಂದು ಕೋರಿದ್ದಾನೆ. ಇದರಿಂದ ಒಂದನೇ ಗುಣವರ್ಮ ೧೦ನೇ ಶತಮಾನದಲ್ಲಿಯೇ ಹೆಸರಾದ ಕವಿಗಳ ಪಂಕ್ತಿಯಲ್ಲಿ ಸ್ಥಾನ ಪಡೆದಿದ್ದನೆಂಬುದು ಸಿದ್ಧವಾಗುತ್ತದೆ ಎಂದು ತಿಳಿಸುತ್ತಾರೆ.

ಅದೇ ರೀತಿ ಆಂಡಯ್ಯನ ಕುರಿತು ತಿಳಿಸುವ ಸಂದರ್ಭದಲ್ಲಿ ಆಂಡಯ್ಯ ಎಂಬ ವ್ಯಕ್ತಿಯ ಹೆಸರೆ? ಎಂಬ ಜಿಜ್ಞಾಸೆಗೆ ಒಳಗಾದ ವಿದ್ವಾಂಸರುಗಳ ಅಭಿಪ್ರಾಯಗಳು ಈ ರೀತಿ ಇವೆ. ದೇಜಗೌ ರವರು ತಮ್ಮ ಸಂಪಾದಿತ ಕೃತಿಯಾದ 'ಆಂಡಯ್ಯವೆಂಬ ಶಬ್ದಕ್ಕೆ ತಮಿಳುನಾಡಿನಲ್ಲಿ(ಆಂಡ+ಅಯ್ಯ) ಆಳಿದ ಸ್ವಾಮಿ ಎಂಬ ಅರ್ಥವಿದ್ದರೆ ಜೈನರಲ್ಲಿ ಆಂಡಯ್ಯ ಎಂಬ ಅರ್ಥದ ಹೆಸರು ರೂಢಿಯಲ್ಲಿಲ್ಲವೆಂದೂ ಆಂಡಯ್ಯವೆಂದರೆ(ಆಂಡಕ್ಕೆ+ಅಯ್ಯ) ಬ್ರಹ್ಮಯ್ಯ ಅಥವಾ ಬರ್ಮಪ್ಪ ಎಂಬ ಹೆಸರು ರೂಢಿಯಾಗಿರುವುದರಂದ ಅವನ ಹೆಸರು ಆಂಡಯ್ಯನೆಂದಿದ್ದು ಅನಂತರ ಆಂಡಯ್ಯನೆಂಬ ರೂಪ ತಾಳಿರಬೇಕೆಂದು ರಾಮಾನುಜಯ್ಯಂಗಾರರು ಅಭಿಪ್ರಾಯ ಪಡುತ್ತಾರೆ. ಜೈನಕವಿಗಳು ಸಂಸ್ಕೃತ ಶಬ್ದಗಳ ವಿಕೃತರೂಪಗಳನ್ನೇ ತಮ್ಮ ಹೆಸರನ್ನಾಗಿ ಇಟ್ಟುಕೊಳ್ಳುತ್ತಿರುವುದು ರೂಢಿಯಲ್ಲಿದೆ. ಆದಿನಾಥನ ಹೆಸರನ್ನು ಸಂಕ್ಷೇಪ ಮಾಡಿ ಆದಯ್ಯವೆಂದು ಇಟ್ಟುಕೊಳ್ಳುತ್ತಾರೆ. ಆದಯ್ಯವೆಂಬುದರ ವಿಕೃತ

ರೂಪವೇ ಆಂಡಯ್ಯವಾಗಿರಬೇಕೆಂದು ಡಿ.ಕೆ.ಭೀಮಸೇನರಾಯರು ಅಭಿಪ್ರಾಯಪಡುತ್ತಾರೆ. ಅದೇ ರೀತಿ ರಂ.ಶ್ರೀ.ಮುಗಳಿ ಅವರು ಅಭಿಪ್ರಾಯವು ಈ ರೀತಿ ಇದೆ.

ಮೂಲದಲ್ಲಿ ಆಂಡಯ್ಯ ಎಂಬ ಹೆಸರೇ ಇದ್ದು ಅರಿಸಮಾಸದೋಷವನ್ನು ಮರೆಯಿಸುವ ಸಲುವಾಗಿ ಕವಿ ಆಂಡಯ್ಯವೆಂದು ಮಾರ್ಪಡಿಸಿಕೊಂಡಿರಬೇಕೆಂಬ ಅಭಿಪ್ರಾಯಕ್ಕೆ ಬರುತ್ತಾರೆ. ಅದೇ ರೀತಿ ತಮಿಳಿನಲ್ಲಿ ಅಣ್ಣಿ ಎಂದರೆ ಶೈವಸನ್ಯಾಸಿಯೆಂದೂ, ಶಿವಭಕ್ತರಿಗೆ ತಾನು ಮಿಗಿಲಾಗಿ ಅವರ ಕಣ್ಣುತೆರೆಯುವಂತೆ ಮಾಡಿದ್ದರಿಂದ ಅವನು ತನ್ನ ಹೆಸರನ್ನು ಅಣ್ಣಿಯರ ಅಯ್ಯ>ಅಣ್ಣಿಯಯ್ಯ> ಅಂಡಯ್ಯನೆಂಬುದಾಗಿ ಇಟ್ಟುಕೊಂಡಿರಬೇಕೆಂದೂ ಸದಾನಂದನಾಯಕ್ ಅವರು ಊಹಿಸುತ್ತಾರೆ. ಈ ರೀತಿ ಚರ್ಚಿಸಿ ಒಮ್ಮತ ಅಭಿಪ್ರಾಯಕ್ಕೆ ಬರಲು ಆಗದಿದ್ದ ಪಕ್ಷದಲ್ಲಿ ಕೂಡ ಕವಿಯಾದವನು ತಂದೆ-ತಾಯಿಗಳಿಟ್ಟ ಹೆಸರನ್ನು ತ್ಯಜಿಸಿ ಬೇರೊಂದು ಹೆಸರು ಇಟ್ಟುಕೊಂಡನೆ? ಎಂಬ ಜಿಜ್ಞಾಸೆಯ ಪ್ರಶ್ನೆಗಳು ಮೂಡುವುದರಿಂದ ಆಂಡಯ್ಯ ಎಂಬ ಹೆಸರನ್ನೇ ನಿಜವಿರಬೇಕೆಂದು ಸದ್ಯಕ್ಕೆ ಒಪ್ಪಿಕೊಳ್ಳಬಹುದೆಂದು ಬಹುತೇಕ ವಿದ್ವಾಂಸರ ಅಭಿಪ್ರಾಯವಾಗಿದೆ. ಈ ರೀತಿಯಾಗಿ ಹಿಂದಿನ ಕವಿಗಳ ಕಾಲಗಣನೆ, ಕವಿಯ ಹೆಸರು, ಕೃತಿಗಳ ಹೆಸರುಗಳ ನಿಖರತೆಯನ್ನು ಪಡೆಯಲು ವಿದ್ವಾಂಸರು ಸಂಶೋಧನೆ ಮಹತ್ವದ್ದಾಗಿದೆ.

ಕೀರ್ತಿನಾಥ ಕುರ್ತಕೋಟಿ ಅವರ ಯುಗಧರ್ಮ ಹಾಗೂ ಸಾಹಿತ್ಯ ದರ್ಶನವು ಮುಗಳಿ ಅವರ ಸಾಹಿತ್ಯ ಚರಿತ್ರೆಯ ಮುಂದುವರಿಕೆಯ ಭಾಗವಾಗಿ ಗಮನಿಸಬಹುದಾದ ಮಹತ್ವದ ಕೃತಿಯಾಗಿದೆ. ಮುಗಳಿ ಅವರು ಪಂಪಪೂರ್ವಯುಗದಿಂದ ತಮ್ಮ ಸಾಹಿತ್ಯ ಚರಿತ್ರೆಯನ್ನು ಕಟ್ಟಲು ಮುಂದಾಗುತ್ತಾರೆ. ಆದರೆ ಇಲ್ಲಿ ಕುರ್ತಕೋಟಿಯವರು ಆಧುನಿಕ ಕಾಲದ ಕಾವ್ಯ, ನಾಟಕ, ಸಣ್ಣಕತೆ, ಕಾದಂಬರಿ, ಸಾಹಿತ್ಯ ವಿಮರ್ಶೆಯೆಂಬ ಚೌಕಟ್ಟಿನೊಳಗಡೆಯೇ ಬಿಡಿ ಬಿಡಿ ಪ್ರಬಂಧಗಳ ರಚನೆಯಲ್ಲಿ ಸಾಹಿತ್ಯ ಪ್ರಕಾರದ ಹುಟ್ಟು ಬೆಳವಣಿಗೆ, ಪ್ರಮುಖ ಕೃತಿಕಾರರು, ಅವರ ಕೃತಿಗಳನ್ನು ಅನುಸರಿಸಿದ ವಿಮರ್ಶಾ ಮಾದರಿಯೊಳಗೆ ವಿವರಿಸುತ್ತಾರೆ. ಎಲ್.ಎಸ್.ಶೇಷಗಿರಿರಾವ್ ಅವರ ಹೊಸಗನ್ನಡ ಸಾಹಿತ್ಯ ಚರಿತ್ರೆಯೂ ಸಹ ಮುಗಳಿ ಅವರ ಸಾಹಿತ್ಯ ಚರಿತ್ರೆಯ ಮುಂದುವರಿಕೆಯ ಭಾಗವಾಗಿದೆ. ಈ ಕೃತಿಯಲ್ಲಿ ಹೊಸಗನ್ನಡ ಸಾಹಿತ್ಯದ ಪ್ರೇರಣೆಗಳು, ಸಾಹಿತ್ಯ ಘಟ್ಟಗಳು, ಸಾಹಿತ್ಯ ರೂಪಗಳನ್ನು ಮತ್ತು ಕೃತಿಕಾರರ ಬಗ್ಗೆ ವಿಷಯ ವಸ್ತುಗಳನ್ನೊಳಗೊಂಡಂತೆ ಸಾಹಿತ್ಯ ಸಮೀಕ್ಷೆ ಮಾಡಲಾಗಿದೆ.

ಆದರೆ ಮುಗಳಿ ಅವರ ಕನ್ನಡ ಸಾಹಿತ್ಯ ಚರಿತ್ರೆಯು ಮುಖ್ಯ ಘಟ್ಟದಲ್ಲಿರಲು ಕಾರಣವೇನೆಂದರೆ ವಿಷಯ ಸಂಗ್ರಹಣೆ, ವಿಶ್ಲೇಷಣೆ, ಮೌಲ್ಯಮಾಪನ. ಈ ಮೂರು ಅಂಶಗಳು ಆ ಕೃತಿಯಲ್ಲಿ ಹದವರಿತು ಪುಟಮಿತಿಯೊಳಗಡೆ ಮೂಡಿಬಂದಿರುವುದರಿಂದ ಅದು ಮುಖ್ಯ ಘಟ್ಟದಲ್ಲಿಯೇ ಎದ್ದು ಕಾಣಿಸುತ್ತದೆ. ಪಂಪಪೂರ್ವ ಕಾಲದಿಂದ ಹಿಡಿದು ಆಧುನಿಕ ಕಾಲದವರೆಗೆ ಸಾಹಿತ್ಯ ಪಂಥ ಪ್ರಕಾರಗಳು ಒಲವು-ನಿಲುವುಗಳನ್ನು ಅದು ವಿಶ್ಲೇಷಿಸುತ್ತದೆ. ೨೦ನೇ ಶತಮಾನದವರೆಗಿನ ಸಾಹಿತ್ಯ ಚರಿತ್ರೆ ಅನಿವಾರ್ಯ ಸಂಕ್ಷಿಪ್ತತೆಯೊಳಗೂ ಒಂದು ಸಮತೂಕವನ್ನು, ಸಮಗ್ರತೆಯನ್ನು ಒಳಗೊಳ್ಳಲು

ಅದು ಉದ್ದೇಶಿಸಿರುವುದು ಸಾಮಾನ್ಯ ಸಂಗತಿ ಅಲ್ಲ. ಮುಖ್ಯ-ಅಮುಖ್ಯ ಕಾಲಘಟ್ಟಗಳು ಮತ್ತು ಅವುಗಳ ನಡುವಣ ವ್ಯತ್ಯಾಸವನ್ನು ಸಾಹಿತ್ಯಕ ದೃಷ್ಟಿಯಿಂದ ಎದುರು-ಬದುರಾಗಿಟ್ಟು ನೋಡುವ ಕ್ರಮ ಎಲ್ಲರೂ ಮೆಚ್ಚುವಂತದ್ದಾಗಿದೆ. ಅಷ್ಟೇ ಅಲ್ಲದೇ ಕವಿಗಳ ಹೆಸರು, ಕಾಲನಿರ್ಣಯ, ಕೃತಿಗಳ ವೈದೃಶ್ಯಗಳನ್ನು ಪರಿಶೀಲಿಸುವಾಗ ಆಗುವಂತಹ ಪೇಚಾಟ ಇರಿಸು-ಮುರಿಸನ್ನುಂಟು ಮಾಡಿದರೂ ತಾಳ್ಮೆ ಕಳೆದುಕೊಳ್ಳದೆ ಸಂಶೋಧನೆಯಲ್ಲಿ ತೊಡಗಿರುವುದನ್ನು ಗಮನಿಸಬಹುದಾಗಿದೆ. ಈ ರೀತಿ ವಿಮರ್ಶೆ ಅಂದಿನ ಕಾಲದ ಹಿರಿಯ ವಿದ್ವಾಂಸರುಗಳಲ್ಲಿ ನಾವು ಕಾಣಬಹುದಾಗಿದೆ. ಅದಕ್ಕೆ ಉದಾಹರಣೆ ಎಂಬಂತೆ ಮುಗಳಿ ಅವರ ಸಮಕಾಲೀನರಾದ ಡಿ.ಎಲ್. ನರಸಿಂಹಾಚಾರ್ 'ಪಂಪ ರಾಮಾಯಣ ಸಂಗ್ರಹ' ಸಂಪಾದನೆಯ ಕೃತಿಯ ಪ್ರಸ್ತಾವನೆಯಲ್ಲಿ ನಾಗಚಂದ್ರನ ಕಾಲಗಣನೆಯ ಬಗ್ಗೆ ತಿಳಿಸುವ ಅವರ ಸಂಶೋಧನಾ ಮಾದರಿಯು ನಿಜಕ್ಕೂ ಬೆರಗು ಮೂಡಿಸುವಂತಹದ್ದಾಗಿದೆ. ಹಳೆಯ ಗ್ರಂಥಗಳು, ಸ್ಥಳಿಯ ಶಾಸನಗಳು, ಬೇರೆ ರಾಜ್ಯದಲ್ಲಿರುವ ಶಾಸನಗಳು, ವಿದ್ವಾಂಸರ ಹೇಳಿಕೆಗಳನ್ನು ಅನುಸರಿಸಿ, ಚರ್ಚೆಗೊಳಪಡಿಸಿ ಸಂಶೋಧನಾತ್ಮಕವಾಗಿ ತಿಳಿಸುವುದು ಗಮನಾರ್ಹವಾಗಿದೆ.

ಈ ನಿಟ್ಟಿನಲ್ಲಿ ಮುಗಳಿ ಅವರು ತಮ್ಮ ಕನ್ನಡ ಸಾಹಿತ್ಯ ಚರಿತ್ರೆಯನ್ನು ಚಾರಿತ್ರಿಕ ಹಿನ್ನೆಲೆಯಲ್ಲಿ ನಿರೂಪಿಸಲು ಮುಂದಾಗುತ್ತಾರೆ. ನಿರೂಪಣೆಯಲ್ಲಿ ಸಾಹಿತ್ಯ ಚರಿತ್ರೆಕಾರರು ಅನುಸರಿಸುವ ಕ್ರಮ ಸಾಹಿತ್ಯ ಅಧ್ಯಯನ ದೃಷ್ಟಿಯಿಂದ ಮುಖ್ಯವೆನಿಸುತ್ತದೆ. ಸಾಹಿತ್ಯ ಚರಿತ್ರೆಯ ವಿಭಾಗಕ್ರಮವು ಇಂದಿನ ವಿದ್ವಾಂಸರ ದೃಷ್ಟಿಯಿಂದ ಭಿನ್ನವಾಗಿದೆ. ಪೂರ್ವ ವಿದ್ವಾಂಸರೆಲ್ಲರೂ ಹೆಚ್ಚು ಕಡಿಮೆ ಮತೀಯ ದೃಷ್ಟಿಯನ್ನು ಹೊಂದಿದ್ದರೂ ಕೆಲವರು ಸಾಹಿತ್ಯಪರ ಭಾಷೆಯ ದೃಷ್ಟಿಯನ್ನು ಮುಖ್ಯವಾಗಿಟ್ಟುಕೊಂಡು ವಿಭಾಗಕ್ರಮ ಮಾಡಿರುವುದು ಕಂಡುಬರುತ್ತದೆ. ಮುಗಳಿ ಅವರು ಕವಿಗಳನ್ನಾಧರಿಸಿ ಪಂಪಪೂರ್ವಯುಗ, ಪಂಪಯುಗ, ಬಸವಯುಗ, ಕುಮಾರವ್ಯಾಸಯುಗ ಎಂದು ಇದಕ್ಕೆ ಪರ್ಯಾಯವಾಗಿ ಮಾರ್ಗಯುಗ, ಸಂಕ್ರಮಣಯುಗ, ದೇಸಿಯುಗವೆಂದು ಹೆಸರಿಸುತ್ತಾರೆ. ಇವರ ಸಾಹಿತ್ಯ ಚರಿತ್ರೆಯಲ್ಲಿ ಕವಿ, ಕಾವ್ಯ, ವಿಮರ್ಶೆ ಸಾಹಿತ್ಯ ಪರಂಪರೆಯ ವೈಶಿಷ್ಟ್ಯಗಳನ್ನು ಅರಿತಿರುವ ಪ್ರಯತ್ನ ಕಾಣಿಸುತ್ತದೆ. ಅಷ್ಟೆ ಅಲ್ಲದೇ "ಹಿಂದಿನ ವಿದ್ವಾಂಸರುಗಳ ತೀರ್ಮಾನಗಳನ್ನು ಒಪ್ಪಿಕೊಳ್ಳುವಲ್ಲಿ ಇಲ್ಲವೇ ಬಿಟ್ಟುಬಿಡುವಲ್ಲಿ ಇಲ್ಲವೇ ತಿರಸ್ಕರಿಸುವಲ್ಲಿ ಜಾಗರೂಕ ಪ್ರಜ್ಞೆಯನ್ನು ಮಿತವ್ಯಯದ ಮಾತುಗಾರಿಕೆಯನ್ನು ತಮ್ಮ ಬರಹದಲ್ಲಿ ಒಟ್ಟು ಅಂದದ ಪರಿಣಾಮ ಸಾಧನೆಯಲ್ಲಿ ಕಲಾವಂತಿಕೆಯನ್ನು ಆಕರ್ಷಕ ರೀತಿಯಲ್ಲಿ ಬಳಸಿದ್ದಾರೆ. ಕನ್ನಡ ಸಾಹಿತ್ಯ ಚರಿತ್ರೆಯಬೆಳವಣಿಗೆಯಲ್ಲಿ ಮುಗಳಿ ಅವರ ಕನ್ನಡ ಸಾಹಿತ್ಯ ಚರಿತ್ರೆಯು ಮಾರ್ಗನಿರ್ಮಾಣದ ಒಂದು ಮೈಲುಗಲ್ಲು"[೧೪] ಎಂದಿದ್ದಾರೆ. ಕೀರ್ತಿನಾಥ ಕುರ್ತಕೋಟಿ ಅವರು ಮುಗಳಿ ಅವರ ಸಾಹಿತ್ಯ ಚರಿತ್ರೆ ಕುರಿತು "ಇದಕ್ಕಿಂತ ಮೊದಲು ಪ್ರಕಟವಾದ ಇತಿಹಾಸ ಗ್ರಂಥಗಳ ಅಪೂರ್ಣತೆಗಳನ್ನೆಲ್ಲಾ ಇದು ತುಂಬಿಕೊಂಡಿದೆ. ಒಂದು ಅರ್ಥದಲ್ಲಿ ಮುಗಳಿ ಅವರು ಕನ್ನಡ ಸಾಹಿತ್ಯವನ್ನು ಪುನಃ ಸೃಷ್ಟಿಸಿದ್ದಾರೆಂದು ಧೈರ್ಯವಾಗಿ ಹೇಳಬಹುದು"[೧೫] ಎಂದಿದ್ದಾರೆ. ಈ ಹೇಳಿಕೆಯನ್ನು ಒಪ್ಪಬಹುದಾಗಿದೆ.

ಡಿ.ಎಲ್.ನರಸಿಂಹಾಚಾರ್ 'ಪೀಠಿಕೆಗಳು ಲೇಖನಗಳು' ಪೂರ್ವೋಕ್ತದಲ್ಲಿ ತಿಳಿಸುವಂತೆ "ರಂ.ಶ್ರೀ.ಮುಗಳಿ ಅವರು ಸುಗ್ಗಿಯ ಫಸಲನ್ನು ದೊಡ್ಡ ಪ್ರಮಾಣದಲ್ಲಿ ಕೊಯ್ದು ಶ್ರೇಷ್ಠ ಫಲಗಳನ್ನು ಪಡೆದುಕೊಂಡವರು. ಅವರ ಕಾರ್ಯಕ್ಕೆ ಪೂರ್ವರಂಗವಾಗಿ ನಾಡಿನ ತುಂಬ ಮರುಸುಗ್ಗಿ ನಡೆದವು. ಅವರೇನು ಕತ್ತಲೆಯಲ್ಲಿ ಓಡಾಡಬೇಕಾಗಿರಲಿಲ್ಲ. 'ಕವಿಚರಿತೆ'ಯ ಸಂಪುಟಗಳು ನಿರ್ಮಿಸಿದ ದೀಪಾಲಂಕೃತ ರಾಜಮಾರ್ಗವಿತ್ತು. ಡಿ.ಎಲ್.ನರಸಿಂಹಾಚಾರರು 'ಕನ್ನಡ ಸಾಹಿತ್ಯ ಚರಿತ್ರೆಯ ಸ್ವರೂಪ' ಎಂಬ ಸಂಪುಟಗಳ ಮಂಥನದಲ್ಲಿ ಸಾಹಿತ್ಯ ಚರಿತ್ರೆಗಳಲ್ಲಿ ತ್ರಿವಿಧಿಗಳನ್ನು ನಿರ್ದೇಶಿಸಿದರು"[೧೬] ಈ ಹೇಳಿಕೆಯನ್ನು ಅಲ್ಲಗಳೆದಿರುವೆಂಬಂತೆ ಎಚ್.ಎಸ್.ರಾಘವೇಂದ್ರರಾವ್ ಅವರು "ಇದೆಲ್ಲ ಹಿಂದಿನ ಮಾತು. ಆದರೆ ೨೦ನೇ ಶತಮಾನದ ಮೊದಲರ್ಧದ ತಿಳುವಳಿಕೆ ಮತ್ತು ಅಗತ್ಯತೆಗಳು ಇಂದಿಗಿಂತ ಬಹಳ ಬೇರೆಯಾಗಿದ್ದವು. ಅದು ಕನ್ನಡ ಸಾಹಿತ್ಯದ ಅನಾವರಣ ಮತ್ತು ಅವಲೋಕನಗಳು ಒಟ್ಟೊಟ್ಟಿಗೆ ನಡೆಯುತ್ತಿದ್ದ ಕಾಲ. ಅಂತೆಯೇ ಕನ್ನಡ ಸಂಸ್ಕೃತಿಯು ತನ್ನತನದ ಹುಡುಕಾಟಕ್ಕೆಂದು ಹತ್ತು ಹಲವು ಹಾದಿಗಳಲ್ಲಿ ತಡಕಾಡುತ್ತಿತ್ತು. ಇಡೀ ಸಮುದಾಯಗಳು ಮತ್ತು ಬಿಡಿ ಲೇಖಕರು ಇಬ್ಬರೂ ಇಂತಹ ಅರಸುವಿಕೆಯಲ್ಲಿ ಆಸಕ್ತರಾಗಿದ್ದರು. ಆಗ ಸಿಕ್ಕಿದ್ದ ಕೃತಿಗಳು ಐದಾದರೆ ಸಿಗದಿದ್ದ ಕೃತಿಗಳು ಹತ್ತು. ಲೇಖಕರ ಬಗೆಗಿನ ಮಾಹಿತಿ ಕೂಡ ಅಪೂರ್ಣವೊ ವಿವಾದಾತ್ಮಕವೊ ಆಗಿರುತ್ತೆಂದು"[೧೭] ಅಂದಿನ ಸಂಶೋಧನಾ ಆಕರಗಳ ಕೊರತೆಯ ಕುರಿತು ಹೇಳಿರುವುದು ಸಮಂಜಸವಾದದ್ದಾಗಿದೆ.

ಮುಗಳಿ ಅವರ ಸಾಹಿತ್ಯ ಚರಿತ್ರೆಯಲ್ಲಿ ಉತ್ತಮ ಗುಣಲಕ್ಷಣಗಳನ್ನು ಗಮನಿಸಿದ ಮೇಲೆ ಆ ಕೃತಿಯ ಮಿತಿಗಳು ಈ ರೀತಿ ತಿಳಿದುಬರುತ್ತವೆ.

* ಅವರ ಸಾಹಿತ್ಯ ಚರಿತ್ರೆಯಲ್ಲಿ ಕೆಲವು ಕವಿಗಳ ಬಗೆಗಿನ ವಿವೇಚನೆ ತುಂಬ ಸ್ಥೂಲ ಕಡಿಮೆ ಎನ್ನುವಂತಿದೆ. ಉದಾಹರಣೆಗೆ ನಂಜುಂಡನ ಕುಮಾರರಾಮ ಸಾಂಗತ್ಯವನ್ನು ಉಲ್ಲೇಖಿಸಿರುವುದಾದರೂ ಕವಿಯ ಬಗ್ಗೆ, ಕೃತಿಯ ಬಗೆಗೆ ಸಂಕ್ಷಿಪ್ತವಾಗಿಯಾದರೂ ವಿಮರ್ಶಿಸಬೇಕೆನಿಸುತ್ತದೆ.
* ಸಾಹಿತ್ಯಕ್ಕೆ ಸಂಬಂಧಪಟ್ಟಂತೆ ಚರಿತ್ರೆಯನ್ನು ಯುಗಗಳಾಗಿ ವಿಂಗಡಿಸಿಕೊಂಡು ರಾಜಕೀಯ, ಸಾಮಾಜಿಕ, ಧಾರ್ಮಿಕ ಹಿನ್ನೆಲೆಯ ವಿವೇಚನೆಯು ಸ್ಥೂಲ ನಿರೂಪಣೆಯಿಂದ ಕೂಡಿದೆ.
* ಕವಿಗಳಾದ ವಿಮಲೋದಯ, ನಾಗಾರ್ಜುನ, ಜಯಬಂಧು, ಶ್ರೀವಿಜಯ, ಲೋಕಪಾಲ, ಕವೀಶ್ವರ ಮುಂತಾದ ಕವಿಗಳ ಕಾಲ ಉಲ್ಲೇಖವಿಲ್ಲ.
* ಉಪಲಬ್ಧವಾದ ಮೊದಲ ಗದ್ಯಗ್ರಂಥವೆಂದು ಚಾವುಂಡರಾಯ ಪುರಾಣವನ್ನು ಕರೆದಿರುವುದು ಸಮಂಜಸವಲ್ಲವೆಂದೆನಿಸುತ್ತದೆ. ಅದಕ್ಕೆ ಬದಲಾಗಿ ವಡ್ಡಾರಾಧನೆ ಎಂದು ಹೇಳಿದ್ದರೆ ಸೂಕ್ತವಾಗಿ ಇರುತ್ತಿತ್ತು.

* ಜನ್ನ, ರಾಘವಾಂಕರ ನಡುವೆ ಕಂಡುಬರುವ ಕವಿಕಾಮ, ಆಚಣ್ಣ, ವಾಸುದೇವ ದೇವೇಂದ್ರಮುನಿ ಮುಂತಾದವರ ಬಗ್ಗೆ ಪರಿಚಯವೇ ಕಂಡುಬರುವುದಿಲ್ಲ.

* ಪೊನ್ನನ ನಂತರ ಕಾಲಾನುಕ್ರಮಣಿಕೆಯಲ್ಲಿ ಚಾವುಂಡರಾಯನ ಪ್ರಸ್ತಾಪದ ಉಲ್ಲೇಖ ಇರಬೇಕಾದುದು ಸರಿ ಇದ್ದರೂ ಅಲ್ಲಿ ಪೊನ್ನನ ನಂತರ ರನ್ನನ ಪ್ರಸ್ತಾಪವಿದೆ. ಅದೇ ರೀತಿ ಮುಗಳಿ ಅವರ ಸಾಹಿತ್ಯ ಚರಿತ್ರೆಯಲ್ಲಿ ಜನಪದ ಸಾಹಿತ್ಯವನ್ನು ದಾಖಲಿಸಿ ಚರ್ಚಿಸಬೇಕಿತ್ತು. ಏಕೆಂದರೆ ಮುಗಳಿ ಅವರು ಒಂದು ಯುಗದ ಸಾಹಿತ್ಯ ಪ್ರಮುಖ ಘಟ್ಟವನ್ನೇ ಬಿಟ್ಟಂತೆ ಅನಿಸುವುದರಿಂದ ಅದನ್ನು ಗಮನಿಸಿದ್ದರೆ ಚೆನ್ನಾಗಿರುತ್ತಿತ್ತು. ಆದರೂ ಸಹ ಮುಗಳಿ ಅವರ ಸಾಹಿತ್ಯ ಚರಿತ್ರೆಯು ಸಾಧಿಸಿರುವ ಯಶಸ್ಸಿನ ಎದುರು ಇವು ದೊಡ್ಡ ಕೊರತೆಗಳೆಂದು ಅನಿಸುವುದಿಲ್ಲವೆಂದು ಹೇಳಬೇಕು.

೪.೨. ಪ್ರಾಚೀನ ಕನ್ನಡ ಸಾಹಿತ್ಯರೂಪಗಳು

'ಪ್ರಾಚೀನ ಕನ್ನಡ ಸಾಹಿತ್ಯ ರೂಪಗಳು' ಸಾಹಿತ್ಯ ಚರಿತ್ರೆಗೆ ಸೇರಿರುವ ಮತ್ತೊಂದು ಕೃತಿಯಾಗಿದೆ. ಮುಗಳಿ ಅವರು ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ವಿಭಾಗದ ಅಧ್ಯಾಪಕರಾಗಿದ್ದ ಅವಧಿಯಲ್ಲಿ ಯು.ಜಿ.ಸಿ. ಅನುದಾನದಡಿಯಲ್ಲಿ ಈ ಕೃತಿ ರಚನೆಗೊಂಡಿರುವುದು ಮುನ್ನುಡಿಯಿಂದ ತಿಳಿದುಬರುತ್ತದೆ. ಅದೇ ರೀತಿ ಮುಗಳಿ ಅವರು ತಿಳಿಸುವಂತೆ "ಪ್ರಾಚೀನ ಸಾಹಿತ್ಯರೂಪಗಳ ಈ ಚಾರಿತ್ರಿಕ ಸಮೀಕ್ಷೆ ಉನ್ನತಮಟ್ಟದಲ್ಲಿ ವ್ಯಾಸಂಗ ಮಾಡುವ ವಿದ್ಯಾರ್ಥಿಗಳಿಗೂ ಇತರ ವ್ಯಾಸಂಗಿಗಳಿಗೂ ಸಹಾಯಕವಾಗಬಹುದೆಂದು ನಂಬಿದ್ದೇನೆ. ಕನ್ನಡ ಸಾಹಿತ್ಯ ಚರಿತ್ರೆ ಕಾಲಾನುಕ್ರಮದಲ್ಲಿ ಕೈಗೊಂಡ ಸಮೀಕ್ಷೆಯಾಗಿತ್ತು. ಇದು ಸಾಹಿತ್ಯ ರೂಪಗಳ ಮತ್ತು ಆಂದೋಲನಗಳ ದೃಷ್ಟಿಯಿಂದ ನಡೆಸಿದ ಸಮೀಕ್ಷೆಯಾಗಿದೆ. ಇದು ಪರಿಪೂರ್ಣವೆಂದು ನಾನು ತಿಳಿದಿಲ್ಲ"[೧೮] ಎಂಬ ಸಂಯಮ ನುಡಿ ತಿಳಿದುಬರುತ್ತದೆ.

ಈ ಕೃತಿಯ ಮೊದಲ ಭಾಗದಲ್ಲಿ ತೀರ ಮೊದಲಿನ ಸಾಹಿತ್ಯರೂಪಗಳಾದ ಚಂಪೂ, ಕಂದ ವೃತ್ತ, ಅಷ್ಟಕ ಶತಕ, ವಚನ, ಇತರ ಗದ್ಯ, ರಗಳೆ, ಷಟ್ಪದಿ, ತ್ರಿಪದಿ, ಸಾಂಗತ್ಯ, ಗೀತಗಳಂತಹ ಪ್ರಕಾರಗಳನ್ನು ವಿಂಗಡಿಸಿಕೊಂಡು ಹಳಗನ್ನಡ ಸಾಹಿತ್ಯದವರೆಗೆ ಅಂದಿನ ಮತ್ತು ಇಂದಿನ ಕವಿಗಳು ಸಾಹಿತ್ಯರೂಪಗಳನ್ನು ತಮ್ಮ ತಮ್ಮ ಸಾಹಿತ್ಯ ಕೃತಿಗಳಲ್ಲಿ ಅವುಗಳನ್ನು ಯಾವ ರೀತಿ ಬಳಸಿಕೊಂಡಿದ್ದಾರೆ ಎಂಬುದನ್ನು ತಿಳಿಯಲಾಗಿದೆ. ಈ ಕೃತಿಯನ್ನು ನಾಲ್ಕು ಬಗೆಯ ಆಧಾರಗಳಿಂದ ವಿಂಗಡಿಸಲಾಗಿದೆ. ೧. ಶಾಸನಗಳು ೨. ಕವಿರಾಜಮಾರ್ಗ, ೩. ಇತರೆ ಸಾಹಿತ್ಯ ಶಾಸ್ತ್ರ ಗ್ರಂಥಗಳು, ೪. ಸಾಹಿತ್ಯಕ ಗ್ರಂಥಾಲಯಗಳನ್ನಾಗಿ ವಿಂಗಡಿಸಿದ್ದಾರೆ.

ಈ ಕೃತಿಯ ಜೊತೆಗೆ ಡಿ.ಎಸ್.ಕರ್ಕಿ ಅವರ ಛಂಧೋವಿಕಾಸದ ಕೃತಿಯೊಂದಿಗೆ ತೌಲನಿಕವಾಗಿ ನೋಡುವುದಾದರೆ ಕರ್ಕಿ ಅವರ ಕೃತಿಯಲ್ಲಿ ನಾದಪ್ರಪಂಚದಲ್ಲಿ ಛಂದಸ್ಸು, ಕನ್ನಡ ಕವಿಗಳ ದೃಷ್ಟಿಯಲ್ಲಿ ಛಂದಸ್ಸು, ಛಂದಸ್ಸಿನ ಪ್ರಥಃಕರಣಲಯ, ಯತಿ, ಪ್ರಾಸ, ನಿನಾದ, ಭಾವಛಂದಸ್ಸು,

ಛಂದಃಪ್ರಭೇದಗಳು, ಕನ್ನಡ ಛಂದದ ರಹಸ್ಯ, ತ್ರಿಪದಿ, ಚಂಪೂ ಸಂಪ್ರದಾಯ, ಕರ್ನಾಟಕ ವಿಷಯಜಾತಿ, ದೇಸಿರಗಳೆ, ಷಟ್ಪದಿ, ಸೀಸ ಮತ್ತು ಸಾಗತ್ಯ ಪ್ರಯೋಗ ಯುಗಗಳು, ಜಾನಪದ ಛಂದಸ್ಸು-ಲಾವಣಿಬಂಧ, ಆಧುನಿಕ ಬಂಧಗಳು ಹೊಸ ಛಂದಸ್ಸಿನ ನಾಡಿಗಳು, ಲಲಿತ, ಮಂದಾನಿಲ, ಉತ್ಸಾಹ ಅಧಿಕೋತ್ಸಾಹ ಲಯಗಳ ಪ್ರಕಾರ, ಹೊಸಬಂಧಗಳ ವರ್ಗೀಕರಣ, ಹೊಸಬಂಧ ರಚನೆಯಲ್ಲಿ ತೋರುವ ಕೆಲವೊಂದು ಸರ್ವಸಾಧಾರಣವಾದ ಯೋಜನೆಗಳು, ಇಂಗ್ಲಿಷ್ ಪದ್ಯರೂಪಗಳ ಪ್ರಭಾವ, ಎರಡು ದಿಸೆಗಳಲ್ಲಿ ಪ್ರಯೋಗ. ಹೊಸ ಛಂದೋರೂಪಗಳು ಪ್ರಗಾಥ, ಅಷ್ಟ ಷಟ್ಪದಿ-ಸರಳ ರಗಳೆ-ಗೀತರೂಪಕ, ನವ್ಯಕವಿತೆ, ಆಧುನಿಕ ಛಂದೋರೂಪಗಳ ಕುರಿತು ಕಟ್ಟಿಕೊಟ್ಟ ಪ್ರೌಢಪ್ರಬಂಧವಾಗಿದೆ. ಕನ್ನಡ ಛಂದಸ್ಸಿನ ಬೆಳವಣಿಗೆಯ ಸಾಧ್ಯತೆಯನ್ನು ಕರ್ಕಿ ಅವರು ಗುರುತಿಸಿದ್ದಾರೆ.

ಮುಗಳಿ ಅವರು ತಮ್ಮ ಪ್ರಾಚೀನ ಕನ್ನಡ ಸಾಹಿತ್ಯರೂಪಗಳಲ್ಲಿ ಸೀಸದ ಬಗ್ಗೆ ಪ್ರಸ್ತಾಪ ಬರುವುದಿಲ್ಲ. ಕಾರಣ ಅದು ತೆಲಗು ಮೂಲದ್ದಾಗಿದ್ದರಿಂದ ಕೈಬಿಟ್ಟಿರಬೇಕೆನಿಸುತ್ತದೆ. ಕನ್ನಡಕ್ಕಿಂತ ಮೊದಲು ತೆಲಗು ಚಂಪೂಕಾವ್ಯಗಳಲ್ಲಿ ಕಂದವೃತ್ತಗಳೊಡನೆ ಹೆಚ್ಚು ಸೀಸಬಳಕೆ ೧೧ನೇ ಶತಮಾನದ ಮಧ್ಯಭಾಗದಲ್ಲಿ ತೆಲುಗಿನ ಆದ್ಯಕವಿಯಾದ ನನ್ನಯಭಟ್ಟನು ಬಳಕೆ ಮಾಡಿದನೆಂದು ಪಾಂಡುರಂಗ ದೇಸಾಯಿ ಅವರು ತಿಳಿಸುತ್ತಾರೆ. ಆದರೆ ಸೀಸವು ಕನ್ನಡದ ಚಂಪೂ ಗ್ರಂಥಗಳಲ್ಲಿ ಎಲ್ಲಿಯೂ ಕಾಣಿಸಿಕೊಳ್ಳದಿದ್ದರು ನಾಗವರ್ಮನು ಸೀಸದ ಲಕ್ಷಣ ತಿಳಿಸುತ್ತಾನೆ. ಮುಂದೆ ಮಧ್ಯಯುಗದ ಭಕ್ತಿಗೀತೆಗಳಲ್ಲಿ ಸೀಸವು ಕನ್ನಡದ ದೇಸಿಗೆ ಹೊಂದಿಕೊಂಡು ಬಂದಿರುವುದು ತಿಳಿದುಬರುತ್ತದೆ. ಮುಗಳಿ ಅವರು ಪ್ರಾಚೀನ ಕನ್ನಡ ಸಾಹಿತ್ಯರೂಪಗಳಿಗೆ ಮಹತ್ವ ಕೊಟ್ಟಿರುವುದು ಒನಕೆವಾಡು ಓವನಿಗೆಯಿಂದಿಡಿದು ಚರ್ಚೆಗೆ ಒಳಪಡಿಸಿರುವುದು ತಿಳಿದುಬರುತ್ತದೆ. ಆದರೆ ಡಿ.ಎಸ್.ಕರ್ಕಿ ಅವರು ಒನಕೆವಾಡು, ಓವನಿಗೆ ಬಗ್ಗೆ ಪ್ರಸ್ತಾಪಿಸುವುದಿಲ್ಲ. ಏಕೆಂದರೆ ಡಿ.ಎಸ್.ಕರ್ಕಿ ಅವರ ಛಂಧೋವಿಕಾಸವು ಛಂದಶ್ಯಾಸ್ತ್ರ ಕುರಿತು ತಿಳಿಸುವಂತದ್ದು. ರಂ.ಶ್ರೀ.ಮುಗಳಿ ಪ್ರಾಚೀನ ಕನ್ನಡ ಸಾಹಿತ್ಯ ರೂಪಗಳಿಗಷ್ಟೇ ಒತ್ತುಕೊಟ್ಟಿರುವುದು ತಿಳಿದುಬರುತ್ತದೆ. ಕರ್ಕಿ ಅವರ ಅಧ್ಯಯನದಲ್ಲಿ ಕನ್ನಡ ಛಂದಸ್ಸಾರ ಬೆಳವಣಿಗೆ ಕ್ರಮವನ್ನು ಅರ್ಥಪೂರ್ಣವಾಗಿ ಚಿತ್ರಿಸಿದ್ದಾರೆ(ಭಾವ-ಅಭಿವ್ಯಕ್ತಿಯ ನೆಲೆಯಲ್ಲಿ). ಮುಗಳಿ ಅವರ ಅಧ್ಯಯನ ಛಂಧಸ್ಸಿನ ಸ್ಥೂಲವಾದ ಅಧ್ಯಯನವಾಗಿದೆ. ಎರಡು ಕೃತಿಗಳ ಛಂದಸ್ಸಿಗೆ ಸಂಬಂಧಿಸಿದಂತೆ ಮಹತ್ವದ ಕೃತಿಯಾಗಿದೆ.

ಮೊದಲ ಹಂತದಲ್ಲಿ ಪ್ರಾಚೀನ ರೂಪಗಳಾದ "ಒನಕೆವಾಡು ಬತ್ತ ಕುಟ್ಟುವಾಗ ಹಾಡುವ ಹಾಡು 'ಓವನಿಗೆ' ಮಾನಸೋಲ್ಲಾಸದಲ್ಲಿ ಬಳಕೆಯಾಗಿರುವುದನ್ನು ಅರಿತು 'ಓವನಿಗೆ' ಬರೀ ಒನಕೆವಾಡು' ಎಂಬ ಅರ್ಥವನ್ನು ಕಲ್ಪಿಸಿದರೆ ಶಿವಮಾರನ ಗಜಾಷ್ಟಕದ ಸಂದರ್ಭದಲ್ಲಿ ಓವನಿಗೆಯುಂ ಒನಕೆವಾಡುಂ ಎಂಬುದು ಅನಾವಶ್ಯಕ ದ್ವಿರುಕ್ತಿಯಾಗುತ್ತದೆ"[೯೯] ಎಂಬಂತೆ ಚರ್ಚಿಸುತ್ತಾ ಈ ಭಾಗದಲ್ಲಿ ಮುಗಳಿ ಅವರು ಯಾವುದೇ ರೀತಿಯ ಅಭಿಪ್ರಾಯಕ್ಕೆ ಬರುವುದಿಲ್ಲ. ಏಕೆಂದರೆ ಒನಕೆವಾಡು ಓವನಿಗೆಯಂತಹ ಪ್ರಾಚೀನ ರೂಪಗಳ ಬಗ್ಗೆ ವಿದ್ವಾಂಸರಲ್ಲಿ ಭಿನ್ನಭಿಪ್ರಾಯಗಳಿವೆ.

'ಚಂಪೂ' ರೂಪದ ಬಗ್ಗೆ ತಿಳಿಸುವ ಮುಗಳಿ ಅವರು "ಚಂಪೂ ಬಳಕೆ ಪಂಪ, ಪೊನ್ನ ರನ್ನರ ಕೃತಿಗಳಲ್ಲಿಯೆ ಮೊದಲಿಗೆ ಬಳಕೆಗೊಂಡಂತಿದೆ. ಅದಕ್ಕೂ ಮುನ್ನ ಚಂಪೂವಿನ ಮೊದಲ ಉಲ್ಲೇಖ ಬರುವುದು ೨ನೇ ನಾಗವರ್ಮನ ಕಾವ್ಯಾವಲೋಕನದಲ್ಲಿ ಮತ್ತು ಉದಯಾದಿತ್ಯನ ಅಲಂಕಾರಗ್ರಂಥದಲ್ಲಿಯೂ ಗದ್ಯಪದ್ಯದ ಮಿಶ್ರವೇ ಚಂಪೂ ಸಮಖ್ಯ ಕಾವ್ಯಂ ಸೇವ್ಯಂ ಎಂದು ಬಂದಿದೆ. 'ವಚನಕಾವ್ಯ'ವೆಂದು ಇದನ್ನು ಕರೆಯಲಾಗಿದೆ. ಮುಂದೆ ೪-೫ ಶತಕಗಳ ತರುವಾಯ ತಿರುಮಲಾರ್ಯ 'ಅಪ್ರತಿಮವೀರ ಚರಿತೆ'ಯಲ್ಲಿ ಇವರ್ಕೆ ಚಂಪೂವೆಂದು ವಸ್ತುಕವೆಂದುಂ ಪೆಸರ್' ಎಂದು ಉಲ್ಲೇಖಿಸಿದ್ದಾನೆ. ಅವನ ದೃಷ್ಟಿಯಲ್ಲಿ ಚಂಪೂವೆಂದರೆ ವಸ್ತುಕ. ವಸ್ತುಕದ ಜೊತೆಗೆ ವರ್ಣಕ ಎಂಬ ಪದವು ಅವನಿಗಿಂತ ಹಿಂದೆ ಕನ್ನಡ ಕಾವ್ಯಗಳಲ್ಲಿ ಬಳಸಲಾಗಿತ್ತು"[೨೦] ಎಂಬುದರ ಬಗ್ಗೆ ಪ್ರಸ್ತಾಪಿಸುತ್ತಾ "ಚಂಪುವನ್ನು ಸಂಸ್ಕೃತ ಮೂಲದಿಂದ ಚಂಪು ಶಬ್ದದ ನಿಷ್ಪತ್ತಿಯನ್ನು ಮಾಡಬಹುದು. ಹೇಗೆಂದರೆ ಚಪ್ ಧಾತುವಿಗೆ ಸಂಸ್ಕೃತದಲ್ಲಿ ಸಾಂತ್ವನ, ಗತಿ, ಪರಿಕಲ್ಪನ ಎಂಬ ಮೂರು ಅರ್ಥಗಳಿವೆ(ಚಪ್-ಸಾಂತ್ವನ, ಚಪಿ ಗತ್ಯಾಂ ಚಹ ಪರಿಕಲ್ಕನೆ, ಚಪ್ ಇತ್ಯಾದಿ) ಇವುಗಳಲ್ಲಿ ಯಾವೊಂದು ಧಾತು ಮೂಲದಿಂದಲಾದರೂ ಇದರ ನಿಷ್ಪತ್ತಿಯಾಗಬಹುದೆಂದು"[೨೧] ತಿಳಿಸುತ್ತಾರೆ.

ಮುಗಳಿ ಅವರು ಪಂಪನು ರಚಿಸಿದ ಪಂಪಭಾರತ ಮತ್ತು ಆದಿಪುರಾಣ ಕೃತಿಗಳಲ್ಲಿ ರಗಳೆ ಬಳಕೆಯನ್ನು ಆದಿಪ್ರಾಸ ಬಿಟ್ಟು ಅಂತ್ಯಪ್ರಾಸ ಅನುಸರಿಸಿದ್ದರ ಬಗ್ಗೆ ಪ್ರಸ್ತಾಪಿಸುತ್ತಾರೆ. ಪೊನ್ನನ ಶಾಂತಿಪುರಾಣ ಮಂದಾನಿಲ ಅಂತ್ಯಪ್ರಾಸದಿಂದ ಮಾತ್ರ ಕೂಡಿದ್ದು ಅದಕ್ಕೆ ತ್ವರಿತರಗಳೆ' ಎಂದು ಹೆಸರಿಸಿದ್ದಾನೆಂಬುದನ್ನು ತಿಳಿಸುತ್ತಾರೆ. ಈ ವಿಷಯದಲ್ಲಿ ರನ್ನನು ಮುಂದೆ ಹೋಗಿದ್ದಾನೆ. ಅವನ 'ಸುಕುಮಾರ ಚರಿತೆ'ಯಲ್ಲಿರುವ ನಾಲ್ಕು ರಗಳೆಗಳು ಮಂದಾನಿಲವಾಗಿದ್ದು ಒಂದಕ್ಕೆ 'ಪದ್ದಳಿ' ಎಂದು ಕರೆಯಲಾಗಿದೆ ಎಂದು ವಿವರಿಸಿದ್ದಾರೆ. ಅದೇ ರೀತಿಯಾಗಿ ಚಂಪೂ ರೂಪವನ್ನು ಮುಂದೆ ರುದ್ರಭಟ್ಟ, ನೇಮಿಚಂದ್ರ, ಜನ್ನ, ಷಡಕ್ಷರಿ ಬಳಸಿಕೊಂಡಿದ್ದಾರೆ. "ಕನ್ನಡ ಸಾಹಿತ್ಯ ಪ್ರಾರಂಭಕ್ಕೆ ಮಾರ್ಗಕಾವ್ಯ ಮುಖ್ಯ ಮಾಧ್ಯಮವಾದರೂ ಬರುಬರುತ್ತ ೧೨-೧೩ನೇ ಶತಮಾನದಲ್ಲಿ ವಚನ, ರಗಳೆ, ಷಟ್ಪದಿ ಬಳಕೆ ಉನ್ನತಿಗೊಂಡು ೧೪ನೇ ಶತಮಾನದವರೆಗೆ ಅದು ಎತ್ತಿದ ತಲೆಯನ್ನು ತಗ್ಗಿಸಲಿಲ್ಲ. ಮುಂದೆ ೧೫-೧೬ನೇ ಶತಕದಲ್ಲಿ ಇಳಿಮೊಗವಾಯಿತು. ೧೭-೧೮ರಲ್ಲಿ ಷಡಕ್ಷರಿ, ತಿರುಮಲಾರ್ಯ ಮುಂತಾದವರು ಬಳಸಿಕೊಂಡ ವಿವರ ತಿಳಿಸುತ್ತಾ"[೨೨] ಕನ್ನಡದ ಕೆಲವು ಮುಖ್ಯ ಮಾರ್ಗಕಾವ್ಯಗಳಿಗೆ ಅದು ಪ್ರಭಾವಿಯಾದ ಸಾಹಿತ್ಯ ರೂಪವಾಗಿ ಉಳಿಯಿತೆಂದಿದ್ದಾರೆ.

'ಕಂದವೃತ್ತ' ಮುಗಳಿ ಅವರು ಶಾಸನಾದಿಯಾಗಿ ಕಂದಪದ್ಯಗಳನ್ನು ಬಳಸಿಕೊಂಡಿರುವುದು ತಿಳಿದುಬರುತ್ತದೆ. ಬೇಲೂರಿನ ಕುವರಲಕ್ಷ್ಮಣನ ಶಾಸನದಲ್ಲಿ ಹೊಯ್ಸಳ ದೊರೆ ವೀರಬಲ್ಲಾಳನು ಮೃತಪಟ್ಟಾಗ ಅವನ ದಂಡನಾಯಕನಾದ ಕುವರಲಕ್ಷ್ಮಣನು ಕೂಡ ತನ್ನ ಹೆಂಡತಿ ಮತ್ತು ಸಾವಿರಜನ ವೀರರೊಡನೆ ಚಿತೆಗೆ ಆಹುತಿಯಾದರೆಂದು ಈ ಶಾಸನದ ಕಂದಪದ್ಯದಿಂದ ತಿಳಿದುಬರುವ ವಿವರವನ್ನು ಚರ್ಚಿಸಿದ್ದಾರೆ. ಕಂದವೃತ್ತಗಳಲ್ಲಿ ಕಾವ್ಯಮಯವಾದ ಶಾಸನಗಳ ಪಟ್ಟಿ ನೀಡುತ್ತಾ

ಅದರಲ್ಲಿ ೧೨೫ ಬೇಲೂರು ಶಾಸನ, ೧೮೫ ಶಿಕಾರಿಪುರ ಶಾಸನ, ೧೪೧ ಬೇಲೂರು ಶಾಸನ, ೨೪೬ ದಾವಣಗೆರೆ ಶಾಸನಗಳಲ್ಲಿ ಬಳಕೆಗೊಂಡ ವಿವರ ತಿಳಿಸುತ್ತಾರೆ. ಹಾಗೆ ಮುಂದುವರಿದು ಕಂದವೃತ್ತಗಳು ಶ್ರೀವಿಜಯನ ಕವಿರಾಜಮಾರ್ಗ, ಚಾವುಂಡರಾಯನ ಲೋಕೋಪಕಾರ, ಬ್ರಹ್ಮಶಿವನ ಸಮಯಪರೀಕ್ಷೆ, ಜನ್ನನ ಯಶೋಧರ ಚರಿತೆಗಳಂತಹ ಕೃತಿಗಳಲ್ಲೂ ಕಂಡುಬರುತ್ತದೆ.

'ಅಷ್ಟಕ-ಶತಕ' ಮುಗಳಿ ಅವರು ಶತಕಗಳ ಬಗ್ಗೆ ತಿಳಿಸುತ್ತಾ ಕ್ರಿ.ಶ. ೧೧೭೦ರಲ್ಲಿ ರಚಿಸಿದ ನಾಗವರ್ಮನ ಚೂಡಾಮಣಿಶತಕ ಕನ್ನಡದಲ್ಲಿ ಮೊದಲನೆಯ ಶತಕವೆಂದು ಮತ್ತು ಅದರ ಕಾಲವನ್ನು ಚರ್ಚೆಗೆ ಒಳಪಡಿಸದೆ ಒಪ್ಪಿಕೊಂಡಿದ್ದಾರೆ. ಅದೇ ರೀತಿ ಶತಕಗಳ ಬಗ್ಗೆ ಮರಿಯಪ್ಪಭಟ್ಟರು ಪ್ರಸ್ತಾಪಿಸಿರುವ ಹೇಳಿಕೆಯನ್ನು ಈ ರೀತಿಯಾಗಿ ಉಲ್ಲೇಖಿಸುತ್ತಾರೆ. "೧೧ನೆಯ ಶತಮಾನಂದಿಂದೀಚೆಗೆ 'ಶತಕ' ಎಂಬ ನಿರ್ದಿಷ್ಟ ಶೀರ್ಷಿಕೆಯಲ್ಲಿ ಕೃತಿ ರಚನೆಯಾಗಿರುವುದನ್ನು ಕಾಣಬಹುದು. ಸುಮಾರು ೧೨೨೦ರಲ್ಲಿ ತೆಲುಗಿನಲ್ಲಿ ಪ್ರಥಮ ಶತಕ ರಚನೆಯಾಯಿತು. ಅದು ಪಾಲ್ಕುರಿಕೆ ಸೋಮನಾಥನು ಚಂಪಕ ಮತ್ತು ಉತ್ಪಲಮಾಲಾ ಛಂದಸ್ಸಿನಲ್ಲಿ ಶ್ರೀ ಬಸವೇಶ್ವರರನ್ನು ಸ್ತುತಿಸಿ ಬರೆದ ವೃಕ್ಷಾಧಿಪಶತಕ"[೩೬] ಮಹತ್ವ ಪಡೆಯುತ್ತದೆ. ಶತಕ ಸಾಹಿತ್ಯವು ಕನ್ನಡದಲ್ಲಿಯೇ ಮೊದಲು ಕಂಡುಬಂದರೂ ಅದರ ಬಳಿಕ ತೆಲುಗು ಸಾಹಿತ್ಯದಲ್ಲಿ ಹೆಚ್ಚು ಕಂಡುಬರುತ್ತದೆಂದಿದ್ದಾರೆ.

ಶತಕಗಳನ್ನು ಕನ್ನಡದಲ್ಲಿ ಛಂದೋವೈವಿಧ್ಯ ಮತ್ತು ವಿಷಯ ವೈವಿಧ್ಯಗಳಿಂದ ಪ್ರಕಟಿಸಿದರೂ ಕಂದವೃತ್ತಗಳಲ್ಲಿಯೇ ಅವುಗಳ ಹೆಚ್ಚಿನ ರಚನೆಯಿದೆ. ವೀರಶೈವ ತತ್ವಕ್ಕೆ ಹೆಚ್ಚಿನ ಪ್ರಾಮುಖ್ಯತೆಯಿರುವುದನ್ನು ಗುರುತಿಸುತ್ತಾರೆ. ಸಾಹಿತ್ಯ ರೂಪದ ದೃಷ್ಟಿಯಿಂದ ಅವುಗಳಲ್ಲಿ ಕೆಲವು ಯಶಸ್ವಿಯಾದ ಪ್ರಾಚೀನ ಗ್ರಂಥಗಳೆಂಬಂತೆ ತಮ್ಮ ಛಾಪು ಮೂಡಿಸಿವೆ. ಬೇರೆ ಕೆಲವು ನೀತಿ ತತ್ವ ಬೋಧನೆಯೊಂದಿಗೆ ಭಕ್ತಿಯನ್ನು ಬೆರೆಸಿ ಚಿಕ್ಕಜ್ಞಾನ ಕೋಶದಂತೆ ಆಗಿರುತ್ತದೆ ಎಂಬುದನ್ನು ಸ್ಪಷ್ಟಪಡಿಸುತ್ತಾರೆ. ಹಾಗೆ ಮುಂದುವರಿದು ಅಷ್ಟಕ-ಶತಕ ರಚಿಸಿದ ಕವಿಗಳ, ಗ್ರಂಥಗಳ ವಿವರಗಳನ್ನು ಈ ರೀತಿಯಾಗಿ ತಿಳಿಸುತ್ತಾರೆ. ಪೊನ್ನನ ಜಿನಾಕ್ಷರಮಾಲೆ, ರನ್ನನ ರನ್ನಕಂದ, ಬ್ರಹ್ಮಶಿವನ ತ್ರೈಲೋಕ್ಯ ಚೂಡಾಮಣಿಸ್ತೋತ್ರ, ಬೊಪ್ಪಣಪಂಡಿತನ ಗೊಮ್ಮಟಸ್ತುತಿ, ಬಸವಲಿಂಗನ ಶರಣಬಸವರಗಳೆ ಇತ್ಯಾದಿ ಕಂದ ವೃತ್ತಗಳು, ಸೈಗೊಟ್ಟಶಿವಮಾರನ ಶಿವಮಾರಮತವೆಂಬ ಗಜಾಷ್ಟಕ, ಹರಿಹರ ಮುಡಿಗೆ ಅಷ್ಟಕ, ೨ನೇ ಗುಣವರ್ಮನ ಚಂದ್ರನಾಥಾಷ್ಟಕ, ಮಹಾಂತದೇಶಿಕನ ಗುಣಾಷ್ಟಕ ಇತ್ಯಾದಿ ಗ್ರಂಥಗಳು ಅಷ್ಟಕಗಳ ಬಗ್ಗೆ ವಿವರ ನೀಡುತ್ತವೆ.

ಮುಗಳಿ ಅವರು 'ವಚನ' ಸಾಹಿತ್ಯ ಉಗಮದ ಬಗ್ಗೆ ಪ್ರಸ್ತಾಪಿಸುತ್ತಾ ಜೇಡರದಾಸಿಮಯ್ಯನೇ ಅಥವಾ ದೇವರದಾಸಿಮಯ್ಯನೇ? ಎಂಬುದರ ಬಗ್ಗೆ ವ್ಯಾಪಕವಾಗಿ ಚರ್ಚಿಸುತ್ತಾರೆ. "ಡಿ.ಎಲ್.ನರಸಿಂಹಾಚಾರ್ಯರ ಅಭಿಪ್ರಾಯದಂತೆ ಜೇಡರದಾಸಿಮಯ್ಯನ ಕಾಲ ೧೦೩೦ ಇರಬೇಕೆಂಬ ಹೇಳಿಕೆಯನ್ನು ಪ್ರಸ್ತಾಪಿಸುತ್ತಾರೆ. ಹಾಗೆಯೇ ಮುಂದುವರಿದು ವಿವಿಧ ವಿದ್ವಾಂಸರ ಹೇಳಿಕೆಗಳನ್ನು ಈ ರೀತಿ ಚರ್ಚಿಸಿದ್ದಾರೆ. ಗೋವಿಂದ ಪೈ ಅವರ ಹೇಳಿಕೆಯಂತೆ ಕ್ರಿ.ಶ. ೯೮೦ರಲ್ಲಿ ಹುಟ್ಟಿ

೧೦೪೦ರಲ್ಲೆ ಬದುಕಿರಬೇಕೆಂದು ಉಲ್ಲೇಖಿಸುತ್ತಾರೆ. ಅದೇ ರೀತಿ ಶ್ರೀಕಂಠಶಾಸ್ತ್ರಿಗಳು ದಾಸಿಮಯ್ಯ ೧೧ನೇ ಶತಮಾನದವನೆಂದು ತಿಳಿಸಿದರೆ, ಬಿ. ಶಿವಮೂರ್ತಿಶಾಸ್ತ್ರಿಗಳು ಇದುವರೆಗಿನ ಪುರಾಣ ಮತ್ತು ಚಾರಿತ್ರಿಕ ಆಧಾರಗಳಿಂದ ಪುರಾಣ ಪ್ರಸಿದ್ಧ ಶಂಕರದಾಸಿ, ದೇವರದಾಸಿಮಯ್ಯಗಳು ಬಸವೇಶ್ವರರಿಗಿಂತಲೂ ಪೂರ್ವಿಕರೆಂಬುದರ ಬಗ್ಗೆ ತೀರ್ಮಾನಿಸಿದರೆ, ಶ್ರೀನಿವಾಸಮೂರ್ತಿ ಅವರು ೧೨ನೇ ಶತಮಾನದ ಒಂದು ಶಾಸನದ ಆಧಾರದಿಂದ ಜೇಡರದಾಸಿಮಯ್ಯನ ಮಗ 'ಕಾಟಿಗೌಡ' ಎಂಬ ಉಲ್ಲೇಖ ಬರುವುದರಿಂದ ದಾಸಿಮಯ್ಯ ಬಸವಣ್ಣನ ಸಮಕಾಲೀನನೆಂದು"[೨೪] ಅಭಿಪ್ರಾಯಕ್ಕೆ ಬರುವಂತದ್ದನ್ನು ಚರ್ಚಿಸಿದ್ದಾರೆ. ಅದೇ ಮಾದರಿಯಲ್ಲಿ ಡಿ.ಎಲ್.ಎನ್. ಸಂಪಾದಿಸಿದ 'ಪಂಪ ರಾಮಾಯಣ ಸಂಗ್ರಹ' ಕೃತಿಯಲ್ಲಿಯೂ ಸಹ ನಾಗಚಂದ್ರನ ಕಾಲಗಣನೆಯನ್ನು ವಿವಿಧ ವಿದ್ವಾಂಸರು ಪರಿಪರಿಯಾಗಿ ತಿಳಿಯುವ ಕ್ರಮವೂ ಸಹ ಕುತೂಹಲ ಮೂಡಿಸುತ್ತದೆ.

ಮುಗಳಿ ಅವರು ಹಲವಾರು ಮಹನೀಯರ ಲೇಖನಗಳನ್ನು ಬಳಸಿಕೊಂಡು ಅದರಲ್ಲಿರುವ ಮುಖ್ಯ ಅಂಶಗಳನ್ನು ಹೆಕ್ಕಿ ತೆಗೆದು ಚರ್ಚಿಸಿದ್ದಾರೆ. ವಚನದ ವೈಶಿಷ್ಟ್ಯವನ್ನು ತಿಳಿಸುವ ಮುಗಳಿ ಅವರು ಎಸ್.ವಿ. ಪರಮೇಶ್ವರಭಟ್ಟರ ಬಸವಣ್ಣನವರ ವಚನಗಳ ರೂಪಾಂಶ ಎಂಬ ಲೇಖನದಲ್ಲಿ ಬಂದ ಈ ಮಾತನ್ನು ಪ್ರಸ್ತಾಪಿಸುತ್ತಾರೆ. "ಸ್ಥೂಲವಾಗಿ ಹೇಳುವುದಾದರೆ ಪುಟಾಣಿ ಪದಗಳ ಪುಟ್ಟಪುಟ್ಟ ವಾಕ್ಯಗಳ ರಚನೆ ಈ ವಚನಗಳ ವೈಶಿಷ್ಟ್ಯ. ಇವು ಅಕೃತಕ ಶೀಘ್ರಸ್ಫುರಣದ ಸ್ಫುಲಿಂಗಗಳಾದುದರಿಂದಲೇ ಇವು ಘನಿಸಿ ಘನಿಸಿ ಕಿಡಿಕಿಡಿಯಾಗಿ ಸಿಡಿದು ಬಂದಿವೆ. ಅಕೃತಕವಾದ ಶೀಘ್ರಸ್ಫುರಣ ಸಂಕ್ಷಿಪ್ತತೆಗೆ ಒಂದು ಕಾರಣವಾದರೆ ರೂಪಕ ಮುಖಾಂತರವಾದ ಸುಂದರ ನಿರೂಪಣ ಇನ್ನೊಂದು ಕಾರಣ. ಈ ರೂಪ ಸಂಕ್ಷಿಪ್ತತೆಗೆ ಪ್ರಾಸವೂ ಒಂದು ಪ್ರಬಲವಾದ ಕಾರಣವಾಗಿದೆ"[೨೫] ಎಂಬ ಹೇಳಿಕೆ ಪ್ರಸ್ತಾಪಿಸಿ ಚರ್ಚಿಸುತ್ತಾ ವಚನಕಾರ ಕೃತಿಗಳನ್ನು ಪರಿಚಯಿಸುತ್ತಾರೆ. ದೇವರ ಅಥವಾ ಜೇಡರದಾಸಿಮಯ್ಯನ–ವಚನಗಳು, ಅಲ್ಲಮಪ್ರಭುವಿನ ವಚನಗಳು, ಮಂತ್ರಗೋಪ್ಯ, ಬಸವಣ್ಣನ ವಚನಗಳು, ಮಂತ್ರಗೋಪ್ಯ, ಚನ್ನಬಸವಣ್ಣನ ವಚನಗಳು, ಕರುಣಹಸುಗೆ ಮಿಶ್ರಾರ್ಪಣ, ಪದಮಂತ್ರಗೋಪ್ಯ, ಅಕ್ಕಮಹಾದೇವಿ ವಚನಗಳು, ಯೋಗಾಂಗ ತ್ರಿವಿಧಿ, ಸೃಷ್ಟಿಯ ವಚನ, ಸಿದ್ಧರಾಮನ ವಚನಗಳು, ಮಿಶ್ರಸ್ತೋತ್ರದ ತ್ರಿವಿಧಿ, ಬಸವಸ್ತೋತ್ರದ ತ್ರಿವಿಧಿ, ತೋಂಟದ ಸಿದ್ಧಲಿಂಗೇಶ್ವರ ಷಟ್‌ಸ್ಥಲ ಜ್ಞಾನಸಾರಾಮೃತ, ನಿರಾಲಂಬಶರಣರ – ಅಖಂಡೇಶ್ವರ ವಚನ ಇತ್ಯಾದಿ ಪಟ್ಟಿ ನೀಡಲಾಗಿದೆ.

ಹಾಗೆಯೇ ಮುಂದುವರಿದು 'ರಗಳೆ' ಕುರಿತಂತೆ ಪ್ರಸ್ತಾಪಿಸುತ್ತಾ ಪಂಪನು ತನ್ನ ಆದಿಪುರಾಣದಲ್ಲಿ ಮಂದಾನಿಲ ರಗಳೆಯನ್ನು ಬಳಸಿಕೊಂಡಿರುವುದನ್ನು ಚರ್ಚಿಸುತ್ತಾರೆ. ಅದಕ್ಕೂ ಮುಂಚಿತವಾಗಿ "ಗುಣನಂದಿ ನಾಗವರ್ಮ–೧ ಇವರ ಚಂಪೂ ಕೃತಿಗಳಲ್ಲಿಯೂ ಬಂದಿರಬೇಕು. ನಾಗವರ್ಮನ ಕಾವ್ಯಾವಲೋಕನದಲ್ಲಿ ಬಂದ ಬಾಜನಗಬ್ಬದ ಲಕ್ಷಣದಲ್ಲಿ ಹಲವು ತೆರದ ಪದ್ಯ ಮತ್ತು ಲಲಿತವಾದ ಪದ್ಧತಿಕೆ ಇವುಗಳ ಸಮಾವೇಶವಿದೆ. ಕವಿರಾಜಮಾರ್ಗಕಾರನು ಲಕ್ಷಣಿಸಿದ ಚತ್ತಾಣಕ್ಕೂ ಈ

ಬಾಜನೆಗಬ್ಬಕ್ಕೂ ಒಂದು ಹೋಲಿಕೆ ಇರುವಂತೆ ಕಾಣುತ್ತದೆ. 'ಪದ್ಧತಿಕೆ' ಇದು ರಗಳೆಯ ಒಂದು ಪ್ರಕಾರಕ್ಕೆ ಸಂಸ್ಕೃತ ಪದವಾಗಿರುವುದರಿಂದ ಚತ್ತಾಣ ಮತ್ತು ಬಾಜನೆಗಬ್ಬಗಳಲ್ಲಿ ಇಂತಹ ರಚನೆಗಳ ಸೇರ್ಪಡೆಯಾಗಿರಬೇಕೆಂಬ"[೨೬] ಅಭಿಪ್ರಾಯಕ್ಕೆ ಬರುತ್ತಾರೆ.

ರಗಳೆಯು ಅಚ್ಚಗನ್ನಡದ ಛಂದೋರೂಪವೇ ಅಥವಾ ಸಂಸ್ಕೃತ, ಪಾಕೃತ, ಛಂದಸ್ಸಿನ ಫಲವೆ? ಎಂಬ ಪ್ರಶ್ನೆ ಹಾಕಿಕೊಳ್ಳುತ್ತಾ ಪಂಪನ ಕುರಿತು ಅವನ ಕಾವ್ಯಗಳಲ್ಲಿ ಜಾನಪದ ಪ್ರಭಾವವನ್ನು ಗುರುತಿಸಬಹುದು. ಮುಖ್ಯವಾಗಿ ರಗಳೆ ಇದು ಅಚ್ಚಗನ್ನಡದ ಜಾನಪದ ಛಂದೋರೂಪವಿರಬೇಕೆಂಬುದೂ ಅದು ಹಲವು ಟಿಸಿಲಾಗಿ ಬೆಳೆಯಿತೆಂದು, ಮಾರ್ಗಕಾವ್ಯದಲ್ಲಿ ಅದೇ ಶಿಷ್ಟಭಾಷೆಯಲ್ಲಿ ಜನ್ಮತಾಳಿತೆಂದು ಹೇಳಬಹುದು. ರಗಳೆ ಇದು 'ರಘಟಾ' ಎಂಬ ಸಂಸ್ಕೃತ ಶಬ್ದದ ಅಪಭ್ರಂಶ ಎಂಬುದರಲ್ಲಿ ಯಾವ ಅಭಿಪ್ರಾಯವೂ ಇಲ್ಲ. ಒಟ್ಟಿನಲ್ಲಿ ಚಂಪೂ ಕಾವ್ಯಗಳಲ್ಲಿ ದೇಸಿ ಛಂದಸ್ಸಿನ ತ್ರಿಪದಿ ಅಕ್ಕರ ಷಟ್ಪದಿಗಳು ಬಂದಿರುವಂತೆ ರಗಳೆಯೂ ಬಂದು ವೈವಿಧ್ಯವನ್ನು ಹೆಚ್ಚಿಸಿದೆ ಮಾತ್ರವಲ್ಲದೇ ಸಂದರ್ಭೋಚಿತ್ಯವನ್ನು ಸಾಧಿಸಿದೆ. ಅದರ ಒಂದು ಪ್ರಕಾರವು ಮಾತ್ರ ಪ್ರಾಕೃತದಿಂದ ಪ್ರಭಾವಿತವಾಗಿದೆ ಎಂಬುದನ್ನು ಒಪ್ಪಿಕೊಳ್ಳಬೇಕೆಂಬ ನಿರ್ಣಯಕ್ಕೆ ಬರುತ್ತಾರೆ. ರಗಳೆ ರೂಪಕವನ್ನು ಹೆಚ್ಚು ಬಳಸಿದ ಹರಿಹರನ ಬಗ್ಗೆ ಪ್ರಸ್ತಾಪಿಸುತ್ತಾರೆ. ಕೆರೆಯ ಪದ್ಮರಸ ಬರೆದ ದೀಕ್ಷಾಬೋಧೆಯಲ್ಲಿ(ಲಲಿತ, ಮಂದಾನಿಲ) ರಗಳೆ ಬಳಸಿದರೆ ಶಂಕರಲಿಂಗನ ಕಲಿಗಣನಾಥನ ರಗಳೆ, ವಿರಶೈವ ರಗಳೆ, ಷಡಕ್ಷರ ರಗಳೆ(ಲಲಿತ–ಉತ್ಸಾಹ), ಪಾಲ್ಕುರಿಕೆಯ ಸೋಮನಾಥನ ಚನ್ನಬಸವ ಸ್ತೊತ್ರದ ರಗಳೆ, ಶರಣಬಸವ ರಗಳೆ(ಉತ್ಸಾಹ), ನಿಜಗುಣಶಿವಯೊಗಿಯು ಪರಮಾರ್ಥಗೀತೆ(ಸಮ್ಮಿಶ್ರ ಪದ್ಯ–ಲಲಿತ) ರಗಳೆ ಇತ್ಯಾದಿ ಕವಿಕೃತಿಗಳ ವಿವರ ದೊರೆಯುತ್ತದೆ.

'ಷಟ್ಪದಿ'ಯ ಬಳಕೆಯು ಕನ್ನಡ ಸಾಹಿತ್ಯದಲ್ಲಿ ೧೪ನೇ ಶತಮಾನದಿಂದ ೧೭ನೇ ಶತಮಾನದವರೆಗೆ ಹೆಚ್ಚು ಕಂಡುಬರುವುದರಿಂದ ಸಾಹಿತ್ಯ ಚರಿತ್ರೆಕಾರರು ಇದನ್ನು ಷಟ್ಪದಿಯುಗವೆಂದು ಕರೆದಿದ್ದಾರೆ. ಹರಿಹರ ರಗಳೆಯಲ್ಲಿಯೇ ಹೆಚ್ಚು ಕಾವ್ಯ ರಚಿಸಿ ಮುಂಚೂಣಿಗೆ ಬಂದರೆ ಅವನ ಅಳಿಯನಾದ ರಾಘವಾಂಕ ಷಟ್ಪದಿಗಳನ್ನು ಹೇರಳವಾಗಿ ತನ್ನ ಕಾವ್ಯಗಳಲ್ಲಿ ಬಳಸಿ ಅದರ ಹಿಡಿತವನ್ನು ಸಾಧಿಸಿದ್ದರಿಂದ ಅವನಿಗೆ ಷಟ್ಪದಿಬ್ರಹ್ಮ ಎಂದು ಕರೆಯಲಾಗಿದೆ. ರಾಘವಾಂಕನು ಚಿತ್ರಿಸಿದ ಹರಿಶ್ಚಂದ್ರ ಕಾವ್ಯದಲ್ಲಿ ವಸಿಷ್ಟ–ವಿಶ್ವಾಮಿತ್ರರ ಸಂವಾದ, ಹರಿಶ್ಚಂದ್ರ–ಹೊಲತಿಯರ ಸಂವಾದ, ಹರಿಶ್ಚಂದ್ರ–ವಿಶ್ವಾಮಿತ್ರರ ಸಂವಾದ, ಹರಿಶ್ಚಂದ್ರ–ನಕ್ಷತ್ರಿಕನ ಸಂವಾದ ಇತ್ಯಾದಿ ಈ ಎಲ್ಲಾ ಸಂವಾದಗಳಲ್ಲಿ ಪಾಪಪ್ರಜ್ಞೆಯಿಂದ ಕತೆಯನ್ನು ಮುಂದುವರಿಸಿಕೊಂಡು ಹೋಗುವಂತದ್ದಾಗಿದೆ. "ಬಡತನ ಹೊತ್ತನೆ ದೊರಕಿ ಫಲವೇನು ಅಕ್ಕಕ್ಕು ಬಚ್ಚಲುದಕಂ ತಿಳಿದಹಾರ ಮೀಹಕ್ಕೆ ಯೋಗ್ಯಂ ಹಾಡನೊಲಿದಾಲಿಸಿದ ಕಿವಿಗೆ ಹೊಲೆಯಿಲ್ಲ ಇಲ್ಲಿ ಒಂದೊಂದು ಕಡೆದಿಟ್ಟ ಮಾತು, ಏನು, ಯೋಗ್ಯ, ಇಲ್ಲ ಇವುಗಳ ಪುನರುಕ್ತಿ, ಅಲ್ಲಲ್ಲಿ 'ಅಕ್ಕಕ್ಕು' ಇಂಥ ಪದಳಿಂದ ಅಣಕದ ಕಾಕು –ಇವೆಲ್ಲ ಕೂಡಿ ಅಭಿನೇಯಗುಣ

ಹೊಂದಿ ನಾಟಕೀಯ ಪರಿಣಾಮವನ್ನು ಜನಮನದ ಮೇಲೆ ಉಂಟುಮಾಡುವಂತೆ"[೨೭] ವಾರ್ಧಕ ಷಟ್ಪದಿಯಲ್ಲಿ ಬಳಸಿದ್ದಾನೆ ಎಂಬುದನ್ನು ತಿಳಿಸುತ್ತಾರೆ.

ರಾಘವಾಂಕನ ವೀರೇಶ ಚರಿತೆ ಉದ್ದಂಡ ಷಟ್ಪದಿಯಲ್ಲಿ ಬಳಸಿದ (ಮೀಸಲು) ಕಾವ್ಯವಾಗಿದೆ. ಕುಮುದೇಂದು ರಾಮಾಯಣ ಎಲ್ಲ ಜಾತಿಯ ಷಟ್ಪದಿ, ಕೆಲವು ರಗಳೆಗಳಲ್ಲಿ ಬರೆದ ವಿವರ ತಿಳಿಸುತ್ತಾರೆ. ಭೀಮಕವಿ–ಬಸವಪುರಾಣ(ಭಾಮಿನಿ), ಪದ್ಮಣಾಂಕ–ಪದ್ಮರಾಜಪುರಾಣ(ವಾರ್ಧಕ), ಕುಮಾರವ್ಯಾಸಭಾರತ–ಗದುಗಿನ ಭಾರತ(ಭಾಮಿನಿ), ಕುಮಾರವಾಲ್ಮೀಕಿ–ತೊರವೆರಾಮಾಯಣ(ಭಾಮಿನಿ), ೩ನೇ ಮಂಗರಸ–ಜಯನೃಪಕಾವ್ಯ(ಪರಿವರ್ಧಿನಿ), ಕನಕದಾಸ–ನಳಚರಿತ್ರೆ, ರಾಮಧಾನ್ಯಚರಿತ್ರೆ, ಹರಿಭಕ್ತಸಾರ(ಭಾಮಿನಿ), ವಿರೂಪಾಕ್ಷಪಂಡಿತ–ಚೆನ್ನಬಸವಪುರಾಣ(ವಾರ್ಧಕ) ಷಟ್ಪದಿ ಕೃತಿಗಳನ್ನು ಪರಿಚಯಿಸುತ್ತಾರೆ.

ಕುಮಾರವ್ಯಾಸನು ಭಾಮಿನಿ ಷಟ್ಪದಿಯಲ್ಲಿ ರಚಿಸಿದ 'ಕುಮಾರವ್ಯಾಸಭಾರತ' ಕೃತಿಯಲ್ಲಿ ಬರುವ ವೀರ, ಕರುಣ, ಭಕ್ತಿರಸಗಳಿಂದ ಕೂಡಿದ ಸಭಾಪರ್ವದ ಒಂದು ಸಂದರ್ಭ ಈ ರೀತಿ ಇದೆ.

> "ಬಿಗಿದ ರೆಂಚೆಯ ಹೊಮ್ಮಿಣಿಯ ಹೊರ
> ಜಿಗಳ ಝೂಡಿಯ ಪಕ್ಕ ಘಂಟೆಯ
> ಝುಗೆಯ ಮೊಗರಂಬರದ ವಿಳಾಸದ ಮಣಿಯ ಝುಳವಟೆಯ
> ಬಿಗಿವ ಕೂರಂಕುಶದ ಮಾವಂ
> ತಿಗನ ಸನ್ನೆಗೆ ಕುಸಿದ ದಂತಿಯ
> ಹೆಗಲ ಹೊಂಗದ್ದುಗೆಗೆ ಬಿಜಯಂಗೈದನದನೀಶ"[೨೮]

ಈ ರೀತಿಯಾದ ಕಾವ್ಯಗಳ ಪ್ರಮುಖವಾದ ಸಂದರ್ಭಗಳನ್ನು ಗುರುತಿಸುತ್ತಾರೆ. ಅದರಂತೆ 'ತ್ರಿಪದಿ' ನಮಗೆ ಉಪಲಬ್ಧವಾದ ಅತ್ಯಂತ ಪ್ರಾಚೀನ ಛಂದೋರೂಪ. ಇದು ಕ್ರಿ.ಶ. ೭೦೦ರ ಬಾದಾಮಿ ಶಾಸನ ಮೂರು ಪದ್ಯಗಳಲ್ಲಿದೆ. ತ್ರಿಪದಿಗೆ ತ್ರಿಪದಿ ಎಂದು ಉಲ್ಲೇಖವಾಗಿರುವಂತಹದ್ದು ಕವಿರಾಜಮಾರ್ಗದಲ್ಲಿ ಬಂದಿರುವ ಬಗ್ಗೆ ಚರ್ಚಿಸುತ್ತಾರೆ. ಕ್ರಿ.ಶ. ೭ನೇ ಶತಮಾನದಿಂದೀಚೆಗೆ ಶಿಲಾಲೇಖಗಳಲ್ಲಿಯೂ ತ್ರಿಪದಿ ಪದ್ಯಗಳಿವೆ. ೧೨ನೇ ಶತಮಾನ ಮಧ್ಯ ಅಂದರೆ ವಚನಕಾರರ ಕಾಲದವರೆಗೆ ತ್ರಿಪದಿಗೆ ಬಹುಶಃ ಅಂಶಗಣ ನಿಯತವಾಗಿದೆ ಎಂಬುದನ್ನು ಗಮನಿಸಬೇಕು. ೧೨ನೇ ಶತಮಾನದ ಮಧ್ಯದಿಂದ ಅದು ಅಂಶದಿಂದ ವೇಗವಾಗಿ ಮಾತ್ರಾಗಣಕ್ಕೆ ತಿರುಗತೊಡಗಿತು. ಈ ಸಂಧಿಕಾಲದಲ್ಲಿ ಮಾತ್ರಾಗಣದ ನಿಯತಿ ಹೆಚ್ಚಾಗಿ ಅಂಶಗಣವು ಅಂಶತಃ ಮಾತ್ರ ಅಲ್ಲಲ್ಲಿ ಅಪರೂಪವಾಗಿ ಕಾಣಿಸಿಕೊಂಡಿತು. ಚಿಕ್ಕದಾದರೂ ತ್ರಿಪದಿಯಲ್ಲಿ ಪೂರ್ತಿಯಾಗಿರುವ ಮೊದಲನೆಯ ಕೃತಿ ಕೂಡ ೧೨ನೇ ಶತಮಾನದ ಮಧ್ಯಕಾಲದ್ದೇ ಆದ ಅಕ್ಕಮಹಾದೇವಿಯ ಯೋಗಾಂಗ ತ್ರಿವಿಧಿ, ಇದರಲ್ಲಿ ಸಂಧಿಕಾಲದ ತ್ರಿಪದಿಯ ಗುರುತುಗಳಾಗಿರುತ್ತವೆ. ಮುಂದೆ ಬರುಬರುತ್ತ ಅದು ನೂರಕ್ಕೆ

೯೦ರಷ್ಟು ಮಾತ್ರಾಗಣವಾಗಿ ಪರಿಣಮಿಸಿ ಸರ್ವಜ್ಞನ ವಚನಗಳಲ್ಲಿ ಮಹತ್ವ ಪಡೆಯಿತು ಎಂದು ಚರ್ಚಿಸುತ್ತಾ ಸರ್ವಜ್ಞನ ವಚನಗಳನ್ನು ಪರಿಚಯಿಸುತ್ತಾರೆ.

"ಒಬ್ಬನಲ್ಲದೆ ಜಗಕೆ ಇಬ್ಬರುಂಟೇ ಮತ್ತೆ
ಒಬ್ಬ ಸರ್ವಜ್ಞ ಕರ್ತನು ಜಗಕೆಲ್ಲ
ಒಬ್ಬನೇ ದೈವ ಸರ್ವಜ್ಞ"[೨೯]

ಸರ್ವಜ್ಞನ ಎಲ್ಲ ತ್ರಿಪದಿಗಳ ರಚನೆಯಲ್ಲಿ ಒಂದು ಸಾಮಾನ್ಯ ಲಕ್ಷಣ ಕಂಡುಬರುತ್ತದೆ. ಅದೇನೆಂದರೆ ಮೊದಲನೆಯ ಪಾದದಲ್ಲಿ ಐದೈದು ಮಾತ್ರೆಗಳ ಗಣ ವಿಭಾಗ ಮತ್ತು ಆಂತರಿಕ ಪ್ರಾಸ ಇವು ತಪ್ಪುವುದಿಲ್ಲ. ಹಾಗೆಯೇ ಮೂರು ಪಾದಗಳಲ್ಲಿ ದ್ವಿತೀಯಾಕ್ಷರ ಪ್ರಾಸವೂ ತಪ್ಪುವುದಿಲ್ಲ ಎಂಬುದನ್ನು ತಿಳಿಸುತ್ತಾ ಸರ್ವಜ್ಞನ ತ್ರಿಪದಿಗಳು ಚಿಕ್ಕವಾದರೂ ಅವುಗಳ ಸುಭಾಷಿತದಂತಹ ನುಡಿ ಹೊಂದಿದ್ದರು ಜನರ ಮನಸ್ಸಿನಲ್ಲಿ ಅಚ್ಚಳಿಯದೆ ಉಳಿಯುವಂತವುಗಳಾಗಿವೆ.

ಮುಗಳಿ ಅವರು 'ಸಾಂಗತ್ಯ'ದ ಕುರಿತು ಚರ್ಚಿಸುವ ಸಂದರ್ಭದಲ್ಲಿ ಕ್ರಿ.ಶ ೧೪೦೦ರಲ್ಲಿ ರಚನೆಗೊಂಡಿತ್ತೆನ್ನಲಾದ ದೇಪರಾಜನ ಸೊಬಗಿನ ಸೋನೆ ಸಾಂಗತ್ಯದ ಮೊದಲ ಕೃತಿಯೆಂದು ಒಪ್ಪಿಕೊಳ್ಳಲಾಗಿದೆ. ಅದಕ್ಕೂ ಮೊದಲು ಎಲ್ಲಿಯೂ ಇದರ ಪ್ರಸ್ತಾಪ ಕಂಡುಬರುವುದಿಲ್ಲ ಎಂಬುದರ ಬಗ್ಗೆ ಪ್ರಸ್ತಾಪಿಸುತ್ತಾರೆ. ಗೀತಿಕೆಯ ಎರಡು ಪಾದಗಳ ಅಥವಾ ಪಿರಿಯಕ್ಕರದ ಎರಡು ಪಾದಗಳ ರೂಪಾಂತರವೇ ಸಾಂಗತ್ಯವಾಗಿ ತೋರುವುದು ಎಂದು ಕನ್ನಡ ಕೈಪಿಡಿಕಾರರು ಅಭಿಪ್ರಾಯಕ್ಕೆ ಬರುತ್ತಾರೆ. ಛಂದೋಂಬುಧಿಯ ಪ್ರಕಾರ ೨, ೬ನೇ ಸ್ಥಾನಗಳಲ್ಲಿ ಬ್ರಹ್ಮಗಣ, ಉಳಿದೆಡೆಗೆ ಯಾವ ಗಣವೂ ಇರಬಹುದು ಎಂದು ಗೀತೆಯ ಲಕ್ಷಣವೆಂದು ಕಾಣುತ್ತದೆ. ಲಕ್ಷ್ಯಪದ್ಯವನ್ನು ನೋಡಿದರೆ ಗೀತಿಕೆಯ ಪಾದಗಳು ನಾಲ್ಕು ಅಂದರೆ ಅದು ಚತುಷ್ಪದಿಯಾಗುತ್ತದೆ. ಪ್ರತಿ ಎರಡು ಪಾದಗಳಲ್ಲಿ ಏಳು ಗಣಗಳಿರುತ್ತವೆ. ಗೀತಿಕೆ ಎಂಬ ಹೆಸರಿನಿಂದ ಇದು ಹಾಡುಗಬ್ಬ ಎನ್ನಬಹುದೆಂದು ಅಭಿಪ್ರಾಯಕ್ಕೆ ಬರುತ್ತಾರೆ.

ಸಾಂಗತ್ಯದಲ್ಲಿ ರಚಿಸಿದ ಕೃತಿ ಕವಿಗಳ ವಿವರವನ್ನು ತಿಳಿಸುತ್ತಾರೆ. ಅದು ಈ ರೀತಿ ಇದೆ. ಕಲ್ಯಾಣಕೀರ್ತಿಯ ಕಾಮನಕಥೆ, ವಿಜಯಣ್ಣನ ದ್ವಾದಶಾನುಪ್ರೇಕ್ಷೆ, ಶಿಶುಮಾಯಣನ ಅಂಜನಕಥೆ, ನೇಮರಸನ ತ್ರಿಪುರದಹನ ಸಾಂಗತ್ಯ, ನಿಜಗುಣಶಿವಯೋಗಿಯ ಪರಮಾನುಬೋದೆ, ಮೂರನೇ ಮಂಗರಸನ ನೇಮಿಜಿನೇಶ ಸಂಗತಿ, ನಂಜುಂಡನ ಕುಮಾರರಾಮಚರಿತೆ, ಸಾಳ್ವನ ವೈದ್ಯಸಾಂಗತ್ಯ, ಕನಕದಾಸನ–ಮೋಹನ ತರಂಗಿಣಿ, ರತ್ನಾಕರವರ್ಣಿಯ ಭರತೇಶ ವೈಭವ, ಗೋವಿಂದ ವೈದ್ಯನ ಕಂಠೀರವ ನರಸರಾಜವಿಜಯ, ಸಂಚಿ ಹೊನ್ನಮ್ಮನ ಹದಿಬದೆಯ ಧರ್ಮ ಕೃತಿಗಳನ್ನು ಪರಿಚಯಿಸಿ ಸಾಂಗತ್ಯ ಛಂದಸ್ಸಿನ ಬಗ್ಗೆ ವಿವರಿಸಿದ್ದಾರೆ.

'ಗೀತ' ಸಾಹಿತ್ಯದ ಬಗ್ಗೆ ತಿಳಿಸುವ ಮುಗಳಿ ಅವರು ತ್ರಿಪದಿ, ಸಾಂಗತ್ಯ ಮುಂತಾದ ವರ್ಣಕ ಛಂದೋರೂಪಗಳಲ್ಲಿದ್ದ ಪದ್ಯಗಳು ಸುಲಭವಾಗಿ ಗೀತರೂಪಕ್ಕೆ ತಿರುಗುತ್ತಿದ್ದವು. ನಮಗೆ ದೊರೆತಿರುವ

ಸಾಂಗತ್ಯವನ್ನು ಪರಿಶೀಲಿಸಿದರೆ ೧೨ನೇ ಶತಮಾನದ ಉತ್ತರಾರ್ಧದಲ್ಲಿ ಮೊಟ್ಟಮೊದಲು ನಮಗೆ ಗೀತರೂಪದ ನಿರ್ದೇಶನಗಳು ಲಭಿಸುತ್ತವೆ. ಅಲ್ಲಮಪ್ರಭು, ಬಸವಣ್ಣ, ಚನ್ನಬಸವಣ್ಣ, ಅಕ್ಕಮಹಾದೇವಿ ಇವರು ರಚಿಸಿದ ಮಂತ್ರಗೋಪ್ಯದ ಮತ್ತು ಭಕ್ತಿಭಾವದ ಹಾಡುಗಳು ಉಪಲಬ್ಧವಾಗಿವೆ. ಕಾಲಜ್ಞಾನ ವಚನಗಳು ಕೆಲವರ ಕೃತಿಗಳಲ್ಲಿ ಗೀತರೂಪ ತಾಳಿರುತ್ತವೆ. ಅಲ್ಲಮಪ್ರಭುವಿನ ಮಂತ್ರಗೋಪ್ಯದಲ್ಲಿ ೨೭ ಪದ್ಯಗಳಿವೆ ಎಂದು ಕವಿಚರಿತೆಯಲ್ಲಿದೆ. ಅವುಗಳ ಉದಾಹರಣೆ ನೋಡಿದರೆ ಪಂಚಮಾತ್ರಾಲಯದ ಸೀಸ ಪದ್ಯದಲ್ಲಿ ಬೆಡಗಿನ ವಚನಗಳನ್ನು ಪವಣಿಸಿದಂತೆ ಅವು ಕಾಣುತ್ತವೆ. ಅವನ್ನೇ ಪಲ್ಲವಿಯೊಂದನ್ನು ಸೇರಿಸಿ ಹಾಡಿಕೊಳ್ಳುವ ಪದ್ಧತಿಯಿರಬೇಕು. ಮುಂದೆ ಅನೇಕ ಗೀತೆಗಳಲ್ಲಿ ನುಡಿ-ನುಡಿಗೆ ಸೀಸ ಪದ್ಯದ ಈ ಧಾಟಿಯೆ ಕಣ್ಣಿಗೆ ಬೀಳುತ್ತದೆ. ಇದಲ್ಲದೆ ಅಲ್ಲಮಪ್ರಭುವಿನ ಗುಹೇಶ್ವರನೆಂಬ ಅಂಕಿತದಲ್ಲಿ(ಸಂಖ್ಯೆ ೧೯೫೫-೧೩೨೧) ೨೬ ಗೀತೆಗಳು ಅಚ್ಚಾಗಿರುತ್ತವೆಂದು ಹೇಳುತ್ತಾರೆ. ಈ ಹಾಡುಗಳು ಛಂದಸ್ಸಿನ ದೃಷ್ಟಿಯಿಂದ ಬರೆದುವಲ್ಲ, ಸಂಗೀತ ದೃಷ್ಟಿಯಿಂದ ಬರೆದವುಗಳಾಗಿರುವುದರಿಂದ ಅವುಗಳಲ್ಲಿ ತಾಳ ಮತ್ತು ಲಯಗಳೇ ಪ್ರಧಾನ ಆ ಹಾಡುಗಳೆಲ್ಲ ಮುಖ್ಯವಾಗಿ ಮಾತ್ರಾಗಣಗಳುಳ್ಳವುಗಳು. ಎಲ್ಲೋ ಒಂದು ಕಡೆ ಹಾಡುಗಳಲ್ಲಿ ಮಾತ್ರ ಅಂಶಗಣದ ಗತಿ ಇದ್ದಂತೆ ಕಂಡುಬರುತ್ತದೆ.

ಗೀತ ರಚನಕಾರರ ಕೃತಿ ಕವಿಗಳ ವಿವರವನ್ನು ಈ ರೀತಿ ಪ್ರಸ್ತಾಪಿಸಿರುವುದನ್ನು ಅರಿಯಬಹುದು. ನರಹರಿತೀರ್ಥರ ಕೀರ್ತನೆಗಳು, ಗುರುಬಸವನ ಅವಧೂತಗೀತೆ, ನಿಜಗುಣಶಿವಯೋಗಿಯ ಕೈವಲ್ಯ ಪದ್ಧತಿ, ಅದೇ ರೀತಿ ವ್ಯಾಸರಾಯ, ಪುರಂದರದಾಸ, ಕನಕದಾಸ, ವಿಜಯದಾಸ, ಜಗನ್ನಾಥದಾಸರು ಕೀರ್ತನೆಗಳನ್ನು ರಚಿಸಿದರೆ, ರತ್ನಾಕರವರ್ಣಿ ಅಣ್ಣನ ಪದಗಳು, ವಾದಿರಾಜ ಸ್ವಪ್ನಗದ್ಯ, ಲಕ್ಷ್ಮೀಶೋಭಾನೆ, ಕೀರ್ತನೆಗಳು, ಚಿಕ್ಕದೇವರಾಜ ಗೀತಗೋಪಾಲ, ಶರೀಫ್‌ಸಾಹೇಬ ತತ್ವಪದಗಳು ರಚಿಸಿದ ವಿವರ ಒಳಗೊಂಡಿದೆ.

ಈ ಕೃತಿಯು ಮುಖ್ಯವಾಗಿ ಮುಗಳಿ ಅವರು ತೀರ ಪ್ರಾಚೀನ ರೂಪಗಳಾದ ಬೆದೆಂಡೆ-ಚತ್ತಾಣ ಮುಂತಾದ ಸಾಹಿತ್ಯ ರೂಪಗಳಿಂದ ಮೊದಲು ಮಾಡಿ ಚಂಪೂ, ಕಂದವೃತ್ತ, ಶತಕ-ಅಷ್ಟಕ, ವಚನ, ಇತರ ಗದ್ಯ, ರಗಳೆ, ಷಟ್ಪದಿ, ತ್ರಿಪದಿ ಸಾಂಗತ್ಯ, ಗೀತ ಸಾಹಿತ್ಯರೂಪಕಗಳ ಕುರಿತಂತೆ ವಿಮರ್ಶೆಗೆ ಒಳಪಡಿಸಲಾಗಿದೆ. ಆಯಾ ರೂಪಗಳ ಸಂದರ್ಭ, ಅವುಗಳ ಲಕ್ಷಣಗಳು ಅದಕ್ಕೂ ಅಂದಿನ ಕಾಲಮಾನಕ್ಕೂ ಸಂಬಂಧ ಕುರಿತು ಆಯಾ ಕವಿಗಳ ಮನೋಧರ್ಮ, ವ್ಯಕ್ತಿತ್ವ ಆಶಯ, ಅವರ ಕೃತಿಗಳಲ್ಲಿ ಅವು ಪಡೆದ ಮಹತ್ವ ಕುರಿತು ವಿವರಿಸಿ ವಿಮರ್ಶಿಸಲಾಗಿದೆ. ಅದೇ ರೀತಿ ಪ್ರಾಚೀನ ಕನ್ನಡ ಸಾಹಿತ್ಯ ಚರಿತ್ರೆಯನ್ನು ಅವಲೋಕಿಸಿದಾಗ ಕಾಲಾನುಕ್ರಮವಲ್ಲದೆ ಈ ರೀತಿ ರೂಪಾನುಕ್ರಮವನ್ನೂ ಅನುಸರಿಸಿದರೆ ಕನ್ನಡ ಸಾಹಿತ್ಯದ ಪೂರ್ಣಚಿತ್ರವು ದೊರೆಯುತ್ತದೆ. ಅಂದಂದಿನ ವಿಚಾರ ಪ್ರವಾಹಗಳು ಮತ್ತು ಆಂದೋಲನಗಳು ಸಾಹಿತ್ಯದ ದೃಷ್ಟಿ, ವಿಷಯ ಆಯಾಮಗಳು ಬದಲಿಸಿದಂತೆ ಸಾಹಿತ್ಯ ರೂಪ, ಶೈಲಿಗಳನ್ನು ಬದಲಿಸುತ್ತವೆ ಎಂಬುದನ್ನು ಈ ಕೃತಿಯಿಂದ ಕಂಡುಕೊಳ್ಳಲಾಗಿದೆ.

ಈ ಕೃತಿಯಲ್ಲಿ ಚಂಪೂ ಕಂದವೃತ್ತ, ಶತಕ–ಅಷ್ಟಕ, ಇವುಗಳಲ್ಲಿ ಸಂಸ್ಕೃತ ಪ್ರಭಾವವಿರುವುದು ನಿಜವಾದರೂ ಚಂಪೂರೂಪವು ಕನ್ನಡದ ಸೃಷ್ಟಿಯಾಗಿರಬಹುದೆಂದು ಅದಕ್ಕೆ ಸಂಬಂಧಿಸಿದ ಪ್ರಕರಣದಲ್ಲಿ ನಾವು ವಿವೇಚಿಸಿದ್ದೇವೆ. ವಚನರೂಪವು ಕನ್ನಡದ ಅನನ್ಯವಾದ ಅಭಿವ್ಯಕ್ತಿ ಮಾಧ್ಯಮವೆಂಬುದನ್ನು ಸ್ಪಷ್ಟಪಡಿಸುತ್ತಾರೆ. ರಗಳೆ, ಷಟ್ಪದಿ, ತ್ರಿಪದಿ, ಸಾಂಗತ್ಯ, ಗೀತ ಈ ಸಾಹಿತ್ಯ ರೂಪಗಳು ಹೆಚ್ಚಾಗಿ ಕನ್ನಡ ಜನಪದ ಸಾಹಿತ್ಯದಿಂದ ಪ್ರೇರಣೆ ಹೊಂದಿ ಕನ್ನಡ ಛಂದಸ್ಸಿನ ಆವಿಷ್ಕಾರಗಳಾಗಿ ಕನ್ನಡ ಕಾವ್ಯಕ್ಕೆ ಮಹತ್ವವನ್ನು ತಂದುಕೊಟ್ಟಿವೆ ಎಂಬ ಅಭಿಪ್ರಾಯವು ಈ ಕೃತಿಯಿಂದ ತಿಳಿದುಬರುತ್ತದೆ. "ಛಂದೋರೂಪದ ಯಾವುದೇ ಲಕ್ಷಣವನ್ನು ಮುಗಳಿ ಅವರು ಕಾವ್ಯದ ಭಾಷಾಸಂದರ್ಭದಲ್ಲಿ ಗುಣವೋ ದೋಷವೋ ಆಗುವುದನ್ನು ಅವರು ಗುರುತಿಸುತ್ತಾರೆ. ಎಷ್ಟೇ ಪ್ರಸಿದ್ಧನಾದ ಕವಿಯೇ ಇರಲಿ ಛಂದಸ್ಸಿನ ಬಳಕೆಯಲ್ಲಿ ಎಡವಿದರೆ ಮುಗಳಿ ಅವರು ಗುರುತಿಸುತ್ತಾರೆ"[೩೦] ಎಂದು ಎಚ್.ಎಸ್.ರಾಘವೇಂದ್ರರಾವ್ ಅವರು ಪ್ರಸ್ತಾವನೆಯಲ್ಲಿ ತಿಳಿಸಿದ್ದಾರೆ. ಈ ಹೇಳಿಕೆ ಒಪ್ಪಬಹುದಾಗಿದೆ. ಏಕೆಂದರೆ ಮುಗಳಿ ಅವರು ತಮ್ಮ ಕಾವ್ಯದಲ್ಲಿಯೂ ಛಂದಸ್ಸಿನ ಪ್ರಯೋಗ ಮಾಡಿದ್ದಾರೆ.

೪.೩. ಕನ್ನಡ ಸಾಹಿತ್ಯ ಇತಿಹಾಸ

ರಂ.ಶ್ರೀ.ಮುಗಳಿ ಅವರು ಈ ಕೃತಿಯನ್ನು ಕೇಂದ್ರ ಸಾಹಿತ್ಯ ಅಕಾಡೆಮಿ ಯೋಜನೆಗೊಳಪಟ್ಟು ಅದರ ಗುರಿ–ಉದ್ದೇಶಗಳಿಗನುಗುಣವಾಗಿ ಬರೆದಿರುವುದಾಗಿ ಮುನ್ನುಡಿಯಲ್ಲಿ ಹೇಳಿಕೊಂಡಿದ್ದಾರೆ. ಪ್ರಮುಖವಾಗಿ ಭಾರತೀಯ ಭಾಷೆಯಲ್ಲಿಯ ಸಾಹಿತ್ಯದ ಇತಿಹಾಸವನ್ನು ಆಯಾ ಭಾಷೆಯಲ್ಲಿ ಮತ್ತು ಇತರ ಭಾಷೆಗಳಲ್ಲಿ ಪ್ರಕಟಿಸುವುದು ತುಂಬಾ ಮಹತ್ವದ ಕಾರ್ಯವಾಗಿದೆ. "ಈ ಕಾರ್ಯ ಪೂರ್ಣಗೊಂಡಾಗ ಭಾಷಾಭೇದ, ಲಿಪಿಭೇದ, ಪರಿಸರಭೇದ ಇವುಗಳಿಂದ ಮರೆಯಾದ ಭಾರತೀಯ ಸಾಹಿತ್ಯದ ಏಕಾತ್ಮತೆಯ ದರ್ಶನವಾಗುವುದು ಭಾರತೀಯ ಐಕ್ಯಕ್ಕೆ ಪೋಷಕವಾಗುವುದು ಎಂದು ನಂಬಲಾಗಿದೆ"[೩೧] ಮೇಲಿನ ಯೋಜನೆಯ ಒಂದು ಭಾಗವಾಗಿ ಕನ್ನಡ ಸಾಹಿತ್ಯದ ಇತಿಹಾಸವನ್ನು ಪ್ರಮುಖ ಪ್ರಕಾರಗಳಾಗಿ ಅಧ್ಯಯನ ಮಾಡುವ ದೃಷ್ಟಿಯಿಂದ ಕನ್ನಡ ಸಾಹಿತ್ಯ ಇತಿಹಾಸ: ಪ್ರಾಚೀನಕಾಲ–ಒಂದು, ಪ್ರಾಚೀನ ಕಾಲ–ಎರಡು, ಮಧ್ಯಕಾಲ–ಒಂದು, ಮಧ್ಯಕಾಲ–ಎರಡು, ಮಧ್ಯಕಾಲ–ಮೂರು, ಅರ್ವಾಚೀನ ಕಾಲವೆಂದು ಚರ್ಚಿಸಿರುವುದು ಈ ಕೃತಿಯ ವೈಶಿಷ್ಟ್ಯವಾಗಿದೆ.

'ಕನ್ನಡ ನುಡಿಯ ಹುಟ್ಟು ಬೆಳವಣಿಗೆ' ಕುರಿತಂತೆ ತಿಳಿಸುವ ಮುಗಳಿ ಅವರು ಕನ್ನಡ ಭಾಷೆಯು ಎರಡು ಸಾವಿರ ವರ್ಷ ಪ್ರಾಚೀನ ಇತಿಹಾಸ ಹೊಂದಿದೆ ಎಂದಿದ್ದಾರೆ. ಕ್ರಿ.ಶ. ಪ್ರಾರಂಭದಲ್ಲಿ ಟಾಲೆಮಿ ಎಂಬ ಗ್ರೀಕ್ ಭೂಗೋಳಶಾಸ್ತ್ರಜ್ಞನು ಬಾದಾಮಿ, ಇಂಡಿ, ಕಲಕೇರಿ, ಮುದಗಲ್ಲು ಇತ್ಯಾದಿ ಹೆಸಗಳ ಊರುಗಳನ್ನು ಪರಿಚಯಿಸುತ್ತಾ 'ಪುನ್ನಾಟ' ಎಂಬ ಒಂದು ದೇಶವಾಚಕವಾದ ಕನ್ನಡ ಶಬ್ದವೂ ಅವನಲ್ಲಿ 'ಪೌನ್ನಾಟ' ಎಂಬ ರೂಪದಲ್ಲಿ ಬರುತ್ತದೆ. ಕ್ರಿ.ಶ. ೨೦೦ರಲ್ಲಿದ್ದ ಹಾಲರಾಜನ 'ಗಾಥಾಸಪ್ತಶತಿ' ಎಂಬ ಪಾಕೃತ ಪದ್ಯಸಂಕಲನದಲ್ಲಿ ಕನ್ನಡ ಶಬ್ದಗಳು

ಬಳಕೆಗೊಂಡಿರುವ ಬಗ್ಗೆ ಪ್ರಸ್ತಾಪಿಸುತ್ತಾ ಕರ್ಣಾಟ, ಕುಂತಲ ಎಂಬ ದೇಶವಾಚಕ ಶಬ್ದಗಳು ಮಹಾಭಾರತ ಮತ್ತು ಪಾಣಿನಿ ವ್ಯಾಕರಣ ಗ್ರಂಥಗಳಲ್ಲಿ ತಲೆದೋರಿವೆ. 'ಕರ್ಣಾಟ' ಎಂಬುದು ಹೇಗೆ ಬಂತು ಎಂಬುದರ ಬಗ್ಗೆ ಅನೇಕ ಊಹೆಗಳು ಹುಟ್ಟಿವೆ. ಉದಾರಹಣೆಗೆ; ಕರ್‌ನಾಡು(ಕಪ್ಪುನೆಲದ ನಾಡು), ಕಮ್ಮಿತುನಾಡು(ಕಂಪುಳ್ಳ ದೇಶ), ನಮ್ಮ ಮಟ್ಟಿಗೆ ಅದು 'ಕರುನಾಡು' 'ಕರ್ನಾಡು'(ದೊಡ್ಡನಾಡು ಅಥವಾ ಎತ್ತರ ಪ್ರದೇಶ) ಎಂಬ ಕನ್ನಡ ಶಬ್ದದ ಸಂಸ್ಕೃತ ರೂಪಾಂತರವೆಂದು ತೋರುತ್ತದೆ. 'ಕರ್ನಾಡು' ಇದು ಬರುಬರುತ್ತಾ 'ಕನ್ನಡ' ಎಂಬ ರೂಪತಾಳಿ ದೇಶ ಮತ್ತು ಭಾಷೆ ಎರಡನ್ನೂ ಸೂಚಿಸುವ ಶಬ್ದವಾಗಿದೆ. ಬ್ರಿಟಿಷರು ಇದನ್ನು 'ಕ್ಯಾನರೀಸ್' ಎಂದು ಕರೆದಿರುವ ಬಗ್ಗೆ ಪ್ರಸ್ತಾಪಿಸುತ್ತಾರೆ.

ಕನ್ನಡ ಬರವಣಿಗೆಯ ಕುರಿತು ಕ್ರಿ.ಶ. ಪ್ರಾರಂಭದಿಂದಿಡಿದು ಅಶೋಕನ ಬ್ರಾಹ್ಮಿಲಿಪಿಯ ಬಗ್ಗೆ ಚರ್ಚೆಗೊಳಪಡಿಸುತ್ತಾರೆ. ಕ್ರಿ.ಶ. ೪೫೦ರಲ್ಲಿ ದೊರೆತ ಹಲ್ಮಿಡಿ ಶಿಲಾಶಾಸನ ಪ್ರಾಚೀನವಾದದ್ದಾಗಿದೆ. ಕನ್ನಡ ಗ್ರಂಥಭಾಷೆಯು ಹಿಂದಿನಿಂದಲೂ ಬಂದಿರಬೇಕೆಂದು ಊಹಿಸುವಂತಿದೆ. ಏಕೆಂದರೆ ನಮಗೆ ದೊರೆತ ೭ನೇ ಶತಮಾನದ ಕವಿರಾಜಮಾರ್ಗದಿಂದ ಪ್ರಶ್ನೆ ಮೂಡಲು ಕಾರಣವಾಗುವಂತದ್ದಾಗಿದೆ ಎನ್ನುವ ಮೂಲಕ "ಸ್ಥೂಲವಾಗಿ ಗ್ರಂಥಸ್ಥ ಕನ್ನಡ ಭಾಷೆಯಲ್ಲಿ ಹಳಗನ್ನಡ ಮತ್ತು ಹೊಸಗನ್ನಡ ಎಂಬ ಎರಡು ಅವಸ್ಥೆಗಳು ಕಂಡುಬರುತ್ತವೆ. ಕ್ರಿ.ಶ ೯ನೇ ಶತಮಾನದಿಂದ ಸುಮಾರು ೧೨ನೇ ಶತಮಾನದವರೆಗೆ ಹಳಗನ್ನಡವೊಂದೇ ಪ್ರಚಾರದಲ್ಲಿತ್ತು. ಆಮೇಲೆ ೧೧ನೇ ಶತಮಾನದಲ್ಲಿ ಸಣ್ಣ ಉಗಮ ಹೊಂದಿ ೧೨ನೇ ಶತಮಾನಗಳಲ್ಲಿ ದೊಡ್ಡ ಪ್ರವಾಹವಾಗಿ ಹೊಸಗನ್ನಡವು ಮುಂಬರಿಯಿತು. ಅದರ ಜೊತೆ ಜೊತೆಗೆ ೧೨, ೧೩, ೧೪ನೇ ಶತಮಾನದಲ್ಲಿ ಹಳಗನ್ನಡವು ಕೆಲವು ಗ್ರಂಥಗಳಲ್ಲಿ ವಾಡಿಕೆಯಾಗಿತ್ತು. ೧೫ನೇ ಶತಮಾನದಿಂದ ಮಾತ್ರ ಅದರ ವ್ಯಾಪ್ತಿ ಕಡಿಮೆಯಾಗುತ್ತ ಹೊರಟಿತು. ೧೭-೧೮ನೇ ಶತಮಾನಗಳಲ್ಲಿ ಅದರ ಪುನರುಜ್ಜೀವನ ಕಂಡುಬಂದಿತು. ೧೯-೨೦ನೇ ಶತಮಾನದಲ್ಲಿ ಹೊಸಗನ್ನಡಕ್ಕೆ ಪ್ರಧಾನ ಪಟ್ಟ ದೊರೆಯಿತು. ಇಷ್ಟಾದರೂ ಕನ್ನಡ ಭಾಷೆಯ ಚರಿತ್ರೆಯಲ್ಲಿ ಹಳಗನ್ನಡಕಾಲ ಹೊಸಗನ್ನಡಕಾಲವೆಂದು ವಿಭಾಗಿಸುವುದು ಸರಿಯಲ್ಲ"[೩] ಎಂಬ ತೀರ್ಮಾನಕ್ಕೆ ಬರುತ್ತಾರೆ. ಹಾಗೆಯೇ ಮುಂದುವರಿದು ಮೂಲದ್ರಾವಿಡ ವರ್ಗಕ್ಕೆ ಸೇರಿದ ತೆಲುಗು, ತಮಿಳು, ಕನ್ನಡ ಮಲಯಾಳಂ ಭಾಷಾ ಪ್ರಭೇದಗಳನ್ನು ವಿವೇಚಿಸಲಾಗಿದೆ.

ಪ್ರಾಚೀನ ಕಾಲ-ಒಂದು: 'ಕನ್ನಡ ಸಾಹಿತ್ಯ ಪ್ರಾರಂಭ' ಈ ಕಾಲದಲ್ಲಿ ಮುಗಳಿ ಅವರು ಕನ್ನಡ ಸಾಹಿತ್ಯ ಪ್ರಾರಂಭಗೊಂಡಿದೆ ಎಂಬುದು ವ್ಯಕ್ತಪಡಿಸಿದ್ದಾರೆ. ಇದರಿಂದ ಕನ್ನಡದಲ್ಲಿ ದೊರೆತ ಮೊದಲ ಕವಿರಾಜಮಾರ್ಗವು ಒಂದು ಸಾವಿರ ವರ್ಷಕ್ಕಿಂತ ಹೆಚ್ಚು ಹಿಂದಿನದು. 'ನೃಪತುಂಗದೇವಾನುಮತಮಪ್ಪ ಕವಿರಾಜಮಾರ್ಗ' ಉಲ್ಲೇಖವು ಬರುವುದು ಕ್ರಿ.ಶ. ೮೧೫-೮೭೭ರಲ್ಲಿ ಅಂದರೆ ರಾಷ್ಟ್ರಕೂಟವಂಶದ ಅರಸನಾದ ನೃಪತುಂಗನ ಕಾಲದಲ್ಲಿ ಬರುವುದರಿಂದ ಇದರ ಕಾಲವನ್ನು ನಿಖರವಾಗಿ ಗುರುತಿಸಲು ಮುಂದಾಗುತ್ತಾರೆ.

ಕವಿರಾಜಮಾರ್ಗಲ್ಲಿ ಹೇಳಿದ ಗದ್ಯಕಾರರೆಂದರೆ ವಿಮಲೋದಯ, ನಾಗಾರ್ಜುನ, ಜಯಬಂಧು, ದುರ್ವಿನೀತಾದಿಗಳ್ ಎಂಬ ಪದದಿಂದ ಹಾಗೂ ಪದ್ಯಕಾರರಲ್ಲಿ ಶ್ರೀವಿಜಯ, ಕವೀಶ್ವರ, ಪಂಡಿತ, ಚಂದ್ರ, ಲೋಕಪಾಲಾದಿಗಳ್ ಎಂಬ ಪದಬಳಕೆಯಿಂದಾಗಿ ಇನ್ನೂ ಕೆಲವರು ಕವಿಗಳಿರಬೇಕೆಂದು ಊಹಿಸುವಂತಿದೆ ಎಂದಿದ್ದಾರೆ. ೧೦ನೇ ಶತಮಾನದಲ್ಲಿ ಬರುವ ಆದಿಕವಿ ಪಂಪನು ತನ್ನ ಸಮಸ್ತಭಾರತ ಮತ್ತು ಆದಿಪುರಾಣ ಈ ಎರಡೂ ಗ್ರಂಥಗಳು ಕಾವ್ಯಗಳನ್ನೆಲ್ಲ ಸೋಲಿಸಿದುವೆನ್ನುತ್ತಾರೆ. ಇಂತಹ ಮಾತುಗಳು ಪಂಪನಿಗಿಂತ ಮುಂಚಿತವಾಗಿ ಕವಿರಾಜಮಾರ್ಗಕ್ಕಿಂತಲೂ ಹಿಂದೆ ಕನ್ನಡ ಗ್ರಂಥಗಳು ಇದ್ದಿರಬಹುದೆಂಬುದನ್ನು ಊಹಿಸುವಂತಿದೆ ಎನ್ನುವ ಅಭಿಪ್ರಾಯ ತಿಳಿಸುತ್ತಾ ತುಂಬಲೂರಾಚಾರ್ಯನ 'ಚೂಡಾಮಣಿ' ಎಂಬ ಜೈನವ್ಯಾಖ್ಯಾನ ಗ್ರಂಥವು ೭ನೇ ಶತಮಾನದಲ್ಲಿ ರಚಿಸಿರಬೇಕೆಂದು ಹಾಗೂ ಸೈಗೊಟ್ಟ ಶಿವಮಾರನೆಂಬ ರಾಜಕವಿ 'ಗಜಾಷ್ಟಕ' ಕೃತಿ ಬರೆದಿರಬೇಕೆಂದು ಶಾಸನದಿಂದ ತಿಳಿದುಬರುತ್ತದೆ. ಗಜಾಷ್ಟಕವು 'ಓವನಿಗೆ–ಒನಕೆವಾಡು'(ಬೀಸುವ ಕುಟ್ಟುವ ಹಾಡು) ಆಗಿ ಜನಪ್ರಿಯಗೊಂಡಿರುವ ಬಗ್ಗೆ ಚರ್ಚಿಸುತ್ತಾರೆ. ಹಾಗೆಯೇ ಮುಂದುವರಿದು ೭ನೇ ಶತಮಾನದ ಕಪ್ಪೆಅರಭಟ್ಟನ ಶಾಸನ ಉಲ್ಲೇಖಿಸುವ ಲೇಖಕರು ೯ನೇ ಶತಮಾನದಲ್ಲಿ ಬರುವ ಅಸಗ, ಗುಣನಂದಿ, ೧ನೇ ಗುಣವರ್ಮರ ಬಗ್ಗೆ ಪ್ರಸ್ತಾಪಿಸಲಾಗಿದೆ.

'ಕವಿರಾಜಮಾರ್ಗ'ದ ಕರ್ತೃ ಯಾರೆಂಬ ಚರ್ಚೆಗೊಳಪಟ್ಟು ಮೊದಲು ನೃಪತುಂಗ ಎಂದು ಕರೆದಿದ್ದರು. ತದನಂತರ ಅವನಲ್ಲ, ಅವನ ಆಸ್ಥಾನ ಕವಿಯಾದ ಶ್ರೀವಿಜಯ ರಚನಕಾರನೆಂಬ ನಿರ್ಣಯಕ್ಕೆ ಬರಲಾಯಿತೆಂದು ಮುಗಳಿ ಅವರು ಸ್ಪಷ್ಟಪಡಿಸುತ್ತಾರೆ. ಕವಿರಾಜಮಾರ್ಗವು ದಂಡಿಯ ಕಾವ್ಯಾದರ್ಶದ ಅನುವಾದ ಗ್ರಂಥದ ಬಗ್ಗೆಯೂ ಚರ್ಚಿಸುತ್ತಾ ಕವಿರಾಜಮಾರ್ಗದ ಮೊದಲ ಭಾಗದಲ್ಲಿ "ಕಾವೇರಿಯಿಂದ ಗೋದಾವರಿ ನದಿಯವರೆಗೆ ಕನ್ನಡನಾಡಿನ ವಿಸ್ತಾರವಿತ್ತು ಅದರೊಳಗೆ ಕಿಸುವೊಳಲು (ಪಟ್ಟದಕಲ್ಲು), ಕೊಪಣ(ಕೊಪ್ಪಳ), ಪುಲಿಗೆರೆ(ಲಕ್ಷ್ಮೇಶ್ವರ), ಒಕ್ಕುಂದ ಈ ನಾಲ್ಕು ದಿಕ್ಕಿನ ಊರುಗಳ ನಡುವೆ ಕನ್ನಡನಾಡಿನ ತಿರುಳು ಅಥವಾ ಕೇಂದ್ರವಿತ್ತು. ಈ ನಾಡಿನ ಜನರು ಹದವರಿತು ನುಡಿಯಲು ನುಡಿದದ್ದನ್ನು ಅರಿಯಲು ಬಲ್ಲವರಾಗಿದ್ದರು. ಚತುರರಾದವರು ಓದದೆಯೂ ಸಹ ಕಾವ್ಯಪ್ರಯೋಗದಲ್ಲಿ ಪರಿಣತಮತಿಗಳಾಗಿದ್ದರು. ಓದದೆ ಇದ್ದವರಲ್ಲಿ ಬೇರೆ ಕೆಲವರು ತಂತಮ್ಮ ನುಡಿಯಲ್ಲಿ ಎಲ್ಲರೂ ಜಾಣರು. ಸಣ್ಣಮಕ್ಕಳು, ಮಹಾಮುಗ್ಧರು ಸಹ ವಿವೇಕದ ಮಾತುಗಳನ್ನು ಹೇಳಲು ಬಲ್ಲವರು. ಜಾಣರಲ್ಲದವರು ಆಣೆ ಮಾಡಿ, ಅರಿಯದೆಯೂ ಅರಿತಹಾಗೆ ಎಲ್ಲಿಯಾದರೂ ತಪ್ಪಿದರೆ ಅದನ್ನು ಬಿಡದೆ ತೋರಿಸಿ ಕೃತಿಯನ್ನು ಖಂಡಿಸುವರೆಂದು"[೩೩] ಕವಿರಾಜಮಾರ್ಗದಲ್ಲಿ ಬರುವ ಕನ್ನಡಿಗರ ಮನೋಭಾವವನ್ನು ತಿಳಿಸಿದ್ದಾರೆ.

'ವಡ್ಡಾರಾಧನೆ'ಯ ಬಗ್ಗೆ ಚರ್ಚೆಗೊಳಪಡಿಸುವ ಮುಗಳಿ ಅವರು ವಡ್ಡಾರಾಧನೆ ಗ್ರಂಥರಚನಕಾರ, ಕಾಲಗಣನೆಯ ಬಗ್ಗೆ ವಾದಗ್ರಸ್ತವಾಗಿದ್ದರು. ಈ ಗ್ರಂಥರಚನೆ ಮಾಡಿದವನು ೧೦ನೇ ಶತಮಾನದಲ್ಲಿ ಬರುವ ಶಿವಕೋಟ್ಯಾಚಾರ್ಯನೆ ರಚಿಸಿರಬೇಕೆಂದು ಹಲವು ಮಗ್ಗಲುಗಳನ್ನು ಅನುಲಕ್ಷಿಸಿ ನಿರ್ಣಯಕ್ಕೆ

ಬರುತ್ತಾರಾದರೂ ೯೨೦ರಲ್ಲಿ ಈ ಗ್ರಂಥ ಹುಟ್ಟಿರಬೇಕೆಂಬ ಸಂಶೋಧಕರ ಅಭಿಪ್ರಾಯವೇ ಸರಿ ಇರಬೇಕೆಂಬ ನಿರ್ಣಯಕ್ಕೆ ಬರುತ್ತಾರೆ. ವಡ್ಡಾರಾಧನೆ ಅಂದರೆ ದೊಡ್ಡ ಆರಾಧನೆ. ಜೈನಯತಿಗಳ ಜ್ಞಾನ, ದರ್ಶನ, ಚರಿತ್ರೆ, ತಪಸ್ಸು ಈ ನಾಲ್ಕು ಆದರ್ಶಗಳೊಂದಿಗೆ ೧೯ ಕತೆಗಳ ಸಂಗ್ರಹವಾಗಿದೆ. ಕತೆಯ ಸಂಖ್ಯೆ ಮತ್ತು ವಿಸ್ತಾರದ ಮೂಲಕ ಇದು ವಡ್ಡ ಎಂದರೆ ದೊಡ್ಡ ಆರಾಧನೆಯಾಗಿರಬೇಕೆಂದು ಮೂಲ ನಿರ್ಣಯಕ್ಕೆ ಬರುತ್ತಾರೆ. ವಡ್ಡಾರಾಧನೆ ಕುರಿತು ವಿದ್ವಾಂಸರುಗಳ ಅಭಿಪ್ರಾಯ ಈ ರೀತಿ ಇವೆ.

"ಡಿ.ಎಲ್.ನರಸಿಂಹಾಚಾರ್ ಅವರು ಆರು ಹಸ್ತಪ್ರತಿಯ ಸಹಾಯದಿಂದ ವಡ್ಡಾರಾಧನೆ ಕೃತಿ ಸಂಪಾದಿಸಿ ಅವರು ಇದರ ಕರ್ತೃ ಶಿವಕೋಟ್ಯಾಚಾರ್ಯ ಎಂದು ತಿಳಿಸುತ್ತಾರೆ. ಅದೇ ರೀತಿ ಆ.ನೇ.ಉಪಾಧ್ಯೆ ಅವರ ಪ್ರಕಾರ ಆಚಾರ್ಯ ಶಿವಕೋಟಿಯ ಪ್ರಾಕೃತ ಭಾಷೆಯ (ಭಗವತೀ) 'ಆರಾಧನಾ' ಗ್ರಂಥದಲ್ಲಿರುವ ಕವಚಾಧಿಕಾರದ ೧೯ ಪ್ರಾಕೃತ ಗಾಹೆಗಳೇ ಕನ್ನಡ ವಡ್ಡಾರಾಧನೆಯ ೧೯ ಕಥೆಗಳಿಗೆ ಆಧಾರವಾಗಿವೆ. 'ಆರಾಧನಾ' ಗ್ರಂಥಕ್ಕೆ 'ಬೃಹತ್ ಆರಾಧನಾ' ಎಂಬ ಮತ್ತೊಂದು ಹೆಸರುಂಟು. ಬೃಹತಾರಾಧನಾದ ಪ್ರಾಕೃತ ರೂಪ 'ವಡ್ಡಾರಾಧನಾ' ಆದ್ದರಿಂದ ಮೂಲಗ್ರಂಥದ ಪ್ರಾಕೃತ ಹೆಸರು ಮತ್ತು ಅದನ್ನು ಬರೆದ ಶಿವಕೋಟ್ಯಾಚಾರ್ಯರ ಹೆಸರು ಕನ್ನಡ ಗ್ರಂಥಕ್ಕೂ ಪ್ರಾಪ್ತವಾಗುತ್ತದೆ"[೩೪] ಎಂದಿದ್ದಾರೆ.

ಎಂ.ಎಂ.ಕಲಬುರ್ಗಿ ಅವರು ತಿಳಿಸುವಂತೆ "ರಾಮಚಂದ್ರ ಮುಮುಕ್ಷ ಸಂಸ್ಕೃತ ಭಾಷೆಯ 'ಪುಣ್ಯಾಸ್ರವ ಕಥಾಕೋಶ'ದಲ್ಲಿ ಬರುವ ಶ್ರೇಣಿಕನ ಕಥೆಯ ಅಂತ್ಯದಲ್ಲಿ ಬ್ರಾಜಿಷ್ಣೊರಾರಾಧನಾ ಶಾಸ್ತ್ರೇ ಕರ್ಣಾಟ ಟೀಕಾ ಕಥಿಕ ಕ್ರಮೇಣೋಲ್ಲೇಖ ಮಾತ್ರಂ ಕಥಿತೇಯ ಕಥಾ ಇತಿ ಎಂದಿದೆ. ಇದರಿಂದ ಭ್ರಾಜಿಷ್ಣು ಶಿವಕೋಟ್ಯಾಚಾರ್ಯನ ಆರಾಧನಾಶಾಸ್ತ್ರಕ್ಕೆ 'ಕರ್ಣಾಟ ಟೀಕೆ' ಬರೆದಿದ್ದನೆಂದು ತಿಳಿಯಬಹುದಾಗಿದೆ. ಈ ಎಳೆಯನ್ನು ಆಧರಿಸಿ ವಡ್ಡಾರಾಧನೆಯ ಕಥೆಗಳು ಈ ಟೀಕೆಯ ಒಂದು ಭಾಗವೆಂದು ಭಾವಿಸಿ, "ಇನ್ನು ಮುಂದೆ ಕನ್ನಡ ಕೃತಿಯ ಹೆಸರು ವಡ್ಡಾರಾಧನೆಯಲ್ಲ, ಆರಾಧನಾ ಕರ್ಣಾಟ ಟೀಕೆ' ಎಂದು ಕರ್ತೃವಿನ ಹೆಸರು ಶಿವಕೋಟ್ಯಾಚಾರ್ಯನಲ್ಲ 'ಭ್ರಾಜಿಷ್ಣು' ಎಂದು ಕರೆಯಬೇಕೆನಿಸುತ್ತದೆ"[೩೫] ಎಂದಿದ್ದಾರೆ. ಈ ರೀತಿ ವಿದ್ವಾಂಸರು ಭಿನ್ನಾಭಿಪ್ರಾಯಗಳಿಂದ ಕೂಡಿದ್ದ 'ವಡ್ಡಾರಾಧನೆ' ಕೃತಿಯ ಹೆಸರು ಮತ್ತು ಅದರ ಕರ್ತೃವಿನ ಬಗ್ಗೆ ಇನ್ನೂ ಖಚಿತ ಅಭಿಪ್ರಾಯ ಹೊಂದಲು ಸಾಕಷ್ಟು ಆಧಾರಗಳಿಲ್ಲದಿರುವುದರಿಂದ ಅವು ಇನ್ನು ಸಂಶೋಧನೆಗೆ ತೆರೆದ ವಿಷಯಗಳೇ ಆಗಿವೆಯೆಂದು ವಿದ್ವಾಂಸರ ಅಭಿಪ್ರಾಯವಾಗಿದೆ.

ಪಂಪನು ಆದಿಪುರಾಣ ಮತ್ತು ವಿಕ್ರಮಾರ್ಜುನ ವಿಜಯ ಗ್ರಂಥಗಳನ್ನು ರಚಿಸಿದ್ದಾನೆ. ಇದರಿಂದ ವೈದಿಕ ಮತ್ತು ಜೈನ ಸಂಪ್ರದಾಯಗಳನ್ನು ತನ್ನಲ್ಲಿ ಅಳವಡಿಸಿಕೊಂಡನು. ಅವನ ಮನೆತನ ವೈದಿಕ. ಆದರೆ ಅವನ ತಂದೆ ಜೈನಧರ್ಮವನ್ನು ಸ್ವೀಕರಿಸಿದನು. ಹಾಗೆಯೇ ಮುಂದುವರಿದು ಆದಿಪುರಾಣಕ್ಕೆ ಆಕರವಾಗಿ ಜಿನಸೇನಾಚಾರ್ಯನ 'ಪೂರ್ವಪುರಾಣ' ಸಂಸ್ಕೃತ ಗ್ರಂಥವನ್ನು

ಬಳಸಿಕೊಂಡಿದ್ದಾನೆ. ಈ ಗ್ರಂಥದಲ್ಲಿ ಅನೇಕ ಭವಾವಳಿಗಳ ವೃತ್ತಾಂತಗಳು, ತ್ಯಾಗ, ಭೋಗ, ವೈರಾಗ್ಯ ಇತ್ಯಾದಿ ಅಂಶಗಳಿಂದ ಕೂಡಿದ ಆದಿದೇವನ ಮತ್ತು ಇತರ ವ್ಯಕ್ತಿಗಳ ಕಥಾವಸ್ತುವನ್ನು ಚರ್ಚಿಸುತ್ತಾ 'ವಜ್ರಜಂಗ' ಶ್ರೀಮತಿಯರು ಸತಿಪತಿಯಾಗಿ ಪೂರ್ವಜನ್ಮದ ಅತೃಪ್ತಿ ಕಳೆದುಕೊಳ್ಳಲು ಕೋಣೆಯಲ್ಲಿ ಮಲಗಿರಲು ಅಲ್ಲಿ ಹಾಕಿದ ದೂಪದ ಹೊಗೆಗೆ ಆ ಪ್ರೇಮಿಗಳು ಸಾವನ್ನಪ್ಪಿದ ವಿವರಗಳನ್ನು ತಿಳಿಸುತ್ತಾ 'ನೀಳಾಂಜನೆಯ'ಯ ನೃತ್ಯಪ್ರಸಂಗದ ಕುರಿತು ಸಂಕ್ಷಿಪ್ತ ವಿವರಗಳನ್ನು ಒಳಗೊಂಡಿದೆ.

'ಪಂಪ'ನ ಎರಡನೇ ಚಂಪೂಕಾವ್ಯವಾದ ಪಂಪಭಾರತದಲ್ಲಿ ತನ್ನ ಅರಸನಾದ ಅರಿಕೇಸರಿಯನ್ನು ಅರ್ಜುನನೊಂದಿಗೆ ಸಮೀಕರಿಸಿ ಚರ್ಚಿಸಿರುವ ವಿವರ ಈ ಭಾಗದಲ್ಲಿದೆ. ಪಂಪಭಾರತಕ್ಕೆ ಆಕರವಾಗಿ ವ್ಯಾಸಭಾರತವನ್ನು ಬಳಸಿಕೊಂಡರೂ ಸಹ ಪ್ರಮುಖ ಸಂದರ್ಭಗಳನ್ನು ಬದಲಿಸಿ ರಚಿಸಿರುವಂತದ್ದು ತಿಳಿದುಬರುತ್ತದೆ. ವ್ಯಾಸಭಾರತದಲ್ಲಿ ಪಂಚಪಾಂಡವರಿಗೆಲ್ಲ ದ್ರೌಪದಿ ಒಬ್ಬಳೆ ಸತಿಯಾದರೆ ಪಂಪಭಾರತದಲ್ಲಿ ಅರ್ಜುನನಿಗೆ ಮಾತ್ರ ದ್ರೌಪದಿಯನ್ನು ಸತಿಯನ್ನಾಗಿಸಿ ಹಾಗೂ ಪಾಂಡವರು ಯುದ್ಧದಲ್ಲಿ ಗೆದ್ದ ಮೇಲೆ ಪಟ್ಟಮಹಿಷಿಯಾದವಳು 'ಸುಭದ್ರೆ' ಮಾತ್ರ, ಕಷ್ಟಪಟ್ಟವಳೊಬ್ಬಳು, ಪಟ್ಟವನ್ನು ಕಟ್ಟಿಸಿಕೊಂಡವಳು ಇನ್ನೊಬ್ಬಳೆಂಬ ಈರ್ಷ್ಯೆಗೆ ಕಾರಣವಾದ ಪ್ರಸಂಗವನ್ನು ಚರ್ಚಿಸುತ್ತಾ ಶಕುನಿಯ ಕುತಂತ್ರದಿಂದ ದ್ರೌಪದಿಯನ್ನು ಪಣಕ್ಕಿಟ್ಟು ಆಡುವ ಧರ್ಮರಾಯನನ್ನು ಸೋಲಿಸುವ ಪ್ರಸಂಗ ಹಾಗೂ ಯುದ್ಧದ ಸಂದರ್ಭದಲ್ಲಿ ಭೀಷ್ಮನಿಗೆ ಸೇನಾಪತಿ ಪಟ್ಟಗಟ್ಟಿರುವ ಸಂದರ್ಭದಲ್ಲಿ ಕರ್ಣನು ನನಗೆ ಪಟ್ಟಗಟ್ಟದೆ ಮುದುಕ(ಭೀಷ್ಮ)ನಿಗೆ ಪಟ್ಟಗಟ್ಟುವುದು ಸರಿಯೇ ಎಂಬ ರೀತಿಯಲ್ಲಿ ಪ್ರಶ್ನಿಸುತ್ತಾನೆ.

ಈ ಮಾತು ಕೇಳಿಸಿಕೊಂಡ ದ್ರೋಣನು "ಕರ್ಣ, ಭೀಷ್ಮರಂಥ ಹಿರಿಯರನ್ನು ಇಂಥ ಹೀಯಾಳಿಕೆ ಮಾತನಾಡಿದೆ. ನಿನ್ನ ನಾಲಿಗೆ ಕುಲವನ್ನು ಸಾರಿತು ಎಂದು ಕರ್ಣನನ್ನು ಟೀಕಿಸಿದಾಗ ಕೋಪಿಸಿಕೊಂಡು ಕರ್ಣನು ಕುಲವನ್ನು ಹಿಂದಿನಿಂದಲೂ ಹೊಗಳುತ್ತಾ ಬಂದಿರುವಿರಿ. ಏನವು ನಿಮ್ಮ ಕುಲಗಳು? ಮೇಲೇರಿ ಬಂದವರನ್ನು ಅಟ್ಟಿ ತಿನ್ನುವ ಶಕ್ತಿ ಇದೆ. ನನ್ನಲ್ಲಿ ಕುಲವು ಕುಲವಲ್ಲ, ಛಲವು ಕುಲವು, ಗುಣವು ಕುಲವು, ಅಭಿಮಾನ ಒಂದೇ ಕುಲವು, ಶೌರ್ಯ ಒಂದೇ ಕುಲವು. ಈ ಕಲಹದಲ್ಲಿ ನಿಮ್ಮ ಕುಲವು ನಿಮಗೆ ಆಕುಲವನ್ನು ಉಂಟುಮಾಡುವುದು"[೩೬] ಎಂದು ಕುಲದ ಬಗ್ಗೆ ತಿಳಿಸುವ ಕರ್ಣನ ಈ ಭಾಗವನ್ನು ಪ್ರಸ್ತಾಪಿಸುತ್ತಾ ಭೀಷ್ಮರು ಸಂಯಮದಿಂದ "ಕರ್ಣ ಕಲಿತನದ ಸೊಕ್ಕು, ಯೌವನದ ಸೊಕ್ಕು ಅರಸನ ವಿಶ್ವಾಸ, ಬಾಹುಬಲದ ಉಬ್ಬು ನಿನಗಿರುವಂತೆ ನನಗೇವಿರುವುದೇ? ಭಾರತ ಕಲಹವಿದು, ಅರ್ಜುನನ ಇದಿರಾಳಿಯಾಗಿರಲು ಯಾಕೆ ಅವಸರಿಸುವೆ. ಮಹಾಯುದ್ಧರಂಗದಲ್ಲಿ ನಿನ್ನ ಸರತಿಯು ಬರುತ್ತದೆ"[೩೭] ಎಂಬ ಭೀಷ್ಮರ ಮಾತಿನಲ್ಲಿ ವ್ಯಂಗ್ಯವೂ, ಸೌಮ್ಯವೂ, ಸೂಕ್ಷ್ಮವೂ, ತೀಕ್ಷ್ಣವೂ ಇರುವಂತಹ ಮುಖ್ಯ ಸಂದರ್ಭವನ್ನು ಮುಗಳಿ ಅವರು ಸರಳ ಭಾಷೆಯಲ್ಲಿ ಬಳಸುತ್ತಾರೆ.

'ಪೊನ್ನ–ರನ್ನ'ರ ಬಗ್ಗೆ ಪ್ರಸ್ತಾಪಿಸುವ ಲೇಖಕರು ಪೊನ್ನನು ರಾಷ್ಟ್ರಕೂಟ ಅರಸನಾದ ೩ನೇ ಕೃಷ್ಣನ ಆಸ್ಥಾನಕವಿ. ಇವನು ಶಾಂತಿಪುರಾಣ(ಧಾರ್ಮಿಕ), ಭುವನೈಕ ರಾಮಾಭ್ಯುದಯ(ರಾಮಕಥೆ) (ಲೌಕಿಕ) 'ಜಿನಾಕ್ಷರ ಮಾಲೆ' ಎಂಬ ಕೃತಿಗಳನ್ನು ರಚಿಸಿದ್ದಾನೆ. ಗತಪ್ರತ್ಯಾಗತ ಸಂಸ್ಕೃತ ಗ್ರಂಥಗಳಲ್ಲಿ 'ಶಾಂತಿಪುರಾಣ'ವು ಉಪಲಬ್ಧವಾದ ಚಂಪೂ ಕಾವ್ಯವಾಗಿದೆ. ಭುವನೈಕ ರಾಮಾಭ್ಯುದಯದ ಪದ್ಯಗಳು ಇಡಿಯಾಗಿ ಇಲ್ಲವೇ ಬಿಡಿಯಾಗಿ ಸಿಕ್ಕಿರುವುದನ್ನು ಪ್ರಸ್ತಾಪಿಸಿ ಚರ್ಚಿಸಿದ್ದಾರೆ. ಪಂಪನ ಹಾಗೆ ಶಾಂತಿಪುರಾಣವು ಧಾರ್ಮಿಕ ಗ್ರಂಥವಾಗಿಯೂ ಭುವನೈಕರಾಮಾಭ್ಯುದಯ ಲೌಕಿಕ ಗ್ರಂಥವಾಗಿಯೂ, ರನ್ನನ ಕುರಿತಂತೆ ಅಜಿತಪುರಾಣ ಆಗಮಿಕ, ಸಾಹಸಭೀಮ ವಿಜಯ ಅಥವಾ ಗದಾಯುದ್ಧವು ಲೌಕಿಕ ಗ್ರಂಥವಾಗಿದೆ. ಹಾಗೆಯೇ 'ಗದಾಯುದ್ಧ'ವು ಓದುವ ಕಾವ್ಯವಾಗಿದ್ದು ಆಡುವ ನಾಟಕದ ಸ್ವರೂಪವನ್ನು ಬಹುಭಾಗದಲ್ಲಿ ಪಡೆದಿರುವುದು ಇದರ ವಿಶೇಷ ಗುಣವೆಂದು ತಿಳಿದುಬರುತ್ತದೆ. ಇಡೀ ಕಾವ್ಯವನ್ನು ೮–೧೦ ದೃಶ್ಯಗಳಾಗಿ ಭಾಗ ಮಾಡಬಹುದು. ಪ್ರತಿಯೊಂದು ದೃಶ್ಯದಲ್ಲಿಯೂ ಸಂಭಾಷಣೆಯಲ್ಲಿಯೂ ನಟನಾ ಕೌಶಲ್ಯಗಳು ಕಂಡುಬರುತ್ತವೆ ಎಂದು ತಿಳಿಸುತ್ತಾರೆ. ಪಂಪನು ತನ್ನ 'ಪಂಪಭಾರತ'ದಲ್ಲಿ ಅರಿಕೇಸರಿಯನ್ನು ಅರ್ಜುನನಿಗೆ ಸಮೀಕರಿಸಿದರೆ, ರನ್ನನು ತನ್ನ ಗದಾಯುದ್ಧದಲ್ಲಿ 'ಸತ್ಯಾಶ್ರಯ'ನನ್ನು ಭೀಮನಿಗೆ ಸಮೀಕರಿಸಿರುವುದನ್ನು ಹಾಗೂ ಪಂಪನದು 'ವಿಕ್ರಮಾರ್ಜುನ ವಿಜಯ'ವಾದರೆ ರನ್ನನದು 'ಸಾಹಸಭೀಮ ವಿಜಯ' ಪಂಪನು ಕೊನೆಯಲ್ಲಿ ಅರ್ಜುನನಿಗೆ ಪಟ್ಟಗಟ್ಟಿದರೆ ರನ್ನನು ಭೀಮನಿಗೆ ಪಟ್ಟಗಟ್ಟುತ್ತಾನೆ.

ಲೇಖಕರು ಈ ಭಾಗದಲ್ಲಿ ೧೦ನೇ ಶತಮಾನದಲ್ಲಿ ಕಂಡುಬರುವ ಕವಿಗಳ ಕುರಿತಂತೆ ಅವರ ಸಾಹಿತ್ಯ ಪೂರ್ವಾಪರ ಇತಿಹಾಸ ಕುರಿತು ಚರ್ಚಿಸಿದ್ದಾರೆ. ಅದರಂತೆ 'ಚಾವುಂಡರಾಯ' ಗದ್ಯಕಾರನೆಂದು ಹೆಸರಾದ ಈತ ಗಂಗರಾಜನ ರಾಚಮಲ್ಲನ ಮಂತ್ರಿ ಮತ್ತು ಸೇನಾಪತಿಯಾಗಿ ಅನೇಕ ಯುದ್ಧಗಳಲ್ಲಿ ಗೆಲುವು ಪಡೆದನು. ಶ್ರವಣಬೆಳಗೊಳದಲ್ಲಿ ಜಗತ್ಪ್ರಸಿದ್ಧವಾದ ಗೊಮಟೇಶ್ವರಮೂರ್ತಿ ಸ್ಥಾಪಕನಾದ ಈತ 'ತ್ರಿಷಷ್ಟಿ ಲಕ್ಷಣ ಮಹಾಪುರಾಣ' ಅಥವಾ 'ಚಾವುಂಡರಾಯ ಪುರಾಣ'ವೆಂಬ ಗ್ರಂಥವನ್ನು ರಚಿಸಿದ್ದರ ಬಗ್ಗೆ ಪ್ರಸ್ತಾಪಿಸುತ್ತಾರೆ. ೧ನೇ ನಾಗವರ್ಮನು ಹತ್ತನೇ ಶತಮಾನದ ಕೊನೆಯ ಭಾಗದಲ್ಲಿ ಕಂಡುಬರುತ್ತಾನೆ. ಅವನ ಕಾಲ ಮತ್ತು ಗ್ರಂಥಗಳ ಬಗ್ಗೆ ಸಾಕಷ್ಟು ವಾದಗಳಿವೆ. ಅವನ ಎರಡು ಗ್ರಂಥಗಳಾದ 'ಛಂದೋಂಬುಧಿ' ಮತ್ತು 'ಕರ್ನಾಟಕ ಕಾದಂಬರಿ'ಗಳನ್ನು ರಚಿಸಿರಬೇಕೆಂದು ನಂಬಲಾಗಿದೆ ಎಂದಿದ್ದಾರೆ. ಮುಗಳಿ ಅವರ ನಾಗವರ್ಮನ ಛಂದೋಂಬುಧಿಯು ಕನ್ನಡದಲ್ಲಿ ಛಂದಸ್ಸು ಕುರಿತ ಮೊದಲ ಗ್ರಂಥವಾಗಿದೆ. ಈ ಗ್ರಂಥದಲ್ಲಿ ಸಂಸ್ಕೃತ ಛಂದಸ್ಸಿನ ವಿವರಣೆಯ ಜೊತೆಗೆ 'ಕರ್ನಾಟಕ ವಿಷಯ ಜಾತಿ' ಅಂದರೆ ಕನ್ನಡಕ್ಕೆ ವಿಶಿಷ್ಟವಾದ ಛಂದಸ್ಸಿನ ಸ್ವರೂಪ ಮತ್ತು ಪ್ರಕಾರಗಳು ಬಂದಿರುವುದರಿಂದ ಇದಕ್ಕೆ ಹೆಚ್ಚಿನ ತಾಂತ್ರಿಕ ಮಹತ್ವ ಬಂದಿತ್ತೆಂದು ತಿಳಿಸುತ್ತಾರೆ. 'ಕರ್ನಾಟಕ ಕಾದಂಬರಿ'ಯು ಬಾಣಕಾದಂಬರಿಯಿಂದ ಅನುವಾದಗೊಂಡ ಗ್ರಂಥವಾಗಿದೆ. ಕಾದಂಬರಿಯ ಮೂಲ ಕಥಾಸಾರ, ಪಾತ್ರಗಳ ಜೀವಾಳ, ವರ್ಣನೆಗಳ ಸ್ವಾರಸ್ಯ ಕಲ್ಪನೆಗಳ ಸೌಂದರ್ಯಗಳಿಗೆ ಕುಂದು ಬಾರದಂತೆ ರಚಿಸಲಾಗಿದೆ.

'ದುರ್ಗಸಿಂಹ'ನು ೧೧ನೇ ಶತಮಾನದಲ್ಲಿ ಕನ್ನಡದ ಪಂಚತಂತ್ರ ಕಥೆಗಳು ಎಂಬ ಚಂಪೂ ಗ್ರಂಥವನ್ನು ರಚಿಸಿದನು. ಪಂಚತಂತ್ರ ಗ್ರಂಥಕ್ಕೆ ಆಕರವಾಗಿ ವಸುಭಾಗಭಟ್ಟನ ಪಂಚತಂತ್ರವನ್ನಾಧರಿಸಿ ರಚಿಸಿದ್ದಾನೆ. ವಸುಭಾಗಭಟ್ಟನು 'ಗುಣಾಢ್ಯನ' ಪೈಶಾಚಿ ಭಾಷೆಯಲ್ಲಿ ರಚಿತವಾಗಿರುವ ಬೃಹತ್ ಕಥೆಯನ್ನಾಧರಿಸಿ ರಚಿಸಿರುವುದನ್ನು ಪ್ರಸ್ತಾಪಿಸುತ್ತಾ ಪಂಚತಂತ್ರವು ಒಂದು ಕಥನಕಾವ್ಯ, ಒಂದೊಂದು ತಂತ್ರದಲ್ಲೂ ಕತೆಯೊಳಗೆ ಕತೆ ಬಂದು ಕೃತಿಯ ಹಲವು ಚಿಕ್ಕ ದೊಡ್ಡ ಕತೆಗಳನ್ನಾಗಿ ಹೆಣೆಯಲಾಗಿದೆ. ಉತ್ತಮ ಶೈಲಿ, ತಂತ್ರಗಾರಿಕೆ ಪ್ರೌಢಿಮೆಯಿಂದ ಕೂಡಿದೆ. ನೀತಿ ನಿರೂಪಣೆ ಕವಿಯ ಮುಖ್ಯ ಉದ್ದೇಶದಂತಿದ್ದು ದಡ್ಡ ರಾಜಕುಮಾರನನ್ನು ತಿದ್ದುವ ಸಲುವಾಗಿ ಹುಟ್ಟಿಕೊಂಡ ಇಲ್ಲಿಯ ಕತೆಗಳು ಮಿತ್ರಸಂಹಿತೆ, ಪ್ರಾಣಿವರ್ಗಕ್ಕೆ ಹಾಗೂ ಮನುಷ್ಯ ಬದುಕಿನ ಅವುಗಳ ಪರಿಹಾರಕ್ಕೆ ಉಪಾಯಗಳನ್ನು ಕಂಡುಕೊಳ್ಳಲಾಗಿದೆಂದು ಚರ್ಚಿಸುತ್ತಾರೆ. ಈ ಕಾಲಾವಧಿಯಲ್ಲಿ ಕಂಡುಬರುವ 'ಚಂದ್ರರಾಜ'ನ ಮದನತಿಲಕ(ಕಾಮಶಾಸ್ತ್ರ)ಗ್ರಂಥ, ಶ್ರೀಧರಾಚಾರ್ಯನ ಜ್ಯೋತಿಷ್ಯ ಗ್ರಂಥಗಳು ಶಾಸ್ತ್ರಗ್ರಂಥಗಳಾಗಿವೆ. ಛಂದಸ್ಸಿನ ವಿವಿಧ ಪ್ರಕಾರದ ಚಂಪೂ ಪ್ರಯೋಗಗೊಂಡಿರುವುದು ಮದನತಿಲಕ, ಕೃತಿಯಲ್ಲಿ ಎಂದು ಪರಿಚಯಿಸುತ್ತಾರೆ.

'ನಾಗಚಂದ್ರ' ೧೧ನೇ ಶತಮಾನದಲ್ಲಿ ಕಂಡುಬರುವನೆಂದು ಪರಿಚಯಿಸುವ ಮುಗಳಿ ಅವರು ನಾಗಚಂದ್ರನು 'ಮಲ್ಲಿನಾಥಪುರಾಣ', 'ರಾಮಚಂದ್ರಚರಿತಪುರಾಣ' ಅಥವಾ 'ಪಂಪರಾಮಾಯಣ'ವೆಂದು ಕರೆಯುವ ಈ ಗ್ರಂಥಗಳು ಜೈನ ಸಂಪ್ರದಾಯದಡಿಯಲ್ಲಿ ರಚಿಸಿದ ಕನ್ನಡದ ಅಪರೂಪವಾದ ಗ್ರಂಥಗಳಾಗಿವೆ ಎಂದಿದ್ದಾರೆ. ಮಲ್ಲಿನಾಥಪುರಾಣವು ೧೯ನೇ ತೀರ್ಥಂಕರನಾದ ಮಲ್ಲಿನಾಥನ ಚರಿತ್ರೆಯನ್ನಾಧರಿಸಿದೆ. ೧೪ ಆಶ್ವಾಸಗಳನ್ನೊಳಗೊಂಡ ಈ ಗ್ರಂಥದಲ್ಲಿ "ವೈಶ್ರವಣನೆಂಬ ಅರಸನು ಭೋಗದ ಪರಮ ಸೀಮೆಯನ್ನು ಮುಟ್ಟಿ ಇರುವಾಗ ಸಿಡಿಲಿನ ಹೊಡೆತದಿಂದ ನೆಲಕ್ಕೆ ಬಿದ್ದ ಆಲದ ಮರವನ್ನು ನೋಡಿ ಮರುಗಿದನು. ಸಂಸಾರದ ಅನಿತ್ಯತೆಯನ್ನು ಅರಿತು ವೈರಾಗ್ಯ ತಾಳಿ ತಪಸ್ಸನ್ನು ಕೈಗೊಂಡನು. ಮುಂದೆ ಅಹಮಿಂದ್ರನಾದನು. ಎರಡನೇ ಜನ್ಮದಲ್ಲಿ ಮಲ್ಲಿನಾಥನಾಗಿ ಹುಟ್ಟಿ ಚಿಕ್ಕವನಿದ್ದಾಗಲೆ ವಿರಕ್ತನಾಗಿ ತಪಶ್ಶಕ್ತಿಯಿಂದ ಕೇವಲ ಜ್ಞಾನಿಯಾದನು ತೀರ್ಥಂಕರನಾದನು"[೩೮] ಎಂಬ ಕಥಾವೃತ್ತಾಂತ ತಿಳಿಸುತ್ತಾರೆ. ನಾಗಚಂದ್ರನ ಇನ್ನೊಂದು ಗ್ರಂಥವಾದ 'ರಾಮಚಂದ್ರಚರಿತಪುರಾಣ' ಅಥವಾ ಪಂಪರಾಮಾಯಣ ಗ್ರಂಥ ಕುರಿತು ತಿಳಿಸುವ ಮುಗಳಿ ಅವರು ಕವಿರಾಜಮಾರ್ಗದಲ್ಲಿ ಬಂದಿರುವ ಕೆಲವು ಪದ್ಯಗಳಿಂದ ಅದಕ್ಕೂ ಹಿಂದೆ ಕನ್ನಡದಲ್ಲಿ ರಾಮಾಯಣ ಗ್ರಂಥವು ಒಂದಾದರೂ ಇರಬೇಕೆಂದು ಊಹಿಸಬಹುದು. ಪೊನ್ನನ ರಾಮಕತೆಯಂತೂ ದೊರೆತಿಲ್ಲ. ಆದರೆ ನಮಗೆ ಸಂಪೂರ್ಣವಾಗಿ ಕನ್ನಡದಲ್ಲಿ ದೊರತ್ತಿತೆನ್ನಲಾದ ರಾಮಚಂದ್ರಚರಿತ ಪುರಾಣವೆ ಮೊದಲನೆಯದೆಂಬ ನಿರ್ಣಯಕ್ಕೆ ಬರುತ್ತಾರೆ. ಅಭಿನವ ಪಂಪನಾದ ನಾಗಚಂದ್ರನು ಈ ಗ್ರಂಥಕ್ಕೆ ವಾಲ್ಮೀಕಿ ರಾಮಾಯಣದಿಂದ ಸಹಾಯ ಪಡೆದಿಲ್ಲ. ಬದಲಾಗಿ ವಿಮಲಸೂರಿಯ 'ಪಉಮಚರಿಅ'(ಪದ್ಮಚರಿತ) ಎಂಬ ಪ್ರಾಕೃತ ಗ್ರಂಥದಿಂದ ಆಧಾರವಾಗಿ ಬಳಸಿಕೊಂಡಿದ್ದರ ಕುರಿತು ಪ್ರಸ್ತಾಪಿಸುತ್ತಾರೆ. ಈ ಗ್ರಂಥ ೧೬ ಆಶ್ವಾಸಗಳಿಂದ ಕೂಡಿದ್ದು ವಾಲ್ಮೀಕಿ ರಾಮಾಯಣಕ್ಕೂ

ಪಂಪರಾಮಾಯಣಕ್ಕೂ ತುಂಬಾ ವ್ಯತ್ಯಾಸವಾಗಿರುವುದು ಈ ಗ್ರಂಥದಲ್ಲಿ ಕಂಡುಬರುತ್ತದೆ. ವಾಲ್ಮೀಕಿ ರಾಮಾಯಣದಲ್ಲಿ ರಾವಣನನ್ನು ಸಂಹರಿಸುವವನು ರಾಮನಾದರೆ, ಇಲ್ಲಿ ರಾವಣನನ್ನು ಸಂಹರಿಸುವವನು ಲಕ್ಷ್ಮಣ. ಏಕೆಂದರೆ "ರಾಮನು ಹಿಂಸೆಯನ್ನು ಮಾಡಲಾರದ ಚರಮದೇಹಧಾರಿ ಅಂದರೆ ಕೊನೆಯ ಜನ್ಮ ತಾಳಿದವನು"[೫೯] ಒಟ್ಟಿನಲ್ಲಿ ನಾಗಚಂದ್ರನ ಈ ಪಂಪರಾಮಾಯಣದಲ್ಲಿ ಬರುವ ಸೀತಾಪಹರಣ, ಸೀತಾಪರಿತ್ಯಾಗದಂತಹ ಸಂದರ್ಭಗಳು ಕರುಣರಸದಿಂದ ಕೂಡಿದ ಪ್ರಮುಖ ಭಾಗಗಳನ್ನು ಮುಗಳಿ ಅವರು ಹೆಚ್ಚು ಅರ್ಥಪೂರ್ಣವಾಗಿ ಚರ್ಚಿಸಿದ್ದಾರೆ. ಜೈನ ಸಂಪ್ರದಾಯದಡಿಯಲ್ಲಿ ರಚಿತಗೊಂಡ ಈ ಗ್ರಂಥವು ವಂಶವೃತ್ತಾಂತ, ಜನ್ಮಾಂತರ ಕತೆಗಳು ಧರ್ಮೋಪದೇಶಿಸುವ ಈ ಗ್ರಂಥದಲ್ಲಿ ಬರುವ ಎಲ್ಲಾ ಪಾತ್ರಗಳಿಗೆ ಅಹಿಂಸೆಯೆಂಬ ಜೈನದೀಕ್ಷೆ ಕೊಡಿಸಲು ಮುಂದಾದ ನಾಗಚಂದ್ರನು ಮೂಲ ರಾಮಾಯಣವನ್ನು ಮುರಿದು ಕಟ್ಟುವಲ್ಲಿ ಯಶಸ್ವಿಯಾಗುತ್ತಾನೆ.

'ಕಂತಿ' ಕವಯಿತ್ರಿಯು 'ಕಂತಿಹಂಪನ ಸಮಸ್ಯೆಗಳು' ಎಂಬ ಕೆಲವು ಪದ್ಯಗಳನ್ನು ರಚಿಸಿದ್ದರ ಕುರಿತು ಚರ್ಚಿಸುವ ಮುಗಳಿ ಅವರು ಕಂತಿಯನ್ನು ೧೮೩೮ರಲ್ಲಿ ದೇವಚಂದ್ರನು ಇವಳನ್ನು 'ಅಭಿನವ ವಾಗ್ದೇವಿ'ಯೆಂದೂ, ಅಧಿಕ ಕವೀಶ್ವರಿಯೆಂದೂ ಕರೆದಿರುವುದರ ಬಗ್ಗೆ ಪ್ರಸ್ತಾಪಿಸುತ್ತಾರೆ. "ಅವಳ ಹೆಸರಲ್ಲಿರುವ ಸಮಸ್ಯಾಪೂರ್ತಿಯ ಪದ್ಯಗಳಲ್ಲಿ ಚಮತ್ಕೃತಿಯಿದೆ, ಪದ್ಯರಚನೆಯ ಸೌಲಭ್ಯವಿದೆ. ಉದಾಹರಣೆಗೆ ವನದೊಳಗೆ ಪುಟ್ಟಿ ಬೆಳೆಯುತೆ ವನಿಗಪಂ ಪತ್ತುದೆಸೆಗೆ ಬೀಱುತ್ತಿಪಾ ಘನತರ ಸುರುಚಿರ ಸಚ್ಚಂ ದನವಂ ಕಡಿಕಡಿದು ಬಸದಿಗೆಜೆಯುತ್ತಿರ್ದರ್"[೬೦] ಅಭಿನವ ಪಂಪನ ಸಮಕಾಲೀನಳಾಗಿ ಅವಳಿದ್ದುದೇ ನಿಜವಿದ್ದರೆ ಕನ್ನಡ ಕವಯಿತ್ರಿಯರಲ್ಲಿ ಅವಳು ಮೊದಲಿಗಳಾಗುತ್ತಾಳೆಂಬುದನ್ನು ಊಹಿಸುತ್ತಾರೆ. ಆದರೆ ನಾಗಚಂದ್ರನ ಗ್ರಂಥಗಳಲ್ಲಿ ಕಂತಿಯ ಪ್ರಸ್ತಾಪ ಬರುವುದಿಲ್ಲ. ಆದ್ದರಿಂದ ಕಂತಿ ಕವಯಿತ್ರಿಯ ಕಾಲಗಣನೆಯನ್ನು ನಿಖರವಾಗಿ ತಿಳಿಸಲು ತೊಡಕಾಗಿದೆಂಬ ಅಭಿಪ್ರಾಯಕ್ಕೆ ಬರುತ್ತಾರೆ.

'ನಯಸೇನ' ೧೨ನೇ ಶತಮಾನದ ದೇವನಾದ ಈತನು 'ಧರ್ಮಾಮೃತ' ಚಂಪೂ ಗ್ರಂಥ ರಚಿಸಿದ್ದಾನೆ. ಇದು ಜನತೆಗಾಗಿ ಬರೆದ ಮೊದಲ ಜೈನ ಪುರಾಣವಾಗಿದೆ. ೧೪ ಮಹಾಪುರುಷರ ಕತೆಗಳನ್ನು ತಿಳಿಸುವ ಈ ಗ್ರಂಥವು ೧೪ ಆಶ್ವಾಸಗಳಲ್ಲಿ ರಚಿತಗೊಂಡಿದೆ ಎಂಬುದರ ಬಗ್ಗೆ ತಿಳಿಸುವ ಮುಗಳಿ ಅವರು ನಯಸೇನನು ಪರಂಪರೆಯಿಂದ ಬಂದ ಕತೆಗಳನ್ನೆ ಹಿಂಜಿ ಹೇಳಲು ಪ್ರಯತ್ನಿಸಿದ್ದಾನೆ. ಜನತೆಯ ಕವಿಗಳೆಂದು ಹೆಸರಾದ ಕನ್ನಡ ಕಲೋಪಾಸಕರಲ್ಲಿ ನಯಸೇನನು ತೀರ ಎತ್ತರದಲ್ಲಿ ಅಲ್ಲದಿದ್ದರೂ ಎದ್ದು ಕಾಣುವ ನೆಲೆಯಲ್ಲಿ ಕೂಡ ನಿಲ್ಲಬಲ್ಲವನಾಗಿದ್ದಾನೆ. 'ಬ್ರಹ್ಮಶಿವ' ೧೨ನೇ ಶತಮಾನದಲ್ಲಿದ್ದಿರಬಹುದಾದ ಈತನು ಸಮಯಪರೀಕ್ಷೆ ತಾತ್ವಿಕ ಗ್ರಂಥವನ್ನು ಹಾಗೂ ತ್ರೈಲೋಕ್ಯಚೂಡಾಮಣಿ ಎಂಬ ಸ್ತೋತ್ರವನ್ನು ರಚಿಸಿದ್ದಾನೆ. 'ಸಮಯಪರೀಕ್ಷೆ' ಇದು ಕಂದವೃತ್ತಗಳಲ್ಲಿ ೧೫ ಅಧಿಕಾರಗಳುಳ್ಳ ಮತಪ್ರಚಾರಕ ಗ್ರಂಥವೆಂದು ತಿಳಿಸುವ ಮುಗಳಿ ಅವರು "ಜೈನ ಮತವೇ ಶ್ರೇಷ್ಠವೆಂದು ಬೌದ್ಧಿಕ ನೆಲೆಯಲ್ಲಿ ತೋರಲಾಗಿದೆ. ಗ್ರಂಥದಲ್ಲಿ ಕಥಾನಕವಿಲ್ಲ, ಪಾತ್ರಸೃಷ್ಟಿಯಿಲ್ಲ,

ಸಮರಸವಿಲ್ಲ, ಅಷ್ಟಾದಶವರ್ಣನೆಯಿಲ್ಲ, ಕತೆಯೆಲ್ಲ ಜೈನಮತದ್ದು ಜನಸಾಮಾನ್ಯರೆ ಪಾತ್ರಗಳು ವಿಡಂಬನೆಯಲ್ಲಿಯೇ ಇದರ ನವರಸ ಅಪಹಾಸ್ಯವೇ ಸ್ಥಾಯಿ"೪೧ ಎಂದಿದ್ದಾರೆ.

'೨ನೇ ನಾಗವರ್ಮ' ೧೨ನೇ ಶತಮಾನದ ಮೊದಲ ಭಾಗದಲ್ಲಿ ಇದ್ದವನಾದ ಈತನ ವರ್ಧಮಾನಪುರಾಣ, ಛಂದೋವಿಚಿತಿ, ಅಭಿದಾನವಸ್ತುಕೋಶ, ಕಾವ್ಯಾವಲೋಕನ, ಕರ್ನಾಟಕ ಭಾಷಾಭೂಷಣ ಎಂಬ ಗ್ರಂಥಗಳ ಕರ್ತೃ. ಛಂದೋವಿಚಿತಿ ಉಪಲಬ್ಧವಾಗಿಲ್ಲ ಹಾಗೂ ಜಿನಪುರಾಣವನ್ನು ಬರೆದಿರಬೇಕೆಂದು ಊಹಿಸುವಂತಿದೆ ಎಂದಿದ್ದಾರೆ. ಕ್ರಿ.ಶ. ೫೦ ರಿಂದ ಕ್ರಿ.ಶ. ೧೨೦೦ ಮಧ್ಯಕಾಲದವರೆಗಿನ ಪ್ರಮುಖ ಕವಿಗಳ ಪರಿಚಯ, ಕೃತಿ ಪರಿಚಯ, ಸಮೀಕ್ಷೆ, ಕನ್ನಡ ಸಾಹಿತ್ಯದ ಪ್ರೌಢಿಮೆ, ಚಂಪೂ ಕಾವ್ಯಗಳ ರೂಪದ ಹಿರಿಮೆಯ ಬಗ್ಗೆ ಲೌಕಿಕ-ಧಾರ್ಮಿಕವಾಗಿ ಎರಡು ಬಗೆಯ ಕೃತಿಗಳು ಹುಟ್ಟಿಕೊಂಡವು. ಲೌಕಿಕ ಕಾವ್ಯಗಳಲ್ಲಿ ಐತಿಹಾಸಿಕ ಧ್ವನಿ ಸೇರಿಕೊಂಡಿತು. ನೇರವಾದ ಚಾರಿತ್ರ ಕಾವ್ಯಗಳಿಗಿಂತ ಬೇರೆಯಾದ ಈ ಸರಣಿ ಕನ್ನಡ ಹಾಗೂ ಭಾರತಿಯ ಸಾಹಿತ್ಯಕ್ಕೆ ಅಪೂರ್ವವಾಯಿತು. ಪ್ರೌಢಕಾವ್ಯಗಳ ಪರಿಣಾಮವು ಪಂಡಿತರಿಗೆ ಮಾತ್ರ ಮರ್ಯಾದಿತವಾಗಲು ಈ ಕಾಲದ ಕೊನೆಯ ಭಾಗದಲ್ಲಿ ಸುಲಭವಾದ ಪದ್ಯಪ್ರಚುರವಾದ ಚಂಪೂವಿನ ಸಾಹಿತ್ಯವು ಮೊದಲಾಯಿತು. ಅದರಲ್ಲಿ ಸಂಸ್ಕೃತದ ಅತಿರೇಕದ ವಿರುದ್ಧ ಬಂಡೆದ್ದು ಕನ್ನಡ ಜನವಾಣಿಗೆ ಪ್ರಾಶಸ್ತ್ಯ ದೊರೆಯಲು ತೊಡಗಿತು. ಇದರ ಮುಂದಿನ ಕಾಲಾವಧಿಯಲ್ಲಿ ಸಾಹಿತ್ಯದ ನವೀನ ಪ್ರಯೋಗ ರೀತಿಯಲ್ಲಿ ವಚನ ಸಾಹಿತ್ಯದ ಉಗಮದಿಂದಾಗಿ ವಚನಕಾರರು ಅಂದಿನ ಸಮಾಜದಲ್ಲಿ ಬದಲಾವಣೆಯನ್ನು ತಂದರು.

೧೨ನೇ ಶತಮಾನದ 'ವಚನ ಸಾಹಿತ್ಯ' ಕುರಿತು ಚರ್ಚಿಸುವ ಮುಗಳಿ ಅವರು ಜೇಡರ ದಾಸಿಮಯ್ಯ ಒಬ್ಬ ವಚನಕಾರನೆಂದು ತಿಳಿಸುವ ಅವರು "ಆದ್ಯರ ವಚನವಿರಲು ಬೇರೆ ಬಾವಿಯ ತೋಡಿ ತೋಡಿ ಉಪ್ಪು ನೀರು ಸವಿದಂತಾಯಿತ್ತಯ್ಯಾ ಎನ್ನ ಯುಕ್ತಿ, ಎಂಬ ಸಾಮಾನ್ಯ ಉಕ್ತಿ ಅಲ್ಲದೇ 'ದೇವರ ದಾಸಿಮಯ್ಯ' ಎಂದು ಆದ್ಯ ವಚನಕಾರರಲ್ಲಿ ಒಬ್ಬನ ಉಲ್ಲೇಖವು ಸಹ ಬಸವೇಶ್ವರರ ವಚನಗಳಲ್ಲಿ ದೊರೆಯುತ್ತದೆ. ದೇವರ ಇಲ್ಲವೆ ಜೇಡರ ದಾಸಿಮಯ್ಯ, ಶಂಕರ ದಾಸಿಮಯ್ಯ ಇವರಿಬ್ಬರು ಸಮಕಾಲೀನರಾಗಿ ೧೧ನೇ ಶತಮಾನದ ಪೂರ್ವಾರ್ಧದಲ್ಲಿ ಚಾಲುಕ್ಯ ಜಯಸಿಂಹನ ಕಾಲದಲ್ಲಿದ್ದರೆಂದು ತಿಳಿಯುತ್ತದೆ. ಈ ಐತಿಹಾಸಿಕ ಸಂಗತಿಯನ್ನು ಅಲ್ಲಗಳೆಯುವುದಕ್ಕೆ ಪ್ರಬಲ ಕಾರಣಗಳಿಲ್ಲ. ಆದ್ದರಿಂದ ಬಸವೇಶ್ವರರಿಗಿಂತ ಒಂದು ನೂರು ವರ್ಷ ಮುಂಚಿತವಾದ ಕಾಲದಿಂದ ಕೆಲವು ಶಿವಶರಣರು ತಮ್ಮ ಚಾರಿತ್ರ್ಯದಿಂದಲು ವಚನಗಳಿಂದಲೂ ಸಂಸ್ಕೃತಿ ಸಾಹಿತ್ಯವನ್ನು ಬೆಳೆಸುತ್ತಿದ್ದರೆಂದು ಊಹಿಸಬಹುದೆಂದಿದ್ದಾರೆ."೪೨

'ಅಲ್ಲಮಪ್ರಭು' ಅನುಭವ ಮಂಟಪದ ಶೂನ್ಯ ಸಿಂಹಾಸನದ ಅಧ್ಯಕ್ಷರಾಗಿದ್ದ ಅಲ್ಲಮರು ಮಾತೆಂಬುದು ಜ್ಯೋತಿರ್ಲಿಂಗಕ್ಕೆ ಹೋಲಿಸಿ ಮಾತಿನ ಮಹತ್ವ, ಪ್ರಾಮುಖ್ಯತೆಯನ್ನು ಎತ್ತಿ ಹೇಳಿ ಅಂದಿನ ಸಮಾಜದ ಢಾಂಬಿಕತನವನ್ನು ಮಟ್ಟಹಾಕಲು ಬಂಡಾಯ ರೀತಿಯಲ್ಲಿ ಈ ವಚನ

ಪ್ರಸ್ತಾಪಿಸಿದಂತಿದೆ. 'ವೇದವೆಂಬುದು ಓದಿನ ಮಾತು, ಶಾಸ್ತ್ರವೆಂಬುದು ಸಂತೆಯ ಸುದ್ದಿ, ಪುರಾಣವೆಂಬುದು ಪುಂಡರ ಗೋಷ್ಠಿ, ತರ್ಕವೆಂಬುದು ತಗರ ಹೋರಟೆ, ಭಕ್ತಿಯೆಂಬುದು ತೋರಿ ಉಂಬ ಲಾಭ, ಗುಹೇಶ್ವರನೆಂಬುದು ಮೀರಿದ ಘನವು. ಭಸ್ಮವ ಹೂಸಿ ಬತ್ತಲೆ ಇದ್ದರೇನು ಬ್ರಹ್ಮಚಾರಿಯೇ? ಆಶವನುಂಡು ವ್ಯಸನವ ಮರೆದರೇನು ಬ್ರಹ್ಮಚಾರಿಯೆ? ಭಾವ ಬತ್ತಲೆ ಇದ್ದು ಮನವು ಗಂಭೀರವಾದರೆ ಅದು ಸಹಜನಿರ್ವಾಣ ಕಾಣ ಗುಹೇಶ್ವರ'[೬೩] ಅದೇ ರೀತಿ ಬಸವಣ್ಣನವರ ಬಗ್ಗೆ ಪ್ರಸ್ತಾಪಿಸುವ ಲೇಖಕರು ಅವರ ಹಲವು ವಚನಗಳನ್ನು ಚರ್ಚಿಸಿದ್ದಾರೆ. 'ಅಯ್ಯಾ ಎಂದರೆ ಸ್ವರ್ಗ ಎಲವೋ ಎಂದರೆ ನರಕ, ದಯವಿಲ್ಲದ ಧರ್ಮವಾವುದಯ್ಯಾ? ದಯೆವೆ ಬೇಕು ಸಕಲಪ್ರಾಣಿಗಳೆಲ್ಲರಲಿ. ದಯೆವೆ ಧರ್ಮದ ಮೂಲವಯ್ಯಾ' ಎಂಬ ಇತ್ಯಾದಿ ವಚನಗಳನ್ನು ಮುಗಳಿ ಅವರು ಪ್ರಸ್ತಾಪಿಸಿ ಚರ್ಚಿಸಿದ್ದಾರೆ. ಅದೇ ರೀತಿ 'ಯೋಗಾಂಗತ್ರಿವಿಧಿ' ಚಿಕ್ಕ ತ್ರಿಪದಿ ಕೃತಿ ರಚಿಸಿದ ಅಕ್ಕಮಹಾದೇವಿ ಬಗ್ಗೆ ಮತ್ತು ವಚನಕಾರರಾದ ಅಂಬಿಗರ ಚೌಡಯ್ಯ, ಮೋಳಿಗೆಯ ಮಾರಯ್ಯ, ನುಲಿಯ ಚಂದಯ್ಯ, ಮಡಿವಾಳ ಮಾಚಯ್ಯ ಹಾಗೂ ವಚನಗಾರ್ತಿಯರಾದ ಮಹಾದೇವಿ, ಬಿಜ್ಜಳದೇವಿ, ಕಾಳವ್ವೆ, ನೀಲಮ್ಮ ಹೆಸರುಗಳನ್ನು ಪ್ರಸ್ತಾಪಿಸುತ್ತಾರೆ. ೧೨ನೇ ಶತಮಾನ ವಚನಕಾರರ ಸುಗ್ಗಿ ಕಾಲವಾಗಿತ್ತು. ಏಕೆಂದರೆ ಆ ಕಾಲದಲ್ಲಿ ೨೦೦ಕ್ಕೂ ಹೆಚ್ಚು ವಚನಕಾರರ ಅಂಕಿತಗಳು ನಮಗೆ ದೊರೆಯುತ್ತವೆ.

ಮುಂದಿನ ಭಾಗದಲ್ಲಿ ಕವಿಗಳ ಕಾಲಗಣನೆ ಕೃತಿಗಳ ವಿಶ್ಲೇಷಣೆಯನ್ನು ಸಂಕ್ಷಿಪ್ತವಾಗಿ ತಿಳಿಸಲಾಗಿದೆ. 'ಹರಿಹರ' ೧೨ನೇ ಶತಮಾನದಲ್ಲಿ ಕಂಡುಬರುವ ಈತ ಗಿರಿಜಾ ಕಲ್ಯಾಣ, ಶಿವಗಣದ ರಗಳೆಗಳು, ಪಂಪಾಶತಕ, ರಕ್ಷಾಶತಕ, ಮುಡಿಗೆಯ ಅಷ್ಟಕ ಗ್ರಂಥಗಳನ್ನು ರಚಿಸಿದ್ದಾನೆ. ಗಿರಿಜಾಕಲ್ಯಾಣವು ಹರಿಹರನ ವೈಶಿಷ್ಟ್ಯದಿಂದ ಕೂಡಿದ ಕೃತಿ. ಕನ್ನಡದ ಮೊದಲ ಚಂಪೂ ಗ್ರಂಥ. ಶೈವಪುರಾಣ ಮತ್ತು ಸಂಸ್ಕೃತ ಕಾವ್ಯಗಳಲ್ಲಿ ವರ್ಣಿತವಾದ ಶಿವ–ಪಾರ್ವತಿಯರ ಮದುವೆ ಹಿನ್ನೆಲೆಯ ಕಥಾವಸ್ತುವನ್ನೊಳಗೊಂಡ ಕೃತಿಯಾಗಿದೆ. 'ರಾಘವಾಂಕ' ೧೨ನೇ ಶತಮಾನದ ಕೊನೆಯ ಭಾಗದಲ್ಲಿ ಇದ್ದವನೆಂದು ತಿಳಿದುಬಂದಿದೆ. ಇವನ ಕೃತಿಗಳಾದ ಸೋಮನಾಥಚರಿತೆ, ವೀರೇಶಚರಿತೆ, ಸಿದ್ಧರಾಮಪುರಾಣ, ಹರಿಶ್ಚಂದ್ರಚಾರಿತ್ರ ಉಪಲಬ್ಧ ಕೃತಿಗಳು ಅವನೆ ರಚಿಸಿದೆನ್ನಲಾದ ಶರಭ ಚಾರಿತ್ರ್ಯ ಮತ್ತು ಹರಿಹರನ ಮಹತ್ವ ಕೃತಿಗಳು ದೊರೆತಿಲ್ಲ ಎಂಬುದರ ಬಗ್ಗೆ ಪ್ರಸ್ತಾಪಿಸುತ್ತಾರೆ. ಹಾಗೆ ಮುಂದುವರಿದು ನೇಮಿಚಂದ್ರ, ರುದ್ರಭಟ್ಟ, ಜನ್ನ ಕವಿಗಳ ಬಗ್ಗೆ ತಿಳಿಸುವ ಮುಗಳಿ ಅವರು ನೇಮಿಚಂದ್ರನ ಲೀಲಾವತಿ ಪ್ರಬಂಧ ಮತ್ತು ನೇಮಿನಾಥಪುರಾಣವೆಂಬ ಎರಡು ಚಂಪೂ ಗ್ರಂಥ ರಚಿಸಿದ್ದಾನೆ. ರುದ್ರಭಟ್ಟನ ಜಗನ್ನಾಥವಿಜಯ, ಜನ್ನ ಕವಿಯ ಯಶೋಧರಚರಿತೆ, ಅನಂತನಾಥಪುರಾಣ ಕೃತಿಗಳನ್ನು ಚರ್ಚಿಸಿರುವ ಲೇಖಕರು ಆಂಡಯ್ಯನ ಕಬ್ಬಿಗರ ಕಾವ್ಯದ ಬಗ್ಗೆ ತಿಳಿಸುವಂತೆ ಶಿವನು ಚಂದ್ರನನ್ನು ಕದ್ದುಕೊಂಡು ಒಯ್ದು ತಿರುಗಿ ಕೊಡದೆ ಇರುವಾಗ ಕಾಮನು ಅವನ ಮೇಲೆ ದಂಡೆತ್ತಿಹೋಗುತ್ತಾನೆ. ಆಗ ಶಿವನು ಕಾಮನನ್ನು ಸೋಲಿಸಿ ಅರೆಹೆಣ್ಣು ಮಾಡುತ್ತಾನೆ. ಶಿವನ ಕೋಪಕೆ ಈಡಾದ ಕಾಮನು ಯಾರ ಕಣ್ಣಿಗೆ ಕಾಣದ ಹಾಗೆ ಇರುವ ವೃತ್ತಾಂತ ಒಳಗೊಂಡಿದೆ.

೧೨ನೇ ಶತಮಾನದ ಮಧ್ಯದವರೆಗೆ ಪ್ರಧಾನವಾಗಿದ್ದ ಮಾರ್ಗಕಾವ್ಯವು ೧೫ನೇ ಶತಮಾನದವರೆಗೆ ವಚನಸಾಹಿತ್ಯ ಮತ್ತು ಹಾಡುಗಬ್ಬಗಳೊಡನೆ ಸೇರಿಕೊಂಡಿತು. ಆದರೆ ೧೫ನೇ ಶತಮಾನದ ಮುಂದಿನ ೨೦೦-೩೦೦ ವರ್ಷಗಳ ಕಾಲದಲ್ಲಿ ಅದಕ್ಕೆ ಗುಣ ಸ್ಥಾನ ದೊರೆಯಿತು. ಹಾಡುಗಬ್ಬಕ್ಕೆ ಪ್ರಧಾನಪಟ್ಟ ಸಿಕ್ಕಿತು. ಷಟ್ಪದಿ ಸಾಂಗತ್ಯ ಮುಂತಾದ ರೂಪಗಳಲ್ಲಿ ಗ್ರಂಥರಚನೆ ವಿಪುಲವಾಗಿ ಬೆಳೆಯಿತು. ಚಂಪೂರೂಪ ಹಿಂದೆ ಬಿದ್ದಿತು. ಸಾಹಿತ್ಯವು ಹೆಚ್ಚು ಹೆಚ್ಚಾಗಿ ಜನಾಭಿಮುಖಿಯಾಗುತ್ತಾ ಬಂದಿತು ಎಂದಿದ್ದಾರೆ. ೧೪ನೇ ಶತಮಾನದ ಕೊನೆಯ ಭಾಗದಲ್ಲಿ ಕಂಡುಬಂದ ಕುಮಾರವ್ಯಾಸನು ಗದುಗಿನಭಾರತ ಅಥವಾ ಕನ್ನಡಭಾರತ, ಕುಮಾರವ್ಯಾಸಭಾರತ, ಕರ್ಣಾಟ ಭಾರತ ಕಥಾಮಂಜರಿ ಎಂದು ಕರೆಯುವ ಈ ಮಹಾಕಾವ್ಯಕ್ಕೆ ಆಕರವಾಗಿ ಸಂಸ್ಕೃತ ವ್ಯಾಸಭಾರತವನ್ನು ಬಳಸಿಕೊಂಡಿದ್ದಾನೆ. ಮಹಾಭಾರತದ ೧೦ ಪರ್ವಗಳನ್ನು ಸಾರವತ್ತಾಗಿ ಕನ್ನಡಕ್ಕೆ ತಂದುಕೊಟ್ಟವನು. ಇದು ಭಾಮಿನಿ ಷಟ್ಪದಿಯಲ್ಲಿದೆ. ಕುಮಾರವ್ಯಾಸನು ತನ್ನ ಕಾವ್ಯೋದ್ದೇಶವಾದ ತಿಳಿಯ ಹೇಳುವೆ ಕೃಷ್ಣ ಕಥೆಯನು ಇಳೆಯ ಜನ ಮೆಚ್ಚುವಂತಿರೆ ನೆಲೆಗೆ ಪಂಚಮ ಶ್ರುತಿಯ ನೊರೆವೆನು ಕೃಷ್ಣಮೆಚ್ಚಲಿಕೆ' ಎಂಬ ಉಕ್ತಿಯನ್ನು ತಿಳಿಸಲಾಗಿದೆ.

ಕುಮಾರವ್ಯಾಸನು ತನ್ನ ಭಾರತದಲ್ಲಿರುವ ವಿಷಯವು ಯಾವ ಯಾವ ಜನರಿಗೆ ಅದರಿಂದ ಸ್ಫೂರ್ತಿ ದೊರೆಯುತ್ತದೆಂದು ತಿಳಿಸುವ ಉಕ್ತಿ 'ಅರಸುಗಳಿಗಿ ಇದು ವೀರ ದ್ವಿಜರಿಗೆ ಪರಮವೇದಸಾರ, ಯೋಗೀಶ್ವರರ ತತ್ವವಿಚಾರ, ಮಂತ್ರಿಜನಕೆ ಬುದ್ಧಿಗುಣ, ವಿರಹಿಗಳ ಶೃಂಗಾರ, ವಿದ್ಯಾಪರಿಣತರ ಅಲಂಕಾರ' ಎಂಬುದರ ಬಗ್ಗೆ ಪ್ರಸ್ತಾಪಿಸುತ್ತಾ ವಿರಾಟಪರ್ವದಲ್ಲಿ ಬರುವ ದ್ರೌಪದಿಯು ಅಪಮಾನಕ್ಕೆ ಈಡಾಗುವಂತಹ ಸನ್ನಿವೇಶಗಳು ಮತ್ತು ಉತ್ತರ ಗೋಗ್ರಹಣದಲ್ಲಿ ಬರುವ ಉತ್ತರಕುಮಾರನ ಪೌರುಷ ಒಲೆಯ ಮುಂದೆ ಅನ್ನುವ ಹಾಗೆ ಕೌರವರ ಯುದ್ಧಕೇಳಿ ಬಂದಾಗ ಜೊಳ್ಳು ಪೌರುಷದ ವ್ಯಕ್ತಿಯಾದ ಉತ್ತರಕುಮಾರ "ನೂರು ಕುನ್ನಿಯನು ಆಹವದ ಭೀತಾಕುಲನ, ತಾನೀಗ ಹೆಂಡಿರ ಸಾಕಿ ಬದುಕುವ ಲವಲವಿಕೆಯಲಿ ಜಾರಿಬಂದಾಗ ಕಾಕ ಬಳಸುವನು ಇವನು ನಾನು ಉದ್ರೇಕಿಸಲು ಸಮರದಲಿ ನಿಲುವರೆ ನಾಕದವರಿಗೆ ನೂರದು' ಎಂದನು ಸತಿಯರಿದಿರಿನಲಿ"[೪೪] ನಡೆದ ಈ ಸಂದರ್ಭ ತುಂಬಾ ಅರ್ಥಪೂರ್ಣವಾಗಿದೆ. ಏಕೆಂದರೆ ರಾಜನಾದ ಉತ್ತರಕುಮಾರನು ಸ್ತ್ರೀಯರ ಮುಂದೆ ಕೊಚ್ಚಿಕೊಳ್ಳುವ ಮಾತಿನಂತೆ ಯುದ್ಧಭೂಮಿಯಲ್ಲಿ ಹೋರಾಡುವುದನ್ನು ಬಿಟ್ಟು ಅಳುಮುಂಜಿಯಂತೆ ಹಿಂದೆ ಓಡುವ ಪ್ರವೃತ್ತಿಯವನಾಗಿರುತ್ತಾನೆ. ಆದ್ದರಿಂದ 'ಉತ್ತರಕುಮಾರನ ಪೌರುಷ ಒಲೆಯ ಮುಂದೆ' ಎಂಬ ನಾಣ್ಣುಡಿಯ ರೀತಿಯಲ್ಲಿ ಪ್ರಚಲಿತವಾಗಿದೆ.

೧೫ನೇ ಶತಮಾನದ ಮೊದಲ ಭಾಗದಲ್ಲಿ ಕಂಡುಬಂದ 'ಚಾಮರಸ' 'ಪ್ರಭುಲಿಂಗಲೀಲೆ' ಎಂಬ ಭಾಮಿನಿ ಷಟ್ಪದಿ ಕಾವ್ಯ ರಚಿಸಿದ್ದಾನೆಂದು ತಿಳಿಸುವ ಲೇಖಕರು ಅಲ್ಲಮನ ಜೀವನ ಸಾಧನೆ ಕುರಿತು ಹಾಗೂ ಪಾರ್ವತಿಯು ಅಲ್ಲಮನನ್ನು ಗೆಲ್ಲಲು ಬಂದು ಸೋತು ಹೋಗುವ ಕಥಾಪ್ರಸಂಗವನ್ನು ವಿವರಿಸಿದ್ದಾರೆ. ೧೫ನೇ ಶತಮಾನದಲ್ಲಿ ಕಂಡುಬಂದ 'ನಿಜಗುಣಶಿವಯೋಗಿ' ಅರಸನಾಗಿದ್ದ ಈತ

ವಿರಕ್ತನಾಗಿ ಶಂಭುಲಿಂಗನ ಬೆಟ್ಟದಲ್ಲಿ ತಪಸ್ಸು ಕೈಗೊಂಡು ಜ್ಞಾನಿಯಾದನೆಂದು ತಿಳಿಸುತ್ತಾರೆ. ಅವನ ಗ್ರಂಥಗಳಾದ 'ಕೈವಲ್ಯಪದ್ಧತಿ', 'ಪರಮಾರ್ಥಗೀತೆ', 'ಪರಮಾನುಭವ ಬೋಧೆ', 'ಪರಮಾರ್ಥ ಪ್ರಕಾಶಿಕೆ' ಮತ್ತು 'ವಿವೇಕ ಚಿಂತಾಮಣಿ' ಹಾಗೂ ಅರವತ್ತು ಮೂರು ತ್ರಿಪದಿ ಗ್ರಂಥವನ್ನು ರಚಿಸಿದ್ದಾನೆ. ಕೈವಲ್ಯ ಪದ್ಧತಿಯು ಗುರುಭಕ್ತಿಯಿಂದ ಕೂಡಿದ ಹಾಡುಗಳನ್ನು ಹೊಂದಿದೆ. ಹಾಗೆಯೇ ವಿವೇಕ ಚಿಂತಾಮಣಿ ಒಂದು ಗದ್ಯಗ್ರಂಥ ಕನ್ನಡ ಮೊದಲ ವಿಶ್ವಕೋಶ ಎಂಬ ದೃಷ್ಟಿಯಿಂದ ಇದು ಮಹತ್ವ ಪಡೆಯುತ್ತದೆ.

ಸರ್ವಜ್ಞ ೧೬-೧೭ನೇ ಶತಮಾನದಲ್ಲಿದ್ದ ಎನ್ನಲಾದ ತ್ರಿಪದಿ ರಚನಾಕಾರ. ಈತನ ಎರಡು ಸಾವಿರಕ್ಕೂ ಹೆಚ್ಚು ಸಂಖ್ಯೆಯ ತ್ರಿಪದಿಗಳು ರಚಿಸಿದ್ದರೂ, ಅವುಗಳಲ್ಲಿ ಒಂದು ಸಾವಿರ ಮಾತ್ರ ಸರ್ವಜ್ಞನವು, ಉಳಿದವು ಪ್ರಕ್ಷೇಪಣವೆಂದು ಹೇಳಲಾಗಿದೆ ಎಂದು ತಿಳಿಸುವ ಲೇಖಕರು ಇವನ ತ್ರಿಪದಿಗಳಲ್ಲಿ ನೀತಿ, ತತ್ವ, ವಿವೇಕ, ವಿಡಂಬನೆ ಅನುಭಾವಸಾರದಿಂದ ಕೂಡಿದೆ ಎಂದಿದ್ದಾರೆ. ಅದೇ ರೀತಿ ದಾಸರೆಂದರೆ ಪುರಂದರದಾಸರಯ್ಯಾ ಎಂದು ತಮ್ಮ ಗುರುಗಳಾದ ವ್ಯಾಸರಾಯರಿಂದ ಹೊಗಳಿಸಿಕೊಂಡ ಪುರಂದರರು ಒಂದು ಸಾವಿರಕ್ಕೂ ಹೆಚ್ಚು ಕೀರ್ತನೆಗಳನ್ನು ರಚಿಸಿದ್ದಾರೆಂದು ತಿಳಿಸುತ್ತಾರೆ. ಅವರ ಕೀರ್ತನೆಗಳು ಗುರುಸ್ಮರಣೆ, ಅಂತರಂಗ ನಿವೇದನೆ, ಕೃಷ್ಣಲೀಲೆ, ಸಮಾಜವಿಮರ್ಶೆ. ಸಮಾಜಬೋಧನೆ ರೀತಿಯಲ್ಲಿ ರಚನೆಗೊಂಡಿರುವ ಬಗ್ಗೆ ತಿಳಿಸುತ್ತಾರೆ. ಅವರ ಪ್ರಮುಖ ಕೀರ್ತನೆಗಳಲ್ಲಿ 'ನೀನ್ಯಾಕೊ ನಿನ್ನ ಹಂಗ್ಯಾಕೊ ನಿನ್ನ ನಾಮದ ಬಲವೊಂದಿದ್ದರೆ ಸಾಕೊ' ಹಾಗೂ 'ತನವು ನೀರೊಳಗಿದ್ದು ಫಲವೇನು, ಬೇವು ಬೆಲ್ಲದೊಳಿಡಲೇನು ಫಲ, ಮಡಿ ಮಡಿ ಮಡಿಯೆಂದು ಅಡಿಗಡಿ ಹಾರುವಿ, ಜಾಲಿಯ ಮರದಂತೆ ಧರೆಯೊಳು ದುರ್ಜನರು"[೬೫] ಎಂಬ ಪುರಂದರ ಉಕ್ತಿಯನ್ನು ನಮೂದಿಸಿದ್ದಾರೆ.

೧೫ನೇ ಶತಮಾನದಲ್ಲಿ ಕಂಡುಬರುವ 'ಕನಕದಾಸ'ರು ಕಾಗಿನೆಲೆ ಆದಿಕೇಶವ ಅಂಕಿತನಾಮದೊಂದಿಗೆ ತಮ್ಮ ಕೀರ್ತನೆಗಳೊಂದಿಗೆ ಪ್ರಸಿದ್ಧಿಗೆ ಬಂದವರು. ಇವರ ಗ್ರಂಥಗಳಾದ 'ರಾಮಧಾನ್ಯಚರಿತೆ', 'ಹರಿಭಕ್ತಿಸಾರ', 'ನಳಚರಿತ್ರೆ', 'ಮೋಹನತರಂಗಿಣಿ'ಯನ್ನು ಮತ್ತು ತತ್ವಗರ್ಭಿತವಾದ ಮುಂಡಿಗೆಗಳನ್ನು ರಚಿಸಿದ್ದಾರೆ. ಮೋಹನತರಂಗಿಣಿ ಸಾಂಗತ್ಯ ಗ್ರಂಥ. ಇದಕ್ಕೆ ಚರಿತ್ರೆ ಎಂಬ ಮತ್ತೊಂದು ಹೆಸರಿದೆ. ಈ ಗ್ರಂಥವು ಶಿವನ ಹಣೆಗಣ್ಣಿನಿಂದ ಕಾಮದಹನ, ಮನ್ಮಥಜನ್ಮ, ಶಂಬರಾಸುರವಧೆ, ಉಷಾ-ಅನಿರುದ್ಧರ ಪ್ರೇಮಲೀಲೆ, ಬಾಣಾಸುರ ವಿಜಯ ಇವು ಕಾವ್ಯದ ವಸ್ತುಗಳನ್ನೊಳಗೊಂಡಿರುವ ಕುರಿತು ಪ್ರಸ್ತಾಪಿಸುತ್ತಾರೆ. 'ಕುಲಕುಲಕುಲವೆನ್ನುತಿಹರು ಕುಲವ್ಯಾವುದು ಸತ್ಯಸುಖವುಳ್ಳ ಜನರಿಗೆ' ಹಾಗೂ 'ತನು ನಿನ್ನದು ಜೀವನಿನ್ನದು' 'ತಲ್ಲಣಿಸದಿರು ಕಂಡ್ಯ ತಾಳು ಮನವೇ' 'ನೀ ಮಾಯೆಯೊಳಗೊ ನಿನ್ನೊಳು ಮಾಯೆಯೋ' 'ನಿನ್ನಿಂದ, ನಾನೆ ಜನಿಸಿ ಬಂದೆನೆ' ಈ ಮೊದಲಾದ ಭಾವಗೀತೆಯ ಸತ್ವಭಕ್ತಿ ಸಮರಸದಿಂದ ಕೂಡಿರುವ ವಿವರ ನೀಡಿದ್ದಾರೆ. ಹಾಗೆ 'ಜಗನ್ನಾಥದಾಸ'ರ ಬಗ್ಗೆಯೂ ಪರಿಚಯಿಸುವ ಲೇಖಕರು ಇವರ ಕೀರ್ತನೆ, ಸುಳಾದಿ,

ಉಗಾಭೋಗಗಳನ್ನು ಮುಖ್ಯವಾಗಿ ಹರಿಕಥಾಮೃತಸಾರ, ದ್ವೈತವೇದಾಂತ ಹಾಗೂ ೧೨೦೦ ತತ್ವಸುವ್ವಾಲಿಗಳನ್ನು ರಚಿಸಿರುವುದಾಗಿ ತಿಳಿಸಿದ್ದಾರೆ. ಅವರ ಕೀರ್ತನೆಗಳಲ್ಲಿ "ಕಂಡೆ ಕಂಡೆ ಕೃಷ್ಣನ ಕಂಡೆ, ದಾಸೋಹಂ, ತವ ತವ ದಾಸೋಹಂ ಅರಿತವರಿಗೆ ಅತಿಸುಲಭ ಹರಿಯ ಪೂಜೆ"[೬೬] ಎಂಬ ಕೀರ್ತನೆಗಳಲ್ಲಿ ವಿವೇಚನೆಯ ಸೊಗಸು, ಹೋಲಿಕೆಗಳ ಔಚಿತ್ಯ, ಶೈಲಿ ಮತ್ತು ಛಂದಸ್ಸಿನ ಪ್ರಾಸಾದಿಕತೆಯ ಅಂಶಗಳಿಂದ ಕೂಡಿವೆ.

ಕುಮಾರವಾಲ್ಮೀಕಿಯ 'ತೊರವೆಯ ರಾಮಾಯಣ'ವು 'ವಾಲ್ಮೀಕಿ ರಾಮಾಯಣ'ದಿಂದ ಕನ್ನಡಕ್ಕೆ ಅನುವಾದ ಕಾವ್ಯವಾಗಿದೆ. ಇದರಲ್ಲಿ ಐದು ಸಾವಿರಕ್ಕೂ ಹೆಚ್ಚು ಪದ್ಯಗಳಿರುವುದನ್ನು ಪರಿಚಯಿಸುವ ಮುಗಳಿ ಅವರು "ತೊರವೆಯ ರಾಮಾಯಣವು ವಾಲ್ಮೀಕಿ ರಾಮಾಯಣದ ಸಂಗ್ರಹವೇ ಆಗಿದ್ದರೂ ರಾಮನನ್ನು ವಿಷ್ಣುವಿನ ಅವತಾರವೆಂದು ಭಕ್ತಿಪರವಾಗಿ ನೋಡುವ ಭಾಗವತ ದೃಷ್ಟಿಯ ಪ್ರಭಾವವು ಅದರಲ್ಲಿ ನಿಚ್ಚಳವಾಗಿದೆ. ಮೂಲಕಥೆಯ ಅನುವಾದದಲ್ಲಿ ರಾವಣನ ಒಳ್ಳೆಯತನದ ಅಂಶಗಳನ್ನು ತೋರಿಸುವ ಪ್ರಯತ್ನವು ಕಾಣುತ್ತದೆ"[೬೭] ಎಂದಿದ್ದಾರೆ. ಅದೇ ರೀತಿಯಾಗಿ 'ಲಕ್ಷ್ಮೀಶ'ನು ೧೫೫೦ರಲ್ಲಿ ಜೈಮಿನಿ ಭಾರತ ಕಾವ್ಯವನ್ನು ರಚಿಸಿದನು. ಇವನ ಬಿರುದು 'ಕರ್ನಾಟಕ ಕವಿಚೈತ್ರವನಚೂತ.' ಕುಮಾರವ್ಯಾಸನು ತನ್ನ ಗದುಗಿನಭಾರತದಲ್ಲಿ ಪೂರ್ವಭಾರತವೆನ್ನಬಹುದಾದ ೧೦ ಪರ್ವಗಳನ್ನು ಕನ್ನಡಿಸಿದನು. ಅದೇ ರೀತಿ ತಿಮ್ಮಣ್ಣ ಕವಿಯು ಉಳಿದ ಉತ್ತರಭಾರತವನ್ನು ಅನುವಾದಿಸಿದನು. ಇದನ್ನಾದರಿಸಿ ಲಕ್ಷ್ಮೀಶನು ಉತ್ತರೋತ್ತರ ಭಾರತವೆನ್ನಬಹುದಾದ ಜೈಮಿನಿಭಾರತವನ್ನು ಕನ್ನಡದಲ್ಲಿ ರಚಿಸಿದನು ಎಂಬುದರ ಬಗ್ಗೆ ಪ್ರಸ್ತಾಪಿಸುತ್ತಾ ಗೋಪಕವಿಯ 'ಚಿತ್ರಭಾರತ,' 'ನಂದಿಮಹಾತ್ಮೆ' ಕೃತಿಗಳ ಪರಿಚಯಿಸಿದ್ದಾರೆ. ೧೯ನೇ ಶತಮಾನದಲ್ಲಿ ಕಂಡುಬರುವ 'ರತ್ನಾಕರವರ್ಣಿ' 'ಭರತೇಶವೈಭವ,' 'ತ್ರಿಲೋಕಶತಕ,' 'ರತ್ನಾಕರಾಧೀಶ್ವರ ಶತಕ,' 'ಅಪರಾಜಿತೇಶ್ವರ ಶತಕ'ಗಳನ್ನು ಪರಿಚಯಿಸುವ ಲೇಖಕರು ಭರತೇಶವೈಭವದಲ್ಲಿ ತ್ರಿಷಷ್ಠಿ ಶಲಾಕಪುರುಷರಲ್ಲಿ ಒಬ್ಬನಾದ ಭರತ ಚಕ್ರವರ್ತಿಯ ಕಥಾಂಶವನ್ನು ವಿವರಿಸುತ್ತಾ ಭೋಗವಿಜಯ, ದಿಗ್ವಿಜಯ, ಯೋಗವಿಜಯ, ಅರ್ಕಕೀರ್ತಿವಿಜಯ, ಮೋಕ್ಷವಿಜಯವೆಂಬ ಐದು ವಿಜಯಗಳಲ್ಲಿ ಭರತನ ಕತೆಯನ್ನು ಹತ್ತುಸಾವಿರ ಸಾಂಗತ್ಯ ಪದ್ಯಗಳಲ್ಲಿ ರಚನೆಗೊಂಡಿರುವ ಬಗ್ಗೆ ಪ್ರಸ್ತಾಪಿಸುತ್ತಾರೆ. ರತ್ನಾಕರ ಸಂಪ್ರದಾಯಗಳಿಗೆ ಶರಣಾಗದೆ ಸಂಸಾರ ಸುಖವನ್ನು ನಿರಾಕರಿಸದೆ ವಸ್ತುವಿನ ಆಯ್ಕೆಯಲ್ಲಿ, ನಿರ್ವಹಣೆಯಲ್ಲಿ, ಛಂದಸ್ಸಿನಲ್ಲಿ, ನಿರೂಪಣೆಯಲ್ಲಿ ಯಾದೃಚ್ಛಿಕವಾಗಿದೆ. ನೀತಿ, ರೂಢಿ-ರಿವಾಜುಗಳಲ್ಲಿ ಅರ್ಥಹೀನತೆಯಿದ್ದಾಗ ಮುಲಾಜಿಲ್ಲದೆ ಕಿತ್ತೆಸೆದು ಸರಿಕಂಡ ದಾರಿಯಲ್ಲಿ ಹೆಜ್ಜೆ ಹಾಕುವಂತವನಾಗಿದ್ದಾನೆ.

೧೭ನೇ ಶತಮಾನದಲ್ಲಿ ಕಂಡುಬರುವ 'ಷಡಕ್ಷರಿ' ರಾಜಶೇಖರ ವಿಳಾಸ, ಶಭರಶಂಕರವಿಳಾಸ, 'ವೃಷಭೇಂದ್ರ ವಿಜಯ' ಎಂಬ ಮೂರು ಕನ್ನಡ ಚಂಪೂ ಕೃತಿಗಳನ್ನು ಹಾಗೂ ಕವಿಕರ್ಣರಸಾಮಯ ಎಂಬ ಸಂಸ್ಕೃತ ಗ್ರಂಥವನ್ನು ರಚಿಸಿದ್ದರ ಬಗ್ಗೆ ಪ್ರಸ್ತಾಪಿಸುತ್ತಾರೆ. ತಿರುಮಲಾರ್ಯನು ತನ್ನ ಅರಸನಾದ ಚಿಕ್ಕದೇವರಾಯನನ್ನು ಕುರಿತು 'ಚಿಕ್ಕದೇವರಾಜವಿಜಯ,' 'ಚಿಕ್ಕದೇವರಾಯ ವಂಶಾವಳಿ,'

'ಅಪ್ರತಿಮವೀರ ಚರಿತೆ,' 'ಚಿಕ್ಕದೇವರಾಯಶತಕ' ಕೃತಿಗಳನ್ನು ಪರಿಚಯಿಸಿ ಚರ್ಚಿಸಿದ್ದಾರೆ. ಸಂಚಿಹೊನ್ನಮ್ಮ ಸಾಹಿತ್ಯ ಲೋಕದಲ್ಲಿ ಹದಿಬದೆಯ ಧರ್ಮ ಗ್ರಂಥ ರಚಿಸಿ ಮುಖ್ಯನೆಲೆಗೆ ಬಂದವಳು. ಇವಳು ಅಳಸಿಂಗರಾಯನ ಶಿಷ್ಯೆಯಾಗಿದ್ದಳು. ಚಿಕ್ಕದೇವರಾಜ ಒಡೆಯರ ಕಾಲದ ಸಂಚಿಯ ಊಳಿಗದಲ್ಲಿದ್ದವಳೆಂದು ತಿಳಿಸುವ ಲೇಖಕರು ಹದಿಬದೆಯ ಧರ್ಮವು ಸಾಂಗತ್ಯ ಕಾವ್ಯವಾಗಿದ್ದು ಪತಿವ್ರತಾ ಧರ್ಮವನ್ನು ಬೋಧಿಸುತ್ತದೆ. ಹೆಣ್ಣನ್ನು ಕಂಡು ಅಸಡ್ಡೆ ಮಾಡುವವರನ್ನು ಕುರಿತು 'ಪೆಣ್ಣು ಪೆಣ್ಣೆಂದೇಕೆ ಬೀಳುಗಳೆವರು ಕಣ್ಣುಕಾಣದ ಗಾವಿಲರು' ಎಂದು ನುಡಿದಿದ್ದ ಸಂಚಿಹೊನ್ನಮ್ಮಳ ಮಹಿಳಾಪರವಾದ ಕಾಳಜಿಯನ್ನು ಸಾರುವ ಕೃತಿಯನ್ನು ಪರಿಚಯಿಸಿದ್ದಾರೆ. ಮುದ್ದಣ ಇವರ ಮೊದಲ ಹೆಸರು ಲಕ್ಷ್ಮೀನಾರಾಯಣಪ್ಪ ಉಡುಪಿ ಸಮೀಪ ನಂದಳಿಕೆಯಲ್ಲಿ ಜನಿಸಿದವರು. 'ಅದ್ಭುತ ರಾಮಾಯಣ,' 'ರಾಮಪಟ್ಟಾಭಿಷೇಕ,' 'ರಾಮಾಶ್ವಮೇಧ' ಎಂಬ ಕಾವ್ಯಗಳನ್ನು 'ರತ್ನಾವತಿಕಲ್ಯಾಣ,' 'ಕುಮಾರವಿಜಯ' ಎಂಬ ಯಕ್ಷಗಾನ ಪ್ರಸಂಗಗಳನ್ನು ಹಾಗೂ 'ಗೋದಾವರಿ' ಕಾದಂಬರಿ ರಚಿಸಿರುವ ವಿವರವನ್ನು ತಿಳಿಸುತ್ತಾರೆ. ಲೇಖಕರು ರಾಮಾಶ್ವಮೇಧದ ಮುದ್ದಣ-ಮನೋರಮೆಯರ ಸರಸ ಸಲ್ಲಾಪದ ದಾಂಪತ್ಯದ ಸಂಭಾಷಣೆ, ಕಥನಕ್ರಮ, ವಸ್ತುವಿಸ್ತಾರ ಒಳಗೊಂಡಿದೆ ಎಂದು ವಿವರಿಸುತ್ತಾರೆ.

ಈ ಮುಂದಿನ ಭಾಗದಲ್ಲಿ ಹೊಸಗನ್ನಡ ಕವಿಗಳ ವಿಷಯ ಕುರಿತಂತೆ ಸಂಕ್ಷಿಪ್ತವಾಗಿ ತಿಳಿಸಲಾಗಿದೆ. ರೆವರೆಂಡ್ ವಿಲಿಯಂ ಕೇರಿ ೧೮೮೯ರಲ್ಲಿ ಬೈಬಲ್ ಗ್ರಂಥವನ್ನು ಹೊಸಗನ್ನಡಕ್ಕೆ ಮೊದಲಬಾರಿಗೆ ಅನುವಾದಿಸಿದವನು. ಕೆಂಪುನಾರಾಯಣನ ಮುದ್ರಾಮಂಜೂಷ ಗ್ರಂಥವನ್ನು ಪರಿಚಯಿಸುವ ಲೇಖಕರು ಸಿಂಗರಾರ್ಯನ ಮಿತ್ರವಿಂದಾಗೋವಿಂದ ಕನ್ನಡದ ಮೊದಲ ನಾಟಕ, ಅಪರಾಳ ತಮ್ಮಣ್ಣನ-ಕೃಷ್ಣಪಾರಿಜಾತ (ಬಯಲಾಟದ ಸ್ವರೂಪದಲ್ಲಿದೆ) ಹಾಗೆಯೇ ಅನುವಾದಗೊಂಡ ನಾಟಕಗಳ ಕುರಿತಂತೆ ಬಸವಪ್ಪಶಾಸ್ತ್ರಿ ಅನುವಾದಿಸಿದ ಶಾಕುಂತಲ, ಚಂಡಕೌಶಿಕ, ಉತ್ತರರಾಮಚರಿತ ಹಾಗೂ ಶೇಕ್ಸ್‌ಪೀಯರ್‌ನ ಒಥೆಲೊ ನಾಟಕದ ಅನುವಾದವನ್ನು 'ಶೂರಸೇನಚರಿತ್ರೆ' ಎಂದು ರಚಿಸಿದರೆ ಧೋಂಡೊ ನರಸಿಂಹ ಮುಳಬಾಗಿಲು ಇವರು ಉತ್ತರರಾಮಚರಿತ, ಮಾಳವಿಕಾಗ್ನಿಮಿತ್ರ, ಮೃಚ್ಛಕಟಿಕ, ವೇಣಿಸಂಹಾರ, ಮಾನವಿವೀರಪ್ಪ ೪೦ ಕತೆಗಳ ಕಥಾಸಾಗರವನ್ನು ರಚಿಸಿದ್ದಾರೆ.

ಎಸ್.ಜಿ. ನರಸಿಂಹಾಚಾರ್ಯರು ಅನುವಾದಿಸಿದ ಅಲ್ಲಾವುದ್ದಿನ್-ಅದ್ಭುತದೀಪ, ಈಸೋಪನ ನೀತಿಕತೆಗಳು, ಗಲಿವರನ ದೇಶಸಂಚಾರ ಇತ್ಯಾದಿ, ಬಿ. ವೆಂಕಟಾಚಾರ್ಯರು ಬಂಕಿಮಚಂದ್ರರ ಬಂಗಾಲಿ ಕತೆ-ಕಾದಂಬರಿಗಳನ್ನು ಹಾಗೂ 'ಯವನಯಾಮಿನೀ ವಿನೋದ ಎಂಬ ಅರೇಬಿಯನ್ ನಾಯಿಟ್ಸ್ ಕತೆಗಳನ್ನು ಅನುವಾದಿಸಿದ ವಿವರ ತಿಳಿಸುತ್ತಾರೆ. ಕನ್ನಡದ ಪ್ರಥಮ ಕಾದಂಬರಿ ಗುಲ್ವಾಡಿ ವೆಂಕಟರಾಯರ 'ಇಂದಿರಾಬಾಯಿ'ಯಾಗಿದೆ. ಅದೇ ರೀತಿ ಕೆರೂರ ವಾಸುದೇವಾಚಾರ್ಯರ 'ಇಂದಿರಾ'(೧೯೦೮ ಮೊದಲ ಸಾಮಾಜಿಕ ಕಾದಂಬರಿ) ಮತ್ತು ಅವರ 'ಯದುಮಹರಾಜ' ಮೊದಲ ಸ್ವತಂತ್ರ ಐತಿಹಾಸಿಕ ಕಾದಂಬರಿಯಾಗಿದೆ. ಎಂ. ಎಸ್. ಪುಟ್ಟಣ್ಣ ಅವರ 'ಮಾಡಿದ್ದುಣ್ಣೋ

ಮಹರಾಯ,' 'ಮುಸುಕು ತೆಗೆಯೇ ಮಾಯಾಂಗನೆ' ಪ್ರಮುಖ ಕಾದಂಬರಿಯಾಗಿವೆ. ಬಿ.ಎಂ.ಶ್ರೀ. ಅವರ 'ಇಂಗ್ಲಿಷ್ ಗೀತಗಳು' ಹೊಸಗನ್ನಡ ಕಾವ್ಯಚರಿತ್ರೆಯಲ್ಲಿ ಮೈಲುಗಲ್ಲಾಗಿದೆ. ಮುಗಳಿ ಅವರು ಈ ಕೃತಿಯ ಕೊನೆಯ ಭಾಗದಲ್ಲಿ ನವೋದಯ ಕಾಲಘಟ್ಟದಲ್ಲಿ ಬರುವ ಕಾವ್ಯ, ಕತೆ, ಕಾದಂಬರಿ, ನಾಟಕ ಪ್ರಬಂಧ ರಚನಾಕಾರರ ಹಾಗೂ ಅವರ ಕೃತಿಗಳ ಸಂಕ್ಷಿಪ್ತ ಪರಿಚಯ ಮಾಡಿಕೊಡುತ್ತಾ ಮುಕ್ತಾಯಗೊಳಿಸಿದ್ದಾರೆ.

೪.೪. ಕರ್ನಾಟಕದ ಸಾಂಸ್ಕೃತಿಕ ಪರಂಪರೆ

ಮುಗಳಿ ಅವರ ಎಲ್ಲ ಸಾಹಿತ್ಯ ಕೃತಿಗಳಿಗಿಂತ 'ಕನ್ನಡ ಸಾಹಿತ್ಯ ಚರಿತ್ರೆ'ಯು ಹೆಚ್ಚು ಮಹತ್ವ ತಂದುಕೊಟ್ಟ ಕೃತಿ. ಅದಕ್ಕೂ ಏಳು ವರ್ಷ ಮುಂಚಿತವಾಗಿಯೇ ಅವರು ರಚಿಸಿದ 'Heritage of Karnataka' ಇಂಗ್ಲಿಷ್ ಕೃತಿಯುನ್ನು ರಚಿಸಿರುವುದು ತಿಳಿದುಬರುತ್ತದೆ. ಆ ಕೃತಿಯನ್ನು 'ಕರ್ನಾಟಕದ ಸಾಂಸ್ಕೃತಿಕ ಪರಂಪರೆ' ಶೀರ್ಷಿಕೆಯಡಿಯಲ್ಲಿ ಕೆ.ಜಿ.ಶಾಸ್ತ್ರಿ ಮತ್ತು ಎಸ್.ಪಿ.ಪಾಟೀಲರು ಅನುವಾದಿಸಿದ್ದಾರೆ. ಈ ಅನುವಾದಿತ ಕೃತಿಯನ್ನೆ ಈ ಭಾಗದಲ್ಲಿ ಚರ್ಚಿಸಿ ವಿವರಿಸಲಾಗಿದೆ. ಈ ಕೃತಿಯು ಕರ್ನಾಟಕ ಸಾಂಸ್ಕೃತಿಕವಾಗಿ ವಿವಿಧ ಕಾಲಘಟ್ಟದಲ್ಲಿ ಹಾಗೂ ವಿವಿಧ ಮುಖಗಳಲ್ಲಿ ನಡೆದು ಬಂದ ಸ್ಥೂಲ ಸಮೀಕ್ಷೆಯನ್ನೊಳಗೊಂಡಿದೆ. ಮುಗಳಿ ಅವರ ಆಳವಾದ ಸಂಶೋಧನಾದೃಷ್ಟಿ ವಿವೇಚನೆಯಲ್ಲಿ ತನ್ನದೇ ಆದ ವಿಮರ್ಶಾಕ್ರಮದ ಹಿಡಿತದೊಂದಿಗೆ ಕೂಲಂಕುಷವಾಗಿ ಚರ್ಚೆಗೊಳಪಟ್ಟ ಕೃತಿಯಾಗಿದೆ.

ಪ್ರಸ್ತುತ ಕೃತಿಯನ್ನು ಪ್ರಾಚೀನ, ಐತಿಹಾಸಿಕ, ಆಧುನಿಕ ಎಂಬುದಾಗಿ ಮೂರು ಭಾಗಗಳಾಗಿ ವಿಂಗಡಿಸಿಕೊಂಡು ಚರ್ಚಿಸಲು ಮುಂದಾಗುತ್ತಾರೆ. ಅದರ ಮೊದಲ ಭಾಗದಲ್ಲಿ ರಾಮಾಯಣಕ್ಕೆ ಸಂಬಂಧಿಸಿದಂತೆ "ಕರ್ನಾಟಕವೆಂಬ ಶಬ್ದವು ದಕ್ಷಿಣದ ಯಾವ ಭಾಗವನ್ನು ನಿರ್ದೇಶಿಸುತ್ತದೆಂಬುದು ಸ್ಪಷ್ಟವಿಲ್ಲ. ಬಹುಶಃ ಬನವಾಸಿ, ಮಹಿಷಮಂಡಲಗಳಂತ ಘಟಕಗಳನ್ನು ಕೂಡಿದ ಪ್ರದೇಶವನ್ನು ಸೂಚಿಸುವ ಶಬ್ದವಾಗಿರಬಹುದೆಂಬ"[೬೮] ಅಭಿಪ್ರಾಯಕ್ಕೆ ಬರುತ್ತಾರೆ. ರಾಮಾಯಣ ಕಾಲದ ಕಿಷ್ಕಿಂಧೆಯನ್ನು ತರುವಾಯದ ಕರ್ನಾಟಕದಲ್ಲಿ ಹೆಸರಿಸುವ ಪಟ್ಟಣವಾದ ಆನೆಗುಂದಿಯನ್ನು ಒಂದೇ ಎಂದು ಎಣಿಸುವುದು ತೀರಾ ಕಾಲ್ಪನಿಕವೆಂದು ಹೇಳಬಹುದೆಂಬ ಅಭಿಪ್ರಾಯಕ್ಕೆ ಬರುತ್ತಾರೆ. ಅದೇ ರೀತಿ ಪ್ರಾಚೀನ ಕರ್ನಾಟಕದಲ್ಲಿ ಟಾಲಾಮಿ ಗುರುತಿಸಿದ ಪಟ್ಟಿಗಳ ವಿವರಗಳನ್ನು ಈ ರೀತಿ ತಿಳಿಸುತ್ತಾರೆ. "ಬಾದಾಮಿ, ಇಂಡಿ, ಕಲಕೇರಿ, ಮುದಗಲ್ಲು, ಪಟ್ಟದಕಲ್ಲು, ಬನವಾಸಿ, ತಗರ, ಬೈರೂರು, ಮಳಖೇಡ ಎಲ್ಲಾಪುರ ಮತ್ತು ಪಲಸಿಗೆ"[೬೯] ಪ್ರದೇಶಗಳ ವಿವರ ನೀಡಿ ಚರ್ಚಿಸಿದ್ದಾರೆ. ಹಾಗೇ ಮುಂದುವರಿದು ಕರ್ನಾಟಕದ ಪ್ರಾರಂಭ ಇತಿಹಾಸದಿಂದ ಮೈಸೂರರಸರವರೆಗಿನ ಸಂಕ್ಷಿಪ್ತ ಇತಿಹಾಸ ತಿಳಿಸಲು ಮುಂದಾದ ಮುಗಳಿ ಅವರು ಬಾದಾಮಿ ಚಾಲುಕ್ಯರು, ರಾಷ್ಟ್ರಕೂಟರು ಮತ್ತು ವಿಜಯನಗರಕಾಲದ ಇತಿಹಾಸವನ್ನು ವಿಸ್ತೃತವಾಗಿ ಚರ್ಚೆಗೊಳಪಡಿಸಿದ್ದಾರೆ.

ಅಂದಿನ ಸೈನಿಕ ಪದ್ಧತಿ, ಸಾಮಾಜಿಕ ಪದ್ಧತಿ ಕುರಿತು ತಿಳಿಸುವ ಮುಗಳಿ ಅವರು ವೀರ ಶೂರತ್ವದ ಪ್ರತೀಕವಾಗಿ ನಮ್ಮ ನಾಡಿನ ಎಲ್ಲೆ ಮೀರಿ ವೀರಗಲ್ಲುಗಳು ಸ್ಥಾಪಿತಗೊಂಡಿವೆ. ಅವು ನಮ್ಮ ಸೈನಿಕ ಪದ್ಧತಿಯ ಬಗ್ಗೆ ಗುಣಗಾನ ವೈಶಿಷ್ಟ್ಯವನ್ನು ತಿಳಿಸುತ್ತವೆ ಎಂದಿದ್ದಾರೆ. ಅಂದಿನ ಆಡಳಿತ ಪದ್ಧತಿಯು ಹಳ್ಳಿಯಲ್ಲಿ ಗೌಡ, ಆಯಗಾರರು, ನೀರಗಂಟಿ, ಪೂಜಾರಿ, ಓಲೆಕಾರ, ಶಾನುಭೋಗಗಳಂತಹ ಪ್ರಮುಖ ಹುದ್ದೆಗಳಾಗಿದ್ದವು. ದೇವಾಲಯಗಳು, ಶಾಲೆಗಳು ಹಾಗೂ ಛತ್ರ ಮುಂತಾದ ಮೇಲ್ವಿಚಾರಣೆ ನೋಡಿಕೊಳ್ಳಲು ಪಂಚಾಯಿತಿ ವ್ಯವಸ್ಥೆ ಇರುವಂತದ್ದನ್ನು ಖಾಸಗಿ ವ್ಯಕ್ತಿಗಳಿಂದ ದಾನ ಸ್ವೀಕರಿಸಿ ಲೋಕೋಪಯೋಗಿ ಕಾರ್ಯಗಳಿಗೆ ಬಳಸಲಾಗುತ್ತಿತ್ತೆಂಬ ವಿವರ ತಿಳಿಸುತ್ತಾರೆ. ಅದೇ ರೀತಿ ಪಟ್ಟಣ ನೋಡಿಕೊಳ್ಳುವವನಿಗೆ ಪಟ್ಟಣಶೆಟ್ಟಿ ಎಂದು ಕರೆಯುತ್ತಿದ್ದದರ ಬಗ್ಗೆ ತಿಳಿಸುತ್ತಾರೆ. ನಗರ, ಸಮೂಹ ನ್ಯಾಯಾಂಗ ಪದ್ಧತಿಯ ಕುರಿತು ಪಂಚಾಯಿತಿ ವ್ಯವಸ್ಥೆ ಒಳಗೊಂಡಿರುತ್ತಿತ್ತು ಎಂಬುದರ ಬಗ್ಗೆ ತಿಳಿಸುತ್ತಾರೆ. ಹಾಗೆಯೇ ಅಂದಿನ ಶಿಕ್ಷಣಪದ್ಧತಿಯ ಅಗ್ರಹಾರ ಕುರಿತಂತೆ ಬಳ್ಳಿಗಾವಿಯ ಕೋಡಿಮಠ, ಸಾಲೊಟ್ಗ ವಿದ್ಯಾಕೇಂದ್ರಗಳಲ್ಲಿ ಬ್ರಹ್ಮಪುರಿಮಠ, ದೇವಸ್ಥಾನ ಘಟಿಕಾಸ್ಥಳಗಳೂ ಅಂದಿನ ಬಹುಮುಖ್ಯ ವಿದ್ಯಾಕೇಂದ್ರಗಳೂ ಆಗಿದ್ದವೆಂಬುದರ ಬಗ್ಗೆ ಪ್ರಸ್ತಾಪಿಸುತ್ತಾರೆ.

ಮುಗಳಿ ಅವರು ಕನ್ನಡಿಗರ ಸೌಂದರ್ಯಶಾಸ್ತ್ರ ಕುರಿತಂತೆ ವಾಸ್ತುಶಿಲ್ಪ, ಮೂರ್ತಿಶಿಲ್ಪ, ಲಲಿತಕಲೆಯ ಬಗ್ಗೆ ತಿಳಿಸುತ್ತಾರೆ. ಕರ್ನಾಟಕದ ವಾಸ್ತುಶಿಲ್ಪಕ್ಕೆ ವಿಶಿಷ್ಟ ಹಾಗೂ ಮೂಲ ಕಾಣಿಕೆ ನೀಡಿದವರು ಹೊಯ್ಸಳರು ಎಂಬುದನ್ನು ತಿಳಿಸುತ್ತಾರೆ. ಅವರ ವಾಸ್ತುಶಿಲ್ಪವು ವಿಮಾನ, ನವರಂಗ, ಮುಖಮಂಟಪ ಮತ್ತು ಸಭಾಮಂಟಪ ರಚನೆಗಳನ್ನು ಒಳಗೊಂಡಿವೆ. ಉದಾಹರಣೆಗೆ ಚಾಲುಕ್ಯ ದೇವಾಲಯಗಳು ಬಾದಾಮಿ, ಪಟ್ಟದಕಲ್ಲು ಐಹೊಳೆ, ಲಕ್ಕುಂಡಿ, ಕುಕನೂರು, ಇಟಗಿ, ಕುರವತ್ತಿ ಸ್ಥಳಗಳಲ್ಲಿ ನಿರ್ಮಾಣಗೊಂಡಿವೆ. ಇವು ಕಂಪ, ದ್ವಾರ, ಪಾದಪಟ್ಟ, ಬಾಗಿಲ ಚೌಕಟ್ಟುಗಳಿಂದಾಗಿ ಆವೃತ್ತವಾಗಿದೆ. ಈ ಮಾದರಿಯಲ್ಲಿ ವಿಜಯನಗರ ಸಾಮ್ರಾಜ್ಯದ ವಾಸ್ತುಶಿಲ್ಪದಿಂದ ಕೂಡಿದೆ.

ಲಲಿತಕಲೆಗೆ ಸಂಬಂಧಿಸಿದಂತೆ ಕ್ರಿ.ಶ. ೧ನೇ ಶತಮಾನದಿಂದ ೭ನೇ ಶತಮಾನದವರೆಗೆ ಮುಖ್ಯವಾಗಿ ಅಜಂತಾ ಮತ್ತು ಎಲ್ಲೋರಾ ಕೈಲಾಸನಾಥ ದೇವಾಲಯ ಮೇಲ್ಛಾವಣಿಗಳಲ್ಲಿ, ಬಾದಾಮಿ ಗುಹೆಗಳಲ್ಲಿ, ಹಂಪೆಯಲ್ಲಿ, ಲೇಪಾಕ್ಷಿದೇವಾಲಯದಲ್ಲಿ ಕಂಡುಬರುವ ಪ್ರಾಚೀನ ಭಿತ್ತಿಚಿತ್ರಗಳನ್ನು ತಿಳಿಸಿ ಚರ್ಚಿಸಿದ್ದಾರೆ. ಈ ಮಾದರಿಯಲ್ಲಿ ಪ್ರಾಚೀನ ಕಾಲದಿಂದಿಡಿದು ಆಧುನಿಕ ಕಾಲದವರೆಗೆ ಲಲಿತಕಲೆಯು ತನ್ನದೇ ಆದ ಅನನ್ಯತೆಯನ್ನು ಹೊಂದಿರುವುದನ್ನು ತಿಳಿಸುತ್ತಾರೆ. ಅದೇ ರೀತಿ ಸಂಗೀತ ಕ್ಷೇತ್ರದಲ್ಲಿ ಛಾಪು ಮೂಡಿಸಿರುವ ಬಗ್ಗೆ ಪ್ರಸ್ತಾಪಿಸುತ್ತಾ ಜಾನಪದ ಸಾಹಿತ್ಯದಲ್ಲಿ ನಮ್ಮ ಬಯಲಾಟ, ಯಕ್ಷಗಾನಗಳ ಹಿರಿಮೆ ಬಗ್ಗೆ ತಿಳಿಸುತ್ತಾರೆ.

ಈ ಕೃತಿಯ ಕೊನೆಯ ಭಾಗದಲ್ಲಿ ಅವರು ಕರ್ನಾಟಕ ಸಂಸ್ಕೃತಿಯ ಬಹುಮುಖ್ಯವಾಗಿ ಭಾರತೀಯ ಸಂಸ್ಕೃತಿಯ ಅನನ್ಯತೆಯನ್ನು ಗುರುತಿಸಲು ಮುಂದಾಗುತ್ತಾರೆ. "ಭಾರತೀಯ ಸಂಸ್ಕೃತಿಯ ಪೂಜಾವಿಧಾನಗಳನ್ನು ಅದು (ಕರ್ನಾಟಕ) ಸ್ವೀಕರಿಸಿದೆಯಾದರೂ ದೇವರಪೂಜೆ, ಮಂದಿರಗಳ

ನಿರ್ಮಾಣ ಕಲೆಯಲ್ಲಿ ಶಿಲ್ಪಕಲೆಯಲ್ಲಿ ತನ್ನದೇ ಆದ ಶೈಲಿಗಳನ್ನು ರೂಪಿಸಿಕೊಂಡಿದೆ. ಭಾರತೀಯ ತತ್ವಜ್ಞಾನವನ್ನು ಮೆಚ್ಚಿ ಸ್ವೀಕರಿಸಿದೆಯಾದರೂ ತನ್ನದೇ ಆದ ಪಂಥಗಳನ್ನು, ರೂಢಿ ಸಂಪ್ರದಾಯಗಳನ್ನು ನಿರ್ಮಿಸಿ ಅಚ್ಚೊತ್ತಿದೆ. ಇಂತು ಹಲವು ಮುಖಗಳಾಗಿ ಹರಿದಿದ್ದರೂ ಒಂದೆಡೆ ಬಂದು ಐಕ್ಯತೆಯನ್ನುಂಟುಮಾಡುವ ಈ ವೈಶಿಷ್ಟ್ಯ ಮಾತ್ರವಲ್ಲದೆ ಇನ್ನು ಕೆಲವು ವಿಶೇಷ ಲಕ್ಷಣಗಳು ಕರ್ನಾಟಕ ಸಂಸ್ಕೃತಿಯಲ್ಲಿರುವುದನ್ನು ವಿಜಯನಗರ ಸಾಮ್ರಾಜ್ಯದಲ್ಲಿ, ವೀರಶೈವ ಮಧ್ವ ಮತಗಳಲ್ಲೂ ಹೊಯ್ಸಳ ವಾಸ್ತುಶಿಲ್ಪದಲ್ಲೂ ಗೊಮ್ಮಟೇಶ್ವರ ಮೂರ್ತಿಶಿಲ್ಪದಲ್ಲೂ, ವೀರಗಲ್ಲು, ಮಾಸ್ತಿಗಲ್ಲುಗಳಲ್ಲೂ ಕಾಣಬಹುದಾಗಿದೆ. ಅಲ್ಲದೆ ಕನ್ನಡ ಭಾಷೆಯ ಮತ್ತು ಸಾಹಿತ್ಯದ ಕೆಲವು ವಿಶಿಷ್ಟಲಕ್ಷಣಗಳು ಕರ್ನಾಟಕ ಪರಂಪರೆಯ ಭಾರತದ ಇನ್ನಿತರ ಯಾವುದೇ ಕೆಲವು ಪ್ರಾದೇಶಿಕ ಸಂಸ್ಕೃತಿಯಲ್ಲೂ ಕಂಡುಬಾರದಂತಹ ಅಂಶಗಳೇ ಆಗಿವೆ"[೫೦] ಎಂಬುದರ ಕುರಿತು ತಿಳಿಸುವ ಮುಗಳಿ ಅವರು ಪ್ರಾಚೀನವಾದ ನಮ್ಮತನವನ್ನು ತಿಳಿಯಲು ಇತಿಹಾಸ ಕೃತಿಗಳನ್ನು, ಸಾಹಿತ್ಯ ಕೃತಿಗಳನ್ನು ಮತ್ತು ಶಾಸನಗಳನ್ನು ಸಂಶೋಧನಾ ದೃಷ್ಟಿಯಿಂದ ಅವಲೋಕಿಸಿ ಈ ಕೃತಿಯನ್ನು ಕಟ್ಟಿಕೊಡಲು ಶ್ರಮಿಸಿದ್ದಾರೆ. ಈ ಗ್ರಂಥಕ್ಕೆ ಮುನ್ನುಡಿ ಬರೆದ ಎಂ.ಎಚ್.ಕೃಷ್ಣ ಅವರು ಮುಗಳಿ ಅವರ ಈ ಕೃತಿಯಿಂದ ಕರ್ನಾಟಕ ಸಾಂಸ್ಕೃತಿಕ ಪರಂಪರೆಯ ಒಂದು ಸಮಗ್ರ ನೋಟವು ಲಭ್ಯವಾದಂತಾಗಿದೆ ಎಂದಿದ್ದಾರೆ.

ಕೊನೆ ಟಿಪ್ಪಣಿ

೧. ಪ್ರಧಾನ್ ಗುರುದತ್ತ, ತಾರಾನಾಥ್ ಎನ್.ಎಸ್., ಪದ್ಮಾಶೇಖರ್, (ಸಂ) ಶ್ರೀಮುಖ, ಡಾ.ಟಿ.ವಿ. ವೆಂಕಟಾಚಲಶಾಸ್ತ್ರೀ ಅಭಿನಂದನ ಗ್ರಂಥ(ಲೇಖನ) ಕೆ.ಅನಂತರಾಮು, ಡಾ.ಟಿ.ವಿ.ವೆಂಕಟಾಚಲಶಾಸ್ತ್ರೀ ಅಭಿನಂದನಾ ಸಮಿತಿ, ಮೈಸೂರು-ಬೆಂಗಳೂರು, ೧೯೯೭, ಪುಟ ೬೨೦

೨. ಅದೇ, ಪುಟ.೬೨೯

೩. ರಾಘವೇಂದ್ರರಾವ್ ಎಚ್.ಎಸ್.(ಸಂ), ರಂ.ಶ್ರೀ.ಮುಗಳಿ ಸಮಗ್ರ ಸಾಹಿತ್ಯ-ಚರಿತ್ರೆಗಳು-ಕನ್ನಡ ಸಾಹಿತ್ಯ ಚರಿತ್ರೆ(ಸಂಪುಟ-೨ ಭಾಗ-೨), ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ೨೦೧೩, ಪುಟ ೩

೪. ಪ್ರಧಾನ ಗುರುದತ್ತ, ತಾರಾನಾಥ ಎನ್.ಎಸ್.ಪದ್ಮಾಶೇಖರ್(ಸಂ), ಶ್ರೀಮುಖ, ಡಾ.ಟಿ.ವಿ. ವೆಂಕಟಾಚಲಶಾಸ್ತ್ರೀ ಅಭಿನಂದನ ಗ್ರಂಥ(ಲೇಖನ), ಕೆ.ಅನಂತರಾಮು ಡಾ.ಟಿ.ವಿ.ವೆಂಕಟಾಚಲಶಾಸ್ತ್ರೀ ಅಭಿನಂದನ ಸಮಿತಿ, ಮೈಸೂರು-ಬೆಂಗಳೂರು, ೧೯೯೭, ಪುಟ ೬೩೪

೫. ಅದೇ, ಪುಟ ೬೩೬

೬ ಅದೇ, ಪುಟ ೬೩೭

೭ ಅದೇ, ಪುಟ ೬೪೦

೮. ಅದೇ, ಪುಟ ೬೫೧

೯. ರಾಘವೇಂದ್ರರಾವ್ ಎಚ್.ಎಸ್.(ಸಂ), ರಂ.ಶ್ರೀ.ಮುಗಳಿ ಸಮಗ್ರ ಸಾಹಿತ್ಯ-ಚರಿತ್ರೆಗಳು-ಕನ್ನಡ ಸಾಹಿತ್ಯ ಚರಿತ್ರೆ(ಸಂಪುಟ-೨ ಭಾಗ-೧), ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ೨೦೧೩, ಪುಟ ೯೮-೯೯

೧೦. ತಾಳ್ತಜೆ ವಸಂತಕುಮಾರ, ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪುರಸ್ಕೃತ ಕನ್ನಡ ಲೇಖಕರು ರಂ.ಶ್ರೀ.ಮುಗಳಿ, ನವಕರ್ನಾಟಕ ಪ್ರಕಾಶನ, ೨೦೧೧, ಪುಟ ೯೭

೧೧. ರಾಘವೇಂದ್ರರಾವ್ ಎಚ್.ಎಸ್.(ಸಂ), ರಂ.ಶ್ರೀ.ಮುಗಳಿ ಸಮಗ್ರ ಸಾಹಿತ್ಯ-ಚರಿತ್ರೆಗಳು-ಕನ್ನಡ ಸಾಹಿತ್ಯ ಚರಿತ್ರೆ(ಸಂಪುಟ-೨ ಭಾಗ-೧), ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ೨೦೧೩, ಪುಟ ೨೪೭

೧೨. ತಾಳ್ತಜೆ ವಸಂತಕುಮಾರ, ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪುರಸ್ಕೃತ ಕನ್ನಡ ಲೇಖಕರು ರಂ.ಶ್ರೀ.ಮುಗಳಿ, ನವಕರ್ನಾಟಕ ಪ್ರಕಾಶನ, ೨೦೧೧, ಪುಟ ೧೦೦

೧೩. ರಾಘವೇಂದ್ರರಾವ್ ಎಚ್.ಎಸ್.(ಸಂ), ರಂ.ಶ್ರೀ.ಮುಗಳಿ ಸಮಗ್ರ ಸಾಹಿತ್ಯ -ಚರಿತ್ರೆಗಳು-ಕನ್ನಡ ಸಾಹಿತ್ಯ ಚರಿತ್ರೆ(ಸಂಪುಟ-೨ ಭಾಗ-೧), ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ೨೦೧೩, ಪುಟ ४೧೧

೧೪. ನರಸಿಂಹಮೂರ್ತಿ ಬಿ.ಆರ್., ಕನ್ನಡ ಸಾಹಿತ್ಯ ಚರಿತ್ರೆಗಳು: ಒಂದು ಅಧ್ಯಯನ(ಪಿಎಚ್.ಡಿ ಪ್ರಬಂಧ), ಕನ್ನಡ ಅಧ್ಯಯನ ಕೇಂದ್ರ, ಜ್ಞಾನಭಾರತಿ, ಬೆಂಗಳೂರು ವಿಶ್ವವಿದ್ಯಾಲಯ, ೧೯೯೪, ಪುಟ ೨೨೭

೧೫. ಬಸವರಾಜ ಕಟ್ಟೀಮನಿ, ಮಾಧವ ಮಹಿಷಿ, ರಸಿಕರಂಗದರ್ಶನ ಅಭಿನಂಧನ ಗ್ರಂಥ(ಲೇಖನ) ಕೀರ್ತಿನಾಥ ಕುರ್ತಕೋಟಿ-ಕನ್ನಡ ಸಾಹಿತ್ಯ ಚರಿತ್ರೆ (೨), ಉಷಾ ಸಾಹಿತ್ಯ ಮಾಲೆ, ಮೈಸೂರು, ೧೯೬೬, ಪುಟ ೧೮೧

೧೬. ಪ್ರಧಾನ್ ಗುರುದತ್ತ, ತಾರಾನಾಥ ಎನ್.ಎಸ್., ಪದ್ಮಾಶೇಖರ್(ಸಂ), ಶ್ರೀಮುಖ, ಡಾ.ಟಿ.ವಿ. ವೆಂಕಟಾಚಲಶಾಸ್ತ್ರೀ ಅಭಿನಂದನ ಗ್ರಂಥ, ಕೆ.ಅನಂತರಾಮು(ಲೇಖನ), ಟಿ.ವಿ. ವೆಂಕಟಾಚಲಶಾಸ್ತ್ರೀ ಅಭಿನಂದನ ಸಮಿತಿ, ಮೈಸೂರು ಬೆಂಗಳೂರು, ೧೯೯೭, ಪುಟ ೬೨೯

೧೭. ರಾಘವೇಂದ್ರರಾವ್ ಎಚ್.ಎಸ್.(ಸಂ), ರಂ.ಶ್ರೀ.ಮುಗಳಿ, ಸಮಗ್ರ ಸಾಹಿತ್ಯ ಚರಿತ್ರೆಗಳು-ಕನ್ನಡ ಸಾಹಿತ್ಯ ಚರಿತ್ರೆ (ಸಂಪುಟ-೨ ಭಾಗ-೧), ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ೨೦೧೩, ಪುಟ ಮುನ್ನುಡಿ IX

೧೮. ರಾಘವೇಂದ್ರರಾವ್ ಎಚ್.ಎಸ್.(ಸಂ), ರಂ.ಶ್ರೀ.ಮುಗಳಿ, ಸಮಗ್ರ ಸಾಹಿತ್ಯ-ಚರಿತ್ರೆಗಳು-ಕನ್ನಡ ಸಾಹಿತ್ಯ ಚರಿತ್ರೆ(ಸಂಪುಟ-೨ ಭಾಗ-೨ ಪ್ರಾಚೀನ ಕನ್ನಡ ಸಾಹಿತ್ಯ ರೂಪಗಳು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ೨೦೧೩, ಪುಟ ೨೯

೧೯. ಅದೇ, ಪುಟ ೩೦೪

೨೦. ಅದೇ, ಪುಟ ೩೨೯

೨೧. ಅದೇ, ಪುಟ ೩೨೧

೨೨. ಅದೇ, ಪುಟ ೩೬೧

೨೩. ಅದೇ, ಪುಟ ೩೯೩

೨೪. ಅದೇ, ಪುಟ ೪೧೧

೨೫. ಅದೇ, ಪುಟ ೪೨೪

೨೬. ಅದೇ, ಪುಟ ೪೪೭

೨೭. ಅದೇ, ಪುಟ ೪೮೨

೨೮. ಅದೇ, ಪುಟ ೪೯೧

೨೯. ಅದೇ, ಪುಟ ೫೨೩

೩೦. ಅದೇ, ಪುಟ XII

೩೧. ರಾಘವೇಂದ್ರರಾವ್ ಎಚ್.ಎಸ್.(ಸಂ), ರಂ.ಶ್ರೀ.ಮುಗಳಿ ಸಮಗ್ರ ಸಾಹಿತ್ಯ–ಸಾಹಿತ್ಯ ಚರಿತ್ರೆಗಳು–ಕನ್ನಡ ಸಾಹಿತ್ಯ ಚರಿತ್ರೆ(ಸಂಪುಟ–೨, ಭಾಗ–೨), ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ೨೦೧೩, ಪುಟ ೩

೩೨. ಅದೇ, ಪುಟ ೮

೩೩. ಅದೇ, ಪುಟ ೨೭

೩೪. ಜಯಚಂದ್ರ ಎಂ.ಎ., ವಡ್ಡಾರಾಧನೆ, ಆರಾಧನಾ ಕರ್ನಾಟಕ ಟೀಕೆ: ವಿಭಿನ್ನ ಕೃತಿಗಳು, ಪ್ರಜಾವಾಣಿ ಅಂಕಣ(ಲೇಖನ), ದಿನಾಂಕ ೧೧/೩/೨೦೧೩, ಪುಟ ೩

೩೫. ಅದೇ, ಪುಟ ೬

೩೬. ರಾಘವೇಂದ್ರರಾವ್ ಎಚ್.ಎಸ್.(ಸಂ) ರಂ.ಶ್ರೀ.ಮುಗಳಿ ಸಮಗ್ರ ಸಾಹಿತ್ಯ–ಸಾಹಿತ್ಯ ಚರಿತ್ರೆಗಳು–ಕನ್ನಡ ಸಾಹಿತ್ಯ ಚರಿತ್ರೆ(ಸಂಪುಟ–೨, ಭಾಗ–೨), ಕನ್ನಡ ಸಾಹಿತ್ಯ ಇತಿಹಾಸ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ೨೦೧೩, ಪುಟ ೫೦

೩೭. ಅದೇ, ಪುಟ ೫೦

೩೮. ಅದೇ, ಪುಟ ೬೫

೩೯. ಅದೇ, ಪುಟ ೬೮

೪೦. ಅದೇ, ಪುಟ ೭೨

೪೧. ಅದೇ, ಪುಟ ೭೪

೪೨. ಅದೇ, ಪುಟ ೮೦

೪೩. ಅದೇ, ಪುಟ ೮೩

೪೪. ಅದೇ, ಪುಟ ೧೨೯

೪೫. ಅದೇ, ಪುಟ ೧೫೪

೪೬. ಅದೇ, ಪುಟ ೧೫೬

೪೭. ಅದೇ, ಪುಟ ೧೬೧

೪೮. ಶಾಸ್ತ್ರಿ ಕೆ.ಜಿ. ಮತ್ತು ಪಾಟೀಲ ಎಸ್.ಪಿಲ. (ಅನುವಾದ), ಕರ್ನಾಟಕ ಸಂಸ್ಕೃತಿ ಪರಂಪರೆ, ಸಮಾಜ ಪುಸ್ತಕಾಲಯ, ಧಾರವಾಡ, ೧೯೭೬, ಪುಟ ೭

೪೯. ಅದೇ, ಪುಟ ೧೪

೫೦. ಬಸವರಾಜ ಕಟ್ಟೀಮನಿ, ಮಾಧವ ಮಹಿಷಿ, ರಸಿಕರಂಗದರ್ಶನ ಅಭಿನಂಧನ ಗ್ರಂಥ(ಲೇಖನ) (೨), ಉಷಾ ಸಾಹಿತ್ಯ ಮಾಲೆ, ಮೈಸೂರು, ೧೯೬೬, ಪುಟ ೧೭೩

ಅಧ್ಯಾಯ ಐದು

ರಂ.ಶ್ರೀ.ಮುಗಳಿ ಅವರ ಸೃಜನೇತರ ಸಾಹಿತ್ಯ

ರಂ.ಶ್ರೀ.ಮುಗಳಿ ಅವರ ಸೃಜನೇತರ ಸಾಹಿತ್ಯ(ಭಾಗ-೨)

೫.೧. ಸಾಹಿತ್ಯ ವಿಮರ್ಶೆ

೫.೨. ಜೀವನ ಚರಿತ್ರೆ

೫.೩. ಅನುವಾದ

೫.೪. ಸಂಪಾದನೆ

ಅಧ್ಯಾಯ ಐದು

ರಂ.ಶ್ರೀ.ಮುಗಳಿ ಅವರ ಸೃಜನೇತರ ಸಾಹಿತ್ಯ

೫.೧. ಸಾಹಿತ್ಯ ವಿಮರ್ಶೆ

ಆಧುನಿಕ ಕನ್ನಡ ಸಾಹಿತ್ಯ ವಿಮರ್ಶೆಯು ಪ್ರತಿಯೊಂದು ಹಂತದಲ್ಲಿಯೂ ತನ್ನದೇ ಆದ ಮಾರ್ಗವನ್ನು ಪಡೆದುಕೊಂಡಿದೆ. ಭಾರತದ ಯಾವ ಭಾಷೆಯಲ್ಲಿಯೂ ಬಹುಶಃ ಇಷ್ಟೊಂದು ವಿಮರ್ಶೆ ನಡೆದಿಲ್ಲವೇನೋ ಎನ್ನುವಷ್ಟರ ಮಟ್ಟಿಗೆ ವಿಮರ್ಶೆಯ ಬಾಹು ಚಾಚಿಕೊಂಡಿದೆ. ಆರಂಭದ ಕನ್ನಡ ವಿಮರ್ಶೆಯು ಪಾಶ್ಚಾತ್ಯರ ಗ್ರಂಥ ಸಂಪಾದನೆಗೆ ಬಳಸುವ ಮಾನದಂಡವಾದ 'Textual Critcisim'ಗೆ ಸಂವಾದಿಯಾಗಿ ಕೃತಿ ಸಂಪಾದನೆಯ ರೂಪದಲ್ಲಿ ರೂಢಿಗೆ ಬಂದಿತು. ಬಿ.ಎಂ.ಶ್ರೀ. ಅವರು ಪಾಶ್ಚಾತ್ಯರ ರೊಮ್ಯಾಂಟಿಕ್ ವಿಮರ್ಶೆಯ ಮಾದರಿಯನ್ನು ಕನ್ನಡದಲ್ಲಿ ಆರಂಭಿಸುವ ಮೂಲಕ ಹೊಸ ವಿಮರ್ಶಾ ಮಾದರಿಯನ್ನು ಆರಂಭಿಸಿದವರು. ೨೦ನೇ ಶತಮಾನದ ಆರಂಭದಲ್ಲಿ ವರ್ಡ್ಸ್‌ವರ್ತ್‌ನ ಪ್ರಭಾವದಿಂದ ಕನ್ನಡದಲ್ಲಿ ಕಾವ್ಯಭಾಷೆಯನ್ನು ಕುರಿತು ವಿಮರ್ಶೆ ಮಾಡಿದರು. ಆನಂತರದ ವಿಮರ್ಶಕರೂ ಹೊಸ ಹೊಸ ಪಾಶ್ಚಾತ್ಯ ಮಾರ್ಗವನ್ನು ಅನುಸರಿಸುತ್ತಾ 'ವಿಮರ್ಶೆ' ಎಂಬ ಪರಿಭಾಷೆಯನ್ನು ಕುರಿತು ಚರ್ಚಿಸಿ ಕನ್ನಡ ನೆಲಕ್ಕೆ ಅದು ಹೊಂದಿಕೊಳ್ಳುವ ರೀತಿಯಲ್ಲಿ ವಿಮರ್ಶಿಸಿರುವುದು ತಿಳಿದುಬರುತ್ತದೆ.

ನವೋದಯದ ಪ್ರಮುಖ ವಿಮರ್ಶಕರೆಂದು ಬಿ.ಎಂ.ಶ್ರೀಕಂಠಯ್ಯ, ಮಾಸ್ತಿ ವೆಂಕಟೇಶ ಅಯ್ಯಂಗಾರ್, ಡಿ.ವಿ.ಜಿ., ದ.ರಾ.ಬೇಂದ್ರೆ, ಕುವೆಂಪು, ಪು.ತಿ.ನ., ಎಂ.ವೀ.ಸೀತಾರಾಮಯ್ಯ, ಎಸ್.ವಿ.ರಂಗಣ್ಣ, ಎ.ಎನ್.ಮೂರ್ತಿರಾವ್ ಇನ್ನೂ ಮೊದಲಾದವರನ್ನು ಗುರುತಿಸಿದರೆ, ಅದೇ ರೀತಿ ಎರಡನೇ ಹಂತದ ಸಮನ್ವಯ ವಿಮರ್ಶಕರೆಂದು ವಿ.ಕೃ.ಗೋಕಾಕ್, ಜಿ.ಎಸ್.ಶಿವರುದ್ರಪ್ಪ, ರಂ.ಶ್ರೀ.ಮುಗಳಿ, ಕೀರ್ತಿನಾಥ ಕುರ್ತಕೋಟಿ ಇನ್ನೂ ಮೊದಲಾದವರು ಈ ಗುಂಪಿಗೆ ಸೇರಿದವರಾಗಿದ್ದಾರೆ. ವಿದ್ವಾಂಸರ ಪರಂಪರೆ ಗುಂಪಿಗೆ ಸೇರುವವರಲ್ಲಿ ಮುಳಿಯ ತಿಮ್ಮಪ್ಪಯ್ಯ, ತೀ.ನಂ.ಶ್ರೀಕಂಠಯ್ಯ, ಡಿ.ಎಲ್.ನರಸಿಂಹಾಚಾರ್‌ರ ಹೆಸರುಗಳು ಕೇಳಿಬರುತ್ತವೆ.

ಸಮನ್ವಯ ಪಂಥವು "ನವ್ಯಕಾವ್ಯ ಮತ್ತು ನವ್ಯವಿಮರ್ಶೆ ಹೆಚ್ಚು ಪ್ರಾಚುರ್ಯಕ್ಕೆ ಬರುತ್ತಿದ್ದ ಸಂದರ್ಭದಲ್ಲಿ ಈ ಪಂಥ ಹುಟ್ಟಿಕೊಂಡಿತು. ಐತಿಹಾಸಿಕವಾಗಿ ನವ್ಯಸಾಹಿತ್ಯದಲ್ಲಿ – ಕಾವ್ಯ ಮತ್ತು ವಿಮರ್ಶೆಯನ್ನು ಆರಂಭಿಸಿದ ಗೋಕಾಕರೇ ಈ ಸಮನ್ವಯ ಪಂಥದ ಅಧಿಕೃತ ವಕ್ತಾರರಾಗಿದ್ದಾರೆ.

ನವೋದಯ ಪರಂಪರೆಯಲ್ಲಿ ಕಾವ್ಯ ಹಾಗೂ ವಿಮರ್ಶೆಗಳೆರಡನ್ನೂ ಬರೆದ ಗೋಕಾಕರು ನವೋದಯ ಮತ್ತು ನವ್ಯದಲ್ಲಿ ಸಮನ್ವಯ ಸಾಧಿಸುವ ಪ್ರಯತ್ನ ಮಾಡಿದರು. ಅದರ ಫಲವಾಗಿ 'ಸಮನ್ವಯ ಕಾವ್ಯ', 'ಸಮನ್ವಯ ವಿಮರ್ಶೆ' ಎಂಬುವು ಕೇಳಿ ಬಂದವು. ಅವರು ಸಮನ್ವಯ ಪಂಥದ ಘೋಷಣಾಪತ್ರವನ್ನು ಪ್ರಕಟಿಸಿದರು. ಸಮನ್ವಯ ಎಂಬ ಸಾಹಿತ್ಯ ಪತ್ರಿಕೆಯನ್ನು ಪ್ರಾರಂಭಿಸಿದರು. ಈ ಸಮನ್ವಯ ಧೋರಣೆಯ ಪ್ರಭಾವಕ್ಕೆ ವಿ.ಕೃ.ಗೋಕಾಕ್, ಜಿ.ಎಸ್.ಶಿವರುದ್ರಪ್ಪ, ರಂ.ಶ್ರೀ.ಮುಗಳಿ ಚನ್ನವೀರ ಕಣವಿ, ಕೀರ್ತಿನಾಥ ಕುರ್ತಕೋಟಿ, ಮುಂತಾದವರು ಸೇರುತ್ತಾರೆ."[೧]

ಸಮನ್ವಯ ವಿಮರ್ಶಕರ ನಿಲುವುಗಳು ಯಾವ ಮಾದರಿಯವು ಎಂಬುದರ ಬಗ್ಗೆ ಸ್ವತಃ ವಿ.ಕೃ.ಗೋಕಾಕರು ಘೋಷಿಸಿರುವ ವಿವರಗಳು ಹೀಗಿವೆ.

೧. "ಮೂಲಭೂತ ಪ್ರಶ್ನೆಗಳಿಗೆ ಸ್ವಯಂ ಸಮರ್ಪಕ ಉತ್ತರ ಕೊಡಬಲ್ಲ ಎಲ್ಲ ತತ್ವ ಪ್ರಣಾಲಿಗಳೂ ಸ್ವಾಗತಾರ್ಹ.

೨. ಸಾಹಿತಿಗೆ ತಾತ್ವಿಕ ದೃಷ್ಟಿ ಇರಬಹುದು, ಇಲ್ಲದಿರಬಹುದು ಅರ್ಥಪೂರ್ಣ ಅನುಭವದ ನಿರೂಪಣೆಯೇ ಸಾಹಿತ್ಯದಲ್ಲಿ ಮುಖ್ಯ.

೩. ಅಂತಃಪ್ರಜ್ಞೆ ಮತ್ತು ಸಾಮಾಜಿಕ ಪ್ರಜ್ಞೆಗಳು ಪರಸ್ಪರ ಪೂರಕವಾಗುವಂತೆ ಸಾರ್ವಕಾಲಿಕ ಹಾಗೂ ಸಮಕಾಲೀನ ಪ್ರಜ್ಞೆಗಳಿಗೂ ಸಾಹಿತಿಯ ಮನೋಧರ್ಮದಲ್ಲಿ ಸಮಾವಿಷ್ಟವಾಗಬೇಕಾಗುತ್ತದೆ. ಸಾಮಾಜಿಕ ಹಾಗೂ ಸಮಕಾಲೀನ ದೃಷ್ಟಿಗಳನ್ನಷ್ಟೇ ಎತ್ತಿಹಿಡಿದು ಅಂತಃಪ್ರಜ್ಞೆ ಮತ್ತು ಸಮಕಾಲೀನ ಪ್ರಜ್ಞೆಗಳನ್ನು ಯಾರೂ ಕಡೆಗಣಿಸಲಾರರು.

೪. ಸಾಹಿತಿಗಳು ತಮ್ಮ ತಮ್ಮ ಜೀವನದೃಷ್ಟಿಗಳಿಗನುಗುಣವಾಗಿ ವಿವಿಧ ರೀತಿ ಮತ್ತು ಪ್ರಮಾಣಗಳಲ್ಲಿ ಸಮಾಜದ ಬಗ್ಗೆ ಸಹಾನುಭೂತಿಯ, ತದ್ವಿರುದ್ಧವಾದ ಮಿಶ್ರ ಇಲ್ಲವೆ ತಟಸ್ಥತೆಯ ಪ್ರತಿಕ್ರಿಯೆಯನ್ನು ಪ್ರಕಟಿಸಬಹುದು. ಕೇವಲ ಸಾಹಿತಿಯು ಬೆಳೆದ ಪರಿಸರದಿಂದ ಇಲ್ಲವೆ ಬಳಸಿದ ತಂತ್ರದಿಂದ ಅವನ ಕೃತಿಗಳ ಬೆಲೆಯು ನಿರ್ಣಯಿತವಾಗಲಾರದು.

೫. ಕೃತಿರಚನೆಗೆ ಸ್ಫೂರ್ತಿಯ ಪ್ರಾಣ ಬೇಕು. ದುಡಿಮೆಯ ಶರೀರ ಬೇಕು.

೬. ಆಯಾ ವಿಶಿಷ್ಟತೆಯನ್ನು ಗ್ರಹಿಸಿ ಅದರ ಗುಣವನ್ನೂ, ಪರಿಮಿತಿಯನ್ನೂ ಗುರುತಿಸುವುದು ಅತ್ಯಗತ್ಯ

೭. ಸಾಹಿತ್ಯದಲ್ಲಿ ಅನುಭವ ಮುಖ್ಯ. ಆದರೆ ರೀತಿ ಇಲ್ಲವೆ ತಂತ್ರ ಗೌಣವಲ್ಲ. ವ್ಯಕ್ತಿಗೆ ದೃಷ್ಟಿ ಸ್ವಾತಂತ್ರ್ಯವಿದ್ದಂತೆ ರೀತಿಸ್ವಾತಂತ್ರ್ಯವೂ ಇದೆ. ನವ್ಯತಂತ್ರವಿಲ್ಲವೆಂದು ನವ್ಯೇತರರನ್ನಾಗಲೀ ತದ್ವಿರುದ್ಧವಾಗಿಯಾಗಲೀ ಯಾರೂ ಆಕ್ಷೇಪಿಸಬಾರದು.

೮. ಕಾವ್ಯದಲ್ಲಿಯ ಪ್ರತಿಮಾ ವಿಧಾನಕ್ಕೆ ಅನೇಕ ದಾರಿಗಳಿವೆ.

೯. ಅಂದಂದಿನ ಜನಭಾಷೆ ಅಂದಂದಿನ ಕಾವ್ಯಭಾಷೆಯ ತಳಹದಿ.

೧೦. ಯಾವುದೇ ಒಂದು ಶೈಲಿ ಎಲ್ಲಾ ಶೈಲಿಗಳ ಅಳತೆಗೋಲಾಗಲಾರದು.

೧೧. ಕಾಣ್ಕೆ, ಕಾವ್ಯವಸ್ತು, ಮೂಡು, ರಚನಾಕ್ರಮ ಹಾಗೂ ಶೈಲಿಗೆ ಅನುರೂಪವಾಗಿ ಮಾತ್ರ ಛಂದಸ್ಸು ಮೈದೋರುತ್ತದೆ.

೧೨. ನವ್ಯ ಸಾಹಿತ್ಯ ನವೋದಯ ಸಾಹಿತ್ಯದ ಒಂದು ಅವಸ್ಥೆ ಮಾತ್ರ. ತನಗೆ ತಾನೇ ಪ್ರತ್ಯೇಕವಾದ ಮಾರ್ಗವಲ್ಲ. ಉದ್ದೀಪನ ಪ್ರೇರಣೆಗಳ ದೃಷ್ಟಿಯಿಂದಲೂ ಇದು ಸಮರ್ಥನೀಯ.

೧೩. ಸಮಗ್ರ ವಿಮರ್ಶನ ದೃಷ್ಟಿಗೆ ಎಲ್ಲ ವಿಮರ್ಶನ ಶಾಸ್ತ್ರಗಳ ವ್ಯಾಸಂಗವೂ ಅತ್ಯಗತ್ಯ. ಭಾರತೀಯ ಕಾವ್ಯಮೀಮಾಂಸೆಯೂ ಇದಕ್ಕೆ ಹೊರತಾಗಿರಬಾರದು.

ಈ ಸೂತ್ರಗಳ ಬೆಳಕಿನಲ್ಲಿ 'ಸಮನ್ವಯ' ತನ್ನ ಪ್ರೇರಣೆಯನ್ನು ಕಂಡುಕೊಂಡಿದೆ. ಸಾಹಿತ್ಯದ ವಿವಿಧ ಒಲವು ನಿಲುವುಗಳಲ್ಲಿ ಇದೊಂದು ವೇದಿಕೆ. ಏಕೆಂದರೆ ಸಮನ್ವಯವು ಪಕ್ಷಾತೀತ"[೨] ಎಂದು ಗೋಕಾಕರು ಈ ಅಭಿಪ್ರಾಯಕ್ಕೆ ಬರುತ್ತಾರೆ.

ನವೋದಯ ಸಾಹಿತ್ಯ ವಿಮರ್ಶೆಯ ಪರಂಪರೆಯಲ್ಲಿ ಪ್ರಾಚೀನ ಕನ್ನಡ ಸಾಹಿತ್ಯದ ವಿಮರ್ಶಾತ್ಮಕ ಇತಿಹಾಸವನ್ನು ಮೊದಲು ಬರೆದವರಲ್ಲಿ ರಂ.ಶ್ರೀ.ಮುಗಳಿ ಅವರೇ ಪ್ರಮುಖರೆಂದರೆ ತಪ್ಪಾಗಲಾರದು. ಇದಕ್ಕೂ ಮೊದಲು ಐತಿಹಾಸಿಕವಾಗಿ ಸಾಹಿತ್ಯವನ್ನು ನೋಡುವ ದೃಷ್ಟಿಕೋನ ಪಾಶ್ಚಾತ್ಯರಿಂದ ಬಂದಿರುವಂತದ್ದನ್ನು ಗಮನಿಸಬಹುದಾಗಿದೆ. ಒಬ್ಬ ಕವಿಯನ್ನು ಕುರಿತು ಬರೆಯುವಾಗ ಅವನು ಬದುಕಿದ ಕಾಲ ದೇಶಗಳ ಸಾಮಾಜಿಕ, ಧಾರ್ಮಿಕ ಸನ್ನಿವೇಶಗಳನ್ನು ಗಮನದಲ್ಲಿಟ್ಟುಕೊಂಡು ಬರೆಯಬೇಕೆಂಬುದು ಐತಿಹಾಸಿಕ ದೃಷ್ಟಿಕೋನವಾಗಿದೆ. ಒಬ್ಬ ಕವಿಯು ಎಷ್ಟು ದೊಡ್ಡವನು, ಎಷ್ಟು ಪ್ರತಿಭಾವಂತ, ಅವನ ಕೃತಿಗಳೆಷ್ಟು ಮಹತ್ವಪೂರ್ಣ ಎಂದು ನಿರ್ಣಯಿಸುವಾಗ ಸಾರ್ವಕಾಲಿಕ ಎನ್ನಬಹುದಾದ ಒಳ್ಳೆಯ ಕಾವ್ಯದ ಗುಣಗಳ ಮಾನದಂಡವನ್ನಿಟ್ಟುಕೊಂಡು ಕವಿಗಳನ್ನು, ಕೃತಿಗಳನ್ನು ವಿಮರ್ಶಿಸಿ ಅವುಗಳ ಗುಣಲಕ್ಷಣಗಳನ್ನು ಕುರಿತು ಬರೆಯಬೇಕಾಗುತ್ತದೆ. ಹಾಗೆ ಬರೆದಾಗ ಪಂಪ, ಅನಂತರದ ಅವನ ಕಾಲದಿಂದ ಭಿನ್ನವಾದ ಸಂದರ್ಭದಲ್ಲಿ ಕಾವ್ಯ ರಚಿಸಿದ ಕವಿಗಳಿಗಿಂತಲೂ ಶ್ರೇಷ್ಠವೆಂಬ ನಿರ್ಣಯಕ್ಕೆ ಬರಲು ಸಾಧ್ಯ. ಸಾಮಾನ್ಯವಾಗಿ ಈ ದೃಷ್ಟಿಯಿಂದಲೇ ಮುಗಳಿ ಅವರು ಪ್ರಾಚೀನ ಕನ್ನಡ ಇತಿಹಾಸವನ್ನು ವಿವೇಚಿಸಿರುವುದು ಅನನ್ಯವಾಗಿದೆ. 'ಸಾಹಿತ್ಯ ಚರಿತ್ರೆ'ಯಲ್ಲಿ ಏನೇ ನ್ಯೂನತೆ, ಕೊರತೆಗಳಿದ್ದರೂ ಈ ದೃಷ್ಟಿಯಿಂದ ಅವರ ಸಾಹಿತ್ಯ ಚರಿತ್ರೆ ಬಹಳ ಗಣನೀಯವಾಗಿದೆ. ಮುಗಳಿ ಅವರ ವಿಮರ್ಶಾ ಬರೆಹಗಳನ್ನು ಮರುವಿಮರ್ಶೆಗೆ ಈ ಭಾಗದಲ್ಲಿ ಒಳಪಡಿಸಲಾಗಿದೆ.

ಮುಗಳಿ ಅವರು ಕನ್ನಡ ಸಾಹಿತ್ಯ ವಿಮರ್ಶಾ ಕ್ಷೇತ್ರಕ್ಕೆ ಒಟ್ಟು ಒಂಬತ್ತು ಕೃತಿಗಳನ್ನು ನೀಡಿದ್ದಾರೆ. 'ರನ್ನನ ಕೃತಿರತ್ನ', 'ಸಾಹಿತ್ಯೋಪಾಸನೆ', 'ಕನ್ನಡ ಸಾಹಿತ್ಯದಲ್ಲಿ ಸರಸ್ವತಿದರ್ಶನ', 'ತವನಿಧಿ', 'ಸಾಹಿತ್ಯ ವಿಮರ್ಶೆಯ ಮಾರ್ಗದರ್ಶಕ ಸೂತ್ರಗಳು', 'ವಿಮರ್ಶೆಯ ವೃತ', 'ಮಹಾಕೃತಿ', 'ಬೇಂದ್ರೆ ಕಾವ್ಯ', 'ಪುನರ್ನವೋದಯ' ಎಂಬ ಶೀರ್ಷಿಕೆಗಳಡಿಯಲ್ಲಿ ರಚನೆಗೊಂಡ ಕೃತಿಗಳು ಅಧ್ಯಯನಗಳ ವೈವಿಧ್ಯತೆ ಹಾಗೂ ಒಳಹರವುಗಳನ್ನು ಸ್ಪಷ್ಟಪಡಿಸುತ್ತವೆ.

ಪ್ರಾಮಾಣಿಕವಾದ ವಿಮರ್ಶೆ, ಸಹಾನುಭೂತಿಯುಳ್ಳ ಗುಣದೋಷಗಳ ವಿಮರ್ಶೆ, ತಾಳ್ಮೆಯುತ ವಿವೇಚನಾಪ್ರಜ್ಞೆ, ಸಂಯಮದ ನಿರೂಪಣೆ, ನಿಷ್ಪಕ್ಷಪಾತಗಳಂತಹ ಅಂಶಗಳನ್ನು ಮುಗಳಿ ಅವರ ವಿಮರ್ಶಾ ಕೃತಿಗಳಲ್ಲಿ ಗುರುತಿಸಬಹುದಾಗಿದೆ.

'ರನ್ನನ ಕೃತಿರತ್ನ'(೧೯೪೫) ಮುಗಳಿ ಅವರ ಮೊದಲ ವಿಮರ್ಶಾ ಕೃತಿ. ಅದರಲ್ಲಿ ಗದಾಯುದ್ಧದಲ್ಲಿನ ಗುಣದೋಷಗಳನ್ನು ಅಭಿವ್ಯಕ್ತಿಸುವ ಕ್ರಮವು ಸೃಜನಶೀಲತೆಯಿಂದ ಕೂಡಿದೆ. ಅವರು ಸಹಾನುಭೂತಿಪೂರ್ವಕವಾಗಿ ರನ್ನನ ಕೃತಿಯನ್ನು ಪರಿಶೀಲಿಸಿದ್ದಾರೆಂಬುವುದಕ್ಕೆ ಅವರ ಪೀಠಿಕಾಭಾಗದಿಂದ ತಿಳಿದುಬರುತ್ತದೆ. "ರನ್ನನ ಕೃತಿರತ್ನಮುಮಂ ಪೇಟಿ ಪರೀಕ್ಷಿಪಂಗೆಂಟೆರ್ದೆಯೇ"[೩] ಎಂದು ರನ್ನನು ಗದಾಯುದ್ಧದ ಆರಂಭಕ್ಕೂ ಮುನ್ನ ಪರೀಕ್ಷಕರನ್ನು ಹೆದರಿಸಿದ್ದಾನೆ. ತಾನು ಗದಾಯುದ್ಧ ಬರೆಯುವುದಕ್ಕೂ ಮೊದಲೇ ತನ್ನ ಕೃತಿಯ ಬಗ್ಗೆ ಪ್ರೀತಿಪೂರ್ವಕವಾಗಿ ಹಿರಿಮೆ ಗರಿಮೆಯನ್ನು ಕೊಂಡಾಡಿದ್ದಾನೆ. ಈ ಮಾತನ್ನು ಮುಗಳಿ ಅವರು ಈ ರೀತಿಯಾಗಿ ಪ್ರತಿಕ್ರಿಯಿಸಿದ್ದಾರೆ. "ರನ್ನನ ಆತ್ಮವಿಶ್ವಾಸ ಹೆಚ್ಚಿಸನದು, ಅದು ಸಾರ್ಥಕವೂ ಆಗಿದೆ. ಇನ್ನು ಎಂಟೆರ್ದೆ ನನಗಿದೆಯೋ ಇಲ್ಲವೋ ಅಳ್ಳೆದೆ ಮಾತ್ರ ಇಲ್ಲ. 'ಕೃತಿರತ್ನವನ್ನು ಮೆಚ್ಚಿದ್ದೇ ನಿಜವಾದರೆ ಅದರ ಅದ್ಭುತ ಕಾಂತಿಯನ್ನು ಕುಂದುಕೊರತೆಯನ್ನು ಬಣ್ಣಿಸಲು ಹೆದರಿಕೆಯೇಕೆ? ಒಂದೇ ಮಾತಿನಲ್ಲಿ ಹೇಳುವುದಾದರೆ 'ಇದೇಂ ಪೆಂಪೋ ಗದಾಯುದ್ಧದಾ' ಎಂಬ ಪಂಪನ ಉದ್ಗಾರವನ್ನು ಗದಾಯುದ್ಧ ಕಾವ್ಯಕ್ಕೆ ಹಚ್ಚಿ ತನ್ನ ಎದೆದುಂಬಿದ ಮೆಚ್ಚುಗೆಯನ್ನು ತಿಳಿಯಬಯಸುತ್ತೇನೆ"[೪] ಎಂದಿದ್ದಾರೆ. ಇದರಿಂದಾಗಿಯೇ ಮುಗಳಿ ಅವರ ವಿಮರ್ಶೆಯು ಕೇವಲ ಗುಣದೋಷಗಳ ಪಟ್ಟಿಯಾಗದೆ ಕಾವ್ಯಶಾಸ್ತ್ರ ವೈಶಿಷ್ಟ್ಯತೆಯಿಂದ ಕೂಡಿರುತದೆ. ಇದಕ್ಕೆ ಮುಗಳಿ ಅವರ ಸರಳ ಸಜ್ಜನಿಕೆ ಮೂಲ ಕಾರಣವೆಂದು ಹೇಳಬಹುದು. ಮುಗಳಿ ಅವರು ತಮ್ಮ ನಿರೂಪಣೆಗೆ ಬಳಸುವ ಭಾಷೆಯು ಕ್ಲಿಷ್ಟತೆಯಿಂದ ಕೂಡಿರದೆ ಓದುಗರನ್ನು ಸರಾಗವಾಗಿ ಓದಿಸಿಕೊಂಡು ಹೋಗುವಂತದ್ದಾಗಿದೆ.

ಅಂಥ ಒಂದು ಸನ್ನಿವೇಶವನ್ನು ತಿಳಿಯುವುದಾದರೆ, ಸರೋವರದಿಂದ ದುರ್ಯೋಧನನನ್ನು ಎಬ್ಬಿಸಲು ಭೀಮನು ಮಾಡಿದ ಘರ್ಜನೆ ಪಂಪಭಾರತದಿಂದ ಸ್ಫೂರ್ತಿಗೊಂಡರೂ ವಿಸ್ತಾರದಲ್ಲಿಯೂ ಕೋಪಾಟೋಪದ ಆವಿಷ್ಕಾರದಲ್ಲಿಯೂ ನಾಟಕೀಯ ರಸೋತ್ಕಟತೆಯಲ್ಲಿಯೂ ರನ್ನನದೇ ಮೇಲುಗೈಯಾಗಿದೆ. ಎಂಬ ನಿರ್ಣಯಕ್ಕೆ ಬರುವ ಮುಗಳಿ ಅವರು ರನ್ನನು ರಚಿಸಿದ ಗದಾಯುದ್ಧದ ಒಂದು ಸನ್ನಿವೇಶವನ್ನು ಈ ರೀತಿ ಪರಿಚಯಿಸುತ್ತಾರೆ. "ಆ ರವಮಂ ನಿರ್ಜಿತ ಕಂಠೀರವರವಮಂ ನಿರಸ್ತಘನರವಮಂ ಕೋಪಾರುಣ ನೇತ್ರಂ ಕೇಳ್ದು ಆ। ನೀರೊಳಗಿರ್ದುಂ ಬೆಮರ್ತನುರಗಪತಾಕಂ"[೫] ಎಂಬ ರನ್ನನ ವರ್ಣನೆ ಅತಿನೂತನವೂ ಸತ್ವಯುತವೂ ಆಗಿದೆ. ನೀರೊಳಗಿದ್ದೂ ಯಾರಾದರೂ ಬೆವರುತ್ತಾರೆಯೇ! ಹೌದು ಉರಗಪತಾಕನಾದ ಅಂದರೆ ಹಾವನ್ನೇ ತನ್ನ ಧ್ವಜದಲ್ಲಿ ಚಿತ್ರಿಸಿಕೊಂಡ ದುರ್ಯೋಧನನು ಬೆವರಿದನು. ನೀರೊಳಗಿದ್ದರೂ ಅವನ ಕೋಪವು ಎಷ್ಟೆಂದು ತಿಳಿಹೇಳಲು ಕವಿಯ ಕಲ್ಪನೆಯು ಎಂತಹದೆಂಬುದು ಮೆಚ್ಚುವಂತದ್ದಾಗಿದೆ.

ಮುಗಳಿ ಅವರು ವಿಮರ್ಶೆಗೊಳಪಡಿಸಿದಂತೆ 'ರನ್ನನ ಕೃತಿರತ್ನ'ದ ನಾಯಕನಾರು? ಎಂಬ ಪ್ರಮುಖ ಪ್ರಶ್ನೆಯನ್ನಿಟ್ಟುಕೊಂಡು ಉತ್ತರ ಕಂಡುಕೊಳ್ಳುವ ಅವರ ವಿಮರ್ಶಾಕ್ರಮ ಮೆಚ್ಚುವಂತದ್ದಾಗಿದೆ. "ದುರ್ಯೋಧನ ದುರಂತ ನಾಯಕನೇನೋ ನಿಜ ಆದರೆ, ಮುಖ್ಯ ನಾಯಕನಾದ ಭೀಮನಿಗೆ ಪ್ರತಿನಾಯಕ. ಪ್ರತಿಜ್ಞಾಪ್ರೇರಣೆಯಲ್ಲಿ, ಪಟ್ಟಾಭಿಷೇಕದಲ್ಲಿ ಕೊನೆಗೊಳ್ಳುವ ಈ ಕಾವ್ಯಕ್ಕೆ ಭೀಮ ನಾಯಕನಾಗುತ್ತಾನೆ. ಭೀಮನಿಗಿಂತ ದುರ್ಯೋಧನನ ನೈತಿಕ ಮಟ್ಟವನ್ನು ಬಹಳ ಎತ್ತರದ್ದಾಗಿ ಒಂದೆರಡು ಅವಗುಣಗಳಿಂದ ಮಾತ್ರ ನಷ್ಟ ಹೊಂದಿದ ಸದ್ಗುಣಶಾಲಿಯಾದ ದುರಂತನಾಯಕ ಎಂದು ದುರ್ಯೋಧನನನ್ನು ಕೊಂಡಾಡುವುದೆಂದರೆ ಅತಿ ಪ್ರಶಂಸೆಯಿಂದ ಫಲಿಸದ ಅಪನಿರ್ಣಯವಾಗುತ್ತದೆ"[೬] ಎಂಬುದರ ಬಗ್ಗೆ ಮುಗಳಿ ಅವರ ಹೇಳಿಕೆಯನ್ನು ಒಪ್ಪಬಹುದಾಗಿದೆ.

'ಸಾಹಿತ್ಯೋಪಾಸನೆ' ಎಂಬ ಈ ಕಿರು ವಿಮರ್ಶಾಕೃತಿಯಲ್ಲಿ ರಂ.ಶ್ರೀ.ಮುಗಳಿ ಅವರು ಸಾಹಿತ್ಯೋಪಾಸನೆಯ ಸ್ವರೂಪ, ಮಹತ್ವ ಮತ್ತು ವಿಧಾನವನ್ನು ಚರ್ಚಿಸಿರುವ ವಿಷಯ ವಸ್ತುವನ್ನೊಳಗೊಂಡಿದೆ. ಹಾಗೆಯೇ ಹೊಸಗನ್ನಡ ಸಾಹಿತ್ಯದ ವಿಭಿನ್ನ ಮುಖಗಳನ್ನು ಹೊಂದಿರುವ ವಿಮರ್ಶಾ ಲೇಖನಗಳನ್ನೊಳಗೊಂಡಿದೆ. ಅದರಲ್ಲಿ 'ಕನ್ನಡ ಕಾದಂಬರಿ' ಎಂಬ ದೀರ್ಘಲೇಖನದಲ್ಲಿ ೧೯೨೦ರಿಂದ ೧೯೪೫ರವರೆಗೆ ಕನ್ನಡ ಕಾದಂಬರಿಗಳು ಬೆಳೆದುಬಂದ ಬಗೆಯ ಸಮೀಕ್ಷೆಯಿದೆ.

ಮೊದಲ ಹಂತದ ಕಾದಂಬರಿಗಳು ಬಂಗಾಳಿ, ಮರಾಠಿ ಇತ್ಯಾದಿ ಭಾಷೆಗಳಿಂದ ಭಾಷಾಂತರಗೊಂಡ ಕಾದಂಬರಿಗಳದ್ದೇ ಪಾರುಪತ್ಯವಾಗಿದೆ. ಕೌಶಲ್ಯವೂ ಶೈಲಿಯ ಮೋಹಕತೆಯೂ ತೋರಿವೆ. ಆದರೂ ಅವುಗಳ ತಂತ್ರವೆಲ್ಲ ಹಳೆಯದರಂತೆ ಏಕರೀತಿಯದ್ದಾಗಿದೆ. ವಿಷಯ ನಿರೂಪಣೆ, ವೈವಿಧ್ಯತೆ, ವರ್ಣನೆಗಳ ನೀತಿವಿಸ್ತಾರ, ಸ್ವಭಾವ ಸನ್ನಿವೇಶಗಳ ಕೃತಕತೆ ಗಂಭೀರಕ್ಕೆ ಹಾಸ್ಯದ ಸ್ವರೂಪ ಕೊಡುವಂತಾದವು. ಆದರೂ ಬಂಕಿಮಚಂದ್ರರ ರಾಷ್ಟ್ರದರ್ಶನ ಅದ್ಭುತ ರಮ್ಯ ಕಥನಕಲೆ ಇವುಗಳಿಂದ ವೆಂಕಟಾಚಾರ್ಯರ ಕೃತಿಗಳು ಮರಾಠಿ ಕಾದಂಬರಿಕಾರರ ದೇಶಧರ್ಮನಿಷ್ಠೆ ರೋಮಾಂಚನಕಾರಿ ಚರಿತ್ರೆ ಇವುಗಳಿಂದ ಗಳಗನಾಥರ ಕೃತಿಗಳು ವಿಶಿಷ್ಟಶೈಲಿಯಲ್ಲಿ ಮೂಡಿಬಂದವುಗಳಾಗಿವೆ. ಎಂ.ಎಸ್.ಪುಟ್ಟಣ್ಣನವರ ಕಾದಂಬರಿಗಳಲ್ಲಿ ಮೈಸೂರಿನ ಜನಜೀವನದ ವಾಸ್ತವಚಿತ್ರವೂ, ಕೆರೂರು ವಾಸುದೇವಾಚಾರ್ಯರ 'ಇಂದಿರೆ'ಯಲ್ಲಿ ಸುಶಿಕ್ಷಿತ ಸಮಾಜದ ಕಾಲ್ಪನಿಕ ಚಿತ್ರಣವೂ ಅನಾವರಣಗೊಂಡರೆ ತಿರುಮಲಾಂಬ ಅವರ ಕೃತಿಗಳಲ್ಲಿ ಸಾಮಾಜಿಕ ಚರ್ಚೆಗಳು ನಡೆಸುವುದು ಅಗತ್ಯತೆ ಇದೆ ಎಂಬ ಅಭಿಪ್ರಾಯಕ್ಕೆ ಬರುವ ಮುಗಳಿ ಅವರು ಕಾದಂಬರಿಯ ತಂತ್ರ, ಶೈಲಿ, ನಿರೂಪಣೆ ವೈಶಿಷ್ಟತೆಯ ಕುರಿತು ಮೆಚ್ಚುಗೆ ವ್ಯಕ್ತಪಡಿಸುತ್ತಾರೆ.

'ಕನ್ನಡದಲ್ಲಿ ರಾಷ್ಟ್ರೀಯ ಕಾವ್ಯ' ಲೇಖನದಲ್ಲಿ ಮುಗಳಿ ಅವರು ಕನ್ನಡ ಕಾವ್ಯವು ರಾಷ್ಟ್ರೀಯತ್ವವನ್ನು ಬಿಂಬಿಸುವ ಕಾವ್ಯಗಳನ್ನು ಪರಿಚಯಿಸುತ್ತಾರೆ. ಮೊದಲು ಶಾಸನಾದಿಯಾಗಿ, ಹಳಗನ್ನಡ, ನಡುಗನ್ನಡ, ಆಧುನಿಕ ಸಾಹಿತ್ಯದವರೆಗೂ ಅವಲೋಕಿಸಿದ್ದಾರೆ. 'ಸಾಧುಗೆ ಸಾಧು ಮಾಧುರ್ಯಂಗೆ ಮಾಧುರ್ಯಂ ಬಾಧಿಪ್ಪ ಕಲಿಗೆ ಕಲಿಯುಗ ವಿಪರೀತನ್' ಎಂಬ ಶಾಸನ ಪದ್ಯ

ಪರಿಚಯಿಸುತ್ತಾರೆ. ಮಾರಸಿಂಹ, ಇಂದ್ರರಾಜ, ಗೋನರಸ, ಚಾಲುಕ್ಯ, ವಿಕ್ರಮಾದಿತ್ಯ, ಹೊಯ್ಸಳ, ವಿಷ್ಣುವರ್ಧನ, ವೀರಬಲ್ಲಾಳ ಇವರ ವರ್ಣನೆಯಲ್ಲಿಯೂ ಕನ್ನಡನಾಡಿನ ಹಿರಿಮೆ ಗರಿಮೆ ತಿಳಿಸುವ ಮುಗಳಿ ಅವರ ಪಂಪನ ಬನವಾಸಿ ವರ್ಣನೆಯು ಉತ್ತಮ ರಾಷ್ಟ್ರೀಯ ಕಾವ್ಯಕ್ಕೊಂದು ನಿದರ್ಶನವಾಗಿದೆ. ಮನುಷ್ಯರಾಗಿ ಸಾಧ್ಯವಾಗದಿದ್ದರೆ "ಮರಿದುಂಬಿಯಾಗಿ ಮೇಣ್ ಕೋಗಿಲೆಯಾಗಿ ಪುಟ್ಟುವುದು ನಂದನದೊಳ್ ಬನವಾಸಿ ದೇಶದೊಳ್ ಎಂದೂ ಆರಂಕುಶವಿಟ್ಟೊಡಂ ನೆನೆವುದೆನ್ನಮನಂ ಬನವಾಸಿ ದೇಶಮಂ"[೭] ಎಂದು ಪಂಪನು ಹೇಳಿರುವ ಅಂದಿನ ಬನವಾಸಿಯನ್ನು ಮುಗಳಿಯವರು ಚರ್ಚಿಸುತ್ತಾರೆ. ಮುಂದುವರಿದು ಆಧುನಿಕ ಕನ್ನಡ ಸಾಹಿತ್ಯ ಕುರಿತು ಹುಯಿಲಗೊಳ ನಾರಾಯಣರಾಯರ 'ಉದಯವಾಗಲಿ ನಮ್ಮ ಚೆಲುವ ಕನ್ನಡನಾಡು' ಎಂದರೆ, ಬಿ.ಎಂ.ಶ್ರೀ. ಅವರ 'ಇಂಗ್ಲಿಷ್ ಗೀತಗಳು' ಎಂಬ ಭಾಷಾಂತರ ಕೃತಿಯಲ್ಲಿ ಭಾರತಮಾತೆಯ ವಾಕ್ಯ ನಾಡುನುಡಿಯ ಚಿಂತನೆಗೆ ಇಂಬುಕೊಟ್ಟವು. ಮಾಸ್ತಿ ಅವರ 'ಮಲಾರ' ಕನ್ನಡ ನಾಡಿನ ಸ್ಥಿತಿಗತಿ ತಿಳಿಸಿದರೆ, ಕುವೆಂಪು ಅವರ 'ಕನ್ನಡ ಎನೆಕುಣಿದಾಡುವುದೆನ್ನೆದೆ' ಹಾಗೂ ಪಾಂಚಜನ್ಯದಲ್ಲಿ ದೇಶಪ್ರೇಮ ಮೂಡಿಸುವ ಬಗ್ಗೆ ತಿಳಿಸಿದರೆ, ಬೇಂದ್ರೆ ಅವರ 'ಹಕ್ಕಿ ಹಾರುತಿದೆ', 'ತುತ್ತಿನ ಚೀಲ', 'ಮೂವತ್ತಮೂರುಕೋಟಿ ನರಬಲಿ'ಗಳಂತಹ ಕಾವ್ಯಗಳಲ್ಲಿ ರಾಷ್ಟ್ರಪ್ರೇಮ ಮೂಡಿಸುವಂತಹ ಅಂಶಗಳನ್ನು ಗುರುತಿಸಲಾಗಿದೆ.

'ಕನ್ನಡ ಸಾಹಿತ್ಯದಲ್ಲಿ ಸರಸ್ವತಿ ದರ್ಶನ' ಎಂಬ ವಿಮರ್ಶಾ ಕೃತಿಯು ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಮುಗಳಿ ಅವರು ಮಾಡಿದ ಮೂರು ವಿಶೇಷ ಉಪನ್ಯಾಸಗಳ ಸಾರವನ್ನು ಒಳಗೊಂಡಿದೆ. ಇದರಲ್ಲಿ ಕನ್ನಡ ಕಾವ್ಯವು ಕಂಡ ಸರಸ್ವತಿಯನ್ನು ಮುಗಳಿ ಅವರು ಮೂರು ನೆಲೆಗಳಲ್ಲಿ ಗುರುತಿಸಿದ್ದಾರೆ.

೧. ಮಾರ್ಗಕಾವ್ಯ ಅಥವಾ ಓದುಗಬ್ಬದಲ್ಲಿ ಸರಸ್ವತಿ

೨. ಇತರ ಮೌಖಿಕ ಅಥವಾ ಹಾಡುಗಬ್ಬದಲ್ಲಿ ಸರಸ್ವತಿ

೩. ಹೊಸಗನ್ನಡ ಸಾಹಿತ್ಯದಲ್ಲಿ ಸರಸ್ವತಿ

ಸರಸ್ವತಿಯನ್ನು ಕುರಿತು ಮಾಡಿದ ಪ್ರಾರ್ಥನೆ, ಸ್ತುತಿ ಉಲ್ಲೇಖ ಇವುಗಳಲ್ಲಿ ಪ್ರಮುಖ ಕನ್ನಡ ಕವಿಗಳು ಸರಸ್ವತಿಯನ್ನು ಕಂಡ ಪರಿ ಹಾಗೂ ಆನುಷಂಗಿಕವಾಗಿ ಕಾವ್ಯದ ಸ್ವರೂಪ, ಕಾವ್ಯದ ಉದ್ದೇಶ, ಕಾವ್ಯದ ವಿಷಯ ವಸ್ತುವನ್ನೊಳಗೊಂಡಂತೆ ಚರ್ಚಿಸಿ ಮರುವಿಮರ್ಶೆಗೆ ಒಳಪಡಿಸಿದ್ದಾರೆ. ಮುಗಳಿ ಅವರು ಕವಿರಾಜಮಾರ್ಗದ ಗ್ರಂಥಕರ್ತನಿಂದ ಪ್ರಾರಂಭಿಸಿ ಪಂಪ, ರನ್ನರಂಥ ಮಾರ್ಗಕವಿಗಳಂತ ದರ್ಶನವನ್ನೂ ನೀಡಿರುವುದಲ್ಲದೇ ಹರಿಹರ, ರಾಘವಾಂಕ, ಕುಮಾರವ್ಯಾಸ, ಚಾಮರಸರ ರಸಸ್ಫೂರ್ತಿಗಳ ಒಳನೋಟವನ್ನು ಕಂಡುಕೊಂಡಿದ್ದಾರೆ. ದಾಸರು ಸಾಂಪ್ರದಾಯಿಕವಾದರೂ ಅರ್ಥಪೂರ್ಣವಾದ ಸರಸ್ವತಿ ಸ್ವರೂಪವನ್ನು ಕಾಣಲು ಹವಣಿಸಿದ್ದರ ಬಗ್ಗೆ ಚರ್ಚಿಸಿದ್ದಾರೆ. ಹಾಗೆ ಮುಂದುವರಿದು ರತ್ನಾಕರವರ್ಣಿಯ ಕಾವ್ಯಸ್ಫೂರ್ತಿ, ಅನುಭಾವ ಸ್ಫೂರ್ತಿಗಳಿಂದ ಮೂಡಿದ ಪ್ರತಿಭಾಸಂದರ್ಶನದ ರಮ್ಯನೈಜತೆಯನ್ನು ತೋರ್ಪಡಿಸುವ ಮುಗಳಿ ಅವರು ಆಧುನಿಕ ಸಾಹಿತ್ಯದಲ್ಲಿ

ತಿಳಿಸುವ ಹಾಗೆ ಬಿ.ಎಂ.ಶ್ರೀ., ಡಿ.ವಿ.ಜಿ., ಮಾಸ್ತಿ, ಬೇಂದ್ರೆ, ಕುವೆಂಪು, ಪು.ತಿ.ನ., ವಿ.ಕೃ.ಗೋಕಾಕ್, ಗೋಪಾಲಕೃಷ್ಣ ಅಡಿಗ, ಡಿ.ಎಸ್.ಕರ್ಕಿ, ಕಣವಿ ಇನ್ನೂ ಮೊದಲಾದ ಕವಿಗಳ ಸರಸ್ವತಿಯ ಕುರಿತಂತೆ ಆಧುನಿಕ ಸಾಹಿತ್ಯದೊಡನೆ ತಮ್ಮನ್ನು ಆಗುಮಾಡಿಕೊಂಡು ಅಂಥ ಕವಿಗಳ ಸಾಹಿತ್ಯದ ಒಳಹರವನ್ನು ವಿಮರ್ಶೆಗೊಳಪಡಿಸಿದ್ದಾರೆ.

"ಮುಗಳಿ ಅವರ ಸರಸ್ವತಿದರ್ಶನವನ್ನು ಗ್ರಹಿಸುವ ಪೂರ್ವದಲ್ಲಿ 'ದರ್ಶನ'ವೆಂಬ ಪದದ ವಿಶಿಷ್ಟತೆಯನ್ನು ತಿಳಿದುಕೊಳ್ಳಬೇಕಾದ ಅಗತ್ಯವಿದೆ. ಶ್ರೀ ಮುಗಳಿ ಅವರ ವಿವೇಚನಾ ರೀತಿಯನ್ನು ಗಮನಿಸಿದರೆ ಕನ್ನಡ ಕವಿಗಳು ಕಂಡ ಸರಸ್ವತಿದರ್ಶನವು ವೇದರ್ಷಿಗಳ ದರ್ಶನದಂತೆ ಆದಿದೇವತಾ ದರ್ಶನವಲ್ಲ. ತತ್ವದರ್ಶನ ಇಲ್ಲದೆ ಅರ್ಥದರ್ಶನ-ಭಾವದರ್ಶನವೆಂದು ಸ್ಪಷ್ಟವಾಗುತ್ತದೆ. ವೇದರ್ಷಿಗಳು ಒಂದು ದೇವತೆಯ ರೂಪಲಕ್ಷಣಗಳನ್ನು ಬಣ್ಣಿಸಿದರೆ ಅವು ಸಾಂಕೇತಿಕ ಅರ್ಥವನ್ನು ಮಾತ್ರ ಒಳಗೊಂಡಿರುವುದಿಲ್ಲ. ನೈಜವಾದ ಕಾರಣ ರೂಪದಿಂದಲೂ ಕೂಡಿದ ದರ್ಶನದ ಬಣ್ಣನೆಯಾಗಿರುತ್ತವೆ ಶಬ್ದಕ್ಕೊಂದು ರೂಪವಿರುತ್ತದೆ."[೮]

ಮುಗಳಿ ಅವರು ಪಂಪನ ಕೃತಿಗಳಲ್ಲಿ ಬರುವ ಸರಸ್ವತಿ ಪ್ರಸ್ತಾಪವನ್ನು ನಿದರ್ಶನವಾಗಿ ತೆಗೆದುಕೊಂಡು ಈ ವಿಕಾಸನೆಲೆಯನ್ನು ಸ್ಪಷ್ಟಪಡಿಸಿದ್ದಾರೆ. ಆದಿಪುರಾಣದಲ್ಲಿ ಬರುವ "ಪರಮ ಜಿನೇಂದ್ರವಾಣಿಯೇ ಸರಸ್ವತಿ ಬೇರದು ಪೆಣ್ಣರೂಪಂ। ಧರಿಯಿಸಿ ನಿಂದುದಲ್ತು"[೯] ಎನ್ನುವ ಸರಸ್ವತಿ ಸ್ತುತಿಯು ತೀರ ಮೊದಲನೆಯದು ಮಾತ್ರವಲ್ಲ, ಸರ್ವ ಸಾಮಾನ್ಯ ಸಂಪ್ರದಾಯಕ್ಕಿಂತ ಬೇರೆಯದೂ, ಅರ್ಥಪೂರ್ಣವೂ ಆಗಿರುತ್ತದೆ ಎಂದು ಗುರುತಿಸಿ ಕುತೂಹಲಕರ ಅಂಶಗಳನ್ನು ತಿಳಿಸುತ್ತಾರೆ.

ಅದೇ ರೀತಿಯಾಗಿ ಪಂಪನು ತನ್ನ ಭಾರತದಲ್ಲಿ ಸರಸ್ವತಿಯನ್ನು ಈ ರೀತಿ ಪ್ರಾರ್ಥಿಸಿದ್ದಾನೆ.

"ಕ್ಷಯಂ ಅಣಂ ಇಲ್ಲ ಕೇಳ್ದು ಕಡೆಗಂಡವಂ ಅವನುಂ ಇಲ್ಲ ಎನಲ್ ತದ ।
ಕ್ಷಯನಿಧಿ ತಾನೆ ತನ್ನಂ ಒಸೆದು ಓಲಗಿಪಂಗೆ ಅರಿದು ಇಲ್ಲ ಎನಿಪ್ಪವಾ ॥
ಙ್ಮಯಂ ಅನಿತರ್ಕಂ ಅಂಬಿಕೆ ಸರಸ್ವತಿ ಮನ್ಮುಖಪದ್ಮರಂಗದ ಏ।
ಳ್ಗೆಯಂ ಒಳಗೊಂಡು ಕೊಂಡು ಕೊನೆದು ಈಗೆ ಅರಿಗಂಗೆ ವಿಶದ್ದಬುದ್ಧಿಯಂ॥"[೧೦]

ಎಂಬ ಪಂಪನ ಉಕ್ತಿಯನ್ನು ಪ್ರಸ್ತಾಪಿಸುತ್ತಾರೆ. "ಸ್ವಲ್ಪವೂ ಕ್ಷಯವೆಂಬುದಿಲ್ಲ, ಕೇಳಿಕಡೆಯನ್ನು ಕಂಡವನು ಯಾರೂ ಇಲ್ಲವೆಂಬಂತೆ ಅಂಥ ಅಕ್ಷಯನಿಧಿ ತಾನೆ ತನ್ನನ್ನು ಪ್ರೀತಿಯಿಂದ ಸೇವಿಸುವವನಿಗೆ ಅಸಾಧ್ಯವಾದದ್ದು ಇಲ್ಲ ಎಂಬ ಎಲ್ಲ ವಾಙ್ಮಯಕ್ಕೂ ತಾಯಿಯಾದ ಸರಸ್ವತಿ ನನ್ನ ಮುಖಪದ್ಮರಂಗದ ಏಳಿಗೆಯನ್ನು ಹೊಂದಿ ಮೆಚ್ಚಿ ಅವರಿಗೆ ವಿಶುದ್ಧ ಬುದ್ಧಿಯನ್ನು ಕೊಡಲಿ"[೧೧] ಎಂದು ಇದನ್ನು ಅನುವಾದಗೊಳಿಸುತ್ತಾರೆ. ಪಂಪನಿಗೆ ಸರಸ್ವತಿಯು ಅಂಬಿಕೆಯೆನಿಸುತ್ತಾಳೆ. ಮುಗಳಿ ಅವರಿಗೆ ಇದು ಪಂಪನ ವಾಣಿಯ ಪ್ರಗತಿಯ ಪ್ರತಿನಿಧಿಯಾಗಿ ಕಂಡುಬರುತ್ತದೆ.

ಇದೇ ಸರಸ್ವತಿಯು ರನ್ನನಿಗೆ 'ವಾಕ್ಸುಂದರಿ'ಯಾಗಿ ರಸಾಲಂಕಾರ ಪ್ರಿಯಳಾಗಿ, ನಾಗವರ್ಮನಿಗೆ ವಾಕ್‌ಸತಿಯಾಗಿ, ಕೇಶಿರಾಜ ಹರಿಹರರಿಗೆ ವಾಗ್ದೇವಿಯಾಗಿ ಕಾಣಿಸುವ ಬಗೆಯನ್ನು ಪ್ರಸ್ತಾಪಿಸುವ ಮುಗಳಿ ಅವರು ಒಟ್ಟಿನಲ್ಲಿ ಕವಿಗಳ ಮೂಲಶಕ್ತಿಯಾದ ವಾಕ್‌ಸಿದ್ಧಿಗೆ ಈ ದೇವತೆ ಉಪಾಸನೆಯೊಂದೇ ಮಾರ್ಗವೆನ್ನುವುದು ಮುಗಳಿ ಅವರ ನಿಲುವಾಗಿದೆ. ಈ ಸಂದರ್ಭದಲ್ಲಿ ಅವರು "ಸರಸ್ವತಿ ಕೊಡುವುದು ಬರೀ ಪ್ರತಿಭೆ ಅಥವಾ ಸ್ಫೂರ್ತಿಯಲ್ಲ, ಅವಳು ಕೊಡುವುದು ವಿಶ್ವದೃಷ್ಟಿ, ವಿಶ್ವ ತೇಜಸ್ಸುಗಳನ್ನು. ಅದಿಲ್ಲದೆ ಶ್ರೇಷ್ಠಕಾವ್ಯ ಹುಟ್ಟಲಾರದು."[೨] ಈ ರೀತಿ ಕನ್ನಡ ಸಾಹಿತ್ಯದಲ್ಲಿ ಪಂಪನಿಂದ ಆಧುನಿಕ ಕಾಲಘಟ್ಟದ ಕವಿಗಳವರೆಗೆ ಸರಸ್ವತಿಯನ್ನು ಧಾರ್ಮಿಕ ಹಿನ್ನೆಲೆಯಲ್ಲಿ ಮತ್ತು ಪ್ರಕೃತಿಯ ನೆಲೆಯಿಂದ ಸರಸ್ವತಿಯ ಇರುವಿಕೆಯನ್ನು ತಮ್ಮದೇ ಆದ ಶೈಲಿಯಲ್ಲಿ ಗುರುತಿಸುತ್ತಾರೆ.

ಸಮಯ ಶರಣವಲ್ಲದ ದೇಸಿ ಸಾಹಿತ್ಯದಲ್ಲಿ ಈ ಸರಸ್ವತಿ ತತ್ವವು ಹೆಚ್ಚು ನಿಖರವಾಗಿ ಸರಳವಾಗಿ ಸೂಚ್ಯವಾಗಿ ವ್ಯಕ್ತವಾಗುವುದನ್ನು ಮುಗಳಿ ಅವರು ಗುರುತಿಸಿದ್ದಾರೆ. ಅಲ್ಲಿ ಸರಸ್ವತಿಯ 'ಭಾರತಿ' ರೂಪವು ಹೆಚ್ಚು ಮುಖ್ಯವಾಗಿದೆ. ಸರಸ್ವತಿಯೇ ಮಾತಾಗಿ ಮಾತು ಜ್ಯೋತಿರ್ಲಿಂಗವಾಗಿ, ನುಡಿ ಮುತ್ತಿನಹಾರ, ಮಾಣಿಕ್ಯದ ದೀಪ್ತಿ, ಸ್ಫಟಿಕದ ಶಲಾಕೆಯಾಗಿ ಅಸ್ತಿತ್ವವನ್ನು ಪಡೆಯುತ್ತದೆ, ಆರಾಧಿಸಲ್ಪಡುತ್ತದೆ. ಅದೇ ರೀತಿ ಆಧುನಿಕ ಕನ್ನಡ ಕವಿಗಳು ಸರಸ್ವತಿಯ ತತ್ವವನ್ನು ಪ್ರಕೃತಿಯ ಹಿನ್ನೆಲೆಯಲ್ಲಿ ತಮ್ಮ ಕಾವ್ಯಗಳನ್ನು ರಚಿಸಿದ್ದಾರೆ. ಅಂಥ ಹೊಸ ಸಾಹಿತ್ಯ ರಚನೆಗೆ ಕಾರಣಕರ್ತರಾದ ಆಲೂರು ವೆಂಕಟರಾಯ, ಡಿ.ವಿ.ಜಿ., ಗೋವಿಂದ ಪೈ, ಮಾಸ್ತಿ ವೆಂಕಟೇಶ ಅಯ್ಯಂಗಾರ್, ದ.ರಾ.ಬೇಂದ್ರೆ, ಕೃಷ್ಣಶರ್ಮ, ಗೋಪಾಲಕೃಷ್ಣ ಅಡಿಗರು ಇನ್ನೂ ಮೊದಲಾದ ಮಹನೀಯರ ಸಾಹಿತ್ಯದಲ್ಲಿ ಸರಸ್ವತಿ ದರ್ಶನ ಕುರಿತು ಕಾವ್ಯ ರಚಿಸಿದ್ದಾರೆ.

ಅದೇ ರೀತಿ ಬೇಂದ್ರೆಯವರು ಕಂಡ ಸರಸ್ವತಿ ದರ್ಶನವು ಸಮಗ್ರ ಸುಂದರವಾಗಿಯೂ, ಸ್ವಾಭಾವಿಕವಾಗಿಯೂ ಸರಸ್ವತಿ ದರ್ಶನದಲ್ಲಿ ವ್ಯಕ್ತಿತ್ವವು ಮೂಡಿದೆ. ಆ ವ್ಯಕ್ತಿತ್ವವು ಮೂರ್ತ ರೂಪದಷ್ಟೇ ಭಾವಶರೀರವಾಗಿಯೂ ಪ್ರಭಾವವನ್ನು ಬೀರುತ್ತದೆ. ಇದು ಭೃಂಗದ ಬೆನ್ನೇರುವ ಕಲ್ಪನೆಯ ವಿಲಾಸವಾಗಿ ಮುಗಿಲಲ್ಲಿ ಮುತ್ತುಗಳ ಮೂಡಿಸುವ ಮಂತ್ರವಾಗಿ ಜಗದ ಒಲವಿನ ಸಾರವಾಗಿ ಗಾನಮಯ ಸಿಂಧುವಾಗಿ ಪ್ರತಿಮಾತ್ಮಕ ಅಭಿವ್ಯಕ್ತಿಗಳಲ್ಲಿ ಪರಿಣಮಿಸುತ್ತದೆನ್ನುವುದನ್ನೂ ಮುಗಳಿ ಅವರು ಗಮನಿಸುತ್ತಾರೆ. ಗೋಪಾಲಕೃಷ್ಣ ಅಡಿಗರಂಥ ಹೊಸ ಹಾದಿಯ ಹರಿಕಾರರು ಈ ರೂಪವನ್ನು ಕಾವ್ಯತತ್ವವಾಗಿ ಸ್ವೀಕರಿಸಿದರು. ಹೊಸತಿನ ಹುಡುಕಾಟದ ಅಂತಃಪ್ರೇರಣೆಯಾಗಿ ನೆಲೆಗೊಳಿಸಿದವರು ಎಂದೂ ಅವರು ನಿರೂಪಿಸುತ್ತಾರೆ. ಈ ರೀತಿಯಾಗಿ ಸಾಹಿತ್ಯದಲ್ಲಿ ಸರಸ್ವತಿಯನ್ನು ಕಂಡುಕೊಳ್ಳಲಾಗಿದೆ.

'ತವನಿಧಿ' ವಿಮರ್ಶಾ ಕೃತಿಯ ಮುನ್ನುಡಿಯಲ್ಲಿ ಮುಗಳಿ ಅವರು ಹೇಳಿಕೊಂಡಂತೆ "ಕನ್ನಡ ಸಾಹಿತ್ಯವು ನಮಗೆ ದೊರೆತ ಅಕ್ಷಯ ಸಂಪತ್ತು ಎಂಬ ಭಾವನೆ ಕನ್ನಡಿಗರಲ್ಲಿ ಹೆಚ್ಚು ಹೆಚ್ಚಾದರೇನೆ ಕನ್ನಡ ದರ್ಶನವು ಬೆಳೆಯುತ್ತದೆ. ಕನ್ನಡ ಸಂಸ್ಕೃತಿಯ ಪುನರುಜ್ಜೀವನವು

ಸಾರ್ಥಕವಾಗುತ್ತದೆ. ಈ ದೃಷ್ಟಿಯಿಂದ ಈ ಸಂಗ್ರಹಕ್ಕೆ 'ತವನಿಧಿ' ಎಂದರೆ ತವದ ಕ್ಷಯ ಹೊಂದದ ನಿಧಿ ಎಂದು ಹಿಂದಿನಿಂದಲೂ ಬಳಕೆಯಲ್ಲಿದ್ದ ಹೆಸರನ್ನು ಇಡಲಾಗಿದೆ"[೧೩] ಎಂದಿದ್ದಾರೆ.

'ಕನ್ನಡ ಸಾಹಿತ್ಯ' ಲೇಖನದಲ್ಲಿ ಸಾವಿರಾರು ವರ್ಷಗಳ ಇತಿಹಾಸವಿರುವ ಕನ್ನಡ ಸಾಹಿತ್ಯದ ಕುರಿತು ಹಾಗೂ ಸಂಪ್ರದಾಯಪ್ರಧಾನವಾದ ಸಾಹಿತ್ಯ, ಸ್ವಾತಂತ್ರ್ಯ, ಭಕ್ತಿಪ್ರಧಾನವಾದ ಸಾಹಿತ್ಯ, ಶೈಲಿಗಳಲ್ಲಿ ತನ್ನದೆ ಆದ ಅನನ್ಯತೆಯನ್ನೊಳಗೊಂಡಿರುವ ಕುರಿತು ವಿಮರ್ಶೆಗೊಳಪಡಿಸುತ್ತಾರೆ. ಕನ್ನಡ ಸಾಹಿತ್ಯದ ಉಗಮದ ಕುರಿತು ತಿಳಿಯುವ ಲೇಖಕರು ೧೦ನೆಯ ಶತಮಾನದಿಂದ ೧೯ನೆಯ ಶತಮಾನದವರೆಗೆ ಮೂರು ಪ್ರಕಾರಗಳಾಗಿ ವಿಂಗಡಿಸುತ್ತಾರೆ.

೧. ೧೦ನೇ ಶತಮಾನದಿಂದ ೧೨ನೇ ಶತಮಾನದ ಮಧ್ಯದವರೆಗೆ ಪ್ರೌಢ ಇಲ್ಲವೆ ಮಾರ್ಗಕಾವ್ಯದ ಯುಗ

೨. ೧೨ನೇ ಶತಮಾನದ ಮಧ್ಯದಿಂದ ೧೫ನೇ ಶತಮಾನದವರೆಗೆ ಸಂಕ್ರಮಣಯುಗ

೩. ೧೫ನೇ ಶತಮಾನದಿಂದ ೧೯ನೇ ಶತಮಾನದವರೆಗೆ ದೇಸಿ ಪ್ರಚುರ ಕಾವ್ಯಯುಗ ಎಂಬುದಾಗಿ ವಿಂಗಡಿಸುತ್ತಾರೆ. ಈ ರೀತಿಯಾಗಿ ಕಾಲವನ್ನು ವಿಂಗಡಿಸಿಕೊಂಡು ವಿಮರ್ಶೆಗೊಳಪಡಿಸುವ ಲೇಖನಗಳೇ ಅವರಿಗೆ ಸಾಹಿತ್ಯ ಚರಿತ್ರೆಯನ್ನು ಕಟ್ಟಲು ಸಹಕಾರಿಯಾದವು ಎಂಬುದರ ಬಗ್ಗೆ ತಮ್ಮ ಆತ್ಮಕಥೆ/ ಜೀವನರಸಿಕದಲ್ಲಿ ಹೇಳಿಕೊಂಡಿದ್ದಾರೆ.

'ಕನ್ನಡ ಸಾಹಿತ್ಯ ಭಾರತೀಯ ಸಂಸ್ಕೃತಿ' ಈ ಲೇಖನದಲ್ಲಿ ದ್ರಾವಿಡ ಸಂಸ್ಕೃತಿಯನ್ನು ಪರಾಮರ್ಶೆಗೆ ಒಳಪಡಿಸುವ ಮುಗಳಿ ಅವರು ಕನ್ನಡ ನಾಡಿನಲ್ಲಿದ್ದ ದ್ರಾವಿಡ ಜೀವನಕ್ಕೆ ಆರ್ಯರ ಧರ್ಮ, ತಾತ್ವಿಕತೆ, ವಾಙ್ಮಯ ಮುಂತಾದ್ದರ ಪ್ರಭಾವದಿಂದಾಗಿ ಭಾರತೀಯ ಸಂಸ್ಕೃತಿಯು ವಿಶಿಷ್ಟವಾದ ಕನ್ನಡ ಸಂಸ್ಕೃತಿಗೆ ಜನ್ಮ ಕೊಟ್ಟಿತು. ಕನ್ನಡ ಸಾಹಿತ್ಯಕ್ಕೆ ಹೇರಳವಾದ ನಿದರ್ಶನಗಳಿವೆ. ಮುಗಳಿ ಅವರು ಕ್ರಿ.ಶ.೫ನೇ ಶತಮಾನದಿಂದಲಾದರೂ ಕನ್ನಡ ಸಾಹಿತ್ಯ ಬೆಳವಣಿಗೆಯ ಆಗಿರಬೇಕೆಂದು ಊಹಿಸಿದ್ದಾರೆ. ಅಷ್ಟರಲ್ಲಿ ವೈದಿಕ, ಬೌದ್ಧ ಹಾಗೂ ಜೈನಮತಗಳು ತಮ್ಮ ವಾಙ್ಮಯಕ್ಕೆ ತಕ್ಕಂತೆ ಕನ್ನಡ ನಾಡನ್ನು ಪ್ರವೇಶಿಸಿ ಜನಜೀವನದ ಮೇಲೆ ಪ್ರಭಾವ ಬೀರುತ್ತಿದ್ದವು. ಜೈನಧರ್ಮವೇ ಹೆಚ್ಚಾಗಿ ಕನ್ನಡದಲ್ಲಿ ಕಥೆಯುಳ್ಳ ಬರವಣಿಗೆ ಮೊದಲುಗೊಂಡಿರಬೇಕೆಂದು ಊಹಿಸುವಂತಿದೆ. ಕ್ರಿ.ಶ.೬೦೦ರಲ್ಲಿ ದುರ್ವಿನೀತ ರಾಜನು ಸಂಸ್ಕೃತ ಕಾವ್ಯಶಾಸ್ತ್ರಗಳನ್ನು ತಿಳಿದುಕೊಂಡು ಗದ್ಯಗ್ರಂಥಗಳನ್ನು ಬರೆದಿರುವ ಬಗ್ಗೆ ಚರ್ಚಿಸುತ್ತಾರೆ. ಭಾರವಿಯ 'ಕಿರಾತಾರ್ಜುನೀಯ'ದ ೧೫ನೇ ಸರ್ಗಕ್ಕೆ ಟೀಕೆ ಬರೆದು ಭಾರತೀಯ ಸಂಸ್ಕೃತಿಯನ್ನು ಮೊದಲು ಪರಿಚಯಿಸುತ್ತಾ ಸಂಸ್ಕೃತ ಕವಿಗಳಾದ ಭಾಸ, ಕಾಳಿದಾಸ, ಬಾಣರು ಹಾಗೂ ಕಾವ್ಯಶಾಸ್ತ್ರದಲ್ಲಿ ನಿಪುಣರಾದ ಭರತ, ದಂಡಿ, ಭಾಮಹರ ಪ್ರಭಾವದಿಂದಾಗಿ ಕನ್ನಡ ಸಾಹಿತ್ಯಕ್ಕೆ ಪ್ರಾಮುಖ್ಯತೆ ದೊರೆಯುತ್ತದೆ.

'ಅನುಭವ ಮತ್ತು ಸಾಹಿತ್ಯ' ಲೇಖನದಲ್ಲಿ "ವ್ಯಕ್ತಿಯ ಸ್ವಭಾವಗತ ಶಕ್ತಿ ಅಶಕ್ತಿ, ಪರಿಸರ ಹಾಗೂ ಸಂಸ್ಕರಣ ಇದೆಲ್ಲದರ ಒಟ್ಟು ಪರಿಣಾಮವಾಗಿ ರೂಪುಗೊಳ್ಳುವ ವ್ಯಕ್ತಿತ್ವ ಅನುಭವದ

ಇದರಲ್ಲಿಯೇ ಬೆರೆತಿರುತ್ತದೆ. ಅಂತೆ ವಿಶೇಷವಾದ ಅರ್ಥದಲ್ಲಿ ಅನುಭವವೆಂದರೆ ನುಡಿಲೇಸು, ಅನುಭವಿಗೆ ಬೇರೆ ಮತವಿಲ್ಲ ಎಂಬ ಸರ್ವಜ್ಞನ ಕಿರುನುಡಿಯಲ್ಲಿ ಇದೆ ಅಭಿಪ್ರಾಯವು ಅವಿತುಕೊಂಡಿದೆ"[೧೪] ಎಂಬುದರ ಬಗ್ಗೆ ಪ್ರಸ್ತಾಪಿಸಿ ವಿಮರ್ಶೆಗೊಳಪಡಿಸುತ್ತಾರೆ.

ಹಳಗನ್ನಡ ಸಾಹಿತ್ಯ ಕುರಿತು ಅನುಭವದ ಎಲ್ಲಾ ಮುಖಗಳು ಬಂದಿವೆಯಾದರೂ ಒಟ್ಟು ನೋಟದಲ್ಲಿ ಸ್ವಾನುಭವಕ್ಕಿಂತ ಲೋಕಾನುಭವವೇ ಹೆಚ್ಚು ಪ್ರಾಮುಖ್ಯತೆ ಪಡೆದಿದೆ. "ಆರಂಕುಸಮಿಟ್ಟೊಡಂ ನೆನೆವುದೆನ್ನ ಮನಂ ಬನವಾಸಿ ದೇಶಮಂ"[೧೫] ಎಂದು ಅರ್ಜುನನ ಬಾಯಿಂದ ಬರುವಂತೆ ಪಂಪನ ನಾಟಕೀಯ ಕ್ರಮವು ಬಿತ್ತರಗೊಂಡಿದೆ. "ಕುಲಂ ಕುಲಮಲ್ತು ಅಭಿಮಾನವೊಂದೆ ಕುಲಂ, ಮನುಷ್ಯಜಾತಿ ತಾನೊಂದೆ ವಲಂ"[೧೬] ಇಂಥ ಮಾತುಗಳಿಂದ ಪಂಪನ ಲೋಕಾನುಭವದ ಬಗ್ಗೆ ಅಲ್ಲಮಪ್ರಭು, ಬಸವಣ್ಣ, ಅಕ್ಕಮಹಾದೇವಿ ಅವರು ತಮ್ಮ ತಮ್ಮ ವಚನಗಳ ಮೂಲಕ ಅಭಿವ್ಯಕ್ತಿಸಿರುವಂತೆ ಹರಿದಾಸರು ತಮ್ಮ ಅನುಭವದ ಹಿನ್ನೆಲೆಯಲ್ಲಿ ಹಾಡಿರುವರು. 'ಸಕಲ ಗ್ರಹಬಲ ನೀನೆ' ಎಂದ ಪುರಂದರದಾಸರು, 'ನನ್ನಿಂದ ನಾನೆ ಜನಿಸಿ ಬಂದೆನೆ' ಎಂಬ ಜಾತಿವ್ಯವಸ್ಥೆಯ ವಿರುದ್ಧವಾಗಿ ಬಂಡಾಯ ರೀತಿಯ ಕೀರ್ತನೆಗಳು ಅಭಿವ್ಯಕ್ತಿಸುವಂತೆ ವಿಜಯ ವಿಠ್ಠಲರು 'ಅರಿತವರಿಗತಿಸುಲಭಹರಿ ಪೂಜೆ' ಎಂದ ಜಗನ್ನಾಥದಾಸರು ತಮ್ಮ ತಮ್ಮ ಸಾವಿರಾರು ಕೀರ್ತನೆಗಳಲ್ಲಿ ಸ್ವಾನುಭವದ ಕುರಿತು ಚರ್ಚಿಸುವ ಮುಗಳಿ ಅವರು ಆಧುನಿಕ ಸಾಹಿತ್ಯದ ಕಾವ್ಯ, ಕತೆ, ಕಾದಂಬರಿ ನಾಟಕ ಹರಟೆ, ಆತ್ಮಚರಿತ್ರೆಗಳಲ್ಲೂ ಅನುಭವ ಸಾಹಿತ್ಯವನ್ನು ಗುರುತಿಸುತ್ತಾರೆ.

'ಪಂಪನ ದೇಸಿ'ಯ ದೀರ್ಘವಾದ ಈ ಲೇಖನದಲ್ಲಿ ಅಧ್ಯಯನ ಮೌಲ್ಯವಿರುವ ಪಂಪನ ಪ್ರಯೋಗಗಳ ಬಗೆಗೆ ವಿಶಿಷ್ಟ ಒಳನೋಟವನ್ನು ಹೊಂದಿದೆ. ಪಂಪನ ದೇಸಿಯ ಸಂಪತ್ತನ್ನು ಅದು ಮಾರ್ಗವಾಗಿ ಮೆರೆದ ವೈಭವವನ್ನು ಪಂಪನು ತೋರಿಸಿರುವಂತದ್ದನ್ನು ಮುಗಳಿ ಅವರು ವಿಮರ್ಶೆಗೊಳಪಡಿಸುತ್ತಾರೆ. 'ಕತೆ ಪಿರಿದಾದೊಡಂ ಕತೆಯ ಮೆಯ್ಗಿಡಲೀಯದೆ' ಸಮಸ್ತ ಭಾರತವನ್ನು ಅಪೂರ್ವವಾಗಿ ಹೇಳುವಲ್ಲಿ ಸಾಮಾನ್ಯವಾಗಿ ಯಾವುದು ಎಷ್ಟು ಹಿಗ್ಗಿಸಬೇಕು ಎಲ್ಲಿ ಕುಗ್ಗಿಸಬೇಕು ಎಂಬುದರ ಬಗ್ಗೆ ಚರ್ಚಿಸುವ ಮುಗಳಿ ಅವರು ಭೀಷ್ಮನಿಗೆ ಪಟ್ಟ ಕಟ್ಟಿದ ಸಂದರ್ಭದಲ್ಲಿ ದೇಸಿಯತೆಯಿಂದ ಕೂಡಿದ ಸಂಭಾಷಣೆಯನ್ನು ಈ ರೀತಿ ತಿಳಿಸಿದ್ದಾರೆ. ಭೀಷ್ಮನಿಗೆ ಪಟ್ಟ ಕಟ್ಟಿರುವುದನ್ನು ಕರ್ಣನು ವಿರೋಧಿಸಿ "ಭಗವತಿಯೇಟುಪೆಟ್ವಿ ತೆರದಿಂ ಕಥೆಯಾಯ್ತು ಇವರ ಏಱು ಗುರುಗಳಂ ಕುಲವೃದ್ಧರನಾಜಿಗೊಯ್ದು ಕೆಮ್ಮಗೆ ಪಗೆವಾಡಿಯೊಳ್ ನಗಿಸಿಕೊಂಡೊಡೆ ಬಂದಪುದೇಂ ಸುಯೋಧನಾ ಎಂದು ಕಟ್ಟಿದ ಪಟ್ಟಮೆ ಸರವಿಗೆ ನೆಟ್ಟನೆ ದೊರೆ, ಪಿಡಿದ ಬಿಲ್ಲೆ ದಂಟಿಗೆ ಎಣೆ ಕಣ್ಗಿಟ್ಟ್ ಮದುಪಂಗೆ ಎಂದು ಭೀಷ್ಮನನ್ನು ಹೀಯಾಳಿಸಿ 'ಎನಗೆ ಪಟ್ಟಂಗಟ್ಟಾ' ಅವನ ಮಾತಿಗೆ ದ್ರೋಣನು ಕೆರಳಿ 'ನಾಲಗೆ ಕುಲಮಂ ತಬ್ಬುವವೊಲ್ ಉಜಿದೆ ನೀಂ ಕೆಡೆನುಡಿವೈ' ಎಂದಾಡಲು 'ಕುಲುಮೆ ಮುನ್ನಂ ಉಗ್ಗಡಿಪಿರ್, ಏಂಗಳ್ ನಿಮ್ಮ ಕುಲಂಗಳ್. ಕುಲಂ ಕುಲಮಲ್ತು, ಚಲಂ ಕುಲಂ, ಗುಣಂ ಕುಲಂ, ಅಭಿಮಾನವೊಂದೆ ಕುಲಂ ಅಣ್ಮ ಕುಲಂ' ಎಂದು ಮುಂತಾಗಿ ಮೊಳಗಿ

ಕರ್ಣನು ಬಿಲ್ಬಿಡಿಯದ ಹವಣಿಕೆ ಮಾಡುತ್ತಾನೆ. ಈ ಮಾತಿಗೆ ಭೀಷ್ಮರಾಡಿದ ಕೆಳಗಿನ ಮಾತಿನಲ್ಲಿ ಅತ್ಯುನ್ನತಿಯೂ ನಿಗ್ರಹಪೂರ್ವಕವಾದ ವಕ್ರೋಕ್ತಿಯು ದೇಸಿಯ ಮಾರ್ಗವಾಗಿ ಪ್ರಕಟಗೊಂಡಿದೆ. ಕಲಿತನದ ಉರ್ಕು, ಜವ್ವನದ ಸೊರ್ಕು ನಿಜೇಶನ ನಚ್ಚು ಮಿಕ್ಕ ತೋಳ್ಬಲದ ಪೊಡರ್ಪು ಕರ್ಣ ನಿನಗೆ ಉಳ್ಳನಿತು ಏಂ ಎನಗುಂಟೆ ಭಾರತಂ ಕಲಹಂ, ಇದಿರ್ಚುವಂ ಹರಿಗನಪ್ಪೊಡೆ ಮೊಕ್ಕಳ ಮೇಕೆನೀಂ ಪೆಳಂ ಸೂಟ್ಬಿಡೆಯಲಪ್ಪುದು ಕಾಣ ಮಹಾಜಿರಂಗದೊಳ್"[೧೭] ಎನ್ನುವ ಭೀಷ್ಮನ ಮಾತು ಈ ರೀತಿ ಒಳಗೊಂಡಿದೆ.

ಪಂಪಭಾರತವು ದೇಸಿ ಮಾರ್ಗಗಳ ಸಮನ್ವಯತೆ ಕುರಿತು ಕನ್ನಡ ಕಾವ್ಯಪ್ರಪಂಚದಲ್ಲಿ ಮೊದಲನೆಯದು ಮಾರ್ಗಕ್ಕೆ ಮಾದರಿಯಾಗಿದೆ. ದೇಸಿಯ ಮೇಲ್ಪಂಕ್ತಿಯಿಂದ ಕೂಡಿದೆ ಎಂಬುದರ ಬಗ್ಗೆ ಮುಗಳಿ ಅವರು ಪರಿಚಯಿಸಿದ್ದಾರೆ. ಹಾಗೆಯೇ 'ನಯಸೇನನ ಧರ್ಮಾಮೃತ' ಲೇಖನದಲ್ಲಿ ನಯಸೇನನ ನಿರೂಪಣೆ ಅವನ ಗುಣ ವಿಶೇಷಗಳ ಕುರಿತು ಚರ್ಚಿಸುವ ಮುಗಳಿ ಅವರು ಅವನ ಧರ್ಮಾಮೃತ ಗ್ರಂಥವು ಸೊಗಸಾದ ಜಾನಪದ ಕತೆಗಾರನ ಕಥನಕಲೆಯನ್ನೊಳಗೊಂಡಿದೆ. ಕತೆಯನ್ನು ಬಿಡಿಸಿಕೊಳ್ಳುವ ಹಾಸ್ಯದಿಂದ ಕೂಡಿರುವ ವಸುಭೂತಿಯಂತ ಕಥೆಯಲ್ಲಿ ಕಂಡುಬರುತ್ತದೆಂದು ಹಾಗೂ ಧರ್ಮಾಮೃತವು ಮತತತ್ವನೀತಿಗೆ ಬದ್ಧವಾಗಿದ್ದರಿಂದ ಈ ಕೃತಿಯ ಮಿತಿಯು ಕೂಡಾ ಒಂದಾಗಿದೆಯೆಂಬುದರ ಬಗ್ಗೆ ವಿಮರ್ಶೆಗೊಳಪಡಿಸಿದ್ದಾರೆ. "ಮಹಾಕವಿಗಳು ಕೂಡಾ ಯಾವುದನ್ನು ಹೆಚ್ಚಾಗಿ ನೀಡಲಾರರೋ ಅಂಥ ಜೀವನದ ದರ್ಶನವನ್ನು ನಯಸೇನನು ನಮಗೆ ಮಾಡಿದ್ದಾನೆ."[೧೮] ಎಂದಿದ್ದಾರೆ.

'ರಾಘವಾಂಕನ ನಾಟ್ಯಪ್ರತಿಭೆ' ಲೇಖನದಲ್ಲಿ ಮುಗಳಿ ಅವರು ಹರಿಶ್ಚಂದ್ರ ಕಾವ್ಯದಲ್ಲಿ ನಾಟ್ಯಪ್ರತಿಭೆಯನ್ನು ಗುರುತಿಸಿ ಅದರ ಲಕ್ಷಣ ಮಾದರಿಯನ್ನು ವಿಮರ್ಶೆಗೊಳಪಡಿಸುತ್ತಾರೆ. ಅದೇ ರೀತಿ ನಾಟ್ಯಪ್ರತಿಭೆಯ ಸಾಮಾನ್ಯ ಲಕ್ಷಣವೆಂದರೆ ಅದ್ಭುತವಾದ ದೃಶ್ಯನಿರ್ಮಾಣ ಶಕ್ತಿ, ಅದು ಮಿತಿಯಿಲ್ಲದೆ ವ್ಯಕ್ತಿಗಳ ಕತೆಯನ್ನು ಹೇಳುವುದರಿಂದ ಪ್ರತಿಯಾಗಿ ದೃಶ್ಯಗಳ ಮಿತವಾದ ಹಿಡಿತದಲ್ಲಿ ವ್ಯಕ್ತಿಗಳನ್ನು ತಂದು ಅದರ ನಡೆನುಡಿಯಿಂದಲೇ ಅವರ ಕತೆ ಹೇಳಿರುವಂತದ್ದಾಗಿದೆ. ಕನ್ನಡ ವಾಙ್ಮಯದ ಉಜ್ವಲ ಪರಂಪರೆಯಲ್ಲಿ ಕಥನಕಾವ್ಯಗಳೇ ಹೆಚ್ಚಾಗಿದ್ದು ನಾಟ್ಯಕೃತಿಗಳ ಕೊರತೆ ಇರುವುದು ನಿಜವಾದರೂ ಆ ಕಾವ್ಯಗಳಲ್ಲಿ ನಾಟಕ ದೃಶ್ಯಗಳು ಮಾತ್ರ ಹೇರಳವಾಗಿವೆ. ಪಂಪ, ರನ್ನ, ಹರಿಹರ, ಚಾಮರಸ, ಕುಮಾರವ್ಯಾಸ ಮೊದಲಾಗಿ ಹಲವು ಹಿರಿಯ ಕವಿಗಳು ತಮ್ಮ ಕೃತಿಗಳಲ್ಲಿ ನಾಟ್ಯಪ್ರತಿಭೆಯನ್ನು ತೋರಿದ್ದಾರೆ. ಅವುಗಳಲ್ಲಿ ಕಥನಕಲೆಯ ಅಂಶಗಳು ಇದ್ದಂತೆ ನಾಟಕ ಕಲೆಯ ಸನ್ನಿವೇಶ–ಸಂವಾದಗಳೂ ಇರುತ್ತವೆ. ರಾಘವಾಂಕನು ಇಂಥ ದಾರಿಯನ್ನು ತುಳಿದವರಲ್ಲಿ ಪ್ರಮುಖನೆನಿಸುತ್ತಾನೆ.

'ಕಬ್ಬಿಗರ ಕಾವ್ಯ' ಲೇಖನದಲ್ಲಿ ಮುಗಳಿ ಅವರು ಆಂಡಯ್ಯನ ಕುರಿತು ಆಂಡಯ್ಯನೆಂಬುದು ಹೆಸರೆ? ಆಂಡಯ್ಯನು ಯಾರ ರಾಜಾಶ್ರಯದಲ್ಲಿದ್ದವನೆಂಬ ಪ್ರಶ್ನೆಗಳ ಮುಖೇನ ತಮ್ಮನ್ನು

ಸಂಶೋಧನೆಗೆ ಒಳಪಡಿಸಿಕೊಳ್ಳುವ, ವಿವಿಧ ವಿದ್ವಾಂಸರ ಹೇಳಿಕೆಗಳನ್ನು ಚರ್ಚಿಸುವ ಅವರ ಗುಣಮಟ್ಟದ ವಿಮರ್ಶಾಕ್ರಮವನ್ನು ಇಂತಹ ಸಂದರ್ಭಗಳಲ್ಲಿ ನೋಡಬಹುದು. ಆಂಡಯ್ಯನ ಕಾವ್ಯದಲ್ಲಿ ಇಂಥ ರಾಜ ಆಳುತ್ತಿದ್ದ ಭಾಗವೆಂದು ಹೇಳಲು ಹೇಗೆ ಸಾಧ್ಯ? ಊಹೆಯ ಮೇಲೆ ಬುದ್ಧಿ ಓಡಿಸುತ್ತಾ ಹೋದರೆ ಎಲ್ಲಿ ನಿಲುಗಡೆ ಉಂಟು? ಇವನಿಗೆ ರಾಜಾಶ್ರಯವಿರಲಿಲ್ಲವೆಂದೇ ಹೇಳಬೇಕು. ರಾಜಾಶ್ರಯ ಮಾಡಿಯೇ ಐಶ್ವರ್ಯವು ಬಂದಿದ್ದಲ್ಲಿ ಆರುಹಂತನ ಕೃಪಾಲಬ್ಧವಾಗಿ ಸಂಪತ್ತು ತನಗೆ ಬಂದಿತೆಂದು ಹೇಳಿಕೊಳ್ಳುವವನಲ್ಲ ಎಂದು ರಾಮಾನುಜಯ್ಯಂಗಾರರ ಹೇಳಿಕೆಯಾದರೆ, ಮುಳಿಯ ತಿಮ್ಮಪ್ಪಯ್ಯನವರು ತಿಳಿಸುವಂತೆ ಆಂಡಯ್ಯನಿಗೆ ರಾಜಾಶ್ರಯವಿದ್ದಿತೆಂದು ತಿಳಿಸುವ ಊಹೆಯು ಈ ರೀತಿ ಇದೆ. ಆಂಡಯ್ಯನು 'ಕನ್ನಡಮೆನಿಪ್ಪಾನಾಡು' ಎಂಬುದರಿಂದ ಬಿತ್ತರದಿಂದ ಮಾಡಿದರು. ಅವರ ಮೇರೆಗೆ 'ಕಬ್ಬಿಗರ ಕಾವ'ದ ನಾಯಕನಾದ ಕಾಮದೊಡನೆ ಅಭಿನ್ನವಾಗಿ ವರ್ಣಿಸಲ್ಪಟ್ಟ ಕಾಮನೆಂಬರಸನ ಆಶ್ರಯದಲ್ಲಿದ್ದು ಕವಿ ಈ ಕಾವ್ಯವನ್ನು ಬರೆದಿರಬೇಕು. ಇದಕ್ಕೆ ಕಬ್ಬಿಗರ ಕಾವ, ಕಾಮನ ಹಬ್ಬ ಕಾವನ ಗೆಲ್ಲ ಎಂಬ ಗ್ರಂಥದ ಹೆಸರುಗಳಲ್ಲಿರುವ ಶ್ಲೇಷಾರ್ಥದ ಯೋಜನೆ ಕನ್ನಡ ಕಬ್ಬಿಗರ ಸ್ವಭಾವಕ್ಕೆ ಅನುಗುಣವಾಗಿದೆ. ೧೨ನೇ ಶತಮಾನದ ಕೊನೆ ೧೩ನೇ ಶತಮಾನದ ಆರಂಭದಲ್ಲಿ ಕದಂಬ ಕಂಠೀರವನೆಂಬ ಬಿರುದಿನ ಕಾಮನೃಪ, ಕಾಮದೇವ ಆಳುತ್ತಿದ್ದನೆಂದು ಇತಿಹಾಸವು ಸಾರುತ್ತದೆ. ಅವನ ಹೆಂಗಳ(ಹಾನಗಲ್ಲು), ಪುಲಿಗೆರೆ(ಲಕ್ಷ್ಮೇಶ್ವರ), ಬನವಾಸಿ ಈ ಸೀಮೆಗಳನ್ನು ಪಶ್ಚಿಮ ಚಾಳುಕ್ಯ ನಾಲ್ಕನೆಯ ಸೋಮೇಶ್ವರನ ಕೈಕೆಳಗೆ ಮಹಾಮಂಡಳೇಶ್ವರನಾಗಿ ಆಳುತ್ತಿದ್ದ ಕದಂಬ ಶಾಖೆಯ ಅರಸು. ಅವನೇ ಆಂಡಯ್ಯ ಬಣ್ಣಿಸಿದ ಕಾಮದೇವ. ಇಲ್ಲವೇ 'ರಾಯ'ನೆಂದು ಊಹಿಸಿದರೆ ಆಂಡಯ್ಯನ ಕಾಲಾವಧಿಗೆ ಯಾವ ಬಾಧೆಯೂ ತಟ್ಟದು. ಅಲ್ಲದೆ ಸುಮಾರು ೧೧೮೦ರಲ್ಲಿದ್ದ ರುದ್ರಭಟ್ಟನು 'ಅರಿಕಾಮಧ್ವಂಸಿ' ಇತ್ಯಾದಿಯಾಗಿದ್ದ ತನ್ನ ಪೀಠಿಕಾಪದ್ಯದಲ್ಲಿ ಧ್ವನಿತಮಾಡಿದ ಕದಂಬಕಾಮನಿಗೂ ಉಮಾಕಾಮಿನೀ ಜೀವಿತೇಶನಾದ ಬಲ್ಲಾಳ ರಾಜನಿಗೂ ಆದ ಯುದ್ಧವನ್ನು ಅದರ ಪರಿಣಾಮವನ್ನು ಮನಸ್ಸಿನಲ್ಲಿಟ್ಟುಕೊಂಡು ಆಂಡಯ್ಯನು ಈ ಕಾವ್ಯವನ್ನು ಬರೆದಂತೆ ತೋರುತ್ತದೆ. ತಿಮ್ಮಪ್ಪಯ್ಯನವರ ಈ ಊಹೆ ನಿಜವಾಗಿ 'ಕಬ್ಬಿಗರ ಕಾವ'ದ ಮಗಮಗಿಸುವ ಕಂಪನ್ನು ಕಂಡುಹಿಡಿಯಲು ಒಂದು ಒಳ್ಳೆಯ ತೆಂಕಣಗಾಳಿಯಾಗಿ ಸುಳಿಯಿತು. ಎಂಬುದರ ಬಗ್ಗೆ ತಿಳಿಸುವ ಮುಗಳಿ ಅವರ ತಳಸ್ಪರ್ಶವಾದ ಚಿಂತನೆ ವಿಶ್ಲೇಷಿಸಿ ವಿಮರ್ಶಿಸುವ ಗುಣ ಮೆಚ್ಚುವಂತದ್ದಾಗಿದೆ.

'ಸಾಹಿತ್ಯ ವಿಮರ್ಶೆಯ ಮಾರ್ಗದರ್ಶಕ ಸೂತ್ರಗಳು' ವಿಮರ್ಶಾ ಕೃತಿಯು ಧಾರವಾಡ ವಿಶ್ವವಿದ್ಯಾಲಯದಲ್ಲಿ ಮಂಡಿಸಿದ ವಿಶೇಷ ಉಪನ್ಯಾಸಗಳ ಸಂಕಲನವಾಗಿದೆ. ಕೃತಿವಿಮರ್ಶೆಯ ಕಾರ್ಯವು ಶಾಸ್ತ್ರೀಯವಾದ ರೀತಿಯಲ್ಲಿ ನಡೆಯಬೇಕಾದರೆ ಅನುಸರಿಸಬೇಕಾದ ಅಂಶಗಳು ಯಾವುವು ಎಂಬುದನ್ನು ಇಲ್ಲಿ ಲೇಖಕರು ವಿಸ್ತೃತವಾಗಿ ಚರ್ಚಿಸಿದ್ದಾರೆ. ಕನ್ನಡದ ಅಭಿಜಾತ ಕೃತಿಗಳಾದ ಕವಿರಾಜಮಾರ್ಗ, ಗದಾಯುದ್ಧ, ಯಶೋಧರ ಚರಿತೆ, ಮುಂತಾದವುಗಳ ಜೊತೆ

ಜೊತೆಗೆ ಐ.ಎ.ರಿಚರ್ಡ್ಸ್, ಟಿ.ಎಸ್.ಎಲಿಯಟ್ ಮುಂತಾದ ಪಾಶ್ಚಾತ್ಯ ವಿದ್ವಾಂಸರ ಕೃತಿಗಳಲ್ಲಿನ ವಿವರಗಳನ್ನು ವಿಮರ್ಶೆಗೊಳಪಡಿಸಿದ್ದಾರೆ.

'ಸಾಹಿತ್ಯ ವಿಮರ್ಶೆ ಎನ್ನುವುದು ಪರಸ್ಪರ ಬೆನ್ನು ಚಪ್ಪರಿಸುವ ಸ್ಪರ್ಧೆಯೋ, ಕಂಡವರ ಮೇಲೆ ಕೆಸರೆರಚುವ ಹುನ್ನಾರವೋ, ಅರ್ಥವಾಗದ ಉದ್ಬುದ್ಧ ವಾಖ್ಯೆಗಳ ವ್ಯರ್ಥಜಾಲವೋ ಅಥವಾ ಕುರುಡರು ಆನೆಯನ್ನು ಬಣ್ಣಿಸಿದ ರೀತಿಯಲ್ಲಿ ಸ್ವ ಸಿದ್ಧಾಂತಗಳ ಪ್ರತಿಪಾದನೆಯ ಆಡಂಬೋಲವೋ ಆಗಿರುವ ಈ ಕಾಲದಲ್ಲಿ ನಿಜವಾಗಿಯೂ ಸಾಹಿತ್ಯ ವಿಮರ್ಶಕನೊಬ್ಬ ಅನುಸರಿಸಬೇಕಾದ ಮಾರ್ಗದರ್ಶಕ ಸೂತ್ರಗಳ ಬಗೆಗಿನ ಚರ್ಚೆ ವಿಸ್ತೃತಗೊಂಡಿದೆ' ಎಂದಿದ್ದಾರೆ. ಸಾಹಿತ್ಯ ಸ್ವರೂಪ, ಸಾಹಿತ್ಯ ವಿಮರ್ಶೆಯ ಉದ್ದೇಶ ಮತ್ತು ಪ್ರಯೋಜನ ವಿಮರ್ಶಕನ ಮನೋಧರ್ಮ, ಕಾಲಮಾನದ ಅರಿವು ಅಥವಾ ಸಮಕಾಲೀನ ಪ್ರಜ್ಞೆ ಹಾಗೆಯೇ ಸಹೃದಯ ಭೂಮಿಕೆಯಿಂದ ರಸಗ್ರಹಣ, ಉನ್ಮೀಲನ, ಗುಣದೋಷ ಪರಿಕ್ಷಣ ಮತ್ತು ಮೌಲ್ಯನಿರ್ಣಯ ವಿಮರ್ಶೆಯ ನಾಲ್ಕು ಪ್ರಮುಖ ಅಂಗಗಳ ಬಗ್ಗೆ ಹಾಗೂ ಪ್ರಾಚೀನ ಅರ್ವಾಚೀನ ಭೂಮಿಕೆಗಳು ಅಬರ್ ಕ್ರಾಂಬಿಯ ಮಹೋನ್ನತ ಕಾವ್ಯದ ಕಲ್ಪನೆ–ಅರವಿಂದರ ವಿಚಾರಧಾರೆ–ತಮ್ಮ ಸಮಾರೋಪ ಕೃತಿಯ ಸ್ವರೂಪ–ಅಗ್ನಿಪುರಾಣದ ಪ್ರಕಾರ ಕಾವ್ಯದ ಲಕ್ಷಣ ಮತ್ತು ಅದರ ಅನನ್ಯತೆ ಒಳಗೊಂಡಿದೆ.

ಸಾಹಿತ್ಯ ವಿಮರ್ಶೆ ಕುರಿತು ಚರ್ಚಿಸುವ ಮುಗಳಿ ಅವರು 'ಇಂಗ್ಲಿಷ್‌ನಲ್ಲಿ Literat use' ಇದು ವ್ಯಾಪಕಾರ್ಥವನ್ನು ಪಡೆದಿದೆ. ಡಿಕ್ವಿನ್ಸಿಯ ಪ್ರಕಾರ ವ್ಯಾಪಕಾರ್ಥದಲ್ಲಿದ್ದ Litrature ದಲ್ಲಿ ಎರಡು ಮಾದರಿ ೧. Litrature Of Knowledge ಅಂದರೆ ಜ್ಞಾನದಾಯಕ ಸಾಹಿತ್ಯ ೨. Litrature Of Power ಅಂದರೆ ಶಕ್ತಿದಾಯಕ ಸಾಹಿತ್ಯ ಮೊದಲನೆಯದು ಕಾವ್ಯಬೋಧನೆ (To Teach), ಎರಡನೆಯದು ಕಾರ್ಯಪಾಲನೆ(To move). ಮೊದಲನೆಯದು ಚುಕ್ಕಾಣಿಯಿದ್ದಂತೆ, ಎರಡನೆಯದು ಹುಟ್ಟು ಇಲ್ಲವೆ ಹಾಯಿ ಇದ್ದಂತೆ. ಒಂದು ತರ್ಕಪ್ರಧಾನವಾದ ಬುದ್ಧಿಯನ್ನು ಕುರಿತು ಮಾತನಾಡುತ್ತದೆ. ಇನ್ನೊಂದು ಆನಂದ ಮತ್ತು ಸಹಾನುಭೂತಿಗಳ ಮುಖಾಂತರವೇ ಮೇಲ್ಮಟ್ಟದ ಬುದ್ಧಿಯನ್ನು ಮುಟ್ಟಲು ಹವಣಿಸುತ್ತದೆ. ಡಿಕ್ವಿನ್ಸಿಯ ಈ ವಿವರಣೆಯಿಂದ 'ಶಕ್ತಿ' ಅಂದರೆ ಹೃದಯಪೂರ್ವಕವಾದ ಕಾಲಗುಣವಾಗಿದೆ ಎಂಬ ಅಭಿಪ್ರಾಯಕ್ಕೆ ಬರುತ್ತಾರೆ.

"ಮುಗಳಿ ಅವರು ಸಾಹಿತ್ಯದ ಮೂರು ಗುಣಗಳ ಬಗ್ಗೆ ತಿಳಿಸುತ್ತಾ ಆಶಯ, ರೀತಿ, ಆನಂದದಾಯಕತ್ವ ವಿಚಾರಗಳನ್ನು ಒಳಗೊಳ್ಳುವ ಗುಣ ಇಲ್ಲವೇ ಜಗತ್ತಿನ ಬಗೆಗೆ ವ್ಯಕ್ತಿಸಾಪೇಕ್ಷವಾದ ನೋಟದ ಬೀರುವಿಕೆ ಅಂದರೆ ಆಶಯ, ಈ ವಿಚಾರವನ್ನು ವಿಶಿಷ್ಟವಾದ ಸಾಹಿತ್ಯರೂಪಕ್ಕೆ ಯೋಗ್ಯವಾದ ಪದ್ಧತಿಯಿಂದ ನಿರೂಪಿಸುವುದೆಂದರೆ ರೀತಿ. ಒಂದು ಸಾಹಿತ್ಯ ಕೃತಿ ಆನಂದ ಕೊಡುವುದಾದರೆ ಕಲಾಕೃತಿಗಳಲ್ಲಿ ಸಾಮಾನ್ಯವಾಗಿರುವ ಒಂದು ವಿಶಿಷ್ಟವು ಅದರಲ್ಲಿರಬೇಕು"[೧೯] ಎಂಬುದರ ಬಗ್ಗೆ ವಿಮರ್ಶಿಸಿದ್ದಾರೆ.

'ವಿಮರ್ಶೆಯ ಮಾರ್ಗದರ್ಶಕ ಸೂತ್ರಗಳು' ಕವಿರಾಜಮಾರ್ಗದಿಂದಿಡಿದು ಆಧುನಿಕ ಸಾಹಿತ್ಯದ ವರೆಗಿನ ವಿಮರ್ಶೆಗೆ ಆಗುಮಾಡಿಕೊಳ್ಳುವ ಮುಗಳಿ ಅವರು ನೀತಿಪರವಾದ ಧೋರಣೆಗಳನ್ನು ಚರ್ಚಿಸುವ, ಸ್ವತಂತ್ರ್ಯದ ಮೌಲ್ಯನಿರ್ಣಯ, ವಿಮರ್ಶಾಕ್ರಮವನ್ನು ತಿಳಿಯಲಾಗಿದೆ.

ಅದೇ ರೀತಿ ಮುಗಳಿ ಅವರು ತಿಳಿಸುವ ಮಾರ್ಗದರ್ಶಕ ಗುಣಗಳು ಈ ರೀತಿ ಇವೆ. "೧. ತಾನು ಆಯ್ದುಕೊಂಡ ಕಾವ್ಯನಿರೂಪಣಾ ಪದ್ಧತಿಯ ಮೇಲೆ ಕವಿಗೆ ಪೂರ್ಣಪ್ರಭುತ್ವವಿರಬೇಕು, ೨. ಈ ಪ್ರಭುತ್ವವು ಸಾಕಷ್ಟು ವಿವಿಧವಾಗಿಯೂ ವಿಫಲವಾಗಿಯೂ ಪ್ರಕಟವಾಗಿರಬೇಕು, ೩. ಇದು ಬರೀ ಮಿಂಚಿ ಹೋಗುವ ಕೈವಾಡವಲ್ಲ; ಕಲಾಲಕ್ಷ್ಮಿಯು ಕವಿಯ ಕೈವಶಳಾಗಿರುವಳೆಂಬುದಕ್ಕೆ ಸಾಕಷ್ಟು ಆಧಾರಗಳು ಬೇಕು, ೪. ವಿವಿಧ ರೀತಿಯಲ್ಲಿ ಈ ಪ್ರಭುತ್ವವನ್ನು ಬಳಸಿಕೊಳ್ಳುವ ಸಾಮರ್ಥ್ಯವು ಕವಿಗಿದೆ ಎಂಬುದು ನಮ್ಮ ನಿರ್ದೇಶನಕ್ಕೆ ಬರಬೇಕು, ೫. ಸಾಮಾನ್ಯವಾದುದನ್ನು ಅಸಾಮಾನ್ಯವಾಗಿ ಮಾಡುವ ಪ್ರತಿಭೆಯನ್ನು ಕವಿಯು ಈ ರೀತಿಯಾಗಿ ಯಾವಾಗಲೂ ಉಪಯೋಗಿಸಿದಾಗ, ಉಚಿತವಾದ ಶಬ್ದಸೃಷ್ಟಿಯಲ್ಲಿ ಅದನ್ನು ಯೋಜಿಸಿ ಸೌಂದರ್ಯಾನುಭವವನ್ನು ಕೊಡಲು ಸಮರ್ಥನಾದಾಗ ಅವನು ಮಹಾಕವಿಯಾಗುವನು; ಅವನ ಕೃತಿಗಳಲ್ಲಿ ಮಹೋನ್ನತಿಯು ನೆಲೆಯೂರುವುದು"[೨೦] ಎಂಬ ಅಭಿಪ್ರಾಯಕ್ಕೆ ಬರುವ ವಿಮರ್ಶಕರ ಮಾತನ್ನು ಒಪ್ಪಬಹುದಾಗಿದೆ.

ವಿ.ಕೃ.ಗೋಕಾಕರು ಮಾರ್ಗದರ್ಶಕ ಗುಣಗಳನ್ನು ಈ ರೀತಿ ತಿಳಿಸುತ್ತಾರೆ. ೧. ಭಾಷಾಸಂಪತ್ತು; ಶೈಲಿ, ೨. ತಾಳಲಯ ಛಂದಸ್ಸು, ೩. ಕಾವ್ಯವಸ್ತು, ೪. ರೀತಿ ಇಲ್ಲವೆ ಕೃತಿ ಶರೀರ, ೫.ಅರ್ಥಗೌರವ ಇಲ್ಲವೆ ವಿಚಾರ ಸಂಪತ್ತು, ೬. ಭಾವನಾಸಂಪತ್ತಿ, ೭. ಕಲ್ಪನಾಶಕ್ತಿ, ೮. ಕವಿಯ ವ್ಯಕ್ತಿತ್ವ ಇಲ್ಲವೆ ದೃಷ್ಟಿಕೋನ ಈ ಅಷ್ಟಾಂಗಗಳು ಕಾವ್ಯದ ಜೀವಾಳವಾಗಿದ್ದು ಯಾವೊಂದು ಕೃತಿ ಮಹಾಕಾವ್ಯವಾಗಬೇಕಾದರೆ ಈ ಎಲ್ಲಾ ಅಂಶಗಳಲ್ಲಿಯೂ ಮಹೋನ್ನತಿಯ ಸಂಚಾರವಾಗಬೇಕು ಎಂಬ ಗೋಕಾಕರ ನಿಲುವುಗಳನ್ನು ಪ್ರಸ್ತಾಪಿಸುತ್ತಾರೆ. ಪಾಶ್ಚಿಮಾತ್ಯದ ಕಾವ್ಯಶೈಲಿ ಮತ್ತು ಕಾವ್ಯಾನುಭವದ ವಿವರಣೆಯ ಸಂದರ್ಭದಲ್ಲಿ ಅಬರ್‌ಕ್ರಾಂಬಿ Fancy ಮತ್ತು imagination ಇವುಗಳಲ್ಲಿನ ಸೂಕ್ಷ್ಮಭೇದವನ್ನು ಹಿಂಜಿ ನೋಡಿದ್ದಾನೆ. Fancy ಇದಕ್ಕೆ ಕನ್ನಡದಲ್ಲಿ ಚಮತ್ಕೃತಿ ಅಥವಾ ಉತ್ಪ್ರೇಕ್ಷೆಯೆಂದೂ, imagination ಇದಕ್ಕೆ ಕಲ್ಪಕತೆ ಅಥವಾ ಪ್ರತಿಭೆಯೆಂದೂ ಅನ್ನಬಹುದು. ಈ ವಿಶ್ಲೇಷಣೆಯಲ್ಲಿ ಕೋಲ್‌ರಿಜ್ ಮತ್ತು ವರ್ಡ್ಸ್‌ವರ್ತ್ ಇವರ ಅಭಿಪ್ರಾಯಗಳ ಚರ್ಚೆ ಪ್ರಮುಖವಾಗಿದೆ. ಕೋಲ್‌ರಿಜ್‌ನ ಅಭಿಪ್ರಾಯದಲ್ಲಿ ಚಮತ್ಕೃತಿ ಮತ್ತು ಕಲ್ಪಕತೆ ಇವೆರಡು ಪ್ರತ್ಯೇಕವಾದ ಮತ್ತು ಬಹಳಷ್ಟು ಭಿನ್ನವಾದ ಮಾನಸಿಕ ಶಕ್ತಿಗಳು, ಮಿಲ್ಟನ್ನನಲ್ಲಿರುವುದು ಕಲ್ಪಕತೆ. ಕೌಲೆಯೆಂಬ ಕವಿಯಲ್ಲಿರುವುದು ಚಮತ್ಕೃತಿ ಎಂದು ಹೇಳಿದಾಗ ಅವುಗಳ ನಡುವಿನ ಭೇದವು ಒಂದೇ ಶಕ್ತಿಯ ಬೇರೆ ಬೇರೆ ಅಂಶಕ್ಕೆ ಸಂಬಂಧಪಟ್ಟುದಲ್ಲ, ಅವು ಬೇರೆ ಶಕ್ತಿಗಳು ಎಂದೇ ಭಾವಿಸಬೇಕು. ವರ್ಡ್ಸ್‌ವರ್ತ್‌ನ ಅಭಿಪ್ರಾಯದಲ್ಲಿ ಅವು ಕಾವ್ಯನಿರ್ಮಿತಿಗೆ ಅವಶ್ಯವಾದ ಶಕ್ತಿಗಳೆಂದೂ ಅವುಗಳಲ್ಲಿಯ ವ್ಯತ್ಯಾಸವು ಮುಖ್ಯವಾಗಿ ಅವುಗಳಿಂದಾಗುವ ಪರಿಣಾಮದಲ್ಲಿದೆಯೆಂದೂ ತಿಳಿಯಬಹುದು. ಚಮತ್ಕೃತಿ ಎಂದರೆ ಕಲ್ಪಕತೆಯ

ಹಗುರಾದ ಕ್ರಿಯೆ. ಗಂಭೀರತೆ ಕಡಿಮೆಯಾದ ಸಾದೃಶ್ಯವೆಂಬ ಲೇಹಂಟ್‌ನ ಮತಕ್ಕೆ ವರ್ಡ್ಸ್‌ವರ್ತ್‌ನ ಅಭಿಪ್ರಾಯವು ತೀರಾ ಹತ್ತಿರ ಬರುತ್ತದೆ. (Lighter Play of the imagination, analogy coming short of seriousness) ಎಂಬ ವಿದೇಶಿ ವಿದ್ವಾಂಸರ ಹೇಳಿಕೆಗಳನ್ನು ಪ್ರಸ್ತಾಪಿಸುವ ಮೂಲಕ ವಿಮರ್ಶೆಗೊಳಪಡಿಸಲಾಗಿದೆ.

'ವಿಮರ್ಶೆಯ ವ್ರತ' ಕೃತಿಯಲ್ಲಿ ಮೈಸೂರಿನಲ್ಲಿ ನಡೆದ ಸಾಹಿತ್ಯ ಸಮ್ಮೇಳನದ ವಿಮರ್ಶಾ ಗೋಷ್ಠಿಯ ಅಧ್ಯಕ್ಷೀಯ ಭಾಷಣವನ್ನೊಳಗೊಂಡಂತೆ ಇನ್ನೂ ಹಲವು ವಿಷಯದ ಲೇಖನಗಳನ್ನು ಈ ಕೃತಿ ಒಳಗೊಂಡಿದೆ. 'ಮೊದಲ ವಿಮರ್ಶೆಯ ವ್ರತ' ಲೇಖನದಲ್ಲಿ ವಿಮರ್ಶೆಯ ಕುರಿತು ಚರ್ಚಿಸಿರುವ ಅವರು ಸಾಹಿತ್ಯ ಬೇರೆ, ವಿಮರ್ಶೆ ಬೇರೆ; ಸಾಹಿತ್ಯದ ತರುವಾಯ ವಿಮರ್ಶೆ ಎಂಬುದು ಸಾಮಾನ್ಯ ತಿಳಿವಳಿಕೆ ಸಾಹಿತ್ಯಕ್ಕೂ ವಿಮರ್ಶೆಗೂ ಸಮಾನ ಪ್ರಜ್ಞೆಯೊಂದಿದೆ ಎಂಬುದನ್ನು, ಒಳ್ಳೆಯ ವಿಮರ್ಶೆಯ ತರುವಾಯ ಸಾಹಿತ್ಯ ಹುಟ್ಟುವುದೆಂಬುದನ್ನು ನಾವು ಹೆಚ್ಚಾಗಿ ತಿಳಿಯಬೇಕಾಗಿದೆ. ಸಾಹಿತ್ಯ ಮತ್ತು ವಿಮರ್ಶೆ ಇವೆರಡಕ್ಕೂ ಮೂಲವಾದದ್ದು ಜೀವನ ರಸಿಕತೆ, ಸೌಂದರ್ಯೋಪಾಸನೆ, ಇವೆರಡೂ ಸಾಕ್ಷೀಭಾವ, ಸ್ನೇಹಭಾವ, ಸೌಂದರ್ಯಭಾವ ಈ ಮೂರು ಮನೋಭಾವಗಳಿಂದ ಕೂಡಿದ ರಸಪ್ರಜ್ಞೆಯಲ್ಲಿ ಉಗಮ ಹೊಂದುತ್ತದೆ. ಸಾಕ್ಷೀಭಾವದಿಂದ ಮೋಹರಹಿತವಾಗಿ ರಾಗದ್ವೇಷಗಳನ್ನು ಮೀರಿ ಜೀವನವನ್ನು ನೋಡುವ ಸಮದೃಷ್ಟಿ, ಸಮ್ಯಕ್‌ದೃಷ್ಟಿಗಳು ದೊರೆಯುತ್ತವೆ. ಸ್ನೇಹಭಾವದಿಂದ ಪ್ರಪಂಚದಲ್ಲಿಯ ಎಲ್ಲ ವಸ್ತುಗಳ ಮತ್ತು ಪ್ರಾಣಿಗಳ ಬಗ್ಗೆ ನಿರ್ಮಲವಾದ, ಉತ್ಕಟವಾದ ಸ್ನೇಹವು ಉಕ್ಕಿಬರುತ್ತದೆ. ಸಾಕ್ಷೀಭಾವವು ಮಾಗಿದ ಹಾಗೆ ಸ್ನೇಹಭಾವ ಮೂಡುತ್ತದೆ. ಅವೆರಡೂ ಪರಿಣತವಾದಂತೆ ಸೌಂದರ್ಯಭಾವ ಬೆಳೆಯುತ್ತಾ ಹೋಗಿ ವಿಶ್ವವ್ಯಾಪಿಯಾಗುತ್ತದೆ. ಈ ಮೂರು ಭಾವಗಳ ಸಮನ್ವಯ ಸಾಕ್ಷಾತ್ಕಾರವೆಂದರೆ ಸಾಹಿತ್ಯ ಮತ್ತು ವಿಮರ್ಶೆ. ಸಾಹಿತ್ಯದಲ್ಲಿ ಅದು ಸೌಂದರ್ಯನಿರ್ಮಿತಿಯಾದರೆ ವಿಮರ್ಶೆಯಲ್ಲಿ ಅದು ಸೌಂದರ್ಯ ಸಮೀಕ್ಷೆಯಾಗುತ್ತದೆ.

ಕವಿಗಳು ವಿಮರ್ಶಕರಾಗಿರಲಿ, ವಿಮರ್ಶಕರು ಕವಿಗಳಾಗಿರಲಿ, ಆಯಾ ಸ್ಥಾನದ ಔಚಿತ್ಯವನ್ನು ಅರಿತಿರಬೇಕು. ಆಗ ಮಾತ್ರ 'ಕವಿಗಳೇ ಕವಿಗಳ ಬೆಲೆ ಕಟ್ಟಬಲ್ಲರು' ಎಂಬ ಅಭಿಪ್ರಾಯವೊಂದಿದೆ. 'To Judge of Poets is only the Faculty of Poets' ಎಂಬ ಹಳೆಯ ಮಾತನ್ನು ಹೊಸಕಾಲದ ವಿಮರ್ಶಕರು ಎತ್ತಿಹಿಡಿದಿದ್ದಾರೆ. ಅದಕ್ಕೆ ಕಾರಣ ಕೊಟ್ಟಿದ್ದಾರೆ. "ಸೊಗೆಯಿಸುವ ಕಬ್ಬಮಂ ಕಬ್ಬಿಗರಲ್ಲದೆ ಮೆಚ್ಚರ್ ಉಟಿದರೇನ್ ಅಜಿವರೇ?"[೨೧] ಎಂದು ಆಂಡಯ್ಯ ಹೇಳಿರುವ ಮಾತನ್ನು ಪ್ರಸ್ತಾಪಿಸುತ್ತಾ ಚರ್ಚಿಸುತ್ತಾರೆ. ಉತ್ತಮವಾದ ವಿಮರ್ಶಕರ ಜೀವನದಲ್ಲಿ ಮತ್ತು ಸಾಹಿತ್ಯ ವಿಮರ್ಶೆಯಲ್ಲಿ ಅವನು ಎಲ್ಲ ವಿಷಯ, ಎಲ್ಲ ತರದ ನಿರೂಪಣಾ ರೀತಿ, ಶೈಲಿ ವಿಚಾರ ಪ್ರಣಾಲಿಗಳನ್ನು ಬರಮಾಡಿಕೊಳ್ಳುತ್ತಾನೆ. ಸೌಂದರ್ಯದ ಭೂಮಿಕೆಯಿಂದ ಅವುಗಳನ್ನು ವಿಮರ್ಶಿಸುತ್ತಾನೆ. ಅವನಲ್ಲಿ ತೋರಿಕೆಯ ವಿರೋಧಗಳು ಕರಗಿ ಹೋಗುತ್ತವೆ. ಬುದ್ಧಿ-ಭಾವನೆ, ಸತ್ಯ-ಪ್ರೀತಿ, ಶಾಸ್ತ್ರ-ಅಂತಃಪ್ರೇರಣೆ ಇವುಗಳಲ್ಲಿಯ ಸಮತೂಕವು ಅವನ ಮನೋಧರ್ಮದಲ್ಲಿ ಮತ್ತು ವಿಮರ್ಶೆಯಲ್ಲಿ

ಪ್ರತ್ಯಕ್ಷವಾಗುತ್ತದೆ ಎಂಬುದನ್ನು ವಿಮರ್ಶೆಗೊಳಪಡಿಸುವ ಮುಗಳಿ ಅವರು ಸಾಹಿತ್ಯ ಕೃತಿ ಓದಿದ ನಂತರ ಅದರಲ್ಲಿಯ ವಿಷಯವಸ್ತು ಎಂತದ್ದು, ಅದು ತಾಳಿದ ಸಾಹಿತ್ಯ ರೂಪಕ್ಕೆ ಅನುಗುಣವಾಗಿ ನಿರ್ಮಿತಿ ಆಗಿದೆಯೇ? ಆ ರೂಪದಲ್ಲಿಯ ಯಾವ ವಿಶಿಷ್ಟ ಪ್ರಕಾರವು ಎಷ್ಟು ಯಶಸ್ವಿಯಾಗಿ ಮತ್ತು ವಿಷಯ ವಿನ್ಯಾಸಗಳ ಹೊಂದಿಕೆಯಲ್ಲಿ ಮೈದಾಳಿದೆ? ಸಾಹಿತ್ಯತನ ವ್ಯಕ್ತ ಅಥವಾ ಅವ್ಯಕ್ತವಾದ ಯಾವುದಾದರೂ ಉದ್ದೇಶ ಅಥವಾ ಜೀವನದರ್ಶನವು ಅದರಲ್ಲಿ ಕಲಾವಂತಿಕೆಗೆ ಬಾಧೆ ಬರದಂತೆ ಮೂಡಿದೆಯೇ? ಈ ಪ್ರಶ್ನೆಗಳಿಗೆ ಪಡೆಯುವ ಉತ್ತರದಲ್ಲಿ ವಿಮರ್ಶಕನ ಮನೋಧರ್ಮವೆಷ್ಟು ಪ್ರಾಮಾಣಿಕವಾಗಿ ಸಮಗ್ರವಾಗಿ ಪ್ರಕಟಗೊಳ್ಳುವುದೋ ಅಷ್ಟು ಅವನ ವಿಮರ್ಶೆ ಪ್ರಾಮಾಣಿಕತೆಯಿಂದ ಕೂಡಿರುವಂತದ್ದಾಗಿದೆ.

'ಕನ್ನಡದಲ್ಲಿ ವಿಮರ್ಶೆಯ ಬೆಳವಣಿಗೆ' ಎಂಬ ಲೇಖನದಲ್ಲಿ ಮಾಸ್ತಿ ಅವರ ವಿಮರ್ಶೆ ಕುರಿತಂತೆ ಕಾವ್ಯದ ಮೂಲವೇ ವಿಮರ್ಶೆಯ ಮೂಲ. ಸಹಜವಾದ ಭಾವವ್ಯಂಜನವೆಲ್ಲ ಸಹಜವಾದ ನಿಯಮವನ್ನು ಅನುಸರಿಸಿ ನಡೆಯುತ್ತದೆ. ಭಾವವ್ಯಂಜನವೇ ಕಾವ್ಯದ ಹೃದಯ. ಅದು ಸ್ವಭಾವವಾಗಿ ಅನುಸರಿಸುವ ನಿಯಮವೇ ವಿಮರ್ಶೆ. ಈ ರೀತಿಯಾಗಿ ಕಾವ್ಯಕ್ಕೂ ವಿಮರ್ಶೆಗೂ ಕವಿಯ ಆವೇಶವೇ ಮೂಲ ಎಂಬ ಮೌಲಿಕವಾದ ಮಾತು ಇಲ್ಲಿದೆ. ವಿಮರ್ಶಕನಲ್ಲಿರುವ ಊಹೆ, ಸಹಾನುಭೂತಿ, ಬುದ್ಧಿಗುಣ, ತಾಳ್ಮೆ, ಸೌಂದರ್ಯ ಈ ಮುಂತಾದ ಗುಣಗಳನ್ನು ಇಲ್ಲಿ ಬಿತ್ತರಿಸಲಾಗಿದೆ. ಅದೇ ರೀತಿ ಕನ್ನಡ ಸಾಹಿತ್ಯ ವಿಮರ್ಶೆಗೆ ಶಾಸ್ತ್ರೀಯ ತಳಹದಿಯನ್ನು ಹಾಕಿಕೊಟ್ಟ ಗ್ರಂಥಗಳಲ್ಲಿ ಡಿವಿಜಿ ಅವರ 'ಜೀವನ ಮತ್ತು ಸೌಂದರ್ಯ' ಇದಕ್ಕೆ ಮಹತ್ವದ ಸ್ಥಾನ ದೊರೆಯಬೇಕೆಂದಿರುವ ಮುಗಳಿ ಅವರು ಈ ನಿಟ್ಟಿನಲ್ಲಿ ಇನ್ನಷ್ಟು ಕೃತಿರಚನಕಾರರ ಕುರಿತು ಚರ್ಚಿಸುತ್ತಾ ವಿಮರ್ಶಿಸುತ್ತಾರೆ.

ಎಂ.ಆರ್.ಶ್ರೀನಿವಾಸಮೂರ್ತಿ ಅವರ ಭಕ್ತಿಭಂಡಾರಿ ಬಸವಣ್ಣನವರು ಹಾಗೂ ಮುಳಿಯ ತಿಮ್ಮಪ್ಪಯ್ಯನವರ ನಾಡೋಜ ಪಂಪ, ಎಸ್.ವಿ.ರಂಗಣ್ಣ ಅವರ ಕುಮಾರವ್ಯಾಸ, ತೀ.ನಂ.ಶ್ರೀಕಂಠಯ್ಯನವರ ಪಂಪ, ಡಿ.ಎಲ್.ನರಸಿಂಹಾಚಾರ್ಯರ ಹರಿಹರ, ಈ ಮುಂತಾದವುಗಳನ್ನು ಗಮನಿಸಬೇಕು. ರಂ.ಶ್ರೀ.ಮುಗಳಿ ಅವರ ಕನ್ನಡ ಕವಿರತ್ನ ಎಂಬುದು ಗದಾಯುದ್ಧದ ಆಕರಗಳನ್ನು ಪರೀಕ್ಷಿಸಿ ಅದರ ಗುಣಾತಿಶಯವನ್ನು ಎತ್ತಿತೋರಿಸುತ್ತದೆ. ಹೊಸ ಕವಿಗಳನ್ನು ಕುರಿತು 'ದತ್ತವಾಣಿ ಬೇಂದ್ರೆ ವಾಙ್ಮಯ ದರ್ಶನ' ಎಂಬ ತರದ ರಸಗ್ರಹಣ ಪರವಾದ ಪುಸ್ತಕಗಳು ಈ ಕಾಲದಲ್ಲಿ ಪ್ರಕಟವಾಗಿದೆ. ಜೀವಂತವಾದ ಮತ್ತು ಪ್ರಾಮಾಣಿಕ ವಿಮರ್ಶೆಯ ಗುರುತಾಗಿ ಆಗಾಗ ಮತಭೇದಗಳು ವ್ಯಕ್ತವಾಗಿವೆ. 'ರನ್ನಕವಿ ಪ್ರಶಸ್ತಿ'ಯಲ್ಲಿಯ ರನ್ನನ ಮನೋಧೋರಣೆಯ ಪ್ರತಿಕ್ರಿಯೆಯಾಗಿ ಬೇಂದ್ರೆ ಅವರ ಸಾಹಿತ್ಯ ಸಂಶೋಧನೆಯಲ್ಲಿ ಚರ್ಚೆ ಬಂದಿದೆ. 'ಮುದ್ದಣ' ಗ್ರಂಥದಲ್ಲಿ ರಾಮಾಶ್ವಮೇಧ ಅರಿಸ್ತುತಿಗೆ ಪ್ರತಿಕ್ರಿಯೆಯಾಗಿ ಎಸ್.ವಿ.ರಂಗಣ್ಣನವರು 'ಸಾಮಾನ್ಯ ಚಿತ್ರಕ್ಕೆ ಸುವರ್ಣದ ಚೌಕಟ್ಟು' ಎಂಬ ಲೇಖನದ ಬಗ್ಗೆ ಚರ್ಚಿಸುತ್ತಾರೆ. 'ಅಭಿನವ ಪಂಪ'ದಲ್ಲಿ ನಾಗಚಂದ್ರನ ರಾವಣನ ಬಗ್ಗೆ ಶ್ರೀಯವರು ಮಾಡಿದ ಪ್ರಶಂಸೆಗಳಿಗೆ ಪ್ರತಿಕ್ರಿಯೆಯಾಗಿ ಡಿ.ಎಲ್.ನರಸಿಂಹಾಚಾರ್ಯರು 'ಪಂಪ ರಾಮಾಯಣ

ಸಂಗ್ರಹ' ಪ್ರಸ್ತಾವನೆ ಮೂಲಕ್ಕೆ ಹೋಲಿಸಿ ರಾವಣ ಪಾತ್ರದ ಪೃಥಕ್ಕರಣವನ್ನು ಮಾಡಿದ್ದಾರೆ. ಹಳೆಯ ಕವಿಗಳ ಕಾವ್ಯಸಂಗ್ರಹಗಳ ಪೀಠಿಕೆ ಪ್ರಸ್ಥಾವನೆಗಳು ಬೆಲೆಯುಳ್ಳ ವಿಮರ್ಶೆಯನ್ನೊಳಗೊಂಡಿವೆ ಎಂಬುದರ ಕುರಿತು ವಿಮರ್ಶೆಗೊಳಪಡಿಸಿದ್ದಾರೆ.

'ಮಹಾಕೃತಿ' ವಿಮರ್ಶಾಕೃತಿಯು ಮುಂಬಯಿ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ವಿಭಾಗದಲ್ಲಿ ನಡೆದ ವಿಶೇಷ ಉಪನ್ಯಾಸಗಳ ಸಂಗ್ರಹವಾಗಿದೆ. ಸಾಹಿತ್ಯ ಪ್ರಪಂಚದಲ್ಲಿ ಯಾವುದಕ್ಕೆ ಮಹಾಕೃತಿ ಎನ್ನಬೇಕು? ಈ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳುವ ನಿಟ್ಟಿನಲ್ಲಿ ಈ ಲೇಖನಗಳು ಅನಾವರಣಗೊಂಡಂತಿವೆ. ಮಹಾಕಾವ್ಯ ಸನ್ನದ್ಧತೆ, ವ್ಯಕ್ತಿತ್ವ, ಬದ್ಧತೆ, ಪ್ರಾಚೀನ, ಭಾರತೀಯ ಮಾನದಂಡ ಹಾಗೂ ಸೌಂದರ್ಯ ಕಲೆದರ್ಶನ ಈ ಬಗೆಯ ಮೂಲತಳಸ್ಪರ್ಶಿಯಾದ ಆಲೋಚನೆಗಳ ಚರ್ಚೆಗಳನ್ನೊಳಗೊಂಡಿದೆ. ಮುಗಳಿ ಅವರ ಸ್ವಾಭಾವಿಕವಾಗಿ ಮಹಾಕೃತಿ ಶೋಧದಲ್ಲಿ ತನ್ನದೇ ಆದ ಭಾವವನ್ನೊಳಗೊಂಡು ಮೂಲಪ್ರಜ್ಞೆ ಜಾಗೃತವಾಗುತ್ತದೆ. ಯಾವೊಂದು ಸಾಹಿತ್ಯ ನಿರ್ಮಿತಿಯ ಬೆಲೆ ಕಟ್ಟುವಾಗ, ಗುಣನಿರ್ಣಯ ಮಾಡುವಾಗ ಗಮನಿಸಬೇಕಾದ ಮೌಲ್ಯಗಳು ಹಾಗೂ ಮಾನದಂಡಗಳು ಯಾವುವು? ಇವುಗಳಲ್ಲಿ ಪ್ರಧಾನವಾದುದರ ಕುರಿತು ಚರ್ಚೆಗೊಳಪಟ್ಟಿವೆ. ಮಹಾಕೃತಿಗಿಂತ ಮೊದಲ ಕೃತಿಯ ಸ್ವರೂಪವೇನು? ಕೃತಿಕಾರ ಅಥವಾ ವಿಶಾಲವಾದ ಅರ್ಥದಲ್ಲಿ ಕವಿಯ ಲಕ್ಷಣವೇನು? ಒಳ್ಳೆಯ ಕೃತಿ ಎಂದರೆ ಸತ್ಕೃತಿಯೆಂದು ಯಾವುದನ್ನು ಕರೆಯಬೇಕು? ಸತ್ಕೃತಿಯಿಂದ ಮಹಾಕೃತಿಯವರೆಗಿನ ಏರಿಕೆಯಲ್ಲಿ ನಡುವಿನ ಹಂತಗಳೇನಾದರೂ ಇರುವುದೇ, ಅವನ್ನು ಗುರುತಿಸುವುದು ಹೇಗೆ? ಮಹಾಕೃತಿ ಅಲ್ಲದೆ ಮಹತ್ತರ ಕೃತಿ ಎಂಬ ಏರಿಕೆಯ ಏಣಿ ಇರುವುದೇ ಇದನ್ನು ಕಂಡುಹಿಡಿಯುವ ಬಗೆಯೇನು? ಶ್ರೇಷ್ಠಕೃತಿ, ಮೇರುಕೃತಿ ಎಂಬ ಮೌಲ್ಯನಿರ್ಧಾರಕ ಪದಗಳನ್ನು ಯಾವ ಸಾಹಿತ್ಯ ನಿರ್ಮಿತಿಯನ್ನು ಕುರಿತು ಬಳಸಬಹುದು ಎಂಬ ಆನುಷಂಗಿಕ ವಿಷಯಗಳು ಪ್ರಸ್ತುತವಾಗುತ್ತವೆ. ಜೊತೆಗೆ ಯಾವುದೇ ಕೃತಿಯಲ್ಲಿ ವಿಶ್ವಪ್ರಜ್ಞೆ ಇರುವುದೆಂದರೇನು? ವಿಶ್ವಸಾಹಿತ್ಯಕ್ಕೆ ಅವರ ಕಾಣಿಕೆನ್ನು ಹೇಗೆ ನಿರ್ಧರಿಸಬೇಕು? ಎಂಬ ಪ್ರಶ್ನೆಗಳು ಈ ಅಧ್ಯಾಯದಲ್ಲಿವೆ.

ಮಹಾಕೃತಿ, ಮೇರುಕೃತಿಗಳೆಂಬ ಶ್ರೇಣೀಕರಣ ವಿಧಾನಗಳನ್ನು ಇಲ್ಲಿ ವಿವರವಾಗಿ ಚರ್ಚಿಸಲಾಗಿದೆ. ಈ ಮೂಲಕ ಮುಗಳಿ ಅವರು ಮಹಾಕಾವ್ಯಗಳ ಅಧ್ಯಯನಗಳಿಗೆ ಒಂದು ಶಾಸ್ತ್ರೀಯವಾದ ತಾತ್ವಿಕ ನೆಲೆಗಟ್ಟನ್ನು ಒದಗಿಸಿದ್ದಾರೆ. ಈ ಕೃತಿಯಲ್ಲಿ ಮುಗಳಿ ಅವರು ವಿಶ್ಲೇಷಿಸಿರುವ ಹಲವು ವಿಚಾರಗಳು ವಿಶೇಷವಾದ ಅಧ್ಯಯನವನ್ನು ನೀರೀಕ್ಷಿಸುತ್ತವೆ. ಅದೇ ರೀತಿ ಮಹಾಕೃತಿಯನ್ನು ಒಂದು ಮಾಧ್ಯಮವಾಗಿಟ್ಟುಕೊಂಡು ಮುಗಳಿ ಅವರು ಸಮಗ್ರ ಸಾಹಿತ್ಯದ ಬಗೆಗಿನ ತಮ್ಮ ಅನಿಸಿಕೆಗಳನ್ನೂ ಆಗುಮಾಡಿಕೊಂಡು ಸಾಹಿತ್ಯ ನಿರ್ಮಿತಿಯಲ್ಲಿ ಸಮಾಜದ ಪಾತ್ರ ಹಾಗೂ ಸ್ವಸ್ಥ ಸಮಾಜವನ್ನು ನಿರ್ಮಿಸುವ ಸಾಹಿತಿಯ ಹೊಣೆಗಾರಿಕೆಗಳ ಸ್ಪಷ್ಟ ಅರಿವಿನೊಂದಿಗೆ ಸಾಹಿತಿ ಹಾಗೂ ಸಾಹಿತ್ಯಕೃತಿಗಳು ಸಮಾಜದ ಸಾಂಸ್ಕೃತಿಕ ಘಟಕಗಳಾಗಿವೆಯೆನ್ನುವುದನ್ನು ಅವರೆಂದೂ ಮರೆಯುವುದಿಲ್ಲ ಎಂಬುದು ತಿಳಿದುಬರುತ್ತದೆ.

ಮುಗಳಿ ಅವರ ಸಾಹಿತ್ಯ ಮೌಲ್ಯಮಾಪನದ ಸಂದರ್ಭದಲ್ಲಿ ಮಹತ್ವದವುಗಳೆನಿಸುವ ಹಲವು ಪ್ರಶ್ನೆಗಳನ್ನು ಮುಂದಿಡುತ್ತಾರೆ. "ಲೇಖನ ವ್ಯಕ್ತಿತ್ವ ಮತ್ತು ಸಾಹಿತ್ಯ ಸೃಷ್ಟಿ ಇವುಗಳಲ್ಲಿ ಅನ್ಯೋನ್ಯತೆ ಎಷ್ಟು? ವ್ಯಕ್ತಿತ್ವದ ಇತಿಮಿತಿಯನ್ನು ಮೀರಿದ ಗುಣಾಂಶ, ಗುಣಾತಿಶಯವಿರಬಹುದೆ? ಅದರ ಮೌಲ್ಯಮಾಪನ ಹೇಗೆ? ವ್ಯಕ್ತಿಯ ಸ್ವಾನುಭವವೆಂಬುದು ಎಲ್ಲ ಕೃತಿರಚನೆಯಲ್ಲಿ ಸಾಧ್ಯವೆ? ಅವನ ಅನುಭವದಾಚೆಯಿರುವ ವಿಶೇಷವಾಗಿ ಅನುಭವ ಪ್ರಪಂಚಕ್ಕೆ ಸೇರಿದ ಅಭಿವ್ಯಕ್ತಿ ಕೃತಿಯಲ್ಲಿ ಮೂಡಿಬಂದರೆ ಅದನ್ನು ಅರಿತುಕೊಳ್ಳುವುದು, ಬೆಲೆ ಕಟ್ಟುವುದು ಹೇಗೆ? ಈ ನಿಟ್ಟಿನಿಂದ ಉತ್ತರಗಳನ್ನು ಕಂಡುಕೊಳ್ಳುವ ಪ್ರಯತ್ನಗಳನ್ನು ಮಾಡುತ್ತಾರೆ. ಈ ಎಲ್ಲಾ ಅಂಶಗಳು ಮಹಾಕೃತಿಯ ಉಪೋತ್ಪನ್ನಗಳಾಗಿವೆ."[೨೨] ಎಂದು ವಿಮರ್ಶಕರು ಅಭಿಪ್ರಾಯಪಟ್ಟಿದ್ದಾರೆ.

ಮುಗಳಿ ಅವರ ವಿಮರ್ಶೆಯಲ್ಲಿಯ ಮಾನದಂಡ ಬದ್ಧತೆಗಿರುವ ಸ್ಥಾನವನ್ನು ಗುರುತಿಸಲಾಗಿದೆ. ಅದೇ ರೀತಿ ಸಾಹಿತಿಯ ಜೀವನಪದ್ಧತಿಗೆ ವಿಧೇಯವಾದ ವಿಚಾರಪ್ರಣಾಳಿ ಬಾಹ್ಯವಾದ, ಸೈದ್ಧಾಂತಿಕವಾದ ರಾಜಕೀಯ ತಾತ್ವಿಕ ಧಾರ್ಮಿಕ ಸಾಮಾಜಿಕ ಬದ್ಧತೆಗಳನ್ನು ಸಾಕಷ್ಟು ಜಿಜ್ಞಾಸೆಗೊಳಪಡಿಸುತ್ತಾರೆ. ಇದಕ್ಕೆ ಪರ ವಿರುದ್ಧವಾದ ವಿಮರ್ಶಕರ ಅಭಿಪ್ರಾಯಗಳನ್ನು ಮರುವಿಮರ್ಶಿಸುತ್ತಾರೆ. ಅಂಥ ಸಂದರ್ಭ ಅರಿಯುವುದಾದರೆ, "ಭವ್ಯತೆ ಎಂಬ ಪರಿಕಲ್ಪನೆಯ ಬಗ್ಗೆ ಲಾಂಜಿನೆಸ್‌ನ ಕಾಲದಿಂದಲೂ ಜಿಜ್ಞಾಸೆ ನಡೆದಿದೆ. ನಾವು ಕಂಡ ವಸ್ತುವಿನ ಅಥವಾ ಕೇಳಿದ ವರ್ಣನೆಯಿಂದ ಮೂಡುವ ಚಿತ್ರದ ಮಹತ್ತಿನಿಂದ ಅಪ್ಪಳಿಸಲ್ಪಡುವುದರಿಂದಲೇ ನಾವು ಮೂಖರಾಗಿ ಚಕಿತರಾಗಿ ನಿಲ್ಲುವುದು ಈ ಅನುಭವವನ್ನು ಭವ್ಯತಾ ಅನುಭವವೆಂದು ಕರೆದಿರುವುದು ಸರಿಯಾಗಿದೆ. ಆದರೆ ಭವ್ಯವೆಂಬ ಪದಕ್ಕೆ ಮೂಲತಃ ವಿಶೇಷಾರ್ಥ ಇರುವಂತೆ ತೋರುವುದಿಲ್ಲ ಎಂಬುದು ಮಾತ್ರ ಸರಿಯೆಂದು ಕಾಣುವುದಿಲ್ಲ. ಅದರ ಹಲವು ಅರ್ಥಗಳಲ್ಲಿ ಈ ವಿಶೇಷಾರ್ಥದ ಸೂಚನೆಗಳಾಗಿದೆ. ಹಾಗೆ ಸಂಸ್ಕೃತ ಕನ್ನಡ ಕವಿಗಳು ಹಿಂದೆ ಬಳಸಿದ್ದಾರೆ. ಸಾಂಪ್ರದಾಯಿಕವಾದ ಅದ್ಭುತ ರಸವು ಈ ಪರಿಕಲ್ಪನೆಯನ್ನು ಯಥಾರ್ಥವಾಗಿ ಒಳಗೊಳ್ಳುವುದಿಲ್ಲವೆಂದು ಹೇಳಬಹುದಾದರೂ ಅದ್ಭುತವು ವಿಶಾಲಾರ್ಥದಲ್ಲಿ ಭವ್ಯತೆಯ ತಿರುಳನ್ನೇ ಸಾರುತ್ತದೆನ್ನಲು ಅಡ್ಡಿಯಿಲ್ಲ. ಎಂಬ ನಿರ್ಣಯಕ್ಕೆ ಬರುತ್ತದೆ. ಈ ನಿಟ್ಟಿನಲ್ಲಿ ಮುಗಳಿ ಅವರ ವಿಮರ್ಶಾ ಸಾಹಿತ್ಯ ಅನನ್ಯತೆಯಿಂದ ಕೂಡಿದ ಬದ್ಧತೆ ಪ್ರಮಾಣ, ನಿರ್ಣಯದ ನೆಲೆಗಳಿಂದ ಅವರ ಅಭಿಪ್ರಾಯಗಳನ್ನು ಪರಿಗಣಿಸಬಹುದಾಗಿದೆ. ಇವರ ವಿಮರ್ಶಾಮಾರ್ಗವು ಹೆಚ್ಚು ಚರ್ಚೆಗೆ ಆಗುಮಾಡಿಕೊಡುತ್ತದೆಂಬ ಕಾರಣಕ್ಕಾಗಿಯೂ ಇವು ಮಹತ್ವವನ್ನು ಪಡೆಯುತ್ತವೆ.

ಮುಗಳಿ ಅವರ ವಿಮರ್ಶೆಯಲ್ಲಿ 'ಜೀವನದರ್ಶನ' ಕುರಿತು ಹೆಚ್ಚೆಚ್ಚು ವಿಮರ್ಶೆಗೊಳಪಡಿಸಿದ್ದಾರೆ. ಜೀವನದರ್ಶನವೆನ್ನುವುದು ಹೊಸಗಾಳಿಯ ಹೊಡೆತಕ್ಕೆ ಅಲುಗಾಡುವಂತಹ ಕೆಸರಿನಲ್ಲಿ ನೆಟ್ಟ ಕಂಬವಾಗದೆ ಅನುಭವ, ವಾಸ್ತವ ಗಟ್ಟಿನೆಲೆಯನ್ನು ಆಧರಿಸಬೇಕೆಂಬ ಸೂಚನೆಯನ್ನು ಅವರಲ್ಲಿ ಕೊಡುತ್ತಾರೆ. ಒಟ್ಟಿನಲ್ಲಿ "ಮಹಾಕವಿಯಾದವನು ಯಾವುದೇ ಭಾಷೆಯಲ್ಲಿ ಯಾವುದೇ ನೆಲದ ನೆಲೆಯಿಂದ ಬರೆಯಲಿ ಅವನ ಕೃತಿಯಲ್ಲಿ ವಿಶ್ವಪ್ರಜ್ಞೆ, ವಿಶ್ವಹಿತ ಇವು ಪ್ರಧಾನವಾಗಿರುವುದರಿಂದ

ಅವನು ವಿಶ್ವಕವಿಯಾಗಿ ಅಜರಾಮರನಾಗುತ್ತಾನೆ. ಅವನಿಂದ ವಿಶ್ವಸಾಹಿತ್ಯಕ್ಕೆ ಕಾಣಿಕೆ ಸಲ್ಲುತ್ತದೆ. ಇಂಥ ಮಹಾಕೃತಿಯು ವಿಸ್ತಾರವಾದ ಮಹಾಕಾವ್ಯವಾಗಿರಬಹುದು. ಅಡಕವಾದ ಭಾವಗೀತೆಯಾಗಿರಬಹುದು. ಭಾವಗೀತೆಗಳ ಒಂದು ಪುಂಜವಾಗಿರಬಹುದು, ಎರಡು ಮೂರು ಸಾಲಿನ ಕವನವಾಗಿರಬಹುದು ವಿಶ್ವಸಾಹಿತ್ಯಕ್ಕೆ ಅದರ ಕಾಣಿಕೆ ಚಿರಂತನವಾಗಿರುತ್ತದೆ. ಎನ್ನುವಂತದ್ದು ಈ ಕೃತಿಯ ನಿರ್ಣಯವಾಗುತ್ತದೆ. ಕಾವ್ಯದ ಸತ್ವವು ಮುಖ್ಯವೇ ಹೊರತು ಅದರ ಗಾತ್ರವಲ್ಲ. ಕವಿ ಕಾವ್ಯಗಳೆರಡೂ ಮಹಾಕಾವ್ಯ ನಿರ್ಮಿತಿಯ ಶಕ್ತಿಕೇಂದ್ರಗಳೆನ್ನುವ ಮುಗಳಿ ಅವರ ನಿಲುವನ್ನು ಸ್ಪಷ್ಟಪಡಿಸುತ್ತದೆ. ಮಹಾಕೃತಿಯ ಬಗೆಗೆ ಪ್ರಕಟವಾದ ವಿದ್ವಾಂಸರ ಕೆಲವು ಗ್ರಂಥ ಸಹಾಯದಿಂದ ಅದರ ಕೆಲಭಾಗವನ್ನಾದರೂ ಕನ್ನಡಕ್ಕೆ ತಂದು ನನ್ನ ಪರಾಮರ್ಶೆಯೊಂದಿಗೆ ಸಾಹಿತ್ಯ ಸಮೀಕ್ಷಕರಿಗೆ ಮತ್ತು ಸಾಮಾನ್ಯ ರಸಿಕರಿಗೆ ಒದಗಿಸಬೇಕೆಂಬ ಅವರ ಮನದಾಳದ ಇಂಗಿತ ಮುನ್ನುಡಿಯಲ್ಲಿ ಅಭಿವ್ಯಕ್ತಗೊಂಡಿದೆ.

'ಬೇಂದ್ರೆಕಾವ್ಯ' ಲೇಖನದಲ್ಲಿ ಹೊಸಗನ್ನಡ ಕಾವ್ಯದ ಬಗೆಗೆ ಮುಗಳಿ ಅವರ ಒಲವು ನಿಲುವುಗಳನ್ನು ನಿರೂಪಿಸುವ, ಅಭಿವ್ಯಕ್ತಿಸುವ ಕ್ರಮ ನಡೆದಿದೆ. ಮುಗಳಿ ಅವರೇ ಪೀಠಿಕಾಭಾಗದಲ್ಲಿ ಹೇಳಿಕೊಂಡಿರುವಂತೆ "ನಾನು ಬೆಳೆಸಿಕೊಂಡು ಬಂದ ಸಹೃದಯ ಮನೋಧರ್ಮದಿಂದ ಬೇಂದ್ರೆಕಾವ್ಯದಲ್ಲಿ ಎದ್ದುಕಾಣುವ ಕೆಲವು ಪ್ರಮುಖ ವಿಷಯಗಳ ಸಮೀಕ್ಷೆ ಮಾಡುವ ಪ್ರಯತ್ನ ಮಾಡಿದ್ದೇನೆ. ನಾನು ಅರಿತುಕೊಂಡ ಬಗೆಯಲ್ಲಿ ಕೆಲವು ಪ್ರಮುಖ ಕವನಗಳ ವಿಶ್ಲೇಷಣೆ–ವಿಮರ್ಶೆಗಳನ್ನು ಮಾಡಿದ್ದೇನೆ. ಹೀಗೆ ಮಾಡುವಾಗ ನನ್ನ ಓದಿನ ಅರಿವಿಗೆ ಬಂದ ಇತರ ವಿಮರ್ಶೆಗಳನ್ನೂ ಸಾಧ್ಯವಿರುವಲ್ಲಿ ಚರ್ಚಿಸಿದ್ದೇನೆ. ಒಟ್ಟಿನಲ್ಲಿ ಬೇಂದ್ರೆಕಾವ್ಯವು ಕನ್ನಡ ಕಾವ್ಯಪ್ರಪಂಚದಲ್ಲಿ ಮಾತ್ರವಲ್ಲ ಭಾರತೀಯ ಜಾಗತಿಕ ಕಾವ್ಯಲೋಕದಲ್ಲಿ ಪಡೆದಿರುವ ವಿಶಿಷ್ಟಪೂರ್ಣ ಸ್ಥಾನವನ್ನು ಗುರುತಿಸಿದ್ದೇನೆ. ಎಂದಿದ್ದಾರೆ.

ಮುಗಳಿ ಅವರು ಬೇಂದ್ರೆ ಅವರ ಸಾಹಿತ್ಯವನ್ನು ನಿರ್ದಿಷ್ಟ ಪ್ರಕಾರಗಳನ್ನಾಗಿ ವಿಂಗಡಿಸಿಕೊಂಡಿದ್ದಾರೆ. ಪ್ರಕೃತಿ, ಪ್ರೀತಿ, ಮಾನವೀಯ ಪರಿಸ್ಪಂದನ, ವಿರಾಟದರ್ಶನ, ಅಧ್ಯಾತ್ಮ ಮುಂತಾದ ವರ್ಗಗಳಿಗೆ ಅವರ ಕಾವ್ಯಧಾರೆಯ ಸ್ವರೂಪವನ್ನು ಗ್ರಹಿಸುವ ಪ್ರಯತ್ನವು ಇಲ್ಲಿ ನಡೆದಿದೆ. ವಾಸ್ತವವಾಗಿ ಇದು ಶಾಸ್ತ್ರೀಯವಾದ ಮಾರ್ಗವೇ ಆಗಿದೆ. ಏಕೆಂದರೆ ಸೃಜನಶೀಲ ಸಾಹಿತಿಯ ಸೃಷ್ಟಿಗಳೆಲ್ಲವೂ ಏಕರೂಪವಾಗಿರಲಾರವು. ನಿರ್ದಿಷ್ಟ ಸಂವೇದನೆಗೆ ಧ್ವನಿ ನೀಡುವ ಪ್ರಕ್ರಿಯೆಯಲ್ಲಿ ಆಯಾ ಮನೋವೃತ್ತಿಗನುಗುಣವಾಗಿ ಭಾಷೆ, ಶೈಲಿ, ತಂತ್ರ ಆಶಯಗಳು ಬದಲಾಗುತ್ತಾ ಹೋಗುತ್ತವೆ. ಸಮರ್ಥವಾದ ಸಾಹಿತಿಯು ವಿಮರ್ಶಕನು ಎಲ್ಲಾ ಅಂಶಗಳನ್ನು ಕಾಯ್ದುಕೊಳ್ಳುವುದು ಅವಶ್ಯವಾಗಿದೆ ಎನ್ನುವ ರೀತಿಯಲ್ಲಿದೆ.

ಮುಗಳಿ ಅವರ ವಿಮರ್ಶೆಯು ರಸಮಯ ಸೃಜನಶೀಲತೆಯಿಂದ ಕೂಡಿರುವಂತದ್ದಾಗಿದೆ. ಸರಳೀಕೃತ ಬರಹ, ಕೃತಿಯ ತಿರುಳನ್ನು ಸುಲಭವಾಗಿ ತಿಳಿಯುವಂತದ್ದು ಈ ಹೇಳಿಕೆಗಳು ಬೇಂದ್ರೆ ಕಾವ್ಯದುದ್ದಕ್ಕೂ ಸಿಗುವಂತಹವುಗಳಾಗಿವೆ. ಅಂಥ ಸಂದರ್ಭ ತಿಳಿಯುವುದಾದರೆ, "ಬಂದಿತು

ಶ್ರಾವಣ ಹೃದಯ ವಿದ್ರಾವಣ ಕಾನನ ಕಾವಣವಾಗುತಿರೆ ಪಡುಗಾಳಿ ಹಾಡಿತು ಗಿಡಬಳ್ಳಿ ಆಡಿತು ಹೊಲಹುಲ್ಲು ನೋಡಿತು ಲೀಲೆಯೊಳೆ ಹೀಗೆ ಮೊದಲಾಗಿ ನೀರ್ವಕ್ಕಿ ಮುಂತಾದ ಹಕ್ಕಿಗಳು ಹಾಲಾಗಿ, ಸಾಲಾಗಿ ಮೇಲಾಗಿ ಹಾರುತಿರುವುದನ್ನು ಮಿಂಚುಹುಳ ಮಿಂಚಿನ ಬಳಗವೋ ಎಂಬಂತೆ ತೋರ್ಪಡಿಸಿ ಬಣ್ಣಿಸಲಾಗಿದೆ. ಶ್ರಾವಣ ವೈಭವ ಏನು ಹಸಿರು! ಏನು ಹಳದಿ!, ಸುತ್ತುಮುತ್ತ ನೋಡು ಕೆಳದಿ"[೨೮] ಎಂಬ ಪಲ್ಲವಿಯಿಂದ ಕೊನೆಯವರೆಗೆ ಕವಿಸಹಜವಾದ ಕುತೂಹಲ, ಮುಗ್ಧ ಹೃದಯದ ದರ್ಶನ ಆನಂದಯುತ ಭಾವಪ್ರಪಂಚದಲ್ಲಿ ಕವಿತೆ ಅನಾವರಣಗೊಂಡಿದೆ. ಅದೇ ರೀತಿ "ಮಳೆಯ ಬಿಲ್ಲು ಮುರಿದು ಹತ್ತುಕಡೆಗೆ ಹಂಚಿದಂತಿದೆ ಮುಗಿಲು ನೆಲಕೆ ಮುಕ್ಕುಚಿಕ್ಕೆ ಕಾಳುಗಳನು ಬಿತ್ತಿದೆ. ನೆಲವು ಮುಗಿಲಗರ್ತಿಯಿಂದ ಆರತಿಯನ್ನೆತ್ತಿದೆ. ರೆಕ್ಕೆ ಹುಳುಗಳಲ್ಲ ಇವು ಚಿಕ್ಕರೂಪ ತಾಳಿದ ಚೊಕ್ಕ ಅಪ್ಸರರಸಿಯರೇ ನಕ್ಕು ನಲಿಯುತಿರುವರು"[೨೭] ಹೀಗೆ ರೂಪಕ, ಉತ್ಪ್ರೇಕ್ಷೆಯಾದಿಯಾಗಿ ಬಳಕೆಗೊಂಡ ಕವಿತೆಗಳನ್ನು ಪ್ರಸ್ತಾಪಿಸಿ ವಿಮರ್ಶೆಗೊಳಪಡಿಸಿದ್ದಾರೆ. ಬೇಂದ್ರೆ ಅವರ ಶ್ರಾವಣ ಕವಿತೆ ಕುರಿತು ತಿಳಿಸುವ ವಿಮರ್ಶಕರು ಶ್ರಾವಣದ ವಿವಿಧ ಚಿತ್ರಗಳನ್ನು ಮೂಡಿಸುತ್ತದೆ. ಆದರೆ ಅವುಗಳಲ್ಲಿ ಏರಿಳಿತವಾಗಿ ಹರಿಯುವ ಶ್ರಾವಣದ ಆತ್ಮವನ್ನೇ ಮೆರೆಯುತ್ತದೆ. ಒಟ್ಟಿನಲ್ಲಿ ಹೇಳುವುದಾದರೆ ಬೇಂದ್ರೆ ಅವರು ಪ್ರಕೃತಿಯೊಂದಿಗಿನ ಪ್ರೀತಿ, ಕಾಳಜಿ ಅಭಿವ್ಯಕ್ತಿಸುವ ಕ್ರಮ ಪ್ರತಿಮೆ, ರೂಪಕ, ವಿವಿಧ ಚಿತ್ರಗಳ ಮೂಲಕ ಮುಗಳಿ ಅವರ ವಿಮರ್ಶೆ ಅನಾವರಣಗೊಂಡಿದೆ.

ಮುಗಳಿ ಅವರು ಈ ವಿಮರ್ಶಾ ಸಂಕಲನದಲ್ಲಿ ಬೇಂದ್ರೆ ಅವರ ಕುರುಡು ಕಾಂಚಾಣ ಪದ್ಯವನ್ನು ಪರಿಚಯಿಸುತ್ತಾರೆ. ಬಂಡವಾಳಶಾಹಿ ಹೇಗೆ ಕೆಲಸ ಮಾಡುತ್ತದೆ ಎಂಬ ಅಭಿಪ್ರಾಯವನ್ನು ತಿಳಿಸುವ ಅವರ ವಿವರಣೆ, ವರ್ಣನೆ ಸರಿಯಾಗಿ ಮೂಡಿಬಂದಿದೆ. ಶೋಷಕನ ಮೂಲಕಲ್ಪನೆಯೇ ತಪ್ಪಿದೆ! ಇದರಂತೆ ಇವರು ಇಡೀ ರೂಪವನ್ನು ಮೆಚ್ಚದಿರಬೇಕಾಗಿತ್ತು. ಏಕೆಂದರೆ ಅದರಲ್ಲಿ ಸಮಗ್ರತೆ ಇದೆ. ಸಮಗ್ರವಾದ ಕವಿಕಲ್ಪನೆಯನ್ನು ಅರ್ಥ ಮಾಡಿಕೊಳ್ಳದೆ ತಮ್ಮ ಅರ್ಥವನ್ನು ಅವನ ಮೇಲೆ ಹೇರುವ ಪ್ರಯತ್ನದಿಂದ ಇಂಥ ವಿಮರ್ಶೆಗಳು ದಾರಿ ತಪ್ಪುತ್ತವೆ. ಅಪಾರವಾದ ಧನಸಂಚಯದಿಂದ ಶ್ರೀಮಂತ ವ್ಯಕ್ತಿಗಳು ತಮ್ಮದೇ ಆದ ಚೌಕಟ್ಟು ನಿರ್ಮಿಸಿಕೊಂಡು ಬಂಡವಾಳಶಾಹಿಗಳು ಪ್ರಭುತ್ವವನ್ನು ಮೆಟ್ಟನಿಲ್ಲುತ್ತಾರೆ. ಬಡವರನ್ನು ಶೋಷಣೆಗೆ ಒಳಪಡಿಸುವಂತಹ ಸ್ಥಿತಿಗತಿಯ ಬಗ್ಗೆ ಈ ಕವಿತೆ ಅನಾವರಣಗೊಂಡಿರುವ ಕುರಿತು ವಿಮರ್ಶೆಗೊಳಪಡಿಸುತ್ತಾರೆ.

'ಬೇಂದ್ರೆ ಅವರ ವಿರಾಟ ದರ್ಶನ' ಲೇಖನದಲ್ಲಿ ಬೇಂದ್ರೆ ಕಾವ್ಯವು ತನ್ನ ಹಲವಾರು ಆವಿಷ್ಕಾರಗಳಲ್ಲಿ ಜೀವನದ ವಿರಾಟದರ್ಶನದ ರಸಾನುಭವವನ್ನು ಸಮರ್ಪಕವಾಗಿ ಸಹೃದಯನಿಗೆ ನೀಡುತ್ತದೆ. ಭೂಮಿಯ ಮೇಲಿನ ಬದುಕನ್ನು ಮಾತ್ರವಲ್ಲದೆ ಇಡೀ ವಿಶ್ವವನ್ನೇ ತನ್ನೆಡೆಗೆ ಆಗುಮಾಡಿಕೊಂಡು ಚಿಂತನೆ ಮಾಡುವ ಮತ್ತು ತನ್ನ ಕಾರ್ಯನಿರ್ಮಿತಿಯಲ್ಲಿ ಅಭಿವ್ಯಕ್ತಿಸುವ ವಿಶ್ವಪ್ರಜ್ಞೆಯನ್ನು 'Cosmic Consciousness' ಪರಿಕಲ್ಪನೆಗೆ ಸಂವಾದಿಯಾಗಿ ವಿಮರ್ಶಿಸಿದ್ದಾರೆ. ಮುಗಳಿ ಅವರು ಬೇಂದ್ರೆ ಕಾವ್ಯದ ವಿಶ್ವದರ್ಶನ ಕುರಿತು ತಿಳಿಸುವಂತೆ, ಇಲ್ಲಿ ಬುದ್ಧಿಭಾವಗಳ

ಸಾಂಗತ್ಯ, ಬೇಂದ್ರೆ ಅವರ ಜಾಯಮಾನ ಮತ್ತು ಮನೋಧರ್ಮಗಳಲ್ಲಿ ಸ್ಥಾಯಿಯಾಗಿರುವ ಭೂಕಲ್ಪನೆ, ವಿಶ್ವಪ್ರಜ್ಞೆಯ ಆಳ ಅಗಲಗಳೆಲ್ಲವನ್ನೂ ಮುಗಳಿ ಅವರು ಸೂಕ್ಷ್ಮವಾಗಿ ಬಿಡಿಸಿ ನೋಡುತ್ತಾರೆ. ಅವರ ಹೇಳಿಕೆಗಳಲ್ಲಿರುವ ಕೆಲವೊಂದು ವಿಶೇಷಣಗಳನ್ನು ಹೊರತುಪಡಿಸಿದರೂ ಕವಿಪ್ರತಿಭೆಯ ತೀರಾ ವಿಭಿನ್ನವಾದ ವಿಶಿಷ್ಟವಾದ ಕಾಲ, ದೇಶ, ನಿರಪೇಕ್ಷವೂ ಆದ ಅಭಿವ್ಯಕ್ತಿ ಕ್ರಮವೊಂದನ್ನು ಇಲ್ಲಿ ಅಲಕ್ಷಿಸುವಂತಿಲ್ಲ. ಲೌಕಿಕ-ಪಾರಲೌಕಿಕಗಳ ಸಮ್ಮಿಶ್ರಣದ ಸಾಧಕರಾಗಿ ಬೇಂದ್ರೆ ಅವರನ್ನು ಗುರುತಿಸುವ ಈ ದೃಷ್ಟಿಯು ವಿನೂತನವಾಗಿದೆ. ಒಟ್ಟಿನಲ್ಲಿ 'ಬೇಂದ್ರೆ ಕಾವ್ಯ'ದ ಕೃತಿಯ ವಿವರಣೆ ಅಷ್ಟಾಗಿ ಚರ್ಚಿತವಲ್ಲದ ಹೊಸಮುಖವೊಂದರ ಪರಿಚಯ ಮಾಡಿದಂತಿದೆ.

'ಪುನರ್ನವೋದಯ' ಮುಗಳಿ ಅವರ ವಿಮರ್ಶಾ ಕೃತಿಯು ವಿವಿಧ ವಿಚಾರಗೋಷ್ಠಿಗಳು, ಕಮ್ಮಟಗಳು ಮತ್ತು ಸಾಹಿತ್ಯ ಸಮ್ಮೇಳನಗಳಲ್ಲಿ ಮಂಡಿಸಿದ ಲೇಖನಗಳ ಸಾರವನ್ನೊಳಗೊಂಡಿದೆ. ಈ ಎಲ್ಲಾ ಬರೆಹಗಳಲ್ಲಿ ಕಲೆ, ಸಾಹಿತ್ಯ ಇವುಗಳ ಮೂಲ ಸ್ವರೂಪ, ಒಂದು ಕೃತಿಯ ಮೌಲ್ಯನಿರ್ಧಾರ ಮಾಡುವ ವಿಧಾನ, ಆಧುನಿಕ ಸಾಹಿತ್ಯದಲ್ಲಿ ತಲೆದೋರಿದ ಪ್ರವೃತ್ತಿಗಳು ವಿಮರ್ಶಿಸುವುದಕ್ಕೆ ಅವಶ್ಯವಾದ ಸಹೃದಯ ಮನೋಧರ್ಮ ಭವಿಷ್ಯದತ್ತ ಇಣುಕುನೋಟದಂತಹ ಅಂಶಗಳು ಅವರ ಲೇಖನಗಳ ಅಭಿವ್ಯಕ್ತಗೊಂಡಿವೆ.

ಮುಗಳಿ ಅವರು ಮುನ್ನುಡಿಯಲ್ಲಿ ತಿಳಿಸುವಂತೆ "ನನ್ನ ಅಭಿಪ್ರಾಯದಲ್ಲಿ ಇಪ್ಪತ್ತನೇ ಶತಮಾನದ ಆದಿಯಲ್ಲಿ ತಲೆದೋರಿದ ನವೋದಯವು ಇದರ ಅಂತ್ಯದಲ್ಲಿ ಪುನರ್ನವೋದಯವಾಗಿ ಹೊಸ ಹೊರವನ್ನೂ ಹದವನ್ನೂ ಪಡೆದು ಎಲ್ಲ ಕಡೆಯ ಎಲ್ಲ ಅನುಭವಗಳಲ್ಲಿ ತಾದ್ಯಾತ್ಮ ಹೊಂದಿ ವಿಶ್ವವ್ಯಾಪಿಯಾದ ಹೊಸ ಆಯಾಮವನ್ನು ವ್ಯಕ್ತಿ ವ್ಯಕ್ತಿಗೆ ವಿಶಿಷ್ಟವಾದ ಕೃತಿರಚನೆಗಳ ವೈವಿಧ್ಯದಲ್ಲಿ ತಾನೆ ತಾನಾಗಿ ಎತ್ತಿ ತೋರುತ್ತಲಿದೆ. ಪ್ರಜ್ಞಾಪೂರ್ವಕವಾಗಿ ಇದಕ್ಕಾಗಿ ಇನ್ನೂ ಹೆಚ್ಚಿನ ಸಾಧನೆ-ಸಿದ್ಧಿಗಳು ತಲೆದೋರಬೇಕೆಂದು ನನ್ನ ಹಾರೈಕೆ"[೨೮] ಎಂಬ ಅಭಿಪ್ರಾಯಕ್ಕೆ ಬರುತ್ತಾರೆ.

'ಪುನರ್ನವೋದಯ' ವಿಮರ್ಶಾ ಲೇಖನದಲ್ಲಿ ವಿಮರ್ಶಕರು ಇಪ್ಪತ್ತೊಂದನೆಯ ಶತಮಾನದ ಮೊದಲ ಭಾಗದಲ್ಲಿ ಪುನರ್ನವೋದಯ ಉದಯಗೊಂಡಿರುವುದರ ಬಗ್ಗೆ ಪ್ರಸ್ತಾಪಿಸುತ್ತಾರೆ. ನವೋದಯ ಕಾಲದ ಮುಖ್ಯ ಪ್ರೇರಣೆಗಳ ಬಗ್ಗೆ ಪ್ರಸ್ತಾಪಿಸಿರುವ ವಿವರ ಈ ರೀತಿ ಇದೆ. "೧. ಹಲವಾರು ಐತಿಹಾಸಿಕ ಕಾರಣಗಳಿಂದ ಹರಿದು ಹಂಚಿಹೋದ ಕನ್ನಡ ನಾಡನ್ನು ಒಂದುಗೊಳಿಸಿ ನಾಡುನುಡಿಗಳ ಅಭಿಮಾನವನ್ನು ಜಾಗೃತಗೊಳಿಸಿ ಕನ್ನಡಿಗರಲ್ಲಿ ಅರಿವನ್ನು ಹೆಚ್ಚುಗೊಳಿಸುವುದು, ೨. ನಾಡನ್ನು ಒಂದುಗೊಳಿಸಬೇಕಾದರೆ ಅದನ್ನು ಒಡೆದು ತಮ್ಮ ಸ್ವಾರ್ಥಕ್ಕಾಗಿ ಬಳಸಿಕೊಳ್ಳುತ್ತಿರುವ ಪರಸತ್ತೆಯಿಂದ ಭಾರತ ದೇಶವನ್ನು ಮುಕ್ತಗೊಳಿಸುವುದು, ೩. ಪರಸತ್ತೆಯಂತೆ ಪರಮಾಧಿಕಾರ ನಡೆಸುತ್ತಿರುವ ಜಡಸಂಪ್ರದಾಯಗಳಿಂದಲೂ ನಾಡನ್ನು ಬಿಡುಗಡೆಗೊಳಿಸಿ ಹಳೆಯ ಸಂಸ್ಕೃತಿಯ ಸಾರವತ್ತಾದ ತಳಹದಿಯ ಮೇಲೆ ಹೊಸ ಸಂಸ್ಕೃತಿಯ ಮಂದಿರವನ್ನು ನಿಲ್ಲಿಸುವುದು, ೪. ಸಾಹಿತ್ಯದಲ್ಲಿ ಸ್ವಾನುಭೂತಿ, ಸ್ವಂತ ಆಲೋಚನೆ ಮತ್ತು ಸ್ವಾಭಿವ್ಯಕ್ತಿ ಇವುಗಳಿಗೆ ಪ್ರಾಮುಖ್ಯ

ಕೊಡುವುದು, ೫. ಕನ್ನಡ ನುಡಿಗೆ ಮತ್ತು ಹೊಸಬಾಳಿನ ಅನುಭವಗಳಿಗೆ ಸರಿಹೊಂದುವ ಹೊಸ ಸಾಹಿತ್ಯ ರೂಪಗಳನ್ನು ಅವಶ್ಯವೆನಿಸಿದಲ್ಲಿ ಹೊರನಾಡಿನಿಂದ ಸ್ವೀಕರಿಸಿ, ಅವುಗಳಿಗೆ ಹಳೆಯ ಪರಂಪರೆಯ ತಳಹದಿಯ ಮೇಲೆ ಕನ್ನಡದೀಕ್ಷೆ ಕೊಡುವುದೆಂಬ ನಿರ್ಣಯಕ್ಕೆ ಬರುತ್ತಾರೆ."[೨೯] ಹೀಗೆ ಸಾಹಿತ್ಯ ಭಾಷಣದ ಮಾತು ಮುಂದುವರಿಯುತ್ತದೆ.

ಅದೇ ರೀತಿ ಪುನರ್ನವೋದಯದ ಅಗತ್ಯತೆಯ ಬಗ್ಗೆ ತಿಳಿಸುತ್ತಾರೆ. ಅದರ ಪ್ರಮುಖ ಪ್ರೇರಣೆಗಳನ್ನು ತಿಳಿಸಿದ್ದಾರೆ. ತಮ್ಮ ಶಕ್ತಿ, ಪ್ರವೃತ್ತಿಗಳಿಗೆ ಅನುಸರಿಸಿ ನಾವು ಮಾಡುವ ಆಲೋಚನೆಗಳು ಮತ್ತು ಕೈಗೊಳ್ಳುವ ಕಾರ್ಯಗಳು ಅನ್ಯೋನ್ಯ ಸಂಬಂಧವಾದ ವಿಶ್ವಜೀವನದ ಜಾಗೃತಿಪ್ರಜ್ಞೆಯಿಂದ ಕೂಡಿರಬೇಕು. ಪ್ರಾಮಾಣಿಕವಾದ ಭಿನ್ನ ಭಿನ್ನ ವಿಚಾರ ಪ್ರಣಾಲಿಗಳು ಮತ್ತು ಕಾರ್ಯಕ್ರಮಗಳು ಸ್ನೇಹ ಸೌಂದರ್ಯದ ಸಹಜೀವನದ ದ್ಯೋತಕವಾಗಬೇಕು. ಪರಸ್ಪರ ತಿರಸ್ಕಾರ, ಸಂಘರ್ಷಗಳಿಂದ ದೂರವಿರಬೇಕು. ಪ್ರಜಾಪ್ರಭುತ್ವದ ಮೌಲ್ಯಗಳ ಚೌಕಟ್ಟಿನಲ್ಲಿಯೇ ಭಿನ್ನಾಭಿಪ್ರಾಯಗಳಿಗೆ ಅವಕಾಶ ಕೊಡುತ್ತಾ ಬಹುಮತಕ್ಕೆ ಮಹತ್ವ ಕೊಡುತ್ತಾ ನಾವು ಕಾರ್ಯತತ್ಪರರಾಗಬೇಕು. ಹಿಂಸೆಯಿಂದ ಒತ್ತಡ ತರುವ ಎಲ್ಲ ಕ್ರಮಗಳಿಗೆ ತಡೆ ಹಾಕಬೇಕು. ಎಂಬ ಇತ್ಯಾದಿ ಅಂಶಗಳನ್ನೊಳಗೊಂಡ ಪ್ರೇರಣಾತ್ಮಕ ಭಾವತುಂಬುವಂತ ಸಾಮಾಜಿಕ ಕಾಳಜಿ ಇರುವ ಅಂಶಗಳನ್ನು ಈ ಲೇಖನದಲ್ಲಿ ಚರ್ಚಿಸಿದ್ದಾರೆ.

ಮುಗಳಿ ಅವರು ಸಾಹಿತ್ಯಾಸಕ್ತರು, ಕನ್ನಡ ನಾಡಿನ ಕಾಳಜಿ ಇರುವವರಾಗಿರುವುದರಿಂದ ಸಾಹಿತ್ಯ ರಚನಾಕಾರರಿಗೆ ಈ ರೀತಿಯಾದ ಸಲಹೆ ಸೂಚನೆಗಳನ್ನು ತಿಳಿಸಿದಂತಿದೆ. ತಾಳ್ಮೆ, ಶಿಸ್ತು, ಸಂಯಮ ಅಗತ್ಯವಾಗಿ ಬೇಕು. ತಾವು ಇಚ್ಛಿಸುವ ಸಾಹಿತ್ಯರೂಪವನ್ನು ಆರಿಸಿಕೊಂಡು ಅದರಲ್ಲಿ ಸಾಧನೆಗೈಯ್ಯುವ ರೀತಿಯಲ್ಲಿ ನಿಮ್ಮನ್ನು ನೀವು ತೊಡಗಿಸಿಕೊಳ್ಳಬೇಕು. ವಿಮರ್ಶೆಯೇ ತಮ್ಮ ಮನೋಧರ್ಮಕ್ಕೆ ಹೆಚ್ಚು ಒಗ್ಗುವುದೆಂದು ತೋರಿದರೆ ಆ ಮಾರ್ಗದಲ್ಲಿ ಸಾಗಬೇಕೆಂದು ಹೇಳುತ್ತಾ ಇಂದು ಹಳೆ ಸಾಹಿತ್ಯವನ್ನು ಹಿಂದೊತ್ತಿ ಹೊಸ ಸಾಹಿತ್ಯ ತಲೆಯೆತ್ತಿದೆ. ಎಂಬ ಭಾವಾವೇಶವು ಎಷ್ಟೆ ತೀವ್ರವಾಗಿದ್ದರೂ ಶಾಂತವಾಗಿ ಯೋಚನೆ ಮಾಡಿದಾಗ ಹಳೆಯದರ ಬೇರುಗಳನ್ನು ಹಿಡಿದುಕೊಂಡೇ ಹೊಸ ರಸವನ್ನು ಅದರಲ್ಲಿ ಹರಿಯಿಸಿ ಅಂದಂದಿನ ಅಗತ್ಯಗಳನ್ನು ಪೂರೈಸುವ ಆಕಾರವನ್ನು ಹೊಂದಿ ಹೊಸದೆಂಬ ಸೃಷ್ಟಿ ಮೂಡುತ್ತದೆ. ಎಂಬ ನಿಲುವಿಗೆ ಬರುವ ಮುಗಳಿ ಅವರ ಈ ಲೇಖನವು ಸರಳತೆಯಿಂದ ಕೂಡಿದೆ.

'ಅಗ್ನಿಪುರಾಣದಲ್ಲಿ ಕಾವ್ಯಮೀಮಾಂಸೆ' ಈ ಲೇಖನದಲ್ಲಿ ಕಾಲಗಣನೆಯ ಬಗ್ಗೆ ವಿವಿಧ ವಿದ್ವಾಂಸರ ಮುಖೇನ ಚರ್ಚಿಸಿರುವ ಸಂಗತಿಗಳು ಹಾಗೂ ವಿವಿಧ ಕೃತಿಗಳ ಉಲ್ಲೇಖಿತ ಆಧಾರಗಳ ಸಮೇತವಾಗಿ ನಿಖರವಾಗಿ ಕಾಲಗಣನೆಯನ್ನು ತಿಳಿಸುವ ಅವರ ತಾಳ್ಮೆಯುತವಾದ ವಿಮರ್ಶಾಕ್ರಮವನ್ನು ಮೆಚ್ಚುವಂತದ್ದಾಗಿದೆ. ಅಂತಹ ಸಂದರ್ಭ ಈ ರೀತಿ ಇದೆ. ರಾಮಾಯಣ ಹರಿವಂಶ, ಭಗವದ್ಗೀತೆಗಳಲ್ಲೆ ಅಮರಕೋಶದಿಂದಲೂ ಇದು ಉಪಕೃತಿಯಾಗಿದೆ. ಅಮರಕೋಶವು ಕ್ರಿ.ಶ.೬ ಅಥವಾ ೭ನೇ

ಶತಮಾನಕ್ಕಿಂತ ಮುಂಚಿನದಾಗಿರಲಾರದು ಎಂದಮೇಲೆ ಅಗ್ನಿಪುರಾಣ ಕಾಲವು ಅದರ ತರುವಾಯದ್ದಾಗುತ್ತದೆ. ಅಗ್ನಿಪುರಾಣದಲ್ಲಿ ಭರತನ ಉಲ್ಲೇಖವಿರುವುದಲ್ಲದೆ ಅವನ ನಾಟ್ಯಶಾಸ್ತ್ರದಿಂದ ಎತ್ತಿಕೊಂಡಿರಬಹುದಾದ ಅನೇಕ ಪದ್ಯಗಳಿರುತ್ತವೆ. ಕೆಲವು ಅಲಂಕಾರ ಲಕ್ಷಣಗಳೂ, ಉಕ್ತಿಗಳೂ ದಂಡಿಯ ಕಾವ್ಯಾದರ್ಶವನ್ನು ಅನುಸರಿಸಿ ಬಂದಿವೆ ಎಂಬುದರ ಬಗ್ಗೆ ಚರ್ಚಿಸಿ ವಿಮರ್ಶೆಗೊಳಪಡಿಸುತ್ತಾರೆ.

ಮುಗಳಿ ಅವರ ಒಟ್ಟು ವಿಮರ್ಶಾ ಸಂಕಲನಗಳು ಸಂಯಮ ನಿರೂಪಣಾ ಮಾದರಿಯನ್ನು ಅನುಸರಿಸಿದರೂ ಅವರ ಅಭಿಪ್ರಾಯಗಳು ನಿಷ್ಪಕ್ಷಪಾತದಿಂದ ಕೂಡಿರುವಂತವುಗಳಾಗಿವೆ. ಮುಗಳಿ ಅವರ ಸಾಹಿತ್ಯ ಚರಿತ್ರೆಯ ಸಾಹಿತ್ಯ ತತ್ವ ಮತ್ತು ವಿಮರ್ಶೆಗಳಲ್ಲೂ ತೀವ್ರವಾದ ಆಸಕ್ತಿ ತೋರಿರುವುದನ್ನು ಕಂಡುಕೊಳ್ಳಲಾಗಿದೆ. ಸ್ವತಃ ಸಾಹಿತ್ಯ ಚರಿತ್ರೆಯೇ ಅವರ ವಿಮರ್ಶಕ ಆಸಕ್ತಿಗಳ ಫಲವೆಂದರೂ ತಪ್ಪಾಗುವುದಿಲ್ಲ. ಆದರೂ ಮುಗಳಿ ಅವರ ಮನೋಧರ್ಮವು ವಿಮರ್ಶಕರಾಗಿಯೇ ಕೆಲಸ ನಿರ್ವಹಿಸಿತೆಂದು ಹೇಳಬೇಕು. ಸಾಹಿತ್ಯ ಚರಿತ್ರೆಗಿಂತ ಮುನ್ನವೇ 'ತವನಿಧಿ,' 'ರನ್ನನ ಕೃತಿರತ್ನ'ದಿಂದ ಈ ಮಾತು ಒಪ್ಪಿತವಾಗುತ್ತದೆ. ಬೇಂದ್ರೆಕಾವ್ಯ ಮತ್ತು ಪುನರ್ನವೋದಯಗಳವರೆಗೆ ಹರಡಿಕೊಂಡಿರುವ ಅವರ ವಿಮರ್ಶೆಯು ಕೆಲವು ಅನನ್ಯವಾದ ಲಕ್ಷಣಗಳನ್ನು ಒಳಗೊಂಡಿದ್ದು, ಇಂದಿಗೂ ಅನ್ವಯಿಸಬಲ್ಲ ಸಾಧ್ಯತೆಗಳನ್ನು ಹೊಂದಿದೆ. ರಂ.ಶ್ರೀ.ಮುಗಳಿ ಅವರ ವಿಮರ್ಶೆಯ ಮಾದರಿಯನ್ನು ತಿಳಿಯುವುದಾದರೆ, "ಅವರು ಯಾವುದೇ ಲೇಖಕನನ್ನು ಗಮನಿಸಲು ಅನರ್ಹನಾದವನೆಂದು ತಳ್ಳಿಹಾಕುವುದಿಲ್ಲ(ಈ ಮಾತಿಗೆ ಅವರ ಜೀವನ ರಸಿಕ ಆತ್ಮಚರಿತ್ರೆಯಿಂದ ತಿಳಿದುಬರುತ್ತದೆ). ಈ ಹಿನ್ನೆಲೆಯಲ್ಲಿ ನೋಡಿದಾಗ ಮುಗಳಿ ಅವರ ವಿಮರ್ಶೆಯ ಮಹತ್ವವು ಸ್ಪಷ್ಟವಾಗುತ್ತದೆ. ಹಾಗೆಂದು ಮಹಾಕವಿಗಳಲ್ಲಿ ಮಹಾಕವಿಯೆಂದು ಪರಿಣತನಾದವನ ಬರವಣಿಗೆಯಲ್ಲಿಯೂ ತಮಗೆ ತೋರಿದ ಪರಿಮಿತಿಗಳನ್ನು ಗುರುತಿಸಿ ಹೇಳಲು ಅವರು ಯಾವ ಸಂದರ್ಭದಲ್ಲಿಯೂ ಹಿಂಜರಿಯುವುದಿಲ್ಲ. ಅಂತಹ ಬರವಣಿಗೆಯಲ್ಲಿ ಅವರಿಗೆ ಅನ್ಯ ಉದ್ದೇಶಗಳೂ ಇರುವುದಿಲ್ಲ. ಆತಂಕಗಳೂ ಇರುವುದಿಲ್ಲ. ಕುವೆಂಪು ಅವರ ಚಿತ್ರಾಂಗದ ಕೃತಿಯ ವಿಮರ್ಶೆಯಲ್ಲಿ ಈ ಗುಣವನ್ನು ಸ್ಪಷ್ಟವಾಗಿ ಕಾಣಬಹುದು. ಹೀಗೆಂದು ಅವರು ಅಭಿರುಚಿಹೀನರೆಂದು ಹೇಳಲಾಗದು. ಕೆಲವು ಖಚಿತವಾದ ಜೀವನ ತತ್ವಗಳು ಮತ್ತು ಅವರದೇ ಆದ ಕಾವ್ಯಮೀಮಾಂಸೆಯಿಂದಲೇ ಅವರ ವಿಮರ್ಶಕ ನಿಲುವುಗಳು ಮೂಡಿಬಂದಿವೆ. ವಾಸ್ತವದಲ್ಲಿ ಅವರು ಮಂಡಿಸುವ ಕಾವ್ಯತತ್ವ ಮತ್ತು ಅವರು ಮಾಡುವ ಕೃತಿವಿಮರ್ಶೆಗಳ ನಡುವೆ ಪೂರಕ ಸಂಬಂಧ ಇರುತ್ತದೆ"[೩೦] ಎಂದು ವಿಮರ್ಶಕರು ಅಭಿಪ್ರಾಯಪಡುತ್ತಾರೆ. ಈ ಹೇಳಿಕೆಯನ್ನು ಒಪ್ಪಬಹುದಾಗಿದೆ. ಏಕೆಂದರೆ ಮುಗಳಿ ಅವರ ನಿರ್ಣಯಗಳು ನಿಷ್ಪಕ್ಷಪಾತದಿಂದ ಕೂಡಿರುವಂತಹವುಗಳು. ಅವು ಒಂದು ಪಕ್ಷವನ್ನು ಹಿಡಿದು ಹೇಳಿದಂತವು ಎಂದು ಅನಿಸಲಾರವು. ಅವರ ನಿರ್ಣಯಗಳು ಈ ಕಾರಣಕ್ಕಾಗಿ ಬಹಳ ಸಮಂಜಸವೂ ಬಹುಜನರಿಗೆ ಸಮ್ಮತವೂ ಅನಿಸುತ್ತವೆ.

ಮುಗಳಿ ಅವರ ವಿಮರ್ಶಾ ಸಂಕಲನಗಳಲ್ಲಿ ಸಾಹಿತ್ಯ ತತ್ವ ಮತ್ತು ಪ್ರಾಯೋಗಿಕ ವಿಮರ್ಶೆಗಳನ್ನು ಸಮಪ್ರಮಾಣದಲ್ಲಿ ಕಾಣಬಹುದು. ಅಷ್ಟೇ ಅಲ್ಲ, ಪ್ರತಿಯೊಂದು ಲೇಖನದಲ್ಲಿಯೂ ಅವು ಹಿತಮಿತವಾದ ಪ್ರಮಾಣದಲ್ಲಿ ಕೂಡಿಕೊಂಡಿರುತ್ತವೆ. ಸಾಧ್ಯವಾದಷ್ಟು ಮಟ್ಟಿಗೂ ಇಂತಹ ತಾತ್ವಿಕತೆಯು ಲೇಖಕನ ವೈಯಕ್ತಿಕ ಅನುಭವಲೋಕ ಮತ್ತು ಐಡಿಯಾಲಜಿಗಳನ್ನು ಮೀರಿ ನಿಲ್ಲುವಲ್ಲಿ ಯಶಸ್ವಿಯಾಗುತ್ತವೆ. ಮುಗಳಿ ಅವರ ವಿಮರ್ಶೆಯ ಇನ್ನೊಂದು ಮುಖ್ಯ ಲಕ್ಷಣವೆಂದರೆ ಅಕಡೆಮಿಕ್ ಪಾಂಡಿತ್ಯ ಮತ್ತು ವಿಮರ್ಶನ ಕಾರ್ಯಗಳ ಹದವಾದ ಸಂಯೋಜನೆ. ಛಂದಸ್ಸು, ಅಲಂಕಾರಶಾಸ್ತ್ರ, ಶಾಸನಶಾಸ್ತ್ರ, ಭಾಷಾವ್ಯಾಸಂಗ ಮುಂತಾದ ಕ್ಷೇತ್ರಗಳಲ್ಲಿ ಅವರಿಗಿರುವ ನಿಸ್ಸಂಶಯವಾದ ತಿಳಿವಳಿಕೆಯು, ಒಂದು ಕೃತಿಯ ಕೃತಿಮೀಮಾಂಸೆಯನ್ನು ಮಾಡುವ ಕೆಲಸದಲ್ಲಿ ಅವರಿಗೆ ನೆರವಾಗುತ್ತದೆ. ಆಕೃತಿ ಮತ್ತು ಆಶಯಗಳ ನಡುವಿನ ಅವಿನಾಭಾವ ಸಂಬಂಧವನ್ನು ಕಂಡುಕೊಳ್ಳುವುದರಲ್ಲಿ ಇದು ಅವರಿಗೆ ನೆರವು ನೀಡುತ್ತದೆ.

ಹಾಗೆಯೇ ಎಚ್.ಎಸ್.ರಾಘವೇಂದ್ರರಾವ್ ಅವರು ಪ್ರಸ್ತಾವನೆಯಲ್ಲಿ ತಿಳಿಸಿರುವಂತೆ "ಮುಗಳಿ ಅವರ ಓದು, ಸಾಹಿತ್ಯ ಮತ್ತು ಸಾಹಿತ್ಯಶಾಸ್ತ್ರಗಳ ಆಚೆಗಿನ ವ್ಯಾಪಕತೆಯನ್ನು ಪಡೆದುಕೊಳ್ಳುವುದಿಲ್ಲ. ಇತಿಹಾಸ, ಸಮಾಜಶಾಸ್ತ್ರ, ವಿಜ್ಞಾನ, ಮನಶ್ಶಾಸ್ತ್ರ ಮುಂತಾದ ಜ್ಞಾನಶಾಖೆಗಳನ್ನು ಅವರು ಓದಿಲ್ಲ ಅಥವಾ ತಮ್ಮ ಬರವಣಿಗೆಯಲ್ಲಿ ಬಳಸಿಕೊಂಡಿಲ್ಲ. ಅವರಿಗಿಂತ ತುಸು ಹಿರಿಯರಾದ ಡಿವಿಜಿ, ಶಂಬಾ ಜೋಶಿ, ಬೇಂದ್ರೆ ಮುಂತಾದವರ ಓದಿನಲ್ಲಿದ್ದ ವೈವಿಧ್ಯ ಮತ್ತು ವ್ಯಾಪಕತೆಗಳು ಅವರಲ್ಲಿ ಇರಲಿಲ್ಲ"[೩೦] ಎಂದು ಪ್ರಸ್ತಾಪಿಸುವ ಎಚ್.ಎಸ್.ಆರ್. ಅವರ ಹೇಳಿಕೆ ದಿಟವೆನಿಸುತ್ತದೆ. ಏಕೆಂದರೆ ಇತಿಹಾಸಕ್ಕೆ ಸಂಬಂಧಿಸಿದಂತೆ(Heritage of Karnataka) ಪರಿಚಯಾತ್ಮಕ ಇಂಗ್ಲಿಷ್ ಕೃತಿಯನ್ನು ಹೊರತುಪಡಿಸಿದರೆ ಅವರ ಒಟ್ಟು ಸಾಹಿತ್ಯಕೃಷಿಯನ್ನು ಅವಲೋಕಿಸಿದಾಗ ಈ ಮೇಲಿನ ಅಂಶಗಳು ಕಾಣದಿರುವುದು ಸ್ಪಷ್ಟವಾಗುತ್ತದೆ.

'ಮುಗಳಿ ಅವರ ವಿಮರ್ಶನ ಕಲೆ' ಲೇಖನದಲ್ಲಿ ಚಿದಂಬರಾನಂದ ಅವರು ತಿಳಿಸುವಂತೆ "ಮುಗಳಿ ಅವರ ನಿರೂಪಣೆ ಸರಳವಾದ ಶೈಲಿಯನ್ನು ಒಳಗೊಂಡಿದ್ದರೂ ಆವೇಶ ಉದ್ವೇಗಗಳಿಲ್ಲದುದಾಗಿದೆ. ಅವರ ಭಾಷೆ ಅವರ ವಿವೇಚನೆ ಒಂದು ಹಿಡಿತದಿಂದ ಕೂಡಿದೆ. ಮುಗಳಿ ಅವರ ನಿರೂಪಣೆಯಲ್ಲಿ ಪಾಂಡಿತ್ಯವಿದೆ, ಗಾಂಭೀರ್ಯವಿದೆ, ಸರಳ ಸಜ್ಜನಿಕೆಯಿದೆ. ಆದರೆ ಆವೇಶ ಉದ್ವೇಗಗಳಿಲ್ಲ. ಅವರು ಆವೇಶದಿಂದ ಹೊಗಳುವುದಿಲ್ಲ. ಉದ್ವೇಗದಿಂದ ತೆಗಳುವುದಿಲ್ಲ. ಓದುಗರನ್ನು ಕೊಚ್ಚಿಕೊಂಡೊಯ್ಯುವ ಉದ್ಗಾರಗಳಿಂದ ಕೂಡಿದವುಗಳಲ್ಲ"[೩೧] ಎಂಬ ವಿಮರ್ಶಕರ ನಿಲುವನ್ನು ಒಪ್ಪಬಹುದಾಗಿದೆ.

ಒಟ್ಟಿನಲ್ಲಿ ಮುಗಳಿ ಅವರ ವಿಮರ್ಶಾ ಮಾದರಿಯು ನಿಷ್ಪಕ್ಷಪಾತದಿಂದ ಕೂಡಿದ್ದು ಸಂಯಮವುಳ್ಳ ನಿರೂಪಣಾ ಶೈಲಿಯೊಂದಿಗೆ ಅವರ ಅಭಿಪ್ರಾಯಗಳು ಹರಿತವಾದವು, ಕಟುವಾದವು, ಸಮಂಜಸವಾದವುಗಳಾಗಿವೆ.

೫.೩. ಜೀವನ ಚರಿತ್ರೆ

ಅ. 'ಅರವಿಂದ ಮಕರಂದ'

ಅರವಿಂದರ ಜೀವನಚರಿತ್ರೆಯು ಕಲಾತ್ಮಕವಾಗಿ ಸರಳವಾಗಿ ಮೂಡಿಬಂದಿದೆ. "ಅರವಿಂದರ ಚರಿತ್ರೆಯೊಡನೆ ಶ್ರೀ ವೀರಮಾತೆಯರ ಜೀವನ ಕಾರ್ಯವೂ ಹಾಸುಹೊಕ್ಕಾಗಿ ಮೂಡಿದೆ. ಜೊತೆಗೆ ಅರವಿಂದರ ಮಕರಂದವು ತನ್ನ ಸವಿಯನ್ನು ಬೀರಿ ಇನ್ನೂ ಹೆಚ್ಚಿನ ವಾಚನ ಮನನ ಸಾಧನೆಗಳಿಗೆ ಪ್ರೇರಣೆಯನ್ನೀಯುವುದೆಂದು ಆಶಿಸುತ್ತೇನೆಂದು"(ಮುನ್ನುಡಿ)ಯಲ್ಲಿ ಹೇಳಿಕೊಂಡಿದ್ದಾರೆ. ಪರಿವಿಡಿಯ ಭಾಗದಲ್ಲಿ ೧. ಭೂಮಶಾಂತಿ, ೨. ಮಹಾಸಿದ್ಧತೆ, ೩. ಸ್ವಾತಂತ್ರ್ಯಕ್ಕಾಗಿ, ೪. ಸರ್ವಾರ್ಪಣ, ೫. ವಾಸುದೇವ ದರ್ಶನ, ೬. ಪುದುಚೇರಿಗೆ ಪಯಣ, ೭. ಉತ್ತರಯೋಗ, ೮. ಮೀರಾಮಾತೆ, ೯. ಸಹಯೋಗ, ೧೦. ಅರವಿಂದರ ಕರ್ಮಧಾರೆ, ೧೧. ಶ್ರೀಮಾತೆಯ ನಿರ್ಮಾಣ. ಉತ್ತರಾರ್ಧ ಭಾಗದಲ್ಲಿ ಶಿಕ್ಷಣ, ಸಂಸ್ಕೃತಿ, ಭಾರತ ದರ್ಶನ, ಸಮಾಜ ದರ್ಶನ, ಮಾನವ ಐಕ್ಯ, ಪೂರ್ಣಯೋಗ, ಸಾಧನಕ್ರಮ, ಸಮರ್ಪಣ ಮತ್ತು ದೈವಕೃಪೆ, ನಿಯತಿ ಮತ್ತು ಸ್ವಾತಂತ್ರ್ಯ ಸಂಕಲ್ಪ, ಮೃತ್ಯು ಮತ್ತು ಪುನರ್ಜನ್ಮ, ಆಹಾರ, ಆರೋಗ್ಯ, ಅನಾರೋಗ್ಯ, ಸೂಕ್ತಿಸಂಪುಟ ವಿಷಯ ಒಳಗೊಂಡಿದೆ.

ಮುಗಳಿ ಅವರು ಮೊದಲ ಭಾಗದಲ್ಲಿ ಬಾಲ್ಯ ಕುರಿತು ತಿಳಿಸುತ್ತಾರೆ. ಕೃಷ್ಣಧನಘೋಷ-ಲತಾದೇವಿ ದಂಪತಿಗಳಿಗೆ ವಿನಯಭೂಷಣ, ಮನಮೋಹನ ಮೂರನೆಯವರಾದ ಅರವಿಂದರು ೧೮೭೨ರ ಆಗಸ್ಟ್ ೧೫ರಂದು ಜನಿಸುತ್ತಾರೆ. ತಂದೆಯವರಾದ ಕೃಷ್ಣಘೋಷ ಅವರು ಇಂಗ್ಲೆಂಡಿಗೆ ಹೋಗಿ ಮಕ್ಕಳ ಪೋಷಣೆಗಾಗಿ ರೆವರೆಂಡ್ ವಿಲಿಯಂ ಡ್ರೆವೆಟ್ ಮತ್ತು ಶ್ರೀಮತಿ ಡ್ರೆವೆಟ್ ಮ್ಯಾಂಚೆಷ್ಟರಲ್ಲಿ ನೆಲೆಸುತ್ತಾರೆ. ಪಶ್ಚಿಮದ ಸಂಸ್ಕೃತಿಯನ್ನೇ ಮಕ್ಕಳು ಪಡೆಯಬೇಕೆಂಬ ತಂದೆ ಅವರ ಆಸೆಯೊಂದಿಗೆ ಭಾರತೀಯ ವಿದ್ಯಾರ್ಥಿಗಳ ಗೆಳೆತನ ಮಾಡಿದಂತೆ ತಾಕೀತು ಮಾಡಿರುವ ವಿವರ ತಿಳಿಯುತ್ತದೆ. ಅರವಿಂದರು ಕೇಂಬ್ರಿಡ್ಜ್ ವಿಶ್ವವಿದ್ಯಾಲಯದಲ್ಲಿ ಓದುತ್ತಿರುವಾಗಲೇ ಐಪಿಎಸ್ ಪರೀಕ್ಷೆ ಪಾಸು ಮಾಡಿ ೧೧ನೇ ಸ್ಥಾನವನ್ನು ಪಡೆಯುತ್ತಾರೆ.

ಅರವಿಂದರು ಭಾರತದಲ್ಲಿ ಬಂದು ನೆಲೆಸಿ ಐಪಿಎಸ್ ಉದ್ಯೋಗಿಯಾಗಿದ್ದುಕೊಂಡು ಭಾರತದ ಏಳಿಗೆಗಾಗಿ ದುಡಿಯಲು ಮುಂದಾಗುತ್ತಾರೆ. ದೇಶದ ಸಮಗ್ರಶಕ್ತಿಯನ್ನು ಒಗ್ಗೂಡಿಸಲು ಶ್ರಮಿಸುತ್ತಾರೆ. ವಂದೇ ಮಾತರಂ ಪತ್ರಿಕೆಯ ಮೂಲಕ ಸ್ವಾತಂತ್ರ್ಯದ ಕಹಳೆಯನ್ನು ಮೂಡಿಸುತ್ತಾರೆ. ಜನರನ್ನು ಜಾಗೃತಿಗೊಳಿಸಲು ಈ ರೀತಿ ಲೇಖನಗಳನ್ನು ಬರೆಯುತ್ತಾರೆ. "ನಮ್ಮ ಪ್ರತ್ಯಕ್ಷವೈರಿ ನಮ್ಮಿಂದ ಹೊರಗಿರುವ ಯಾವ ಶಕ್ತಿಯೂ ಅಲ್ಲ. ನಮ್ಮ ದೌರ್ಬಲ್ಯಗಳೇ ನಮ್ಮ ವೈರಿಗಳು. ನಮ್ಮ ಹೇಡಿತನ, ಸ್ವಾರ್ಥಮಯತೆ, ಢಾಂಬಿಕತೆ, ನಮ್ಮ ಕುರುಡು ಭಾವನಾಭಾಸ ಇವೇ ನಿಜವಾದ ನಮ್ಮ ಹಗೆಗಳು. ಇಂಗ್ಲಿಷ್ ಭಾಷೆಯ ತಳುಕಿನಿಂದ ನಾವು ಬೆರಗುಗೊಂಡಿದ್ದರೆ. ಈ ಜನರು ನಮ್ಮ ಕೋಪಕ್ಕೆ ಸಹ ಅನರ್ಹರು ಎಂಬುದನ್ನು ನಾವು ತತಕ್ಷಣ ಒಪ್ಪುವಂತಿದೆ. ನಮ್ಮ ಮನವಿ ಆಂಗ್ಲ ಭಾರತೀಯರ ಅಭಿಪ್ರಾಯಕ್ಕಲ್ಲ. ಬ್ರಿಟಿಷರ ನ್ಯಾಯಬುದ್ಧಿಗಲ್ಲ, ನಮ್ಮಲ್ಲಿ ಸಿಡಿದೇಳುತ್ತಿರುವ ಮನುಷ್ಯತ್ವಕ್ಕೆ. ಮೂಕವಾದ

ರೀತಿಯಲ್ಲಿ ಕಷ್ಟಪಡುತ್ತಿರುವ ಜನತೆಯೊಂದಿಗೆ ಸಮರಸವಾಗುವ ಬಂಧುಭಾವಕ್ಕೆ"(ಪು.೨೧). ಅರವಿಂದರು ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ತಿಳಿಸುವ ಪ್ರಚೋದನಕಾರಿ ಹೇಳಿಕೆಯು ಈ ಸಂದರ್ಭದಲ್ಲಿ ಕಂಡುಬರುತ್ತದೆ.

ಅರವಿಂದರು ರಾಜಕೀಯ ಪ್ರಭಾವಿಗಳ ಮಧ್ಯದಲ್ಲಿಯೇ ಇದ್ದುಕೊಂಡು ಬಾಲಗಂಗಾಧರ ತಿಲಕರಂತ ಮಹನೀಯರಿಗೆ ಮಾರ್ಗದರ್ಶನ ನೀಡುತ್ತಾರೆ. ೧೯೦೪-೦೫ರಲ್ಲಿ ಮುಂಬಯಿ, ವಾರಣಾಸಿಯಲ್ಲಿ ಅಧಿವೇಶನ ರಚಿಸಿ ಸ್ವರಾಜ್ಯ ಸಂಪೂರ್ಣ ಸ್ವಾತಂತ್ರ್ಯವೇ ನಮ್ಮ ಗುರಿಯಾಗಬೇಕೆಂದೂ, ಅದಕ್ಕಾಗಿಯೇ ಹೋರಾಡಬೇಕೆಂಬ ಎಲ್ಲ ಮನೋಧರ್ಮದ ನಾಯಕರನ್ನು ಒಟ್ಟುಗೂಡಿಸಿ ಕರಪತ್ರಗಳನ್ನು ಹಂಚಿ ಅವರಲ್ಲಿ ಸಂಪೂರ್ಣ ಸ್ವಾತಂತ್ರ್ಯದ ಧ್ಯೇಯವನ್ನೇ ಒಳಗೊಂಡಂತೆ ಲೇಖನ ರಚಿಸಿ ರಾಷ್ಟ್ರವ್ಯಾಪಿಯಾಗಿ ಮಹತ್ವ ಪಡೆಯುವಲ್ಲಿ ಶ್ರಮಿಸುತ್ತಾರೆ. ಸ್ವಾತಂತ್ರ್ಯಪೂರ್ವ ಕಾಲಘಟ್ಟದಲ್ಲಿ ನಡೆದ ಚಳುವಳಿಯ ಕುರಿತು ೧೯೦೬ ಫೆಬ್ರವರಿಯಲ್ಲಿ ನಡೆಯಬೇಕಿದ್ದ ಸಮ್ಮೇಳನಕ್ಕೆ ಬ್ರಿಟಿಷ್ ಸರಕಾರ ನಿಷೇಧಾಜ್ಞೆ ಹೊರಡಿಸಿದ್ದರ ವಿರುದ್ಧ ಅರವಿಂದರು ಬಿಪಿನ್ ಚಂದ್ರಪಾಲ ಮೊದಲಾದ ನಾಯಕರೊಡಗೂಡಿ ಪ್ರತಿಭಟಿಸುತ್ತಾರೆ. ಪೊಲೀಸರಿಂದ ಬೆತ್ತದ ಏಟು ತಿನ್ನುತ್ತಾರೆ. ಬ್ರಿಟಿಷರ ಬೆತ್ತದೇಟುಗಳಿಗೆ ಮಣಿಯದಿರಿ ಎಂಬುದಾಗಿ ಅರವಿಂದರು ಜನರಿಗೆ ಧೈರ್ಯ ತುಂಬುವುದನ್ನು ತಿಳಿಸುತ್ತಾರೆ. ಇಂಥ ಸಂದರ್ಭದಲ್ಲಿಯೇ ಅರವಿಂದರನ್ನು ಜೈಲಿಗೆ ಹಾಕಲಾಗುತ್ತದೆ. ಅರವಿಂದರ ಪ್ರಚೋದನಕಾರಿ ಲೇಖನಗಳು ಜನರ ಮನಸ್ಸನ್ನು ತಟ್ಟುತ್ತವೆ. ಬಾಲಗಂಗಾಧರ ತಿಲಕರು, ಲಾಲಾಲಜಪತರಾಯರಂತ ನಾಯಕರ ನೇತೃತ್ವದಲ್ಲಿ ದೇಶಪ್ರೇಮವನ್ನು ಜಾಗೃತಗೊಳಿಸಲು ಮುಂದಾಗುತ್ತಾರೆ.

ಕಿಂಗ್ಸ್‌ಫೋರ್ಡ್ ಎಂಬ ಬ್ರಿಟಿಷ್ ಅಧಿಕಾರಿಯು ಭಾರತೀಯರನ್ನು ಶೋಷಣೆಗೆ ಒಳಪಡಿಸಿ ಕ್ರೂರವಾಗಿ ಶಿಕ್ಷಿಸುತ್ತಿದ್ದುದರಿಂದ ಅವನನ್ನು ಕೊಲ್ಲಲು ೧೯೦೮ರ ಏಪ್ರಿಲ್ ೩೦ರಂದು ಖುದೀರಾಮ ಬೋಸ್ ಮತ್ತು ಪ್ರಫುಲ್ಲಚೌಕಿ ಎಂಬ ಇಬ್ಬರು ಬಾಲಕರು ಈ ಅಧಿಕಾರಿ ಹೋಗುತ್ತಿದ್ದ ಗಾಡಿಗೆ ಬಾಂಬನ್ನು ಎಸೆಯುತ್ತಾರೆ. ಆದರೆ ಆ ಅಧಿಕಾರಿ ಅದರಲ್ಲಿ ಇರದೆ ಬದಲಾಗಿ ಇಬ್ಬರು ಬ್ರಿಟಿಷ್ ಮಹಿಳೆಯರು ಹತರಾಗಿರುವುದನ್ನು ತಿಳಿದು ಮನನೊಂದುಕೊಂಡ ವಿವರ ತಿಳಿಸುತ್ತಾರೆ. ಅರವಿಂದರನ್ನು ಜೈಲಿನಿಂದ ಬಿಡಿಸಲು ಜನರಿಂದ ಹಣವನ್ನು ಸಂಗ್ರಹಿಸಲಾಗುತ್ತದೆ. ಅರವಿಂದರು ಬಿಡುಗಡೆಯ ನಂತರವೂ ಸುಮ್ಮನೆ ಕುಳಿತುಕೊಳ್ಳದೆ "ನಾವೇನನ್ನು ಮಾಡಿದರೂ ನಮ್ಮ ಧೈರ್ಯ ಮತ್ತು ಶಕ್ತಿಯಿಂದ ಮಾಡಬೇಕು ನಮಗೆ ದೇವರು ವಹಿಸಿಕೊಟ್ಟ ಕೆಲಸವನ್ನು ಧೈರ್ಯಶಾಲಿಗಳೂ, ದೇಶಾಭಿಮಾನಿಗಳೂ ಆಗಿ ಮಾಡೋಣ. ಹೆಚ್ಚಿನ ತ್ಯಾಗಕ್ಕಾಗಿ, ಹೆಚ್ಚಿನ ಸಾಹಸಕ್ಕಾಗಿ ನಾವು ಸಿದ್ಧರಾಗೋಣ. ಯಾಕೆಂದರೆ ನಮ್ಮ ಕಾರ್ಯ ದೊಡ್ಡದು. ಯಾರಾದರೂ ದಬ್ಬಾಳಿಕೆಯ ಭೀತಿಯಿಂದ ಗಾಬರಿಗೊಳ್ಳುತ್ತಿದ್ದರೆ ಅವರು ದೂರ ಸರಿಯಲಿ, ಯಾರು ಬ್ರಿಟಿಷರ ಅಭಿಲಾಷೆ, ಇಚ್ಛೆಗಳಿಗೆ ಒಳಗಾಗಿರುವವರು ಅಪಾಯಕಾರಿಗಳು"(ಪು.೮೬) ಎಂದಿದ್ದಾರೆ. ಈ ರೀತಿಯಾಗಿ 'ಕರ್ಮಯೋಗಿನ್' ಸಂಪಾದಕೀಯ ಕಾಲಂ ಮೂಲಕ ಜನರ ಮನಸ್ಥಿತಿಗೆ ಧಕ್ಕೆ ತರುತ್ತಿದ್ದಾರೆಂದು ರಾಜದ್ರೋಹದ

ಆಪಾದನೆ ಮೇರೆಗೆ ಪೋಲೀಸರು ಬಂಧಿಸಲು ಮುಂದಾದಾಗ ಅಲ್ಲಿಂದ ತಪ್ಪಿಸಿಕೊಂಡು ಕಲ್ಕತ್ತೆಯ ಮೋತಿಲಾಲ್ ರಹಸ್ಯಮನೆಯಲ್ಲಿ ಉಳಿದುಕೊಂಡು ಹೊರಗಿನ ಪ್ರಪಂಚಕ್ಕೆ ತೋರುಗೊಡದೆ ಅಧ್ಯಾತ್ಮದಲ್ಲಿ ತಲ್ಲೀನರಾಗಿ ಯೋಗ, ಧ್ಯಾನದಲ್ಲಿ ತಮ್ಮನ್ನು ತೊಡಗಿಸಿಕೊಳ್ಳುತ್ತಾರೆ.

ವೀರಮಾತೆಯರು ೧೯೨೨ರಲ್ಲಿ ಅರವಿಂದರ ನಿವಾಸದ ಸಂಪೂರ್ಣ ಜವಾಬ್ದಾರಿಯನ್ನು ನೋಡಿಕೊಳ್ಳುತ್ತಾರೆ. ಅರವಿಂದರು ಮುಂದೆ ಅಧ್ಯಾತ್ಮ ಯೋಗಸಾಧನೆಯಲ್ಲಿಯೇ ತಮ್ಮನ್ನು ತೊಡಗಿಸಿಕೊಂಡು ಶರೀರ, ಪ್ರಾಣ, ಮನಸ್ಸು, ಬುದ್ಧಿ, ಅತಿಮಾನಸ, ಆನಂದ ಇವು ಐದು ಆತ್ಮಗಳು ನಾವು ಮೇಲೆ ಏಳುತ್ತಾ ಹೋದಂತೆ ಮನುಷ್ಯನ ಆಧ್ಯಾತ್ಮಿಕ ವಿಕಾಸದಲ್ಲಿ ಉತ್ಕೃಷ್ಟವಾದ ಸ್ಥಿತಿ ಮುಟ್ಟುತ್ತದೆ ಎಂದು ತಿಳಿಸುತ್ತಾರೆ. ಅರವಿಂದರ ಆಧ್ಯಾತ್ಮಿಕ ಭಕ್ತಿಗೆ ಮಾರುಹೋದ ದಿಲೀಪಕುಮಾರರಾಯರು ೧೯೨೮ರಲ್ಲಿ ಲಕ್ಷಗಟ್ಟಲೆ ಬೆಲೆಬಾಳುವ ಆಸ್ತಿಪಾಸ್ತಿಯನ್ನು ಆಶ್ರಮಕ್ಕೆ ಒಪ್ಪಿಸಿ ಅದರಲ್ಲಿ ತಾವೂ ಒಬ್ಬ ಸದಸ್ಯರಾಗುತ್ತಾರೆ. ಅದೇ ರೀತಿ ಕೆ.ಡಿ ಸೆಣ್ನಾಋಷಭಚ್‌ಚಂದ್, ನಿರೋದಬರನ್, ಸುಂದರ, ಪೃಥ್ವಿಸಿಂಗ್, ಭಾರತೀಯರಾದರೆ ಕರ್ನಾಟಕದಿಂದ ಮಾಧವಪಂಡಿತ ಶಂಕರಗೌಡ ಪಾಟೀಲ, ಪಿಂಟೋ ಕೇಶವಮೂರ್ತಿ, ಮೊದಲಾದ ಸಾಧಕರು ಅರವಿಂದರ ಆಶ್ರಮಕ್ಕೆ ಮಾರುಹೋಗಿ ಅಲ್ಲಿಯೇ ನೆಲೆಸಿರುವಂತದ್ದು ತಿಳಿದುಬರುತ್ತದೆ.

ಅರವಿಂದರ ಜನಪ್ರಿಯವಾಗಿರುವ ಆ ಮಠವು ಪಾಂಡಿಚೇರಿಯ ಸಮುದ್ರಕ್ಕೆ ಹತ್ತಿರವಿರುವ ಸ್ಥಳವಾಗಿದೆ. ಈ ಕಟ್ಟಡವನ್ನು ಆಶ್ರಮ ಮಾಡಲಾಗಿ ೧೯೨೬ರಲ್ಲಿ ಪ್ರಾರಂಭಗೊಂಡು "ಆಶ್ರಮವಾಸಿಗಳೆ ಸದ್ದುಗದ್ದಲವಿಲ್ಲದೆ ಶಾಂತಿಯುತವಾಗಿ ದಿನನಿತ್ಯದ ಕೆಲಸಗಳನ್ನು ನಿಷ್ಠೆಯಿಂದ ಮಾಡುವುದೇ ಒಂದು ಯೋಗ ಸಾಧನೆ. ಕೆಲಸವೇ ದೈವೀಶಕ್ತಿಗೆ ಮನುಷ್ಯ ಶರೀರ ಮಾಡುವ ಉತ್ತಮ ಪ್ರಾರ್ಥನೆ"(ಪು.೧೨೮) ಎಂದು ಸಾಧಕರಿಗೆ ಮೀರಾಬಾಯಿ ಅವರು ಹೇಳುವ ಮಾತನ್ನು ತಿಳಿಸುತ್ತಾರೆ.

ಈ ಕೃತಿಯ ಉತ್ತರಾರ್ಧ ಭಾಗದಲ್ಲಿ ಶಿಕ್ಷಣ ಕುರಿತು ಅರವಿಂದರ ಅಭಿಪ್ರಾಯಗಳನ್ನು ದಾಖಲಿಸಿ ಚರ್ಚಿಸಿದ್ದಾರೆ. "೧. ನಿಜವಾದ ಶಿಕ್ಷಣ ಯಾವುದು ಎಂಬುದನ್ನು ಅರಿತುಕೊಳ್ಳುವಾಗ ಮನುಷ್ಯಶಕ್ತಿ, ರಾಷ್ಟ್ರ, ಜನಸಮುದಾಯ ಅಥವಾ ಇಡೀ ಮಾನವಕುಲ ಈ ಮೂರು ಅಂಶಗಳನ್ನು ಗಣನೆಗೆ ತೆಗೆದುಕೊಳ್ಳಬೇಕೆಂದಿದ್ದಾರೆ. ೨. ಭಾರತದ ದೃಷ್ಟಿಯಲ್ಲಿ ಮನುಷ್ಯ ವ್ಯಕ್ತಿಯೆಂದರೆ ಆತ್ಮಸ್ವರೂಪ, ಮೈಮನಗಳಲ್ಲಿ ಮುಚ್ಚಿಕೊಂಡಿರುವ ದೈವತ್ವದ ಒಂದು ಅಂಶ. ಅವನಲ್ಲಿ ದೇಹ, ಪ್ರಾಣ, ಮನಸ್ಸು, ಬುದ್ಧಿ ಮುಂತಾದವುಗಳು ಒಳಗೊಂಡಿವೆ. ೩. ರಾಷ್ಟ್ರೀಯ ಶಿಕ್ಷಣ ಪದ್ಧತಿಯಲ್ಲಿ ಪಾಶ್ಚಾತ್ಯ ಮಾದರಿಯಷ್ಟೇ ವ್ಯಾಪಕವಾದ ಶಿಕ್ಷಣವಿರಬೇಕು. ಜೊತೆಗೆ ಅದಕ್ಕಿಂತಲೂ ಪರಿಪೂರ್ಣವಾಗಿರಬೇಕು. ೪. ಎಲ್ಲರಲ್ಲಿಯೂ ದೈವೀಶಕ್ತಿ ಅಡಗಿಕೊಂಡಿರುತ್ತದೆ. ಅದನ್ನು ಕಂಡುಹಿಡಿದು ಶಿಕ್ಷಕನು ಬೆಳಸಬೇಕು. ಜೊತೆಗೆ ಒತ್ತಾಯಪೂರ್ವಕವಾಗಿ ಶಿಕ್ಷಣ ಒದಗಿಸುವುದು ಸರಿಯಲ್ಲ"(ಪು.೧೫೬) ಎಂದು ಅರವಿಂದರ ಈ ಹೇಳಿಕೆಗಳಲ್ಲಿ ಕೆಲವೊಂದನ್ನು ಒಪ್ಪಬಹುದಾದರೂ ಎಲ್ಲಾ ಹೇಳಿಕೆಗಳನ್ನು ಒಪ್ಪುವಂತಿಲ್ಲ. ಏಕೆಂದರೆ ಅರವಿಂದರ ಹೇಳಿಕೆಗಳು ಓದುಗರಿಗೆ, ಚಿಂತಕರಿಗೆ ಅವು ಆಧ್ಯಾತ್ಮಿಕವಾದ ತಳಹದಿಯನ್ನು

ಬೋಧಿಸುವಂತಹವುಗಳಾಗಿವೆ. ಆದರೆ ಮೀರಾಬಾಯಿ ಅವರು ಮನುಷ್ಯನನ್ನು ಉನ್ನತಿಗೆ ಏರಿಸಲು ಶಿಕ್ಷಣದ ಐದು ಹಂತಗಳನ್ನು ತಿಳಿಸುತ್ತಾರೆ. ೧. ಏಕಾಗ್ರತೆಯ ಶಕ್ತಿವಿಕಾಸ, ೨. ವಿಸ್ತರಣೆ, ವ್ಯಾಪಕತೆ, ಜಟಿಲತೆ ಮತ್ತು ಸಂಪನ್ನತೆ, ೩. ಜೀವನಕ್ಕೆ ಮಾರ್ಗದರ್ಶಕವಾದ ಅತ್ಯಂತ ಪರಿಶ್ರಮಭಾವದ ಸುತ್ತ ರಚಿಸಲ್ಪಡುವ ಭಾವವಿಶ್ವ ಆಲೋಚನ ಸಮಯ ಮತ್ತು ಅನಿಷ್ಟಕಾರಿಯಾದ ಭಾವಗಳ ನಿರಾಕರಣೆ, ೫. ಮಾನಸಿಕ ಮೌನ, ಸಂಪೂರ್ಣ ಶಾಂತಿ ಹಾಗೂ ಚೈತನ್ಯ ಸ್ವೀಕಾರ ಸಮರ್ಥನೆ. ಮುಗಳಿ ಅವರು ಈ ಮಾದರಿಯ ಅಂಶಗಳನ್ನು ದಾಖಲಿಸುತ್ತಾರೆ. ಕೊನೆಯ ಭಾಗದಲ್ಲಿ ಆಧ್ಯಾತ್ಮಿಕವಾದ ಮಾತುಗಳ ಮೂಲಕ ಬೋಧನೆಯ ರೀತಿಯಲ್ಲಿ ರಚಿಸಲ್ಪಟ್ಟಿದೆ.

"ನಿಮ್ಮ ಹೃದಯಮೌನದಲ್ಲಿಯೇ ದೈವವು ನಿಮ್ಮೊಂದಿಗೆ ಮಾತಾಡಿ ತೋರಿಸುವುದು, ನಿಮ್ಮ ಗುರಿಯತ್ತ ನಿಮ್ಮನ್ನು ಕರೆದೊಯ್ಯುವುದು, ನೀನು ನಿಮ್ಮನ್ನು ದೈವಕ್ಕೆ ಹೆಚ್ಚೆಚ್ಚಾಗಿ ನೀಡಿದಂತೆ ದೈವವು ನಿಮಗೆ ತನ್ನನ್ನು ನೀಡುತ್ತದೆ ಎಂಬ ಅನುಭವ ನಿಮಗೆ ಬರುತ್ತದೆ. ದೈವಕ್ಕೆ ಶರೀರವು ಮಾಡುವ ಶ್ರೇಷ್ಠ ಪ್ರಾರ್ಥನೆಯೆಂದರೆ ಕೈಗೊಂಡ ಕೆಲಸದಲ್ಲಿ ತೊಡಗುವುದೆಂದು"(ಪು.೩೦೫), ಈ ಜೀವನಚರಿತ್ರೆಯ ಬಗ್ಗೆ ಒಟ್ಟಾರೆ ಹೇಳುವುದಾದರೆ ಅರವಿಂದರು ಸ್ವಾತಂತ್ರ್ಯ ಕಾಲಘಟ್ಟದಲ್ಲಿ ತಾವು ಮಾಡಿದ ಮಹತ್ವದ ಕಾರ್ಯದ ಜೊತೆಗೆ ಕೊನೆಯ ಹಂತದಲ್ಲಿ ಆಧ್ಯಾತ್ಮಿಕ ನೆಲೆಗೆ ಒಳಗಾಗಿ ಸಾವಿತ್ರಿಯಂತಹ ಮಹಾಕಾವ್ಯವನ್ನು ರಚಿಸಿದ್ದಾರೆ. ಇವರ ಪ್ರಭಾವ ಕನ್ನಡ ಕವಿ, ಲೇಖಕರ ಮೇಲೆ ಆಗಿದೆ.

ಆ. ಶಾಂತ ಕವಿ

ಶಾಂತಕವಿಗಳ ಜೀವನವನ್ನು ಕುರಿತು ಮುಗಳಿ ಅವರು ರಚಿಸಿರುವ ಈ ಕಿರು ಕೃತಿಯಲ್ಲಿ ಬಾಲ್ಯ, ಶಿಕ್ಷಣ, ಉದ್ಯೋಗ, ಸಾಹಿತ್ಯ ಕೃಷಿ, ಮತ್ತು ಕನ್ನಡಪರ ಕಾಳಜಿಯುಳ್ಳ ಅಂಶಗಳ ಜೊತೆಗೆ ನಾಟಕಗಳನ್ನು ರಚಿಸಿದ ವಿವರಗಳನ್ನೊಳಗೊಂಡಿದೆ. ಶಾಂತಕವಿಗಳು ಅಂದಿನ ಧಾರವಾಡ ಜಿಲ್ಲೆ(ಇಂದಿನ ಹಾವೇರಿ ಜಿಲ್ಲೆ) ಹಿರೇಕೆರೂರ ತಾಲೂಕಿನ ಸಾತೇನಹಳ್ಳಿಯಲ್ಲಿ ೧೮೫೬ರ ಜನವರಿ ೧೫ರಂದು ಸಕ್ಕರಿ ಮನೆತನದಲ್ಲಿ ಜನಿಸಿದರು. ಮೊದಲನೆಯ ಹೆಸರು ಬಾಳಾಚಾರ್ಯ. ಮನೆದೇವರು ಶಾಂತೇಶ್ವರನಾದ್ದರಿಂದ ಸಕ್ಕರಿ ಬಾಳಾಚಾರ್ಯ ಎಂದು ನಾಮಕರಣಗೊಂಡಿದ್ದವರು ಮುಂದೆ ಶಾಂತಕವಿ ಆದರು.

ಶಾಂತಕವಿಗಳಲ್ಲಿ ಕನ್ನಡದ ಬಗೆಗಿನ ಕಾಳಜಿ ಬಾಲ್ಯದಿಂದಲೇ ಹುಟ್ಟಿಕೊಂಡಿತ್ತು. ಹಾಡು, ಕುಣಿತ, ಭಾಗವತ, ದಾಸರ ಪದಗಳ ಅನುಕರಣೆಯಿಂದಾಗಿ ಕನ್ನಡಾಭಿಮಾನವನ್ನು ಮೂಡಿಸಲು ಪ್ರೇರೇಪಿಸಿತ್ತೆಂದು ತಿಳಿಸುವರು. ೧೮೭೦ರ ಕಾಲಾವಧಿಯಲ್ಲಿ ಉತ್ತರ ಕರ್ನಾಟಕದ ಮೇಲೆ ಮರಾಠಿ ಭಾಷೆಯ ಪ್ರಭಾವವು ಎಷ್ಟು ಮೇಲ್ಮಟ್ಟದಲ್ಲಿ ತನ್ನ ಪ್ರಾಬಲ್ಯ ಪಡೆದಿತ್ತೆಂಬುದರ ಕುರಿತಂತೆ ಈ ಭಾಗದಲ್ಲಿ ಹೇಳಿಕೊಂಡಿದ್ದಾರೆ. ಮರಾಠಿ ಭಾಷೆಯನ್ನು ಕಲಿಯಲು ಮತ್ತು ಮರಾಠಿ ಭಾಷೆಯ ನಾಟಕಗಳನ್ನು ನೋಡಲು ಕನ್ನಡಿಗರ ಉತ್ಸುಕತೆಯನ್ನು ಅರಿತರು. ಕನ್ನಡ ಭಾಷೆಯನ್ನು ಮರೆಯುವ ಸ್ಥಿತಿಗೆ ಬಂದು ತಲುಪಿದ್ದರ ವಿವರದ ಜೊತೆಗೆ ಕನ್ನಡ ರಂಗಭೂಮಿ ಕನ್ನಡಿಗರ ಪ್ರೋತ್ಸಾಹವಿಲ್ಲದೆ

ಅವನತಿ ಹೊಂದಲು ಆರಂಭಿಸಿದ ಕಾಲಾವಧಿಯ ಬಗ್ಗೆ ಅರಿತ ಶಾಂತಕವಿಗಳು ಅಂದಿನಿಂದಲೇ ಕನ್ನಡ ರಂಗಭೂಮಿಯ ಜಾಗೃತಿಯ ಬಗ್ಗೆ ಪಣ ತೊಟ್ಟಿರುವ ವಿವರ ಈ ಕೃತಿಯಲ್ಲಿ ದೊರೆಯುತ್ತದೆ.

ಗದುಗಿನ ನಾಟಕ ಕಲಾವಿದರ ನೆರವಿನಿಂದ 'ಕರ್ನಾಟಕ ನಾಟಕ ಕಂಪೆನಿಯನ್ನು' ೧೮೭೪ರಲ್ಲಿ ಸ್ಥಾಪಿಸಿ ನಟರೊಡನೆ ನಾಟಕ ಮಾಡಲು ನಾಟಕ ರಚಿಸಿ, ಗಾಯಕರಿಗೆ, ಕಲಾವಿದರಿಗೆ ನಾಟಕ ಶಿಕ್ಷಣ ತರಬೇತಿ ಕೊಟ್ಟು ಕರ್ನಾಟಕದ ನಾಟಕ ರಂಗಭೂಮಿ ಬೆಳವಣಿಗೆಗೆ ಕಾರಣೀಕರ್ತರಾಗಿದ್ದಾರೆ. ೧೪ನೇ ವಯಸ್ಸಿನಲ್ಲಿ ಶಾಂತಕವಿಗಳು ರಾಣೆಬೆನ್ನೂರು ಕನ್ನಡ ಶಾಲೆಯ ಶಿಕ್ಷಕರಾಗಿ ಸೇವೆಗೈದ ವಿವರಗಳ ಜೊತೆಗೆ ನಾಟಕ ರಂಗದ ವಿಶೇಷ ಅಭಿರುಚಿ ಹೊಂದಿದವರಾಗಿದ್ದರು. ಗದುಗಿನಲ್ಲಿಯೇ ಶಿಕ್ಷಕರ ವೃತ್ತಿಯೊಂದಿಗೆ ಕನ್ನಡ ನಾಟಕ ರಂಗದಲ್ಲಿ ತೊಡಗಿಸಿಕೊಂಡಿರುವುದನ್ನು ಗಮನಿಸಿದ ಶಾಲಾ ಇನ್ಸ್‌ಪೆಕ್ಟರ್ ಕಸಿವಿಸಿಗೊಂಡು ಶಾಂತಕವಿಗಳನ್ನು ಗದುಗಿನಿಂದ ಹೊಂಬಳಕ್ಕೆ ವರ್ಗ ಮಾಡಿದರು. ಶಾಂತಕವಿಗಳು ಅದರ ಬಗ್ಗೆ ಯೋಚಿಸದೆ, ಶಾಲೆ ಮುಗಿದ ಅವಧಿಯಲ್ಲಿ ದೂರದ ಒಂಬತ್ತು ಕಿ.ಮೀ ದೂರದ ಗದುಗಿಗೆ ಎಮ್ಮೆಯ ಮೇಲೆ ಕುಳಿತು ಹೋಗಿ ನಾಟಕ ಕಲಾವಿದರಿಗೆ ತರಬೇತಿ ನೀಡುತ್ತಿದ್ದರು. ಅದರ ಜೊತೆಗೆ ಅವರಲ್ಲಿರುವ ಸಮಯದ ಮಹತ್ವ ಮತ್ತು ಕನ್ನಡದಲ್ಲಿಯೇ ನಾಟಕಗಳನ್ನು ರಂಗಪ್ರಯೋಗಕ್ಕೆ ಒಳಪಡಿಸುವಂತದ್ದು ಈ ಸಂದರ್ಭದಲ್ಲಿ ಕಂಡುಬರುತ್ತದೆ.

೧೭-೧೮ನೇ ವಯಸ್ಸಿನಲ್ಲಿಯೇ ಶಾಂತಕವಿಗಳು ಉಷಾಹಣ ನಾಟಕವನ್ನು ರಂಗಸಜ್ಜಿಕೆಯ ಮೇಲೆ ಸಂಗೀತಮಯದಿಂದ ಯಶಸ್ವಿಯಾಗಿ ಪ್ರಯೋಗಿಸಿದ್ದಾರೆ. ಅದರ ನಂತರ ತಮ್ಮನ್ನು ಸಾಹಿತ್ಯ ಕ್ಷೇತ್ರದಲ್ಲಿ ಶ್ರದ್ಧೆಯಿಂದ ದುಡಿದುಕೊಂಡ ಫಲದಿಂದಾಗಿ ೬೩ಕ್ಕೂ ಹೆಚ್ಚಿನ ಸಾಹಿತ್ಯ ಕೃತಿಗಳನ್ನು ರಚಿಸಿದ್ದಾರೆ. ಶ್ರೀನಿವಾಸ ಹಾವನೂರರು ಹೇಳುವಂತೆ ಕನ್ನಡ ಗ್ರಂಥಗಳು ಹೆಚ್ಚಾಗಬೇಕು, ಅನ್ಯಭಾಷೆಗಳಲ್ಲಿ ಇದ್ದ ಉತ್ತಮ ಕೃತಿಗಳನ್ನು ಕನ್ನಡಕ್ಕೆ ತರಬೇಕು. ಎಲ್ಲೆಲ್ಲಿಯೂ ಕನ್ನಡದ ಪ್ರಚಾರವಾಗಬೇಕು ಎಂಬುದು ಶಾಂತಕವಿಗಳ ನರನಾಡಿಗಳಲ್ಲಿ ಸೇರಿಹೋಗಿತ್ತೆಂದು ತಿಳಿಸುತ್ತಾರೆ.

ಕರ್ನಾಟಕ ನಾಟಕ ಕಂಪನಿಯವರಿಗಾಗಿಯೇ ಬರೆದ ನಾಟಕದ ವಿವರಗಳನ್ನು ಈ ರೀತಿ ತಿಳಿಸುತ್ತಾರೆ. ಸಿರಿಯಾಳ ಸತ್ವಪರೀಕ್ಷೆ, ಸುಂದೋಪಸುಂದವಧೆ, ವತ್ಸಲಾಹರಣ, ಕೀಚಕವಧೆ, ಸುಧನ್ವವಧೆ, ಸೀತಾರಣ್ಯಪ್ರವೇಶ, ಪಾರ್ವತಿ ಪರಿಣಯ, ಮೇಘದೂತ, ಶಕುಂತಲೋತ್ಪತ್ತಿ, ಚಂದ್ರಾವಳಿ ಚರಿತ್ರೆ ಹೀಗೆ ಮುಖ್ಯವಾದ ನಾಟಕಗಳನ್ನು ದಾಖಲಿಸಿ ಅವುಗಳಲ್ಲಿ ಕೆಲವನ್ನು ಮುಗಳಿ ಅವರು ಚರ್ಚಿಸಿದ್ದಾರೆ. ೧೮೮೬ರಲ್ಲಿ ಶಿಕ್ಷಕ ವೃತ್ತಿಯಲ್ಲಿ ಅಗಡಿ ಹಳ್ಳಿಗೆ ವರ್ಗಾವಣೆಗೊಂಡಿದ್ದರಿಂದ ಶಾಂತಕವಿಗಳ ವ್ಯಕ್ತಿತ್ವ ಪಕ್ವಗೊಳ್ಳಲು ಉತ್ತಮ ಪರಿಸರ ಸೃಷ್ಟಿಯಾದಂತಾಗಿ ಅಗಡಿಯ ಶೇಷಾಚಲ ಸಾಧುಗಳು, ಅಗಡಿ ದೇಸಾಯಿ, ಶಿಶುನಾಳ ಶರೀಫ್ ಸಾಹೇಬ ಮತ್ತು ಮೂಡಲಪಾಯ ಕಲಾವಿದ ಶರಣಪ್ಪ ಅವರೊಂದಿಗೆ ಸಂವಾದ ಮಾಡುವ ಉತ್ತಮ ಗೆಳೆಯರಾಗಿದ್ದರು. ಮೊದಲ ಹಂತದಲ್ಲಿ ಅನುದಾನದ ಕಡೆ ಗಮನ ಹರಿಸಿದ್ದರು. ಮೇಘದೂತ ವಿರಹತರಂಗ ಮೊದಲಾದ ಸಂಸ್ಕೃತ ಕೃತಿಗಳನ್ನು ಕನ್ನಡಕ್ಕೆ ಅನುವಾದ ಮಾಡಿರುವ ವಿವರ ತಿಳಿಸುತ್ತಾರೆ. ಶಾಂತಕವಿಗಳ 'ರಕ್ಷಿಸು

ಕರ್ನಾಟಕದೇವಿ' ಎಂಬ ಹಾಡು ಅಂದಿನ ಮುಂಬಯಿ ಕರ್ನಾಟಕದಲ್ಲಿ ಬಹಳ ವರ್ಷಗಳ ಕಾಲ ನಾಡಗೀತೆಯಾಗಿತ್ತೆಂದು ಹೇಳಿದ್ದಾರೆ.

೧೯೧೯ರಲ್ಲಿ ಧಾರವಾಡದಲ್ಲಿ ಸಾಹಿತ್ಯ ಸಮ್ಮೇಳನ ನಡೆಯುವ ಕಾಲದಲ್ಲಿ ಕಾರ್ಯಕರ್ತರಿಗೆ ಹಣಕಾಸಿನ ಸಮಸ್ಯೆ ಎದುರಾದಾಗ ಸ್ವತಃ ವಯೋವೃದ್ಧರಾದ ಶಾಂತಕವಿಗಳು ಹಣ ಸಂಗ್ರಹಿಸಲು ಕನ್ನಡಿಗರ ಮನೆಮನೆಗೆ ಹೋಗಿ ಹಣ ಸಂಗ್ರಹಿಸುವಾಗ ಈ ಪದ್ಯವನ್ನು ಹಾಡುತ್ತಿದ್ದರಂತೆ.

"ಬೇಡಲು ಕನ್ನಡ ದಾಸಯ್ಯ ಬಂದಾನೆ
ನೀಡಿರವ್ವಾ ತಡಮಾಡದಲೆ
ಕನ್ನಡ ಮಾತಿನ ತಂದೆತಾಯಿಗಳಿಂದ
ಚೆನ್ನಚೆನ್ನೆಯರೆಲ್ಲ ಹುಟ್ಟಿದಿರಿ"(ಪು.೩೭)

ಎಂಬ ಪದ್ಯವನ್ನು ಪರಿಚಯಿಸುತ್ತಾ ಶಾಂತಕವಿಗಳು ಕನ್ನಡ ದಾಸಯ್ಯ, ರಕ್ಷಿಸು ಕರ್ನಾಟಕದೇವಿ ಇಂಥ ಅವರ ಕವನಗಳಲ್ಲಿ ಆಧುನಿಕ ಭಾವಗೀತದ ಜೀವಸ್ವರಗಳು ಸ್ಪಷ್ಟವಾಗಿ ಕೇಳಿಸುತ್ತವೆ ಎಂದು ಕೀರ್ತಿನಾಥ ಕುರ್ತಕೋಟಿ ಅವರ ಅಭಿಪ್ರಾಯವನ್ನು ದಾಖಲಿಸುತ್ತಾ ಕಾಲಮಹಿಮೆ, ದಾಸಪ್ಪನಾಯಕನ ಫಾರ್ಸು, ಕಾಳಾಸುರ ಮುಂತಾದ ಹಾಸ್ಯಪ್ರಬಂಧ ರಚಿಸಿರುವ ವಿವರಗಳನ್ನು ನೀಡುತ್ತಾರೆ. ೧೯೨೦ರಲ್ಲಿ ಮರಣಹೊಂದಿದ ದಿನಗಳವರೆಗೆ ಜೀವನವೃತ್ತಾಂತವನ್ನು ಒಳಗೊಂಡಿದೆ.

೫.೪. ಅನುವಾದ

'ಹೋಂರೂಲು' ಅಥವಾ ಮಂಕ್ಕುಚ್ಚೋ ಹೆಣ್ಣು ಮನೆತನಕ್ಕಣ್ಣು ಅಥವಾ ಪಾರ್ಲಿಮೆಂಟ್ ಕೊಟ್ರೂ ಪತ್ನೀ ಕೊಡಳು, ಉಪಶೀರ್ಷಿಕೆಯಡಿಯಲ್ಲಿ ಮೂಡಿಬಂದ ಕೈಲಾಸಂರ ಸಾಮಾಜಿಕ ನಾಟಕವಾಗಿದೆ. ಈ ನಾಟಕವನ್ನೇ ಮುಗಳಿ ಅವರು ಉತ್ತರ ಕರ್ನಾಟಕದ ದೇಸಿ ಭಾಷೆಗೆ ಅನುವಾದಗೊಳಿಸಿದ್ದಾರೆ. ಈ ಅನುವಾದ ಕೃತಿಯ ಕುರಿತು ಹಾಗೂ ಅದರ ಸ್ಥಳೀಯ ಭಾಷೆಯ ಕುರಿತು ಮುನ್ನುಡಿಯಲ್ಲಿ ತಾರಾನಾಥರು ತಮ್ಮ ಅಭಿಪ್ರಾಯವನ್ನು ಈ ರೀತಿ ತಿಳಿಸುತ್ತಾರೆ. "ಭಾಷೆಯ ಕುರಿತು ಹಿಂದಿ, ಮರಾಠಿ, ಬಂಗಾಳಿ, ಗುಜರಾತಿ ಇತರ ರಾಜ್ಯಭಾಷೆಗಳಲ್ಲಿ ಅಷ್ಟೊಂದು ಭಾಷಾಭೇದವು ಕಂಡುಬರುವುದಿಲ್ಲ. ಆದರೆ ದಕ್ಷಿಣ ದ್ರಾವಿಡ ಭಾಷೆಗಳಲ್ಲಿ ಈ ಅಂತರವು ಸ್ಫುಟವಾಗಿ ಕಾಣುತ್ತದೆ. ಆದ್ದರಿಂದಲೇ ಉತ್ತರದವರು ನಮಗಿಂತ ಹಲವು ಸಂಗತಿಗಳಲ್ಲಿ ಮುಂದುವರಿದಿದ್ದಾರೆ. ಈ ನಮ್ಮ ಸಾಹಿತ್ಯದಲ್ಲಿ ಭಾಷೆಯ ಭಾವದಲ್ಲಿ ಗದ್ಯಪದ್ಯಗಳಿಗೆ ಗೆಳೆತನವೇ ಇಲ್ಲ. ಗದ್ಯ ಮತ್ತು ವ್ಯವಹಾರ ವಾಙ್ಮಯಗಳಲ್ಲಂತೂ ವಿಪರೀತ ಭೇದ, ಭಾವಾರ್ಥವನ್ನು ನಿರೂಪಿಸುವುದೇ ಭಾಷೆಯ ಬಲ. ಬುದ್ಧಿಯ ಬಲವನ್ನು ಬೆಳೆಸುವುದೇ ಭಾಷೆಯ ಭಾಗ್ಯ ಭಾವವಿಲ್ಲದೆ ಭಾಷೆಯೆಲ್ಲಿಂದ? ಆದ್ದರಿಂದ ಜನಜಂಗುಳಿಯಲ್ಲಿ ಭಾಷಾ ಸಂಸ್ಕಾರಕ್ಕಿಂತ ಮುಂಚೆ ಬುದ್ಧಿಸಂಸ್ಕಾರವನ್ನು ಉಂಟುಮಾಡಬೇಕು. ಆದರೆ ತಿಳಿಯದ ನುಡಿಯಿಂದ ತಜ್ಞತೆಯು

ತಲೆದೋರುವುದೇ? ಯೂರೋಪ್ ಖಂಡದಲ್ಲಿ ಇಂದಿಗೆ ಅಜ್ಞಜನರ ನುಡಿಯಲ್ಲಿ ಬರೆದ ಪುಸ್ತಕಗಳಿಗೇ ಬೇಡಿಕೆ ಹೆಚ್ಚು. ಈ ಸಾಹಿತ್ಯಕ್ಕೆ (Cockney Litrature) 'ಕೂಲಿಕಾರ ವಾಙ್ಮಯ' ಎಂದು ಹೆಸರು. ಇದರ ಮಾರಾಟ ಮಿತಿಮೀರಿ ಆಗುತ್ತದೆ. ಇಂದು ಸಾಹಿತ್ಯ ವಲಯದಲ್ಲಿ ಸುಸಂಸ್ಕೃತ ಭಾಷಾಭಿವೃದ್ಧಿ ಉದ್ದೇಶವಾದರು ಜನತೆಯಲ್ಲಿ ಮುಂಚೆ ವ್ಯವಹಾರ ಭಾಷೆಯ ಮೂಲಕ ವಿಚಾರಗಳನ್ನು ನಿತ್ಯದ ನುಡಿಯಲ್ಲಿಯೇ ಬರೆಯಬೇಕು"(ಪು.೬೭) ಎಂಬ ನಿರ್ಣಯಕ್ಕೆ ಬರುವ ಮುಗಳಿ ಅವರು ಒಂದು ಪ್ರಾಂತೀಯ ಭಾಷೆಯನ್ನು ಇನ್ನೊಂದು ಪ್ರಾಂತೀಯ ಭಾಷೆಗೆ ಅನುವಾದ ಮಾಡಿರು ರೀತಿಯಲ್ಲಿ ಭಾಷಾ ಭಿನ್ನತೆಯನ್ನು ಈ ನಾಟಕದಲ್ಲಿ ಗುರುತಿಸಿರುವುದು ಕಂಡುಬರುತ್ತದೆ.

ಅದೇ ರೀತಿ ಶ್ರೀರಂಗರು ಮುಗಳಿ ಅವರ ಹೋಂರೂಲು ಅನುವಾದ ಕೃತಿಯ ಪ್ರಸ್ತಾವನೆಯಲ್ಲಿ ತಿಳಿಸುವಂತೆ ಮುಗಳಿ ಅವರ ಕೃತಿಯು ಉತ್ತರ ಕರ್ನಾಟಕದ ದೇಸಿಗೆ ಉತ್ತಮವಾಗಿ ಅನುವಾದಗೊಂಡಿದೆ. ಹಳೆಯ ಮೈಸೂರಿನ ಕನ್ನಡವನ್ನು ಉತ್ತರ ಕರ್ನಾಟಕದವರು ಸಾಮಾನ್ಯವಾಗಿ ಎಂದಿನಿಂದಲೂ ಅರ್ಥ ಮಾಡಿಕೊಳ್ಳಬಲ್ಲರು. ಆದರೆ ಇಂದಿಗೂ ಹಳೆಯ ಮೈಸೂರಿನವರಿಗೆ ಉತ್ತರ ಕರ್ನಾಟಕದವರ ಮಾತಿನ ರೀತಿ ಅರ್ಥವಾಗುವುದಿಲ್ಲ; ಎಂದು ಅನೇಕರು(ಸುಶಿಕ್ಷಿತರು ಕೂಡ) ಒಪ್ಪಿಕೊಳ್ಳುತ್ತಾರೆ. ಅಂತಹವರಿಗೆ ಉತ್ತರ ಕರ್ನಾಟಕದ ಭಾಷೆಯ ಪರಿಚಯ ಮಾಡಿಕೊಳ್ಳಲು ಇದೊಂದು ಉತ್ತಮ ಮಾರ್ಗವಾಗುವುದೆಂದು ತಿಳಿಸುತ್ತಾರೆ.

ಹೋಂರೂಲು ಕೈಲಾಸಂರ ಈ ನಾಟಕದಲ್ಲಿ ರಾಮಣ್ಣ(ರಾಮಪುರದ ಲಾಯರ್ ಇತರ ಸಂಘಗಳ ಮೆಂಬರ್), ವೆಂಕಮ್ಮ(ಈತನ ಎರಡನೇ ಹೆಂಡತಿ), ಸುಬ್ಬಮ್ಮ(ತಾಯಿ, ಹಿರಿಯಜ್ಜಿ), ಬೋರ (ಜವಾನ), ನಾರಾಯಣ(ಅಡುಗೆಯವನು) ಇತರ ಪಾತ್ರಗಳ ಮೂಲಕ ಕೈಲಾಸಂರು ಕಟ್ಟಿಕೊಟ್ಟ ನಾಟಕವನ್ನು ಮುಗಳಿ ಅವರು ಉತ್ತರ ಕರ್ನಾಟಕದ ದೇಸಿ ಭಾಷೆಗೆ ಅನುವಾದಗೊಳಿಸಿದ್ದು ಯಶಸ್ವಿ ಪ್ರಯೋಗವೆನಿಸಿದೆ. 'ಬೋರ' ಎಂಬ ಹೆಸರನ್ನು ಬಿಟ್ಟು ಉಳಿದ ಪಾತ್ರಗಳ ಹೆಸರು ಯಥಾವತ್ತಾಗಿ ಬಂದಿವೆ. ಉತ್ತರ ಕರ್ನಾಟಕದಲ್ಲಿ ಬೋರ ಎಂಬ ಹೆಸರು ಬಳಕೆಯಲ್ಲಿ ಇಲ್ಲದ ಕಾರಣ ಮುಗಳಿ ಅವರು ಆ ಹೆಸರನ್ನು ಕೈಬಿಟ್ಟಿರಬೇಕೆನಿಸುತ್ತದೆ. ಅದರ ಬದಲಿಗೆ ಈ ನಾಟಕದಲ್ಲಿ ಭೀಮ ಎಂಬ ಹೆಸರನ್ನು ಬಳಸಿಕೊಂಡಿದ್ದಾರೆ. ಕೃತಿಯಲ್ಲಿ ಬರುವ ಬಹುತೇಕ ಇಂಗ್ಲಿಷ್ ಮಾತುಗಳ ಅರ್ಥವನ್ನು ಕನ್ನಡದಲ್ಲಿ ಟಿಪ್ಪಣಿ ರೂಪದಲ್ಲಿ ಕೊಟ್ಟಿದ್ದರೆ ಇನ್ನಷ್ಟು ಅನುಕೂಲವಾಗುತ್ತಿತ್ತು. ಏಕೆಂದರೆ ಮೂಲಕೃತಿ ಮತ್ತು ಅನುವಾದಿತ ಕೃತಿಯ ಕಾಲವನ್ನು ಅವಲೋಕಿಸಿ ಹೇಳುವುದಾದರೆ, ಹಿಂದಿನ ಆ ಅವಧಿಯಲ್ಲಿ ಇಂಗ್ಲಿಷ್ ಪ್ರಭಾವ ಹೆಚ್ಚಿದ್ದರಿಂದ ಅದರ ಬಳಕೆ ಅಧಿಕಗೊಂಡಿರಬೇಕು. ಆದರೆ ಈಗ ಕನ್ನಡ ಓದಬಲ್ಲವರಲ್ಲಿ ಇಂಗ್ಲಿಷ್ ಕೊರತೆಯಿಂದಾಗಿ ಈ ಮಾತು ಸಮಂಜಸವೆನಿಸುತ್ತದೆ. ಏನೇ ಇರಲಿ ಒತ್ತಕ್ಷರಗಳ ಭೀತಿಯಿಂದ ಕೈಲಾಸಂರ ನಾಟಕಗಳು ಪ್ರಯೋಗಿಸಲು ಹೆದರುತ್ತಿದ್ದರೆನ್ನಲಾದ ಉತ್ತರ ಕರ್ನಾಟಕದ ಶ್ರೀಸಾಮಾನ್ಯರಿಗೆ ಮುಗಳಿ ಅವರ ಅನುವಾದಿತ ಕೃತಿಯು ತುಂಬಾ ಪ್ರಯೋಜನಕಾರಿಯಾಗಿತ್ತೆಂದು ಹೇಳಬೇಕು.

ಕೈಲಾಸಂರ ಹೋಂರೂಲು ನಾಟಕವು ಗಂಭೀರ ಹಾಸ್ಯಮಯವಾದ ಕೌಟುಂಬಿಕ ವೃತ್ತಾಂತವುಳ್ಳದ್ದಾಗಿದೆ. ರಾಮಣ್ಣ ಮನೆಯ ಯಜಮಾನನಾಗಿದ್ದರೂ ಅವನ ಎರಡನೇ ಹೆಂಡತಿ ವೆಂಕಮ್ಮನ ಮಾತಿನಂತೆ ಮನೆಯ ಯಜಮಾನಿಕೆ ನಡೆಯುವಂತದ್ದಾಗಿರುತ್ತದೆ. ಅವಳ ಮಾತಿನಂತೆ ಬೆಳೆದು ನಿಂತ ಪುಷ್ಪಾಳನ್ನು ಅವಳ ಅಕ್ಕನ ಮಗನಿಗೆ ಕೊಡಬೇಕೆಂದು ಯೋಚಿಸಿ ತೀರ್ಮಾನಿಸುತ್ತಾಳೆ. ಈ ವಿಷಯ ತಿಳಿದ ಸುಬ್ಬಮ್ಮಜ್ಜಿ ವೆಂಕಮ್ಮಳ ಮಾತನ್ನು ಒಪ್ಪದೆ ಪುಷ್ಪಾಳನ್ನು ತಮ್ಮ ಮನೆಯ ಸಂಬಂಧಿಕರಾದ ಕಿಟ್ಟಿಗೆ ಕೊಟ್ಟು ಮದುವೆ ಮಾಡಲು ಸೂಚಿಸುತ್ತಾಳೆ. ಆದರೆ ವೆಂಕಮ್ಮ ತಮ್ಮ ತವರುಮನೆ ಸಂಬಂಧಕ್ಕೆ ಕೊಟ್ಟು ಮದುವೆ ಮಾಡಿದರೆ ಆಸ್ತಿಪಾಸ್ತಿ ನಮಗೆ ಬರುತ್ತದೆಂದು ತಿಳಿದಿರುತ್ತಾಳೆ. ಈ ವೃತ್ತಾಂತದಿಂದಾಗಿಯೇ ಮನೆಯಲ್ಲಿ ದಿನನಿತ್ಯ ಜಗಳ, ಜಟಾಪಟಿ ನಡೆಯುತ್ತಿರುತ್ತದೆ. ಈ ವಿಷಯವಸ್ತುವಿನಲ್ಲಿಯೇ ನಾಟಕವು ಹಾಸ್ಯವನ್ನು ಗಂಭೀರತೆಯನ್ನು ಕಾಪಾಡಿಕೊಂಡಿದೆ. ಅಂಥ ಒಂದು ಸಂದರ್ಭದ ವೃತ್ತಾಂತವನ್ನು ತೌಲನಿಕವಾಗಿ ಭಾಷಿಕವಾಗಿ ಕೈಲಾಸಂರ ನಾಟಕದಿಂದ ತಿಳಿಯುವುದು ಮುಖ್ಯವೆನಿಸುತ್ತದೆ.

"ರಾಮಣ್ಣ: (aside to venkamma) ನಿನ್ಧರ್ಮಕ್ಸುಮ್ನಿರೇ ಅಮ್ಹದಕ್ಬಂದಿಧಾಳೆ! Aloud ಹಾಗಲ್ಲಮ್ಮಾ ಈ ಚಪಲಗೈಲ್ಲಾ ಆ(holding his hands aloft) ಮಾಯಾವಧೂ...

ಸುಬ್ಬಮ್ಮ: (ಕೈಮುಗಿಯುತ್ತಾ) ಇನ್ಸಾಕು ದಮ್ಮಯ್ಯಾ! ಇನ್ಸಾಕು ಸುಮ್ನಿರೋ!.. ನಿನ್ಕಣ್ಣ್ಗೆಮ್ಣ್ತೂರಿ.. ಮಂಕು ಮುಚ್ಚಿರೋ ಮಾಯಾವಧೂನಲ್ಲೆಲ್ತೋರಸ್ತೀಯಾ! ದೂಲನಾ? ಅಲ್ಲೆಲ್ಲೂ ಇಲ್ಲ ನಿನ್ಕಣ್ಣೆದ್ರುಗೆ(Pointing to Venkamma) ಅಲ್ನಿಂತಿಧಾಳ್ನೋಡು ಆ ಮಾರಿ! ಇನ್ನಿದಕ್ಮೇಲೆ ನಿಸ್ಸಂಸಾರ್ದ ಗೋಜಿಗೆ ನಾ ಬಂದ್ರೆ ಕೇಳು(holding both hands aloft) ಗಂಡುಮಕ್ಕಳ್ನ ಹೆರೋ ತಾಯಿಗ್ಳ ಹಣೇಬರ್ಹವೆಲ್ಲ ಹೀಗೆ ಹೊಟ್ಟೇಲ್ಹುಟ್ಟಿದ್ಮಕ್ಳಿಂದ ಇದೇ ಅವರಿಗಲ್ವಲ!(ಗದ್ಗದ ಸ್ವರದಿಂದ) ಒಂಭತ್ತಿಂಗ್ಳು ಹೊತ್ತು ಹೆತ್ತು ಎದೆಹಾಲ್ಕೊಟ್ಟು ತನ್ಪ್ರಾಣಕ್ಕಿಂತ್ಲೂ ಜಾಸ್ತಿ ಆಸೆ ಇಟ್ಕೊಂಡು ಸಾಕೋದು! ಯಾಕೆ? ಯಾಕೆ? ಅವರ್ದೊಡ್ಡೋರಾಗುತ಼್ೂನೂ ಇಂಥ(pointing of Venkamma) ಅಣ್ಣಮಗಳಿಗಾಹುತಿ ಅರ್ಪ್ಸೋಕೆ! ಇನ್ಸಾಕ್ನನಗೀ ಇಹಲೋಕದ್ಭಲಗ್ಳೂ!"[೩೪]

ಅದೇ ರೀತಿ ಮುಗಳಿ ಅವರು ಉತ್ತರ ಕರ್ನಾಟಕದ ದೇಸಿ ಭಾಷೆಗೆ ಅನುವಾದಿಸಿದ ಕ್ರಮವು ಈ ರೀತಿ ಇದೆ. "ರಾಮಣ್ಣ: (ವೆಂಕಮ್ಮನಿಗೆ ಮೆಲ್ಲಗೆ) ನಿನ್ನ ಧರ್ಮಕ್ಕ ಸುಮ್ನಿರ ಅವ್ವಾ ಹೆದಕ್ಕ ಬಂದಾಳ (ಸುಬ್ಬಮ್ಮನಿಗೆ ಜೋರಾಗಿ) ಹಂಗಲ್ಲಾವ್ವಾ ಅಪೇಕ್ಷೆಗಳೆಲ್ಲಾ ಆ(ಕೈ ಮೇಲಕ್ಕೆತ್ತಿ) ಮಾಯಾವಧೂ ಸುಬ್ಬಮ್ಮ: (ಕೈಮುಗಿಯುತ್ತಾ) ಇನ್‌ಸಾಕೋ ಮಹಾರಾಯ! ಸುಮ್ನಿರೋ! ನಿನ್ನ ಕಣ್ಣಾಗ ಮಣ್ತೂರಿ ಮಂಕು ಮುಚ್ಚಿರೋ ಮಾಯಾ ವಧೂನ್ನ ಅಲ್ಲೆಲ್ಲ ತೋರಸ್ತೀಯೋ ದೂಲನ? ಜಂತಿಗೀ ಅದೂ ಜಂತಿಗೀ! ಅಲ್ಲೆಲ್ಲೂ ಇಲ್ಲ. ನಿನ್ ಕಣ್ಣೆದುರಿಗೇ ಅಲ್ಲಿ ನಿಂತಾಳ ನೋಡು ಆ ಮಾರಿ! ಅದ ನಿನ್ನ ಮಾಯಾವಧೂ!(ನಿಟ್ಟುಸಿರಿಟ್ಟು) ಇನ್ನಮ್ಯಾಲೆ ನಿನ್ನ ಸಂಸಾರದ ಗೋಜಿಗೆ ನಾಬಂದ್ರ ಕೇಳು(ಕೈಯೆತ್ತಿ) ಗಂಡಸು ಮಕ್ಳನ್ನ ಹಡಿಯೋ ತಾಯಿಗಳ ಹಣೇಬರಾ ಎಲ್ಲಾ ಹೀಂಗ ಹೊಟ್ಟೀಲೆ ಹುಟ್ಟಿದ

ಮಕ್ಕಳಿಂದ ಇದ ಅವರಿಗೆ ಅಗೂ ಫಲ(ಅಳುತ್ತಾ) ಒಂಭತ್ತು ತಿಂಗ್ಳು ಹೊತ್ತು ಹೆತ್ತು ಎದೀಹಾಲು ಕೊಟ್ಟು, ನನ್ನ ಪ್ರಾಣಕ್ಕಿಂತಲೂ ಹೆಚ್ಚು ಆಶಾ ಇಟ್ಟುಕೊಂಡು ಸಾಕೋದ ಯಾಕ? ಯಾಕ? ಅವರು ದೊಡ್ಡವರಾದ ಘಳಿಗ್ಗೆ ಇಂಥಾ ಮಾರಾಯ್ತಿಗಳಿಗ್ಗೆ ಆಹುತಿ ಕೊಡಲಿಕ್ಕೆ! ಇನ್ನಸಾಕು ನನಗ ಈ ಇಹಲೋಕದ ಫಲಗಳೂ!"(ಪು-೪೭) (ವಕ್ರವಾಗಿ ಅಳುವಳು) ಈ ರೀತಿಯಾಗಿ ಭಾಷಾ ವೈವಿಧ್ಯತೆಯನ್ನು ಅರಿಯಬಹುದಾಗಿದೆ.

'ಬಂಡ್ವಾಳ್ವಿಲ್ಲದ ಬಡಾಯಿ' ಟಿ.ಪಿ.ಕೈಲಾಸಂ ಅವರು ರಚಿಸಿರುವ ಈ ನಾಟಕವನ್ನು ಸಹ ಮುಗಳಿ ಅವರು ಉತ್ತರ ಕರ್ನಾಟಕದ ದೇಸಿ ಭಾಷೆಗೆ ಅನುವಾದಗೊಳಿಸಿದ್ದಾರೆ. ಈ ನಾಟಕಗಳನ್ನು ಅನುವಾದಗೊಳಿಸಲು ಮುಂಚಿತವಾಗಿ ಮುಗಳಿ ಅವರು ಈ ರೀತಿ ಹೇಳಿಕೊಂಡಿದ್ದಾರೆ. "ಕೈಲಾಸಂರ ನಾಟಕವು ಧಾರವಾಡದಲ್ಲಿ ಪ್ರಯೋಗಗೊಳ್ಳುತ್ತಿರುವಾಗ ನಾನು ನೋಡುಗನಾಗಿದ್ದೆ. ಕುತೂಹಲದಿಂದ ಒಂದೆರಡು ನಾಟಕಗಳನ್ನು ನೋಡಿದ ಜನ ಬರುಬರುತ್ತಾ ಕೈಲಾಸಂ ಅವರ ನಾಟಕಗಳ ಅರ್ಥವು ತಮಗಾಗದೆಂದು ಕೊರಗತೊಡಗಿದರು ಎಂಬುದನ್ನು ನಾನು ನೋಡಿದ್ದೇನೆ. ಅವರ ನಾಟಕಗಳ ಸ್ವಾರಸ್ಯ ಉತ್ತರ ಕರ್ನಾಟಕದ ಸಾಮಾನ್ಯ ಪ್ರೇಕ್ಷಕನಿಗೆ ತಿಳಿಯುತ್ತದೆಂದು ನನಗೆ ತೋರುವುದಿಲ್ಲ. ಅಲ್ಲದೆ ಮೈಸೂರಿನ ದೇಸಿಯನ್ನು ಸರಿಯಾದ ಉಚ್ಚಾರ ಮತ್ತು ಧಾಟಿಯೊಂದಿಗೆ ಏಕತಾನವಾಗಿ ಉತ್ತರ ಕರ್ನಾಟಕದ ನಟನಟಿಯರು ಅನುಸರಿಸಬಲ್ಲರೆಂದು ಹೇಳುವಂತಿಲ್ಲ. ಅಂಥ ಪ್ರಯತ್ನ ಸ್ವಾಭಾವಿಕವಾಗದೆ ಹೋಗಿರುವುದನ್ನು ನಾನು ಕಂಡಿದ್ದೇನೆ. ಈ ಎರಡು ದೃಷ್ಟಿಯಿಂದ ಇಂಥ ಅನುವಾದವನ್ನು ಮಾಡಲು ಮುಂದಾಗಿದ್ದೇನೆ" ಎಂದು ಮುನ್ನುಡಿಯಲ್ಲಿ ತಿಳಿಸಿದ್ದಾರೆ.

'ಬಂಡ್ವಾಳ್ವಿಲ್ಲದ ಬಡಾಯಿ' ನಾಟಕದಲ್ಲಿ ಕೈಲಾಸಂ ಅವರು ಬಳಸಿರುವ ಪಾತ್ರಗಳಾದ ಅಹೋಬ್ಳು(ಬುಳ್ಳಾಪುರದ ಲಾಯ್ರಿ), ಜೀವು(ಈತನ ಪತ್ನಿ), ಮುದ್ದಣಿ(ಈತನ ಮಗ), ಬಾಳು(ಕ್ಲರ್ಕ್), ಬೋರ, ಕೆಂಪೇಗೌಡ ಇತ್ಯಾದಿ ಪಾತ್ರಗಳು ಬರುತ್ತವೆ. ಈ ಪಾತ್ರಗಳನ್ನೇ ಮುಗಳಿ ಅವರು ಸಹ ಯಥಾವತ್ತಾಗಿ ಬಳಸಿಕೊಂಡಿದ್ದಾರೆ. ಕೈಲಾಸಂ ಅವರು ನಾಟಕಗಳುದ್ದಕ್ಕೂ ಇಂಗ್ಲಿಷನ್ನು ಮಿಶ್ರಭಾಷೆಯಾಗಿ ಬಳಸಿಕೊಂಡಿದ್ದಾರೆ. ಮುಗಳಿ ಅವರು ಸಹ ಪಾತ್ರಧಾರಿಗಳ ಸಂಭಾಷಣೆಯಲ್ಲಿ ಮೂಲನಾಟಕದ ಆಶಯಕ್ಕೆ ಧಕ್ಕೆಯಾಗದ ರೀತಿಯಲ್ಲಿ ಉತ್ತರ ಕರ್ನಾಟಕದ ದೇಸಿಭಾಷೆಗೆ ಅನುವಾದಗೊಳಿಸಿದ್ದಾರೆ. ನಾಟಕದ ಸಂದರ್ಭ ಸನ್ನಿವೇಶಗಳು ಎಲ್ಲಿಯೂ ಬದಲಾವಣೆ ಕಂಡುಬರುವುದಿಲ್ಲ. ಮುಗಳಿ ಅವರ ಈ ಅನುವಾದಿತ ಕೃತಿಯು ಸರಾಗವಾಗಿ ಓದಿಸಿಕೊಂಡು ಹೋಗುವಂತಿದೆ. ಆದರೆ ಕೈಲಾಸಂ ಅವರ ನಾಟಕಗಳು ಗಟ್ಟಿತನದಲ್ಲಿ, ಬಿಗಿಹಿಡಿತದಲ್ಲಿ ಓದಿಸಿಕೊಳ್ಳುವಂತವುಗಳಾಗಿವೆ. ಅಂಥ ಸಂದರ್ಭಗಳನ್ನು ತೌಲನಿಕವಾಗಿ ನೋಡುವುದಾದರೆ, (ಕೈಲಾಸಂ ರಚಿಸಿರುವಂತೆ)

"ಅಹೋಬ್ಳು: (ನೇಪಥ್ಯದಲ್ಲಿ) ಇಷ್ಟೊತ್ನಲ್ಲೇನ್ ಗಲಾಟೆ ನನ್ನ ಛೇಂಬರ್‌ನಲ್ಲಿ?

(ಹಿಂಭಾಗದ ಮಧ್ಯಭಾಗಿಲಲ್ಲಿ ಕಾಣಿಸಿಕೊಂಡು): ಏನ್ನೀನೆ ಜೀವು! ನೀನೇ ಗುಡಿಸ್ತಿದೀಯಾ? Poor Girl! ಯಾಕೆ ಬೋರ ಎಲ್ಲೋದ? ಹನ್ನೆರಡಾರ್ಲ್ಲ ಎಪ್ಪತ್ತೆರ್ಡು ರೂಪಾಯಿ ಬಿಟ್ಟಿಟ್ಟು ಎಲ್ಲಾನೆ ಹೋದಾನು?

ಜೀವು: ಎಪ್ಪತ್ತೆರ್ಡುರ್ರೂಪಾಯಿ! ಯಾರ್ದೆಪ್ಪತೆರ್ಡುರ್ರೂಪಾಯಿ!

ಅಹೋಬ್ಲು: ಸಂಧ್ಯ ಯಾರ್ದೂ ಅಲ್ಲ. ಒಂದ್ವೇಳೆ ನಮ್ಹತ್ರಿದ್ರು, ಅವನಿಗ್ಕೊಟ್ರೆ, ಬೋರಂದು... ಸಂಬಳ ಒಂದು ಸಂವತ್ಸರದು.

ಜೀವು: ಇದೇನ್ಹೊಸಲ್ಮೇಲೇ ನಿಂತ್ಕೊಂಡು ಮಾತಾಡ್ತಿಧೀರಿ? ಒಳ್ಳೇದಲ್ಲ. ಒಳಕ್ಬನ್ನೀಂದ್ರೆ

ಅಹೋಬ್ಲು: Not at all! ನಿನ್ಕೈಲಿ ಪರಕೆ ಇರೋವರ್ಗು ಪ್ರವೇಶಿಸೋದು ಅನುಚಿತ, ಅಪಾಯ! 'ಚಾಮರಂ ಪತಿಭೀಕರಂ' ಇತಿ ನನ್ ಅಮರ! ಆ ಪರ್ಕೆ ಆ ಮೂಲೇಲಿಡು,(ಪ್ರವೇಶಿಸಿ ಜೀವುವನ್ನು ಸಮೀಪಿಸಿ)

ಹೂಂಂ... ಕಾಫಿ ತಗೊಂಡ್ಬಂದ್ಬಿಡು ಬೇಗ, Friends ಗಿಂಡ್ಸ್ ಬಂದ್ಬಿಟ್ಟಾರು.

ಜೀವ: ಕಾಫಿ ಆಗಿದೆ... ಸಕ್ರೇಗೆ ಕಳಿಸಿದೇನಿ ಅಂಗ್ಡೀಗೆ ಬೋರನ್ನ.

ಅಹೊಬ್ಲು: ಅಂಗ್ಡೀಗೆ! ದುಡ್ಡೆಲ್ಲೀದು?

ಜೀವ: (ತಾತ್ಸರದಿಂದ) ಹಯ್ಯೋ ಬುದ್ದೀಂಬೋದು ನಿಮ್ಮೊಬ್ರಿಗೇನೇವೇಯೇ? ಲಾಯ್ರಿ ಹೊಟ್ಟೇಲುಟ್ಟಿ... ಲಾಯ್ರಿ ಕೈಹಿಡ್ದು... ಕಾಸಿಲ್ದೆ ಒಂದಿಷ್ಟು ಸಕ್ರೆ ತರಿಸೋಕ್ಕೊಡ ಗೊತ್ತಿಲ್ದೆ ಹೋಯ್ತೆ ನನಗೆ!?

ಅದೇ ರಾಮಶೆಟ್ಟಿ ಕೇಸು, ರಾಮಶೆಟ್ಟಿ ಕೇಸೂಂತ ಬಡುಕೊಳ್ತಿದ್ರಲ್ಲ ಮೂರ್ತಿಂಗ್ಳು ಹಿಂದೆ, ಅದ್ರ ಹೀರಿಂಗ್ನ ನಾಳೇಗ್ ಹಾಕ್ಕೊಂಡ"[೩೫] ಈ ರೀತಿಯಾಗಿ ಮೂಡಿಬಂದಿದೆ. ಅದೇ ರೀತಿಯಾಗಿ ಮುಗಳಿ ಅವರ ಅನುವಾದದಲ್ಲಿ,

ಅಹೋಬಲರಾಯ(ನೇಪಥ್ಯದಲ್ಲಿ): ಇಷ್ಟೊತ್ತಿನಾಗ ಏನು ಗದ್ದಲದು ನನ್ನ ಖೋಲ್ಯಾಗ?

(ಹಿಂಭಾಗದ ಮಧ್ಯಬಾಗಿಲಲ್ಲಿ ಕಾಣಿಸಿಕೊಂಡು) ಏನು ನೀ ಏನು ಜೀವು! ನೀನ ಕಸ ಉಡಗತೀಯೇನು? Poor girl! ಬಡ ಹುಡುಗಿ! ಯಾಕ? ಬೋರ ಎಲ್ಲಿ ಹೋದ? ಹನ್ನೆರಡಾರಲೆ ಎಪ್ಪತ್ತೆರಡು ರೂಪಾಯಿ ಬಿಟ್ಟಗೊಟ್ಟು ಎಲ್ಲ್ಯಾರ ಹೋದಾನು?

ಜೀವು: ಎಪ್ಪತ್ತೆರಡು ರೂಪಾಯಿ! ಯಾರದು ಎಪ್ಪತ್ತೆರಡು ರೂಪಾಯಿ?

ಅಹೋಬಲ: ಸದ್ಯ ಯಾರಾದರೂ ಅಲ್ಲ. ಒಂದು ವ್ಯಾಳ್ಯಾ ನಮ್ಮ ಹತೀಲೆ ಇದ್ದು, ಅವನಿಗೆ ಕೊಟ್ಟರೆ, ಬೋರಂದು ಪಗಾರ, ಒಂದು ವರ್ಷದ್ದು.

ಜೀವು: ಇದೇನು ಹೊಸ್ತಲಮ್ಯಾಲೆ ನಿಂತುಕೊಂಡು ಮಾತಾಡತಿದ್ದೀರಿ, ಒಳ್ಳೇದಲ್ಲ ಒಳಗ ಬರ್ರಿ ಅಂದೆ.

ಅಹೋಬಲ: Not at all– ಛೇ ಹಂಗೇನೂ ಇಲ್ಲ– ನಿನ್ನ ಕೈಯ್ಯಾಗ ಕಸಬರಗಿ ಇರೋತನಕ ಒಳಗಬರೋದು ಅನುಚಿತ, ಅಪಾಯ! 'ಚಾಮರಂ ಪತಿ ಭೀಕರಂ' ಇತಿ ಅಮರಃ!

ಆ ಕಸಬರಗಿ ಮೂಲ್ಯಾಗಿಡು (ಒಳಗೆ ಬಂದು ಜೀವುವನ್ನು ಸಮೀಪಿಸಿ) ಹೂಂಂ... ಕಾಫಿ ತಗೊಂಡು ಬಂದುಬಿಡು ಲಗೂನೆ! ಫ್ರೆಂಡ್ಸ್ ಗಿಂಡ್ಸ್ ಬಂದುಬಿಟ್ಟಾರು

ಜೀವು: ಕಾಫಿ ಆಗೇದ... ಸಕ್ರೀಗೆ ಕಳಿಸೀನಿ ಅಂಗಡೀಗೆ ಬೋರನ್ನ

ಆಹೋಬಲ: ಅಂಗಡೀಗೆ ದುಡ್ಡೆಲ್ಲೀದು?

ಜೀವು(ತಾತ್ಸಾರದಿಂದ) ಅಯ್ಯೋ! ಬುದ್ಧಿ ಎಂಬೋದು ನಿಮಗೊಬ್ಬರಿಗೇನೆ ಅದು ಏನು? ವಕೀಲರ ಹೊಟ್ಟ್ಯಾಗ ಹುಟ್ಟಿ... ವಕೀಲರ ಕೈಹಿಡಿದು... ಕೈಯ್ಯಾಗ ಕಾಸಿಲ್ದ ಒಂದಿಷ್ಟು ಸಕ್ಕರಿ ತರಿಸಲಿಕ್ಕೆ ಸೈತ ಗೊತ್ತಾಗದ ಹೋತ ನನಗ!(ಭುಕುಟ ರಚನೆಯಿಂದ ಪ್ರಶ್ನಿಸುತ್ತಿರುವ ಪತಿಗೆ) ಅದೇ ರಾಮಸೆಟ್ಟಿ ಕೇಸು, ರಾಮಸೆಟ್ಟಿ ಖಟ್ಲೆ ಅಂತ ಬಡಕೋತಿದ್ದಿರಲ್ಲ ಮೂರು ತಿಂಗಳ ಹಿಂದೆ ಅದರ ಚೌಕಾಸಿ ನಾಳಿಗೆ ಹಾಕ್ಕೊಂಡೆ(ಪು ೩,೪) ಈ ರೀತಿಯಾಗಿ ಮುಗಳಿ ಅವರು ದೇಸಿ ಭಾಷೆಯಲ್ಲಿ ಅನುವಾದಗೊಳಿಸಿರುವುದು ಹೊಸ ಪ್ರಯೋಗವೆನಿಸುತ್ತದೆ.

ಕೈಲಾಸಂ ಅವರ ಈ ನಾಟಕವು ಹಾಸ್ಯ, ಗಂಭೀರ ಪಾತ್ರಗಳ ಸಂಭಾಷಣೆಯಿಂದ ಕೂಡಿದೆ. ಅಹೋಬ್ಲು, ಜೀವು, ಮುದ್ಮಣಿ ಇತ್ಯಾದಿ ಪಾತ್ರಗಳನ್ನೊಳಗೊಂಡ ಒಂದು ಸಾಮಾಜಿಕ ನಾಟಕವಾಗಿದೆ. ಲಾಯರಾದ ಅಹೋಬ್ಲು ಮನೆಯಲ್ಲಿಯ ಅಂದಿನ ಸಾಮಾಜಿಕ ಪರಿಸ್ಥಿತಿಗಳನ್ನು ಅನಾವರಣಗೊಳಿಸುವ ವೇದಿಕೆಯ ರೀತಿಯಲ್ಲಿ ಕಂಡುಬರುತ್ತದೆ. ಲಾಯರ ಅಹೋಬ್ಲು, ಹೆಂಡತಿ ಜೀವು ಮನೆಯಲ್ಲಿ ಅನ್ಯೋನ್ಯತೆ ಕಂಡುಬಂದರೂ ಸಂದರ್ಭಕ್ಕನುಗುಣವಾಗಿ ಗಂಭೀರತೆಯನ್ನೊಳಗೊಂಡಂತೆ ಚಿತ್ರಿತವಾಗಿದೆ. ಕೈಲಾಸಂ ನಾಟಕದಲ್ಲಿ ನಗುವಿನ ಕೆಳಗೆ ಆಳವಾಗಿ ಚಿಂತನೆಗೆ ಎಡೆಮಾಡುವ ಗುಣವನ್ನು ಹೊಂದಿಕೊಂಡು ಹೇಳಬಹುದು. ಮುಖ್ಯವಾಗಿ ಕೈಲಾಸಂ ನಾಟಕದ ಆಶಯದ ಜೊತೆಗೆ ಮುಗಳಿ ಅವರು ಉತ್ತರ ಕರ್ನಾಡಕದ ದೇಸಿ ಭಾಷೆಗೆ ಅನುವಾದಿಸಿರುವ ಕ್ರಮವನ್ನು ಕಂಡುಕೊಳ್ಳಲಾಗಿದೆ.

'ಸಾವಿತ್ರಿ' ಅರವಿಂದರ ಮಹಾಕಾವ್ಯವಾಗಿದೆ. ಅರವಿಂದರು ಭಾರತದ ಪ್ರಮುಖ ದಾರ್ಶನಿಕರಲ್ಲಿ ಒಬ್ಬರಾಗಿದ್ದಾರೆ. Life Divine ಮತ್ತು ಸಾವಿತ್ರಿಯಂತಹ ಮಹಾಕಾವ್ಯ ರಚಿಸಿ ಮುಂಚೂಣಿಗೆ ಬಂದವರಾಗಿದ್ದಾರೆ. ಅವರ ಸಾವಿತ್ರಿ ಮಹಾಕಾವ್ಯವು ಭಾರತೀಯರು ಮೆಚ್ಚುವಂತಹ ಮಹಾಕಾವ್ಯವಾಗಿ ಹೊರಹೊಮ್ಮಿತು. ಅರವಿಂದರಿಗೆ ಈ ಕೃತಿ ರಚಿಸಲು ಮಹಾಭಾರತದ ಅರಣ್ಯಪರ್ವದಲ್ಲಿ ಬಂದಿರುವ ಸಾವಿತ್ರಿ ಸತ್ಯವಾನರ ಕಥಾಂಶದಿಂದ ಎಂಬುದು ತಿಳಿದುಬರುತ್ತದೆ. ಈ ಕೃತಿಯು ಪುರಾಣ ದೃಷ್ಟಿಯಿಂದಲೂ ಮಹತ್ವವನ್ನು ಪಡೆಯುತ್ತದೆ. ಅದಕ್ಕೆ 'A legend and Symbol' ಎಂಬ ಉಪಶೀರ್ಷಿಕೆಯನ್ನು ಕೊಡಲಾಗುತ್ತದೆ. ಅವರ ಧೀರ್ಘವಾದ ಯೋಗಸಾಧನೆ ಮತ್ತು ಪಡೆದ ಸಿದ್ಧಿಗಳಿಂದ ಮನುಕುಲದ ಭೂತ-ವರ್ತಮಾನ-ಭವಿಷ್ಯತ್ ಕಾಲಗಳ ಹಂದರದಲ್ಲಿ ಗದ್ಯ ಪದ್ಯ ಕೃತಿಯಾಗಿ ಅಭಿವ್ಯಕ್ತಗೊಂಡ ಸಾವಿತ್ರಿ ಕೃತಿಯನ್ನು ದ.ರಾ.ಬೇಂದ್ರೆ, ರಂ.ಶ್ರೀ.ಮುಗಳಿ ಅವರು ಕೆಲವು ಆಯ್ದ ಭಾಗಗಳನ್ನು ಅನುವಾದಿಸಿದರೆ, ಕೋ.ಚೆನ್ನಬಸಪ್ಪನವರು ಆಯ್ದ ಉತ್ತರಾರ್ಧವನ್ನು ಅನುವಾದಿಸುತ್ತಾರೆ.

ರಂ.ಶ್ರೀ.ಮುಗಳಿ ಅವರು 'ಅರವಿಂದರ ಸಾವಿತ್ರಿ' ಶೀರ್ಷಿಕೆಯಡಿಯಲ್ಲಿ ಆಯ್ದ ಭಾಗಗಳ ಪದ್ಯರೂಪಕ ಕನ್ನಡ ಅನುವಾದವಾಗಿ ಪ್ರಥಮ ಸಂಪುಟವನ್ನು ೧೯೭೮ರಲ್ಲಿ, ದ್ವಿತೀಯ ಸಂಪುಟವನ್ನು ೧೯೯೧ರಲ್ಲಿ ಮುದ್ರಿಸಿದರೆ (೨೦೦೯ರಲ್ಲಿ ಎರಡು ಸಂಪುಟಗಳನ್ನು ಒಂದರಲ್ಲಿಯೇ ಸೇರಿಸಲಾಗಿದೆ.) ಸ್ವತಃ ಮುಗಳಿ ಅವರೇ ಹೇಳಿಕೊಂಡಿರುವಂತೆ ಅರವಿಂದರ ಮೂಲಕೃತಿಯಲ್ಲಿ ಅರ್ಧಭಾಗವನ್ನು ಅನುವಾದಗೊಳಿಸಿದಂತಾಗಿದೆ. ಉಳಿದ ಅರ್ಧಭಾಗವನ್ನು ಕೋ.ಚೆನ್ನಬಸಪ್ಪನವರು ಅನುವಾದಿಸಿರುವುದು ತಿಳಿದುಬರುತ್ತದೆ. ಈ ಅನುವಾದ ಕೃತಿಯಲ್ಲಿ ಬರುವ ಪ್ರಮುಖ ಕತೆ ಈ ರೀತಿ ಇದೆ. ಸಾವಿತ್ರಿಯು ತಂದೆ ತಾಯಿಯ ಅನುಮತಿ ಪಡೆದು ಸತ್ಯವಾನನ್ನೇ ಪ್ರೀತಿಸಿ ಅವನನ್ನೇ ಮದುವೆ ಮಾಡಿಕೊಳ್ಳುತ್ತಾಳೆ. ಮಗಳ ಇಷ್ಟದಂತೆ ಮದುವೆ ನಡೆಯಿತು ಎನ್ನುವಷ್ಟರಲ್ಲಿಯೇ ನಾರದ ಮುನಿಯು ಅಲ್ಲಿಗೆ ಬಂದು 'ಸತ್ಯವಾನನು ಅಲ್ಪಾಯುಷಿ, ಒಂದೇ ವರ್ಷ ಕಡಿಮೆ ಅವಧಿ ಬದುಕಿ ಸಾಯುತ್ತಾನೆ' ಎಂದು ತಿಳಿಸುತ್ತಾನೆ. ಇದನ್ನು ಒಪ್ಪದ ಸತ್ಯವಾನನ ಪ್ರೀತಿಪಾತ್ರಳಾದ ಸಾವಿತ್ರಿಯು ತಂದೆ, ತಾಯಿ, ಸಂಬಂಧಿಕರ ಯಾರ ಮಾತೂ ಕೇಳದೆ ಸತ್ಯವಾನನೇ ತನ್ನ ಪತಿಯೆಂಬ ದೃಢನಿರ್ಧಾರದಿಂದ 'ದ್ಯುಮತ್ ಸೇನ'ನ ಆಶ್ರಮಕ್ಕೆ ಹೋಗಿ, ಅತ್ತೆ ಮಾವಂದಿರ ಸೇವೆಯಲ್ಲಿ ತೊಡಗಿಕೊಳ್ಳುತ್ತಾಳೆ. ಹಾಗೆಯೇ ನಾರದರು ಹೇಳಿದ ಅಲ್ಪಾಯುಷ್ಯದ ವಿಷಯವನ್ನು ಯಾರಿಗೂ ಹೇಳದೆ ಸಂತೋಷದಿಂದ ಕಾಲ ಕಳೆಯುತ್ತಾಳೆ.

ಸತ್ಯವಾನನ ಆಯುಷ್ಯದ ಕೊನೆಯ ದಿನ ಹತ್ತಿರ ಬಂದಂತೆ, ಸಾವಿತ್ರಿಯು 'ತ್ರಿರಾತ್ರ ವ್ರತ'ವನ್ನು ಕೈಗೊಂಡು ಕೊನೆಯ ದಿನದಂದು ಪತಿಯ ಜೊತೆಗೆ ಕಾಡಿಗೆ ಹೋಗುತ್ತಾಳೆ. ಅನುವಾದ ಹೊತ್ತಗೆಯ ೯, ೧೦, ೧೧, ೧೨ರಲ್ಲಿ ಪತಿ ಸತ್ಯವಾನನ ಸಾವು ಸಂಭವಿಸುವ ವಿಷಯ ಬರುತ್ತದೆ. ಸಾವಿತ್ರಿ ಮತ್ತು ಯಮನ ನಡುವೆ ಸಂಭಾಷಣೆ ನಡೆದು ಅದರಲ್ಲಿ ಸಾವಿತ್ರಿ ಗೆಲ್ಲುತ್ತಾಳೆ. ಸತ್ಯವಾನನು ಬದುಕುತ್ತಾನೆ. ಅಲ್ಲಿಗೆ ಈ ರಸವತ್ತಾದ ಮಹಾಕಾವ್ಯವು ಕೊನೆಗೊಳ್ಳುತ್ತದೆ.

ಅರವಿಂದರ 'ಸಾವಿತ್ರಿ' ಅನುವಾದಿತ ಕೃತಿಯ ಮುನ್ನುಡಿಯಲ್ಲಿ ತಿಳಿಸಿರುವಂತೆ "ಲಯಬದ್ಧಗತಿ, ಶೈಲಿ, ಆತ್ಮದ ಸತ್ಯದರ್ಶನ ಶ್ರೇಷ್ಠತೆ ಈ ಮೂರು ಘಟಕಗಳ ಸಂಯೋಗದಿಂದ ಎಲ್ಲ ಮಹೋನ್ನತ ಕಾವ್ಯವು ಸೃಷ್ಟಿಯಾಗುತ್ತದೆ. ಈ ಮಾನದಂಡವನ್ನು ಸರಿಯಾಗಿ ಅರ್ಥ ಮಾಡಿಕೊಂಡು 'ಸಾವಿತ್ರಿ' ಮಹಾಕಾವ್ಯಕ್ಕೆ ಅನ್ವಯಗೊಳಿಸಿದರೆ ಇದು ಎಂಥ ಶ್ರೇಷ್ಠ ಕೃತಿಯಾಗಿದೆ ಎಂಬುದನ್ನು ಅರಿತುಕೊಳ್ಳಬಹುದು"(ಮುನ್ನುಡಿ XXIII) ಹಾಗೂ "ಸಾವಿತ್ರಿಯ ಕಾವ್ಯಸ್ವರೂಪ ಅನುಭಾವಿಕ ಕಾವ್ಯದ ಲಕ್ಷಣ, ಶೈಲಿ, ಛಂದಸ್ಸುಗಳ ವಿವೇಚನೆ, ಜಾಗತಿಕ ಮಹಾಕಾವ್ಯಗಳ ಸ್ವರೂಪ ವರ್ಣನೆ"ಯನ್ನು ಈ ಕೃತಿ ಒಳಗೊಂಡಿದೆ(ಮುನ್ನುಡಿ XXI).

ಸಾವಿತ್ರಿ ಈ ಮಹಾಕಾವ್ಯವನ್ನು ರಂ.ಶ್ರೀ.ಮುಗಳಿ ಅನುವಾದಿಸಿದ ಶೈಲಿ ಕುರಿತು ತಿಳಿಯಲು, ಸತ್ಯವಾನನು ಸಾಯಬೇಕಾದ ದಿನದಂದು ಸಾವಿತ್ರಿಯ ಮನಸ್ಥಿತಿ ಹೇಗಿತ್ತು ಎಂಬುದನ್ನು ಈ ಪದ್ಯ ತಿಳಿಸುತ್ತದೆ.

"ನಿದ್ದೆ ಕಡಲಿನ ಎದ್ದ ತೆರೆ ದಡಕೆ ಹೋಗುತಿರೆ ಬೀಳುತಲಿ,
ಅರಿದಾದ ಪ್ರತಿಮೆಗಳ ಕನಸುಗಳ ಮೂಲಕವೆ ದಾರಿಯನು ಬೆಳಗಿಸುತ.
ಕಾಣದಿಹ ಸೆಳೆತಕೊಳಗಾಯ್ತವಳ ಅಂತರಂಗದ ಮನೆಯು
ಕತ್ತಲೆಯು ತುಂಬಿರುವ ಕೋಣೆಗಳು ಬೆಳಗಿದವು ಬೇಗದಲಿ,
ನೆನಪು-ಬೆಳಕಿಂಡಿಗಳು ತೆರೆದುಕೊಂಡವು ಸೂಕ್ತ ಸಮಯದಲಿ,
ಅವಳ ಮನೆಬಾಗಿಲನು ಸಾರಿದವು ದಣಿದ ಯೋಚನೆಯ ಕಾಲು"(ಪು.೮) ಮತ್ತು,

"ನನ್ನ ಮೊದಲಿನ ತೀವ್ರ ದುಃಖವಲುಗಿಸದೆನ್ನ ದೃಢಚಿತ್ತವನು;
ಅಳಲಾರದುಳಿದೆನ್ನ ಕಂಬನಿಗಳಾಗಿಹವು ಕಸವುಳ್ಳ ಮುತ್ತುಗಳು"(ದ್ವಿಸಂ. ಪು.೬)

"ತನ್ನ ಸ್ತಬ್ದತೆಯಲ್ಲಿ ತನ್ನ ಗೂಢ ಪ್ರಕಾಶದ ಕ್ಷೇತ್ರಗಳಲಿ
ಭದ್ರವಹ ಕಾವಲಿಗೆ ಒಳಗಾದ ಒಂದು ಚಿಂತನೆಯ ಬಗೆಗೆ ಧೇನಿಸಿದಳು,
ತನ್ನೆದೆಯ ಆಳದಲಿ ಮಿಗಿಲಾದ ಉಷೆಯನ್ನು ಸಾಕಿದಳು!"(ಪು.೩೮೬)

ಈ ರೀತಿಯಾದ ಭಾಷಾ ಶೈಲಿಯನ್ನನುಸರಿಸಿ ಸಾವಿತ್ರಿ ಅನುವಾದಕಾರ್ಯವು ಕೊನೆಗೊಳ್ಳುತ್ತದೆ.

೫.೫. ಸಂಪಾದನೆ

'ಕನ್ನಡ ಕಾವ್ಯ ಸಂಚಯ' ೧೯೭೦ರಲ್ಲಿ ರಂ.ಶ್ರೀ.ಮುಗಳಿ ಅವರು ಸಂಪಾದಿಸಿಕೊಟ್ಟ ಕೃತಿಯಾಗಿದೆ. ಇದನ್ನು ಎಲ್ಲಾ ಶ್ರೀಸಾಮಾನ್ಯರೂ ಓದುವಂತೆ ರಚಿಸಿದ್ದಾರೆ. ಮುಗಳಿ ಅವರು ಪ್ರಸ್ತಾವನೆಯಲ್ಲಿ ಹೇಳಿರುವಂತೆ ಸಮಗ್ರವಾದ ಕನ್ನಡ ಕಾವ್ಯ ಸಂಕಲನವೊಂದು ಈ ಪುಸ್ತಕದಲ್ಲಿ ಪ್ರಕಟವಾಗುತ್ತಿದೆ. ಪ್ರತಿಯೊಂದು ಪ್ರಮುಖ ಭಾಷೆಯು ಕಾವ್ಯಸಂಕಲನವನ್ನು ಪ್ರಕಟಿಸಬೇಕು. ಅದರ ಅನುವಾದವನ್ನು ಇತರ ಭಾಷೆಗಳಲ್ಲಿ ಮುದ್ರಣ ಮಾಡಬೇಕು ಎಂದು ಭಾರತೀಯ ಸಾಹಿತ್ಯ ಅಕಾಡೆಮಿ ಮಾಡಿಸಿರುವ ಯೋಜನೆಯ ಪ್ರಕಾರ ಈ ಸಂಕಲನ ರೂಪುಗೊಂಡಿದೆ. ಹಿಂದೆ ಕನ್ನಡ ಸಾಹಿತ್ಯದಲ್ಲಿ ಸೂಕ್ತಿ ಸುಧಾರ್ಣವ, ಕಾವ್ಯಸಾರದಂತ ಕಾವ್ಯಸಂಕಲನಗಳು ಸಿದ್ಧವಾದವು. ಅವುಗಳಲ್ಲಿ ಸಾಮಾನ್ಯವಾಗಿ ಮಾರ್ಗಕಾವ್ಯಗಳಲ್ಲಿ ಬಂದಿರುವ ಹದಿನೆಂಟು ವರ್ಣನೆಗಳಿಂದ ಪದ್ಯಗಳನ್ನು ಆಯ್ದು ಪವಣಿಸಿದ ಸಂಕಲನವಿತ್ತು. ಹೊಸಕಾಲದಲ್ಲಿ ಪಠ್ಯಪುಸ್ತಕದ ದೃಷ್ಟಿಯಿಂದ ಇಲ್ಲವೇ ಕಾವ್ಯಪ್ರಕಾರದ ದೃಷ್ಟಿಯಿಂದ ಹಲವು ಹಳೆಯ ಕಾವ್ಯಗಳಿಂದ ಆಯ್ಕೆ ಮಾಡಿ ಸಂಕಲನಗಳನ್ನು ಪ್ರಕಟಿಸಲಾಗಿದೆ. ಈ ಸಂಕಲನದಲ್ಲಿ ಮಾತ್ರ ತೀರ ಪ್ರಾರಂಭದ ಶಾಸನಗದ್ಯಗಳಿಂದ ಮೊದಲಾಗಿ ಹಳೆಯ ಮತ್ತು ಹೊಸ ಕಾವ್ಯದ ನಿದರ್ಶನಗಳನ್ನೊಳಗೊಂಡ ವ್ಯಾಪಕವಾದ ಕನ್ನಡ ಕಾವ್ಯ ದರ್ಶನವು ಉಂಟಾಗುತ್ತದೆ. ಕನ್ನಡ ಕಾವ್ಯದ ವಿವಿಧ ಛಂದೋರೂಪಗಳಲ್ಲಿಯ ರಸವತ್ತಾದ ಕೆಲವು ಭಾಗಗಳನ್ನು ಇಲ್ಲಿ ಆಯ್ದುಕೊಂಡಿದೆ. ವಚನ ಸಾಹಿತ್ಯವನ್ನುಳಿದು ಇತರ ಗದ್ಯ ಗ್ರಂಥಗಳಿಂದ ಆಯ್ಕೆ ಮಾಡಿಲ್ಲ. ಜನಪದ ಸಾಹಿತ್ಯದಿಂದಲೂ ಆರಿಸಿಲ್ಲ. ಅವುಗಳ ಸಂಕಲನವು ಪ್ರತ್ಯೇಕವಾಗಿರಬೇಕೆಂದು ತೀರ್ಮಾನಿಸಲಾಗಿದೆ. ಎಂದು ಪ್ರಸ್ತಾವನೆಯಲ್ಲಿ ತಿಳಿಸುತ್ತಾರೆ.

ಮುಗಳಿ ಅವರು ಈ ಸಂಪಾದನಾ ಕೃತಿಯನ್ನು ಮೂರು ಪ್ರಕಾರಗಳಲ್ಲಿ ವಿಂಗಡಿಸಿಕೊಂಡು ಸಂಪಾದಿಸಿದ್ದಾರೆ. ೧. ಹಳಗನ್ನಡ ಕಾವ್ಯ ೨. ನಡುಗನ್ನಡ ಕಾವ್ಯ ೩. ಹೊಸಗನ್ನಡ ಕಾವ್ಯ ಮೊದಲ ಹಳಗನ್ನಡ ಕಾವ್ಯದಲ್ಲಿ ೧೭ ಕವಿಗಳ ಕಾವ್ಯ ಪರಿಚಯ ಮಾಡಿಸಲಾಗಿದೆ ೧. ಶಾಸನ ಸಂಗ್ರಹ ಪದ್ಯವಾದ 'ಕಲಿಯುಗ ವಿಪರೀತನ್'–

'ಸಾಧುಗೆ ಸಾಧು ಮಾಧುರ್ಯಂಗ್ಗೆ ಮಾಧುರ್ಯಂ
ಬಾದಿಪ್ಪ ಕಲಿಗೆ ಕಲಿಯುಗ ।
ವಿಪರೀತನ್ ಮಾದವನೀತನ್ ಪೆಜಿನಲ್ಲ'(ಪು.೧೯)

ಪದ್ಯ ಮೊದಲ್ಗೊಂಡು ಗುಣಮಧುರಾಂಕ, ನಂದಿಸೇನಮುನಿ, ಸರಸ್ವತಿ, ಭರತಕ್ಷೇತ್ರ, ಕರ್ನಾಟಕ ದೇಶ, ಆದಿಗೌಂಡನ ವರ್ಣನೆ, ಕುವರ ಲಕ್ಷ್ಮಣ ವರ್ಣನೆ ೨. ಕವಿರಾಜ ಮಾರ್ಗ, ೩. ಆದಿಪುರಾಣ–ಆದರ್ಶ ಪ್ರಣಯ, ನೀಳಾಂಜನೇಯ ನೃತ್ಯ, ಭರತಬಾಹುಬಲಿ ಸಂಘರ್ಷ, ೪. ಪಂಪಭಾರತ–ಹಸ್ತಿನಪುರ, ಬನವಾಸಿ, ವಸಂತಮಾಸ, ದ್ಯೂತ ಪ್ರಸಂಗ, ದ್ರೌಪದೀ ಮಾನಭಂಗ, ಭೀಷ್ಮಪಟ್ಟ ಪ್ರಸಂಗ, ಕರ್ಣಾವಸಾನ, ದುರ್ಯೋಧನ ಅಂತ್ಯಪ್ರಸಂಗ, ೫. ಆದಿಪುರಾಣ–ಅತ್ತಿಮಬ್ಬೆ ವೈರಾಗ್ಯ, ತಪಃಪ್ರಯಾಣ, ಪಾರ್ವನ ಪುಯ್ಯಲ್, ೬.ಗಧಾಯುದ್ಧ–ಭೀಮಸೇನ ಪ್ರತಿಜ್ಞೆ, ಧೃತರಾಷ್ಟ್ರ ವಚನ, ದುರ್ಯೋಧನನ ವಿಲಾಪ, ದುರ್ಯೋಧನನ ಛಲ, ಭೀಮಸೇನಾಡಂಬರ, ಗದಾಯುದ್ಧ, ದುರ್ಯೋಧನಾವಸಾನ, ೭. ಕರ್ನಾಟಕ ಕಾದಂಬರಿ ಸಂಗ್ರಹ–ಮಹಾಶ್ವೇತೆಯ ಸಂದರ್ಶನ, ಮಹಾಶ್ವೇತೆಯ ವೃತ್ತಾಂತ, ಕಾದಂಬರಿಯ ಪ್ರಥಮ ಸಂದರ್ಶನ, ೮. ಪಂಪರಾಮಾಯಣ ಸೀತಾ ಸ್ವಯಂವರ, ಉಪರಂಭೆಯ ವ್ಯಾಮೋಹ, ಸೀತಾವರೋಹಣ, ರಾವಣನ ಪಶ್ಚಾತ್ತಾಪ, ೯. ಹರಿಹರನ ಗಿರಿಜಾ ಕಲ್ಯಾಣ–ಬೃಹಸ್ಪತಿ ಕಾಮ ಸಂದರ್ಭ, ಕಾಮದಹನ, ರತಿವಿಲಾಪ, ವಟುವೇಷದ ಶಿವನೊಡನೆ ಪಾರ್ವತಿ, ೧೦. ನೇಮಿಚಂದ್ರನ ಲೀಲಾವತಿ–ಹೇಮಂತ ವರ್ಣನೆ, ವಸಂತ ವರ್ಣನೆ, ೧೧. ನೇಮಿಚಂದ್ರನ ಅರ್ಧನೇಮಿ ಪುರಾಣ, ಮಳೆಗಾಲದ ವರ್ಣನೆ, ಕಂಸವಧೆ, ೧೨. ರುದ್ರಭಟ್ಟನ ಜಗನ್ನಾಥ ವಿಜಯ–ಕಂಸನಿಗೆ ಕೃಷ್ಣಭೀತಿ, ವೇಣುರಾಸಕೇಳಿ, ಕೃಷ್ಣನ ಬಾಲಲೀಲೆ, ೧೩. ಜನ್ನನ ಯಶೋಧರ ಚರಿತೆ–ಅಮೃತಮತಿಯ ವ್ಯಾಮೋಹ ವ್ಯಾಮೋಹದ ಪರಿಣಾಮ, ೧೪. ಜನ್ನನ ಅನಂತನಾಥ ಪುರಾಣ–ಚಂಡಸಾಸನ ಕಥೆ, ೧೫. ಆಂಡಯ್ಯ–ಕಬ್ಬಿಗರ ಕಾವಂ–ಕಾಮನಸೈನ್ಯ, ತಪಸ್ವಿಯ ಮುಂದೆ ಕಾಮನ ಶರಣಾಗತಿ, ೧೬. ಷಡಕ್ಷರಿ; ಶಬರಶಂಕರ ವಿಳಾಸಂ–ಕಿರಾತಾರ್ಜುನರ ಸಂವಾದ, ಶಬರನಲ್ಲಿ ಶಿವದರ್ಶನ, ೧೭. ಷಡಕ್ಷರಿ:ರಾಜಶೇಖರ ವಿಳಾಸ–ಪುತ್ರದೋಹದ, ತಿರುಕೊಳವಿನಾಚಿಯ ಶೋಕ. ಇಲ್ಲಿಯವರೆಗೂ ಹಳಗನ್ನಡ ಕಾವ್ಯಗಳನ್ನು ಪರಿಚಯಿಸಿದ್ದಾರೆ. ಇದರ ಮುಂದಿನ ಭಾಗದಲ್ಲಿ ನಡುಗನ್ನಡ ಕಾವ್ಯಕ್ಕೆ ಸಂಬಂಧಿಸಿದಂತೆ ಪರಿಚಯಿಸಿದ್ದಾರೆ.

'ನಡುಗನ್ನಡ ಕಾವ್ಯ'; ವಚನಗಳು–ಅಲ್ಲಮಪ್ರಭು–ಶಿಲೆಯೊಳಗನ ಪಾವಕನಂತೆ, ಉದರದೊಳಗಣ ಪ್ರತಿಬಿಂಬದಂತೆ, ಬೀಜದೊಳಗಣ ವೃಕ್ಷದಂತೆ ಶಬ್ದದೊಳಗಣ ನಿಶ್ಶಬ್ದದಂತೆ ಗುಹೇಶ್ವರಾ ನಿಮ್ಮ

ಶರಣ ಸಂಬಂಧ' ಎಂಬ ಅಲ್ಲಮರ ವಚನಗಳಾದಿಯಾಗಿ ಸಕಲೇಶ ಮಾದರಸ, ಬಸವಣ್ಣ, ಚೆನ್ನಬಸವಣ್ಣ, ಮಹಾದೇವಿಯಕ್ಕ ಇತರ ವಚನಕಾರರು. ೨೦. ಶೂನ್ಯ ಸಂಪಾದನೆ, ೨೧. ಹರಿಹರ:ಬಸವರಾಜದೇವರ ರಗಳೆ, ೨೨. ರಾಘವಾಂಕ: ವೀರೇಶ ಚರಿತೆ ಶಿವಸೈನ್ಯದ ವರ್ಣನೆ, ೨೩. ರಾಘವಾಂಕನ ಸಿದ್ಧರಾಮ ಚರಿತೆ-ಮಲ್ಲಿಕಾರ್ಜುನ ದರ್ಶನ, ಬಿಲ್ಲೇಶ ಬೊಮ್ಮಯನ ಉದ್ಧಾರ, ೨೪. ಹರಿಶ್ಚಂದ್ರ ಕಾವ್ಯ-ವಸಿಷ್ಠ ವಿಶ್ವಾಮಿತ್ರರ ಕಲಹ, ಹರಿಶ್ಚಂದ್ರ ಹೊಲತಿಯರ ಸಂವಾದ, ವಿಶ್ವಾಮಿತ್ರನಿಗೆ ಹರಿಶ್ಚಂದ್ರನ ವಚನ, ಚಂದ್ರಮತಿ ವಿಲಾಪ, ೨೫. ಬಸವ ಪುರಾಣ-ಬಸವೇಶ್ವರನ ಭಕ್ತಿಪ್ರತಿಜ್ಞೆ, ಕೋಳೂರು ಕೊಡಗೂಸಿನ ಕಥೆ, ೨೬. ಕುಮಾರವ್ಯಾಸ ಭಾರತ-ಸಂಭವಪರ್ವ:ಪಾಂಡುವಿನ ಮರಣ, ಸಭಾಪರ್ವ; ದ್ರೌಪದಿಯ ಮಾನಭಂಗ, ವಿರಾಟಪರ್ವ; ಉತ್ತರಕುಮಾರ, ಕರ್ಣಪರ್ವ; ಕರ್ಣಚಾರಿತ್ರ್ಯ, ೨೭. ಪ್ರಭುಲಿಂಗಲೀಲೆ, ೨೮. ಅಲ್ಲಮ-ಸಿದ್ಧರಾಮ ಸಮ್ಮಿಲನ, ೨೯. ನಂಜುಂಡನ ರಾಮನಾಥ ಚರಿತ್ರೆ-ಕರ್ನಾಟಕ ವರ್ಣನೆ, ೩೦. ಪುರಂದರದಾಸ; ಕೀರ್ತನೆಗಳು, ಉಗಾಭೋಗಗಳು, ೩೧. ಕನಕದಾಸ; ಕೀರ್ತನೆಗಳು, ಲಕ್ಷ್ಮೀಶನ ಜೈಮಿನಿ ಭಾರತ-ಚಂಡಿಯ ಕಥೆ, ಸೀತಾಪರಿತ್ಯಾಗ, ಚಂದ್ರಹಾಸ, ೩೪. ನಿಜಗುಣ ಶಿವಯೋಗಿಗಳ ಕೀರ್ತನೆಗಳು, ೩೩. ರತ್ನಾಕರವರ್ಣಿಯ ಭರತೇಶ ವೈಭವ-ಪೂರ್ಣ ಜೀವನದರ್ಶನ, ಸಂಗೀತ ವರ್ಣನೆ, ಆತ್ಮಧ್ಯಾನ, ವೀಣಾಲಾಪ, ಪಾರಣೆ, ಭರತ ಬಾಹುಬಲಿ ಸಂದರ್ಭ, ೨೫. ಚೆನ್ನಬಸವ ಪುರಾಣ-ನಾಡವರ್ಣನೆ, ವಸಂತವರ್ಣನೆ, ೩೬. ಮಹಾಲಿಂಗರಂಗನ ಅನುಭವಾಮೃತ-ತ್ವಂಪದಾರ್ಥ ಶೋಧನೆ, ೩೭. ಸರ್ವಜ್ಞ-ಗುರುಸ್ತುತಿ, ದೈವಸ್ತುತಿ, ದಾನಿ, ಕುಲ-ಜಾತಿ ಖಂಡನೆ, ಲೇಸು ಪದ್ಧತಿ-ನೀತಿಪದ್ಧತಿ, ನಿಂದಾಪದ್ಧತಿ, ೩೮. ಮುಪ್ಪಿನ ಷಡಕ್ಷರಿ -ಸುಭೋದಸಾರ-ನೀನೆ ಅಕಳಂಕ ಗುರು, ಎನ್ನ ಕರೆಯ ಬನ್ನಿ, ೩೯. ಹೊನ್ನಮ್ಮ-ಹದಿಬದೆಯ ಧರ್ಮ, ಪತಿಧರ್ಮ-ಸತಿಧರ್ಮ(ವಿರಹದಲ್ಲಿ), ೪೦. ಹರಿಕಥಾಮೃತಸಾರ-ಕರುಣಾಸಂಧಿ, ಸರ್ವಪ್ರತೀಕ ಸಂಧಿ, ಗೀತಗೋಪಾಲ, ಕೈವಲ್ಯ, ಕಲ್ಪವಲ್ಲರಿ-ಜಗನ್ನಾಥ ದಾಸರ ಕೀರ್ತನೆಗಳು.

ಇಲ್ಲಿಯವರೆಗೆ ನಡುಗನ್ನಡ ಕಾವ್ಯಗಳ ಕುರಿತು ಈ ಸಂಪಾದನ ಕೃತಿ ಸಂಗ್ರಹಿಸಿದ್ದಾರೆ. ಮುಂದಿನ ಭಾಗದಲ್ಲಿ ಹೊಸಗನ್ನಡ ಕಾವ್ಯ ಕುರಿತಂತೆ ಬಾಳಾಚಾರ್ಯ ಸಕ್ರಿ(ಶಾಂತಕವಿ)-ಬೆಳೆದ ಭಾರತದೇಶ, ಬಿ.ಎಂ.ಶ್ರೀ.-ಕನ್ನಡ ತಾಯನೋಟ, ಪಂಜೆ ಮಂಗೇಶರಾವ್-ತೆಂಕಣ ಗಾಳಿಯಾಟ, ಗೋವಿಂದ ಪೈ-ಕೊಳಗುಳದ ಮನವಿ, ಡಿವಿಜಿ-ಹೊಸತನವೆ ಬಾಳು, ಸಾಲಿರಾಮಚಂದ್ರ ರಾಯರು-ಹಂಬಲು, ಮಾಸ್ತಿ ವೆಂಕಟೇಶ ಅಯ್ಯಂಗಾರರು-ಚೆಲುವ ದೇವಿ, ದ.ರಾ.ಬೇಂದ್ರೆ-ಕುಣಿಯೋಣು ಬಾರ, ಬೆಟಗೇರಿ ಕೃಷ್ಣಶರ್ಮ- ಹೊಸದಿನ, ಕುವೆಂಪು- ಸುಗ್ಗಿ ಬರುತಿದೆ, ವಿ.ಸೀತಾರಾಮಯ್ಯ-ಕಸ್ಟೈದೇವಾಯ?, ಚೆನ್ನಮಲ್ಲ ಹಲಸಂಗಿ-ನನ್ನನಲ್ಲ, ಅರ್ಗಂ ಲಕ್ಷ್ಮಣರಾಯರು-ಮೂರ್ಛೆ ಬಂದಿತ್ತು, ಪು.ತಿ.ನರಸಿಂಹಾಚಾರ್-ರಸ ಸರಸ್ವತಿ, ತಿ.ನಂ.ಶ್ರೀಕಂಠಯ್ಯ-ನೇತ್ರನಟಿಯರು, ರಂ.ಶ್ರೀ.ಮುಗಳಿ-ಪಡುವಣದ ಬಿರುಗಾಳಿ, ದಿನಕರ ದೇಸಾಯಿ- ಕಸಗುಡಿಸುವ ಪಂಚಮರು, ಜಿ.ಪಿ.ರಾಜರತ್ನಂ-ರತ್ನನ್ ಪ್ರಪಂಚ, ವಿ.ಕೃ.ಗೋಕಾಕ್-ಊರ್ಣನಾಭಾವತಾರ, ಡಿ.ಎಸ್.ಕರ್ಕಿ- ವೀಣೆ, ಈಶ್ವರ

ಸಣಕಲ್ಲ– ಕೋರಿಕೆ, ಎಸ್.ವಿ.ಪರಮೇಶ್ವರ ಭಟ್ಟ–ವಿಜಯನಗರದ ಗಿಣಿಗಳು, ಪೇಜಾವರ ಸದಾಶಿವ ರಾಯರು–ವರುಣ, ಕೆ.ಎಸ್.ನ.–ಬರಿಗೊಡಗಳಿಗೆ ಸಮಾಧಾನ, ಚೆನ್ನವೀರ ಕಣವಿ– ಮಣ್ಣಿನ ಮೆರವಣಿಗೆ, ಜಿ.ಎಸ್.ಎಸ್.–ಜಡೆ, ಗೋಪಾಲಕೃಷ್ಣ ಅಡಿಗ–ಗೊಂದಲಪುರ, ಗಂಗಾಧರ ಚಿತ್ತಾಲ–ಫೈಲು, ವಿ.ಜಿ.ಭಟ್ಟ–ಅವತಾರ, ಸು.ರಂ.ಎಕ್ಕುಂಡಿ–ಅವಧೂತ, ರಾಮಚಂದ್ರ ಕೊಟ್ಟಲಗಿ–ವಿಜ್ಞಾನ ಮಾನವ, ಸಿದ್ಧಯ್ಯ ಪುರಾಣಿಕ–ಮಾನಸಕೆ ಮೊರೆ, ಅಕಬರ ಅಲಿ–ಗಾಳಿಮರ, ಆರ್.ಸಿ.ಹಿರೇಮಠ–ಇಲ್ಲಿ–ಅಲ್ಲಿ, ಜಯದೇವಿ ತಾಯಿ ಲಿಗಾಡೆ–ಹಿಗ್ಗುತಿದೆ ವಿಶ್ವ, ಕಯ್ಯಾರ ಕಿಞ್ಞಣ್ಣ ರೈ–ಚಿಂತನ, ರಾಮಚಂದ್ರ ಶರ್ಮ– ವೈಶಾಖ ಶುದ್ಧ ಪೂರ್ಣಿಮೆ, ಹೇಮಂತ–ಅಗ್ನಿಗಾಥ, ಚಂದ್ರಶೇಖರ ಪಾಟೀಲ–ನನ್ನ ನೆರಳು, ಇಲ್ಲಿಯ ವರೆಗೆ ಮುಗಳಿ ಅವರು ಕವಿಗಳ ಕಾವ್ಯ ಪರಿಚಯ ಮಾಡಿದ್ದಾರೆ. ಒಟ್ಟು ಈ ಸಂಪಾದನ ಕೃತಿಯಲ್ಲಿ ೮೦ ಕವಿಗಳ ಕಾವ್ಯ ಪರಿಚಯವನ್ನು ಒಳಗೊಂಡು ಬಹುಮುಖ್ಯವಾದ ಸಂಪಾದನಾ ಕೃತಿಯಾಗಿ ಹೊರಹೊಮ್ಮಿದೆ ಎಂದರೆ ತಪ್ಪಾಗಲಾರದು.

'ಕನ್ನಡವೆಂಬ ಮಂತ್ರ'

ಕನ್ನಡವೆಂಬ ಮಂತ್ರ ಕೃತಿಯು ಕನ್ನಡದ ಪ್ರಮುಖ ಕೃತಿಗಳಿಂದ ಸಂಗ್ರಹಿಸಿದ ಸಂಪಾದಿತ ಕೃತಿಯಾಗಿದೆ. ರಂ.ಶ್ರೀ.ಮುಗಳಿ ಅವರು ಅಂದಿನ ಕಾಲಘಟ್ಟದಲ್ಲಿ ಅನ್ಯಭಾಷೆಯ ಪ್ರಭಾವದಿಂದ ಕನ್ನಡ ಭಾಷೆ, ಕನ್ನಡತನ ಅಧಃಪತನ ಹೊಂದುತ್ತಿರುವುದನ್ನು ಅರಿತು ಹೊರಗಿನ ಒಳಗಿನ ಕನ್ನಡಾಭಿಮಾನ ಮೂಡಿಸುವಂತಹ ನಾಡು–ನುಡಿ ಚಿಂತನೆ, ಸಾಹಿತ್ಯಕವಾಗಿ, ಸಾಂಸ್ಕೃತಿಕವಾಗಿ ಅನನ್ಯತೆಯನ್ನು ಮೂಡಿಸುವಂತಹ ಉತ್ತಮ ಅಂಶಗಳನ್ನೊಳಗೊಂಡ ಶಾಸನಗಳ ಆಶಯ, ವಚನಕಾರರ ಆಶಯ, ತತ್ವಪದ, ತ್ರಿಪದಿ, ಕಾವ್ಯಾಂಶಗಳನ್ನೊಳಗೊಂಡ ಉತ್ತಮ ಕೃತಿಯಾಗಿ ಸಂಪಾದಿಸಲು ಮುಂದಾಗುತ್ತಾರೆ.

ಈ ಸಂಪಾದಿತ ಕೃತಿಯನ್ನು ಕುರಿತು ಸ್ವತಃ ಮುಗಳಿ ಅವರೇ ಮುನ್ನುಡಿಯಲ್ಲಿ ಈ ರೀತಿ ಹೇಳುತ್ತಾರೆ. ಕರ್ನಾಟಕದ ಹೊರಗಡೆ ಬೇರೆ ಬೇರೆ ರಾಜ್ಯಗಳಲ್ಲಿ ವಾಸಿಸುವ ಕನ್ನಡದ ಭಾಷಿಕರು ಅಲ್ಲಲ್ಲಿ ನೆಲೆಸಿರುವ ಹೊರನಾಡಿಗರಾದ ಕಾರಣದಿಂದ ಅಲ್ಲಲ್ಲಿಯ ಭಾಷೆ, ಸಂಸ್ಕೃತಿಗಳಿಗೆ ಅವರು ಆದ್ಯಸ್ಥಾನ ಕೊಡಬೇಕು. ಅಲ್ಲಿಯ ಜೀವನ ಪ್ರವಾಹದಲ್ಲಿ ಸಮರಸವಾಗಬೇಕು. ಜೊತೆಗೆ ಕನ್ನಡ ಭಾಷೆ, ಸಾಹಿತ್ಯ, ಸಂಸ್ಕೃತಿಗಳ ನಿಕಟ ಪರಿಚಯ ಹೊಂದಿರಬೇಕು. ಕರ್ನಾಟಕದಲ್ಲಿ ನೆಲೆಸಿದ ಇತರ ಭಾಷಿಕರಿಗೆ ಅನ್ವಯಿಸುವ ಸಾಮಾನ್ಯ ಸೂತ್ರವು ಅವರಿಗೂ ಸಂದರ್ಭಾನುಸಾರವಾಗಿ ಅನ್ವಯಿಸುತ್ತದೆ. ಒಟ್ಟಿನಲ್ಲಿ ಕರ್ನಾಟಕದ ಮಟ್ಟಿಗೆ ಕನ್ನಡವು ತಾಯ್ನುಡಿಯಾದವರಾಗಲಿ ನೆಲೆಸುನುಡಿಯಾದವರಾಗಲಿ ಇವರೆಲ್ಲ ಕನ್ನಡಿಗರು. ಆದರೆ ಇವರು ತಮ್ಮ ಕನ್ನಡತನವನ್ನು ಬರೀ ಹೇಳಿಕೆಗಳಲ್ಲಿ ಬಳಸಿಕೊಳ್ಳದೆ ಅದನ್ನು ಎಲ್ಲ ಸಾಧ್ಯವಿದ್ದ ಪ್ರಯತ್ನಗಳ ಮೂಲಕ ಬೆಳೆಸಿಕೊಳ್ಳುತ್ತಾ ಹೋಗಬೇಕು(ಮುನ್ನುಡಿ VII) ಎನ್ನುವ ನಿಟ್ಟಿನಲ್ಲಿ ಈ ಕೃತಿಯನ್ನು ಸಂಪಾದಿಸುತ್ತಾರೆ.

ಶಾಸನ ಕುರಿತು

"ನೀರಜಜಾತ ವಿಸ್ತರಿಸಿದಂಡಮುಮಂ ಮಣಿಮಾಲೆಯಾಗಿ ಬಿ।
ಸ್ತಾರಿಸಿ ಹಸ್ತದಿಂ ಪಿಡಿದು ತನ್ನ ಸರಣ್ಬುಗುವರ್ಗೆ ಲೇಸುಮಂ।"(ಪು.೭)

ದಾವಣಗೆರೆ ಶಾಸನದಲ್ಲಿ ಬಂದಿರುವ ಸರಸ್ವತಿಯ ವರ್ಣನೆ ಇದು. ಕಾಲ ೧೨೮೦, ಶಾಸನ ಪದ್ಯಮಂಜರಿ, ಪದ್ಯ ೧೪೧೩, ಸಂಪಾದನೆಯ ವಿವರ ಹಾಗೂ ಸರಳವಾದುದನ್ನು ಮಾಡಲಾಗಿದೆ. ಇದೇ ರೀತಿಯಲ್ಲಿ, ವಿಜಯನಗರ ಬುಕ್ಕರಾಯ ಶಾಸನವನ್ನು ಪರಿಚಯಿಸಿ ಕೊಡಲಾಗಿದೆ. 'ಜನಪದ ವಾಣಿಯಲ್ಲಿ ದೇವರು' ಎಂಬ ಶೀರ್ಷಿಕೆಯಡಿಯಲ್ಲಿ ಗರತಿಯ ಹಾಡನ್ನು ಸಂಗ್ರಹಿಸಲಾಗಿದೆ.

"ಮಂದಿ ಮಂದಿ ಎಂದು ಮಂದಿ ನಂಬಲು ಹೋದೆ
ಮಂದಿ ಬಿಟ್ಟಾರ ನಡುನೀರ। ಮಲ್ಲಯ್ಯ
ತಂದಿ ನನಕೈಯ ಬಿಡಬ್ಯಾಡ"(ಪು.೧೧)

ಜನರಿಂದ ವಂಚನೆಗೆ ಒಳಗಾದ ಮಹಿಳೆ ಈ ಕಾವ್ಯದಲ್ಲಿ ತನ್ನ ಮನಸ್ಸಿನ ಅಳಲನ್ನು ಮಲ್ಲಯ್ಯನ ಮೊರೆ ಹೋಗುವ ಮೂಲಕ ನನ್ನನ್ನು ರಕ್ಷಿಸು ದೇವಾ ಎಂದು ಬೇಡಿಕೊಳ್ಳುವ ರೀತಿ ಮೂಡಿಬಂದಿದೆ.

ಹಳೆಯ ಕನ್ನಡನಾಡು, ಕನ್ನಡಿಗರ ಸದ್ಗುಣ ಎಂಬ ಶೀರ್ಷಿಕೆಯಡಿಯಲ್ಲಿ ಕವಿರಾಜ ಮಾರ್ಗ ಕುರಿತು ಸಂಪಾದಿಸಿ ಕೊಟ್ಟಿದ್ದಾರೆ.

"ಕಾವೇರಿಯಿಂದ ಗೋದಾವರಿಯವರೆಗೂ
ಇರುವ ನಾಡೇ ಅದು ಕನ್ನಡದೊಳ್ ಭಾವಿಸಿದ ಜನಪದವು
ವಸುಧಾವಲಯದಲಿ ವಿಲೀನ ವಿಶದ ವಿಷಯ ವಿಶೇಷವು"(ಪು.೧೬)

ಎಂದು ತಮ್ಮದೆಯಾದ ಶೈಲಿಯಲ್ಲಿ ರಚಿಸುತ್ತಾರೆ.

ಕ್ರಿ.ಶ. ೯೦೦ರ ಕವಿರಾಜಮಾರ್ಗಕಾರನು ಕನ್ನಡ ನಾಡು ನುಡಿ ಚಿಂತನೆಯ ಬಗ್ಗೆ ಇರುವ ಈ ಕಾವ್ಯವು ಕಾವೇರಿಯಿಂದ ಗೋದಾವರಿಯವರೆಗೆ ವಿಸ್ತರಿಸಿರುವ ಪ್ರದೇಶದ ಬಗ್ಗೆ ಕನ್ನಡ ನಾಡಿನ ವೀರರ, ಕನ್ನಡ ಮಾತನಾಡುವವರ, ಕವಿಗಳ, ಅಭಿಮಾನಿಗಳ ಕನ್ನಡ ನಾಡಿನ ವೈಭವ ಕುರಿತು ತಿಳಿಸುವಂತಹ ಕಾವ್ಯ ಸಂಪಾದಿಸಿದ್ದಾರೆ.

ಅದೇ ರೀತಿ ಕ್ರಿ.ಶ.೭೫೦ರಲ್ಲಿ ರಚನೆಗೊಂಡಿತೆನ್ನಲಾದ ಬಾದಾಮಿಯ ಕಪ್ಪೆ ಅರೆಭಟ್ಟನ ಶಾಸನವನ್ನು 'ಕಲಿಯುಗ ವಿಪರೀತನು' ಶೀರ್ಷಿಕೆಯೊಂದಿಗೆ ಸಂಪಾದಿಸಿದ್ದಾರೆ.

ಪಂಪನ ಆದಿಪುರಾಣ(೯೪೦) ಕೃತಿಯ 'ಮನುಷ್ಯ ಜಾತಿ ತಾನೊಂದೆ ವಲಂ' ಎಂಬುದರ ಬಗ್ಗೆ ಹಾಗೂ ಪಂಪಭಾರತ (೯೪೦)ದ ಪಂಪನಿಗಿದ್ದ ಬನವಾಸಿ ದೇಶದ ವರ್ಣನೆ, ಅಲ್ಲಿದ್ದ ಪ್ರೀತಿ ಕಾಳಜಿಯ ಬಗ್ಗೆ ಎತ್ತಿ ತೋರಿಸುವ ಕಾವ್ಯವನ್ನು ಸಂಪಾದಿಸಿದ್ದಾರೆ.

'ತಾಯಿಯ ಕಿವಿಮಾತು' ಶೀರ್ಷಿಕೆಯಡಿಯಲ್ಲಿ ವಿಜಯನಗರ ಸಾಮ್ರಾಜ್ಯದ ೧ನೇ ದೇವರಾಯನ ಪ್ರಧಾನಮಂತ್ರಿ ಲಕ್ಷ್ಮೀಧರನಿಗೆ ಅವನ ತಾಯಿ ಚಿಕ್ಕಂದಿನಿಂದಲೇ ಮಗನಿಗೆ 'ಕೆರೆಯಂ ಕಟ್ಟಿಸು ಬಾವಿಯಂ ತೋಡಿಸು ದೇವಾಗಾರಮಂ ಮಾಡಿಸು' ಎಂಬ ವಿಷಯ ಕುರಿತು ಸಂಪಾದಿಸಿದಂತಿದೆ.

ಪುರಂದರದಾಸರು–

ಇರಬೇಕು ಇಲ್ಲದಿರಬೇಕು
ಹರಿದಾಸನು ಸಂಸಾರದೊಳಗೆ(ಪು.೬೧)
ಮತ್ತು
ಮಾನವ ಜನ್ಮ ದೊಡ್ಡದು, ಇದ
ಹಾನಿಮಾಡಲುಬೇಡಿ ಹುಚ್ಚಪ್ಪಗಳಿರಾ(ಪು.೬೪)

ಕನಕದಾಸ–

ಕುಲ ಕುಲವೆಂದು ಹೊಡೆದಾಡದಿರಿ ನಿಮ್ಮ
ಕುಲದ ನೆಲೆಯನೇನಾದರೂ ಬಲ್ಲಿರ(ಪು.೬೫)

ತ್ರಿಪದಿ ರಚನಕಾರನಾದ ಸರ್ವಜ್ಞನ ತ್ರಿಪದಿ ಬಳಕೆಗೊಂಡಿದೆ.

ಸರ್ವಜ್ಞನೆಂಬುವನು ಗರ್ವದಿಂದಾದವನೆ
ಸರ್ವರೊಳೊಂದೊಂದು ನುಡಿಗಲಿತು ವಿದ್ಯದ
ಪರ್ವತವೆ ಆದ ಸರ್ವಜ್ಞ(ಪು.೭೦)

'ಹದಿಬದೆಯ ಧರ್ಮ' ಕೃತಿಯಿಂದ(೧೭೦೦) ಸಂಚಿ ಹೊನ್ನಮ್ಮಳ ಕೆಲವು ವಾಕ್ಯಗಳನ್ನು ಸಂಪಾದಿಸಿದ್ದಾರೆ.

ಪೆಣ್ಣಲ್ಲವೆ ನಮ್ಮನ್ನೆಲ್ಲ ಪಡೆದ ತಾಯಿ
ಪೆಣ್ಣಲ್ಲವೆ ಪೊರೆದವಳು
ಪೆಣ್ಣು ಪೆಣ್ಣೆಂದೇತಕೆ ಬೀಳುಗಳೆವರು
ಕಣ್ಣು ಕಾಣದ ಗಾವಿಲರು.(ಪು.೩೫)

೧೨ನೇ ಶತಮಾನದ ವಚನಕಾರರಾದ ಅಲ್ಲಮಪ್ರಭು, ಬಸವಣ್ಣ, ಅಕ್ಕಮಹಾದೇವಿ ಅವರ ವಚನಗಳನ್ನು ಸಂಪಾದಿಸಿದ್ದಾರೆ.

ಅಲ್ಲಮಪ್ರಭು

* ಕೊಟ್ಟ ಕುದುರೆಯನೇರದೆ ಮತ್ತೊಂದು ಕುದುರೆಯ ಬಯಸುವವರು ವೀರರೂ ಅಲ್ಲ, ದೀರರೂ ಅಲ್ಲ(ಪು.೮೧)

* ಎತ್ತಣ ಮಾಮರ ಎತ್ತಣ ಕೋಗಿಲೆ?
ಎತ್ತಣಿಂದೆತ್ತ ಸಂಬಂಧವಯ್ಯ? (ಪು.೮೨)

ಬಸವಣ್ಣ

* ದೇವಲೋಕ ಮರ್ತ್ಯಲೋಕವೆಂಬುದು ಬೇರಿಲ್ಲ ಕಾಣಿ ಭೋ
* ಲೋಕದ ಡೊಂಕ ನೀವೇಕೆ ತಿದ್ದುವಿರಿ?
* ಕಳಬೇಡ ಕೊಲಬೇಡ, ಹುಸಿಯ ನುಡಿಯಲು ಬೇಡ(ಪು.೮೫)

ಅಕ್ಕಮಹಾದೇವಿ

* ಹಾವಿನ ಹಲ್ಲ ಕಳೆದು ಹಾವನಾಡಿಸಬಲ್ಲಡೆ
ಹಾವಿನ ಸಂಗವೆ ಲೇಸು ಕಂಡಯ್ಯ(೮೬)
* ಬೆಟ್ಟದ ಮೇಲೊಂದು ಮನೆಯ ಮಾಡಿ ಮೃಗಗಳಿಗಂಜಿದೊಡೆಂತಯ್ಯ?
ಸಮುದ್ರದ ತಡಿಯಲೊಂದು ಮನೆಯ ಮಾಡಿ ನೊರೆತೆರೆಗಳಿಗಂಜಿದೊಡೆಂತಯ್ಯ
(ಪು.೮೮)

ಜಾನಪದಕ್ಕೆ ಸಂಬಂಧಿಸಿದಂತೆ 'ತಾಯಿಯ ಹಂಬಲಿಕೆ' ಶೀರ್ಷಿಕೆಯಡಿಯಲ್ಲಿ ರಚಿಸಿರುವ ಗೀತೆ ಈ ರೀತಿ ಇದೆ.

"ಬ್ಯಾಸಗಿ ದಿವಸಾಕ ಬೇವಿನ ಮರತಂಪ
ಭೀಮರತಿಯೆಂಬ ಹೊಳಿ ತಂಪ ಹಡೆದವ್ವ
ನೀ ತಂಪ ನನ್ನ ತವರೀಗಿ ।(ಪು.೧೦೩)

ಮುಗಳಿ ಅವರು ಈ ಕೃತಿಯಲ್ಲಿ ತುಂಬ ಮಹತ್ವಯುತವಾದ ಹಾಗೂ ಓದುಗರು ಮೆಚ್ಚುಗೆ ಪಡುವ ಹಳಗನ್ನಡ ಕಾವ್ಯಗಳನ್ನು, ವಚನಗಳನ್ನು, ಕೀರ್ತನೆಗಳನ್ನು, ಜಾನಪದ ಪದ್ಯಗಳನ್ನು ಈ ಕೃತಿಯಲ್ಲಿ ತುಂಬಾ ಮುತುವರ್ಜಿ ವಹಿಸಿ ಸಂಪಾದಿಸಿದ್ದಾರೆ.

ಕೊನೆ ಟಿಪ್ಪಣಿಗಳು

೧. ಕುಮುದ ಎನ್., ಕನ್ನಡ ನವೋದಯ ಕಾವ್ಯ ವಿಮರ್ಶೆ ಮೇಲೆ ಪಾಶ್ಚಾತ್ಯ ವಿಮರ್ಶೆಯ ಪ್ರಭಾವ, ಚೇತನ ಬುಕ್‌ಹೌಸ್, ಮೈಸೂರು, ೨೦೦೬, ಪುಟ ೧೬೮

೨. ಅದೇ, ಪುಟ ೧೬೮, ೧೬೯

೩. ರಾಘವೇಂದ್ರರಾವ್ ಎಚ್.ಎಸ್.(ಸಂ), ರಂ.ಶ್ರೀ.ಮುಗಳಿ ಸಮಗ್ರ ಸಾಹಿತ್ಯ, ಸಾಹಿತ್ಯ ವಿಮರ್ಶೆ ಸಂಪುಟ-೩ ಭಾಗ-೧, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ೨೦೧೩, ಪುಟ ೧೫೭

೪. ಅದೇ, ಪುಟ ೧೫೭

೫. ಅದೇ, ಪುಟ ೧೬೬

೬. ಬಸವರಾಜ ಕಟ್ಟೀಮನಿ, ಮಧವ ಮಹಿಷಿ(ಸಂ), ರಸಿಕರಂಗದರ್ಶನ, ಮುಗಳಿ ಅವರ ವಿಮರ್ಶನ ಕಲೆ(ಲೇಖನ), ಚಿದಂಬರಾನಂದ, ಉಷಾ ಸಾಹಿತ್ಯ ಮಾಲೆ, ಮೈಸೂರು, ೧೯೬೬, ಪುಟ ೧೯೮

೭. ರಾಘವೇಂದ್ರರಾವ್ ಎಚ್.ಎಸ್.(ಸಂ), ರಂ.ಶ್ರೀ.ಮುಗಳಿ ಸಮಗ್ರ ಸಾಹಿತ್ಯ, ಸಾಹಿತ್ಯ ವಿಮರ್ಶೆ (ಸಂಪುಟ-೩ ಭಾಗ-೧), ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ೨೦೧೩, ಪುಟ ೩೨೯

೮. ಬಸವರಾಜ ಕಟ್ಟೀಮನಿ, ಮಾಧವ ಮಹಿಷಿ(ಸಂ), ರಸಿಕರಂಗದರ್ಶನ-ಸರಸ್ವತಿದರ್ಶನ(ಲೇಖನ), ವೆಂಕಟರಾಮಾಚಾರ್ಯ, ಉಷಾ ಸಾಹಿತ್ಯ ಮಾಲೆ, ಮೈಸೂರು, ೧೯೬೬, ಪುಟ ೧೩೭

೯. ರಾಘವೇಂದ್ರರಾವ್ ಎಚ್.ಎಸ್.(ಸಂ), ರಂ.ಶ್ರೀ.ಮುಗಳಿ ಸಮಗ್ರ ಸಾಹಿತ್ಯ, ಸಾಹಿತ್ಯ ವಿಮರ್ಶೆ (ಸಂಪುಟ-೩ ಭಾಗ-೧), ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ೨೦೧೩, ಪುಟ ೩೪೧

೧೦. ಅದೇ, ಪುಟ ೩೪೬

೧೧. ಅದೇ, ಪುಟ ೩೪೬

೧೨. ತಾಳ್ತಜೆ ವಸಂತಕುಮಾರ, ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪುರಸ್ಕೃತ ಕನ್ನಡ ಲೇಖಕರು, ರಂ.ಶ್ರೀ.ಮುಗಳಿ, ನವಕರ್ನಾಟಕ ಪ್ರಕಾಶನ, ಬೆಂಗಳೂರು, ೨೦೧೧, ಪುಟ ೭೪

೧೩. ರಾಘವೇಂದ್ರರಾವ್ ಎಚ್.ಎಸ್.(ಸಂ), ರಂ.ಶ್ರೀ.ಮುಗಳಿ ಸಮಗ್ರ ಸಾಹಿತ್ಯ, ಸಾಹಿತ್ಯ ವಿಮರ್ಶೆ (ಸಂಪುಟ-೩ ಭಾಗ-೧), ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ೨೦೧೩(ಮುನ್ನುಡಿ)

೧೪. ಅದೇ, ಪುಟ ೨೪

೧೫. ಅದೇ, ಪುಟ ೨೬

೧೬. ಅದೇ, ಪುಟ ೨೬

೧೭. ಅದೇ, ಪುಟ ೫೩

೧೮. ಬಸವರಾಜ ಕಟ್ಟೀಮನಿ, ಮಾಧವ ಮಹಿಷಿ(ಸಂ), ರಸಿಕರಂಗದರ್ಶನ, ಮುಗಳಿ ಅವರ ವಿಮರ್ಶನ ಕಲೆ(ಲೇಖನ), ಚಿದಂಬರಾನಂದ, ಉಷಾ ಸಾಹಿತ್ಯ ಮಾಲೆ, ಮೈಸೂರು, ೧೯೬೬, ಪುಟ ೧೯೫

೧೯. ರಾಘವೇಂದ್ರರಾವ್ ಎಚ್.ಎಸ್.(ಸಂ), ರಂ.ಶ್ರೀ.ಮುಗಳಿ ಸಮಗ್ರ ಸಾಹಿತ್ಯ, ಸಾಹಿತ್ಯ ವಿಮರ್ಶೆ (ಸಂಪುಟ-೩ ಭಾಗ-೧), ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ಪುಟ ೧೩೧

೨೦. ಅದೇ, ಪುಟ ೧೫೬

೨೧. ಅದೇ, ಪುಟ ೩೧೦

೨೨. ತಾಳ್ತಜೆ ವಸಂತಕುಮಾರ, ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪುರಸ್ಕೃತ ಕನ್ನಡ ಲೇಖಕರು, ರಂ.ಶ್ರೀ.ಮುಗಳಿ, ನವಕರ್ನಾಟಕ ಪ್ರಕಾಶನ, ೨೦೧೧, ಪುಟ ೭೬

೨೩. ರಾಘವೇಂದ್ರರಾವ್ ಎಚ್.ಎಸ್.(ಸಂ), ರಂ.ಶ್ರೀ.ಮುಗಳಿ ಸಮಗ್ರ ಸಾಹಿತ್ಯ, ಸಾಹಿತ್ಯ ವಿಮರ್ಶೆ (ಸಂಪುಟ–೩ ಭಾಗ–೧), ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ೨೦೧೩, ಪುಟ ೨೮೭

೨೪. ತಾಳ್ತಜೆ ವಸಂತಕುಮಾರ, ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪುರಸ್ಕೃತ ಕನ್ನಡ ಲೇಖಕರು, ರಂ.ಶ್ರೀ.ಮುಗಳಿ, ನವಕರ್ನಾಟಕ ಪ್ರಕಾಶನ, ೨೦೧೧, ಪುಟ ೭೭

೨೫. ರಾಘವೇಂದ್ರರಾವ್ ಎಚ್.ಎಸ್.(ಸಂ), ರಂ.ಶ್ರೀ.ಮುಗಳಿ ಸಮಗ್ರ ಸಾಹಿತ್ಯ, ಸಾಹಿತ್ಯ ವಿಮರ್ಶೆ (ಸಂಪುಟ–೩ ಭಾಗ–೨), ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ೨೦೧೩, ಪುಟ ೪೫೦

೨೬. ಅದೇ, ಪುಟ ೪೬೦

೨೭. ಅದೇ, ಪುಟ ೪೬೦

೨೮. ಅದೇ(ಮುನ್ನುಡಿ)

೨೯. ಅದೇ, ಪುಟ ೩

೩೦. ಅದೇ, ಪುಟ ೧೩೧

೩೧. ಅದೇ, ಪುಟ ೧೩೧

೩೨. ಬಸವರಾಜ ಕಟ್ಟೀಮನಿ, ಮಾಧವ ಮಹಿಷಿ(ಸಂ), ರಸಿಕರಂಗದರ್ಶನ, ಮುಗಳಿ ಅವರ ವಿಮರ್ಶನ ಕಲೆ(ಲೇಖನ), ಚಿದಂಬರಾನಂದ, ಉಷಾ ಸಾಹಿತ್ಯ ಮಾಲೆ, ಮೈಸೂರು, ೧೯೬೬, ಪುಟ ೧೯೮

೩೩. ಮುಗಳಿ ರಂ.ಶ್ರೀ., ಹೋಂರೂಲ್, ಶ್ರೀರಂಗರ(ಪ್ರಸ್ತಾವನೆ), ಬಿ.ಎಸ್.ನಾರಾಯಣರಾವ್, ಪ್ರಕಾಶ್ ಪ್ರಿಂಟರ್ಸ್, ಬೆಂಗಳೂರು, ೧೯೫೮, ಪುಟ ೧೧

೩೪. ಕೇಶವರಾವ್ ಬಿ.ಎಸ್.,(ಸಂ) ಕೈಲಾಸಂ ಕನ್ನಡ ನಾಟಕಗಳು; ಹೋಂರೂಲ್, ಅಂಕಿತ ಪುಸ್ತಕ, ಬೆಂಗಳೂರು, ೨೦೧೦, ಪುಟ ೩೩೪

೩೫. ಅದೇ, ಪುಟ ೩೩೪

ಅಧ್ಯಾಯ ಆರು

ರಂ.ಶ್ರೀ.ಮುಗಳಿ ಅವರ ಪದ್ಯಶೈಲಿ ಮತ್ತು ಗದ್ಯಶೈಲಿ

ಅಧ್ಯಾಯ ಆರು

ರಂ.ಶ್ರೀ.ಮುಗಳಿ ಅವರ ಪದ್ಯಶೈಲಿ ಮತ್ತು ಗದ್ಯಶೈಲಿ

ರಂ.ಶ್ರೀ.ಮುಗಳಿ ಅವರ ಸಾಹಿತ್ಯ ಬರಹವು ಕಾವ್ಯ, ಕತೆ, ಕಾದಂಬರಿ, ನಾಟಕ, ಲಲಿತಪ್ರಬಂಧ, ವಿಮರ್ಶೆ, ಸಾಹಿತ್ಯ ಚರಿತ್ರೆ, ಅನುವಾದ, ಸಂಪಾದನೆ, ಆತ್ಮಚರಿತ್ರೆ, ಜೀವನಚರಿತ್ರೆಯಂತಹ ಸಾಹಿತ್ಯ ಪ್ರಕಾರಗಳಲ್ಲಿ ರಚನೆಗೊಂಡಿದೆ. ಅವರ ಶೈಲಿಯು ಗಂಭೀರವಾಗಿದ್ದರೂ ಶಬ್ದಗಳ ಆಡಂಬರವಿಲ್ಲದೆ ಹೇಳುವ ವಿಷಯವನ್ನು ನೇರವಾಗಿ ಮತ್ತು ಸರಳವಾಗಿ ಹೇಳುವಂತಹ ಬರಹ ಹೊಂದಿದೆ. ಮುಗಳಿ ಅವರ ಬರಹವೆಂದು ಗಮನಿಸದೆ ಓದಿದರೂ ಇದು ರಂ.ಶ್ರೀ.ಮುಗಳಿ ಅವರ ಬರಹದ ಶೈಲಿಯೆಂದು ಹೇಳಬಹುದಾದ ಮಟ್ಟಿಗೆ ತನ್ನ ಛಾಪು ಮೂಡಿಸಿದೆ. ಒಟ್ಟಿನಲ್ಲಿ ಶೈಲಿಯ ಕುರಿತಂತೆ ಅದರ ಸ್ವರೂಪ ತಿಳಿಯುವುದು ಮುಖ್ಯವೆನಿಸುತ್ತದೆ.

ಶೈಲಿಯೆಂಬುದು ಲ್ಯಾಟಿನ್ ಭಾಷೆಯ 'ಸ್ಟೈಲಸ್' ಎಂಬ ಪದದಿಂದ ಬಂದಿದೆ. ಪ್ರಾಚೀನ ರೋಮನರು ಜೇನುಮೇಣದ ಹಲಗೆಗಳ ಮೇಲೆ ಬರೆಯುವುದಕ್ಕೆ ಉಪಯೋಗಿಸುತ್ತಿದ್ದ ಉಪಕರಣಕ್ಕೆ ಸ್ಟೈಲಸ್ ಎಂಬ ಹೆಸರು ಬಂದಿತೆಂದು ಎಸ್.ವಿ.ರಂಗಣ್ಣನವರು ಅಭಿಪ್ರಾಯ ಪಡುತ್ತಾರೆ. ಶೈಲಿ ಕುರಿತು ಪಾಶ್ಚಾತ್ಯ ವಿದ್ವಾಂಸರಾದ 'ಸ್ಟೆಂಡ್ಹಲ್' ತಿಳಿಸುವಂತೆ, 'ಶೈಲಿಯೆಂಬುದು ಇಷ್ಟು ಒಂದು ಭಾವನೆ ಕೊಡಬಹುದಾದ ಪ್ರತಿಫಲವನ್ನು ಪರಿಪೂರ್ಣವಾಗಿ ಕೊಡುವುದಕ್ಕೆ ಅದಕ್ಕೆ ಅಗತ್ಯವಾದ ಎಲ್ಲ ಪರಿಕರಗಳನ್ನು ಕೂಡಿಸಿಕೊಡುವುದು ಎಂದಿದ್ದಾರೆ.' ಭಾವನೆ ಮನಸ್ಸಿನಲ್ಲಿ ಪ್ರತ್ಯೇಕವಾಗಿದೆ. ಅದರ ಪೂರ್ಣಪ್ರಸಾರಕ್ಕೆ ಅಗತ್ಯವಾದ ಅಂಶಗಳನ್ನು ಒದಗಿಸಿಕೊಡುವುದೇ ಶೈಲಿ. ಮ್ಯಾಥ್ಯೂ ಅರ್ನಾಲ್ಡನ ಪ್ರಕಾರ ಕೆಲವು ಮಾತು ಈ ಅಭಿಪ್ರಾಯದ ಹತ್ತಿರ ಬಂದು ನಿಲ್ಲುತ್ತದೆ. "ತಾನು ಹೇಳಬೇಕಾದುದನ್ನು ಕವಿ ಒಂದು ಭಾವುಕ ಉದ್ರೇಕಾವಸ್ಥೆಯಲ್ಲಿ ಮೇಲ್ಮೆಗೊಳಿಸಿ ರೂಪಾಂತರಪಡಿಸುತ್ತಾನೆ. ತನ್ಮೂಲಕ ಅದಕ್ಕೆ ಗಾಂಭೀರ್ಯವೂ ವೈಶಿಷ್ಟ್ಯವೂ ಕೂಡಿರುತ್ತದೆ. ಇದೇ ನನ್ನ ಅರ್ಥದಲ್ಲಿ ಶೈಲಿ"[1] ಎಂಬ ಅಭಿಪ್ರಾಯಕ್ಕೆ ಬರುತ್ತಾರೆ.

ಒಬ್ಬ ಸಾಹಿತಿಯು ಗದ್ಯದಲ್ಲಾಗಲಿ ಪದ್ಯದಲ್ಲಾಗಲಿ ತನ್ನ ಸಂವೇದನೆಯನ್ನು ಅಭಿವ್ಯಕ್ತಗೊಳಿಸಲು ಬಳಸುವ ಭಾಷೆಯ ವಿನ್ಯಾಸದ ರಾಚನಿಕ ದೃಷ್ಟಿಯಿಂದ ಶೈಲಿ ಎಂದು ಕರೆಯಬಹುದು. ಶೈಲಿ ಎನ್ನುವುದು ಸಾಹಿತ್ಯ ರಚನಾ ವಿನ್ಯಾಸವಾಗಿದೆ. ಅಭಿವ್ಯಕ್ತಿಗೆ ಯಾವ ರೂಪ ಕೊಡಬೇಕು, ಆದಿ-ಮಧ್ಯ-ಅಂತ್ಯಗಳು ಯಾವ ರೀತಿಯಾಗಿರಬೇಕೆಂಬ ವಿವೇಚನೆಯೊಂದಿಗೆ ನಿರ್ಧರಿಸಿ, ಆ ನಿಟ್ಟಿನಲ್ಲಿ

ಸಾಗುವ ಕಥನ ವಿಧಾನವು ಶೈಲಿ ಎನಿಸುತ್ತದೆ. ದಿನನಿತ್ಯ ಜೀವನದ ಸುಖ–ದುಃಖ, ಆಸೆ–ನಿರಾಸೆ, ಏರು–ಇಳಿತ, ಹರ್ಷ–ವಿಷಾದ ಮುಂತಾದ ಅನುಭವಗಳನ್ನು ಕಂಡು ಕೇಳಿದಂತಹ ಘಟನೆಗಳನ್ನು ಪ್ರಭಾವಪೂರ್ಣವಾಗಿ ವ್ಯಕ್ತಪಡಿಸಲು ಪ್ರಯತ್ನಿಸುತ್ತಾರೆ. ಆ ಅಭಿವ್ಯಕ್ತಿ ಸಹೃದಯರ ಮನಸ್ಸಿನಲ್ಲಿ ಪ್ರತಿಫಲಗೊಳ್ಳುತ್ತದೆ. ಇದಕ್ಕೆ ಲೇಖಕನು ಜ್ಞಾನದಿಂದ, ಭಾವದಿಂದ, ಕಲ್ಪನೆಯಿಂದ ಬರುವ ವಿಚಾರಗಳನ್ನು ಅಭಿವ್ಯಕ್ತ ಮಾಡಲು ಮಾರ್ಗವನ್ನು ಹುಡುಕುತ್ತಾನೆ. ಇದೇ ಮಾರ್ಗವು ತಂತ್ರವಾಗಿ ಪರಿಣಮಿಸುತ್ತದೆ. ಲೇಖಕನ ವಿಚಾರಗಳಾಗಲಿ, ಅವನ ಭಾವನೆಗಳಾಗಲಿ, ಅನುಭವಗಳಾಗಲಿ ಸಾಹಿತ್ಯದಲ್ಲಿ ವ್ಯಕ್ತವಾಗಿ, ನಿರೂಪಿತವಾಗುವುದು, ಭಾಷೆಯ ಮೂಲಕವೆ. ಈ ಭಾಷೆಯ ಚೆಲವು ತಂತ್ರ, ಶೈಲಿಯಿಂದ, ವ್ಯಕ್ತಿ ವ್ಯಕ್ತಿಗೆ ಭಿನ್ನವಾಗಿರುತ್ತದೆ.

ಡಿ.ಎಸ್.ಕರ್ಕಿ ಅವರು ಗದ್ಯಶೈಲಿ ಕುರಿತು ಈ ರೀತಿ ತಿಳಿಸುತ್ತಾರೆ. "ವಿಷಯ ವಿವೇಚನೆಗೆ ಭಾಷೆ ಒಂದು ಹೊರೆಯಾಗದಂತೆ ನೋಡಿಕೊಳ್ಳುವ ಎಚ್ಚರ. ತೂಕ ತಪ್ಪಿದ ಭಾಷೆ ಸರಣಿಯಲ್ಲಿ ವಿಚಾರ ತೇಲುವುದಕ್ಕಿಂತ ಮುಳುಗುವುದೇ ಹೆಚ್ಚು. ಹಾಗಾಗಿ ಅನುಭವದ ಅಭಿವ್ಯಕ್ತಿಗಾಗಿ, ತತ್ವದರ್ಶನಕ್ಕಾಗಿ ಶೈಲಿಯೇ ಹೊರತು, ಅದಕ್ಕೆ ಪ್ರತ್ಯೇಕವಾದ ನೆಲೆಯಿಲ್ಲ. ಪ್ರಾಮಾಣಿಕವಾದ ಅನುಭವಕ್ಕೆ ಹೊಂದಿಕೆಯಾಗುವ ಶೈಲಿ ತಾನಾಗಿಯೇ ರೂಪ ಪಡೆಯುತ್ತದೆ. ಮನದ ಇಂಗಿತವನ್ನು ನಿಚ್ಚಳವಾಗಿ ತಿಳಿಸಿದಾಗಲೇ ಶೈಲಿಗೆ ಬೆಲೆಬರುತ್ತದೆ. ಶೈಲಿಯೆಂದರೆ ಶಬ್ದಾಡಂಬರವಲ್ಲ, ಪೊಳ್ಳುವಸ್ತುವಿನ ಸುತ್ತ ಆಕರ್ಷಕವಾಗಿ ಹೆಣೆದ ಶಬ್ದಜಾಲವೂ ಅಲ್ಲ. ನಮ್ಮ ಮನದಲ್ಲಿ ಮೂಡಿದ ಬೆಳಕನ್ನು ಇತರರ ಮನಕ್ಕೆ ಬೀರಬೇಕಾದ ಅನಾವಶ್ಯಕವಾದ ಸಿಂಗಾರವು ಭಾರವಾಗಿ ಪರಿಣಮಿಸಬಹುದು. ಗದ್ಯಶೈಲಿ ನಿರಾಭರಣ ಸುಂದರಿಯಾದಷ್ಟು ಒಳಿತೆಂದು ತೋರುತ್ತದೆ. ಗದ್ಯಕ್ಕೆ ಸಾಮಾನ್ಯವಾಗಿ ಬೇಕಾದುದು ಸರಳತನ"[೨] ಎಂದಿರುವ ಮುಗಳಿ ಅವರು ಅವರ ಗದ್ಯದ ಬರಹಗಳಾದ ಕತೆ, ಕಾದಂಬರಿ, ನಾಟಕ, ವಿಮರ್ಶೆ, ಲಲಿತಪ್ರಬಂಧಗಳಲ್ಲಿಯೂ ಕಂಡುಬರುತ್ತದೆ.

'ಭಾರತೀಯರ 'ರೀತಿ'ತತ್ವ ಪಾಶ್ಚಾತ್ಯರ 'ಶೈಲಿ'ತತ್ವಕ್ಕೆ ಸಂವಾದಿಯಾಗಿಯೇ ಇದೆ ಎಂದು ಹೇಳುವಂತಿದೆ. ರೀತಿಯನ್ನು ವಾಮನ ವಿಶಿಷ್ಟ ಪದರಚನಾ ರೀತಿ ಎಂದು ಸೂತ್ರೀಕರಿಸಿದ್ದು ಪಾಶ್ಚಾತ್ಯರು ಶೈಲಿಯನ್ನು ವ್ಯಕ್ತಿ ವೈಶಿಷ್ಟ್ಯದ ದೃಷ್ಟಿಯಿಂದ, ಭಾಷಾಗುಣದ ಆಧಾರದ ಮೇಲೆ ವಿಂಗಡಿಸಿದರೆ, ಭಾರತೀಯರು ಮೊದಲು ಪ್ರಾದೇಶಿಕ ದೃಷ್ಟಿ ರೀತಿಯನ್ನು ಗೌಡಿ, ವೈದರ್ಭಿ, ಪಾಂಚಾಲಿ ಎಂದು ವರ್ಗೀಕರಿಸಿದರು. ಕಾಲಕ್ರಮೇಣ ಈ ರೀತಿಯ ಪ್ರಭೇದಗಳು ತಮ್ಮ ಬೌಗೋಳಿಕ ಸ್ವರೂಪದಿಂದ ಬಿಡಿಸಿಕೊಂಡು ನಿರ್ದಿಷ್ಟವಾದ ಕಾವ್ಯಮಾರ್ಗವನ್ನು ಸೂಚಿಸುವಂತಾಯಿತು. ಮುಖ್ಯವಾಗಿ ಭಾರತೀಯರ ರೀತಿಗಿಂತಲೂ ಪಾಶ್ಚಾತ್ಯರ ಶೈಲಿ ಹೆಚ್ಚು ಅರ್ಥಪೂರ್ಣವೆಂದು ಹೇಳಬೇಕು. ಏಕೆಂದರೆ ಶೈಲಿ ಎಂಬ ಪದದಲ್ಲಿ ಕವಿಯ ಸೃಜನಶೀಲ ಅಂಶವೂ ಸೇರಿಕೊಂಡಿದೆ. ಆದರೆ "ರೀತಿಯಲ್ಲಿ ಸೃಜನಶೀಲದ ಅಂಶ ಗೋಚರವಾಗದೆ ಅದು ಕೇವಲ ಅಭಿವ್ಯಕ್ತಿ ಕ್ರಿಯೆಗೆ, ರೂಪಾಂಶಕ್ಕೆ ಸಂಬಂಧಿಸಿದ ಮಾತುಗಳಾಗಿ ನಿಂತುಕೊಳ್ಳುತ್ತದೆ. ಆದ್ದರಿಂದ ಶೈಲಿ ಎಂಬ ಪದವು

ಕವಿಯ ವೈಯಕ್ತಿಕ ಶೀಲ ಸ್ವಭಾವವನ್ನೂ ಮತ್ತು ಅಭಿವ್ಯಕ್ತಿಯನ್ನು ಒಳಗೊಂಡಿರುವುದರಿಂದ ಹೆಚ್ಚು ಅರ್ಥಪೂರ್ಣವಾಗಿದೆ."[೩] ಅದೇ ರೀತಿ "ಶೈಲಿ ಎಂದರೆ ಬರಹಗಾರರ ಅಭಿವ್ಯಕ್ತಿಯ ವೈಲಕ್ಷಣವಾಗಿದೆ. ಬರಹಗಾರನ ಯಶಸ್ಸಿಗೆ ಅವರ ಅಭಿವ್ಯಕ್ತಿಯ ವಿಧಾನವು ಮಹತ್ವದ ಪಾತ್ರ ವಹಿಸುತ್ತದೆ. ಗದ್ಯಶೈಲಿಯು ಪದ್ಯವನ್ನು ಬಿಟ್ಟು ಉಳಿದ ಸಾಹಿತ್ಯ ಪ್ರಕಾರಗಳಾದ ಕತೆ, ಕಾದಂಬರಿ, ನಾಟಕ, ಲಲಿತಪ್ರಬಂಧ ಹಾಗೂ ಸೃಜನೇತರ ಸಾಹಿತ್ಯಗಳಲ್ಲಿನ ನಿರೂಪಣೆಗೆ ಸಂಬಂಧಿಸಿದೆ"[೪] ಎಂದಿದ್ದಾರೆ.

ಪದ್ಯಶೈಲಿ

ಈ ಹಿನ್ನೆಲೆಯಲ್ಲಿ ಮುಗಳಿ ಅವರ ಪದ್ಯಶೈಲಿಯನ್ನು ವಿವೇಚಿಸುವುದು ಅವಶ್ಯವಾಗಿದೆ. ಮುಗಳಿ ಅವರ ಒಟ್ಟು ಕಾವ್ಯವನ್ನು ಅವಲೋಕಿಸಿದಾಗ ಪ್ರಕೃತಿಯ ವರ್ಣನೆ, ನಾಡುನುಡಿಯ ಚಿಂತನೆ, ಭಕ್ತಿ, ಸೌಂದರ್ಯ, ಸುಖ–ದುಃಖ, ಶಾಂತಿ, ವ್ಯಕ್ತಿನಿಷ್ಠ ಅಂಶಗಳು, ಗಾಂಧೀಕರಣ ಮತ್ತು ಗ್ರಾಮೋದ್ಧಾರಗಳಂತಹ ಅಂಶಗಳನ್ನು ಗುರುತಿಸಲಾಗಿದೆ. ಮುಗಳಿ ಅವರ ಮೊದಲ ಕವನ ಸಂಕಲನ 'ಬಾಸಿಗ'ದಲ್ಲಿ 'ಬಂದಾರ ತಂದಾರ ಮಂದಾರ ಹೂವಾ' ಆ ಕಾಲಕ್ಕೆ ತುಂಬಾ ಜನಪ್ರಿಯಗೊಂಡ ಕವಿತೆ. ಈ ಸಂಕಲನ ಪ್ರಕಟಗೊಂಡ ಕಾಲಕ್ಕೆ ಕವಿಗಳು ತಮ್ಮ ತಮ್ಮ ಕವಿತೆಗಳನ್ನು ತಾವೇ ಹಾಡುತ್ತಿದ್ದರೆಂಬುದು ತಿಳಿದುಬರುತ್ತದೆ. ಅವರ ಪದ್ಯಶೈಲಿಯ ಕುರಿತಂತೆ ಮೊದಲ ಭಾಗದ ಕವಿತೆಗಳು ಪ್ರಕೃತಿ ವರ್ಣನೆಗೆ ಮೀಸಲಾದಂತಿವೆ. ಅದರಿಂದ 'ಒಂದು ನೋಟ' ಕವನದಲ್ಲಿ ಈ ರೀತಿಯಾಗಿ ಅಭಿವ್ಯಕ್ತಿಗೊಂಡಿದೆ.

"ಭೂಮಿಯ ತಬ್ಬಿ ಬಂದಿತು ಬಿಸಿಲು
ವ್ಯೋಮದಿ ಹಬ್ಬಿ ನಿಂದಿತು ಮುಗಿಲು
ಮೊದಲಿನ ಮಳೆಯ ನವರಸದಿಂದ
ಒದವಿದೆ ನೆಲದ ಹಸುರಿನ ಚೆಂದ
ನೋಡಿದ ಕಡೆಗೆ ಎಳಎಳಗರಿಕೆ
ಮೂಡಿದೆ ಕಣ್ಣೊಳು ತುಂಬುತ ತುಳುಕೆ
ಇಂದೇ ಸೃಷ್ಟಿಯ ಮೊದಲಿನ ದಿನವೊ
ಎಂದೆನಿಸುವುದೀ ಹೊಸಹೊಸತನವೊ"[೫]

ಈ ರೀತಿಯಾದ ಪದ್ಯಶೈಲಿಯನ್ನೊಳಗೊಂಡ ಈ ಕವನವು ಸುರ್ಯೋದಯ ಚೆಲುವಿಕೆಯನ್ನು ಆಹ್ವಾನಿಸಿಕೊಳ್ಳುವ ಕವಿಯ ಮನಸ್ಸಿನ ಭಾವನೆ ಅಭಿವ್ಯಕ್ತಗೊಂಡಿದೆ. ಹಾಗೆಯೇ ಮಳೆಗಾಲದ ಮೊದಲ ತುಂತುರು ಮಳೆಯಿಂದಾಗಿ ಪ್ರಕೃತಿಯ ಹಸಿರುಮಯವಾಗಿರುವ ಸೌಂದರ್ಯವನ್ನು ಕಂಡ ಕವಿಯ ಮನಸ್ಸು ಹರ್ಷಗೊಳ್ಳುವಂತದ್ದು ಈ ಕವನದಲ್ಲಿ ಬಿಂಬಿತವಾಗಿದೆ. 'ಮರದುದಿಯ ಕೋಗಿಲೆ' ಕುರಿತಂತೆ ರಚಿಸಿರುವ ಕವನ ಈ ರೀತಿ ಇದೆ.

"ಬೆಳಗುಜಾವದಿ ನಿದ್ರೆ ತಿಳಿದೆದ್ದಿರಲು ನಾನು ಕುಹೂಕುಹೂ
ಎಂಬ ದನಿ ಮರಮರಳಿ ಮರದಿಂದ ಸೂಸಿ ಬರೆ
ಈ ಭೂಮಿ ಹೊಸಲೋಕದಂತಾಗಿ ಹಿಗ್ಗಿನಲಿ
ಮುಳುಗಿಹೆನು ನಿನ್ನ ಕಾಣುವ ಬಯಕೆ ಹೆಚ್ಚಿತಾಗಿ
ಕಿರಿದಾದ ಕಿರಿಮೈಯು, ರೂಪದಲಿ ಹಿರಿದಲ್ಲ
ಬಣ್ಣದಲಿ ಕಾಗೆಮರಿ ಎಂದೆನಿಪ ನಿನ್ನಯಾ
ಕೊರಳಲ್ಲಿ ಎಂಥ ಸವಿ: ಯಾರದನು ನೀಡಿದರು?
ಕುಕಿಲುತಿಹೆ ಕುಕಿಲುತಿಹೆ ದಣಿಯದೆಲೆ ಕುಕಿಲುತಿಹೆ"[೬]

ಮುಗಳಿ ಅವರು ತಮ್ಮ ಕವನಗಳಲ್ಲಿ ಚಿಕ್ಕ ಚಿಕ್ಕ ವಿಷಯವನ್ನೇ ಕಾವ್ಯವಸ್ತುವಾಗಿ ಮಾಡಿಕೊಂಡು ಕಾವ್ಯ ರಚಿಸಿರುವುದು ಅವರ ಬಹುತೇಕ ಕವನಗಳಿಂದ ತಿಳಿದುಬರುತ್ತದೆ. ಅವರು ಕೋಗಿಲೆಯ ಬಗ್ಗೆ ರಚಿಸಿರುವ ಈ ಕವನದಲ್ಲಿ ಮರದ ತುದಿಯ ಟೊಂಗೆಯ ಮೇಲೆ ಕುಳಿತು ಕುಹೂ ಕುಹೂ ಎಂದಾಗ ಕೋಗಿಲೆ ಕೂಗಿದ ಧ್ವನಿ ಕೇಳಿ ಕವಿಯ ಮನಸ್ಸು ಹರ್ಷಗೊಂಡು ಈ ಕವನ ರಚಿಸಿದಂತೆ ಭಾಸವಾಗುತ್ತದೆ. ಚಿಕ್ಕದಾಗಿ ಕಾಗೆಯ ಮರಿಯಂತೆ ಕಾಣಿಸುವ ಈ ಪಕ್ಷಿಗೆ ಆ ಧ್ವನಿ ಕೊಟ್ಟವರು ಯಾರು ಎಂಬಂತೆ ಕವಿಯು ತನ್ನನ್ನು ತಾನು ಪ್ರಶ್ನಿಸಿಕೊಳ್ಳುವಂತೆ ಕವನದ ಶೈಲಿ ಅಭಿವ್ಯಕ್ತಗೊಂಡಿದೆ.

'ನೆಲದ ಕರೆ' ಕವನದಲ್ಲಿ ಮಳೆಯನ್ನು ಕುರಿತಂತೆ ಕವಿಯ ಪದ್ಯಶೈಲಿ ಈ ರೀತಿ ರಚನೆಗೊಂಡಿದೆ.

"ಬಾ ಮಳೆಯೆ ಇಳಿದು ಬಾ ಮಳೆಯೆ!
ಮುಗಿಲ ಛತ್ತಿನ ಮುತ್ತಿನೆಳೆಯೆ
ಹೊಲಬಯಲ ಹೊಸಹಸುರು ಮೊಳೆಯೆ
ಜೀವರಾಶಿಯ ಜೀವಕಳೆಯೆ
ನೀನಿರದೆ ಇದು ಎಂಥಕಾರು!
ಬಿರಿದ ನನ್ನೆದೆಗೆ ಹೌಹಾರು
ಜನಜಂಗುಳಿಗೆ ತಾರುಮಾರು
ಅನ್ನ ಬರದೆಣಿಕೆ ನೂರಾರು
ನಿನ್ನ ಮೊದಲಿನ ಮುತ್ತಸವಿಗೆ
ನಾ ಹೆತ್ತ ಹಸುರು ಬೆಳೆಯಣುಗೆ
ಎಳತನದಿ ಮುಪ್ಪಡಗಿ ಮುಟಿಗೆ
ಆಗುತಿದೆ ಸರಿಸಾಟಿ ರವದಿಗೆ"[೭]

ಹದವರಿತ ಭೂಮಿಗೆ ಮಳೆಯಿಂದ ಮಾತ್ರ ಪ್ರಕೃತಿ ಸೌಂದರ್ಯಗೊಳ್ಳಲು ಸಾಧ್ಯ ಎಂದು ತಿಳಿದ ಕವಿಯ ಮನಸ್ಸು, ಮಳೆಯರಾಯನಿಗೆ ಮೊರೆಯಿಟ್ಟು ಬೇಡುವ ರೀತಿಯಲ್ಲಿ ಈ ಕವಿತೆ ಮೂಡಿಬಂದಿದೆ. ರೈತರ ಹೊಲ ಗದ್ದೆಗಳಿಗೆ ಸಕಲ ಜೀವಸಂಕುಲಗಳಿಗೆ ಮಳೆ ನೀರೆ ದೊಡ್ಡ ಆಸರೆಯಾಗಿರುವುದರಿಂದ ಕವಿಯು ಮಳೆರಾಯನನ್ನು ಮಳೆಸುರಿಯುವಂತೆ, ಪರಿ ಪರಿಯಾಗಿ ಬೇಡಿಕೊಂಡಂತೆ ಅವರ ಪದ್ಯಶೈಲಿಯಿಂದ ತಿಳಿದುಬರುತ್ತದೆ.

'ಕನ್ನಡದ ವೀರಶ್ರೀ' ವ್ಯಕ್ತಿಕೇಂದ್ರಿತ ಕವನವು ಬಿ.ಎಂ.ಶ್ರೀ. ಅವರನ್ನು ಕುರಿತು ರಚಿಸಿರುವ ಕವನವಾಗಿದೆ.

"ಕನ್ನಡದ ವೀರಶ್ರೀ ಕಣ್ಣ ಮರೆಯಾಯಿತಿಂದು
ನಾಡು ನುಡಿಯ ಹೆಗ್ಗಳಿಕೆಯನ್ನು ತನ್ನ ನರನರದ
ನಾಳದಲಿ ನರೆತುಂಬಿ ತಪದ ಗವಿಯಿಂದೆದ್ದು
ತನ್ನ ದುಃಖವ ತುಳಿದು, ಹೆರರ ತುಳಿತಕ್ಕೆ ಸಿಕ್ಕು
ಹುಡಿಯಾದ ನಾಡಿಗರ ಕೆಚ್ಚನೆಚ್ಚರಿಸಲಿಕೆ
ಕನ್ನಡದ ಬಾವುಟ ಹಿಡಿದೆತ್ತಿ ಹಾಡುತ್ತ
ತಾಯ ನೋಟವ ಕಂಡು ಏಳೆಂದು ಬಾಳೆಂದು
ಹುರಿಗೊಂಡು ಕರೆಯುತ್ತ ಹಗೆಯೊಡನೆ ಹೋರುತ್ತ
ಮಿರಿಮಿಂಚಿ ಹಿರಿಮೊಳಗಿ ಮಳೆಗರೆದು ತಂಪೆರೆದ
ಕ್ನಡದ ವೀರಶ್ರೀ ಕಣ್ಣ ಮರೆಯಾಯಿತಿಂದು"೮

ಅಧ್ಯಾಪಕರು, ಉನ್ನತ ಆಡಳಿತಾಧಿಕಾರಿಗಳು, ಕವಿಗಳು, ವಿದ್ವಾಂಸರು ಆಗಿದ್ದ ಬಿ.ಎಂ.ಶ್ರೀ. ಅವರು ಧಾರವಾಡದಲ್ಲಿ ೧೯೧೧ರಲ್ಲಿ 'ಕನ್ನಡ ಮಾತು ತಲೆ ಎತ್ತುವ ಬಗೆ' ಎನ್ನುವ ಉಪನ್ಯಾಸ ಕನ್ನಡ ನಾಡು ನುಡಿಯ ಬೆಳವಣಿಗೆಗೆ ಕಾರಣವಾಯಿತು. ಅವರ 'ಇಂಗ್ಲಿಷ್ ಗೀತಗಳು' ಅನುವಾದ ಕೃತಿಯಿಂದ ಜನಮನ್ನಣೆ ಪಡೆದ ಕವಿಯು ಮಡಿದ ಸಂದರ್ಭದಲ್ಲಿ ಅವರ ಸ್ಮರಣೆಗೆ ಈ ಕವಿತೆ ರಚಿಸಿದ್ದಾರೆ.

'ಬಯಲು ಮಾವು' ಮುಕ್ತಛಂದಸ್ಸಿನಲ್ಲಿ ರಚನೆಗೊಂಡ ಈ ಕವಿತೆ ಮುಗಳಿ ಅವರ ವ್ಯಕ್ತಿತ್ವ ದರ್ಶನ ನೀಡಿದಂತಿದೆ.

"ಬಾಡಿಲ್ಲ ಇದರ ಎಲೆ ಎಲೆಯಚ್ಚ ಹಸಿರು
ನಾಲ್ಕು ದಿಕ್ಕಿಗೆ ತುಂಬಿ ನಿಂತಿದೆ ರಸರಸದ ರಂಜಣಿಗೆಯಾಗಿ
ಏನಿದರ ತುಂಬುಕಳೆ, ನೋಟಕ್ಕೆ ಹಿರಿಹಬ್ಬ!
ಯಾರು ತಿದ್ದಿ ಮಾಡಿದರಿದರ ದುಂಡುತನದಂದವನ್ನು?

ಭೂರಮಣಿಯ ತಲೆತುರುಬಿನಂತೆ ದೂರದಿಂದ ತಲೆದೋರುವುದು
ಹತ್ತಿರಕೆ ಬರೆ ಹೂಕಾಯಿಗಳ ಹೊರೆ ಹೊರೆಯ ಅಲಂಕಾರವನುಗೈದು
ಪ್ರಸಾಧನ ಕಲೆಯ ಪರಮರಸಿಕೆ ಭೂರಮಣಿಯೇ
ಕಣ್ಣಿದಿರು ಎದ್ದು ನಿಂತಂತೆ ತೋರುವುದು"[೯]

ಬಟ್ಟಬಯಲಿನಲ್ಲಿ ನಿಂತ ಮಾವಿನ ಮರವು ಉಗ್ರವಾದ ಬಿಸಿಲಿನ ತಾಪವನ್ನು ತಡೆದುಕೊಂಡು ಅದು ತನ್ನ ಕರ್ತವ್ಯನಿಷ್ಠವಾಗಿ ಬೆಂದು ಬಳಲಿದರೂ ದಾರಿಯಲ್ಲಿ ಹೋಗುವವರಿಗೆ ತಂಪಾದ ನೆರಳನ್ನು ನೀಡುವುದಲ್ಲದೆ ಅದು ಸವಿಯಾದ ಫಲವನ್ನು ನೀಡುತ್ತದೆ. ಈ ಕವನಕ್ಕೆ ಅನ್ವಯವಾಗುವಂತೆ ಮುಗಳಿ ಅವರು ಉದ್ಯೋಗ ಬಯಸಿ ಧಾರವಾಡ ಗೆಳೆಯರ ಗುಂಪಿನಿಂದ ಅಗಲಿ ದೂರದ ಸಾಂಗ್ಲಿಗೆ ಹೋಗಿ ಅಲ್ಲಿಯೇ ನೆಲೆಸಿ ಅಧ್ಯಾಪನ ಕಾರ್ಯ ನಿರ್ವಹಿಸಿದ್ದಾರೆ. ಅದರ ಜೊತೆಗೆ ಸಾಹಿತ್ಯ ಕೃಷಿಯಲ್ಲಿ ತಮ್ಮನ್ನು ತೊಡಗಿಸಿಕೊಂಡು ಕನ್ನಡ ಸಾಹಿತ್ಯಲೋಕಕ್ಕೆ ಉಪಯುಕ್ತವಾದ ಕಾಣಿಕೆ ನೀಡಿದ್ದಾರೆ.

'ಮಣಿಮಾಲೆ' ಕವನ ಸಂಕಲನವು ೧೦೯ ಮುಕ್ತಛಂದಸ್ಸುಗಳನ್ನು ಒಳಗೊಂಡಿದೆ.

"ತಾಯಿಯ ಬಸಿರಿನಿಂದ ಹೊರಬಂದೊಡನೆ
ಹೊಮ್ಮುವುದು ಮುಖ ಕಿವುಚಿ ಕೀಸರುಬಾಸರಾದ ಅಳು
ಬುವಿಯ ಬಸಿರನು ಸೇರುವ ಸಮಯ ಬರೆ ಮರಳುವುದು
ಬಿಟ್ಟು ಹೋಗಲಾರದ ನಟ್ಟುಮಮತೆಯ ಅಳು"[೧೦]

ಈ ಕವನದಲ್ಲಿ 'ಅಳು' ಎಂಬುದನ್ನು ಪ್ರೀತಿಯ ಸಂಜ್ಞೆಯಾಗಿ ಬಳಸಿಕೊಂಡು, ತಾಯಿಯ ಗರ್ಭದಿಂದ ಜನಿಸಿದ ಮಗುವು ಮುಖ ಕಿವುಚಿಕೊಂಡು ಅಳುತ್ತಾ ಭೂಮಿಯೆಂಬ ಹೊಸ ಪ್ರಪಂಚಕ್ಕೆ ಬಂದನಂತರ ತಾಯಿತನದ ಮಮತೆ, ಪ್ರೀತಿ, ಕಾಳಜಿಯು ಇನ್ನಷ್ಟು ಹೆಚ್ಚಾಗುತ್ತಾ ಹೋಗುತ್ತದೆ ಎಂದು ಈ ಪದ್ಯದಿಂದ ಕಂಡುಕೊಳ್ಳಲಾಗಿದೆ.

"ನೆಲವೊಂದೆ ನೀರೊಂದೆ ಮೈಮನವೊಂದೆ ಆದರೂ
ಒಡಕು-ಬಿರುಕು ಹರಿಸಿಹುದು ನೆತ್ತರ ಹೊಳೆಗಳನು
ಬೇರೆತನವಳಿದೊಂದರಲಿ ನಾವು ಹಲವೆಂಬರಿವು ಇರವಾಗೆ
ಸಂತಸದ ಕಣ್ಣಿಂದ ಹರಿಸುವುದು ಕಂಬನಿಯ ತೊರೆಗಳನು"[೧೧]

ಧರ್ಮ-ಧರ್ಮಗಳಲ್ಲಿ, ಜಾತಿ-ಜಾತಿಗಳಲ್ಲಿ ಮೇಲುಕೀಳೆಂಬ ನಾನಾ ಕಾರಣಗಳಿಗೆ ಒಡಕು-ಬಿರುಕುಗಳು ಹುಟ್ಟಿಕೊಂಡು ಗುಂಪುಗಾರಿಕೆ, ಹೊಡೆದಾಟ-ಬಡಿದಾಟಗಳ ಘರ್ಷಣೆಗಳಿಂದಾಗಿ ಸಾವು-ನೋವು ಸಂಭವಿಸಿರುವ ದೃಶ್ಯಗಳನ್ನು ನೋಡಿದ ಕವಿಮನಸ್ಸು ದುಃಖಿತಗೊಂಡಿರುವಂತದ್ದು ಈ ಕವನ ಪದ್ಯಶೈಲಿಯಿಂದ ತಿಳಿದುಬರುತ್ತದೆ. ಒಟ್ಟಿನಲ್ಲಿ ಮುಗಳಿ ಅವರ ಪದ್ಯಶೈಲಿಯು

ಆಡಂಬರವಿಲ್ಲದೆ ಸರಳವಾಗಿ, ಸ್ಪಷ್ಟವಾಗಿ ಭಾಷೆಯಲ್ಲಿ ಅಭಿವ್ಯಕ್ತಗೊಂಡಿದೆ. ಅವರ ಬಹುತೇಕ ಕವನಸಂಕಲನಗಳು ಕಾವ್ಯದ ಸೌಂದರ್ಯ ದೃಷ್ಟಿಯಿಂದ, ಸಾಹಿತ್ಯಕ ಮೌಲ್ಯಗಳ ದೃಷ್ಟಿಯಿಂದ ಬಹಳಷ್ಟು ಎತ್ತರಮಟ್ಟಕ್ಕೆ ಏರದಿದ್ದರೂ ಮಧ್ಯಮ ಗುಣವನ್ನು ಕಾಪಾಡಿಕೊಂಡಂತವುಗಳಾಗಿವೆ ಎಂಬುದನ್ನು ಅವರ ಪದ್ಯಶೈಲಿಯಿಂದ ಕಂಡುಕೊಳ್ಳಲಾಗಿದೆ.

ಗದ್ಯಶೈಲಿ

ಮುಗಳಿ ಅವರ ಗದ್ಯಶೈಲಿಯ ಕುರಿತಂತೆ ಅವರ ಕತೆ, ಕಾದಂಬರಿ, ನಾಟಕ, ಲಲಿತಪ್ರಬಂಧ, ವಿಮರ್ಶೆ, ಕನ್ನಡ ಸಾಹಿತ್ಯ ಚರಿತ್ರೆ, ಅನುವಾದ, ಸಂಪಾದನೆಯಂತಹ ಕೃತಿಗಳಲ್ಲಿ ಅವರ ಬರಹದ ಶೈಲಿಯನ್ನು ಕಂಡುಕೊಳ್ಳಲಾಗಿದೆ. ಅದರಲ್ಲಿ ಬಡತನ, ಹಸಿವು, ನಿರುದ್ಯೋಗ, ಅನಕ್ಷರತೆ, ಲೈಂಗಿಕ ಕಿರುಕುಳ, ವೇಶ್ಯಾವಾಟಿಕೆ, ಕೋಪ, ವ್ಯಂಗ, ದೌರ್ಜನ್ಯ ವಿಷಯವಸ್ತುಗಳನ್ನು ಒಳಗೊಂಡಂತೆ ಕನ್ನಡನಾಡಿನ ಬಗ್ಗೆ ಅಪಾರವಾದ ಕಾಳಜಿ ಪ್ರೀತಿಯನ್ನೊಳಗೊಂಡು ಅವರ ಸಂವೇದನೆಗಳು ಕೃತಿಗಳಾಗಿ ರಚನೆಗೊಂಡಿವೆ. ಅವರ ಗದ್ಯ ಶೈಲಿಯು ಕಾಲ್ಪನಿಕ ಕಥಾವಸ್ತುವಿಗಿಂತ ವಾಸ್ತವಿಕತೆ ಹತ್ತಿರವಾಗಿ, ಭಾಷೆ ಜೀವಂತವಾಗಿ ಯಾವ ಆಡಂಬರವಿಲ್ಲದೇ ಸಹಜ ಸರಳ ನೇರಚಿಂತನೆಯಿಂದ ಒಡಮೂಡಿವೆ. ಅಂಥ ಒಂದು ಕಥೆಯ ಸಂದರ್ಭ ಈ ರೀತಿ ಮೂಡಿಬಂದಿದೆ. ಭಗವಂತರಾಯರ ಮತ್ತು ಹೆಂಡತಿಯಾದ ಸುಶೀಲಬಾಯಿ ಜೊತೆಗೂಡಿ ಆದರ್ಶ ವ್ಯಕ್ತಿಯಾದ ನೀರಿನ ನಾರಪ್ಪನಿಗೆ ಚಿನ್ನದ ಸರಿಗೆ ಕದ್ದ ಆಪಾದನೆಯನ್ನು ಹೊರಿಸುತ್ತಾರೆ. ಇದರಿಂದ ಮನನೊಂದ ನೀರಿನ ನಾರಪ್ಪ ಅವರ ಮನೆ ಬಿಟ್ಟು ಹೊರಡಲು ಮುಂದಾಗುತ್ತಾನೆ. "ನಿಮ್ಮ ಆಶೀರ್ವಾದ ಇರಲಿ ಮಾರುತಿರಾಯ ಸೀತಾದೇವಿ ಸೇವಾ ಮಾಡಿದಂತ ನಿಮ್ಮದು ಮಾಡೀನಿ. ಏನಾದರೂ ತಪ್ಪಾಗಿದ್ದರ ಹೊಟ್ಯಾಗ ಹಕ್ಕೊಳ್ಳರಿ ಎಂದು ಹೊರಟನು. ತಾನು ಜೋಪಾನ ಮಾಡಿದ ಹುಡುಗರನ್ನು ಉಬ್ಬಿದ ಕುತ್ತಿಗೆ ಸಿರದಿಂದ ಬೀಳ್ಕೊಂಡನು. ಅವೆರಡೂ ಹೊಯ್ಯೆಂದು ಅತ್ತವು. ನಾರಪ್ಪ ತನ್ನ ಸಾಮಾನಿನ ಹಸಿಬೆಯನ್ನು ಹೆಗಲಿಗೆ ಹಾಕಿ ಮನೆಯ ತಲೆಬಾಗಿಲನ್ನು ದಾಟಿದನು. ನೆರೆಹೊರೆಯ ಜನ ನೋಡಿ ಕೊರಗಿದರು. ಅದರಲ್ಲಿ ಒಬ್ಬ ಕೇಳಿದ ಎಲ್ಲಿಗೆ ಹೊಂಟಿ ನಾರಪ್ಪ? ಎಲ್ಲಿ? ಎಲ್ಲಿಂದ ಬಂದೆ ಅಲ್ಲಿಗೆ. ಕಟ್ಟೀಕಲ್ಲು ಕಟ್ಟಿಗೆ ಕೂತಿತು. ಹಳ್ಳಿಕೋತಿ ಶಾರದೂರಿಗೆ ಬಂದರ ಹುಳ್ಳಿಕಟಿಗಿಲೆ ಹೊಡೆದಟ್ಟಿದರಂತ ಎಂದು ನಗೆ ಮಾಡಿ ನಾರಪ್ಪ ನಡೆದನು. ಊರ ತುದಿಯವರೆಗೆ ಅವನನ್ನು ಜನ ಗುಂಪುಗಟ್ಟಿ ಕಳಿಸಲು ಹೋದರು. ಅವನ ನಗೆ ಮಾತಿಗೆ ಇನ್ನೂ ಕೂಡ ತಡೆಯಿರಲಿಲ್ಲ. ಆದರೆ ಈಗ ಆ ಮಾತು ನಗೆಯನ್ನೂ ನೋವನ್ನೂ ಕೂಡಿಯೆ ಹುಟ್ಟಿಸುತ್ತಿತ್ತು. ನಾರಪ್ಪ ಹೋದ ದಿನ ಸುಶೀಲಬಾಯಿಯವರು ಹೊಟ್ಟೆತುಂಬ ಊಟ ಮಾಡಿದ್ದರೂ ಮಾಡಿರಬಹುದು, ಆದರೆ ಮುದ್ದೆಬ್ಬೆಹಳ್ಳಿಯ ಒಂದು ಪಿಳ್ಳೆಯೂ ಸುಖದಿಂದ ಉಣ್ಣಲಿಲ್ಲ."[೨] ಈ ರೀತಿಯ ನಿರೂಪಣೆಯನ್ನು ಅವರ ಗದ್ಯಶೈಲಿಯಿಂದ ಆಯ್ದುಕೊಳ್ಳಲಾಗಿದೆ.

ಅದೇ ರೀತಿ 'ವಿತಂತು-ವೇಶ್ಯ!' ಕತೆಯಲ್ಲಿ ಸಮಾಜದ ಅನಿಷ್ಟ ಪದ್ಧತಿಯಾದ ವೇಶ್ಯಾ ಬದುಕಿಗೆ ತನ್ನನ್ನು ತಾನು ಒಗ್ಗಿಸಿಕೊಂಡ ಪರಿಯನ್ನು ಮುಗಳಿ ಅವರು ಈ ರೀತಿ ಚಿತ್ರಿಸಿದ್ದಾರೆ. ಇಲ್ಲಿನ ನಿರೂಪಣೆ ಶೈಲಿಯು ವೇಶ್ಯೆಯೇ ತಿಳಿಸಿದಂತಿದೆ. "ಈಗ ನಾನು ವೇಶ್ಯೆ. ಮೊದಲೆಂದೂ ಹಾಡದ ಕೊರಳು ಈಗ ಗುಣುಗುಣಿಸುತ್ತಾ ಮೊದಲು ಡೊಂಕದ ಹುಬ್ಬು ಮಣಿಯದ ಮೈ ಈಗ ಎಷ್ಟು ಸೋಗಿನ ಮುರಿಗೆ ಹೊಡೆಯಹತ್ತಿದವು. ನಾನು ಇಲ್ಲದ ಚೆಲುವೆಯಾದೆ. ಕನ್ನಡಿಯಲ್ಲಿ ವೀಳ್ಯಮೆದ್ದ ತುಟಿಯ ಕೆಂಪನು ಎಣ್ಣೆ ಬಸಿಯುವ ಸೀರಾದ ಕುರುಳುಗಳನ್ನು ನೋಡಿ ನೋಡಿ ನನಗೆ ನಾನೆ ಮುದ್ದಿಡುವಂತಾಗಿದೆ. ನನ್ನ ಮೈ ನನ್ನ ದೇವರು ನನ್ನ ಗುಡಿ ನನ್ನ ಸುಖವಿಲ್ಲಿಯೇ ಇರಲು ಅವರೇಕೆ ಇವರೇಕೆ ಎಂದುಕೊಂಡೆ"[೧೩] ಎಂದು ವೇಶ್ಯೆ ಬದುಕಿನ ಚಿತ್ರಣವನ್ನು ನೀಡುತ್ತಾರೆ. ಈ ಕತೆಯಲ್ಲಿ ಹೆಸರು ಸೂಚಿಸಿದೆ. ಬಾಲ್ಯದಲ್ಲಿಯ ಆ ಹುಡುಗಿಯ ಜೊತೆಗೆ ಮುದುಕನೊಂದಿಗೆ ಮದುವೆ ಮಾಡಿಕೊಟ್ಟ ಪರಿಣಾಮದಿಂದಾಗಿ ಮುದುಕನು ಕೆಲವು ದಿನಗಳಲ್ಲಿ ಅಸುನೀಗಿದ್ದರಿಂದ ಹುಡುಗಿಯ ಪರಿಸ್ಥಿತಿ ಶೋಚನೀಯಗೊಂಡು ಹಸಿವು ಬಡತನದಲ್ಲಿ ಕೈತೊಳೆಯುವಂತಾಗಿ ವೇಶ್ಯೆವೃತ್ತಿಗೆ ಇಳಿಯುವಂತಹ ದಾರುಣ ಕತೆಯಾಗಿದೆ.

ಮುಗಳಿ ಅವರು ಸಾಹಿತ್ಯ ರಚನೆಯಲ್ಲಿ ಅಷ್ಟೇ ಅಲ್ಲದೆ, ಉತ್ತಮ ಅಧ್ಯಾಪಕರಾಗಿ ಸೇವೆ ಸಲ್ಲಿಸಿರುವುದು ತಿಳಿದುಬರುತ್ತದೆ. ಯಾವ ವಿಷಯವಿದ್ದರೂ ಅದರ ಮೂಲವನ್ನು ಹುಡುಕಿ ನೋಡಿ ಗುಣಗಳನ್ನು ಮೆಚ್ಚಿಕೊಂಡು ವಿಮರ್ಶಿಸುತ್ತಾರೆ. ಒಂದು ವೇಳೆ ದೋಷಗಳು ಕಂಡುಬಂದರೆ ಅವುಗಳನ್ನು ಸೂಚ್ಯವಾಗಿ ಕೃತಿಕಾರನ ಗಮನಕ್ಕೆ ತರುವಂತಹದ್ದು ತಿಳಿದುಬರುತ್ತದೆ. ಒಮ್ಮೊಮ್ಮೆ ಸಾಹಿತ್ಯದ ರಚನೆಯು ಉತ್ತಮವಾಗಿ ಮೂಡಿಬರಲೆಂಬ ದೃಷ್ಟಿಯಿಂದ ಯುವ ಲೇಖಕರಿಗೆ ಹಲವು ಉಪಯುಕ್ತ ಸಲಹೆ ಸೂಚನೆಗಳನ್ನು ಕೊಡುತ್ತಾರೆ. ಅವರ ಸೌಜನ್ಯಯುತವಾದ ಗುಣದ ಬಗ್ಗೆ ಅವರ ಬರಹದಿಂದಲೇ ತಿಳಿಯುತ್ತದೆ. ವಿದ್ಯಾರ್ಥಿಗಳೊಂದಿಗೆ ಆತ್ಮೀಯತೆಯಿಂದ ಕೂಡಿದ್ದರೆ ಶಿಕ್ಷಣದ ಮಟ್ಟ ಉನ್ನತವಾಗಲು ಅಭಿಪ್ರಾಯ ಪಟ್ಟಿದ್ದರು. ಸಹಾಯಕಾರಿಯಾಗುತ್ತದೆಂದು ಭಾರತೀಯ ಸಂಸ್ಕೃತಿಯ ಹಿರಿಮೆಯನ್ನು ವಿಶ್ವಕ್ಕೆ ಎತ್ತಿ ತೋರಿಸುವಂತದ್ದು ಮುಗಳಿ ಅವರ ಅಭಿಲಾಷೆಯಾಗಿತ್ತು.

ಮುಗಳಿ ಅವರು ಮೂವತ್ತ ಮೂರು ವರ್ಷಗಳ ಕಾಲ ಸಾಂಗ್ಲಿಯ ವಿಲ್ಲಿಂಗ್ಡನ್ ಕಾಲೇಜಿನ ಪ್ರಾಧ್ಯಾಪಕ, ಪ್ರಾಂಶುಪಾಲರಾಗಿ ಸೇವೆ ಸಲ್ಲಿಸುತ್ತಾ ಗಡಿಯಾಚೆ ನಿಂತು ಕನ್ನಡ ಸಂಸ್ಕೃತಿ ಏಳಿಗೆಗಾಗಿ ದುಡಿದವರಾಗಿದ್ದಾರೆ. ಅವರ ಕಾದಂಬರಿಗಳ ಒಳಮನಸ್ಸು ಸಹ ಕನ್ನಡನಾಡಿನ ಬಗ್ಗೆ ಸದಾ ಧ್ಯಾನ ಸ್ಥಿತಿಯಲ್ಲಿರುವುದು ಅವರ ಜೀವನ ಚರಿತ್ರೆ ಓದಿದರೆ ತಿಳಿದು ಬರುತ್ತದೆ. ಹೀಗೆಯೆ ಅವರ ಕಾರಣ ಪುರುಷ ಕಾದಂಬರಿ ಒಂದು ಭಾಗ ಈ ರೀತಿ ಮೂಡಿಬಂದಿದೆ. ಹಾಗೆಯೇ ಕಾರಣ ಪುರುಷ ಕಾದಂಬರಿಯಲ್ಲಿ ವಾಮಣ್ಣನ ಪಾತ್ರದ ಮೂಲಕ ಕನ್ನಡ ಪರ ಕಾಳಜಿಯು ಹೆಚ್ಚೆಂಬಂತೆ ಕಂಡುಬಂದಿದ್ದರಿಂದ ಮನೆಯ ಯಜಮಾನರಾದ ಭೀಮರಾಯರಿಗೆ ಇರುಸುಮುರುಸಾಗಿ ಕೋಪಗೊಳ್ಳುವಂತೆ ಮಾಡಿ ಬೈದಾಡುವ ಪ್ರಸಂಗ ಈ ರೀತಿ ಇದೆ. ಒಂದು ದಿನ ಊಟಕ್ಕೆ

ಕುಳಿತಾಗ ಈ ವಿಷಯವನ್ನು ಪ್ರಸ್ತಾಪಿಸಿ ವಾಮಣ್ಣನನ್ನು ಅರ್ಧಕ್ಕೆ ಎಬ್ಬಿಸಿದರು. ಊಟವಾದ ಮೇಲೆಯೂ ಅವರ ಆರ್ಭಟವು ನಿಲ್ಲಲಿಲ್ಲ. ವಾಮಣ್ಣನನ್ನು ಇದಿರಿಗೆ ಕೂಡಿಸಿಕೊಂಡು ಧಡಧಡ ಮಾತಾಡತೊಡಗಿದರು. "ನಿಮ್ಮಂಥ ನಿರುಪಯೋಗಿಗಳಿಗೆ ಯಾತಕ್ಕೆ ಊಟಕ್ಕೆ ಹಾಕಬೇಕು? ನಿಮಗೆ ನಿಮ್ಮ ಸಂಸಾರ ಚಿಂತಿಲ್ಲ. ನಿಮ್ಮ ಹೆಂಡಿರ ಮಕ್ಕಳ ಕಾಳಜಿ ಇಲ್ಲ. ಇಂಥವರು ಮದಿವಿ ಮಾಡಿಕೊಬಾರದು. ಬೂದಿ ಬಡಕೊಂಡು ಸನ್ಯಾಸಿ ಆಗಬೇಕು. ನಾವೇನು ನಿಮ್ಮಂತ ನಿರುದ್ಯೋಗಿಗಳ ದಸಿಂದ ಇಲ್ಲಿ ಅನ್ನಛತ್ರವನ್ನು ಇಟ್ಟಿಲ್ಲ. ಸ್ವಂತದ ಹೊಟ್ಟೆ ಉದ್ಯೋಗ ಬಿಟ್ಟು ಕೆತ್ತೇಬಜೆ ಕಾರ್‌ಬಾರ ಮಾಡಲಿಕ್ಕೆ ನಿಮಗೆ ಮಾತ್ರ ಬರ್ತದೆ. ಕನ್ನಡ ಚಳುವಳಿಯಂತೆ ಚಳುವಳಿ! ಕಲ್ಲು ಹಾಕಲಿ ಅದಕ್ಕೆ"[೧೪] ಎಂದು ರೇಗಾಡುವರು. ಕುಪಿತಗೊಂಡ ವಾಮಣ್ಣನು ಮನೆಬಿಟ್ಟು ಬಂದರೂ ಸದಾ ಕನ್ನಡನಾಡಿನ ಬಗ್ಗೆ ಹಪಹಪಿಸುವ ಪಾತ್ರವಾಗಿರುವಂತದ್ದು ಈ ಸಂದರ್ಭದಿಂದ ತಿಳಿದುಬರುತ್ತದೆ. "ಏನು ವಾಮಣ್ಣ, ಸ್ವಾಭಿಮಾನ ಮೂರ್ತಿಯಾಗಿ ಮಾವನ ಮನೆಯನ್ನಂತೂ ಬಿಟ್ಟು ಬಂದೆ. ಮುಂದಿನ ವಿಚಾರವೇನು? ವಾಮಣ್ಣನು ಬೇಗನೆ ಉತ್ತರ ಕೊಡಲಿಲ್ಲ. ಮತ್ತೆ ಕೇಳಿದರು. ವಿಚಾರವೇನು? ಕನ್ನಡಕ್ಕಾಗಿ ದುಡಿಯುವುದು ಅದರಲ್ಲಿಯೇ ಮಡಿಯುವುದು"[೧೫] ಎಂದು ಹೇಳುವುದನ್ನು ಈ ಕಾದಂಬರಿಯಿಂದ ತಿಳಿದುಬರುತ್ತದೆ.

ಅದೇ ರೀತಿ ಅನ್ನ ಕಾದಂಬರಿಯು ಈ ಮಾದರಿಯನ್ನು ಅನುಸರಿಸಿದೆ ಎಂದರೆ ತಪ್ಪಾಗಲಾರದು. ಏಕೆಂದರೆ ಅಮೃತನ ಪಾತ್ರವು ಸಹ ಕನ್ನಡನಾಡಿನ ಏಳಿಗೆಗಾಗಿ ಹಪಹಪಿಸುವ ಪಾತ್ರವಾಗಿದೆ. ಅಮೃತ ಎಂಬ ಯುವಕನು ತನ್ನ ವೈದ್ಯಕೀಯ ಶಿಕ್ಷಣವನ್ನು ಅರ್ಧಕ್ಕೆ ಮೊಟಕುಗೊಳಿಸಿ ಪಶ್ಚಿಮ ಬಂಗಾಳದ ಮಿದನಾಪುರದಲ್ಲಿ ಸಂಭವಿಸಿದ ನೆರೆಹಾವಳಿ ಸಂತ್ರಸ್ತರ ನೆರವಿಗೆ ತೆರಳಿ ತನ್ನ ಸೇವೆಯನ್ನು ಸಲ್ಲಿಸಿ ತದನಂತರ ತಂದೆಯ ಪತ್ರಕ್ಕೆ ಮಣಿದು ಊರಿಗೆ ಬರುತ್ತಾನೆ. ಮತ್ತೆ ವೈದ್ಯಕೀಯ ಶಿಕ್ಷಣವನ್ನು ಸ್ವಲ್ಪ ಕಾಲಾವಧಿಯವರೆಗೆ ಮುಂದುವರಿಸಿ ತದನಂತರ ಮತ್ತೆ ಬಿಟ್ಟು ಬಿಜಾಪುರದಲ್ಲಿ ಕ್ಷಾಮ ತಲೆದೋರಿದ್ದರ ಪರಿಣಾಮವಾಗಿ ಗಂಜಿ ಕೇಂದ್ರಕ್ಕೆ ಸಹಾಯಕನಾಗಿ ಸೇವೆ ಸಲ್ಲಿಸಲು ಮುಂದಾಗುತ್ತಾನೆ. ಇದನ್ನು ಕಂಡ ಶಂಭುರಾಯರಿಗೆ ಕೋಪ ತರಿಸುತ್ತದೆ. ಆ ಸಂದರ್ಭ ಈ ರೀತಿ ಮೂಡಿಬಂದಿದೆ. "ಹೊರಟನಪ ಪಿರಿಪಿರಿ ತಿರಿಗಿಕೋತ. ಸಿರೂರಂತ ಹೇಳಿದರೆ ನಾವು ಸುಮ್ಮನಿರತೀವಿ ಅಂತ ಅದ್ನು ಹೇಳೋದು. ಮುಂದ ಸಿಕ್ಕಲ್ಲೆ ತಿರಗೋದು. ಕೆಟ್ಟ ಬ್ಯಾಸಗಿ ದಿವಸ. ಎಲ್ಲ್ಯೂ ಹೋಗಬ್ಯಾಡೋ ನಮ್ಮಪ್ಪ ಇದ್ದೂರಾಗ ಬೇಕಾದ್ದು ಮಾಡು! ಎಂದು ತಾಯಿಯ ಮೊರೆ. ತಾನು ಹೋಗಲೇಬೇಕೆಂಬುದಕ್ಕೆ ಗುಳೇಕಾರರ ಕರುಣಕಥೆಯನ್ನು ಅವನು ವರ್ಣಿಸಿ ಹೇಳಿದನು. ಹೌದು ಅವರು ಹೊಟ್ಟಿಗಿಲ್ಲ ಸಾಯತಾರ. ಇಲ್ಲಿ ನಮ್ಮ ಹೊಟ್ಯಾಗೇನು ಅಮೃತ ಹಾಕೇದೇನು? ಮನ್ಯಾಗ ಅಕ್ಕಿಲ್ಲ, ಸಕ್ಕರಿಲ್ಲ. ಸಾಲ ಗುಡ್ಡದಂಗ ಕೂತದ. ತುಟಮುಂಜಿ ಪಗಾರೆಲ್ಲ ಖಲಾಸಾತು. ದೆವ್ವನಂಗ ಬೆಳೆದು ಕೂತ ಹುಡುಗಿಯ ಮದಿವಿಗೆ ದಿಕಾಣೆಲ್ಲ. ನಿನ್ನೇನು ಕೆತ್ತೇಬಜೆ ಕಾರಭಾರ ಮಾಡಲಿಕ್ಕಂತ ಅನ್ನ ಹಾಕಿ ಬೆಳೆಸಿದೆವೇನು?"[೧೬] ಎಂದು ತಂದೆಯವರಾದ ಶಂಭುರಾಯರು ರೇಗಾಡುವಂತದ್ದು. ಈ ಕಾದಂಬರಿಯಿಂದ ತಿಳಿದುಬರುತ್ತದೆ. ಈ ರೀತಿಯಾದ ಕನ್ನಡ ಪರವಾದ ಕಾಳಜಿಯನ್ನು ಹೊಂದಿದ ಪಾತ್ರಗಳನ್ನು ಅವರ ಕಾದಂಬರಿಯ ಗದ್ಯಶೈಲಿಯಿಂದ ಕಂಡುಕೊಳ್ಳಲಾಗಿದೆ.

ಮುಗಳಿ ಅವರ ಕತೆ, ಕಾದಂಬರಿಗಳಲ್ಲಿ ಕನ್ನಡಪರವಾದ ಕಾಳಜಿಯ ಜೊತೆಗೆ ಹಸಿವು, ಬಡತನದ ಚಿತ್ರಣಗಳು ಸಹ ಕಂಡುಬರುತ್ತವೆ. ಅಂಥ ಸನ್ನಿವೇಶವೊಂದು ಅನ್ನ ಕಾದಂಬರಿಯಲ್ಲಿ ಈ ರೀತಿ ಇದೆ. "ನಮಗ ಕೂಳಿಲ್ಲ, ದನಕೂ ಮೇವಿಲ್ಲ ಆಗಣ ಅವನ್ನ ಕಟಕರಿಗೆ ಮಾರಿಕೊಂಡಿವೆವು. ಸಿಕ್ಕಟು ಸೆಜ್ಜೆ, ಜ್ವಾಳ ಕೊಂಡಕ್ಯಾಸ ರೊಟ್ಟಿಬಡಿದು ಗಂಟ ಕಟ್ಟಿಕ್ಯಾಸ ತಿನಕೋತ ಹ್ವಾದೇವು. ಕತ್ತಲಾಗೂಣ ಗಿಡದ ಬುಡಕ ಹಳ್ಳಿ ಊರ ಕಟ್ಟಿಗೆ ಮನಕೊಂಡು ಹರ್‍ಯಾಗ ಮತ್ತು ಹಾದಿ ಹಿಡಿತಿದ್ದೇವು. ಗದಗ್ಗೆ ಬಂದೇವು. ಓಣ್ಯಾಗಿನ ಮಂದೆಲ್ಲ ಮದವಿ ಮೆರವಣಿಗೆ ನೋಡಿದಂಗ ನಮ್ಮನ್ನ ನೋಡಿಕೊಂತ ನಿಂತ್ಯು. ಯಾರೇನು ತುಣಕರೊಟ್ಟಿ ಕೊಡಲಿಲ್ಲ, ನೀರು ಹಣಸಲಿಲ್ಲ. ಏಟು ಚಾದಂಗಡಿ! ಏನು ಝುಕಾಸಬೇಳಕು! ನಮ್ಮ ಹೊಟ್ಯಾಗೆಲ್ಲ ಭುಗ್ಗಂತ ಉರಿ! ಭೂಮಿತಾಯನ್ನ ಅಪ್ಪಿಕೊಂಡು ಗಿಡದ ಬುಡಾಕ ಉಸ್ಸನ ಕೂತ ಉರಳಿದಿವಿ. ಕೂಸೆಲ್ಲಾ ಗಂಟಲ ಹರಿಯು ಹಂಗ ಅತ್ತವು. ರಾತ್ರಿ ಆಗಾಣ ನಾಚಿಕೆ ಬಿಟ್ಟು ಭಿಕ್ಷಾ ಬೇಡಾಕ ಹೋದಿವಿ. ಬಯ್ಸಿಕೊಂಡು ತಂದ ಎಂಜಲ ತಿಂದಿವಿ, ಕೂಸಿಗೆ ತಿನಿಸಿದೀವಿ."[೧೭] ಈ ರೀತಿಯ ಬಡತನದ ಹಸಿವಿನ ಚಿತ್ರಣವು ಅಂದಿನ ಸ್ವಾತಂತ್ರ್ಯ ಕಾಲಘಟ್ಟದಲ್ಲಿ ಮಳೆ-ಬೆಳೆ ಇಲ್ಲದೆ ಕೆಲಸವನ್ನು ಬಯಸಿ ವಲಸೆ(ಗುಳೆ) ಹೋಗುವಂತದ್ದು ತಿಳಿದುಬರುತ್ತದೆ. ಅಲ್ಲಿಯು ಸಹ ವಲಸಿಗರಿಗೆ ಕೆಲಸ ಸಿಗದ ಪರಿಸ್ಥಿತಿ ಇರುತ್ತದೆ. ಸಿಕ್ಕರು ಮೋಸವಂಚನೆ, ಲೈಂಗಿಕ ಕಿರುಕುಳಗಳಿಗೆ ಒಳಗಾಗುವಂತಹ ಸಂದರ್ಭಗಳು ಅವರ ಗದ್ಯಶೈಲಿಯಿಂದ ನಿರೂಪಿತಗೊಂಡಿವೆ. ಅದೇ ರೀತಿ ಮುಗಳಿ ಅವರ ಬಾಳುರಿ ಕಾದಂಬರಿಯಲ್ಲಿಯೂ ಹಸಿವು, ಬಡತನದ ಚಿತ್ರಣವು ಈ ರೀತಿ ಅಭಿವ್ಯಕ್ತಗೊಂಡಿದೆ. ಗೋದವ್ವಳು ಒಂದು ದಿನ ಬೆಳಿಗ್ಗೆ ಎದ್ದು ಹುಚ್ಚಿಯಂತೆ ಅಳುತ್ತಾ ಜಗ್ಗಣ್ಣನಿಗೆ ಹೇಳಿದಳು. "ಸಾಕಾತು ಜಗ್ಗಣ್ಣ ನಾ ಹೋಗಿ ಯಾರ ಮನೆಯಲ್ಲಾದರೂ ಅಡಿಗೆ ಹಿಡಿದು ನಿಮ್ಮ ಹೊಟ್ಟೆ ಬಟ್ಟೆಗೆ ತಂದು ಹಾಕತೀನಿ. ಇಷ್ಟೆನ್ನಲು ಅವಳ ಕೊರಳು ಬಿಗಿದುಕೊಂಡಿತು. ಹೊಸತಿಲ ಹೊರಗೆ ಹೊರಟಳು. ಜಗ್ಗಣ್ಣನಿಗೆ ಅದೆಂತ ಕರುಳು ಕಿತ್ತುವ ಕಳವಳವಾಗಿರಬೇಡ! ಅವ್ವಾ ಇದೇನು ಹುಚ್ಚು ಹೂಡಿದಿ? ನನ್ನ ಕೈಲಾಗದಿದ್ದರೆ ಎಲ್ಲರ ಕೂಡಿ ಬಾವಿ ಬೀಳೋಣ"[೧೮] ಎನ್ನುವ ಚಿತ್ರಣದ ಮೂಲಕ ಅಂದಿನ ಸಾಮಾಜಿಕ ಬದುಕಿನ ಪರಿಸ್ಥಿತಿಗಳನ್ನ ತಮ್ಮ ಕಾದಂಬರಿಯಲ್ಲಿ ಕಟ್ಟಿಕೊಟ್ಟಿದ್ದಾರೆ.

ಮುಗಳಿ ಅವರ 'ಕ...ಚ್ಚು'! ಕತೆಯಲ್ಲಿ ಹೆಸರನ್ನು ಸೂಚಿಸದೆ ಅವನು-ಅವಳು ಎಂದೇ ಹೆಸರನ್ನು ಸಂಬೋದಿಸಿ ಬರೆದಿರುವ ಕತೆಯಾಗಿದೆ. ಅವನ ಮನೆಯ ಆರ್ಥಿಕ ಪರಿಸ್ಥಿತಿಯು ಶೋಚನೀಯವಾಗಿ ಬಡತನದಲ್ಲಿಯೇ ಕೈತೊಳೆಯುವಂತಹ ಪರಿಸ್ಥಿತಿ ಇದ್ದರೂ ಗಂಡನಾದವನು ಪ್ರತಿದಿನ ದೇವರಧ್ಯಾನದಲ್ಲಿಯೇ ಮಗ್ನನಾಗಿ ಕಾಲಹರಣ ಮಾಡುತ್ತಾ ಅಸಂಬದ್ಧವಾಗಿ ವರ್ತಿಸುತ್ತಾ "ಕೇಳು ಹೆಂಗಸೇ, ಪರಮಾರ್ಥವೆಂದರೆ ನಿನಗೆ ಗೊತ್ತೇ? ಇದೇನು ನಿನ್ನದು? ಗಂಡನನ್ನು ಶಾಂತವಾಗಿ ಪಾರಾಯಣ ಮಾಡಲಿಕ್ಕೆ ಬಿಡದಿರುವುದು? ಯಾವಾಗಲು ಹೊಟ್ಟೆಪಾಡಿನ ಮಾತನ್ನೇ ಆಡುತ್ತಾ ತೊಂದರೆ ಕೊಡುವುದು? ಹೇಳು, ಹಕ್ಕಿಗಳಿಗೆ ಯಾರು ಹೊಟ್ಟೆಗೆ ಹಾಕುತ್ತಾರೆ/ಯಾವಾಗ ನೋಡಿದರೂ ದೇವರಲ್ಲಿ ಈ ಅಪನಂಬಿಕೆ; ಈ ಮೋಹದ ಬಲೆಯಲ್ಲಿ ಬೀಳುವಿಕೆ; ಈ ಜಗದ

ಸಲುವಾಗಿ ಆಲೋಚನೆ... ಹುಚ್ಚೀ! ಖೋಡಿ ಹೆಣ್ಣೇ! ಗಂಡನಿಗೆ ಓದುಗೊಡುವಂತಿಲ್ಲ! ನೀನು ಹೀಗೆ ತಾಳ ತಪ್ಪಿದರೆ ನರಕಕ್ಕೆ ಹೋಗುವೆ...!”[೧೯] ಎಂದು ಹೆಂಡತಿಗೆ ತಿಳಿಸುತ್ತಾ ಮನೆಯ ಜವಾಬ್ದಾರಿಯನ್ನು ಸರಿಯಾಗಿ ನಿಭಾಯಿಸದೆ ಬರಿ ದೇವರ ಧ್ಯಾನ, ಅಸಂಬದ್ಧ ಉಡಾಫೆತನದಿಂದ ಕಾಲಹರಣ ಮಾಡುವುದು ಅವನ ಜೀವನ ಶೈಲಿಯಾಗಿರುತ್ತದೆ. ಇವನ ಅಸ್ತವ್ಯಸ್ತವಾದ ಬದುಕಿನಿಂದ ಹಸಿವನ್ನು ತಾಳಲಾರದೆ ಹೆಂಡತಿಯಾದವಳು ಸಾಯಲು ಹೋಗಿ ಬದುಕುಳಿಯುವ ಪ್ರಸಂಗವನ್ನು ಅವರ ಗದ್ಯಶೈಲಿಯಲ್ಲಿ ಈ ರೀತಿ ಮೂಡಿಬಂದಿದೆ. “ನೇಣನ್ನು ಅವಳು ಬೀಸಿ ಒಗೆದಳು. ಪೆಟ್ಟಿಗೆಯಿಂದ ಕೆಳಕ್ಕೆ ಹಾರಿದಳು. ಓಡುತ್ತ ಕೂಸಿನ ಬಳಿಗೆ ಹೋಗಿ ದುಬಟಿ ಹೊದಿಸಿ ಒಲುಮೆಯಿಂದ ಅದನ್ನು ಮತ್ತೆ ಒರಗಿಸಿ, ಒದರಿದಳು ಖೋಡಿ! ಉರುಲು ಹಾಕಿಕೊಳ್ಳಲೂ ನನ್ನನ್ನು ಬಿಡುವುದಿಲ್ಲ! ನೆಮ್ಮದಿಯಿಂದ ನಾನು ಉರುಳು ಹಾಕಿಕೊಳ್ಳುವಂತಿಲ್ಲ! ಮೊಲೆ ತಿನ್ನಬೇಕೆನ್ನುತ್ತದೆ. ಅದರಿಂದೇನು ಹಿತ? ಅದರಲ್ಲೇನಿದೆ? ವಿಷ, ವಿಷ, ಬರೀ ವಿಷವನ್ನು ನೀನು ಕುಡಿಯುವೆ–ನಾನು ಹೇಳುತ್ತೇನೆ. ತಗೋ ಹಾಗಾದರೆ ಆಸೆಬುರುಕ! ಅದೇ ಉಸುರಿನಲ್ಲಿ ಕೂಗಿ ಆಕೆ ತನ್ನ ಒಣಗಿಹೋದ ಮೊಲೆಯ ಅದರ ಬಾಯಲ್ಲಿ ತುರುಕಿ ಅಂದಳು. ‘ತಗೋ ಹಾಗಾದರೆ ಹೀರಿಬಿಡು ..ಕ...ಚ್ಚು..!”[೨೦] ಎಂಬ ಅವಳ ಅಸಹಾಯಕ ಬಡತನದ ಪರಿಸ್ಥಿತಿಯು ಮುಗಳಿ ಅವರ ‘ಕ..ಚ್ಚು...’! ಕತೆಯಲ್ಲಿ ಕಂಡುಬರುತ್ತದೆ.

ಕಾರಣಪುರುಷ ಕಾದಂಬರಿಯಲ್ಲಿಯೂ ಸಹ ಕರ್ನಾಟಕದಿಂದ ಮುಂಬೈಗೆ ಕೆಲಸ ಬಯಸಿ ಗುಳೆಹೋದ ಕಾರ್ಮಿಕರ ಬಡತನದ ಪರಿಸ್ಥಿತಿಯನ್ನು ಅಭಿವ್ಯಕ್ತಪಡಿಸುವ ಸಂದರ್ಭ ಈ ರೀತಿ ಮೂಡಿಬಂದಿದೆ. “ಎಪ್ಪ ನನ್ನ ಹೆಸರು ನರ್ಸರಿ, ಸೊಲ್ಲಾಪುರ ಕಡಿ ನಮ್ಮ ಊರು ಐತಿರಿ. ಮಳಿ–ಬೆಳಿ ಹೋಗಿ ಬರಗಾಲ ಬಿತ್ರಿ. ಗುಳೇ ಕಟ್ಟಿಕೊಂಡು ಇತ್ತಾಕ ಬಂದೀವ್ರಿ ಕೂಲೀ ಮಾಡಾಕ. ನಾಳೆ ಬರೋ ಉಗಾದಿ ಅಮಾಸಿಗೆ ಎಡ್ಡು ವರ್ಷ ಅಕ್ಕವ್ರಿ ನಾವು ಬಂದು. ಊರು ಉದ್ಯಾನ ಎಲ್ಲಾ ಮರೆತು ಹೋಗೇತ್ರಿ. ಸಿವಾ ಕೊಟ್ಟಲ್ಲೆ ಇರಾಕ್‌ಬೇಕಲ್ರಿ’, ‘ಹೌದು ನಾನೂ ಊರು ಬಿಟ್ಟು ಈ ಶಹರಕ್ಕ ಬಂದೀನಿ ನೋಡು. ಮತ್ತ ನಿಮ್ಮ ಮನಿ ಎಲ್ಲ್ಯದ? ಮನ್ಯಾಗ ಯಾರ್‍ಯಾರು ಇದ್ದಾರ? ಮನಿ ಎತ್ಲಾಗ್ರಿ ದೇವರು? ಅದೇನು ಮಾತಂಗಿ ಅಂತಾರ್ ನೋಡರಿ ಅದರ ಅತ್ತಾಕ ಸಮುದರದ್ ದಂಡೀಮ್ಯಾಗ ನಾಕ್ ಮೊಳ ಗುಡ್ಸಲೈತಿ. ಅಲ್ಲಿ ನೋಡ್ರಿ ನಾನು ನನ್ನ ಹೆಣ್ತಿ ಮುದುಕಿ ಎವ್ವ, ಎಡ್ಡು ಹೆಣ್ಣು ಎಡ್ಡು ಗಂಡು ಹುಡುಗೂರು ಈಟು ಮಂದಿ ಇರ್ತೀವಿ ನೋಡ್ರಿ”[೨೧] ಎಂದು ಬಡತನದಿಂದ ಕೂಡಿದ ಅನಕ್ಷರಸ್ಥ ಬದುಕಿನ ಚಿತ್ರಣವನ್ನು ಈ ಭಾಗದಲ್ಲಿ ಅನಾವರಣಗೊಳಿಸಿದ್ದಾರೆ.

ಮುಗಳಿ ಅವರ ಕತೆ, ಕಾದಂಬರಿಗಳಲ್ಲಿ ಹಸಿವು ಬಡತನವಷ್ಟೇ ಅಲ್ಲದೇ ನಿರುದ್ಯೋಗದ ಪರಿಸ್ಥಿತಿಯು ಅಷ್ಟೇ ಗಂಭೀರ ಸಮಸ್ಯೆಯಾಗಿ ಚಿತ್ರಣಗೊಂಡಿರುವುದನ್ನು ಅವರ ಗದ್ಯಶೈಲಿಯಿಂದ ತಿಳಿದುಬರುತ್ತದೆ. ಅಂಥ ಸಂದರ್ಭ ಈ ರೀತಿ ಇದೆ. ಜಗ್ಗಣ್ಣನು ವಕೀಲರಾದ ಕುಬೇರಾಯರಲ್ಲಿ ಕೆಲಸ ಕೇಳಲು ಹೋದಾಗ “ಸಾಕಾತು ಜನ್ಮ! ಈ ಹತ್ತಿರ ಕೆಲಸವೆನ್ನುವವರ ಕಾಲೊಳಗೆ ಸಾಕಾತು! ನನ್ನ ಹತ್ತಿರ ಏನು ಕೆಲಸವಿದೆ ಮಣ್ಣು? ನನ್ನ ಕೆಲಸವೇ ಹೋಗಲಿಕ್ಕೆ ಕೂತಿದೆ”[೨೨] ಎಂದು

ರೇಗಾಡುವರು. ಈ ರೀತಿ ಕೆಲಸ ಬಯಸಿ ಹೋಗುವ ಯುವಕರಿಗೆ ಸರಿಯಾದ ಕೆಲಸ ಸಿಗದೆ ಹತಾಶ ಬದುಕನ್ನು ಕಳೆಯುವಂತದ್ದು ಬಾಳುರಿ ಕಾದಂಬರಿಯಿಂದ ತಿಳಿದುಬರುತ್ತದೆ. ಅದರಂತೆ ವಾಮಣ್ಣನು ಕೆಲಸಕ್ಕೆಂದು ಹೈದರಾಬಾದಿಗೆ ಹೋಗಿ ಅಲ್ಲಿ ಸರಿಯಾದ ಉರ್ದುಭಾಷೆ ಬರದೇ ಅಲ್ಲಿಂದ ವಾಪಸಾಗುತ್ತಾನೆ. ತಾತ್ಕಾಲಿಕ ಖಾನೇ ಸುಮಾರಿ(ಜನಗಣತಿ) ಕೆಲಸ ಸಿಕ್ಕರೂ ಅದು ಶಾಶ್ವತವಲ್ಲದ್ದರಿಂದ ಮತ್ತೊಂದು ಕೆಲಸ ಹುಡುಕಿಕೊಂಡು ಉತ್ತಮ ಜೀವನವನ್ನು ಕಟ್ಟಿಕೊಳ್ಳಲು ಮುಂದಾಗುವಂತದ್ದು ಕಾದಂಬರಿಯಿಂದ ತಿಳಿದುಬರುತ್ತದೆ.

ಮುಗಳಿ ಅವರ ನಾಟಕ ಸಾಹಿತ್ಯದಲ್ಲಿಯು ವಿಶಿಷ್ಟ ಗದ್ಯ ಶೈಲಿಯು ಕಂಡುಬರುತ್ತದೆ. ಅವರ 'ವಿಜಯ ಸಾಮ್ರಾಜ್ಯ' ನಾಟಕವು ಸಂಶೋಧನಾತ್ಮಕ ಚಾರಿತ್ರಿಕ ಮತ್ತು ಕಾಲ್ಪನಿಕ ಹಿನ್ನೆಲೆಯಲ್ಲಿ ಕಟ್ಟಿಕೊಟ್ಟ ನಾಟಕವಾಗಿದೆ. ಮುಗಳಿ ಅವರು ೧೩೩೬ರಿಂದ ೧೩೪೬ರವರೆಗಿನ ಹತ್ತು ವರ್ಷಗಳ ಕಾಲಾವಧಿಯಲ್ಲಿ ವಿಜಯನಗರ ಸಾಮ್ರಾಜ್ಯವು ಸ್ಥಾಪನೆಯಾಗಿರುವ ಚರಿತ್ರೆಯನ್ನು ನಾಟಕದಲ್ಲಿ ಸೆರೆಯಿಡಿಯಲು ಪ್ರಯತ್ನಿಸಿದ್ದಾರೆ. ಈ ನಾಟಕದಲ್ಲಿ ದೀರ್ಘವಾದ ಸಂಭಾಷಣೆಗಳು, ನಾಟ್ಯಮಯತೆಯ ಕೊರತೆಗಳಿಂದಾಗಿ ಇದರ ರಂಗ ಸಾಧ್ಯತೆಗಳು ಮಿತಿಗೊಳ್ಳುತ್ತವೆ. ಸಮಾಜಕ್ಕೆ ಉತ್ತಮ ಸಂದೇಶ ತಿಳಿಸುವ ಸಲುವಾಗಿ ಈ ನಾಟಕ ಚಾರಿತ್ರಿಕ ಸತ್ಯವನ್ನು ಹುಡುಕ ಹೊರಡುತ್ತದೆನ್ನುವ ಕಾರಣಕ್ಕಾಗಿ ಮಹತ್ವ ಪಡೆಯುತ್ತದೆ. ವಿಜಯನಗರ ಸಾಮ್ರಾಜ್ಯ ನಾಟಕದ ಒಂದು ಸನ್ನಿವೇಶವು ಕರ ನಿರಾಕರಣೆ ಪದ್ಧತಿಯನ್ನು ಎತ್ತಿ ಹಿಡಿಯುವಂತಹ ಸಂದರ್ಭ ಈ ರೀತಿ ಮೂಡಿ ಬಂದಿದೆ.

"ಚನ್ನೇಗೌಡ: ಬೇಡ ತಳವಾರ ಜಗ್ಗಬೇಡ. ನಿನ್ನ ಒರೆಯ ಕತ್ತಿಯನ್ನು ಹಿರಿದು ಇಲ್ಲಿಯೇ ನನ್ನ ಕೊಂದುಹಾಕು. ಇದೇ ಹೆಚ್ಚಿನ ಉಪಕಾರ ನೀನು ಮಾಡಬೇಕಾದದ್ದು.

೧ನೇ ತಳವಾರ: ಕೊಲ್ಲುವ ಕಾರಣವಿಲ್ಲ, ಗೌಡ ನಿನ್ನ ಸರಕಾರದ ಕರವನ್ನು ಕೊಟ್ಟುಬಿಡು ನಿನ್ನನ್ನು ಮನೆಗೆ ಮುಟ್ಟಿಸಿ ಮಂಗಳಾರತಿ ಮಾಡಿ ಹೋಗುತ್ತೇವೆ.

ಚನ್ನೇಗೌಡ: ಕರದ ಮಾತೆತ್ತಬೇಡ. ನಮ್ಮ ಆಸ್ತಿಪಾಸ್ತಿಯನ್ನೇ ಹಾಳು ಮಾಡುವಂಥ ಈ ವಿಪರೀತ ಕರವನ್ನು ಆನೆಗೊಂದಿ ಊರೊಳಗಿನ ಒಂದು ಪಿಳ್ಳೆಯೂ ಕೊಡುವುದಿಲ್ಲ. ಊರಿಗೆ ಹಿರಿಯನಾದ ನಾನು ಕೊಡುತ್ತೇನೇ?

೨ನೇ ತಳವಾರ: ಹಾಗಾದರೆ ನಡೆ ಚಾವಡಿಗೆ.

ಚನ್ನೇಗೌಡ: ನಡೆಯುವುದಿಲ್ಲ. ನನ್ನನ್ನು ಇಲ್ಲೇ ಕೊಂದುಹಾಕಿರಿ. ಬೇಕಾದರೆ ನಾನು ಸತ್ತ ಮೇಲೆ ನನ್ನ ಮೈಚೂರುಗಳನ್ನು ಒಯ್ದು ನಿಮ್ಮ ಚಾವಡಿಯ ಮುಂದೆ ತೂರಿರಿ. ಆಗಲೂ ಅವು ಬಾಯಿಯಿಲ್ಲದ ಕರವನ್ನು ಕೊಡುವುದಿಲ್ಲ ಎನ್ನುವವು"[೨೩] ಎಂದು ಪ್ರತಿಭಟನೆಯ ಸಂಕೇತವಾಗಿ ಸ್ಥಳಿಯ ಚನ್ನೇಗೌಡನ ಪಾತ್ರದ ಮೂಲಕ ಅಂದಿನ ರಾಜಕೀಯ, ಸಾಮಾಜಿಕ, ಅಧಿಕಾರಿಕ ಪರಿಸ್ಥಿತಿಗಳು ಹೇಗಿದ್ದವು ಎಂಬುದನ್ನು ಈ ನಾಟಕದಲ್ಲೂ ಸಹ ಅಭಿವ್ಯಕ್ತಿಸಲಾಗಿದೆ.

'ಅಪೂರ್ವ' ಏಕಾಂಕ ನಾಟಕ ಸಂಗ್ರಹದಲ್ಲಿ ಬರುವ ಸೋಗಿನ ಸ್ತರಗಳು ನಾಟಕದ ಪಾತ್ರಗಳು ಸಂಭಾಷಣೆಯಲ್ಲಿ ತಮ್ಮ ದೈನಂದಿನ ಕೌಟುಂಬಿಕ ವೃತ್ತಾಂತದ ಸ್ಥಿತಿಗತಿಗಳನ್ನು ತಿಳಿಸುತ್ತವೆ. ಮಹಾರಾಣಿ ಎಂಬ ಪಾತ್ರವು ಹೆಚ್ಚು ಭಾವುಕಗೊಂಡು ನಾಟಕದ ಮಧ್ಯ ಮಧ್ಯ ಅಂದಿನ ವೃತ್ತಿರಂಗಭೂಮಿ ಕಲಾವಿದರ ಸಮಸ್ಯೆಗಳನ್ನು ಎತ್ತಿ ತೋರಿಸುವ ಹಿನ್ನೆಲೆಯಲ್ಲಿ ಕಂಪನಿಯ ಮಾಲಕರು ಸರಿಯಾದ ವೇಳೆಗೆ ಹಣ ಕೊಡದೆ ಸತಾಯಿಸುವಂತಹ ಸಂದರ್ಭಗಳು, ಕೌಟುಂಬಿಕ ಸಮಸ್ಯೆಗಳನ್ನು ಐತಿಹಾಸಿಕ ನಾಟಕ ಮುಖೇನ ರಂಗಭೂಮಿ ಕಲಾವಿದರು ತಮ್ಮ ಒಳಮನಸ್ಸಿನ ಸಂವೇದನೆಯನ್ನು ನಾಟಕ ದೃಶ್ಯಗೊಳ್ಳುತ್ತಿರುವ ಸಂದರ್ಭದಲ್ಲಿಯೇ ತಮ್ಮ ಭಾವನೆಗಳನ್ನು ಅಭಿವ್ಯಕ್ತಿಸುವುದು ಈ ಗದ್ಯಶೈಲಿಯಿಂದ ಕಂಡುಕೊಳ್ಳಲಾಗಿದೆ. ಅಂಥ ಒಂದು ಸಂದರ್ಭ ಈ ರೀತಿ ಇದೆ.

"ಮಹಾರಾಣಿ: ನಾಟಕದ ಮಹಾರಾಣಿ! ನಾನು ಸಹ(ನೆಲಕ್ಕೆ ಕುಸಿದುಬೀಳುತ್ತಿರಲು ಯುವರಾಜನು ಕೈ ಹಿಡಿದು ಆಧಾರವಾಗಿರಲು) ನಾಟಕದ ಮಹಾರಾಣಿ! ನೀ ಅನ್ನೋದು ನಿಜ! ನಿಜ! (ಒಮ್ಮೆಲೆ ಏನೋ ನೆನೆಸಿಕೊಂಡು ಮುಖವನ್ನು ಉಗ್ರವಾಗಿಸಿ ದನಿ ಬದಲಿಸಿ) ನಾ ಸಾಯ್ತೀನಿ ಕೆಂಡದಂತಾ ಉರಿಬಂದ ಕೂಸಿನ್ನ ಮನ್ಯಾಗ ಬಿಟ್ಟಕ್ಯಾಸ ಬಂದೀನಿ ಔಸದಕ್ಕ ಕಾಸಿಲ್ಲ.

ಯುವರಾಜ: ಏನಾಯಿತು? ಏನಮ್ಮ ನೀ ಹೇಳುವುದು?

ಮಹಾರಾಣಿ: ನೀ ಹೇಳಿದಿ ಅಲ್ಲ ಅದನ್ನ! ನಾ ನಾಟಕದ ಮಹಾರಾಣಿ. ಮೂರು ತಿಂಗಳಾತು ಈ ನಾಟಕ ಕಂಪನಿ ಮಾಲಕ ಪಗಾರಾನ ಕೊಟ್ಟಿಲ್ಲ(ರಂಗಸ್ಥಳದ ಒಳಗಡೆ ಗುಜುಗುಜು ಗದ್ದಲ ಸುರುವಾಗುತ್ತದೆ.)

ಯುವರಾಜ: ನನ್ನ ಮಗು ಸಾಯ್ತೈತಿ ನಾನು ಸಾಯ್ತೀನಿ. ಎನ್ನುತ್ತಾ ಕೆಳಗುರುಳುತ್ತಿರುವಾಗ ಯುವರಾಜನು ಅವಳನ್ನು ಎತ್ತಿ ಹಿಡಿಯುತ್ತಿರುತ್ತಾನೆ. ಪರದೆ ಎರಡೂ ಕಡೆಯಿಂದ ಸರಿಯುತ್ತದೆ."೨೪ ಈ ರೀತಿ ಪಾತ್ರಗಳ ಮುಖೇನ ದೈನಂದಿನ ಬದುಕಿನ ವೃತ್ತಾಂತವನ್ನು ತಿಳಿಸುವ ಈ ನಾಟಕ ವೈಶಿಷ್ಟ್ಯ ಪೂರ್ಣವಾದ ಗದ್ಯಶೈಲಿಯಾಗಿದೆ.

ಮುಗಳಿ ಅವರ ಅನುವಾದ ಸಾಹಿತ್ಯದಲ್ಲಿಯೂ ಅವರ ವಿಶಿಷ್ಟ ಗದ್ಯಶೈಲಿಯು ಗಮನಕ್ಕೆ ಬರುತ್ತದೆ. ಅಂತವುಗಳಲ್ಲಿ ಟಿ.ಪಿ.ಕೈಲಾಸಂರ ನಾಟಕಗಳಾದ ಹೋಂರೂಲು, ಬಂಡ್ವಾಳ್ವಿಲ್ಲದ ಬಡಾಯಿ ನಾಟಕಗಳನ್ನು ಉತ್ತರ ಕರ್ನಾಟಕದ ಆಡು ಭಾಷೆಯ ಶೈಲಿಗೆ ಹೊಂದಿಕೊಳ್ಳುವಂತೆ ಬಳಸಿ ಅನುವಾದಿಸಿರುವುದು ತಿಳಿದುಬರುತ್ತದೆ. ಹೋಂರೂಲು ನಾಲ್ಕನೇ ದೃಶ್ಯದಲ್ಲಿ ಮುಗಳಿ ಅವರು ಅನುವಾದಿಸಿದ ಗದ್ಯಶೈಲಿ ಈ ರೀತಿ ಮೂಡಿಬಂದಿದೆ.

"ವೆಂಕಮ್ಮ: ಪಲ್ಯಾ ಕೆಳಗಿಟ್ಟು ಅದನ್ನ ಬ್ಯಾರೆ ಬ್ಯಾರೆ ಮಾಡು.

ಭೀಮ: ಯಜಮಾನ್ರು ಹೇಳಿದ್ರ್ ಅವ್ವಾ, ಪಲ್ಯಾ ಮುಂದಿನ ಖೋಲ್ಯಾಗ ಇಡಬಾರ್ದು ಅಂತ.

ವೆಂಕಮ್ಮ: ಅದ್ಯಾಕೋ ಏನೋ?

ಭೀಮ: ಇದು ಡ್ರಾಯಿಂಗ್ ರೂಂ ಅಂತ.. ಪಲ್ಯಾ ಅಡಗಿ ಸಾಮಾನ.. ಹಿಂದಿನ ಖೋಲ್ಯಾಗ ಇಟಗೋ ಬೇಕಂದ್ರವ್ವಾಯ.. ಯಜಮಾನ್ರು.

ವೆಂಕಮ್ಮ: ಇಲ್ಲಿ ಬಾರೊ.. ನಾ ಯಾರೋ?

ಭೀಮ: ಯ.. ಯಾಕ್ರವ್ವಾ? ಅ.. ಅವ್ವಾವ್ರವ್ವ!

ವೆಂಕಮ್ಮ: ಯಾರೋ.. ನಿನಗ ಪಗಾರ ಕೊಡುವವರು?

ಭೀಮ: ಯ.. ಯಾಕ್ರವ್ವಾ.. ನೀವ ಅಲ್ಲೇನ್ರವ್ವಾ..?

ವೆಂಕಮ್ಮ: ನಿನಗ ಪಗಾರ ಗಿಗಾರದ ಮ್ಯಾಲೆ ಕಣ್ಣಿದ್ರ ಇದನ್ನ ಮಾತ್ರ ಮರೀಬ್ಯಾಡ(ಜೋರಾಗಿ) ಈ ಮನೀಗೆ ಯಜಮಾನ್ರು ಒಬ್ರೆ.. ಅದು ನಾನು.. ತಿಳಿತೇನು"[೨೫]

ಎಂಬಂತೆ ಈ ಗದ್ಯಶೈಲಿ ಅನುವಾದಗೊಂಡಿದೆ. ಟಿ.ಪಿ.ಕೈಲಾಸಂ ನಾಟಕದಲ್ಲಿ ಬೋರನ ಪಾತ್ರದ ಬದಲಿಗೆ ಭೀಮನ ಪಾತ್ರವನ್ನು ಬಳಸಿಕೊಂಡಿದ್ದಾರೆ. ಕಾರಣ ಉತ್ತರ ಕರ್ನಾಟಕದಲ್ಲಿ ಬೋರ ಎಂಬ ಹೆಸರು ಕೇಳಿಬರದೇ ಇದ್ದುದಕ್ಕೆ ಈ ಹೆಸರು ಬಳಸಿಕೊಳ್ಳಲಾಗಿದೆ ಎಂದು ಸ್ಪಷ್ಟಪಡಿಸುತ್ತಾರಾದರೂ ಬಂಡ್ವಾಳ್ವಿಲ್ಲದ ಬಡಾಯಿಯಲ್ಲಿ 'ಬೋರ'ನ ಹೆಸರನ್ನು ಯಥಾವತ್ತಾಗಿ ಬಳಸಿಕೊಂಡಿದ್ದಾರೆ. ಹಾಗೆಯೇ ಟಿ.ಪಿ.ಕೈಲಾಸಂ ನಾಟಕಗಳನ್ನು ರಂಗದ ಮೇಲೆ ಪ್ರಯೋಗಿಸಲು ಉತ್ತರ ಕರ್ನಾಟಕದ ಕಲಾವಿದರಿಗೆ ಕಷ್ಟವಾಗದಿರಲೆಂದು ಈ ನಾಟಕಗಳನ್ನು ಅನುವಾದಿಸಿರುವುದಾಗಿ ತಿಳಿಸುತ್ತಾರೆ.

ಮುಗಳಿ ಅವರ ಲಲಿತಪ್ರಬಂಧ ಕುರಿತಂತೆ ಅವರ ಗದ್ಯಶೈಲಿಯು ಸರಳ ರೀತಿಯಲಿ ಓದಿಸಿಕೊಂಡು ಹೋಗುವಂತಹ ಮಾದರಿಯನ್ನು ಅನುಸರಿಸಿದೆ. ಇವು ಮುಗಳಿ ಅವರ ವ್ಯಕ್ತಿತ್ವದಲ್ಲಿ, ಆಲೋಚನಾಕ್ರಮದಲ್ಲಿ ಕನ್ನಡ ನಾಡು ನುಡಿಯ ಚಿಂತನೆ ಬಗ್ಗೆ ಧ್ಯಾನಿಸುವ ಪ್ರಬಂಧಗಳಾಗಿವೆ. ಜೊತೆಗೆ ವಿದ್ಯಾರ್ಥಿ ಮತ್ತು ಯುವಸಮುದಾಯವನ್ನು ಕೇಂದ್ರವಾಗಿಟ್ಟುಕೊಂಡು ಪ್ರೇರಣಾತ್ಮಕ ಮನೋಭಾವದ ಪ್ರಬಂಧಗಳನ್ನು ರಚಿಸಿರುವುದು ತಿಳಿದುಬರುತ್ತದೆ. ಅಂಥ ಪ್ರಬಂಧಗಳಲ್ಲಿ 'ಕನ್ನಡನಾಡಿನ ಪರೋಪಕಾರ' ಒಂದು. ಅದರಲ್ಲಿ "ಕವಿರಾಜಮಾರ್ಗದ ತರುವಾಯ ನಮಗೆ ದೊರೆತಿರುವ ಗ್ರಂಥ ಪಂಪಕವಿಯ ವಿಕ್ರಮಾರ್ಜುನ ವಿಜಯ ಅಥವಾ ಪಂಪಭಾರತ. ಇದೇ ಮೊದಲ ಮಹಾಕಾವ್ಯ ಎಂದು ಹೆಸರು ಪಡೆದಿದೆ. ಇದರಲ್ಲಿ ತ್ಯಾಗ ಎಂಬ ಗುಣವನ್ನು ತಿರುತಿರುಗಿ ಬಣ್ಣಿಸಲಾಗಿದೆ. ಬನವಾಸಿ ವರ್ಣನೆಯ ಪದ್ಯವೊಂದರಲ್ಲಿ ತ್ಯಾಗ, ಭೋಗ, ಅಕ್ಕರ, ಗೇಯ, ಗೋಷ್ಠಿ, ಇವುಗಳಿಗೆ ಆಗರವಾದ ಮನುಷ್ಯರೇ ಮನುಷ್ಯರು, ಇಂತಹ ಮನುಷ್ಯರಾಗಿ ಹುಟ್ಟುವುದಾಗದಿದ್ದರೆ ಮರದುಂಬಿಯಾಗಿ ಇಲ್ಲವೇ ಕೋಗಿಲೆಯಾಗಿ ಬನವಾಸಿ ದೇಶದೊಳಗೆ ಹುಟ್ಟಬೇಕೆಂಬ ಕನಸನ್ನು ಕವಿ ಕಂಡಿದ್ದಾನೆ. ಇಲ್ಲಿ ಹೇಳಿದ ಗುಣಗಳಲ್ಲಿ ತ್ಯಾಗ ಮೊದಲನೆಯದು, ಆಮೇಲಿನದು ಭೋಗ. ಅಂದರೆ ತ್ಯಾಗವನ್ನು

ಮನುಷ್ಯ ಮೊದಲು ಕಲಿಯಬೇಕು. ಆಮೇಲೆ ಭೋಗವನ್ನು ಬಯಸಬೇಕು"[೨೬] ಎಂದು ವಿದ್ಯಾರ್ಥಿ ಯುವಸಮುದಾಯವನ್ನು ಕೇಂದ್ರವಾಗಿಟ್ಟುಕೊಂಡು ರಚಿಸಿರುವ ಈ ಪ್ರಬಂಧವು ಸಮಾಜಮುಖಿಯಾಗಿ ನೊಂದುಬೆಂದ ಸಮುದಾಯಗಳಿಗೆ ಸಹಾಯ, ಸಹಕಾರವನ್ನು ಮಾಡುವಂತಹ ಪರೋಪಕಾರ ಮನೋಭಾವವನ್ನು ಬೆಳೆಸಿಕೊಳ್ಳಬೇಕೆಂದು ಅವರ ಗದ್ಯಶೈಲಿಯಿಂದ ತಿಳಿದುಬರುತ್ತದೆ.

ಮುಗಳಿ ಅವರ 'ಕನ್ನಡ ಕರೆ' ಪ್ರಬಂಧದಲ್ಲಿಯೂ ಅವರ ಗದ್ಯಶೈಲಿಯು ಈ ರೀತಿ ಕಂಡುಬರುತ್ತದೆ. "ಕನ್ನಡವೇ ಕನ್ನಡಿಗರನ್ನು ಒಂದುಗೂಡಿಸುವ ಶಕ್ತಿ. ಇದು ಇಂದಿನದಲ್ಲ, ನಿನ್ನೆಯದಲ್ಲ, ಸಾವಿರಾರು ವರ್ಷಗಳಿಂದ ಬೆಳೆದುಬಂದಿರುವ ಜಾಗ್ರತ ಶಕ್ತಿ ಕನ್ನಡವೆಂದರೆ ಬರೀ ನುಡಿಯಲ್ಲ, ಬರಿ ನಾಡೂ ಅಲ್ಲ. ಕನ್ನಡವೆಂಬ ನಾಡಿನಲ್ಲಿ ಕನ್ನಡ ನುಡಿಯನ್ನಾಡುವ ಜನರು ತಮ್ಮ ಇತಿಹಾಸ, ತಮ್ಮ ಸಾಹಿತ್ಯ, ತಮ್ಮ ಸಂಸ್ಕೃತಿಗಳ ಉಜ್ವಲ ಕುಂಚದಿಂದ ಕಾಲಪಟದ ಮೇಲೆ ಅಳಿಸಲು ಬಾರದಂತೆ ಬರೆದ ವೈವಿಧ್ಯಪೂರ್ಣವಾದ, ವೈಭವಯುತವಾದ ಸುವರ್ಣಚಿತ್ರ, ಈ ಸುವರ್ಣಚಿತ್ರವನ್ನು ಕನ್ನಡಿಗರು ನೋಡಬೇಕು, ನಲಿಯಬೇಕು. ಇದರಿಂದ ಸ್ಫೂರ್ತಿ ಪಡೆದು ತಮ್ಮ ಬಾಳನ್ನು ಕಟ್ಟಬೇಕು, ತಮ್ಮ ಭವಿಷ್ಯವನ್ನು ರೂಪಿಸಿಕೊಳ್ಳಬೇಕು"[೨೭] ಎಂದು ತಿಳಿಸುತ್ತಾ 'ಪಾಥೇಯ' ಲಲಿತಪ್ರಬಂಧದಲ್ಲೂ ವಿದ್ಯಾರ್ಥಿ ಹಾಗೂ ಯುವಸಮುದಾಯವನ್ನು ಕೇಂದ್ರವಾಗಿಟ್ಟುಕೊಂಡು ಬಾಳಿನ ಗುರಿ, ಸ್ವವಿಕಾಸ, ಸ್ವತಂತ್ರ ವಿಚಾರ, ನಂಬಿಕೆ, ಪ್ರೀತಿ, ಕಾಯಕ, ಅಭಿರುಚಿ, ಸಂಸ್ಕೃತಿಗಳ ಬಗ್ಗೆ ಅರಿತು ನಡೆಯಬೇಕು. ನಿಮ್ಮ ಏಳಿಗೆಯನ್ನು ಸ್ವತಃ ನೀವೇ ರೂಪಿಸಿಕೊಳ್ಳಬೇಕು. ಶ್ರದ್ಧೆಯಿಂದ ಓದುಬರಹ ದುಡಿಮೆ ಮಾಡಬೇಕೆಂದು ಬೋಧಿಲಾಗಿದೆ.

ಮುಗಳಿ ಅವರ ಇತರ ಸಾಹಿತ್ಯ ಪ್ರಕಾರಗಳಿಗಿಂತ ವಿಮರ್ಶಾ ಸಾಹಿತ್ಯ ಹೆಚ್ಚು ಮಾನ್ಯತೆಯನ್ನು ಪಡೆದಿದೆ ಎಂದು ಹೇಳಬೇಕು. ಮುಗಳಿ ಅವರ ವಿಮರ್ಶೆಯು ಯಾವುದೇ ಪಂಥಕ್ಕೆ ಅಂಟಿಕೊಳ್ಳದೆ, ಪಾಶ್ಚಾತ್ಯ ಚಿಂತನಾಕ್ರಮವನ್ನು ಅನುಸರಿಸದೆ ಕನ್ನಡದ ನೆಲಮೂಲ ಸಂಸ್ಕೃತಿಯ ಬಗ್ಗೆ ಅಭ್ಯಸಿಸುವ, ಚರ್ಚಿಸುವ ಮನೋಭಾವದ ವಿಮರ್ಶೆಯ ಕ್ರಮವನ್ನು ಅವರ ಗದ್ಯಶೈಲಿಯಿಂದ ತಿಳಿದುಬರುತ್ತದೆ. ಇದಕ್ಕೆ ನಿದರ್ಶನವಾಗಿ ಅವರ ಕನ್ನಡ ಸಾಹಿತ್ಯ ಈ ಭಾಗವನ್ನು ಗುರುತಿಸಬಹುದಾಗಿದೆ. "ವಡ್ಡಾರಾಧನೆ ಎಂಬ ಗದ್ಯಗ್ರಂಥವು ಕನ್ನಡ ಸಾಹಿತ್ಯದ ಅಪೂರ್ವ ಸಂಪತ್ತಿಯಾಗಿ ದೊರೆತಿದೆ. ಅದರಲ್ಲಿ ಉದ್ಧೃತವಾದ ಸಂಸ್ಕೃತ-ಪ್ರಾಕೃತ ಪದಗಳ ಮೂಲವನ್ನು ಶೋಧಿಸಿ ಭಾಷಾಶೈಲಿಯನ್ನು ಗಮನಿಸಿ, ಅದು ಬಹುಶಃ ೧೧ನೇ ಶತಮಾನದಲ್ಲಿ ರಚಿತವಾದದ್ದೆಂದು ಉಪಾಧ್ಯೆ ಅವರು ಅಭಿಪ್ರಾಯಿಸಿದ್ದಾರೆ. ಕ್ರಿ.ಶ. ೯ನೇ ಶತಮಾನದ ಪದಪ್ರಯೋಗಗಳ ಆಧಾರದ ಮೇಲೆ ಬಹುಶಃ ಕ್ರಿ.ಶ. ೯೨೦ರಲ್ಲಿ ಅದು ರಚಿತವಾಗಿರಬಹುದು ಎಂದು ಡಿ.ಎಲ್.ನರಸಿಂಹಾಚಾರ್ಯರು ನಿರ್ಣಯಿಸಿದ್ದಾರೆ. ಅದರಲ್ಲಿ ತೀರ ಹಳೆಯದೆನ್ನಬಹುದಾದ ಕೆಲವು ವಿಶೇಷ ಪ್ರಯೋಗಗಳು ಕಂಡುಬರುವುದರಿಂದಲೂ 'ಕವಿರಾಜಮಾರ್ಗದಲ್ಲಿ ಹೇಳಿದ ಸಂಮಿಶ್ರ ಗದ್ಯ ಕತೆಯ ಲಕ್ಷಣಕ್ಕೆ ಅದು ಸರಿಹೋಗುವುದರಿಂದಲೂ ಅದು ಕ್ರಿ.ಶ. ೬ನೇ ಶತಮಾನಕ್ಕಿಂತ ಈಚಿನದಲ್ಲವೆಂದೂ ಅದಕ್ಕೆ ಹಿಂದೆಯೇ ರಚಿತವಾಗಿರಬೇಕೆಂದು

ಗೋವಿಂದ ಪೈಯವರು ಸವಿವರವಾಗಿ ತೋರಿಸಿದ್ದಾರೆ. ಅವರ ಅಭಿಪ್ರಾಯ ದಿಟವಾದರೆ ಪ್ರಾಚೀನ ಗ್ರಂಥಗಳಲ್ಲಿ 'ವಡ್ಡಾರಾಧನೆ' ಮೇಲಾದ ಸ್ಥಾನಕೆ ಅರ್ಹವಾಗುತ್ತದೆ. ಆದರೆ ಉಪಾಧ್ಯೆ ಅವರು ಮೇಲಿನ ಗಡುವಿಗೆ ಕೊಟ್ಟ ಪ್ರಬಲ ಕಾರಣಗಳನ್ನು ಅಲ್ಲಗಳೆಯುವವರಿಗೆ ಅದನ್ನು ಪ್ರಾಚೀನಗೊಳಿಸುವುದು ಸಾಹಸದ ಮಾತೇ ಸರಿ"[೨೮] ಎಂಬ ಅಭಿಪ್ರಾಯಕ್ಕೆ ಬರುತ್ತಾರೆ.

'ರನ್ನನ ಕೃತಿರತ್ನ'ದಲ್ಲಿ ಅವರ ಗದ್ಯಶೈಲಿಯು ಈ ರೀತಿ ಕಂಡುಬರುತ್ತದೆ. "ದುರ್ಯೋಧನನು ವೈಶಂಪಾಯನ ಸರೋವರದಲ್ಲಿದ್ದ ಸಮಾಚಾರ ತಿಳಿಯಿತು. ಪಾಂಡವರೆಲ್ಲ ಅವನನ್ನು ಅಲ್ಲಿಂದ ಎಬ್ಬಿಸಲು ಹೋಗುತ್ತಾರೆ. ಉಳಿದಾರ ಮಾತಿಗೂ ಅವನು ಏಳದಾಗಲು ಭೀಮನು 'ಉದ್ಧಾಮ ಕೋಪಾಟೋಪಚಿತ್ತದಿಂ' ಹುಬ್ಬುಗಂಟಿಕ್ಕಿ ಆಡಿದ ಮಾತುಗಳಲ್ಲಿ ಅದೆಂತ ಮೂದಲಿಕೆ, ತಿರಸ್ಕಾರ, ಕೆಣಕಾಟ, ತೋರಿವೆ; 'ಮರುಳೆ ಬರ್ದುಕಲ್ಪಗೆವಾ ನಿನ್ನ ಸವಿಯಂ ನೋಟ್ಟಿಂ ಚಿಃ ಸತ್ತರೇಂ ಪುಟ್ಟರೇ"[೨೯] ಎಂಬ ದೇಸಿಪದಗಳು ಆಯಾ ಭಾವಕ್ಕೆ ಮೈಕೊಟ್ಟು ಸಮರ್ಪಕವಾಗಿ ಬಂದಿವೆ.

ಮುಗಳಿ ಅವರ ಸಾಹಿತ್ಯೋಪಾಸನೆ ವಿಮರ್ಶಾ ಪ್ರಬಂಧಗಳಲ್ಲಿ 'ಹೊಸಗನ್ನಡ ಸಾಹಿತ್ಯದ ನೆಲೆ ಬೆಲೆ' ಲೇಖನವು ಗದ್ಯಶೈಲಿ ಕುರಿತಂತೆ ತುಂಬಾ ಉಪಯುಕ್ತ ಲೇಖನವೆನಿಸುತ್ತದೆ. ಸ್ಪಷ್ಟವಾದ ಅಭಿಪ್ರಾಯಗಳು ಮತ್ತು ನಿರ್ಣಯಗಳು ಹೊಸ ಪೀಳಿಗೆಯ ವಿಮರ್ಶಕರಿಗೆ ಮಾರ್ಗದರ್ಶನ ಮಾಡಿದಂತಿದೆ. "ಗದ್ಯವು ಬುದ್ಧಿ ಕಂಡ ಸತ್ಯವನ್ನು ಇದ್ದಂತೆ ಬಣ್ಣ ಬಳಿಯದೇ ಹೇಳುವ ಶೈಲಿ. ಶಾಸ್ತ್ರೀಯ ಸತ್ಯಗಳೆಲ್ಲ ಗದ್ಯವೇ ಬಾಯಿ, ವ್ಯವಹಾರ ನಿಷ್ಠುರ ನಿಜಾಂಶಗಳನ್ನು ಚೊಕ್ಕವಾಗಿ ಗದ್ಯವೇ ಉಸುರುತ್ತದೆ. ಇಂದ್ರಿಯ ಗ್ರಾಮದ ಬಾಹ್ಯಸತ್ಯವು ವಿವರ ವಿವರದಲ್ಲಿ ಗದ್ಯಕ್ಕೆ ಪ್ರಿಯವಾದುದು. ಮಾನವ ವ್ಯವಹಾರಗಳನ್ನೆಲ್ಲ ಕಾಲದಾದಿಯಿಂದ ಚಾಚೂ ಬಿಡದೆ ಬೇಸರವಿಲ್ಲದೆ, ಭಾವನೆಗೊಳಗಾಗದೆ ಬರೆದಿಡುವ ಚಿತ್ರಗುಪ್ತನಂತೆ ಈ ಗದ್ಯವೂ ಭಾವನಾಶೂನ್ಯ ಇಂದ್ರಿಯಗಾಹ್ಯ, ಸತ್ಯದ ವಾಣಿ. ಇದರ ಭಾಷೆ ಒಂದೇ ಒಂದು ಅರ್ಥದ ಸ್ಪಷ್ಟ ಸುಲಭ ಸರಣಿ; ಎಂದರೆ ಅದು ಬರಿ 'ವಾಚಕ' ಅದರ ವಾಕ್ಯಕ್ರಮವು ನಿಶ್ಚಿತ ಯಾಂತ್ರಿಕ. ಶಬ್ದಕೋಶಕ್ಕೆ ಬಿರುಸು-ನುಣುಪು ಎಂಬ ಭೇದ ಗೊತ್ತಿಲ್ಲ. ಚೆಲುವು-ಹೊಲೆ ಎಂಬ ನಿರ್ಬಂಧವಿಲ್ಲ. ಪ್ರಾಸದ ಮತ್ತು ಛಂದಸ್ಸಿನ ಕಟ್ಟಳೆಯನ್ನು ಅದು ಅರಿಯದು. ವ್ಯಾಕರಣವು ನಿಲ್ಲಿಸುವಲ್ಲಿ ನಿಲ್ಲಬೇಕು. ಇಲ್ಲದಲ್ಲಿ ಸಾಗುವಷ್ಟು ದೂರ ಸಾಗಬೇಕು. ಒಟ್ಟಾಗಿ ಯಥಾತಥ್ಯ ಹಾಗೂ ಸುಸ್ಪಷ್ಟತೆ ಇವು ಗದ್ಯಕಥನದ ಎರಡು ಗಾಲಿಗಳಿದ್ದಂತೆ"[೩೦] ಎಂದಿದ್ದಾರೆ.

ಮುಗಳಿ ಅವರು ತಮ್ಮ ವಿವೇಚನಾತ್ಮಕ ಪ್ರಬಂಧಗಳಲ್ಲಿ 'ದರ್ಶನದ' ಬಗ್ಗೆ ತಿಳಿಸುತ್ತಾರೆ. ದರ್ಶನವೆಂದರೆ ಮುಖ್ಯವಾಗಿ ಸ್ವಂತ ಜೀವನಾನುಭವ, ರಸಾನುಭವಗಳಿಂದ ರೂಪಗೊಂಡ ಜೀವನದೃಷ್ಟಿ ರಸದೃಷ್ಟಿ ಎಂದಿದ್ದಾರೆ. ಪ್ರತಿಯೊಬ್ಬ ಸಾಹಿತಿಯು ತನ್ನ ಜೀವನಾನುಭವವನ್ನೇ ತನ್ನ ಕೃತಿಗಳಲ್ಲಿ ಚಿತ್ರಿಸಬಲ್ಲ ಎಂಬ ಅವರ ಹೇಳಿಕೆಗಳು ನಮ್ಮ ಒಳಗಣ್ಣನ್ನು ತೆರೆಯಬಲ್ಲವು. ಕವಿಯ ಕಲ್ಪನೆ ಸಮಾಜಮುಖಿಯಾಗಿರಬೇಕೆಂದು ತಿಳಿಸುತ್ತಾರೆ. 'ಭಾಷಾಂತರ ಕಲೆ' ತಿಳಿಸುವಂತೆ ಭಾಷಾಂತರ

ಕಲೆಯ ಜೀವಾಳವೆಂದರೆ ತಾದ್ಯಾತ್ಮ ಪರಕಾಯ ಪ್ರವೇಶದಂತೆ ಪರಹೃದಯ ಪ್ರವೇಶ ಎಂದು ಹೇಳಿದ್ದಾರೆ. ಒಟ್ಟಾರೆ ಮುಗಳಿ ಅವರ ಗದ್ಯಶೈಲಿಯು ಬಲು ಅಚ್ಚುಕಟ್ಟಾದ ರೂಪವನ್ನು ಪಡೆದಿದೆ ಎಂದು ಹೇಳಬೇಕು. ಹೆಸರು ನೋಡದೆ ಓದಿದರೂ ಇದು ರಂ.ಶ್ರೀ.ಮುಗಳಿ ಅವರ ಗದ್ಯ ಎಂದು ಹೇಳಬಹುದಾದ ಮಟ್ಟಿಗೆ ತನ್ನತನವನ್ನು ಉಳಿಸಿಕೊಂಡಿದೆಯೆಂದರೆ ತಪ್ಪಾಗಲಾರಾದು.

ಹೀಗೆ ಮುಗಳಿ ಅವರ ಪದ್ಯಶೈಲಿ ಮತ್ತು ಗದ್ಯಶೈಲಿಯು ತುಂಬ ಅನನ್ಯತೆಯಿಂದ ಕೂಡಿದೆ. ಅವರ ಬರವಣಿಗೆಯ ಶೈಲಿಯು ಶಬ್ದಗಳ ಬೆಳವಣಿಗೆಗೆ ಗಮನಾರ್ಹ ಕೊಡುಗೆ ನೀಡಿದೆ.

ಕೊನೆಟಿಪ್ಪಣಿ

೧. ರಂಗಣ್ಣ ಎಸ್.ವಿ., ಶೈಲಿ ೧, ೨, ೩, ಎಸ್.ಆರ್ ಶಿವರಾಮ್ ಪ್ರಕಾಶನ, ಬೆಂಗಳೂರು, ೨೦೦೦ ಪುಟ ೫

೨. ಪರಡ್ಡಿ ಎಸ್.ಎಸ್., ಡಿ.ಎಸ್. ಕರ್ಕಿ: ಸಮಗ್ರ ಸಾಹಿತ್ಯ ಅಧ್ಯಯನ(ಮಹಾಪ್ರಬಂಧ), ಕರ್ನಾಟಕ ವಿ.ವಿ, ಧಾರವಾಡ, ೨೦೦೮, ಪುಟ ೨೦೨

೩. ಅಂಗಡಿ ಎಸ್.ಎಸ್., ಚಂದ್ರಶೇಖರ ಕಂಬಾರರ ಕಾವ್ಯಭಾಷೆ, ಯಾಜಿ ಪ್ರಕಾಶನ, ಹೊಸಪೇಟೆ, ೨೦೧೪, ಪುಟ ೭೧

೪. ಅಂಗಡಿ ಎಸ್.ಎಸ್., ಎಂ ಚಿದಾನಂದಮೂರ್ತಿ ಸಾಹಿತ್ಯ ಸಾಧನೆ, ಸಪ್ನಬುಕ್ ಹೌಸ್, ಬೆಂಗಳೂರು, ೨೦೧೧, ಪುಟ ೧೫೨

೫. ಮುಗಳಿ ರಂ.ಶ್ರೀ., ಅಪಾರಕರುಣೆ, ವಿಲ್ಲಿಂಗ್ಡನ್ ಕಾಲೇಜ್ ವಿಶ್ರಾಮಭಾಗ ಸಾಂಗ್ಲಿ, ೧೯೫೧, ಪುಟ ೨೩

೬ ಅದೇ, ಪುಟ ೪೨

೭ ಅದೇ, ಪುಟ ೨೭

೮. ಅದೇ, ಪುಟ ೫೫

೯. ಅದೇ, ಪುಟ ೭

೧೦. ಮುಗಳಿ ರಂ.ಶ್ರೀ., ಮಣಿಮಾಲೆ, ಉಷಾ ಸಾಹಿತ್ಯ ಮಾಲೆ ಮೈಸೂರು, ೧೯೭೫, ಪುಟ ೭

೧೧. ಅದೇ, ಪುಟ ೮

೧೨. ರಾಘವೇಂದ್ರರಾವ್ ಎಚ್.ಎಸ್., ರಂ.ಶ್ರೀ.ಮುಗಳಿ ಸಮಗ್ರ ಸಾಹಿತ್ಯ ಕಾದಂಬರಿ, ಕತೆಗಳು (ಸಂಪುಟ ೧ ಭಾಗ ೧), ಕನಸಿನ ಕೆಳದಿ ಕಥಾಸಂಕಲನ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ೨೦೧೩, ಪುಟ ೧೪೮

೧೩. ಅದೇ, ಪುಟ ೨೦೬

೧೪. ಅದೇ, ಪುಟ ೩೬೯

೧೫. ಅದೇ, ಪುಟ ೩೭೨

೧೬. ರಾಘವೇಂದ್ರರಾವ್ ಎಚ್.ಎಸ್., ರಂ.ಶ್ರೀ.ಮುಗಳಿ ಸಮಗ್ರ ಸಾಹಿತ್ಯ ಕಾದಂಬರಿ, ಕತೆಗಳು (ಸಂಪುಟ೧ ಭಾಗ೨), ಅನ್ನ ಕಾದಂಬರಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ೨೦೧೩, ಪುಟ ೧೦೮

೧೭. ಅದೇ, ಪುಟ ೧೦೬

೧೮. ರಾಘವೇಂದ್ರರಾವ್ ಎಚ್.ಎಸ್., ರಂ.ಶ್ರೀ.ಮುಗಳಿ ಸಮಗ್ರ ಸಾಹಿತ್ಯ ಕಾದಂಬರಿ, ಕತೆಗಳು (ಸಂಪುಟ೧ ಭಾಗ೨), ಬಾಳುರಿ ಕಾದಂಬರಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ೨೦೧೩, ಪುಟ ೧೧೩

೧೯. ಅದೇ, ಪುಟ ೨೩೨

೨೦. ಅದೇ, ಪುಟ ೨೩೪

೨೧. ಅದೇ, ಪುಟ ೩೨೧

೨೨. ಅದೇ, ಪುಟ ೯

೨೩. ಮುಗಳಿ ರಂ.ಶ್ರೀ., ವಿಜಯ ಸಾಮ್ರಾಜ್ಯ, ವಿಜಯ ಗ್ರಂಥಮಾಲೆ, ಗಣಪತಿಬೀದಿ, ಬೆಳಗಾವಿ, ೧೯೪೮, ಪುಟ ೯

೨೪. ಮುಗಳಿ ರಂ.ಶ್ರೀ., ಅಪೂರ್ವ ಏಕಾಂಕ ಸಂಗ್ರಹ(ನಾಟಕ), ಉಷಾ ಸಾಹಿತ್ಯ ಮಾಲೆ, ಮೈಸೂರು, ೧೯೮೦, ಪುಟ ೧೪

೨೫. ಮುಗಳಿ ರಂ.ಶ್ರೀ., ಹೋಂರೂಲು(ಅನುವಾದ)ಪ್ರಕಾಶ್ ಪ್ರಿಂಟರ್, ಗಾಂಧೀಬಜಾರ್, ಬೆಂಗಳೂರು, ೧೯೫೮, ಪುಟ ೨೧,೨೨

೨೬. ಮುಗಳಿ ರಂ.ಶ್ರೀ., ಕನ್ನಡನಾಡಿನಲ್ಲಿ ಪರೋಪಕಾರ, ಐ.ಬಿ.ಎಚ್. ಪ್ರಕಾಶನ, ಬೆಂಗಳೂರು, ೧೯೮೩, ಪುಟ ೭

೨೭. ಮುಗಳಿ ರಂ.ಶ್ರೀ., ಕನ್ನಡದ ಕರೆ, ಸ್ಮಾರಕ ಗ್ರಂಥಮಾಲೆ, ಮೈಸೂರು, ೧೯೬೯, ಪುಟ ೧

೨೮. ರಾಘವೇಂದ್ರರಾವ್ ಎಚ್.ಎಸ್.,(ಸಂ).ರಂ.ಶ್ರೀ.ಮುಗಳಿ ಸಮಗ್ರ ಸಾಹಿತ್ಯ–ಸಾಹಿತ್ಯ ಚರಿತ್ರೆಗಳು–ಕನ್ನಡ ಸಾಹಿತ್ಯ ಚರಿತ್ರೆ(ಸಂಪುಟ ೨ ಭಾಗ ೧), ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ೨೦೧೩, ಪುಟ ೨೩, ೪೦

೨೯. ಅದೇ, ಪುಟ ೧೯೪

೩೦. ಅದೇ, ಪುಟ ೨೫೭

ಅಧ್ಯಾಯ ಏಳು

ಸಮಾರೋಪ

ಅಧ್ಯಾಯ ಏಳು

ಸಮಾರೋಪ

ಕನ್ನಡ ನವೋದಯ, ನವ್ಯ ಸಾಹಿತ್ಯ ಸಂದರ್ಭದಲ್ಲಿ ಕುವೆಂಪು, ದ.ರಾ.ಬೇಂದ್ರೆ, ವಿ.ಕೃಗೋಕಾಕ್, ಶಿವರಾಮ ಕಾರಂತ, ಡಿ.ವಿ.ಜಿ., ಮಾಸ್ತಿ ವೆಂಕಟೇಶ ಅಯ್ಯಂಗಾರ್, ಶಿವರುದ್ರಪ್ಪ ಇನ್ನೂ ಮೊದಲಾದ ಮಹನೀಯರು ಸಾಹಿತ್ಯ ಕೃಷಿಗೈದಿದ್ದಾರೆ. ಇವರಂತೆ ರಂ.ಶ್ರೀ.ಮುಗಳಿ ಅವರು ಕೂಡಾ ಸೃಜನಶೀಲ ಮತ್ತು ಸೃಜನೇತರ ಸಾಹಿತ್ಯದಲ್ಲಿ ತಮ್ಮದೇ ಆದ ಕೊಡುಗೆ ನೀಡಿದ್ದಾರೆ. ಅದರ ಜೊತೆಗೆ ಅವರ ಸಂಶೋಧನೆಗೆ ಸಂಬಂಧಿಸಿದಂತೆ ಹೇಳುವುದಾದರೆ ಸಾಹಿತ್ಯ ಚರಿತ್ರೆ, ಛಂದಸ್ಸು, ಕರ್ನಾಟಕದ ಸಾಂಸ್ಕೃತಿಕ ಚರಿತ್ರೆ ಅಂತಹ ವಿಷಯದಲ್ಲಿಯೂ ಅವರ ಸೇವೆ ಮಹತ್ವದ್ದಾಗಿದೆ. ಕಾವ್ಯ, ಕತೆ, ಕಾದಂಬರಿ, ನಾಟಕ, ಲಲಿತಪ್ರಬಂಧ, ಜೀವನಚರಿತ್ರೆ, ಆತ್ಮಚರಿತ್ರೆ, ವೈಚಾರಿಕ ಬರವಣಿಗೆ, ಛಂದಸ್ಸು, ಸಾಹಿತ್ಯ ಚರಿತ್ರೆ, ಸಾಹಿತ್ಯ ವಿಮರ್ಶೆ, ಕಾವ್ಯಮೀಮಾಂಸೆ, ಅನುವಾದ, ಸಂಪಾದನೆ ಹತ್ತು ಹಲವು ಪ್ರಕಾರಗಳಲ್ಲಿ ಕೃಷಿಗೈದಿದ್ದಾರೆ. ಇಷ್ಟೇ ಅಲ್ಲದೇ ನಮ್ಮ ನಾಡುನುಡಿಗಳ ಶಿಕ್ಷಣ, ಸಂಸ್ಕೃತಿ ನಿರ್ಮಾಣ, ಹೊಸ ವೈಚಾರಿಕ ಮನೋಧರ್ಮದ ದೃಷ್ಟಿಯಿಂದ ಎದುರಿಸಬೇಕಾದ ಸವಾಲುಗಳು ಸಮಸ್ಯೆಗಳ ಹುಡುಕಾಟವು ಅವರಿಗೆ ಮುಖ್ಯವೆನಿಸುತ್ತದೆ. ಈ ನಿಟ್ಟಿನಲ್ಲಿ ಮುಗಳಿ ಅವರು ಮಾಡಿದ ಸಾಹಿತ್ಯ ಕೃಷಿಯನ್ನು ಪರಿಶೀಲಿಸಿ ಮಹಾಪ್ರಬಂಧದಲ್ಲಿ ವಿವರಿಸಿ ವಿಶ್ಲೇಷಿಸಲಾಗಿದೆ.

ಈ ಮಹಾಪ್ರಬಂಧದಲ್ಲಿ ವಿಭಿನ್ನ ನೆಲೆಗಳಿಂದ ಅವುಗಳ ಸಾಂಸ್ಕೃತಿಕ ಮಹತ್ವವನ್ನು ಕಂಡುಕೊಳ್ಳುವ ಪ್ರಯತ್ನ ಮಾಡಲಾಗಿದೆ. ಯಾವುದೇ ಅಧ್ಯಯನಕ್ಕೆ ಕೊನೆ ಎಂಬುದಿಲ್ಲ. ಕಾಲದ ಆವರ್ತಕ್ಕೆ ತಕ್ಕಂತೆ ಅದು ಮತ್ತೆ ಮತ್ತೆ ಮರುನಿರ್ವಚನಕ್ಕೆ ಒಳಗಾಗುತ್ತಲೇ ಇರುತ್ತದೆ. ಪ್ರಸ್ತುತ ಈ ಮಹಾಪ್ರಬಂಧವು ಒಂದು ಅಧ್ಯಯನದ ಚೌಕಟ್ಟಿಗೆ ಒಳಪಟ್ಟಿದೆ. ಆದ್ದರಿಂದ ಅಧ್ಯಯನದ ಅಂತಿಮ ಹಂತದಲ್ಲಿ ಈ ಅಧ್ಯಯನದಿಂದ ಕಂಡುಕೊಂಡ ಮುಖ್ಯ ಫಲಿತಗಳನ್ನು ಈ ಕೆಳಗಿನಂತೆ ನೀಡಲಾಗಿದೆ.

ಫಲಿತಗಳು

* ರಂ.ಶ್ರೀ.ಮುಗಳಿ ಸಮಗ್ರ ಸಾಹಿತ್ಯ ಅಧ್ಯಯನದಲ್ಲಿ ಅವರು ರಚಿಸಿದ ಎಲ್ಲಾ ಸಾಹಿತ್ಯ ಕೃತಿಗಳನ್ನು ಹಲವು ಪ್ರಕಾರಗಳಾಗಿ ವಿಂಗಡಿಸಿಕೊಂಡು ಚರ್ಚಿಸಿ ವಿಶ್ಲೇಷಿಸಲಾಗಿದೆ. ಅವರ ಸಾಹಿತ್ಯ ಕೃತಿಗಳಲ್ಲಿ ವಸಾಹತುಶಾಹಿ ಸೃಷ್ಟಿಸಿದ ಬಿಕ್ಕಟ್ಟುಗಳು, ರಾಷ್ಟ್ರೀಯತೆಯ ಹೋರಾಟದ

ಸ್ಫೂರ್ತಿ, ಭಾರತೀಯತೆ ಪ್ರತಿಪಾದನೆಯಂತ ಸಂಗತಿಗಳನ್ನು ಈ ಪ್ರಬಂಧದಲ್ಲಿ ಕಂಡುಕೊಳ್ಳಲಾಗಿದೆ. ಸ್ವಾತಂತ್ರ್ಯ ಹೋರಾಟದ ಸಂದರ್ಭಕ್ಕೆ ಅನುಗುಣವಾಗಿ ತಮ್ಮ ನಿಷ್ಠತೆಯನ್ನು ಸೂಚಿಸುವ ಮನೋಭಾವ ಅವರ ಸಾಹಿತ್ಯ ಕೃತಿಗಳಿಂದ ಕಂಡುಬರುವುದನ್ನು ಈ ಅಧ್ಯಯನದ ಮೂಲಕ ಕಂಡುಕೊಳ್ಳಲಾಗಿದೆ.

* ಮುಗಳಿ ಅವರ 'ಕನ್ನಡ ಸಾಹಿತ್ಯ ಚರಿತ್ರೆ'ಯು ಸಂಶೋಧನೆಗೊಳಪಟ್ಟ ಅಪರೂಪದ ಕೃತಿಯಾಗಿದೆ. ಓದುಗರ, ವಿದ್ಯಾರ್ಥಿಗಳ, ವಿಮರ್ಶಕರ, ಸಂಶೋಧಕರ, ಪ್ರಾಧ್ಯಾಪಕರ ಮೆಚ್ಚಿಗೆ ಪಡೆದ ಈ ಕೃತಿಯು ತನ್ನದೇ ಆದ ಮಹತ್ವವನ್ನು ಉಳಿಸಿಕೊಂಡಿದೆ. ಈ ಕೃತಿಯು ಇತರ ಸಾಹಿತ್ಯ ಚರಿತ್ರೆಕಾರರ ಕೃತಿಗಳಿಗಿಂತ ಹೇಗೆ ಭಿನ್ನವಾಗಿದೆ ಎಂಬುದನ್ನು ಕಂಡುಕೊಳ್ಳಲಾಗಿದೆ. ಉದಾಹರಣೆಗೆ ತ.ಸು.ಶಾಮರಾಯರ 'ಕನ್ನಡ ಸಾಹಿತ್ಯ ಚರಿತ್ರೆ', ಸಿ.ವೀರಣ್ಣನವರ 'ಕನ್ನಡ ಸಾಹಿತ್ಯ ಚಾರಿತ್ರಿಕ ಬೆಳವಣಿಗೆ', ಕೀರ್ತಿನಾಥ ಕುರ್ತಕೋಟಿ ಅವರ 'ಯುಗಧರ್ಮ ಮತ್ತು ಸಾಹಿತ್ಯ ದರ್ಶನ' ಮತ್ತು ಎಲ್.ಎಸ್.ಶೇಷಗಿರಿರಾವ್ ಅವರ 'ಹೊಸಗನ್ನಡ ಸಾಹಿತ್ಯ ಚರಿತ್ರೆ'ಯೊಂದಿಗೆ ತೌಲನಿಕವಾಗಿ ಸಮೀಕ್ಷಿಸಿ ವಿವರಿಸಲಾಗಿದೆ.

* ಮುಗಳಿ ಅವರ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಪಂಪನಿಂದ ಮುದ್ದಣ್ಣನವರೆಗೆ ಎಲ್ಲಾ ಕವಿಗಳ ಸಮಗ್ರ ಹಾಗೂ ಸಂಬಂಧಿತ ಅಧ್ಯಯನದ ಸಾಧ್ಯತೆ ಮತ್ತು ಅಗತ್ಯತೆಗಳನ್ನು ತಿಳಿಸುವ ಅವರ ಸಂಶೋಧನಾ ಕ್ರಮವನ್ನು ತಿಳಿಸಲಾಗಿದೆ. ಜೊತೆಗೆ ಮುಗಳಿ ಅವರ ಸಾಹಿತ್ಯ ಚರಿತ್ರೆಯ ವಿಭಾಗಕ್ರಮವನ್ನು ಇತರ ಸಾಹಿತ್ಯ ರಚನಕಾರರ ವಿಭಾಗಕ್ರಮಕ್ಕೆ ಹೇಗೆ ಭಿನ್ನವೆಂಬುದನ್ನು ಕಂಡುಕೊಳ್ಳಲಾಗಿದೆ.

* ಮುಗಳಿ ಅವರ ವಿಮರ್ಶಾ ಸಂಕಲನಗಳಲ್ಲಿ ಸಾಹಿತ್ಯತತ್ವ ಮತ್ತು ಪ್ರಾಯೋಗಿಕ ವಿಮರ್ಶೆಯನ್ನು ಸಮಪ್ರಮಾಣದಲ್ಲಿ ಕಾಣಬಹುದು. ಪ್ರತಿಯೊಂದು ಲೇಖನದಲ್ಲಿಯೂ ಇವು ಹಿತಮಿತವಾದ ಪ್ರಮಾಣದಲ್ಲಿ ಕೂಡಿಕೊಂಡಿರುತ್ತವೆ. ಸಾಧ್ಯವಾದಷ್ಟು ಮಟ್ಟಿಗೆ ಇಂತಹ ತಾತ್ವಿಕತೆಯು ಲೇಖಕನ ವೈಯಕ್ತಿಕ ಅನುಭವಲೋಕ ಮತ್ತು ಐಡಿಯಾಲಜಿಗಳನ್ನು ಮೀರಿ ನಿಲ್ಲುವುದರಲ್ಲಿ ಯಶಸ್ವಿಯಾಗುತ್ತವೆ. ಅವರ ವಿಮರ್ಶೆಯ ಇನ್ನೊಂದು ಮುಖ್ಯ ಲಕ್ಷಣವೆಂದರೆ ಅಕಾಡೆಮಿಕ್ ಪಾಂಡಿತ್ಯ ಮತ್ತು ವಿಮರ್ಶನ ಕಾರ್ಯಗಳ ಹದವಾದ ಸಂಯೋಜನೆ ಛಂದಸ್ಸು, ಅಲಂಕಾರಶಾಸ್ತ್ರ, ಶಾಸನಶಾಸ್ತ್ರ, ಭಾಷಾವ್ಯಾಸಂಗ ಮುಂತಾದ ಕ್ಷೇತ್ರಗಳಲ್ಲಿ ಅವರಿಗಿರುವ ಪರಿಣತಿಯನ್ನು ಅವರ ವಿಮರ್ಶಾಕ್ರಮದಿಂದ ಕಂಡುಕೊಳ್ಳಲಾಗಿದೆ.

* ಮುಗಳಿ ಅವರ ಬಹುತೇಕ ಕವನಗಳು ಪ್ರಕೃತಿವರ್ಣನೆ, ಸೂರ್ಯೋದಯ, ಸೂರ್ಯಾಸ್ತ, ಬೆಳದಿಂಗಳು, ಹುಣ್ಣಿಮೆ, ಮುಂಗಾರು ಮಳೆ, ದೇಶಪ್ರೇಮ, ಭಕ್ತಿ, ಶೌರ್ಯ, ಹುಟ್ಟು-ಸಾವು, ಸುಖ-ದುಃಖ, ಶಾಂತಿ, ವ್ಯಕ್ತಿನಿಷ್ಠ, ಗಾಂಧೀಕರಣ, ಗ್ರಾಮೋದ್ಧಾರಗಳಂತಹ ಅಂಶಗಳೊಂದಿಗೆ ಕನ್ನಡ ಕಳಕಳಿ, ಸರಳ, ಸಹಜತೆ, ಉಲ್ಲಾಸ, ಸಮಾಜೋದ್ಧಾರದ ಆಸಕ್ತಿಗಳು, ಮನುಷ್ಯ

ಮನುಷ್ಯರನ್ನು ಬೆಸೆಯುವ ಸಂಬಂಧಗಳು ಗಮನಾರ್ಹವಾದ ಸಂಪರ್ಕ ಸೇತುವೆಗಳಾಗಿ ಇವರ ಕಾವ್ಯಗಳಲ್ಲಿ ನಿರೂಪಿತಗೊಂಡಿವೆ. ಅಂಥವುಗಳಲ್ಲಿ ಉದಾಹರಣೆಗೆ 'ಅಪಾರ ಕರುಣೆ' ಕವನದಲ್ಲಿ ಪಾಶ್ಚಿಮಾತ್ಯ ಶಿಕ್ಷಣಪದ್ಧತಿಯು ಭಾರತ ದೇಶದ ಮೇಲೆ ಬೀರಿದ ಪರಿಣಾಮವು ಯಾವ ರೀತಿಯಾದುದು ಎಂಬುದನ್ನು ಕಂಡುಕೊಳ್ಳಲಾಗಿದೆ. 'ಬಂತು ಬಂತಕೋ ಭೂತದ ಬೆಂತರದಂತೆ ಪಡುವಣದ ಬಿರುಗಾಳಿ' ಎಂದು ಅಭಿವ್ಯಕ್ತಿಸಿದ್ದಾರೆ. ಅದೇ ರೀತಿ 'ಓಂ ಅಶಾಂತಿ'ಯಲ್ಲಿ ಬಡತನ, ಹಸಿವು, ಬರಗಾಲದ ಪರಿಸ್ಥಿತಿಯನ್ನು ತಿಳಿಸಿದರೆ, 'ಮೋಟುಮರ ಮಾತಾಡಿತು' ಕವನದಲ್ಲಿ ನೀತಿ ನ್ಯಾಯಯುತವಾದ ಆದರ್ಶ ಗುಣಗಳನ್ನು ಅವರ ಕಾವ್ಯಗಳಿಂದ ಕಂಡುಕೊಳ್ಳಲಾಗಿದೆ.

* ಮುಗಳಿ ಅವರ ಸೃಜನಶೀಲ ಬರಹಗಳು ಆಧುನಿಕತೆ, ಸುಧಾರಣಾವಾದ, ಮಾನವತಾವಾದ ಮತ್ತು ಆದರ್ಶವಾದ ಗುಣಗಳನ್ನು ತಿಳಿಸುವಂಥವುಗಳಾಗಿವೆ. ಮುಗಳಿ ಅವರು ಕತೆಗಳಲ್ಲಿ ಹಳ್ಳಿಗಳ ನೈಜ, ವಾಸ್ತವ ಬದುಕನ್ನು ಪರಿಣಾಮಕಾರಿಯಾಗಿ ಕಟ್ಟಿಕೊಡಲು ಶ್ರಮಿಸಿದ್ದಾರೆ. ಜಾತಿಯ ಚೌಕಟ್ಟು, ಬಡತನ ಹೆಣ್ಣಿನ ಶೋಷಣೆಗಳು, ಬಾಲ್ಯವಿವಾಹ, ದಾರಿದ್ರ್ಯದ ಬದುಕು, ವೇಶ್ಯಾವಾಟಿಕೆ, ನಿರುದ್ಯೋಗದ ಸಮಸ್ಯೆಗಳು ಹೆಚ್ಚು ಪರಿಣಾಮಕಾರಿಯಾಗಿ ಅಭಿವ್ಯಕ್ತಗೊಂಡಿರುವುದನ್ನು ಈ ಅಧ್ಯಯನದ ಮೂಲಕ ಕಂಡುಕೊಳ್ಳಲಾಗಿದೆ. ಜೊತೆಗೆ ಮುಗಳಿ ಅವರ ಕತೆ ಕಾದಂಬರಿಗಳಲ್ಲಿ ಸ್ತ್ರೀಯನ್ನು ಏಕಮುಖವಾಗಿ ಗ್ರಹಿಸುವ ನಿಲುವುಗಳು ಕಂಡುಬರುವುದಿಲ್ಲ. ಆದರೆ ಸ್ತ್ರೀ ಸಮಸ್ಯೆಯ ಹಲವು ಮುಖಗಳನ್ನು ಒಳವಿವರಗಳಲ್ಲಿ ಸೂಕ್ಷ್ಮವಾದ ಸಂದರ್ಭಗಳನ್ನು ಚರ್ಚಿಸಲಾಗಿದೆ. ಉದಾರಹಣೆಗೆ ಕತೆ: ವೇದಾಂತಿ!, ವಿತಂತು ವೇಶ್ಯೆ! ವಿರಕ್ತ ಸಂಚಾರಿ, ಕಾದಂಬರಿ: ಶಾಂತಾಬಾಯಿ, ಗೋದವ್ವ ಕಾಂತಾಸಾನಿ(ವೇಶ್ಯೆ), ನಾಟಕ: ಮಹಾರಾಣಿ ಪಾತ್ರಗಳ ಮೂಲಕ ಕಂಡುಕೊಳ್ಳಲಾಗಿದೆ.

* ಆರಂಭದ ಲಲಿತಪ್ರಬಂಧಗಳಲ್ಲಿ ರಚಿತವಾದ ಬರಹಗಳೆಲ್ಲ ಜ್ಞಾನ ನೀಡುವ, ಮೌಲ್ಯಮಾಪನ ಸಂಪಾದಿಸುವ ಬರಹಗಳು ಹೆಚ್ಚು ಕಂಡುಬರುತ್ತವೆ. ಈ ಮಾತು ಮುಗಳಿ ಅವರ ಲಲಿತಪ್ರಬಂಧಗಳಿಗೂ ಅನ್ವಯಿಸುತ್ತದೆ. ಇವು ವ್ಯಕ್ತಿನಿಷ್ಠ ಪಥ್ಯ ಅಗತ್ಯತೆಗಾಗಿ ರಚನೆಗೊಂಡಿರುವುದನ್ನು ಅರಿಯಲಾಗಿದೆ. ಜೊತೆಗೆ ಅವರ ಲಲಿತಪ್ರಬಂಧಗಳು ಸರಳವೂ ಓದುಗರ ಆತ್ಮೀಯತೆಯನ್ನು ಹಿಡಿದಿಡುವ ಬರಹವಾಗಿದ್ದು ಆ ಪ್ರಬಂಧಗಳ ಭಾಷೆ, ಶೈಲಿ, ಮಹತ್ವ ತಿಳಿಯುತ್ತ ಇಂದಿನ ಆಧುನೀಕರಣ, ನಗರೀಕರಣ ಮತ್ತು ಮನುಷ್ಯ ತಾಕಲಾಟದ ಸಂದರ್ಭಗಳಲ್ಲಿಯೂ ಮುಗಳಿ ಅವರ ಪ್ರಬಂಧಗಳು ಯಾವ ರೀತಿ ಪ್ರಭಾವ ಬೀರಬಹುದೆಂಬುದನ್ನು ಕಂಡುಕೊಳ್ಳಲಾಗಿದೆ.

* ಮುಗಳಿ ಅವರ ಗದ್ಯಶೈಲಿ–ಪದ್ಯಶೈಲಿ ಸಾಹಿತ್ಯದ ಸ್ವರೂಪವನ್ನು ಅನುಸರಿಸಿದ ಕಾವ್ಯ, ಕತೆ, ಕಾದಂಬರಿ, ನಾಟಕ, ಲಲಿತಪ್ರಬಂಧ, ಸಾಹಿತ್ಯ ಚರಿತ್ರೆ, ವಿಮರ್ಶೆ, ಜೀವನಚರಿತ್ರೆ, ಆತ್ಮಚರಿತ್ರೆ, ಅನುವಾದ, ಸಂಪಾದನೆಯಲ್ಲಿ ರಚನೆಗೊಂಡಿವೆ. ಅವರ ಶೈಲಿಯು ಗಂಭೀರವಾಗಿದ್ದರೂ

ಶಬ್ದಗಳ ಆಡಂಬರವಿಲ್ಲದೇ ಹೇಳುವ ವಿಷಯವನ್ನು ನೇರವಾಗಿ ಸೌಮ್ಯವಾಗಿ ಸರಳವಾಗಿ ಹೇಳುವಂತಹ ದೇಸಿ ಬರಹ ಹೊಂದಿರುವುದನ್ನು ಕಂಡುಕೊಳ್ಳಲಾಗಿದೆ.

* ಅರವಿಂದರು ಮತ್ತು ಶಾಂತಕವಿಗಳು ಜೀವನಚರಿತ್ರೆಗೆ ಸಂಬಂಧಿಸಿದಂತೆ ಕಿರುಪುಸ್ತಕಗಳಲ್ಲಿ ಬಾಲ್ಯ, ಶಿಕ್ಷಣ, ಉದ್ಯೋಗ, ಸಾಹಿತ್ಯ, ಚಟುವಟಿಕೆಗಳ ಬಗ್ಗೆ ಶ್ರಮಿಸಿದ ವಿವರವನ್ನು ಅವಲೋಕಿಸಲಾಗಿದೆ. ಸ್ವಾತಂತ್ರ್ಯ ಕಾಲಘಟ್ಟದಲ್ಲಿ ಅರವಿಂದರು ಸಮಗ್ರ ಭಾರತದ ಯುವಸಮುದಾಯವನ್ನು ಒಗ್ಗೂಡಿಸಲು ಶ್ರಮಿಸಿದ ವಿವರಗಳನ್ನು ಈ ಭಾಗದಲ್ಲಿ ಚರ್ಚಿಸಲಾಗಿದೆ. ಹಾಗೆಯೇ ಶಾಂತಕವಿಗಳು ಉತ್ತರ ಕರ್ನಾಟಕದ ಮೇಲೆ ಮರಾಠಿ ಭಾಷೆಯ ಪ್ರಭಾವದಿಂದಾಗಿ ಕನ್ನಡವು ಶೋಚನೀಯ ಸ್ಥಿತಿಯನ್ನು ತಲುಪಿರುವುದನ್ನು ಅರಿತು ಗಮನಿಸಿದ ಶಾಂತಕವಿಗಳು ಗದುಗಿನ ನಾಟಕದ ಕಲಾವಿದರಿಂದ 'ಕರ್ನಾಟಕ ನಾಟಕ ಕಂಪನಿ'ಯನ್ನು ೧೮೭೪ರಲ್ಲಿ ಸ್ಥಾಪಿಸಿ ಕನ್ನಡದ ಏಳಿಗೆಗಾಗಿ ಶ್ರಮಿಸಿರುವುದನ್ನು ತಿಳಿಸಲಾಗಿದೆ. ಮುಗಳಿ ಅವರ ಆತ್ಮ ಚರಿತ್ರೆಯಾದ 'ಜೀವನ ರಸಿಕ'ವು ಸರಳವಾದ ನಿರೂಪಣೆಯನ್ನು ಒಳಗೊಂಡಿದೆ. ಪಿ.ಲಂಕೇಶರ 'ಹುಳಿಮಾವಿನಮರ', ಶಿವರಾಮ ಕಾರಂತರ 'ಹುಚ್ಚು ಮನಸ್ಸಿನ ಹತ್ತು ಮುಖಗಳ'ಂತೆ ವೈಯಕ್ತಿಕ ಖಾಸಗಿ ಜೀವನ ವೃತ್ತಾಂತಗಳು ಅಷ್ಟೊಂದು ತಿಳಿದುಬರುವುದಿಲ್ಲ. ಬದಲಾಗಿ ಅವರ ಕಾವ್ಯ, ಕತೆ, ಕಾದಂಬರಿ, ಸಾಹಿತ್ಯ ಚರಿತ್ರೆಯ ರಚನಾ ಕಾಲಾವಧಿಯಲ್ಲಿನ ಸಂದರ್ಭದ ಸನ್ನಿವೇಶಗಳನ್ನು ಹಂಚಿಕೊಂಡಿರುವುದನ್ನು ಈ ಅಧ್ಯಯನದ ಮೂಲಕ ಕಂಡುಕೊಳ್ಳಲಾಗಿದೆ.

* ಮುಗಳಿ ಅವರು ಟಿ.ಪಿ. ಕೈಲಾಸಂ ಅವರ 'ಹೋಂರೂಲ್' ಮತ್ತು 'ಬಂಡ್ವಾಳ್ವಿಲ್ಲದ ಬಡಾಯಿ' ನಾಟಕಗಳನ್ನು ಉತ್ತರ ಕರ್ನಾಟಕದ ರಂಗಕಲಾವಿದರಿಗೆ ಮತ್ತು ಶ್ರೀಸಾಮಾನ್ಯ ಓದುಗರಿಗೆ ಸಹಾಯವಾಗಲೆಂದು ಅನುವಾದಿಸಿದ್ದಾರೆ. ಜೊತೆಗೆ ಮುಗಳಿ ಅವರ ಸಾಹಿತ್ಯದಲ್ಲಿ ಹೊಸಪ್ರಯೋಗಗಳನ್ನು ಅರಿಯುವುದಾದರೆ ಗೆಳೆಯರ ಗುಂಪಿನಲ್ಲಿ 'ಮೌನಸಪ್ತಾಹ'ದಂತ ಕಾರ್ಯಕ್ರಮ, ಮನೋರಾಜ್ಯ ನಾಟಕದಲ್ಲಿ ಮಹಾರಾಣಿ ಪಾತ್ರವು ದೃಶ್ಯದ ಮಧ್ಯೆ ಮಧ್ಯೆಯೇ ವಾಸ್ತವ ಬದುಕಿನ ಚಿತ್ರಣವನ್ನು ತೆರೆದಿಡುವ ನಿಟ್ಟಿನಲ್ಲಿ ಮುಗಳಿ ಅವರ ಸಾಹಿತ್ಯದ ಹೊಸ ಪ್ರಯೋಗಗಳನ್ನು ಕಂಡುಕೊಳ್ಳಲಾಗಿದೆ.

ಅನುಬಂಧಗಳು

೧. ರಂ.ಶ್ರೀ.ಮುಗಳಿ ಅವರ ಕೃತಿಸೂಚಿ
೨. ರಂ.ಶ್ರೀ.ಮುಗಳಿ ಅವರನ್ನು ಕುರಿತು ಸಾಹಿತ್ಯ
೩. ರಂ.ಶ್ರೀ.ಮುಗಳಿ ಅವರ ಬದುಕಿನ ಮುಖ್ಯ ಘಟನೆಗಳು
೪. ಗ್ರಂಥಋಣ
೫. ಛಾಯಾಚಿತ್ರಗಳು

೧. ರಂ.ಶ್ರೀ.ಮುಗಳಿ ಅವರ ಕೃತಿಸೂಚಿ

ಅ. ಕಾದಂಬರಿಗಳು

೧. ಬಾಳುರಿ, ಮನೋಹರ ಗ್ರಂಥಮಾಲೆ ಧಾರವಾಡ, ೧೯೩೪.

೨. ಕಾರಣಪುರುಷ, ಮನೋಹರ ಗ್ರಂಥಮಾಲೆ ಧಾರವಾಡ, ೧೯೩೯.

೩. ಅನ್ನ, ಉಷಾ ಸಾಹಿತ್ಯ ಮಾಲೆ, ಮೈಸೂರು, ೧೯೪೮.

೪. ಅಗ್ನಿವರ್ಣ, ಉಷಾ ಸಾಹಿತ್ಯ ಮಾಲೆ, ಮೈಸೂರು, ೧೯೮೨.

ಆ. ಕತೆಗಳು

೧. ಕನಸಿನ ಕೆಳದಿ, ಮನೋಹರ ಗ್ರಂಥ ಪ್ರಕಾಸನ ಸಮಿತಿ ಧಾರವಾಡ, ೧೯೪೩.

ಇ. ಸಾಹಿತ್ಯ ಚರಿತ್ರೆ

೧. ಕನ್ನಡ ಸಾಹಿತ್ಯ ಚರಿತ್ರೆ, ಉಷಾ ಸಾಹಿತ್ಯ ಮಾಲೆ, ಮೈಸೂರು, ೧೯೫೩.

೨. ಕನ್ನಡ ಸಾಹಿತ್ಯ ಇತಿಹಾಸ, ಸಾಹಿತ್ಯ ಅಕಾಡೆಮಿ, ನವದೆಹಲಿ, ೧೯೬೩.

೩. ಪ್ರಾಚೀನ ಕನ್ನಡ ಸಾಹಿತ್ಯರೂಪಗಳು, ಉಷಾ ಸಾಹಿತ್ಯ ಮಾಲೆ, ಮೈಸೂರು, ೧೯೭೩.

ಈ. ಸಾಹಿತ್ಯ ವಿಮರ್ಶೆ

೧. ರನ್ನನ ಕೃತಿರತ್ನ, ಕರ್ನಾಟಕ ತರುಣಸಂಘ ರಾಯಚೂರು, ೧೯೪೬.

೨. ಸಾಹಿತ್ಯೋಪಾಸನೆ, ಶಾರದಾಮಂದಿರ, ಮೈಸೂರು, ೧೯೫೭.

೩. ಕನ್ನಡ ಸಾಹಿತ್ಯದಲ್ಲಿ ಸರಸ್ವತಿಯ ದರ್ಶನ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೧೯೫೭.

೪. ತವನಿಧಿ, ಉಷಾ ಸಾಹಿತ್ಯ ಮಾಲೆ, ಮೈಸೂರು, ೧೯೫೭.

೫. ಸಾಹಿತ್ಯ ವಿಮರ್ಶೆಯ ಮಾರ್ಗದರ್ಶಕ ಸೂತ್ರಗಳು, ಮೈಸೂರು, ೧೯೬೯.

೬. ವಿಮರ್ಶೆಯ ವೃತ್ತ, ಉಷಾ ಸಾಹಿತ್ಯ ಮಾಲೆ, ಮೈಸೂರು, ೧೯೭೦.

೭. ಮಹಾಕೃತಿ, ಸಹ್ಯಾದ್ರಿ ಪ್ರಕಾಶನ, ಮೈಸೂರು ಮತ್ತು ಮುಂಬಯಿ ವಿಶ್ವವಿದ್ಯಾಲಯ, ೧೯೮೬.

೮. ಬೇಂದ್ರೆ ಕಾವ್ಯ, ಕನ್ನಡ ಸಂಘ, ಕ್ರೈಸ್ಟ್ ಕಾಲೇಜ್, ಬೆಂಗಳೂರು, ೧೯೮೬.

೯. ಪುನರ್ನವೋದಯ, ರಸಿಕರಂಗ ಪ್ರಕಾಶನ, ಬೆಂಗಳೂರು, ೧೯೮೬.

೧೦. ಆಂಡಯ್ಯ (ಸಂಪಾದಿತ), ರಸಿಕರಂಗ ಪ್ರಕಾಶನ, ಬೆಂಗಳೂರು, ೧೯೪೬

೧೧. ಪಂಪ ಮಹಾಕವಿ(ಲೇಖನ ಸಂಗ್ರಹ), ಪಂಪ ಪ್ರಕಟಣಾಲಯ, ಲಕ್ಷ್ಮೇಶ್ವರ, ೧೯೬೧.

ಉ. ಕಾವ್ಯ ಕವಿತೆ

೧. ಬಾಸಿಗ, ಮನೋಹರ ಗ್ರಂಥ ಪ್ರಕಾಶನ ಸಮಿತಿ, ಧಾರವಾಡ, ೧೯೪೦.
೨. ಅಪಾರ ಕರುಣೆ, ಕಾವ್ಯ ಪ್ರಕಾಶನ ಸಮಿತಿ, ಸಾಂಗಲಿ, ೧೯೫೧.
೩. ಓಂ ಅಶಾಂತಿಃ, ಕಾವ್ಯ ಪ್ರಕಾಶನ ಸಮಿತಿ, ಸಾಂಗಲಿ, ೧೯೫೧.
೪. ನಿತ್ಯ ನಿರಂತರ, ಉಷಾ ಸಾಹಿತ್ಯ ಮಾಲೆ, ಮೈಸೂರು, ೧೯೬೭.
೫. ನವ ಮಾನವ, ಉಷಾ ಸಾಹಿತ್ಯ ಮಾಲೆ, ಮೈಸೂರು, ೧೯೭೧.
೬. ಮಣಿಮಾಲೆ, ಉಷಾ ಸಾಹಿತ್ಯ ಮಾಲೆ, ಮೈಸೂರು, ೧೯೭೧.
೭. ಮೋಟುಮರ ಮಾತಾಡಿತು, ರಸಿಕರಂಗ ಪ್ರಕಾಶನ, ಬೆಂಗಳೂರು, ೧೯೮೬.
೮. ಕನ್ನಡವೆಂಬಾ ಮಂತ್ರ, ರಸಿಕರಂಗ ಪ್ರಕಾಶನ, ಬೆಂಗಳೂರು, ೧೯೮೮.

ಊ. ನಾಟಕಗಳು

೧. ಸೇವಾ ಪ್ರದೀಪ, ಮನೋಹರ ಗ್ರಂಥ ಪ್ರಕಾಶನ ಸಮಿತಿ, ಧಾರವಾಡ, ೧೯೩೬.
೨. ಪಾವನ ಪಾವಕ, ಮನೋಹರ ಗ್ರಂಥ ಸಮಿತಿ, ಧಾರವಾಡ, ೧೯೩೭.
೩. ಅಕ್ಕಮಹಾದೇವಿ, ಕಾವ್ಯ ಪ್ರಕಾಶನ, ಸಾಂಗಲಿ, ೧೯೩೭.
೪. ನಾಮಧಾರಿ, ಕಾವ್ಯ ಪ್ರಕಾಶನ, ಸಾಂಗಲಿ, ೧೯೩೯.
೫. ವಿಜಯ ಸಾಮ್ರಾಜ್ಯ, ವಿಜಯ ಗ್ರಂಥಮಾಲೆ, ಬೆಳಗಾವಿ, ೧೯೪೮.
೬. ಮನೋರಾಜ್ಯ, ಲಲಿತ ಸಾಹಿತ್ಯಮಾಲೆ, ಧಾರವಾಡ, ೧೯೫೦.
೭. ಧನಂಜಯ, ಲಲಿತ ಸಾಹಿತ್ಯಮಾಲೆ, ಧಾರವಾಡ, ೧೯೫೭.
೮. ಅಪೂರ್ವ, ಉಷಾ ಸಾಹಿತ್ಯ ಮಾಲೆ, ಮೈಸೂರು, ೧೯೮೦.
೯. ಪ್ರಳಯದ ಕಸ, ರಸಿಕರಂಗ ಪ್ರಕಾಶನ, ಬೆಂಗಳೂರು, ೧೯೮೭.
೧೦. ಎತ್ತಿದ ಕೈ(ಏಕಾಂಕ ಸಂಗ್ರಹ), ಮನೋಹರ ಗ್ರಂಥ ಪ್ರಕಾಶನ ಸಮಿತಿ, ಧಾರವಾಡ, ೧೯೪೬.

ಋ. ಲಲಿತಪ್ರಬಂಧಗಳು ಮತ್ತು ವೈಚಾರಿಕ ಪ್ರಬಂಧಗಳು

೧. ಮಾತೆಂಬುದು ಜ್ಯೋತಿರ್ಲಿಂಗ, ಸಾಂಗಲಿ, ೧೯೯೫.
೨. ಕನ್ನಡದ ಕರೆ, ತ.ವೆಂ. ಸ್ಮಾರಕ ಗ್ರಂಥಮಾಲೆ, ೧೯೬೯.
೩. ಶಿಕ್ಷಣದ ಮುನ್ನಡೆ, ಸಾಹಿತ್ಯ ಭಂಡಾರ, ಬೆಂಗಳೂರು, ೧೯೭೨.
೪. ಕನ್ನಡ ನುಡಿ ತನ್ನ ಕಾಲ ಮೇಲೆ ನಿಲ್ಲಬಲ್ಲುದೇ, ಐ.ಬಿ.ಎಚ್. ಪ್ರಕಾಶನ, ಬೆಂಗಳೂರು, ೧೯೮೦.

೫. ಕನ್ನಡ ನಾಡಿನಲ್ಲಿ ಪರೋಪಕಾರ, ಐ.ಬಿ.ಎಚ್, ಪ್ರಕಾಶನ, ಬೆಂಗಳೂರು, ೧೯೮೩.

೬. ಕಟುಸತ್ಯ, ರಸಿಕರಂಗ ಪ್ರಕಾಶನ, ಬೆಂಗಳೂರು, ೧೯೮೬.

೭. ನವೀನ ಪ್ರಜ್ಞೆಯ ಸೂತ್ರಗಳು, ರಸಿಕರಂಗ ಪ್ರಕಾಶನ, ಬೆಂಗಳೂರು, ೧೯೮೬.

೮. ಪಾಥೇಯ, ರಸಿಕರಂಗ ಪ್ರಕಾಶನ, ಬೆಂಗಳೂರು, ೧೯೮೭.

ಎ. ಜೀವನಚರಿತ್ರೆ, ಆತ್ಮಕಥೆ

೧. ಅರವಿಂದ ಮಕರಂದ, ಉಷಾ ಸಾಹಿತ್ಯ ಮಾಲೆ, ಮೈಸೂರು, ೧೯೭೫.

೨. ಶಾಂತಕವಿ, ಉಷಾ ಸಾಹಿತ್ಯ ಮಾಲೆ, ಮೈಸೂರು, ೧೯೮೦.

೩. ಜೀವನ ರಸಿಕ(ಆತ್ಮಕಥೆ), ಉಷಾ ಸಾಹಿತ್ಯ ಮಾಲೆ, ಮೈಸೂರು, ೧೯೮೨.

ಏ. ಅನುವಾದಗಳು

೧. ಸಾವಿತ್ರಿ(ಅರವಿಂದರ ಮಹಾಕಾವ್ಯ), ರಸಿಕರಂಗ ಪ್ರಕಾಶನ, ಬೆಂಗಳೂರು, ೧೯೯೧.

೨. ಹೋಂರೂಲು, ಬಿ.ಎಸ್.ನಾರಾಯಣರಾವ್ ಪ್ರಕಾಶನ, ಬೆಂಗಳೂರು, ೧೯೬೪.

೩. ಬಂಡ್ವಾಳ್ವಿಲ್ಲದ ಬಡಾಯಿ, ಬಿ.ಎಸ್. ನಾರಾಯಣರಾವ್ ಪ್ರಕಾಶನ, ಬೆಂಗಳೂರು, ೧೯೫೮.

ಐ. ಇಂಗ್ಲಿಷ್ ಕೃತಿಗಳು

1. The Heritage of Karnataka, Satyashodhana Publishing House, Bangalore, 1946.

2. The History of kannada Literature, Sahitya Academy, Delhi, 1975.

ಒ. ಸಂಪಾದಿತ ಕೃತಿಗಳು

೧. ಕನ್ನಡ ಕಾವ್ಯ ಸಂಚಯ, ಭಾರತೀಯ ಸಾಹಿತ್ಯ ಅಕಾಡೆಮಿ, ನವದೆಹಲಿ, ೧೯೭೦.

೨. ಕನ್ನಡವೆಂಬ ಮಂತ್ರ, ರಸಿಕರಂಗ ಪ್ರಕಾಶನ, ಬೆಂಗಳೂರು, ೧೯೮೮.

೨. ರಂ.ಶ್ರೀ.ಮುಗಳಿ ಅವರನ್ನು ಕುರಿತು ಸಾಹಿತ್ಯ

೧. ಬಸವರಾಜ ಕಟ್ಟೀಮನಿ, ಮಾಧವ ಮಹಿಷಿ(ಸಂ), ರಸಿಕರಂಗ ದರ್ಶನ (ಅಭಿನಂದನ ಗ್ರಂಥ), ಉಷಾ ಸಾಹಿತ್ಯ ಮಾಲೆ, ಮೈಸೂರು, ೧೯೬೬.

೨. ರಾಘವೇಂದ್ರರಾವ್ ಎಚ್.ಎಸ್.(ಸಂ), ರಂ.ಶ್ರೀ.ಮುಗಳಿ ಅವರ ಸಮಗ್ರ ಸಾಹಿತ್ಯ(ಕಾದಂಬರಿ, ಕತೆಗಳು) (ಸಂ. ೧, ಭಾಗ ೧), ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ೨೦೧೩.

೩. ರಾಘವೇಂದ್ರರಾವ್ ಎಚ್.ಎಸ್.(ಸಂ), ರಂ.ಶ್ರೀ.ಮುಗಳಿ ಅವರ ಸಮಗ್ರ ಸಾಹಿತ್ಯ(ಕಾದಂಬರಿ, ಕತೆಗಳು) (ಸಂ. ೧, ಭಾಗ ೨), ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ೨೦೧೩.

೪. ರಾಘವೇಂದ್ರರಾವ್ ಎಚ್.ಎಸ್.(ಸಂ), ರಂ.ಶ್ರೀ.ಮುಗಳಿ ಅವರ ಸಾಹಿತ್ಯ ಚರಿತ್ರೆಗಳು ಕನ್ನಡ ಸಾಹಿತ್ಯ ಚರಿತ್ರೆ (ಸಂ.೨, ಭಾಗ೧), ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ೨೦೧೩.

೫. ರಾಘವೇಂದ್ರರಾವ್ ಎಚ್.ಎಸ್.(ಸಂ), ರಂ.ಶ್ರೀ.ಮುಗಳಿ ಅವರ ಸಾಹಿತ್ಯ ಚರಿತ್ರೆಗಳು ಕನ್ನಡ ಸಾಹಿತ್ಯ ಚರಿತ್ರೆ(ಸಂ.೨, ಭಾಗ೨), ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ೨೦೧೩.

೬. ರಾಘವೇಂದ್ರರಾವ್ ಎಚ್.ಎಸ್.(ಸಂ), ರಂ.ಶ್ರೀ.ಮುಗಳಿ ಅವರ ಸಾಹಿತ್ಯ ವಿಮರ್ಶೆ ಕನ್ನಡ ಸಾಹಿತ್ಯ ಚರಿತ್ರೆ(ಸಂ.೩, ಭಾಗ೧), ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ೨೦೧೩.

೭. ರಾಘವೇಂದ್ರರಾವ್ ಎಚ್.ಎಸ್.(ಸಂ), ರಂ.ಶ್ರೀ.ಮುಗಳಿ ಅವರ ಸಾಹಿತ್ಯ ವಿಮರ್ಶೆ ಕನ್ನಡ ಸಾಹಿತ್ಯ ಚರಿತ್ರೆ(ಸಂ.೩, ಭಾಗ೨), ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ೨೦೧೩.

೮. ತಾಳ್ತಜೆ ವಸಂತಕುಮಾರ, ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪುರಸ್ಕೃತ ಕನ್ನಡ ಲೇಖಕರು ರಂ.ಶ್ರೀ.ಮುಗಳಿ,ನವಕರ್ನಾಟಕ ಪ್ರಕಾಶನ, ಬೆಂಗಳೂರು, ೨೦೧೧.

೯. ಶ್ರೀನಿವಾಸಮೂರ್ತಿ ಎಸ್.ಎಸ್.(ಸಂ), ಕನ್ನಡ ಸಾಹಿತ್ಯ ವಿಮರ್ಶೆಯ ತಾತ್ವಿಕ ವಿವೇಚನೆ, ಹೇಮಂತ ಸಾಹಿತ್ಯ, ಬೆಂಗಳೂರು, ೨೦೦೯.

೧೦. ಶ್ರೀನಿವಾಸ ಹಾವನೂರ (ಸಂ), ಡಾ.ರಂ.ಶ್ರೀ.ಮುಗಳಿ ಚಿತ್ರಿಸಿದ ಪಂಪ ರನ್ನರು, ಅತ್ತಿಮಬ್ಬೆ ಪ್ರಕಾಶನ ಮೈಸೂರು, ೨೦೦೬.

೧೧. ಶ್ರೀನಿವಾಸ ಹಾವನೂರ(ಸಂ), ಬೇಂದ್ರೆ ಕಾವ್ಯ,ರಂ.ಶ್ರೀ.ಮುಗಳಿ, ಅಭಿನವ ಪ್ರಕಾಶನ, ಬೆಂಗಳೂರು, ೨೦೦೯.

೧೨. ಶಾಸ್ತ್ರೀ ಕೆ.ಜಿ., ಪಾಟೀಲ ಎಸ್.ಪಿ.(ಅನುವಾದ), ಕರ್ನಾಟಕದ ಸಾಂಸ್ಕೃತಿಕ ಪರಂಪರೆ, ಸಮಾಜ ಪುಸ್ತಕಾಲಯ, ಧಾರವಾಡ, ೧೯೭೬.

೩. ರಂ.ಶ್ರೀ.ಮುಗಳಿ ಅವರ ಬದುಕಿನ ಮುಖ್ಯ ಘಟನೆಗಳು

೧೯೦೬	ಜನನ, ಧಾರವಾಡ ಜಿಲ್ಲೆಯ ಹೊಳೆಆಲೂರು, ಜುಲೈ ೧೫. ತಂದೆ ಶ್ರೀನಿವಾಸ್, ತಾಯಿ ಕಮಲಮ್ಮ
೧೯೧೨-೨೪	ಪ್ರಾಥಮಿಕ-ಮಾಧ್ಯಮಿಕ ಶಿಕ್ಷಣ(ಬಾಗಲಕೋಟೆ-ಬಿಜಾಪುರ)
೧೯೨೦	ಅಸಹಕಾರ ಚಳುವಳಿಯಲ್ಲಿ ಸಕ್ರಿಯ ಪಾತ್ರ
೧೯೨೪	ಪದವಿ ಶಿಕ್ಷಣದ ಆರಂಭ(ಕರ್ನಾಟಕ ಕಾಲೇಜು, ಧಾರವಾಡ)

೧೯೨೮ ಸ್ನಾತಕ ಪದವಿ ಗಳಿಕೆ(ದೀಪದ ಮೆಡೆಲ್–ದಕ್ಷಿಣಾ ಫೆಲೋ)

೧೯೩೦ ಕನ್ನಡದಲ್ಲಿ ಸ್ನಾತಕೋತ್ತರ ಪದವಿ(ಮುಂಬಯಿ ವಿ.ವಿ ವಿದ್ಯಾರಣ್ಯ ಬಹುಮಾನ)

೧೯೩೨ ಹುಬ್ಬಳ್ಳಿಯ ನ್ಯೂ ಇಂಗ್ಲಿಷ್ ಸ್ಕೂಲಿನಲ್ಲಿ ಕನ್ನಡ ಶಿಕ್ಷಕರಾಗಿ ನೇಮಕಾತಿ.

೧೯೩೩ ಸಾಂಗ್ಲಿಯ ವಿಲ್ಲಿಂಗ್ಡನ್ ಕಾಲೇಜಿನಲ್ಲಿ ಕನ್ನಡ ಪ್ರಾಧ್ಯಾಪಕರಾಗಿ ನಿಯುಕ್ತಿ.

೧೯೩೭ ಪುಣೆಯ ಡೆಕ್ಕನ್ ಎಜ್ಯುಕೇಷನ್ ಸೊಸೈಟಿಯ ಆಜೀವ ಸದಸ್ಯತ್ವ

೧೯೪೦–೪೩ 'ಜೀವನ' ಪತ್ರಿಕೆಯ ಸಂಪಾದಕತ್ವ, 'ವರುಣಕುಂಜ'ದ ಸಕ್ರಿಯ ಕಾರ್ಯಕರ್ತರು.

೧೯೪೧ ಹೈದ್ರಾಬಾದ್ ಸಾಹಿತ್ಯ ಸಮ್ಮೇಳನ – ನಾಟಕ ಗೋಷ್ಠಿಯ ಅಧ್ಯಕ್ಷತೆ.

೧೯೪೭ 'ಕಾವ್ಯ ಪ್ರಕಾಶನ ಸಮಿತಿ'ಯ ಸಂಚಾಲಕತ್ವ

೧೯೫೫ ಮೈಸೂರು ಸಾಹಿತ್ಯ ಸಮ್ಮೇಳನ–ವಿಮರ್ಶಾ ಗೋಷ್ಠಿಯ ಅಧ್ಯಕ್ಷತೆ. ವಿಲ್ಲಿಂಗ್ಡನ್ ಕಾಲೇಜಿನಲ್ಲಿ ಉಪ ಪ್ರಾಂಶುಪಾಲ ಹುದ್ದೆಗೆ ನೇಮಕಾತಿ.

೧೯೫೬ 'ಕನ್ನಡ ಸಾಹಿತ್ಯ ಚರಿತ್ರೆ' ಕೃತಿಗೆ ಪುಣೆ ವಿಶ್ವವಿದ್ಯಾನಿಲಯದ ಪ್ರಥಮ ಡಿ.ಲಿಟ್ ಪದವಿ ಪ್ರದಾನ, ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ.

೧೯೫೭ ಧಾರವಾಡ ಸಾಹಿತ್ಯ ಸಮ್ಮೇಳನ, ೧೯ನೆಯ ಶತಮಾನದ ಸಾಹಿತ್ಯ ಗೋಷ್ಠಿಯ ಅಧ್ಯಕ್ಷತೆ.

೧೯೬೧ ವಿಲ್ಲಿಂಗ್ಡನ್ ಕಾಲೇಜಿನ ಪ್ರಾಂಶುಪಾಲ ಹುದ್ದೆ.

೧೯೬೩ ತುಮಕೂರು ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ.

೧೯೬೪ 'ಅಂತಾರಾಷ್ಟ್ರೀಯ ತೌಲನಿಕ ಸಾಹಿತ್ಯ ಸಂಘದಲ್ಲಿ ಪ್ರಬಂಧ ಮಂಡನೆ (ಸ್ವಿಜ್ಜರ್‌ಲ್ಯಾಂಡಿನ ಫ್ರಿಬುನಲ್ಲಿ)

೧೯೬೬ ವಿಲ್ಲಿಂಗ್ಡನ್ ಕಾಲೇಜಿನಿಂದ ಸೇವಾ ನಿವೃತ್ತಿ.

೧೯೬೬ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದ ಹೊಣೆಗಾರಿಕೆ.

೧೯೬೭ ಬೆಂಗಳೂರು ವಿಶ್ವವಿದ್ಯಾಲಯದ ಮೊದಲ ಕನ್ನಡ ಪ್ರಾಧ್ಯಾಪಕರು ಹಾಗೂ ವಿಭಾಗದ ಮುಖ್ಯಸ್ಥರು.

೧೯೭೦ ಪದ ನಿವೃತ್ತಿ.

೧೯೭೦–೭೪ ಬೆಂಗಳೂರು ವಿಶ್ವವಿದ್ಯಾಲಯ – ಕನ್ನಡ ವಿಭಾಗದಲ್ಲಿ ಯು.ಜಿ.ಸಿ. ಸಂದರ್ಶಕ ಪ್ರಾಧ್ಯಾಪಕರು.

೧೯೬೭–೭೭ ಕೇಂದ್ರ ಸಾಹಿತ್ಯ ಅಕಾಡೆಮಿಯ ಸಾಮಾನ್ಯ ಸಭೆಯ ಮತ್ತು ಕಾರ್ಯ ಸಮಿತಿಯ ಸದಸ್ಯತ್ವ

೧೯೮೨ ಮೈಸೂರಿನ ದಸರಾ ಕವಿ ಸಮ್ಮೇಳನದ ಅಧ್ಯಕ್ಷತೆ.

೨೦-೨-೧೯೯೩ ನಿಧನ.

೪. ಗ್ರಂಥಋಣ

೧. ಅಂಗಡಿ ಎಸ್.ಎಸ್., ಎಂ. ಚಿದಾನಂದಮೂರ್ತಿ ಸಾಹಿತ್ಯ ಸಾಧನೆ, ಸಪ್ನ ಬುಕ್ ಹೌಸ್, ಬೆಂಗಳೂರು, ೨೦೧೧.

೨. ಅಂಗಡಿ ಎಸ್.ಎಸ್., ಚಂದ್ರಶೇಖರ ಕಂಬಾರರ ಕಾವ್ಯ ಭಾಷೆ, ಯಾಜಿ ಪ್ರಕಾಶನ, ಹೊಸಪೇಟೆ, ೨೦೧೪.

೩. ಅಂಗಡಿ ಎಸ್.ಎಸ್., ಕನ್ನಡ ಸಂಶೋಧನೆ ಮತ್ತು ಎಂ ಚಿದಾನಂದಮೂರ್ತಿ, ಸಪ್ನ ಬುಕ್ ಹೌಸ್, ಬೆಂಗಳೂರು, ೨೦೦೩.

೪. ಅ.ನ.ಕೃ.,ಸಾಹಿತ್ಯ ಮತ್ತು ಜೀವನ, ಸಾಗರ ಮುದ್ರಣ, ಬೆಂಗಳೂರು, ೨೦೦೬.

೫. ಅಶೋಕ ಟಿ.ಪಿ., ಸಾಹಿತ್ಯ ಸಂಬಂಧ, ಅಕ್ಷರ ಪ್ರಕಾಶನ, ಸಾಗರ, ೨೦೦೮.

೬. ಅಶೋಕ ಟಿ.ಪಿ., ವಾಸ್ತವವಾದ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೧೯೮೯.

೭. ಅಶೋಕ ಶೆಟ್ಟರ್, ಚರಿತ್ರೆ-ಸಮಾಜ-ಸಾಹಿತ್ಯ, ಸಿ.ವಿ.ಜಿ ಪಬ್ಲಿಕೇಷನ್, ಬೆಂಗಳೂರು, ೨೦೦೪.

೮. ಆಮೂರ ಜಿ.ಎಸ್., ಕಾದಂಬರಿ ಸ್ವರೂಪ ಹೊಸ ಚಿಂತನೆ, ಘೋರಂ ಬುಕ್ ಹೌಸ್, ಬೆಂಗಳೂರು, ೧೯೯೯.

೯. ಆಮೂರ ಜಿ.ಎಸ್., ಕನ್ನಡ ಕಥನ ಸಾಹಿತ್ಯ: ಕಾದಂಬರಿ, ಸ್ವಪ್ನ ಬುಕ್ ಹೌಸ್, ಬೆಂಗಳೂರು, ೨೦೦೬.

೧೦. ಆಮೂರ ಜಿ.ಎಸ್., ಆಧುನಿಕ ಕನ್ನಡ ವಿಮರ್ಶೆ, ಸ್ವಪ್ನ ಬುಕ್ ಹೌಸ್, ಬೆಂಗಳೂರು, ೨೦೦೮.

೧೧. ಆಮೂರ ಜಿ.ಎಸ್., ವಿರಾಟ ಪುರುಷ, ಪ್ರಿಯದರ್ಶಿನಿ ಪ್ರಕಾಶನ, ಬೆಂಗಳೂರು, ೧೯೯೮.

೧೨. ಕಮಲಾ ಹಂಪನಾ., ಬೊಂಬಾಳ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೭.

೧೩. ಕಾಪಸೆ ಜಿ.ಎಸ್., ಕನ್ನಡ ಮರಾಠಿ ಸಾಂಗತ್ಯ ಬಾಂಧವ್ಯ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೧೯೯೯.

೧೪. ಕರೀಗೌಡ ಬೀಚನಹಳ್ಳಿ, ವ್ಯಷ್ಟಿ ಸಮಷ್ಟಿ, ಕನ್ನಡ ನವ್ಯ ಕಥೆಗಳ ಅಧ್ಯಯನ, ಅಜಂತ ಪ್ರಕಾಶನ, ಬೆಂಗಳೂರು, ೧೯೯೧.

೧೫. ಕರೀಗೌಡ ಬೀಚನಹಳ್ಳಿ, ತೇಜಸ್ವಿ ಕಥೆಗಳ ಕುರಿತು, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೮.

೧೬. ಕರೀಗೌಡ ಬೀಚನಹಳ್ಳಿ, ಶತಮಾನದ ಸಣ್ಣಕಥೆಗಳ ಸಮೀಕ್ಷೆ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೨೦೦೩.

೧೭. ಕಲ್ಬುರ್ಗಿ ಎಂ.ಎಂ., ಕನ್ನಡ ಸಾಹಿತ್ಯ ಚರಿತ್ರೆಗೆ ಕಿಟೆಲ್ಲರ ಕೊಡುಗೆ(ಮಾರ್ಗ ೧ ಸಂ), ೧೯೭೧.

೧೮. ಕಾಡದೇವರ ಮಠ ಎಲ್.ಎಸ್., ಕನ್ನಡ ಸಾಹಿತ್ಯ ಚರಿತ್ರೆ ಒಂದು ಸಮೀಕ್ಷೆ, ವಿದ್ಯಾ ಪ್ರಕಾಶನ, ಗದಗ, ೧೯೯೪.

೧೯. ಕೀರ್ತಿನಾಥ ಕುರ್ತಕೋಟಿ, ಕೀತಿನಾಥ ಕುರ್ತಕೋಟಿ ಅವರ ಆಯ್ದ ಬರಹಗಳು, ಅಕ್ಷರ ಪ್ರಕಾಶನ, ಹೆಗ್ಗೋಡು, ೨೦೦೬.

೨೦. ಕೀರ್ತಿನಾಥ ಕುರ್ತಕೋಟಿ, ನವ್ಯ ಕಾವ್ಯ ಪ್ರಯೋಗ, ಮನೋಹರ ಗ್ರಂಥ ಮಾಲೆ, ಧಾರವಾಡ, ೧೯೮೬.

೨೧. ಕೀರ್ತಿನಾಥ ಕುರ್ತಕೋಟಿ, ಯುಗಧರ್ಮ ಹಾಗೂ ಸಾಹಿತ್ಯ ದರ್ಶನ, ೨೦೦೨.

೨೨. ಕುಮುದ ಎನ್., ಕನ್ನಡ ನವೋದಯ ಕಾವ್ಯ ವಿಮರ್ಶೆ ಮೇಲೆ ಪಾಶ್ಚಾತ್ಯ ವಿಮರ್ಶೆಯ ಪ್ರಭಾವ, ಚೇತನ ಬುಕ್ ಹೌಸ್, ಮೈಸೂರು, ೨೦೦೬.

೨೩. ಕೃಷ್ಣಕುಮಾರ್ ಸಿ.ಪಿ., ಸಾಹಿತ್ಯ ವಿಮರ್ಶೆ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೧೯೮೦.

೨೪. ಕೋದಂಡರಾಮ ಎನ್.ಕೆ., ಕನ್ನಡ ಕಥಾ ಸಾಹಿತ್ಯದಲ್ಲಿ ಸಾಂಸ್ಕೃತಿಕ ಸಂಘರ್ಷ, ಗಾಯತ್ರಿ ಸ್ಮಾರಕ ಗ್ರಂಥಮಾಲೆ, ಮೈಸೂರು, ೧೯೯೬.

೨೫. ಗಂಗಾಧರ ಚಿತ್ತಾಲ, ಎಪ್ಪತ್ತೆರಡು ಕವಿತೆಗಳು(ವಿಮರ್ಶಕರ ಸ್ಪಂದನ), ಪ್ರಿಸಮ್ ಬುಕ್ಸ್ ಪ್ರೈ.ಲಿ, ಬೆಂಗಳೂರು, ೨೦೦೨

೨೬. ಗದಗಕರ ಎನ್.ಎಸ್., ಪ್ರತಿಭಾನ್ವಿತ ಕನ್ನಡಿಗರು, ಸುಂದರ ಪುಸ್ತಕ ಪ್ರಕಾಶನ, ಧಾರವಾಡ, ೧೯೮೭.

೨೭. ಗಿರಡ್ಡಿ ಗೋವಿಂದರಾಜ, ಕಲ್ಪಿತ ವಾಸ್ತವ ಕನ್ನಡ ಸಣ್ಣಕತೆ, ಸಾಹಿತ್ಯ ಪ್ರಕಾಶನ, ಹುಬ್ಬಳ್ಳಿ, ೨೦೦೯.

೨೮. ಗಿರಡ್ಡಿ ಗೋವಿಂದರಾಜ, ಪ್ರಮಾಣು(ಹೊನ್ನಾರು ಮಾಲೆ), ಕನ್ನಡ ವಿಶ್ವವಿದ್ಯಾಲಯ ಹಂಪಿ, ಪ್ರಸಾರಾಂಗ, ೨೦೦೭.,

೨೯. ಗಿರಡ್ಡಿ ಗೋವಿಂದರಾಜ್, ಸಾಹಿತ್ಯ ಮತ್ತು ಪರಂಪರೆ, ಅಭಿಜಾತ ಗ್ರಂಥಮಾಲೆ, ಅಶ್ವತ್ ಪ್ರಿಂಟರ್ಸ್, ಬೆಂಗಳೂರು, ೧೯೮೧.

೩೦. ಗುರುಲಿಂಗ ಕಾಪಸೆ ಮತ್ತು ಹೆಗಡೆ ಜಿ.ಸ್.(ಸಂ), ಕಣವಿಯವರ ಕವಿತೆ: ಹೊಸ ಓದು ವಿವಿಧ ವಿಮರ್ಶಕರಿಂದ, ಸುಮುಖ ಪ್ರಕಾಶನ, ಬೆಂಗಳೂರು, ೨೦೦೮.

೩೧. ಗುರುಪಾದ ಮರಿಗುದ್ದಿ, ಕುವೆಂಪು ಅವರ ಲಲಿತಪ್ರಬಂಧಗಳು, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೯೯.

೩೨. ಗುರುಪಾದ ಮರಿಗುದ್ದಿ, ಆಧುನಿಕ ಕನ್ನಡ ಸಾಹಿತ್ಯ ರೂಪಗಳು, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೯೫.

೩೩. ಗೋಪಾಲಕೃಷ್ಣಯ್ಯ ಕೆ.ಎಲ್., ಯಶವಂತ ಚಿತ್ತಾಲ, ನವಕರ್ನಾಟಕ ಪ್ರಕಾಶನ, ಬೆಂಗಳೂರು, ೨೦೦೨.

೩೪. ಚಂದ್ರಿಕಾ ಹೆಗಡೆ, ಕನ್ನಡ ನವೋದಯ ಕವಿಗಳ ಕಾವ್ಯ ಮೀಮಾಂಸೆ, ಯುನಿಫಿ ಮಿಡಿಯಾ, ಬೆಂಗಳೂರು, ೨೦೧೦.

೩೫. ಚಂದ್ರಶೇಖರ ಎಸ್.,ಸಾಹಿತ್ಯ ಮತ್ತು ಚರಿತ್ರೆ, ನಮ್ಮ ಪ್ರಕಾಶನ, ತಿಪಟೂರು, ೧೯೯೯.

೩೬. ಚನ್ನಪ್ಪ ಎಸ್.(ಸಂ), ಬೇಂದ್ರೆ ಕಾವ್ಯ ಸಮೀಕ್ಷೆ, ನಂದಿ ಎಂಟರ್ ಪ್ರೈಸಸ್, ಬೆಂಗಳೂರು, ೧೯೯೯.

೩೭. ಜಯಚಂದ್ರ ಎಂ.ಎ.,ವಡ್ಡಾರಾಧನೆ ಆರಾಧನಾ ಕರ್ನಾಟಕ ಟೀಕೆ: ವಿಭಿನ್ನ ಕೃತಿಗಳು, ಪ್ರಜಾವಾಣಿ ಅಂಕಣ(ಲೇಖನ), ೧೧/೩/೨೦೧೩.

೩೮. ಜವಳಿ ಬಿ.ಸಿ., ಶಾಂತರಸ(ಸಂ), ಜಗದ್ಗುರು ಕೊಟ್ಟೂರುಸ್ವಾಮಿಮಠ, ಹೊಸಪೇಟೆ, ೧೯೭೯

೩೯. ಜೋಶಿ ಜಿ.ಬಿ., ಕೀರ್ತಿನಾಥ ಕುರ್ತಕೋಟಿ (ಸಂ), ಪುಟಬಂಗಾರ(ಸಂ.೨), ಮನೋಹರ ಗ್ರಂಥಮಾಲೆ, ೧೯೮೬.

೪೦. ಜೋಶಿ ಜಿ.ಬಿ.,ಹುಯಿಲಗೋಳ ನಾರಾಯಣರಾಯರು ಜೀವನ ಹಾಗೂ ಸಾಹಿತ್ಯ, (ಮಹಾಪ್ರಬಂಧ), ಕನ್ನಡ ವಿಭಾಗ ಮುಂಬಯಿ ವಿಶ್ವವಿದ್ಯಾಲಯ ಮುಂಬೈ, ೧೯೯೬

೪೧. ತಾಳ್ತಜೆ ವಸಂತಕುಮಾರ್., ಸಾಂಸ್ಕೃತಿಕ ಸಂಶೋಧನೆ ಒಂದು: ಮುನ್ನೋಟ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೮.

೪೨. ದ.ರಾ.ಬೇಂದ್ರೆ, ನಾದಲಿಲೆ, ಶ್ರೀಮಾತಾ ಪ್ರಕಾಶನ, ಹುಬ್ಬಳ್ಳಿ, ೨೦೧೩.

೪೩. ದಂಡಪ್ಪ ಎಚ್., ಸುಮಿತ್ರಾಬಾಯಿ ಬಿ.ಎನ್., ಸುವರ್ಣ ಸಾಹಿತ್ಯ ವಿಮರ್ಶೆ(ಸಂ), ಕನ್ನಡ ಸಂಸ್ಕೃತಿ ಇಲಾಖೆ, ಬೆಂಗಳೂರು, ೨೦೦೬.

೪೪. ದಿವಸ್ಪತಿ ಹೆಗಡೆ, ಕನ್ನಡ ನವ್ಯ ನಾಟಕ ಮತ್ತು ಪಾಶ್ಚಾತ್ಯ ಪ್ರಭಾವ, ೧೯೯೪.

೪೫. ದಿವಾಕರ ಆರ್.ಆರ್.,ಮಹಾಯೋಗಿ, ಪ್ರಕಟಣಾ ಮಂದಿರ, ಮೈಸೂರು, ೧೯೮೯.

೪೬. ದೇಜಗೌ, ಗದ್ಯಶೈಲಿ, ಡಿ.ವಿ.ಕೆ.ಮೂರ್ತಿ, ಕೃಷ್ಣಮೂರ್ತಿಪುರಂ, ಮೈಸೂರು, ೧೯೭೮.

೪೭. ದೇಜಗೌ, ಮುನ್ನುಡಿ ಕನ್ನಡಿ, ಪ್ರತಿಧ್ವನಿ ಪ್ರಕಾಶನ, ಮೈಸೂರು, ೧೯೯೭.

೪೮. ದೇವೀರಪ್ಪ ಎಚ್.(ಸಂ), ಕಾವ್ಯಾವಲೋಕನ, ಮೈಸೂರು ವಿ.ವಿ.,ಮೈಸೂರು, ೧೯೬೭.

೪೯. ದೊಡ್ಡರಂಗೇಗೌಡ, ಕನ್ನಡನವೋದಯ ಕಾವ್ಯ ಒಂದು ಮೌಲ್ಯಮಾಪನ, ಸುಮುಖ ಪ್ರಕಾಶನ, ಬೆಂಗಳೂರು, ೨೦೦೪.

೫೦. ನರಹಳ್ಳಿ ಬಾಲಸುಬ್ರಹ್ಮಣ್ಯ, ಸಾಹಿತ್ಯ ವಿಮರ್ಶೆ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೧೯೯೭.

೫೧. ನರಹಳ್ಳಿ ಬಾಲಸುಬ್ರಹ್ಮಣ್ಯ, ಹರಿಪ್ರಿಯ, ಕನ್ನಡ ಹೇಮ ಹೇಮಿಗಳು, ಕನ್ನಡ ಸಂಘ ಶೇಷಾದ್ರಿಪುರಂ ಕಾಲೇಜು, ಬೆಂಗಳೂರು, ೧೯೮೩.

೫೨. ನರಹಳ್ಳಿ ಬಾಲಸುಬ್ರಹ್ಮಣ್ಯ, ನವ್ಯತೆ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೧೯೯೯.

೫೩. ನರಸಿಂಹಮೂರ್ತಿ ಕೆ., ಸಮ್ಮುಖ(ಸಾಹಿತ್ಯ ವಿವೇಚನೆಗಳು), ವಸಂತ ಪ್ರಕಾಶನ, ಬೆಂಗಳೂರು, ೨೦೦೨.

೫೪. ನರಸಿಂಹಾಚಾರ್ ಆರ್., ಕವಿಚರಿತೆ(ಸಂಪುಟಗಳು ಮೂರು) ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೨೩.

೫೫. ನಗುವನಹಳ್ಳಿ ಪಿ. ರತ್ನ.,ಎಂ.ಆರ್.ಸಿ ಒಂದು ಅಧ್ಯಯನ,(ಮಹಾಪ್ರಬಂಧ), ಶಾಂತಿ ಪ್ರಕಾಶನ, ಮೈಸೂರು, ೧೯೯೮.

೫೬. ನಾಯಕ ಎಸ್.ಎಚ್., ಗೌರೀಶ ಕಾಯ್ಕಿಣಿ ಬದುಕು ಬರಹ(ಮಹಾಪ್ರಬಂಧ), ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೯೪.

೫೭. ನಾಗಭೂಷಣ ಡಿ.ಎಸ್., ಕುವೆಂಪು ಒಂದು ಪುನರನ್ವೇಷಣೆ, ಲೋಹಿಯಾ ಪ್ರಕಾಶನ, ಬಳ್ಳಾರಿ, ೨೦೦೫.

೫೮. ನಾಗಭೂಷಣಸ್ವಾಮಿ ಓ.ಎಲ್., ವಿಮರ್ಶೆಯ ಪರಿಭಾಷೆ, ಅಂಕಿತ ಪುಸ್ತಕ, ಬೆಂಗಳೂರು, ೧೯೯೮.

೫೯. ನಾಯಕ್ ಜಿ.ಎಚ್.(ಸಂ), ಕನ್ನಡ ಸಣ್ಣಕಥೆಗಳು, ನ್ಯಾಷನಲ್ ಬುಕ್ ಟ್ರಸ್ಟ್, ಹೊಸದೆಹಲಿ, ೧೯೭೮.

೬೦. ನಾಯಕ ಹಾ.ಮಾ., ಸಂಕೀರ್ಣ ವ್ಯಕ್ತಿ–ವಿಚಾರ ವಿಮರ್ಶೆ ಸುರುಚಿ ಪ್ರಕಾಶನ, ಮೈಸೂರು, ೧೯೬೬.

೬೧. ನಾರಾಯಣ ಕೆ.ವಿ., ಬೇರು ಕಾಂಡ ಚಿಗುರು, ವಿವೇಕ ಪ್ರಕಾಶನ, ಬೆಂಗಳೂರು, ೧೯೯೭.

೬೨. ನಾರಾಯಣ ಕೆ.ವಿ., ಕನ್ನಡಶೈಲಿ ಕೈಪಿಡಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ, ೧೯೯೫.

೬೩. ಪ್ರಧಾನ್ ಗುರುದತ್ತ, ತಾರಾನಾಥ ಎಸ್. ಎಸ್., ಪದ್ಮಾಶೇಖರ್(ಸಂ), ಶ್ರೀಮುಖ, ಡಾ. ಟಿ.ವಿ.ವೆಂಕಟಾಚಲಶಾಸ್ತ್ರೀ ಅಭಿನಂದನ ಗ್ರಂಥ, ಡಾ. ಟಿ.ವಿ. ವೆಂಕಟಾಚಲಶಾಸ್ತ್ರೀ ಅಭಿನಂದನ ಸಮಿತಿ, ಮೈಸೂರು, ೧೯೯೭.

೬೪. ಪ್ರಸಾದಸ್ವಾಮಿ, ಕನ್ನಡ ಸಾಹಿತ್ಯ ಪರಂಪರೆ, ಕಣ್ವ ಪ್ರಕಾಶನ, ವಿದ್ಯಾನಗರ, ಬೆಂಗಳೂರು, ೨೦೧೩.

೬೫. ಪ್ರಹ್ಲಾದ್ ಮುದಗಲ್, ಕೆರೂರ ವಾಸುದೇವಾಚಾರ್ಯರು, ಮುಂಬೈ ವಿಶ್ವವಿದ್ಯಾಲಯ, ಮುಂಬೈ, ೧೯೯೩

೬೬. ಪುಂಡಲೀಕ ಹಾಲಂಬಿ(ಸಂ), ಸಂಕ್ಷಿಪ್ತ ಕನ್ನಡ ನಿಘಂಟು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೨೦೧೧.

೬೭. ಪುರುಷೋತ್ತಮ ಬಿಳಿಮಲೆ, ಪ್ರಬಂಧ ಸಾಹಿತ್ಯ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೧೯೮೮

೬೮. ಬಸವರಾಜ ಜಿ.ಪಿ.,ಸಣ್ಣಪರದೆಯ ಮೇಲೆ, ಪಲ್ಲವ ಪ್ರಕಾಶನ, ಬಳ್ಳಾರಿ, ೨೦೦೮.

೬೯. ಬಸವರಾಜ ಆರ್.,ಕಿರಿಯರಿಗೆ ಕನ್ನಡ ಸಾಹಿತ್ಯ ಚರಿತ್ರೆ, ಬಸವೇಶ್ವರ ಪ್ರಕಾಶನ, ತುಮಕೂರು, ೨೦೦೮.

೭೦. ಬಸವರಾಜ ಮಲಶೆಟ್ಟಿ, ಕನ್ನಡ ಸಾಹಿತ್ಯ ಚರಿತ್ರೆಯ ಸ್ವರೂಪವೇನು?(ಲೇಖನ), ಸಂಕ್ರಮಣ, ಮಾರ್ಚ್, ೧೯೮೧.

೭೧. ಬಸವರಾಜ ಸಬರದ(ಸಂ), ಸಾಹಿತ್ಯ ಸಮೀಕ್ಷೆ, ಗುಲಬರ್ಗಾ ವಿಶ್ವವಿದ್ಯಾಲಯ, ೧೯೯೯.

೭೨. ಬಸವರಾಜ ಕಲ್ಗುಡಿ, ನಕ್ಷೆ ನಕ್ಷತ್ರ, ಕನ್ನಡ ಸಂಘ, ಕ್ರೈಸ್ಟ್ ಕಾಲೇಜ್, ಬೆಂಗಳೂರು, ೧೯೯೯.

೭೩. ಬಿ.ಎಂ. ಶ್ರಿಕಂಠಯ್ಯ, ಶ್ರೀ ಸಾಹಿತ್ಯ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು, ೨೦೦೨.

೭೪. ಬುದ್ದಣ್ಣ ಹಿಂಗಮಿರೆ., ದ.ರಾ.ಬೇಂದ್ರೆ ಅಭಿನಂಧನಾಗ್ರಂಥ, ಸಮಾಜ ಪುಸ್ತಕಾಲಯ, ಧಾರವಾಡ, ೧೯೭೭.

೭೫. ಭಟ್ಟ ಕು.ಶಿ.ಹರಿದಾಸ(ಸಂ), ಕಾರಂತ ಪ್ರಪಂಚ, ಗೀತಾ ಬುಕ್ ಹೌಸ್, ಮೈಸೂರು, ೧೯೬೯.

೭೬. ಭಟ್ಟ ಬಿ. ಜನಾರ್ಧನ, ಸಾಹಿತ್ಯ ಸಮೀಕ್ಷೆ, ಸುಮಂತ ಪ್ರಕಾಶನ, ಬ್ರಹ್ಮಾವರ, ದಕ್ಷಿಣ ಕನ್ನಡ, ೨೦೦೩.

೭೭. ಮರಿಯಪ್ಪ ಎಂ. ಭಟ್ಟರು, ಸಂಕ್ಷಿಪ್ತ ಕನ್ನಡ ಸಾಹಿತ್ಯ ಚರಿತ್ರೆ, ಭಾರತೀ ಪ್ರಕಾಶನ, ಮೈಸೂರು, ೧೯೬೦.

೭೮. ಮರುಳಯ್ಯ ಸಾ.ಶಿ., ಸಾ.ಶಿ.ಮ. ವಿಮರ್ಶೆ, ಸಪ್ನ ಬುಕ್ ಹೌಸ್, ಬೆಂಗಳೂರು, ೧೯೯೯.

೭೯. ಮೂರ್ತಿರಾವ್ ಎ.ಎನ್., ಸಮಗ್ರ ಲಲಿತ ಪ್ರಬಂಧಗಳು, ಅಂಕಿತ ಪ್ರಕಾಶನ, ಬೆಂಗಳೂರು, ೧೯೯೯.

೮೦. ಮೇಲಿನಮನಿ ಎಚ್.ಎಸ್., ಹೊಸಗನ್ನಡ ಸಾಹಿತ್ಯಾವಲೋಕನ, ವಿದ್ಯಾನಿಧಿ ಪ್ರಕಾಶನ, ಗದಗ, ೨೦೦೨.

೮೧. ರಾಘವೇಂದ್ರರಾವ್ ಎಚ್.ಎಸ್., ಭೃಂಗಮಾರ್ಗ, ಡಾ ಪುತಿನ ಟ್ರಸ್ಟ್, ಬೆಂಗಳೂರು, ೨೦೦೫.

೮೨. ರಾಘವೇಂದ್ರರಾವ್ ಎಚ್.ಎಸ್.(ಸಂ), ಶತಮಾನದ ಸಾಹಿತ್ಯ ವಿಮರ್ಶೆ, ಸಾಹಿತ್ಯ ಅಕಾಡೆಮಿ, ಬೆಂಗಳೂರು, ೨೦೦೧.

೮೩. ರಾಘವೇಂದ್ರರಾವ್ ಎಚ್.ಎಸ್., ಸಾಹಿತ್ಯ ವಿಮರ್ಶೆ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೧೯೮೪.

೮೪. ರಾಮಚಂದ್ರನ್ ಸಿ.ಎನ್., ಸಾಹಿತ್ಯ ವಿಮರ್ಶೆ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೨೦೦೦.

೮೫. ಲಕ್ಷ್ಮೀನಾರಾಯಣ ಭಟ್ಟ ಎನ್.ಎಸ್., ಸಾಹಿತ್ಯ ರತ್ನ ಸಂಪುಟ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೨೦೧೦.

೮೬. ವಾಮನ ಬೇಂದ್ರೆ, ಗೆಳೆಯರ ಗುಂಪು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೯.

೮೭. ವಾಮನ ಬೇಂದ್ರೆ(ಸಂ), ಔದುಂಬರ ಗಾಥೆ (ಸಂಪುಟ ೬, ೭) ದ.ರಾ. ಬೇಂದ್ರೆ ಸಂಶೋಧನಾ ಸಂಸ್ಥೆ, ಹುಬ್ಬಳ್ಳಿ, ೨೦೦೫.

೮೮. ವೀರಣ್ಣ ಸಿ., ಪ್ರಾಚೀನ ಸಾಹಿತ್ಯ: ರಾಜಸತ್ತೆಯ ವೈಭವಕಾಲ, ನವಕರ್ನಾಟಕ ಪ್ರಕಾಶನ, ಬೆಂಗಳೂರು, ೧೯೮೬.

೮೯. ವಿವೇಕ ರೈ ಬಿ.ಎ.(ಸಂ), ಕನ್ನಡ ಕಾದಂಬರಿ ಮೊದಲ ಹೆಜ್ಜೆಗಳು, ಕನ್ನಡ ವಿಭಾಗ ವಿಶ್ವವಿದ್ಯಾಲಯ, ಮಂಗಳೂರು, ೧೯೮೨.

೯೦. ವೆಂಕಟರಾಮಯ್ಯ ಸಿ.ಕೆ., ಅರವಿಂದರ ವಿಚಾರಧಾರೆ, ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ, ೧೯೭೨.

೯೧. ವೆಂಕಟಾಚಲಶಾಸ್ತ್ರೀ ಟಿ.ವಿ., ಸಾಹಿತ್ಯ ಚರಿತ್ರೆ-ವಿಮರ್ಶೆ ಸಮೀಕ್ಷೆ ಮಧ್ಯಕಾಲೀನ, ಆಧುನಿಕ ಶಾಸ್ತ್ರೀಯ(ಸಂ ೪), ೧೯೮೮.

೯೨. ಶಾಮರಾಯ ತ.ಸು., ಕನ್ನಡ ಸಾಹಿತ್ಯ ಚರಿತ್ರೆ, ತಳುಕಿನ ವೆಂಕಣ್ಣ ಸ್ಮಾರಕ ಗ್ರಂಥಮಾಲೆ, ಮೈಸೂರು, ೨೦೧೦.

೯೩. ಶಾಂತಿನಾಥ ದೇಸಾಯಿ, ನವ್ಯಸಾಹಿತ್ಯ ದರ್ಶನ, ಪರಿಸರ ಪ್ರಕಾಶನ, ಶಿವಮೊಗ್ಗ, ೧೯೯೦.

೯೪. ಶಾಮಪ್ರಸಾದ್(ಸಂ), ವಿಶ್ವಕನ್ನಡ ಸಂಪುಟ ೪, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ೧೯೮೬.

೯೫. ಶಿವರುದ್ರಪ್ಪ ಜಿ.ಎಸ್., ಕನ್ನಡ ಸಾಹಿತ್ಯ ಸಮೀಕ್ಷೆ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೧೯೯೯.

೯೬. ಶಿವರುದ್ರಪ್ಪ ಜಿ.ಎಸ್., ವಿಮರ್ಶೆಯ ಪೂರ್ವ ಪಶ್ಚಿಮ, ಸಾಹಿತ್ಯ ಭಂಡಾರ, ಬೆಂಗಳೂರು, ೧೯೯೯.

೯೭. ಶಿವರುದ್ರಪ್ಪ ಜಿ.ಎಸ್.(ಸಂ), ಸಾಮಾನ್ಯನಿಗೆ ಸಾಹಿತ್ಯ ಚರಿತ್ರೆ(೧೦ ಸಂಪುಟಗಳು), ಸಪ್ನ ಬುಕ್ ಹೌಸ್, ಬೆಂಗಳೂರು, ೨೦೦೯.

೯೮. ಶಿರೂರ ಬಿ.ವ್ಹಿ., ಸಂಶೋಧನೆಯ ಸ್ವರೂಪ, ಅನ್ನಪೂರ್ಣ ಪ್ರಕಾಶನ, ಹುಬ್ಬಳ್ಳಿ, ೨೦೦೦.

೯೯. ಶಿವಾನಂದ ಬಸಪ್ಪ ಕಲ್ಲೂರ, ಡಾ. ಪಾಟೀಲ ಪುಟ್ಟಪ್ಪನವರ ಬದುಕು ಬರಹ ಹಾಗೂ ಸಾಧನೆ, ಶಾಂತಾ ಪ್ರಕಾಶನ, ಧಾರವಾಡ, ೨೦೦೨.

೧೦೦. ಶ್ರೀನಿವಾಸ ಹಾವನೂರ, ಹೊಸಗನ್ನಡ ಅರುಣೋದಯ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೨೦೦೦.

೧೦೧. ಶೇಷಗಿರಿರಾವ್ ಎಲ್.ಎಸ್.,ಹೊಸಗನ್ನಡ ಸಾಹಿತ್ಯ ಚರಿತ್ರೆ, ಸಪ್ನ ಬುಕ್ ಹೌಸ್, ಬೆಂಗಳೂರು, ೨೦೦೯.

೧೦೨. ಸಂಗಮೇಶ ಸವದತ್ತಿಮಠ, ಸಾಹಿತ್ಯ ಸಂಶೋಧನಾ ಮಾರ್ಗ, ರೂಪರಶ್ಮಿ ಪ್ರಕಾಶನ ಗುಲಬರ್ಗಾ, ೧೯೯೮

೧೦೩. ಸಿದ್ಧಲಿಂಗಯ್ಯ ಜಿ.ಎಸ್ ಮತ್ತು ಕೃಷ್ಣಯ್ಯ ಎಂ.ಎಚ್.(ಸಂ), ಸಾಲುದೀಪಗಳು, ಕನ್ನಡ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೧೯೯೪.

೧೦೪. ಸುಮತೀಂದ್ರ ನಾಡಿಗ, ಮೂರು ಸಾಹಿತ್ಯ ಚರಿತ್ರೆಗಳು, ಸಪ್ನ ಬುಕ್ ಹೌಸ್ ಬೆಂಗಳೂರು, ೨೦೦೯.

೧೦೫. ಹರಿಕೃಷ್ಣ ಭರಣ್ಯ, ಹೊಸಗನ್ನಡ ಸಾಹಿತ್ಯ ಉಗಮ ಮತ್ತು ವಿಕಾಸ, ಪ್ರಭಸ ಬಿಡುಗಡೆ, ಮಧುರೈ, ೧೯೯೦.

ಪಿಎಚ್‌ಡಿ ಮಹಾಪ್ರಬಂಧಗಳು

೧೦೬. ಕುಮಾರ ಎಂ., ಕನ್ನಡ ಕಾವ್ಯಗಳಲ್ಲಿ ಪರ್ಯಾವರಣ: ಒಂದು ಅಧ್ಯಯನ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೨೦೦೮.

೧೦೭. ಕೃಷ್ಣಮೂರ್ತಿ ಕಿತ್ತೂರ, ಗಳಗನಾಥರು ಮತ್ತು ಅವರ ಕಾದಂಬರಿಗಳು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೭೮.

೧೦೮. ಗುರುಪಾದ ಮರಿಗುದ್ದಿ, ಕುವೆಂಪು ಕಾದಂಬರಿಗಳ ಸಾಂಸ್ಕೃತಿಕ ಅಧ್ಯಯನ, ಮೀರಾ ಎಂಟರ್‌ಪ್ರೈಸಸ್, ಶಿವರಾಂಪೇಟೆ, ಮೈಸೂರು, ೧೯೮೬.

೧೦೯. ಪರಡ್ಡಿ ಎಸ್.ಎಸ್., ಡಿ.ಎಸ್. ಕರ್ಕಿ: ಸಮಗ್ರ ಸಾಹಿತ್ಯ ಅಧ್ಯಯನ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೨೦೦೮.

೧೧೦. ಮರುಳಸಿದ್ಧಪ್ಪ ಕೆ., ಆಧುನಿಕ ಕನ್ನಡ ನಾಟಕ, ಅಂಕಿತ ಪುಸ್ತಕ, ೨೦೦೨.

೧೧೧. ಮಲ್ಲಿಕಾರ್ಜುನಪ್ಪ ಛಬ್ಬಿ, ಕೋಚೆ: ಬದುಕು ಬರಹ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೨೦೦೯.

೧೧೨. ಮೋಹನ್‌ಕುಮಾರ್ ಆರ್., ಟಿ.ಪಿ. ಕೈಲಾಸಂ ಅವರ ಸಾಮಾಜಿಕ ನಾಟಕಗಳು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೨೦೦೮.

೧೧೩. ಯಶೋದಾ ಅಂ. ಜವಳಗೇರಿ., ವೀಣಾ ಶಾಂತೇಶ್ವರ: ಬದುಕು ಬರಹ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೨೦೦೩.

೧೧೪. ರಾಘವೇಂದ್ರರಾವ್ ಎಚ್.ಎಸ್., ಹಾಡೆ ಹಾದಿಯ ತೋರಿತು – ಬೇಂದ್ರೆ ಕುವೆಂಪು ಪುತಿನ ಕವಿತೆಗಳ ಅಧ್ಯಯನ, ಕನ್ನಡ ಸಂಘ ಕ್ರೈಸ್ಟ್ ಕಾಲೇಜ್, ಬೆಂಗಳೂರು, ೨೦೦೫.

೧೧೫. ವೆಂಕಟೇಶಮೂರ್ತಿ ಟಿ., ಕನ್ನಡ ನಾಟಕ ಯಜಮಾನ್ಯ ಸಂಕಥನ, ಅಧ್ಯಯನ ಮಂಡಳಿ, ಬೆಂಗಳೂರು, ೨೦೦೩.

೧೧೬. ವೃಷಭೇಂದ್ರಸ್ವಾಮಿ ಎಸ್.ಎಂ., ತರಗತಿಗಳಲ್ಲಿ ಕುವೆಂಪು(ತೌಲನಿಕ ಕಾವ್ಯಮೀಮಾಂಸೆ), ಪುಸ್ತಕ ಪ್ರಕಾಶನ, ಮೈಸೂರು, ೨೦೦೪.

೧೧೭. ಶ್ರೀಪಾದಶೆಟ್ಟಿ, ದಿನಕರ ದೇಸಾಯಿ ಬದುಕು ಬರಹ(ಮಹಾಪ್ರಬಂಧ), ಪ್ರಸಾರಾಂಗ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೯೫.

೧೧೮. ಶ್ಯಾಮಸುಂದರ ಬಿದರಕುಂದಿ, ಕನ್ನಡದಲ್ಲಿ ನವ್ಯಮಾರ್ಗ ಕಾದಂಬರಿಗಳು(ಮಹಾಪ್ರಬಂಧ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೯೩.

೧೧೯. ಸುರೇಶ್ ನಾರಾಯಣ ನಾಯ್ಕ, ಯಶವಂತ ಚಿತ್ತಾಲರ ಬದುಕು ಮತ್ತು ಬರಹ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೨೦೦೬.

೧೨೦. ಶಶಿಕಲಾ ಎಸ್. ದಂಡಿಗಿಮಠ, ಡಾ. ಆರ್.ಸಿ. ಹಿರೇಮಠ ಅವರ ಜೀವನ ಹಾಗೂ ಸಾಧನೆ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೨೦೦೮.

೧೨೧. ಶಿವಣ್ಣ ಎಸ್., ಚಂದ್ರಶೇಖರ ಪಾಟೀಲರ ಸಾಹಿತ್ಯ ಸಮಗ್ರ ಅಧ್ಯಯನ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೨೦೦೮.

೧೨೨. ಶಿವಾನಂದ ಗಾಳಿ, ಮಿರ್ಜಿ ಅಣ್ಣಾರಾಯರು: ಒಂದು ಅಧ್ಯಯನ, ಸುಂದರ ಪುಸ್ತಕ ಪ್ರಕಾಶನ, ಧಾರವಾಡ, ೧೯೯೫.

೧೨೩. ಶ್ರೀಶೈಲೇಶ ವಿ. ಹಿರೇಮಠ, ದ.ರಾ. ಬೇಂದ್ರೆ ಅವರ ಕಾವ್ಯೇತರ ಸಾಹಿತ್ಯ: ಒಂದು ಅಧ್ಯಯನ,ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೨೦೦೮.

೧೨೪. ಹೆಗಡೆ ಜಿ.ಎಂ., ಮಾಸ್ತಿಯವರ ವಿಮರ್ಶೆ: ಒಂದು ಅಧ್ಯಯನ, ಶ್ರೀಮಾತಾ ಪ್ರಕಾಶನ, ಧಾರವಾಡ, ೧೯೯೧.

* * * * * * * *



ಅಗ್ನಿವರ್ಣ
ಸಾವಿತ್ರಿ
ಅನ್ನ
ಬೇಂದ್ರೆ ಕಾವ್ಯ
ಕನ್ನಡ ಸಾಹಿತ್ಯ ಚರಿತ್ರೆ

೫. ಛಾಯಾಚಿತ್ರಗಳು



ಬಾಲಕ ರಂ. ಶ್ರೀ. ಮುಗಳಿ



ಧಾರವಾಡ ಗೆಳೆಯರ ಗುಂಪಿನ ಸದಸ್ಯರುಗಳು
(ಬಲದಿಂದ ಕುಳಿತ ಮೊದಲಿಗರು)



ಬೇಂದ್ರೆಯವರ ೭೦ನೇ ಹುಟ್ಟು ಹಬ್ಬದ ಸಂಭ್ರಮದಲ್ಲಿ ರಂ. ಶ್ರೀ. ಮುಗಳಿ



ಯುರೋಪ್ ಪ್ರವಾಸದ ನಂತರ ಸಂದರ್ಶನದಲ್ಲಿ ರಂ. ಶ್ರೀ. ಮುಗಳಿ



೧೯೬೩ ತುಮಕೂರಿನ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ
ಡಾ. ರಂ. ಶ್ರೀ. ಮುಗಳಿ



ವಿಲಿಂಗ್ಡನ್ ಕಾಲೇಜಿನ ನಿವೃತ್ತಿಯ ಸಂದರ್ಭದಲ್ಲಿ ಬೀಳ್ಕೊಡುಗೆ



ಧಾರವಾಡ ಗೆಳೆಯರ ಗುಂಪಿನ ಸದಸ್ಯರುಗಳು



ರಂ. ಶ್ರೀ. ಮುಗಳಿ ಪತ್ನಿ ಕಮಲ ಹಾಗೂ ಪುತ್ರಿ ಪರಿಮಳೆಯೊಂದಿಗೆ



ವಿಲಿಂಗ್ಡನ್ ಕಾಲೇಜು, ಸಾಂಗಲಿ (ಮಹಾರಾಷ್ಟ್ರ)

AKSHARA GRANTHALAYA
ACC.NO.132017

ಹಸ್ತಪ್ರತಿಶಾಸ್ತ್ರ ವಿಭಾಗ